ಹಾವೇರಿ ಜಿಲ್ಲೆಯ ಬುಡಕಟ್ಟುಗಳ ಸಾಮಾಜಿಕ ಅಧ್ಯಯನ

(ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಎಲ್. ಈಶ್ವರಪ್ಪ

ಮಾರ್ಗದರ್ಶಕರು

ಡಾ.ಚಲುವರಾಜು

ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರು,

701

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ- ೫೮೩ ೨೭೬

೨೦೧೬

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬.

Shri Mahantesh
BOOK BINDING
Digital Colour Print
Laser Prints & Xerox
1st Flor Stadiam Complex KCD Road,DWD
cell 9632011325

SK0-701 701

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

701

AKSHARA GRANTHALAYA
ACC.NO.132012

104

ಹಾವೇರಿ ಜಿಲ್ಲೆಯ ಬುಡಕಟ್ಟುಗಳ ಸಾಮಾಜಿಕ ಅಧ್ಯಯನ

(ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ,ಹಂಪಿ.

ಸಂಶೋಧಕರು

ಎಲ್. ಈಶ್ವರಪ್ಪ

ಮಾರ್ಗದರ್ಶಕರು

ಡಾ.ಚಲುವರಾಜು

ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರು,

Kannada University Logo

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

೨೦೧೬

307.772
ESH

132012

ಮಾರ್ಗದರ್ಶಕರ ದೃಢೀಕರಣ ಪತ್ರ

ಈಶ್ವರಪ್ಪ ಎಲ್. ವಿದ್ಯಾರ್ಥಿಯು **"ಹಾವೇರಿ ಜಿಲ್ಲೆಯ ಬುಡಕಟ್ಟುಗಳ ಸಾಮಾಜಿಕ ಅಧ್ಯಯನ"** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಮಾಜಶಾಸ್ತ್ರ ವಿಷಯದಲ್ಲಿ ಸಿದ್ದಪಡಿಸಿ, ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ : ೨೨.೬.೨೦೧೭
ಸ್ಥಳ : ವಿದ್ಯಾರಣ್ಯ

(ಡಾ. ಚೆಲುವರಾಜು)
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವ ವಿದ್ಯಾಲಯ ಹಂಪಿ.
ವಿದ್ಯಾರಣ್ಯ–583276.

ಘೋಷಣ ಪತ್ರ

"ಹಾವೇರಿ ಜಿಲ್ಲೆಯ ಬುಡಕಟ್ಟುಗಳ ಸಾಮಾಜಿಕ ಅಧ್ಯಯನ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಡಾ.ಚಲುವರಾಜು ಪ್ರಾಧ್ಯಾಪಕರು, ಅವರ ಮಾರ್ಗದರ್ಶನದಲ್ಲಿ ಸಮಾಜಶಾಸ್ತ್ರ ವಿಷಯದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿ ಇಲ್ಲವೇ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

Eeswarappa

(ಈಶ್ವರಪ್ಪ ಎಲ್.)
ಸಂಶೋಧನಾ ವಿದ್ಯಾರ್ಥಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಯಲ, ಹಂಪಿ
ವಿದ್ಯಾರಣ್ಯ 583 276

ದಿನಾಂಕ : 22-09-2016.
ಸ್ಥಳ : ವಿದ್ಯಾರಣ್ಯ

ಪರಿವಿಡಿ

ಕೋಷ್ಟಕಗಳು

ಸಮೀಕ್ಷೆ ಮಾಡಿದ ನೆಲೆಯ ನಕ್ಷೆಗಳು

ಅಧ್ಯಾಯ-1

ವಿಷಯ ಪ್ರವೇಶ

1. ಅಧ್ಯಯನದ ಉದ್ದೇಶ, ಸಮಸ್ಯೆ, ವ್ಯಾಪ್ತಿ, ಮಿತಿ ಹಾಗೂ ಮಹತ್ವ:
2. ಬುಡಕಟ್ಟುಗಳ ಅಧ್ಯಯನದ ಕ್ರಮ:
3. ಭಾರತದಲ್ಲಿ ಬುಡಕಟ್ಟುಗಳ ಅಧ್ಯಯನ:

   ಅ–ಬುಡಕಟ್ಟು ಸಮುದಾಯದ ಗುಣಲಕ್ಷಣಗಳು;

   ಆ–ಭಾರತದಲ್ಲಿ ಬುಡಕಟ್ಟುಗಳ ವಿಂಗಡಣೆ;

   ಇ.ಭಾರತದಲ್ಲಿ ಬುಡಕಟ್ಟು ಸಮುದಾಯದ ಸ್ಥಿತಿಗತಿಗಳು;
4. ಕರ್ನಾಟಕದಲ್ಲಿ ಬುಡಕಟ್ಟುಗಳ ಅಧ್ಯಯನ:
5. ಸಂಶೋಧನಾ ವಿಧಾನ, ವಿನ್ಯಾಸ ಮತ್ತು ನಡೆದಿರುವ ಅಧ್ಯಯನಗಳ ಸಮೀಕ್ಷೆ:

ಅಧ್ಯಾಯ-1

ವಿಷಯ ಪ್ರವೇಶ:

ಪ್ರಾಚೀನ ಕಾಲದಿಂದಲೂ ಮಾನವ ತನ್ನ ಹೊಟ್ಟೆ ಬಟ್ಟೆಗಾಗಿ ಕಾಡು ಮೇಡುಗಳಲ್ಲಿ ಅಲೆಯುತ್ತಾ, ಅಲ್ಲಿ ಸಿಗುವ ಹಣ್ಣು-ಹಂಪಲು, ಗೆಡ್ಡೆ-ಗೆಣಸುಗಳನ್ನು ತಿನ್ನುತ್ತಿದ್ದನು. ಹಳೆ ಮತ್ತು ಹೊಸ ಶಿಲಾಯುಗದಲ್ಲಿ (Paliolithic and Neolithic age) ಪ್ರಾಣಿಗಳ ಬೇಟೆಗಾಗಿ ಮತ್ತು ಕ್ರೂರ ಮೃಗಗಳಿಂದ ರಕ್ಷಿಸಿಕೊಳ್ಳಲು ಕಲ್ಲಿನ ಆಯುಧಗಳನ್ನು ಬಳಸುತ್ತಿದ್ದನು. ಹಸಿಮಾಂಸವನ್ನು ತಿನ್ನುತ್ತಿದ್ದನು. ತನ್ನ ದೇಹವನ್ನು ಎಲೆ, ಪಕ್ಷಿಗಳ ಗರಿ ಮತ್ತು ಪ್ರಾಣಿ ಚರ್ಮಗಳಿಂದ ಮುಚ್ಚಿ ಕೊಳ್ಳುತ್ತಿದ್ದನು. ಅವರಿಗೆ ನಿಗದಿತ ನೆಲೆಯಿರಲಿಲ್ಲ. ಮರದ ಪೊಟರೆ, ಗುಹೆ ಮತ್ತು ಬಂಡೆಗಳ ಸಂದುಗಳಲ್ಲಿ ವಾಸಿಸುತ್ತಿದ್ದರು. ಅಲೆಮಾರಿತನದ ಬದುಕು ಅವರಿಗೆ ಅನಿವಾರ್ಯವಾಗಿತ್ತು. ಇದನ್ನೇ ಆದಿಮ ಸಮಾಜ (Asiatic Society) ಎನ್ನಲಾಗುವುದು. ನಾಗರೀಕತೆ ಮತ್ತು ಸಂಸ್ಕೃತಿ ಬೆಳೆದಂತಲ್ಲಾ ಮಾನವ ಭೂಮಿಯನ್ನು ಉತ್ತಿ ಬಿತ್ತಿ ಬೆಳೆಯುವ ಕೃಷಿ ವಿಧಾನಗಳನ್ನು ಅನುಸರಿಸತೊಡಗಿದ. ಇದರ ಜೊತೆಗೆ ಪಶುಪಾಲನಾ ಸಂಸ್ಕೃತಿಯು ಬೆಳೆಯಿತು. ನೀರು, ನೆಲ ಸಮೃದ್ದವಾಗಿರುವ ಕಡೆ, ಕಾಡಿನಲ್ಲಿ ಸಿಗುವ ಹುಲ್ಲು ಕಡ್ಡಿ, ಈಚಲು ಗರಿ, ಬಿದಿರು ಇತ್ಯಾದಿಗಳಿಂದ ಗುಡಿಸಲು ಕಟ್ಟಿಕೊಂಡು ಸಾಮೂಹಿಕ ಬದುಕನ್ನು ಸಾಗಿಸಲು ಪ್ರಾರಂಭಿಸಿದ. ಈ ಹಂತದಲ್ಲಿ ಕೃಷಿಯು ಆವಿಷ್ಕಾರವಾಗಿ ಮಾನವ ಆಹಾರ ಸಂಗ್ರಹಿಸುವುದನ್ನು ಬಿಟ್ಟು ಉತ್ಪಾದನೆ ಮಾಡುವ ಕಲೆಯನ್ನು ಕರಗತ ಮಾಡಿಕೊಂಡ. ಆರ್ಥಿಕ ಚಟುವಟಿಕೆಗಳು ವಿಸ್ತಾರಗೊಂಡು ಖಾಸಗೀ ಆಸ್ತಿಯ ಕಲ್ಪನೆ ಉದಯಗೊಂಡ ಅವಧಿಯು ಪ್ರಾಚೀನ ಸಮಾಜವಾಗಿದೆ (Ancient Society). ಯಾವಾಗ ಭೂಮಿಯು ಖಾಸಗೀ ಆಸ್ತಿಯಾಗಿ ಮಾರ್ಪಟ್ಟಿತ್ತೊ, ಉತ್ಪಾದನಾ ಸಾಮಾಗ್ರಿಗಳು ಕೆಲವರ ಒಡೆತನಕ್ಕೆ ಬಂದವು, ಉಳಿದವರು ಅವರ ಬಳಿ ಊಳಿಗದವರಂತೆ ದುಡಿಯಬೇಕಾಯಿತು. ಊಳಿಗಮಾನ್ಯ ಉತ್ಪಾದನಾ ವಿಧಾನದ ಫಲಶೃತಿಯೇ ಊಳಿಗಮಾನ್ಯ ಸಮಾಜ (Feudal Society). ಖಾಸಗೀ ಒಡೆತನವೇ ಮುಂದೊಂದು ದಿನ ಬಂಡವಾಳಶಾಹಿ ಸಮಾಜ (Capitalist Society) ಸೃಷ್ಟಿಗೆ ಕಾರಣವಾಯಿತು. ಬಂಡವಾಳಶಾಹಿ ಉತ್ಪಾದನಾ ವಿಧಾನ ಮತ್ತು ಕೈಗಾರಿಕಾ ಕ್ರಾಂತಿ, ಕಾರ್ಖಾನೆಗಳ ಬೆಳವಣಿಗೆಗೆ ಮುಕ್ತ ಅವಕಾಶ ಕಲ್ಪಿಸಿದವು. ಇಲ್ಲಿ ಕಾರ್ಖಾನೆಗಳೇ ಉತ್ಪಾದನೆಯ ಮೂಲ ಸಾಧನಗಳಾದವು. ಈ ಉತ್ಪಾದನಾ ವಿಧಾನಕ್ಕೆ ಹೊಂದಿಕೊಂಡಂತೆ ವಿಕಾಸಗೊಂಡ ಬಂಡವಾಳಶಾಹಿ ಸಮಾಜದಲ್ಲಿ ಮಾಲಿಕರು ಮತ್ತು ಕಾರ್ಮಿಕರ ನಡುವಿನ ಸಂಘರ್ಷ ನಿತ್ಯದ ಮಾತಾಯಿತು. ಜೊತೆಗೆ ಇನ್ನಿತರ ಹಿಂದುಳಿದ ಗುಂಪುಗಳು ಸಹ ನರಳುವ ಪರಿಸ್ಥಿತಿಗೆ ತಲುಪಿದವು.

ಪರಿವರ್ತನೆ ನಿಸರ್ಗದ ಸಹಜ ನಿಯಮ. ಮಾನವನ ಸಾಮಾಜಿಕ ಕ್ಷೇತ್ರವನ್ನೂ ಒಳಗೊಂಡಂತೆ ಎಲ್ಲಾ ವಿದ್ಯಮಾನಗಳ ಕ್ಷೇತ್ರಗಳಲ್ಲೂ ಪರಿವರ್ತನೆ ಎಂಬುದು ಸರಳತೆಯಿಂದ

ಸಂಕೀರ್ಣತೆಯ ಕಡೆಗೆ ಸಾಗುವುದು. ಈ ವಿಕಸನದ ಪ್ರಕ್ರಿಯೆಯಲ್ಲಿ ಕಾಣಬರುವ ಬದಲಾವಣೆಗಳನ್ನು ಬ್ರಿಟನ್ನಿನ ಖ್ಯಾತ ಸಮಾಜಶಾಸ್ತ್ರಜ್ಞನಾದ ಹರ್ಬರ್ಟ ಸ್ಪೆನ್ಸರ್ ರವರು 'ಸಾಮಾಜಿಕ ವಿಕಾಸ' ಎಂದು ಕರೆದಿದ್ದಾರೆ. ಆತನ ಪ್ರಕಾರ ವಿಕಾಸದ ನಿಯಮಗಳು ನಿಸರ್ಗದ ಎಲ್ಲಾ ಸಜೀವ ಮತ್ತು ನಿರ್ಜೀವ ವಸ್ತುಗಳಿಗೆ ಅನ್ವಯಿಸುತ್ತದೆ. "ವಿಕಾಸವೆಂಬುದು ಅನಿರ್ದಿಷ್ಟತೆಯಿಂದ ನಿರ್ದಿಷ್ಟತೆಯ ಕಡೆಗೆ ಹಾಗೂ ಅಸಂಗತ ಸಮೈಕ್ಯದಿಂದ ಸಂಗತ ವೈವಿಧ್ಯದ ಕಡೆಗೆ ಉಂಟಾಗುವ ಬದಲಾವಣೆಯೇ ಆಗಿರುತ್ತದೆ"[1] ವಿಕಸನದ ಪ್ರಕ್ರಿಯೆಯಲ್ಲಿ ಪ್ರತಿಯೊಂದು ಜೀವಿಯು ಬದುಕುವ ಸಲುವಾಗಿ ಹೋರಾಟ ಮಾಡಬೇಕಾಗುತ್ತದೆ. ಈ ರೀತಿಯ ಹೋರಾಟವು ಜೀವನದ ಯಾವುದೇ ಒಂದು ಭಾಗಕ್ಕೆ ಸೀಮಿತವಾಗಿರದೆ ಸಮಗ್ರ ಬದುಕನ್ನು ಒಳಗೊಂಡಿರುತ್ತದೆ. ಬಲಿಷ್ಠ ಪ್ರಾಣಿಗಳು ಯಾವಾಗಲೂ ಯಶಸ್ಸನ್ನು ಸಾಧಿಸುತ್ತವೆ. ಅವು ಮಾತ್ರ ಬದುಕುತ್ತವೆ, ಉಳಿಯುತ್ತವೆ ಮತ್ತು ಬೆಳೆಯುತ್ತವೆ. ಬಲಹೀನ, ಅಶಕ್ತ ಹಾಗೂ ದುರ್ಬಲ ಜೀವಿಗಳು ನಾಶವಾಗುತ್ತವೆ ಎಂಬುದು ಸರ್ವವಿಧಿತ. ಇದೇ ಅಭಿಪ್ರಾಯವನ್ನು ಖ್ಯಾತ ಸಮಾಜಶಾಸ್ತ್ರಜ್ಞನಾದ ಹರ್ಬರ್ಟ ಸ್ಪೆನ್ಸರ್‌ರವರು ಸಹ ಹೊಂದಿರುತ್ತಾರೆ. ಆದಿಮ ಸಮಾಜದ ಬೇಟೆಗಾರರು, ಪ್ರಾಚೀನ ಸಮಾಜದ ಕೃಷಿಕರು ಹಾಗೂ ಪಶುಪಾಲಕರು, ಊಳಿಗಮಾನ್ಯ ಸಮಾಜದ ಊಳಿಗದವರು, ಹಾಗೂ ಬಂಡವಾಳಶಾಹಿ ಸಮಾಜದ ಶ್ರಮಿಕರು ಇಂದಿಗೂ ತಮ್ಮ ಉಳಿವಿಗಾಗಿ ನರಳಾಡುತ್ತಿವೆ. ಈ ರೀತಿ ತೊಳಲಾಡುತ್ತಿರುವ ಸಮುದಾಯಗಳ ಕುರಿತು ಅಧ್ಯಯನ ನಡೆಸುವ ಅಗತ್ಯತೆಯನ್ನು ಅರಿತು ಸಂಶೋಧನೆಯನ್ನು ಕೈಗೆತ್ತಿಕೊಂಡಿದ್ದೇನೆ.

ಸಮಾಜದ ಉದ್ದಗಲಗಳಿಗೂ ವ್ಯಾಪಿಸಿ, ನಗರ ಮತ್ತು ಗ್ರಾಮೀಣ ಸಮುದಾಯಗಳಿಂದ ದೂರವಿದ್ದು, ಕಾಡು-ಅರಣ್ಯ, ಬೆಟ್ಟ-ಗುಡ್ಡ, ಕಣಿವೆ ಮುಂತಾದ ಸ್ಥಳಗಳಲ್ಲಿ ವಾಸಿಸುವ ಆದಿವಾಸಿ ಸಮೂಹಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಅಧ್ಯಯನ ಮಾಡುವುದೇ ಪ್ರಸ್ತುತ ಸಂಶೋಧನೆಯ ಉದ್ದೇಶವಾಗಿರುವುದರಿಂದ, ಹಾವೇರಿ ಜಿಲ್ಲೆಯ ಪ್ರಮುಖ ಬುಡಕಟ್ಟುಗಳಾದ ಹೆಳವರು, ಗೊಂದಲಿಗರು, ಸುಡುಗಾಡು ಸಿದ್ದರು, ದುರುಗಮುರುಗಿಯರು, ಮೇದರು, ಬೇಡ ಹಾಗೂ ಬುಡ್ಗಜಂಗಮರ ಕುರಿತು ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕ ಅಧ್ಯಯನ ಮಾಡಲಾಗಿದೆ. ಇದರೊಂದಿಗೆ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ, ಬುಡಕಟ್ಟುಗಳ ಅಧ್ಯಯನ ಕ್ರಮ, ಭಾರತದಲ್ಲಿ ಬುಡಕಟ್ಟುಗಳ ಅಧ್ಯಯನ, ಕರ್ನಾಟಕದಲ್ಲಿ ಬುಡಕಟ್ಟುಗಳ ಅಧ್ಯಯನ ಹಾಗೂ ಹಾವೇರಿ ಜಿಲ್ಲೆಯಲ್ಲಿನ ಪ್ರಮುಖ ಅರೆ-ಅಲೆಮಾರಿ ಮತ್ತು ನೆಲೆನಿಂತ ಬುಡಕಟ್ಟುಗಳ ಕುರಿತು ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆಯನ್ನು ವಿವರವಾಗಿ ಮತ್ತು ಅರ್ಥಪೂರ್ಣವಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

1.1. ಅಧ್ಯಯನದ ಉದ್ದೇಶ, ಸಮಸ್ಯೆ, ವ್ಯಾಪ್ತಿ, ಮಿತಿ ಹಾಗೂ ಮಹತ್ವ:

ಪ್ರಸ್ತುತ ಅಧ್ಯಯನದಲ್ಲಿ ಹಾವೇರಿ ಜಿಲ್ಲೆಯಲ್ಲಿರುವ ಪ್ರಮುಖ ಅರೆ-ಅಲೆಮಾರಿ ಮತ್ತು ನೆಲೆ-ನಿಂತ ಬುಡಕಟ್ಟುಗಳ ಜೀವನ ಕ್ರಮಗಳು, ಮುಖ್ಯವಾಗಿ ಅವರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಮತ್ತಿತರ ಅಂಶಗಳನ್ನು ತಿಳಿದುಕೊಳ್ಳುವುದು. ಜೊತೆಗೆ ಅವರನ್ನು ಕಾಡುವ ಸಮಸ್ಯೆಗಳ, ಸಂಕಷ್ಟಗಳ ವೈಜ್ಞಾನಿಕ ಪರಿಚಯ ಮಾಡಿಕೊಂಡು ಅವುಗಳಿಗೆ ಇದುವರೆಗೆ ಕಲ್ಪಿಸಿಕೊಡಲಾದ ಪರಿಹಾರ ಕ್ರಮಗಳ ಅವಲೋಕನ ಮಾಡುವ ಮತ್ತು ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಲು ಇರುವ ಅಡ್ಡಿ ಆತಂಕಗಳನ್ನು ಪರಿಹರಿಸಿಕೊಳ್ಳಲು ಸಲಹೆಗಳನ್ನು ಸೂಚಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಪರಿಶೋಧಿಸಬೇಕಾದ ಸಮಸ್ಯೆ

'ಪ್ರತಿಯೊಂದು ಜೀವಿಯ ಜೀವನವೂ ಸಮಸ್ಯೆಗಳ ಸಂತೆ ಹಾಗೂ ಅವಕಾಶಗಳ ಕಂತೆ' ಅಂತೆಯೇ ಬುಡಕಟ್ಟುಗಳ ಜಗತ್ತು ವಿಶಿಷ್ಟವಾಗಿದ್ದು ಅವರ ಸಮಸ್ಯೆಗಳು ಕೂಡ ವಿಶಿಷ್ಟ. ಪ್ರಸ್ತುತ ಅಧ್ಯಯನಕ್ಕೆ ಹಾವೇರಿ ಜಿಲ್ಲೆಯಲ್ಲಿನ ಅರೆ ಅಲೆಮಾರಿ ಮತ್ತು ನೆಲೆನಿಂತ ಬುಡಕಟ್ಟುಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಜಿಲ್ಲೆಯು ಅರೆ ಮಲೆನಾಡು ಮತ್ತು ಬಯಲು ಸೀಮೆ ಪ್ರದೇಶಗಳೆರಡನ್ನೂ ಆವರಿಸಿಕೊಂಡಿದೆ. ಉತ್ತರ ಕರ್ನಾಟಕದ ಹೆಬ್ಬಾಗಿಲಿನಂತಿರುವ ಹಾವೇರಿ ಜಿಲ್ಲೆಯು ರಾಣೇಬೆನ್ನೂರು, ಹಾನಗಲ್, ಹಿರೇಕೆರೂರು, ಬ್ಯಾಡಗಿ, ಸವಣೂರು, ಶಿಗ್ಗಾಂವ ಮತ್ತು ಹಾವೇರಿ ತಾಲೂಕುಗಳಲ್ಲಿ ನೆಲೆಸಿರುವ ಗೊಂದಲಿಗರು, ಹೆಳವರು, ಸುಡುಗಾಡು ಸಿದ್ಧರು, ಬಹುರೂಪಿಗಳು, ದುರುಗಮುರುಗಿಯರು, ಮೇದರು ಮತ್ತು ಬೇಡ ಸಮುದಾಯಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಸರ್ಕಾರದ ವಿವಿಧ ರೀತಿಯ ನೀತಿಗಳಿಂದ ಒಕ್ಕಲೆದ್ದು ನಿರಾಶ್ರಿತಗೊಂಡ ಈ ಎಲ್ಲಾ ಸಮುದಾಯಗಳ ಸಾಮಾಜಿಕಾರ್ಥಿಕ ಸ್ಥಿತಿ ತುಂಬಾ ದುರ್ಬಲ ಹಾಗೂ ಕೆಳಮಟ್ಟದಲ್ಲಿದೆ. ಮತ್ತು ಇವರ ಸಾಮಾಜಿಕ ಜೀವನ ವಿಧಾನಗಳೂ ಸಹ ತುಂಬಾ ಶೋಚನೀಯ ಸ್ಥಿತಿಯಲ್ಲಿದೆ. ಇಂತಹ ಪರಿಸ್ಥಿತಿಗಳಲ್ಲಿಯೂ ತಮ್ಮ ಪರಂಪರೆಯನ್ನು ಉಳಿಸಿಕೊಂಡು ಬಂದಿರುವ ಬುಡಕಟ್ಟುಗಳನ್ನು ನನ್ನ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಜೊತೆಗೆ ಹಾವೇರಿ ಜಿಲ್ಲೆಯ ಏಳು ತಾಲೂಕುಗಳ ವ್ಯಾಪ್ತಿಯಲ್ಲಿ ನೆಲೆಸಿರುವ ಬುಡಕಟ್ಟುಗಳ ಸಾಮಾಜಿಕ ಜೀವನದ ಮೇಲೆ ಮತ್ತು ಪಾರಂಪರಿಕತೆಯ ಮೇಲೆ ಪ್ರಸ್ತುತ ಆಧುನಿಕತೆಯ ಪ್ರಭಾವವು ಯಾವ ಯಾವ ಪರಿಣಾಮಗಳನ್ನು ಉಂಟು ಮಾಡಿದೆ ಎಂಬುದನ್ನು ವಿವರಿಸಲಾಗಿದೆ.

ಜಿಲ್ಲೆಯ ಬುಡಕಟ್ಟುಗಳ ದುಸ್ಥಿತಿ ಹಾಗೂ ದುರ್ಬಲತೆಗೆ ಅವರ ಸಾಮಾಜಿಕಾರ್ಥಿಕ ಜೀವನ ವಿಧಾನಗಳೇ ಕಾರಣವಾದ್ದರಿಂದ ಅವರ ಮೂಲ ಸಾಮಾಜಿಕತೆಯ ಅಧ್ಯಯನ

ಅಗತ್ಯವಾಗಿದೆ. ಈ ಸಮುದಾಯಗಳ ಜೀವನದಲ್ಲಿ ಆಧುನಿಕತೆಯ ಪ್ರಭಾವ ಮತ್ತು ಸರ್ಕಾರದ ಧೋರಣೆಗಳಿಂದಾಗಿ ಇವರ ಸ್ಥಿತಿಗತಿಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಸುಧಾರಣೆಯಾಗಿಲ್ಲ ಎಂಬ ಫ್ರಾಕ್ ಕಲ್ಪನೆಯೊಂದಿಗೆ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಉದ್ದೇಶಗಳು

ಮೇಲಿನ ಫ್ರಾಕ್ ಕಲ್ಪನೆಯನ್ನು ಒರೆಗೆ ಹಚ್ಚಲು ಈ ಕೆಳಕಂಡ ಉದ್ದೇಶಗಳೊಂದಿಗೆ ಅಧ್ಯಯನವನ್ನು ನಡೆಸಲಾಗಿದೆ.

1. ಆಯ್ದ ಬುಡಕಟ್ಟುಗಳ ಮೂಲ, ಐತಿಹಾಸಿಕ ಹಿನ್ನೆಲೆ, ಪರಂಪರೆ, ಸಾಮಾಜಿಕತೆ, ಆರ್ಥಿಕತೆ, ಧಾರ್ಮಿಕ ಜೀವನ, ಸಂಪ್ರದಾಯಗಳು, ಆಚರಣೆಗಳು, ನಂಬಿಕೆಗಳು ಇತ್ಯಾದಿ ವಿಷಯಗಳ ಕುರಿತು ಚಿಂತನೆ ಮಾಡುವುದು. ಅಂದರೆ ಜಿಲ್ಲೆಯ ಬುಡಕಟ್ಟು ಸಂಸ್ಕೃತಿಯ ಅನನ್ಯತೆ ಮತ್ತು ಅಸ್ಮಿತತೆಯನ್ನು ಗುರುತಿಸುವುದು.
2. ಹಾವೇರಿ ಜಿಲ್ಲೆ ಉತ್ತರ ಕರ್ನಾಟಕದ ಹೆಬ್ಬಾಗಿಲು. ಇದು ಬಯಲು ಸೀಮೆ ಹಾಗೂ ಮಲೆನಾಡಿನ ಸೇತುವೆಂಯಂತಿರುವ ಅರೆಮಾಲೆನಾಡು ಜಿಲ್ಲೆ, ಮಲೆನಾಡ ಸೆರಗಿನ ಜಿಲ್ಲೆ. ಈ ಜಿಲ್ಲೆಯ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸುವುದು.
3. ಬುಡಕಟ್ಟುಗಳ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರಗಳಿಗೆ ಕಾರಣಗಳೇನು? ಇಂದಿನ ಆಧುನಿಕತೆಯಲ್ಲಿ ಕೆಲವರು ತಮ್ಮ ಪಾರಂಪರಿಕತೆಯನ್ನು ಉಳಿಸಿಕೊಂಡಿದ್ದಾರೆ, ಮತ್ತೆ ಕೆಲವರು ಸಮಾಜದ ಮುಖ್ಯವಾಹಿನಿಯಲ್ಲಿ ಸೇರ್ಪಡೆಗೊಂಡಿದ್ದಾರೆ. ಇನ್ನೂ ಕೆಲವರು ಸರಕಾರದ ನಿರ್ಲಕ್ಷ್ಯದಿಂದಾಗಿ ಇಲ್ಲವೇ ತಮ್ಮ ಮೂಲ ಸಂಸ್ಕತಿಯನ್ನು ಉಳಿಸಿಕೊಳ್ಳುವ ಮನಸ್ಸಿನಿಂದ ಸಮಾಜದ ಮುಖ್ಯವಾಹಿನಿಯಿಂದ ದೂರ ಉಳಿದಿದ್ದಾರೆ. ಇಂತಹ ಸ್ಥಿತಿಗಳ ಸ್ವರೂಪತೆಯನ್ನು ಅಧ್ಯಯನ ಮಾಡುವುದು.
4. ಸಾಮಾಜಿಕ ಸ್ಥರವ್ಯವಸ್ಥೆಯಲ್ಲಿ ಅಲೆಮಾರಿ, ಅರೆ-ಅಲೆಮಾರಿ ಮತ್ತು ನೆಲೆ-ನಿಂತ ಬುಡಕಟ್ಟುಗಳು ಆರ್ಥಿಕವಾಗಿ ಹಿಂದುಳಿಯಲು ಕಾರಣ, ತಮ್ಮ ಪಾರಂಪರಿಕ ವೃತ್ತಿ ಹಾಗೂ ಅನಕ್ಷರತೆ. ಇದನ್ನರಿತುಕೊಳ್ಳುವುದರೊಂದಿಗೆ ಇದುವರೆಗೆ ಕೈಗೊಂಡ ಕಾರ್ಯಕ್ರಮಗಳ ಪರಾಮರ್ಷೆ ಹಾಗೂ ಸಲಹೆಗಳ ವಿಶ್ಲೇಷಣೆ.
5. ಕೆಲವು ಸಮುದಾಯಗಳು ಬುಡಕಟ್ಟು ಜನರಲ್ಲಿ ಕಂಡುಬರುವ ಗುಣಲಕ್ಷಣಗಳನ್ನು ಹೊಂದಿದ್ದರೂ ಸಹ ಇವರು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರದಿರುವುದು ಅವರ ಕೊರಗಾಗಿದೆ. ಇವರ ಸಮಗ್ರ ಜೀವನವನ್ನು ಕುರಿತು ಅಭ್ಯಸಿಸದೇ ನಿರ್ಲಕ್ಷ್ಯ

ಮಾಡಲಾಗಿದೆ. ಆದ್ದರಿಂದ ಈ ಸಮುದಾಯಗಳ ವಾಸ್ತವಿಕತೆಯ ಮೇಲೆ ಬೆಳಕು ಚೆಲ್ಲಲು ಈ ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಯನದ ವ್ಯಾಪ್ತಿ ಹಾಗೂ ಮಿತಿ

ಉತ್ತರ ಕರ್ನಾಟಕದ ಪ್ರವೇಶ ದ್ವಾರದಂತಿರುವ ಹಾವೇರಿ ಜಿಲ್ಲೆಯ ರಾಣೇಬೆನ್ನೂರು, ಹಾನಗಲ್, ಹಿರೇಕೆರೂರು, ಸವಣೂರು, ಶಿಗ್ಗಾಂವ, ಬ್ಯಾಡಗಿ ಮತ್ತು ಹಾವೇರಿ ಎಂಬ ಏಳು ತಾಲೂಕುಗಳಿಗೆ ಸಂಬಂಧಪಟ್ಟಿರುವ ಬುಡಕಟ್ಟುಗಳನ್ನು ಸಮಗ್ರವಾಗಿ ಸಮೀಕ್ಷೆ ಮಾಡುವುದು ಈ ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತದೆ. ಹೆಳವ, ಗೊಂದಲಿಗ, ಸುಡುಗಾಡು ಸಿದ್ಧ, ದುರುಗಮುರುಗಿ, ಮೇದ, ಬೇಡ, ಮತ್ತು ಬಹುರೂಪಿ ಸಮುದಾಯಗಳಲ್ಲಿನ ಸಾಮಾಜಿಕ ಬದುಕನ್ನು ಕಂಡುಕೊಳ್ಳಲಾಗುವುದು. ಪ್ರಸ್ತುತ ಸಮಕಾಲೀನ ಸಮಾಜದ ಪ್ರಭಾವದಿಂದ ಈ ಬುಡಕಟ್ಟು ಸಮುದಾಯಗಳು ಸಾಮಾಜಿಕ ಪರಿವರ್ತನೆಗೆ ಹೇಗೆ ಒಳಗಾಗುತ್ತಿವೆ ಎಂಬುದನ್ನು ಪತ್ತೆ ಹಚ್ಚಲು ಐತಿಹಾಸಿಕ ವಿಧಾನ, ತುಲನಾತ್ಮಕ ವಿಧಾನ, ಪ್ರಶ್ನಾವಳಿ ವಿಧಾನ, ಸಂದರ್ಶನ ವಿಧಾನ, ಅವಲೋಕನ ವಿಧಾನ, ಸಮೀಕ್ಷೆ ವಿಧಾನ, ಸಂಖ್ಯಾಶಾಸ್ತ್ರೀಯ ವಿಧಾನ ಮತ್ತು ಇನ್ನಿತರ ವಿಧಾನಗಳನ್ನು ಈ ಅಧ್ಯಯನದಲ್ಲಿ ಅಳವಡಿಸಲಾಗಿದೆ.

ಹಾವೇರಿ ಜಿಲ್ಲೆಯ ಏಳೂ ತಾಲೂಕುಗಳಲ್ಲಿ ಪ್ರತಿಯೊಂದು ತಾಲೂಕಿನಲ್ಲಿ ಹೆಚ್ಚು ಸಂಖ್ಯೆಯಲ್ಲಿ ಬುಡಕಟ್ಟುಗಳು ನೆಲೆಸಿರುವ ಹಳ್ಳಿಗಳನ್ನು ಮಾತ್ರ ಕ್ಷೇತ್ರ ಕಾರ್ಯಕ್ಕೆ ಆಯ್ಕೆ ಮಾಡಿಕೊಂಡು, ಪ್ರತಿಯೊಂದು ಕುಟುಂಬಕ್ಕೆ ಬೇಟಿ ಕೊಟ್ಟು ಪ್ರಶ್ನಾವಳಿ ವಿಧಾನದ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ. (Household Survey) ವಿಷಯದ ಪ್ರತಿಪಾದನೆಗೋಸ್ಕರ ಇನ್ನೂ ಹೆಚ್ಚಿನ ಆಧಾರ ಒದಗಿಸಲು ಕೆಲವು ಛಾಯಾ ಚಿತ್ರಗಳನ್ನು ಸಹ ಜೋಡಿಸಲಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಬುಡಕಟ್ಟು ಸಮುದಾಯಗಳು ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ಹರಡಿಕೊಂಡಿರುವುದರಿಂದ, ಈ ಎಲ್ಲ ಬುಡಕಟ್ಟುಗಳ ಕುರಿತು ಸಮಗ್ರ ಅಧ್ಯಯನ ಮಾಡುವುದು ಒಬ್ಬ ಸಂಶೋಧಕನಿಗೆ ಕಷ್ಟ ಸಾಧ್ಯ. ಆದ್ದರಿಂದ ಈ ಅಧ್ಯಯನದ ವ್ಯಾಪ್ತಿಯನ್ನು ಹಾವೇರಿ ಜಿಲ್ಲೆಗೆ ಮಾತ್ರ ಸೀಮಿತಗೊಳಿಸಿದ್ದೇನೆ. ಜಿಲ್ಲೆಯಲ್ಲಿನ ಬುಡಕಟ್ಟುಗಳಿಗೆ ಸಂಬಂಧಿಸಿದ ಪ್ರಮುಖ ಧಾರ್ಮಿಕ ಕೇಂದ್ರಗಳು, ಕಟ್ಟೆಮನೆಗಳು, ಹಬ್ಬ, ಜಾತ್ರೆ, ವಿವಾಹ ಮೊದಲಾದ ಆಚರಣೆಗಳಲ್ಲಿ ಅವರೊಡನೆ ಬೆರೆತು ಆತ್ಮೀಯವಾಗಿ ಚರ್ಚಿಸಿ, ಸಂದರ್ಶಿಸಿ, ಪ್ರಶ್ನಾವಳಿ ಮೊದಲಾದ ತಾಂತ್ರಿಕ ವಿಧಾನಗಳ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ.

ಅಧ್ಯಯನದ ಮಹತ್ವ:

1. ಕರ್ನಾಟಕ ರಾಜ್ಯದಾದ್ಯಂತ ಹರಡಿ ನೆಲೆಸಿರುವ ಅನೇಕ ಬುಡಕಟ್ಟು ಸಮುದಾಯಗಳ ಕುರಿತು ಹಲವು ರೀತಿಯ ಅಧ್ಯಯನಗಳು ನಡೆದಿವೆ. ಕೆಲವು ಅಧ್ಯಯನಗಳು ಕೇವಲ ಮಾಹಿತಿಯ ರೂಪದಲ್ಲಿವೆ ಎನ್ನಬಹುದು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗವು ಬಹಳಷ್ಟು ಸಂಶೋಧನಾತ್ಮಕ ಚಟುವಟಿಕೆಗಳನ್ನು ಕೈಗೆತ್ತಿಕೊಂಡು ಅವಿಸ್ಮರಣೀಯ ಕೊಡುಗೆಯನ್ನು ನೀಡಿರುವುದರಲ್ಲಿ ಎರಡು ಮಾತಿಲ್ಲ. ಆದರೆ ಹಾವೇರಿ ಜಿಲ್ಲೆಗೆ ಸೀಮಿತಗೊಂಡಂತೆ ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳು ಸುದೀರ್ಘ ವಿಶೇಷತೆಯನ್ನು ಒಳಗೊಂಡಿಲ್ಲ ಮತ್ತು ಸಮಾಜಶಾಸ್ತ್ರೀಯ ದೃಷ್ಟಿಕೋನದಲ್ಲಿ ಅಧ್ಯಯನ ಮಾಡಲಾಗಿಲ್ಲ. ಆದ್ದರಿಂದ ಹಾವೇರಿ ಜಿಲ್ಲೆಯ ಬುಡಕಟ್ಟುಗಳ ಮೂಲ, ಐತಿಹಾಸಿಕ ಹಿನ್ನೆಲೆ, ಪರಂಪರೆ, ಸಾಮಾಜಿಕತೆ, ಆರ್ಥಿಕ ಸ್ಥಿತಿಗತಿಗಳು, ಧಾರ್ಮಿಕ ಜೀವನ, ಸಂಪ್ರದಾಯಗಳು, ಆಚರಣೆಗಳು, ನಂಬಿಕೆಗಳು ಇತ್ಯಾದಿ ವಿಷಯಗಳ ಅಧ್ಯಯನ ದೃಷ್ಟಿಯಿಂದ ಈ ಸಂಶೋಧನೆಯು ಮಹತ್ವ ಪಡೆಯುತ್ತದೆ.
2. ಅಧ್ಯಯನ ಕ್ಷೇತ್ರವಾದ ಹಾವೇರಿ ಜಿಲ್ಲೆ ಬಯಲು ಸೀಮೆ ಹಾಗೂ ಮಲೆನಾಡಿನ ನಡುವೆ ಸೇತುವೆಯಂತಿರುವ ಅರೆಮಲೆನಾಡು ಜಿಲ್ಲೆ ಮಲೆನಾಡ ಸೆರಗಿನ ಜಿಲ್ಲೆ. ಈ ಜಿಲ್ಲೆ ಬಹಳ ಹಿಂದಿನ ಕಾಲದಿಂದಲೂ ಅನೇಕ ವೈಶಿಷ್ಟ್ಯಗಳನ್ನು, ವೈವಿಧ್ಯತೆಗಳನ್ನು ಹಾಗೂ ಸಾಂಸ್ಕೃತಿಕ ಅನನ್ಯತೆಯನ್ನು ತನ್ನಲ್ಲಿ ಇರಿಸಿಕೊಂಡಿದೆ. ರಾಜಕೀಯವಾಗಿ ಸಾಹಿತ್ಯಕವಾಗಿ ತನ್ನದೇ ಆದ ಛಾಪನ್ನು ಇಟ್ಟುಕೊಂಡಿದೆ. ಇಲ್ಲಿ ಸ್ವಾತಂತ್ರ್ಯ ಹೋರಾಟದ ಕಿಚ್ಚಿದೆ, ಧರ್ಮದ ಸೊಗಡಿದೆ, ಆಧ್ಯಾತ್ಮದ ಸೆಲೆ ಬತ್ತದ ತೊರೆಯಾಗಿ ಹರಿದಿದೆ, ಅನೇಕ ಜಾತಿ, ಮತ, ಪಂಥಗಳ ತವರು ಮನೆಯಾಗಿದೆ. ಈ ಸಂಶೋಧನೆಯು ಜಿಲ್ಲೆಯ ಸಮಗ್ರ ಪರಿಚಯವನ್ನು ಮಾಡಿಸುವುದರ ಜೊತೆಗೆ ಮಲೆನಾಡು-ಬಯಲು ಸೀಮೆಗಳ ಸೂಕ್ಷ್ಮತೆಗಳನ್ನು ಗುರುತಿಸುತ್ತಲೇ ಅಲ್ಲಿನ ಸಾಮ್ಯತೆಯ ಬಗೆಯನ್ನು ಕಂಡುಕೊಳ್ಳುವ ಪ್ರಯತ್ನ ಇಲ್ಲಿರುವುದರಿಂದ ಮಹತ್ವದ್ದಾಗಿದೆ ಎನ್ನಬಹುದು.
3. ದೇಶದ ನಾನಾ ಭಾಗಗಳಿಂದ ಬೇರೆ ಬೇರೆ ಕಾರಣಗಳಿಂದ ಅಲೆಮಾರಿಗಳಾಗಿ ಬಂದ ಅನೇಕ ಬುಡಕಟ್ಟು ಸಮುದಾಯದವರು ಜಿಲ್ಲೆಯ ನಾನಾ ಭಾಗಗಳಲ್ಲಿ ಕಂಡು ಬರುತ್ತಾರೆ. ಇಂದಿನ ಆಧುನಿಕತೆಯಲ್ಲಿ ಕೆಲವರು ತಮ್ಮ ಪಾರಂಪರಿಕತೆಯನ್ನು ಉಳಿಸಿಕೊಂಡಿದ್ದರೆ, ಮತ್ತೆ ಕೆಲವರು ಸಮಾಜದ ಮುಖ್ಯವಾಹಿನಿಯಲ್ಲಿ

ಸೇರ್ಪಡೆಗೊಂಡಿದ್ದಾರೆ. ಇನ್ನೂ ಕೆಲವರು ಸರಕಾರದ ನಿರ್ಲಕ್ಷ್ಯದಿಂದಾಗಿಯೇ ಇಲ್ಲವೇ, ತಮ್ಮ ಮೂಲ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ಮನಸ್ಸಿನಿಂದ ಸಮಾಜದ ಮುಖ್ಯವಾಹಿನಿಯಿಂದ ದೂರ ಉಳಿದಿದ್ದಾರೆ. ಇಂಥವರಲ್ಲಿ ಪ್ರಮುಖ ಬುಡಕಟ್ಟುಗಳೆಂದರೆ ಮೇದ, ಬೇಡ, ಹೆಳವ, ಸುಡುಗಾಡು ಸಿದ್ದರು, ಗೊಂದಲಿಗ, ಬಹುರೂಪಿ ಇತ್ಯಾದಿ, ಇವರೆಲ್ಲಾ ಒಂದು ಕಾಲಕ್ಕೆ ಸಂಘಟಿತರಾಗಿ ತಮ್ಮ ಅಸ್ತಿತ್ವಕ್ಕಾಗಿ, ಮುಂದಿನ ಭವಿಷ್ಯದ ಬದುಕಿಗಾಗಿ ಸುರಕ್ಷಿತ ತಾಣವನ್ನು ಅರಸಿ ಬಂದವರು ಹಾಗೂ ಇಲ್ಲಿಯೇ ನೆಲೆ–ನಿಂತವರು. ಇನ್ನೂ ಕೆಲವರು ಅರೆ–ಅಲೆಮಾರಿಗಳು. ಇಂತಹವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯಿಂದ ಮಹತ್ವದ್ದಾಗಿದೆ.

4. ಜಿಲ್ಲೆಯಲ್ಲಿರುವ ಅನೇಕ ಬುಡಕಟ್ಟು ಸಮುದಾಯಗಳು ತಮ್ಮದೇ ಆದ ನೆಲೆಗಳನ್ನು ಕಂಡುಕೊಳ್ಳುವಲ್ಲಿ ಸಾಕಷ್ಟು ತೊಂದರೆಗಳನ್ನು ಅನುಭವಿಸಿವೆ. ಈ ಸಮುದಾಯಗಳು ಬುಡಕಟ್ಟು ಜನರಲ್ಲಿ ಕಂಡು ಬರುವ ಗುಣಲಕ್ಷಣಗಳನ್ನು ಹೊಂದಿದ್ದರೂ ಸಹ, ಇವರು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಲ್ಲದಿರುವುದು ಅವರ ಕೊರಗಾಗಿದೆ. ಇವರ ಸಮಗ್ರ ಜೀವನವನ್ನು ಕುರಿತು ಅಭ್ಯಸಿಸದೆ ನಿರ್ಲಕ್ಷ್ಯ ಮಾಡಲಾಗಿದೆ. ಆದ್ದರಿಂದ ಈ ಬುಡಕಟ್ಟುಗಳ ವಾಸ್ತವ ಸಂಗತಿಗಳ ಮೇಲೆ ಬೆಳಕು ಚೆಲ್ಲಲು ಈ ಸಂಶೋಧನೆ ಸಹಾಯಕವಾಗಿದೆ. ಸಾಮಾಜಿಕ ಪರಿವರ್ತನೆಯ ಪ್ರಕ್ರಿಯೆ ಇಡೀ ಪ್ರಪಂಚವನ್ನೇ ಆವರಿಸಿಕೊಂಡಿರುವಾಗ ಜಿಲ್ಲೆಯ ಬುಡಕಟ್ಟು ಜನರ ಬದುಕಿನಲ್ಲೂ ಅನೇಕ ಸ್ಥಿತ್ಯಂತರಗಳು ಕಂಡುಬರುತ್ತಿವೆ. ಇವರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗುರುತಿಸುವುದರಿಂದ ಈ ಅಧ್ಯಯನದ ಮಹತ್ವ ಹೆಚ್ಚಿದೆ.

5. ಸಾಮಾಜಿಕ ಸ್ಥರವ್ಯವಸ್ಥೆಯಲ್ಲಿ ಜಿಲ್ಲೆಯ ಅಲೆಮಾರಿ, ಅರೆ–ಅಲೆಮಾರಿ ಮತ್ತು ನೆಲೆ–ನಿಂತ ಬುಡಕಟ್ಟು ಸಮುದಾಯದ ಜನರು ಕೆಳಸ್ಥರದಲ್ಲಿರುವುದು ಕಂಡು ಬರುತ್ತದೆ. ಕಾರಣ ಇವರಲ್ಲಿ ಸಾಕ್ಷರತೆ ಪ್ರಮಾಣ ಅತೀ ಕೆಳಮಟ್ಟದಲ್ಲಿರುವುದು. ತಮ್ಮ ಪಾರಂಪರಿಕ ವೃತ್ತಿಗಳಿಂದ ಅನೇಕ ಸಂಕಷ್ಟಗಳಿಗೆ ಒಳಗಾದ ಇವರು ಅವಿದ್ಯಾವಂತರಾಗಿದ್ದರೂ, ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸವನ್ನು ನೀಡುವ ಉತ್ಸುಕತೆ ಅವರಲ್ಲಿದೆ. ಆದರೆ ಕಡು ಬಡತನ ಮತ್ತು ಆರ್ಥಿಕ ಹಿಂದುಳಿದಿರುವಿಕೆ ಉತ್ತಮ ಶಿಕ್ಷಣ ಪಡೆಯಲು ಅಡಚಣೆಯಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಆಯ್ದ ಬುಡಕಟ್ಟು ಸಮುದಾಯಗಳ ಪ್ರಚಲಿತ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗಳನ್ನು

ಅರಿತುಕೊಳ್ಳುವುದರೊಂದಿಗೆ ಸುಧಾರಣಾ ಕ್ರಮಗಳನ್ನು ಸೂಚಿಸುವ ನಿಟ್ಟಿನಲ್ಲಿ ಈ ಸಂಶೋಧನೆಯು ಮಹತ್ವದ್ದಾಗಿದೆ.

1.2. ಬುಡಕಟ್ಟುಗಳ ಅಧ್ಯಯನದ ಕ್ರಮ:

ಬುಡಕಟ್ಟುಗಳೆಂದು ಕರೆಯಿಸಿಕೊಳ್ಳುವ ಆದಿವಾಸಿಗಳು ಜಗತ್ತಿನಾದ್ಯಂತ ಹರಡಿಕೊಂಡಿದ್ದಾರೆ. ಅದರಂತೆ ಭಾರತದ ಎಲ್ಲ ರಾಜ್ಯಗಳ ಬೆಟ್ಟ-ಗುಡ್ಡ, ಕಾಡು-ಮೇಡು, ಗಿರಿ-ಶಿಖರ, ಕಣಿವೆ-ಕಾನನ ಹಾಗೂ ಕರಾವಳಿ ಪ್ರದೇಶ ಮುಂತಾದ ದುರ್ಗಮ ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟುಗಳನ್ನು ಅಧ್ಯಯನ ವ್ಯಾಪ್ತಿಗೆ ಒಳಪಡಿಸುವುದು ತುಂಬ ಕಷ್ಟ. ಆದಿವಾಸಿಗಳ ಭಾಷೆ, ವಿಶಿಷ್ಟ ಸಂಸ್ಕೃತಿ ಮತ್ತು ಆಚರಣೆ ಪದ್ಧತಿಗಳಿಂದ ಅವರೊಂದಿಗೆ ಬೆರೆತು ವಿವರಣಾತ್ಮಕವಾಗಿ ಅಧ್ಯಯನ ಕೈಗೂಳ್ಳುವುದು ಸಂಶೋಧಕರಿಗೆ ಒಂದು ದೂಡ್ಡ ತೊಡಕಾಗಿದೆ. ಸ್ವತಂತ್ರ ಪೂರ್ವ ಭಾರತೀಯ ಸಮಾಜಗಳಲ್ಲಿ ದೇಶ-ವಿದೇಶಗಳ ವಿದ್ವಾಂಸರುಗಳಿಂದ ಬುಡಕಟ್ಟುಗಳ ಅಧ್ಯಯನ ನಡೆದಿದ್ದವು. ಆದರೆ, ಯಾವುದೇ ಬುಡಕಟ್ಟನ್ನು ಕುರಿತು ಸಮಗ್ರವಾದ ಅಧ್ಯಯನಗಳು ನಡೆಯಲಿಲ್ಲ. ಇದಕ್ಕೆ ಸರ್ಕಾರಿ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳು ಹೊಂದಿರುವ ನಿರಾಸಕ್ತಿಯೇ ಮುಖ್ಯ ಕಾರಣವಾಗಿತ್ತು. ಆದರೆ ಇತ್ತೀಚೆಗೆ ರಾಜ್ಯ ಸರಕಾರ, ಕೇಂದ್ರ ಸರಕಾರ ಹಾಗೂ ವಿಶ್ವವಿದ್ಯಾಲಯದ ಸಂಶೋಧನಾ ಕೇಂದ್ರಗಳು ಬುಡಕಟ್ಟು ಅಧ್ಯಯನಗಳ ಕುರಿತು ವಿಶೇಷ ಆಸಕ್ತಿವಹಿಸುತ್ತಿವೆ. ಹಲವು ಸಂಘ-ಸಂಸ್ಥೆಗಳು ಕೂಡ ಖಾಸಗಿಯಾಗಿ ಅಧ್ಯಯನ ಕೈಗೊಳ್ಳುತ್ತಿವೆ. ಅದರೆ, ನಾಗರಿಕತೆಯ ಪ್ರಭಾವದಿಂದ ಆದಿವಾಸಿಗಳ ಮೂಲ ಸಂಸ್ಕೃತಿ, ಸಂಪ್ರದಾಯ ಮತ್ತು ನಂಬಿಕೆಗಳಲ್ಲಿ ಸಾಕಷ್ಟು ಪರಿವರ್ತನೆಗಳು ಕಂಡು ಬರುವುದರಿಂದ ಅವುಗಳ ಮೂಲ ಸ್ವರೂಪ ಬದಲಾಗುವುದಕ್ಕಿಂತ ಮೊದಲೇ ಅವುಗಳನ್ನು ಗುರುತಿಸಿ ದಾಖಲಿಸಿಕೊಳ್ಳುವುದು ತೀರ ಅಗತ್ಯವಿದೆ.

ದೇಶದ ಉದ್ದಗಲಕ್ಕೂ ಹರಡಿಕೊಂಡಿರುವ ಮತ್ತು ಗುರುತಿಸಲಾಗದಂತ ಅನೇಕ ಬುಡಕಟ್ಟುಗಳು ಇಂದಿಗೂ ಭಾರತದಲ್ಲಿದ್ದಾರೆ. ಈ ಬುಡಕಟ್ಟು ಜನಾಂಗದ ಅಧ್ಯಯನಕ್ಕೆ ವಿದೇಶಿಯ ವಿದ್ವಾಂಸರು ತೋರಿಸಿದ ಆಸಕ್ತಿ ನಮ್ಮ ಭಾರತೀಯ ವಿದ್ವಾಸರು ತೋರಿಸಲಿಲ್ಲ. ಕಾಲಕ್ರಮೇಣ ಪಾಶ್ಚಾತ್ಯ ವಿದ್ವಾಂಸರುಗಳ ಅಧ್ಯಯನ ಪದ್ಧತಿಗಳ ಜಾಡನ್ನೇ ತುಳಿದ ಭಾರತೀಯ ವಿದ್ವಾಂಸರು ಅಲ್ಪ ಸ್ವಲ್ಪ ಬುಡಕಟ್ಟು ಅಧ್ಯಯನಗಳ ಕುರಿತು ಆಸಕ್ತಿ ಬೆಳೆಸಿಕೊಂಡರು. ಪ್ರಸ್ತುತ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ವಿಶ್ವವಿದ್ಯಾಲಯಗಳು ಮತ್ತು ಖಾಸಗಿ ಸಂಘ ಸಂಸ್ಥೆಗಳು ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಪ್ರೋತ್ಸಾಹ ಕೊಡುತ್ತಿವೆ.

ಭಾರತದ ಯಾವುದೇ ಬುಡಕಟ್ಟುಗಳ ಸಾಮಾಜಿಕ ಅಧ್ಯಯನ ಕೈಗೊಳ್ಳಬೇಕಾದರೆ ಸಂಶೋಧಕರು ಕೆಲವೊಂದು ಅಧ್ಯಯನದ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಕ್ಷೇತ್ರದ ಪೂರ್ಣ ಪರಿಚಯ ಮತ್ತು ಯೋಜನೆ ಅತ್ಯವಶ್ಯಕವಾಗಿದೆ.

ಸಂಶೋಧನ ಸಾಮಗ್ರಿಗಳಾದ ನಕ್ಷೆ, ಪ್ರಶ್ನಾವಳಿ, ಚೆಕ್‌ಲಿಸ್ಟ, ಸಂದರ್ಶನ ಕೈಪಿಡಿ, ಟೇಪ್‌ರೆಕಾರ್ಡು, ಕ್ಯಾಮರಾ, ಹಣ ಮತ್ತು ಒಂದಿಬ್ಬರು ಸಹಾಯಕರು ಜೊತೆಯಲ್ಲಿರಬೇಕು. ಯಾವುದೇ ಬುಡಕಟ್ಟು ಸಮುದಾಯ ಪ್ರಾರಂಭದಲ್ಲಿ ತಮ್ಮ ಜನರನ್ನು ಬಿಟ್ಟು ಉಳಿದವರೊಂದಿಗೆ ಸುಲಭವಾಗಿ ಬೆರೆಯುವುದಿಲ್ಲ. ಆದ್ದರಿಂದ ಆರಂಭದಲ್ಲಿ ತಾವು ತಿಳಿದುಕೊಂಡಂತೆ ಬುಡಕಟ್ಟು ಜನರಿಂದ ಸಹಕಾರ ಸಿಗುವುದಿಲ್ಲ. ಆಗ ಸಂಶೋಧಕ ನಿರುತ್ಸಾಹಗೊಳ್ಳದೆ ತಾಳ್ಮೆಯಿಂದ ಆ ಸಮುದಾಯದ ಮುಖಂಡರ ಪರಿಚಯ ಮಾಡಿಕೊಳ್ಳುವುದರ ಮುಖಾಂತರ ತನ್ನ ಗುರಿ ಮತ್ತು ಉದ್ದೇಶಗಳನ್ನು ತಲುಪಬಹುದು. ಬುಡಕಟ್ಟು ಅಧ್ಯಯನ ಕೈಗೊಂಡ ಸಂಶೋಧಕನಿಗೆ ತಾಳ್ಮೆ ಮತ್ತು ಕಠಿಣ ಶ್ರಮ ಅತ್ಯವಶ್ಯಕವಾಗಿದೆ. ಏಕೆಂದರೆ ಹಾವೇರಿ ಜಿಲ್ಲೆಯ ರಾಣೇಬೆನ್ನೂರು, ಹಿರೇಕೆರೂರು ಮತ್ತು ಬ್ಯಾಡಗಿ ತಾಲೂಕುಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಈ ಪ್ರದೇಶದ ಕೆಲವು ಬುಡಕಟ್ಟು ಸಮುದಾಯಗಳು ಪ್ರಾರಂಭದಲ್ಲಿ ಸಂಶಯದಿಂದಲೇ ವರ್ತಿಸಿ ಸರಿಯಾದ ಮಾಹಿತಿ ಕೊಡುತ್ತಿರಲಿಲ್ಲ, ನಂತರ ಅವರ ಗುಂಪಿನ ಒಂದಿಬ್ಬರು ಮುಖಂಡರ ಪೂರ್ಣ ವಿಶ್ವಾಸ ಗಳಿಸಿದ ಮೇಲೆ ಅಲ್ಲಿಯ ಜನ ಸಹಕಾರ ಕೊಟ್ಟ ನಿದರ್ಶನಗಳು ಸಾಕಷ್ಟಿವೆ.

ಬುಡಕಟ್ಟು ಅದ್ಯಯನ ಕೈಗೊಂಡಾಗ ಕೆಲವೊಂದು ಮಹಿಳೆಯರನ್ನು ಸಂದರ್ಶನ ಮಾಡುವಾಗ ಅವರ ಕುಟುಂಬದ ಮುಖ್ಯಸ್ಥರ ಒಪ್ಪಿಗೆ ಪಡೆಯಬೇಕಾಗುತ್ತದೆ. ಅವರ ಧರ್ಮ ಸಂಸ್ಕೃತಿಗೆ ಸಂಬಂಧಿಸಿದ ಕೆಲವೊಂದು ಸಂಪ್ರದಾಯಗಳನ್ನು ಬುಡಕಟ್ಟಿನವರು ಅಷ್ಟು ಸುಲಭವಾಗಿ ಬಿಟ್ಟುಕೊಡುವುದಿಲ್ಲ. ಋತುಮತಿಯಾದ ಹೆಣ್ಣುಮಕ್ಕಳು, ಹೆರಿಗೆ ಗುಡ್ಲು, ದೇವರು, ಪವಿತ್ರ ಸ್ಥಳ, ಹುಟ್ಟು ಸಾವು ಮೊದಲಾದ ಸಂದರ್ಭಗಳಲ್ಲಿ ಛಾಯಾಚಿತ್ರಗಳನ್ನು ತೆಗೆಯುವಾಗ ಅವರ ಒಪ್ಪಿಗೆ ಇಲ್ಲವೆ ಆ ಗುಂಪಿನ ಮುಖಂಡರನ್ನು ಜೊತೆಗೆ ಕರೆದುಕೊಂಡು ಹೋಗುವುದರಿಂದ ಸಮಸ್ಯೆಗಳು ಉದ್ಭವಿಸುವುದಿಲ್ಲ. ಅಪ್ಪಿ ತಪ್ಪಿಯೂ ಅವರಿಗೆ ಗೊತ್ತಿಲ್ಲದಂತೆ ಛಾಯಾಚಿತ್ರ ತೆಗೆಯುವುದಾಗಲಿ ಧ್ವನಿಮುದ್ರಣ ಮಾಡಿಕೊಳ್ಳುವುದಾಗಲಿ ಮಾಡಬಾರದು. ಸಂಶೋಧಕ ತನ್ನ ಗುರಿ ಮತ್ತು ಉದ್ದೇಶಗಳನ್ನು ಸ್ಪಷ್ಟವಾಗಿ ತಿಳಿಸಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡ ಮೇಲೆಯೇ ಛಾಯಚಿತ್ರ ಅಥವಾ ಧ್ವನಿಮುದ್ರಣ ಮಾಡಿಕೊಳ್ಳಬೇಕು. ಸಂದರ್ಶನ ಮಾಡುವಾಗ ಬರೆದುಕೊಳ್ಳುವುದಕ್ಕಿಂತ ಧ್ವನಿಮುದ್ರಣ ಮಾಡಿಕೊಳ್ಳುವುದು ಸಂಶೋಧನೆಗೆ ಹೆಚ್ಚು ಉಪಯುಕ್ತವಾಗುತ್ತದೆ. ಇಲ್ಲವಾದರೆ ಅವರ ಭಾಷೆ, ಶಬ್ದಗಳ ಉಚ್ಚಾರಣೆ ಬರವಣಿಗೆಗೆ ತೊಡಕಾಗುತ್ತವೆ. ಹಾವೇರಿ ಜಿಲ್ಲೆಯ ಬುಡಕಟ್ಟು ಜನರ ಮಾತೃಭಾಷೆ ಕನ್ನಡವಾಗಿದ್ದರಿಂದ ಸಂಶೋಧಕನಿಗೆ ಪ್ರಸ್ತುತ ಅಧ್ಯಯನದಲ್ಲಿ ಯಾವುದೇ ತೊಂದರೆ ಆಗಲಿಲ್ಲ.

1.3. ಭಾರತದಲ್ಲಿ ಬುಡಕಟ್ಟುಗಳ ಅಧ್ಯಯನ

ಪರಿಶಿಷ್ಟ ಪಂಗಡವೆಂದು ಕರೆಯಿಸಿಕೊಳ್ಳುವ ಬುಡಕಟ್ಟುಗಳು ಭಾರತದಾದ್ಯಂತ ಹರಡಿಕೊಂಡಿವೆ. ಸಾಮಾನ್ಯವಾಗಿ ಅನಕ್ಷರಸ್ಥರಾಗಿದ್ದ ಇವರು ಬೆಟ್ಟಗುಡ್ಡ, ಕಾಡು–ಕಣಿವೆ ಮುಂತಾದ ದುರ್ಗಮ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಆರ್ಯರು ಭಾರತಕ್ಕೆ ಬಂದೊಡನೆ ಭಾರತದಲ್ಲಿದ್ದ ಮೂಲ ನಿವಾಸಿಗಳನ್ನು ಯುದ್ಧದಲ್ಲಿ ಸೋಲಿಸಿ ಹೊಡೆದೋಡಿಸಿದ ನಂತರ ಆ ಮೂಲ ನಿವಾಸಿಗಳು ಚದುರಿ ಗುಡ್ಡಗಾಡುಗಳಲ್ಲಿ ವಾಸಿಸುತ್ತಿದ್ದಾರೆಂದು ಇತಿಹಾಸತಜ್ಞರು ಅಭಿಪ್ರಾಯ ಪಡುವರು. 1991ರ ಜನಗಣತಿ ಪ್ರಕಾರ ವಿಶ್ವದಲ್ಲಿ ಭಾರತವು ಅತಿ ಹೆಚ್ಚು ಬುಡಕಟ್ಟು ಜನಸಂಖ್ಯೆಯನ್ನು ಹೊಂದಿದ ದೇಶವಾಗಿದೆ. ಭಾರತದಲ್ಲಿನ ಒಟ್ಟು ಬುಡಕಟ್ಟು ಜನಸಂಖ್ಯೆಯು ಫ್ರಾನ್ಸ್, ಬ್ರಿಟನ್ ಮತ್ತು ಆಸ್ಟ್ರೇಲಿಯಾದ ನಾಲ್ಕು ಪಟ್ಟು ಜನಸಂಖ್ಯೆಯಷ್ಟಾಗುತ್ತಾರೆ. ಭಾರತದಲ್ಲಿ 2001ರ ಜನಗಣತಿಯ ಪ್ರಕಾರ ಒಟ್ಟು ಬುಡಕಟ್ಟು ಜನಸಂಖ್ಯೆ 843 ಮಿಲಿಯನ್ (8,43,26,240) ಆಗಿರುತ್ತದೆ. 2011ರ ಜನಗಣತಿಯ ಪ್ರಕಾರ ಭಾರತದಲ್ಲಿ ಬುಡಕಟ್ಟು ಜನರು ಶೇ. 8.6ರಷ್ಟಿದ್ದರೆ, ಕರ್ನಾಟಕದಲ್ಲಿ ಶೇಕಡಾ. 7.0ರಷ್ಟು ಬುಡಕಟ್ಟು ಜನರಿದ್ದಾರೆ. ಅತಿ ಹೆಚ್ಚು ಬುಡಕಟ್ಟು ಜನರು ಇರುವ ಮಧ್ಯ ಪ್ರದೇಶದಲ್ಲಿ 153.16 ದಶಲಕ್ಷ ಆದಿವಾಸಿಗಳಿದ್ದಾರೆ. ಅತ್ಯಂತ ಕಡಿಮೆ ಆದಿವಾಸಿಗಳಿರುವುದು ಪಂಜಾಬ್ ರಾಜ್ಯದಲ್ಲಿ. ಸ್ವಾತಂತ್ರ್ಯದ ನಂತರ ಭಾರತದ ಸಂವಿಧಾನ ಇವರನ್ನು ಪರಿಶಿಷ್ಟ ಬುಡಕಟ್ಟು ಎಂದು ಕರೆದು ಕಾನೂನಿನ ಬೆಂಬಲವನ್ನು ನೀಡಿರುತ್ತದೆ. ಕೆ.ಎಸ್. ಸಿಂಗ್‌ರವರು 461 ಬುಡಕಟ್ಟು ಸಮುದಾಯಗಳನ್ನು ಗುರ್ತಿಸಿದ್ದಾರೆ. ಇವುಗಳಲ್ಲಿ ಅನೇಕವು ಬಸವಳಿದಿವೆ. ಭಾರತದಲ್ಲಿರುವ ಎಲ್ಲಾ ಬುಡಕಟ್ಟು ಜನರು ಒಂದು ರಾಜ್ಯದ ಸರಾಸರಿ ಜನಸಂಖ್ಯೆಯಷ್ಟಾಗುತ್ತಾರೆ. ಪ್ರಸ್ತುತ ಭಾರತದಲ್ಲಿ ಸುಮಾರು 630 ಅಂಗೀಕೃತ ಆದಿವಾಸಿ ಬುಡಕಟ್ಟುಗಳಿವೆ. ಈ ಬುಡಕಟ್ಟು ಜನರನ್ನು ಭಾರತದ ಬಹುಪಾಲು ರಾಜ್ಯಗಳಲ್ಲಿ 'ಆದಿವಾಸಿಗಳು' ಎಂದೇ ಕರೆಯುತ್ತಾರೆ.

ಆದಿವಾಸಿಗಳು, ಮೂಲವಾಸಿಗಳು, ಅಲೆಮಾರಿಗಳು, ಅನಾಗರಿಕರು, ಬುಡಕಟ್ಟುಗಳು ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತಿರುವ ಸಮುದಾಯಗಳ ಅಧ್ಯಯನ ನೂರಾರು ವರ್ಷಗಳಿಂದ ನಡೆಯುತ್ತಲೇ ಇದೆ. ಇವರುಗಳ ಶ್ರೇಯೋಭಿವೃದ್ಧಿಗೆ ಯಾವ ಮಾನದಂಡ ಅನುಸರಿಸಬೇಕೆಂಬ ಜಿಜ್ಞಾಸೆ ಇಂದಿಗೂ ವಿದ್ವಾಂಸರಲ್ಲಿದೆ. ಬುಡಕಟ್ಟು ವಾಸಿಗಳನ್ನು 'ಮುಖ್ಯವಾಹಿನಿ'ಗೆ ತರಬೇಕು ಮತ್ತು ಅವರನ್ನು 'ವಸ್ತುಸಂಗ್ರಹಾಲಯ'ದ ಮಾದರಿಗಳನ್ನಾಗಿ ಮಾಡಬಾರದು ಎಂಬ ದನಿ ಒಂದೆಡೆಯಾದರೆ, ಅವರ ಪಾಡಿಗೆ ಅವರನ್ನು ಬದುಕಲು ಬಿಡಿ ಎನ್ನುವ ನೀತಿ ಇನ್ನೊಂದು ಕಡೆ. 1936 ಫೆಬ್ರವರಿ ತಿಂಗಳಲ್ಲಿ ಶಾಸನ ಸಭೆಯಲ್ಲಿ ಪ್ರತ್ಯೇಕೀಕರಣಗೊಂಡು ಬುಡಕಟ್ಟು ಪ್ರದೇಶಗಳ ಕುರಿತಾದಂತೆ ಚರ್ಚೆಯಲ್ಲಿ ಇಂಡಿಯಾದ ಆದಿಮ ಜನರನ್ನು 'ಅನಾಗರಿಕ' ಮತ್ತು 'ಬರ್ಬರತ್ವ'ದ (barbarian & brutal) ವ್ಯವಸ್ಥೆಯೊಳಗಡೆ ಇರಬಯಿಸಿದ ಮಾನವಶಾಸ್ತ್ರಜ್ಞರ ಮೇಲೆ ಹಲವಾರು ಸದಸ್ಯರು

ಹರಿಹಾಯ್ದುದ್ದನ್ನು ಶ್ರೇಷ್ಠ ಮಾನವಶಾಸ್ತ್ರಜ್ಞ, ಬುಡಕಟ್ಟು ಸಂಶೋಧನಾಕಾರ ವೆರಿಯರ್ ಎಲ್ವಿನ್ ನೆನಪಿಸುತ್ತಾರೆ. 'ಬಸ್ತಾರ್' ಪ್ರದೇಶದ ಆದಿವಾಸಿಗಳಾಗಿದ್ದ 'ಗೊಂಡರು' ವಾಸಿಸುತ್ತಿದ್ದ ಮಧ್ಯ ಪ್ರದೇಶದ ಕಾಡಿಗೆ ಹೊಕ್ಕಿದ ಡಾ. ವೆರಿಯರ್ ಎಲ್ವಿನ್ ತಮ್ಮ ಅಂತ್ಯದವರೆಗೂ ಆದಿವಾಸಿಗಳ ಸಾಕ್ಷಿ ಪ್ರಜ್ಞೆಯಂತೆ ಬದುಕಿದ್ದವರು. ಆದಿವಾಸಿಗಳ ದುಃಖ ದುಮ್ಮಾನಗಳ ಭಾಗವಾಗಿಯೇ ಬೆಳೆದ ಎಲ್ವಿನ್ ಅವರನ್ನು ಕುರಿತು ಸದಾ ಚಿಂತಿಸುತ್ತಾರೆ. ಆದಿವಾಸಿಗಳನ್ನು 'ಅಭಿವೃದ್ಧಿ' ಪಡಿಸಬೇಕು ಎಂದು ರೂಪಿಸಲ್ಪಟ್ಟ ನೆಹರು ರವರ ಪಂಚಶೀಲ ತತ್ವಗಳ ಹಿಂದೆ ಎಲ್ವಿನ್‌ರ ಚಿಂತನೆಗಳ ನೇರ ಪ್ರಭಾವವಿದೆ.

ಇಡೀ ಪ್ರಪಂಚದ ಬುಡಕಟ್ಟು ಸಮುದಾಯಗಳ ಅಧ್ಯಯನವನ್ನು ನೋಡಿದಾಗ ಸುಮಾರು ಹದಿನಾರನೇ ಶತಮಾನದಲ್ಲಿ ಪ್ರಪಂಚದ ದೇಶಗಳಲ್ಲಿರುವ ಬುಡಕಟ್ಟು ಸಮುದಾಯಗಳನ್ನು ಕುರಿತಾದ ಅಧ್ಯಯನ ಪ್ರಾರಂಭವಾಯಿತು. ನಮ್ಮ ದೇಶದಲ್ಲಿ ಹದಿನಂಟನೇ ಶತಮಾನದ ಕೊನೆಗೆ ಅದೂ ಕೂಡ ವಸಾಹತುಶಾಹಿ ಹಿನ್ನೆಲೆಯಲ್ಲಿ ಬುಡಕಟ್ಟು ಸಮುದಾಯಗಳನ್ನು ಕುರಿತಾದ ಅಧ್ಯಯನ ಪ್ರಾರಂಭವಾಯಿತು. ಭಾರತದ ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿಗಳು, ಕ್ರೈಸ್ತ ಪಾದ್ರಿಗಳು ಬುಡಕಟ್ಟು ಸಮುದಾಯಗಳ ಅಧ್ಯಯನವನ್ನು ಮಾಡಿದರು. ಅಂತಹವರಲ್ಲಿ ಇಂಗ್ಲೇಂಡಿನಿಂದ ಕ್ರೈಸ್ತ ಧರ್ಮದ ಪ್ರಚಾರಕ್ಕೆ ಪಾದ್ರಿಯಾಗಿ ಭಾರತಕ್ಕೆ ಬಂದ ವೆರಿಯರ್ ಎಲ್ವಿನ್‌ರವರು ಪ್ರಮುಖರಾಗಿದ್ದಾರೆ. ಇವರು ಭಾರತದ ಮದ್ಯವಲಯಕ್ಕೆ ಸೇರಿದ ಬುಡಕಟ್ಟುಗಳಾದ ಮಲಿಯಾ, ಮುಲಿಯಾ, ಸವೋರ್ದ, ಅಗೇರಿಯಾ, ಬೈಗಾ, ಗೊಂಡಾ ಈ ಬುಡಕಟ್ಟುಗಳ ಬಗ್ಗೆ ಅಧ್ಯಯನ ಮಾಡಿ 'Philosophy of NEFA' (North East Fronties of Assam) ಎಂಬ ಕೃತಿಯನ್ನು ಬರೆದಿದ್ದಾರೆ.

ಅಲಕ್ಷಿತ ವಿಷಯಗಳ ಅಧ್ಯಯನವು ಈ ನಂಬಿಕೆಗಳನ್ನು ಪ್ರಶ್ನಿಸುತ್ತದೆ. ಬುಡಕಟ್ಟು ಜಾತಿ ಅಥವಾ ಇಂತಹ ಇತರ ಗುಂಪುಗಳನ್ನು ಚಾರಿತ್ರಿಕವೆಂದೇ ಪರಿಗಣಿಸುತ್ತದೆ. ಬೆಟ್ಟಗಳಲ್ಲಿ ವಾಸಮಾಡುವ ಬುಡಕಟ್ಟುಗಳು ಕಾಡಿನ ಮೇಲೆ ತಮಗಿದ್ದ ಅಧಿಕಾರಗಳನ್ನು ಕಳೆದುಕೊಂಡಾಗ ಅವರನ್ನು ಕೇವಲ ಪ್ರಕೃತಿಯ ಶಿಶುಗಳು ಎಂದು ನೋಡುವುದು ಸಾಧ್ಯವಿಲ್ಲ. ಏಕೆಂದರೆ ಹೊಸದಾಗಿ ಬಂದ ಕಾನೂನುಗಳು ಬುಡಕಟ್ಟುಗಳಿಗೂ, ಪ್ರಕೃತಿಗೂ ಇದ್ದ ಸಂಬಂಧವನ್ನು ನಾಶಮಾಡಿದವು. ಹೊಸ ಕಾನೂನುಗಳು, ಕಾಡನ್ನು ಬುಡಕಟ್ಟುಗಳ ವಾಸಸ್ಥಳವೆಂದು ಪರಿಗಣಿಸದೆ, ವಾಣಿಜ್ಯ ಉತ್ಪನ್ನಗಳ ಮೂಲವೆಂದು ಪರಿಗಣಿಸಿದವು. ಇಂತಹ ಸಂದರ್ಭದಲ್ಲಿ ಕಾಡಿನಲ್ಲಿದ್ದ ಬುಡಕಟ್ಟುಗಳು ಆಧುನಿಕ ಪ್ರಬಲ ಸಂಸ್ಥೆಗಳೊಂದಿಗೆ 'ಒಪ್ಪಂದ'ಗಳನ್ನು ಮಾಡಿಕೊಳ್ಳಬೇಕಾಯಿತು. ಕಾಡಿನ ನೆಲೆ ತಪ್ಪಿ, ಕಾನೂನಿನ ಮುಷ್ಠಿಯಲ್ಲಿ ಸಿಲುಕಿದ ಬುಡಕಟ್ಟುಗಳ ಅಧ್ಯಯನದ ಜಾಡನ್ನು ತಿಳಿಸುತ್ತಾರೆ.

ಬುಡಕಟ್ಟುಗಳೆಂದು ಕರೆಸಿಕೊಳ್ಳುವ ಆದಿವಾಸಿಗಳು ಭಾರತದಾದ್ಯಂತ ಪಸರಿಸಿದ್ದಾರೆ. ಎಲ್ಲಾ ರಾಜ್ಯಗಳ ಬೆಟ್ಟ-ಗುಡ್ಡ, ಕಾಡು-ಕಣಿವೆ, ಗಿರಿ-ಶಿಖರ, ಹಾಗೂ ಕರಾವಳಿ ಪ್ರದೇಶಗಳು ಇನ್ನಿತರೆ

ದುರ್ಗಮ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಬುಡಕಟ್ಟುಗಳನ್ನು ಅಧ್ಯಯನ ವ್ಯಾಪ್ತಿಗೆ ಒಳಪಡಿಸುವುದು ಕಷ್ಟಸಾಧ್ಯ. ಆದಿವಾಸಿಗಳ ಭಾಷೆ, ವಿಶಿಷ್ಟ ಸಂಸ್ಕೃತಿ ಮತ್ತು ಆಚರಣೆ, ಪದ್ಧತಿ, ವಿಧಿ-ನಿಷೇದ ಮುಂತಾದ ಕಾರಣಗಳಿಂದ ಅವರೊಂದಿಗೆ ಬೆರೆತು ಅಧ್ಯಯನ ಮಾಡುವುದು ತುಂಬಾ ಕಷ್ಟ. ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದ ಅನೇಕ ಬುಡಕಟ್ಟುಗಳ ಅಧ್ಯಯನವು ದೇಶ-ವಿದೇಶಗಳ ವಿದ್ವಾಂಸರಿಂದ ನಡೆದಿತ್ತು. ಆದರೆ ಯಾವುದೇ ಬುಡಕಟ್ಟಿನ ಸಮಗ್ರ ಅಧ್ಯಯನವಾಗಿರಲಿಲ್ಲ. ಈ ಬುಡಕಟ್ಟುಗಳ ಅಧ್ಯಯನಕ್ಕೆ ವಿದೇಶಿ ವಿದ್ವಾಂಸರು ತೋರಿಸಿದ ಆಸಕ್ತಿಯಿಂದಾಗಿ ಭಾರತೀಯ ವಿದ್ವಾಂಸರು ಬುಡಕಟ್ಟುಗಳ ಅಧ್ಯಯನ ಕುರಿತು ಆಸಕ್ತಿ ಬೆಳೆಸಿಕೊಂಡರು. ಸ್ವಾತಂತ್ರ್ಯ ನಂತರ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ವಿಶ್ವವಿದ್ಯಾಲಯಗಳು, ಖಾಸಗಿ ಸಂಘಸಂಸ್ಥೆಗಳು ಬುಡಕಟ್ಟು ಅಧ್ಯಯನಕ್ಕೆ ಹೆಚ್ಚಿನ ಆಸಕ್ತಿ ತೋರಿದವು.

ಬ್ರಿಟೀಷ್ ವಿದ್ವಾಂಸರು, ಆಡಳಿತಗಾರರು, ಮಿಷನರಿಗಳು, ಆ ನಂತರ ಬ್ರಿಟೀಷ್ ಹಾಗೂ ಭಾರತೀಯ ಮಾನವಶಾಸ್ತ್ರಜ್ಞರಿಂದ ವಿಶೇಷ ಗಮನಹರಿಸಿದ ಬುಡಕಟ್ಟುಗಳ ಅಧ್ಯಯನಗಳು ಇಪ್ಪತ್ತನೇ ಶತಮಾನದ ನಲವತ್ತರ ದಶಕದ ಅಂತ್ಯದವರೆಗೂ ಮುಂದುವರೆದವು. ಸ್ವಾತಂತ್ರ್ಯ ನಂತರ ಅಮೆರಿಕಾದ ಮಾನವಶಾಸ್ತ್ರಜ್ಞರು ಹಾಗೂ ಭಾರತೀಯ ಮಾನವಶಾಸ್ತ್ರಜ್ಞರ ನಡುವೆ ಸಂಪರ್ಕ ಹೆಚ್ಚಿತು. ಬುಡಕಟ್ಟು ಅಧ್ಯಯನಗಳಲ್ಲಿ ವಿಶ್ಲೇಷಣಾತ್ಮಕವಾದ ಹಾಗೂ ಕ್ರಿಯಾತ್ಮಕವಾದ ಮಾರ್ಗ ಕಂಡುಬಂದಿತು. ಇದರ ಪರಿಣಾಮವಾಗಿ ಬುಡಕಟ್ಟು ಸಮುದಾಯಗಳನ್ನು ಅಂತರ್‌ಶಿಸ್ತೀಯ ಸಂಬಂಧದ ದೃಷ್ಟಿಯಿಂದ ಅಧ್ಯಯನ ಮಾಡಲು ಪ್ರಾರಂಭಿಸಲಾಯಿತು.

ಆದಿವಾಸಿ ಸಮುದಾಯಗಳ ಬಗ್ಗೆ ಆಳವಾದ ಅಧ್ಯಯನವನ್ನು ನಡೆಸಿ ಹಲವಾರು ಗ್ರಂಥಗಳನ್ನು ಪ್ರಕಟಿಸಿದ ಶ್ರೇಯಸ್ಸು ಮಾನವಶಾಸ್ತ್ರಜ್ಞರಿಗೆ ಸಲ್ಲುತ್ತದೆ. ಇ. ಥರ್‌ಸ್ಟನ್, ವೆರಿಯರ್ ಎಲ್ವಿನ್, ಆರ್.ಎನ್. ಸಕ್ಸೇನಾ, ಜಿ.ಎಸ್. ಘುರ್ಯೆ, ಫೇರ್‌ಚೈಲ್ಡ್, ಎ.ಎ.ಡಿ. ಲೂಯಿಸ್, ಕೆ. ರಂಗಾಚಾರಿ, ಎಲ್.ಕೆ. ಅನಂತಕೃಷ್ಣ ಅಯ್ಯರ್, ಹೆಚ್.ವಿ. ನಂಜುಂಡಯ್ಯ, ಡಾ. ಡಿ.ಎನ್. ಮಜುಂದಾರ್ ಮುಂತಾದ ಮಾನವಶಾಸ್ತ್ರಜ್ಞರು ಆದಿವಾಸಿ ಸಮುದಾಯ ಹಾಗೂ ಸಂಸ್ಕೃತಿಗಳ ಬಗ್ಗೆ ಅಧ್ಯಯನ ನಡೆಸಿ ಶ್ರೇಷ್ಠ ಗ್ರಂಥಗಳನ್ನು ರಚಿಸಿದ್ದಾರೆ. 1909ರಲ್ಲಿ ಇ. ಥರ್‌ಸ್ಟನ್‌ರವರು ಬರೆದ Caste and Tribes of Southern India ಎಂಬ ಏಳು ಸಂಪುಟಗಳು ದಕ್ಷಿಣ ಭಾರತದ ಅನೇಕ ಬುಡಕಟ್ಟುಗಳ ಸಂಕ್ಷಿಪ್ತ ವಿವರಣೆಗಳನ್ನು ಒಳಗೊಂಡ ಉತ್ತಮ ಕೃತಿಗಳಾಗಿವೆ.

ಬ್ರಿಟೀಷ್ ಆಡಳಿತ ಅವಧಿಯಲ್ಲಿ ಆದಿವಾಸಿ ಕಲ್ಯಾಣವನ್ನು ವಿಶೇಷ ಕಾಳಜಿಯಿಂದ ಸರ್ಕಾರೇತರ ಸಂಸ್ಥೆಗಳು ನಿಗವಹಿಸಿದ್ದರೂ, ಆ ಸೇವೆ ಏಕರೂಪವಾಗಿರಲಿಲ್ಲ. ಹಾಗೂ ಅದರ ಕ್ಷೇತ್ರ ವ್ಯಾಪ್ತಿ ವಿಸ್ತಾರವಾಗಿರಲಿಲ್ಲ. ಕ್ರಿಶ್ಚಿಯನ್ ಮಿಷನರಿಗಳು ಧಾರ್ಮಿಕ ಶ್ರದ್ಧಾ ಉದ್ದೇಶ ಹೊಂದಿದ್ದವು. ಮೊದಲು ಶಾಲೆ, ಆಸ್ಪತ್ರೆ ತೆರೆದರು. ನಂತರ ತಮ್ಮ ಧರ್ಮಕ್ಕೆ ಮತಾಂತರ ಹೊಂದಿದ ಆದಿವಾಸಿಗಳಿಗೆ ಆರ್ಥಿಕ ನೆರವು, ಉನ್ನತ ಶಿಕ್ಷಣಕ್ಕೆ ತಗಲುವ ಖರ್ಚು, ಯೋಗ್ಯ ನೌಕರಿ ದೊರಕಿಸಿ ಕೊಡುವಲ್ಲಿ ಸಹಾಯ ಮುಂತಾದ ವಿಶೇಷ ಸೌಕರ್ಯಗಳನ್ನು ಕೊಟ್ಟರು.

ಹೊರ ದೇಶದ ಅನೇಕ ಮಾನವಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು, ಆಡಳಿತಾಧಿಕಾರಿಗಳು ವಿಶೇಷವಾದ ಅಧ್ಯಯನಗಳನ್ನು ಆದಿವಾಸಿಗಳ ಮೇಲೆ ಮಾಡಿದರು. 1920ರ ವರೆಗೆ ಕ್ರಿಶ್ಚಿಯನ್ ಮಿಷನರಿಗಳು ಈ ಕ್ಷೇತ್ರದಲ್ಲಿ ಕೆಲಸ ಮಾಡಿದವು. ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ಕೆಲವು ವಿಧಾಯಕ ಕಾರ್ಯಕರ್ತರು ಮತ್ತು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಸದಸ್ಯರು ಆದಿವಾಸಿಗಳ ಸ್ಥಿತಿಗತಿಗಳ ಬಗ್ಗೆ ಆಸಕ್ತಿ ವಹಿಸಲು ಪ್ರಾರಂಭಿಸಿದರು. ಎ.ವಿ. ಠಕ್ಕರ್‌ಬಾಬಾ ಎಂಬುವವರು ಇದರಲ್ಲಿ ಅತಿ ಪ್ರಮುಖರು.

ಪ್ರಪಂಚದ ಬುಡಕಟ್ಟುಗಳನ್ನು ನಿಖರವಾಗಿ ವ್ಯಾಖ್ಯಾನಿಸುವುದು ಕಷ್ಟ ಸಾಧ್ಯ. ಕಾರಣ ಸರ್ಕಾರದ ಮಾನದಂಡದ ಪ್ರಕಾರ ತೀರ್ಮಾನಿಸಿ ತನ್ನ ಅಧಿಕೃತ. ಪಟ್ಟಿಯಲ್ಲಿ ಸೇರಿಸಿಕೊಂಡವರನ್ನು ಪರಿಶಿಷ್ಟ ಪಂಗಡ ಎನ್ನುವುದಾದರೆ, ಈ ಪಟ್ಟಿಯಲ್ಲಿ ತಮ್ಮ ಜಾತಿ/ಪಂಗಡಗಳ ನಮೂದನೆಗೆ ಅನೇಕ ರಾಜಕೀಯ ಪ್ರೇರಿತ ಒತ್ತಡಗಳು, ಹೋರಾಟಗಳು, ಹಿಂಸೆ, ಘರ್ಷಣೆ ಇತ್ಯಾದಿ ವರ್ತನೆಗಳಿಂದ ಪಟ್ಟಿಯಲ್ಲಿ ಸ್ಥಾನ ಪಡೆದು ಪರಿಶಿಷ್ಟರ ಎಲ್ಲಾ ಸೌಲಭ್ಯಗಳನ್ನು ತಮ್ಮದಾಗಿಸಿಕೊಳ್ಳಬಯಸುವ ಹುನ್ನಾರ ಎಲ್ಲೆಡೆ ಕಂಡುಬರುತ್ತಿದೆ. ಭಾರತದಲ್ಲಂತೂ ಈ ಮಾತು ಸತ್ಯ. ಭಾರತದ ಬಹುತೇಕ ರಾಜ್ಯಗಳಲ್ಲಿ ಇಂದಿಗೂ ಪರಿಶಿಷ್ಟರ ಪಟ್ಟಿಗೆ ಸೇರ್ಪಡೆಗೊಳ್ಳಬಯಸುವ ಆದರೆ ಪರಿಶಿಷ್ಟ ಪಂಗಡದ ದಟ್ಟ ಲಕ್ಷಣಗಳು ಕಂಡುಬರದಿದ್ದರೂ, ಒತ್ತಡದ ಮರ್ಜಿಗೆ ಒಳಗಾಗಿಸುವ ಹುನ್ನಾರ ಸಾರ್ವತ್ರಿಕವಾಗುತ್ತಿದೆ. ಈ ರೀತಿಯ ವರ್ತನೆಗಳಿಂದ ನಿಜವಾಗಿ ಯಾರಿಗೆ ಪರಿಶಿಷ್ಟರ ಸೌಲಭ್ಯ ಲಭ್ಯವಾಗಬೇಕೋ ಅವರು ವಂಚಿತರಾಗಿ ಬಲಿಪಶುಗಳಾಗಬೇಕಾಗುತ್ತದೆ. ಮೇಲುಗೈ ಸಾಧಿಸಿರುವ ಅಥವಾ ನವ ಪರಿಶಿಷ್ಟ ಪಂಗಡ (Neo-Tribe) ದವರ ಎದುರು ವಾಸ್ತವವಾಗಿ ಅವಕಾಶ ವಂಚಿತ ಪರಿಶಿಷ್ಟ ಪಂಗಡದವರು ಅಲ್ಪಸಂಖ್ಯಾತರಂತಾಗಿ, ದನಿಕಳೆದುಕೊಂಡು ಪುನಃ ಎರಡನೇ ದರ್ಜೆಯ ಪ್ರಜೆಗಳಾಗಿ ಬದುಕಬೇಕಾದಂತಹ ಪರಿಸ್ಥಿತಿ ಭಾರತದಲ್ಲಿ ಕಂಡುಬರುತ್ತದೆ. ಅಂದರೆ 'ಉಳ್ಳವರ ಸ್ವತ್ತಾಗುವ' ಬಲಪ್ರಯೋಗ ಪ್ರಕ್ರಿಯೆ ನಡೆಯುತ್ತಲೇ ಇದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಬುಡಕಟ್ಟು ಯಾರೆಂದು ಗುರುತಿಸಲು ಸರ್ಕಾರದ ಮಾನದಂಡಕ್ಕಿಂತ ಈ ಕುರಿತಾಗಿ ವ್ಯಾಖ್ಯಾನ ಕೊಡುವ ವಿದ್ವಾಂಸರ ಹೇಳಿಕೆಗಳು ಇಲ್ಲಿ ಮುಖ್ಯವಾಗುತ್ತದೆ.

ಸಾಮಾನ್ಯವಾಗಿ ಒಂದು ದೇಶದ ಮೂಲ ನಿವಾಸಿಗಳನ್ನು ಆದಿವಾಸಿಗಳೆಂದು ಕರೆಯಲಾಗುತ್ತದೆ. ಇವರನ್ನು ಅಲೆಮಾರಿಗಳು, ಅನಾಗರಿಕರು, ಆದಿಪ್ರಜಾ, ಸಂಚಾರಿ ಜನಾಂಗ, ಬುಡಕಟ್ಟು ಜನಾಂಗ, ಅರಣ್ಯ ವಾಸಿಗಳು, ಪರಿಶಿಷ್ಟ ಪಂಗಡ, ಗಿರಿಜನರು, ಸಂಪ್ರದಾಯ ಪ್ರಿಯರು, ಸರ್ವಚೇತನವಾದಿಗಳು, ಹಿಂದುಳಿದ ಹಿಂದೂಗಳು ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಮಹಾತ್ಮ ಗಾಂಧೀಜಿಯವರು ಆದಿವಾಸಿಗಳನ್ನು ಗಿರಿಜನರು ಎಂದು ಕರೆದಿರುತ್ತಾರೆ. ಎಸ್.ಸಿ. ದುಬೆ ಅವರು ಅಭಿಪ್ರಾಯ ಪಟ್ಟಿರುವಂತೆ 'ಭಾರತದ ಸಾಮಾಜಿಕ ವ್ಯವಸ್ಥೆಯ ಚೌಕಟ್ಟಿನಲ್ಲಿ 'ಟ್ರೈಬ್' ಎಂಬ ಶಬ್ದವನ್ನು ಗೊತ್ತು ಗುರಿಯಿಲ್ಲದಂತೆ ಬಳಸಲಾಗಿದೆ'[2]

(The Term Tribe is used indiscriminately-S.C. Dube) ಅಲ್ಲದೆ ಪ್ರಸಿದ್ಧ ಸಮಾಜ ವಿಜ್ಞಾನಿಗಳಾದ ರಿಸ್ಲೇ, ಲೇಸಿ ಮತ್ತು ಎಲ್ವಿನ್ ಇವರುಗಳು ಸಹ ಆದಿವಾಸಿಗಳನ್ನು ಎಬೊರಿಜಿನಲ್ಸ್ (Aboriginals) ಮೂಲ ನಿವಾಸಿಗಳು) ಎಂದು ಕರೆದಿದ್ದರು. ಡಾ. ಜಿ.ಎಸ್. ಘುರ್ಯೆ ಆದಿವಾಸಿಗಳನ್ನು ಹಿಂದುಳಿದ ಹಿಂದುಗಳು ಎಂದು ಕರೆದಿದ್ದಾರೆ. ಭಾರತದ ಸಂವಿಧಾನದ 342ನೇ ಕಲಂಮಿನಲ್ಲಿ ಆದಿವಾಸಿಗಳನ್ನು ಪರಿಶಿಷ್ಟ ಬುಡಕಟ್ಟುಗಳು ಎಂದು ಉಲ್ಲೇಖಿಸಲಾಗಿದೆ.

ಆದಿವಾಸಿಗಳೆಂದರೆ ಯಾರು ಎಂಬುದಕ್ಕೆ 'ಭಾರತದ ಇಂಪೀರಿಯಲ್ ಗೆಜೆಟಿಯರ್ ಒಂದೇ ಹೆಸರನ್ನು ಹೊಂದಿರುವ, ಒಂದೇ ಭಾಷೆಯನ್ನು ಮಾತನಾಡುವ, ಒಂದೇ ಸ್ಥಳದಲ್ಲಿ ವಾಸಮಾಡುವ ಅಥವಾ ವಾಸಿಸಲು ಉದ್ಯುಕ್ತವಾಗಿರುವ ಪೂರ್ವದಲ್ಲಿ ಒಳಪಂಗಡ ವಿವಾಹ ಪದ್ಧತಿಗೆ ಬದ್ಧವಾಗಿದ್ದಿರಬಹುದಾದರೂ ಈಗ ಹಾಗಿಲ್ಲದ ಕುಟುಂಬದ ಸಮೂಹವನ್ನು ಆದಿವಾಸಿ ಸಮಾಜ ಎನ್ನಬಹುದು'[3] ಅದೇ ರೀತಿ ಮಾನವಶಾಸ್ತ್ರದ ನಿಘಂಟಿನ ಪ್ರಕಾರ ಒಂದು ಸಾಮಾಜಿಕ ಸಮೂಹವು ನಿರ್ಧಿಷ್ಟ ನೆಲೆ, ಭಾಷೆ, ಸಾಂಸ್ಕೃತಿಕ ಸಾಮ್ಯತೆ ಮತ್ತು ಸಂಘಟನಾ ಸ್ವರೂಪವನ್ನು ಹೊಂದಿದ್ದರೆ, ಅಂತಹ ಸಮೂಹವು ಬುಡಕಟ್ಟು ಎನಿಸಿಕೊಳ್ಳುತ್ತದೆ. ಡಬ್ಲ್ಯೂ.ಜೆ. ಪೆರ್ರಿ ಪ್ರಕಾರ, ಒಂದೇ ಸ್ಥಳದಲ್ಲಿ ನೆಲೆಸಿಕೊಂಡು ಒಂದೇ ಭಾಷೆಯನ್ನಾಡುವ ಜನ ಸಮೂಹವನ್ನು ಆದಿವಾಸಿ ಸಮೂಹ ಎಂದು ಕರೆಯಬಹುದು ಎಂದಿದ್ದಾರೆ. ಬೋಗಾರ್ಡಸ್ ಎಂಬಾತನ ಅಭಿಪ್ರಾಯದಲ್ಲಿ ರಕ್ಷಣೆಯ ಅವಶ್ಯಕತೆ, ರಕ್ತ ಸಂಬಂಧ, ಒಂದೇ ಧರ್ಮದ ನೆಲೆ ಇವುಗಳ ಆಧಾರದ ಮೇಲೆ ನಿಂತಿರುವ ಸಮೂಹವೇ ಆದಿವಾಸಿ ಸಮೂಹ ಎಂದಿದ್ದಾರೆ. ಒಟ್ಟಾರೆ ಒಂದು ದೇಶದ ಮೂಲ ನಿವಾಸಿಗಳನ್ನು ಮತ್ತು ದ್ರಾವಿಡ ಜನಾಂಗದ ಪೂರ್ವಜರನ್ನು ಆದಿವಾಸಿ ಜನಾಂಗವೆಂದು ಭಾರತದಲ್ಲಿ ಗುರುತಿಸಲಾಗಿದೆ.

ಯಾವ ಸಮೂಹ ಗತಕಾಲದಿಂದಲೂ ನಿಸರ್ಗದ ಮಡಿಲಿನಲ್ಲಿ ಸುಖವಾಗಿ ಬದುಕಲು ಬಯಸುವುದೋ, ಪ್ರಕೃತಿ ಜನ್ಯ ಉತ್ಪನ್ನಗಳನ್ನೇ ಭಕ್ಷಿಸಲು ಯತ್ನಿಸುವುದೋ, ತನ್ನದೇ ಆದ ಒಂದು ವಿಶಿಷ್ಟ ರೀತಿಯ ಜೀವನ ವಿಧಾನದಿಂದ ಜೀವಿಸುವ ಆಶಯವನ್ನು ಹೊಂದಿ ಆ ರೀತಿಯಲ್ಲಿಯೇ ಜೀವನ ನಡೆಸುವುದೋ ಆ ಸಮೂಹಕ್ಕೆ ಆದಿವಾಸಿ ಅಥವಾ ಬುಡಕಟ್ಟು ಎಂದು ಕರೆಯುವರು. ಬುಡಕಟ್ಟು ಎಂಬ ಹೆಸರೇ ಸೂಚಿಸುವಂತೆ ಬುಡ/ತಳದಲ್ಲಿ ತಮ್ಮದೇ ಆದ ಬದುಕನ್ನು ಕಟ್ಟಿಕೊಂಡವರು ಎಂದು ಅರ್ಥೈಸಬಹುದು.

ಅ. ಬುಡಕಟ್ಟು ಸಮುದಾಯದ ಗುಣಲಕ್ಷಣಗಳು:

ವರ್ಣ ಮತ್ತು ಜಾತಿ ವ್ಯವಸ್ಥೆಯಿಂದ ಹೊರಗಿರುವ, ಗ್ರಾಮ ಮತ್ತು ನಗರ ಸಂಸ್ಕೃತಿಯಿಂದ ದೂರವಿದ್ದು, ಗುಡ್ಡಗಾಡುಗಳಲ್ಲಿ ವಾಸಿಸುವ ವಿಶಿಷ್ಟವಾದ ಗುಣಲಕ್ಷಣಗಳನ್ನು ಹೊಂದಿದ ಅಸಂಖ್ಯಾತ ಬುಡಕಟ್ಟು ಸಮುದಾಯದವರು ಭಾರತದಲ್ಲಿದ್ದಾರೆ. ಒಂದೊಂದು

ಬುಡಕಟ್ಟುಗಳು, ಒಂದೊಂದು ಗುಣಲಕ್ಷಣಗಳನ್ನು ಹೊಂದಿರುವುದರ ಜೊತೆಗೆ ಪರಸ್ಪರ ಹೋಲಿಕೆ ಮತ್ತು ಏಕತೆಗಳು ಕಂಡು ಬರುತ್ತವೆ. ಅಂತಹ ಪ್ರಮುಖ ಗುಣಲಕ್ಷಣಗಳೆಂದರೆ–

ಅ.ನಿರ್ಧಿಷ್ಟ ಭೂಪ್ರದೇಶ:

ಪ್ರತಿಯೊಂದು ಬುಡಕಟ್ಟುಗಳಿಗೂ ತಮ್ಮದೇ ಆದ ನಿಶ್ಚಿತ ನೆಲೆ ಇರುತ್ತದೆ. ಬೇಟೆ, ಪಶುಪಾಲನೆ, ಕೃಷಿ, ವ್ಯಾಪಾರ ಹಾಗೂ ಉಪಜೀವನಕ್ಕಾಗಿ ಅನೇಕ ಕಡೆ ಸಂಚರಿಸುತ್ತಾರೆ. ಆದರೂ ತಾವು ಹುಟ್ಟಿದ ಸ್ಥಳ ಮತ್ತು ಪ್ರದೇಶದ ಬಗೆಗೆ ಸಾಮುದಾಯಿಕ ಭಾವನೆಗಳು ಸದಾ ಜಾಗೃತವಾಗಿರುತ್ತವೆ. ಇವರು ವಾಸಿಸುವ ಪ್ರದೇಶಗಳಿಗೆ ಹಟ್ಟಿ, ಪಾಳ್ಯ, ಹಾಡಿ, ರೊಪ್ಪ, ದೊಡ್ಡಿ ಮೊದಲಾದ ಹೆಸರುಗಳಿಂದ ಕರೆದುಕೊಳ್ಳುತ್ತಾರೆ. ನಾಗ, ಖಾಸಿ, ಗಾರೊ ಜನರು ಅಸ್ಸಾಂ ಭಾಗದಲ್ಲಿಯೂ, ತೋಡರು, ಬಡಗರು, ನೀಲಗಿರಿ ಬೆಟ್ಟಗಳಲ್ಲಿಯೂ; ಗೊಂಡರು ಗೊಂಡಾರಣ್ಯದಲ್ಲಿಯೂ; ವೆಡ್ಡ ಜನರು ಸಿಲೋನಿನಲ್ಲಿಯೂ; ಮೇದರು, ಹೆಳವರು, ದುರುಗ–ಮುರುಗಿಯರು, ಸುಡುಗಾಡುಸಿದ್ದರು, ಕರ್ನಾಟಕದಲ್ಲಿಯೂ, ಅಂಗೆ, ಒಂಗೆ ಮತ್ತು ಜಾರವ ಅಂಡಮಾನ್ ಮತ್ತು ನಿಕೋಬಾರ ದ್ವೀಪಗಳಲ್ಲಿಯೂ, ಜೆಪ್ಸಿ, ಜ್ಯೂ ಮತ್ತು ಚೆಂಚರು ಆಂದ್ರಪ್ರದೇಶದಲ್ಲಿಯೂ ವಾಸಿಸುತ್ತಿದ್ದಾರೆ. ಇಂತಹ ನಿರ್ಧಿಷ್ಟ ಭೂಪ್ರದೇಶದಲ್ಲಿ ವಾಸ ಮಾಡುವುದರಿಂದ ಅವರಲ್ಲಿ ಸಹಕಾರ, ಒಗ್ಗಟ್ಟು ಮತ್ತು ಸಾಮುದಾಯಿಕ ಭಾವನೆ ಅಧಿಕವಾಗಿರುತ್ತದೆ.

ಆ. ನಿರ್ಧಿಷ್ಟ ಹೆಸರು:

ಭಾರತದಲ್ಲಿ ನೆಲಸಿರುವಂತಹ ಪ್ರತಿಯೊಂದು ಬುಡಕಟ್ಟಿಗಳಿಗೂ ತಮ್ಮದೇ ಆದ ವಿಶಿಷ್ಟ ಮತ್ತು ನಿರ್ದಿಷ್ಟ ಹೆಸರುಗಳಿವೆ. ಉದಾ: ನಾಗ, ತೋಡ, ಭಿಲ್, ಚೆಂಚು, ಬೇಡ, ಗೊಂಡ, ಶಬರ, ತಳವಾರ, ಗುರಿಕಾರ, ಬಹುರೂಪಿ, ಮೇದ, ಸಂತಾಲ, ಜಿಪ್ಸಿ, ಗಾರೋ, ಬಡಗ, ಮುಂಡಾ ಮುಂತಾದವು ಆದಿವಾಸಿಗಳ ಹೆಸರುಗಳಾಗಿವೆ. ಈ ಹೆಸರುಗಳ ಸಹಾಯದಿಂದ ಬೇರೆ ಬೇರೆ ಆದಿವಾಸಿ ಪಂಗಡಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸಬಹುದು.

ಇ. ಸಾಮಾನ್ಯ ಭಾಷೆ:

ಆದಿವಾಸಿಗಳು ತಮ್ಮದೇ ಆದ ಸ್ವತಂತ್ರ ಭಾಷೆಯನ್ನು ಹೊಂದಿರುತ್ತಾರೆ. ಆ ಭಾಷೆಯನ್ನು ಬೇರೆಯವರು ಅರ್ಥಮಾಡಿಕೊಳ್ಳುವುದು ಕಷ್ಟ. ಆದಿವಾಸಿ ಭಾಷೆಗೆ ಲಿಪಿಯಿಲ್ಲದೇ ಇರುವುದರಿಂದ ಇವರು ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ. ಆದಿವಾಸಿ ಭಾಷೆಗಳ ಮೇಲೆ ನೆರೆಹೊರೆಯ ಪ್ರದೇಶಗಳ ಭಾಷೆಯ ಪ್ರಭಾವವನ್ನು ಕಾಣಬಹುದು. ಉದಾಹರಣೆಗೆ ಕರ್ನಾಟಕದ ಸುಡುಗಾಡು ಸಿದ್ಧರು, ಮೇದರು ತೆಲುಗು ಮಿಶ್ರಿತ ಕನ್ನಡವನ್ನು ಮಾತನಾಡುತ್ತಾರೆ. ನೀಲಗಿರಿ ಬೆಟ್ಟಗಳಲ್ಲಿ ವಾಸಿಸುವ ಬಡಗರು ಮತ್ತು ತೋಡರು ಕನ್ನಡ, ತೆಲುಗು, ತಮಿಳು, ಮಲೆಯಾಳಿ ಮತ್ತು ಹಿಂದಿ ಮುಂತಾದ ಭಾಷೆಗಳಲ್ಲಿ ಒಂದೊಂದು ಶಬ್ಧಗಳನ್ನು

ಮಾತನಾಡುವಾಗ ಬಳಸುತ್ತಾರೆ. ಆದ್ದರಿಂದ ಆದಿವಾಸಿಗಳ ಭಾಷೆಗಳನ್ನು ನಾಡ ಭಾಷೆಗಳೆಂದು ಕರೆಯುತ್ತಾರೆ.

ಈ. ಒಂದೇ ರೀತಿಯ ರಾಜಕೀಯ ವ್ಯವಸ್ಥೆ:

ಪ್ರತಿಯೊಂದು ಆದಿವಾಸಿ ಪಂಗಡವು ತಮ್ಮದೇ ಆದ ಸಾಂಪ್ರದಾಯಿಕ ಆಡಳಿತ ಕ್ರಮವನ್ನು ಹೊಂದಿರುತ್ತದೆ. ಸಮುದಾಯದ ಮುಖ್ಯಸ್ಥನ ಅಧಿಕಾರವಿರುತ್ತದೆ. ಈತ ಸದಸ್ಯರ ವರ್ತನೆಗಳ ಮೇಲೆ ನಿಯಂತ್ರಣವನ್ನು ಹೊಂದಿರುತ್ತಾನೆ. ತಪ್ಪಿತಸ್ಥರಿಗೆ ದಂಡ, ಶಿಕ್ಷೆ ಬಹಿಷ್ಕಾರ ಮುಂತಾದ ಕಠಿಣ ಶಿಕ್ಷೆ ವಿಧಿಸುವ ಅಧಿಕಾರವನ್ನು ಅದಿವಾಸಿ ಸಮುದಾಯದ ಮುಖ್ಯಸ್ಥ ಅಥವಾ ನಾಯಕ ಪಡೆದಿರುತ್ತಾನೆ. ನಾಯಕನನ್ನು ಆಯ್ಕೆ ಮಾಡುವ ಪದ್ಧತಿ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಕೆಲವು ಬುಡಕಟ್ಟುಗಳಲ್ಲಿ ಅನುವಂಶೀಯವಾಗಿ ಇಲ್ಲವೇ ಚುನಾವಣೆಯ ಮೂಲಕ ನಡೆಯುತ್ತದೆ. ಅಸ್ಸಾಂದ ನಾಗ ಬುಡಕಟ್ಟಿನಲ್ಲಿ ಯಾವ ವ್ಯಕ್ತಿ ತನ್ನ ಮನೆಯಲ್ಲಿ ಹೆಚ್ಚು ಜನರ ತಲೆ ಬುರುಡೆಗಳನ್ನು ಸಂಗ್ರಹಿಸಿಕೊಟ್ಟುಕೊಂಡಿರುವನೋ ಅವನನ್ನು ನಾಯಕನೆಂದು ಆಯ್ಕೆ ಮಾಡುತ್ತಾರೆ. ಕೆಲವು ಆದಿವಾಸಿ ಸಮೂಹಗಳಲ್ಲಿ ಪ್ರತಿಯೊಂದು ಪಂಗಡಕ್ಕೂ ಒಂದೊಂದು 'ಪಂಚಾಯ್ತಿ' ವ್ಯವಸ್ಥೆ ಇರುತ್ತದೆ. ಅದು ನ್ಯಾಯಗಳನ್ನು ಬಗೆಹರಿಸುವ ಮತ್ತು ತಪ್ಪಿತಸ್ಥನನ್ನು ಶಿಕ್ಷಿಸುವ ಕಾರ್ಯದಲ್ಲಿ ಮುಖ್ಯಸ್ಥನಿಗೆ ನೆರವು ನೀಡುತ್ತದೆ. ಕಟ್ಟುನಿಟ್ಟಾದ ರಾಜಕೀಯ ಸಂಘಟನೆ ಮತ್ತು ಅನೌಪಚಾರಿಕ ಸಾಮಾಜಿಕ ನಿಯಂತ್ರಣಗಳು ಬುಡಕಟ್ಟು ಜನರ ಚಟುವಟಿಕೆಗಳ ಮೇಲೆ ನಿಯಂತ್ರಣವನ್ನು ತರುತ್ತವೆ.

ಉ. ಸರಳ ಮತ್ತು ಸ್ವತಂತ್ರ ಜೀವನ:

ಆದಿವಾಸಿ ಪಂಗಡಗಳು ಬಹಳ ಮಟ್ಟಿಗೆ ಸರಳವೂ, ಸ್ವತಂತ್ರವೂ ಮತ್ತು ಸ್ವಯಂ ಪರಿಪೂರ್ಣವು ಆಗಿರುತ್ತದೆ. ನಗರದ ಕೃತಕ ಹಾಗೂ ಆಡಂಬರದಿಂದ ಆದಿವಾಸಿಗಳು ಬಹುದೂರವಿರುತ್ತಾರೆ. ಅವರು ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಮುಂದೆ ಬಂದಿಲ್ಲ. ಹಿಂದೆ ಮರದ ತೊಗಟೆ, ಪ್ರಾಣಿಗಳ ಚರ್ಮ, ಕಾಡಿನ ಎಲೆ, ಹುಲ್ಲಿನಿಂದ ಮಾಡಿದ ಉಡುಪುಗಳನ್ನೇ ಧರಿಸುತ್ತಿದ್ದರು. ಅಂಡಮಾನ್ ದ್ವೀಪದ ಒಂಗೆಗಳು ಇಂದಿಗೂ ಬೇಟೆ ಮಾಡಿ, ಮೀನು ಹಿಡಿದು, ಗೆಡ್ಡೆ ಗೆಣಸುಗಳನ್ನು ತಿಂದು ಬದುಕುತ್ತಾರೆ. ಕೆಲವೊಂದು ಆದಿವಾಸಿಗಳು ಕಲ್ಲನ್ನು ಕುಟ್ಟಿ ಬೆಂಕಿ ಹಚ್ಚಿಸಿಕೊಳ್ಳುವುದು, ಮರದ ಮೇಲೆ ಜೋಲಿ ಕಟ್ಟಿ ಮಲಗುವುದು, ಸರಳ ಆಹಾರ ಪದ್ಧತಿ, ಸಾಮೂಹಿಕ ನೃತ್ಯ, ಜಾತ್ರೆ, ಉತ್ಸವ, ಹಬ್ಬಗಳಿಂದ ಅವರು ತಮ್ಮ ಕ್ಷೇತ್ರದಲ್ಲಿಯೇ ಮನರಂಜನೆ ಪಡೆಯುತ್ತಾರೆ. ಕಳ್ಳತನ, ಮೋಸ, ಕಪಟ ಇವುಗಳಾವು ತಿಳಿಯುವುದಿಲ್ಲ. ಇಂದಿಗೂ ಕೆಲವೊಂದು ಆದಿವಾಸಿಗಳಲ್ಲಿ "ಅದಲು ಬದಲು ಪದ್ಧತಿ" ಅಸ್ಥಿತ್ವದಲ್ಲಿದೆ. ಇವರ ಪ್ರಮುಖ ವೃತ್ತಿ ಬೇಟೆ, ಮೀನು ಹಿಡಿಯುವುದು, ಅರಣ್ಯಗಳಿಂದ ಜೇನು, ಹಣ್ಣು, ಹಂಪಲು, ಗೆಡ್ಡೆ ಗೆಣಸು, ಕಾಡು ಮೆಣಸು, ಔಷಧಿಯ ಗಿಡಮೂಲಿಕೆಗಳು ಮುಂತಾದವನ್ನು ಸಂಗ್ರಹಿಸಿ ಮಾರಾಟ ಮಾಡುತ್ತಾರೆ. ಇತ್ತೀಚೆಗೆ ಪಶುಪಾಲನೆ ಕೃಷಿ ಪ್ರಧಾನ

ವೃತ್ತಿಯಾಗಿದೆ. ಹೀಗಾಗಿ ಜೀವನದ ಹಲವಾರು ಕ್ಷೇತ್ರಗಳಲ್ಲಿಯೂ ಅವರು ಸಂಪೂರ್ಣವಾಗಿ ಸ್ವತಂತ್ರರೆಂದು ಹೇಳಬಹುದು.

ಊ. ರಕ್ತ ಸಂಬಂಧದ ಬಾಂಧವ್ಯ:

ಬುಡಕಟ್ಟು ಸಮುದಾಯಗಳಲ್ಲಿ ರಕ್ತ ಸಂಬಂಧಗಳಿಗೆ ಹೆಚ್ಚಿನ ಪ್ರಾಮುಖ್ಯತೆಯಿದೆ. ಕುಟುಂಬ, ವಂಶ, ಕುಲ, ಬಳಿ, ಬೆಡಗು ಮುಂತಾದ ಚಿಕ್ಕ ಸಮೂಹಗಳು ರಕ್ತ ಸಂಬಂಧದ ಆಧಾರದ ಮೇಲೆಯೇ ರಚಿತವಾಗಿದೆ. ಬಂಧು ಪ್ರೇಮದ ತಳಹದಿಯ ಮೇಲೆ ಸಹಕಾರ ಮತ್ತು ಸಂಬಂಧಗಳು ಬೆಳೆಯುತ್ತವೆ. ಮದುವೆ, ಮಂಗಳ ಕಾರ್ಯಗಳಲ್ಲಿ ಸೋದರಮಾವ ಮತ್ತು ಸೋದರತ್ತೆಗೆ ವಿಶೇಷ ಮಹತ್ವ ಕೊಡುತ್ತಾರೆ. ಯಾವುದೇ ಕೌಟುಂಬಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಐಕ್ಯತೆ, ಒಗ್ಗಟ್ಟು ಮತ್ತು ಸಹಕಾರ ಭಾವನೆ ಪ್ರಧಾನವಾಗಿರುತ್ತದೆ. ಕೆಲವೊಂದು ಸಲ ಕುಲ, ಬಳಿ, ಬೆಡಗುಗಳು ಬೇರೆ ಬೇರೆಯಿದ್ದರೂ ಸಹೋದರ ಭಾವನೆಯಿಂದ ವರ್ತಿಸುತ್ತಾರೆ.

ಎ. ಒಂದೇ ಧರ್ಮ ಮತ್ತು ಸಂಸ್ಕೃತಿ:

ಸರ್ವಚೇತನ ಪಂಥವು ಆದಿವಾಸಿಗಳ ಧಾರ್ಮಿಕ ಭಾವನೆಯಾಗಿದೆ, ಧಾರ್ಮಿಕ ನಿಷ್ಠೆ, ಸಂಪ್ರದಾಯ ಶರಣತೆ, ಪ್ರಕೃತಿ ಪೂಜೆ, ಮೂರ್ತಿ ಪೂಜೆ ಮತ್ತು ಕುಲದೇವತಾ ಪೂಜೆಗಳನ್ನು ಆಚರಿಸುತ್ತಾರೆ. ಗಿಡ, ಮರ, ಬಳ್ಳಿ, ಪ್ರಾಣಿ, ಪಕ್ಷಿ, ಕಲ್ಲು ಬಂಡೆಗಳನ್ನು ಅವರು ಪೂಜಿಸುತ್ತಾರೆ. ಭೂತ, ಪ್ರೇತ, ಮಾಟ–ಮಂತ್ರಗಳ ಬಗೆಗೆ ನಂಬಿಕೆಯುಳ್ಳರು. ಜೀವನದ ಕಷ್ಟ, ನಷ್ಟ, ರೋಗ ರುಜಿನಿಗಳು ಬಂದಾಗ ಅವರು ವಿಶೇಷವಾಗಿ ಮಾಟ–ಮಂತ್ರಗಳಿಂದಲೇ ಪರಿಹಾರ ಕಂಡು ಕೊಳ್ಳುತ್ತಾರೆ. ಪ್ರತಿಯೊಂದು ಚಟುವಟಿಕೆಗಳಲ್ಲಿ ಧಾರ್ಮಿಕ ಮನೋಭಾವನೆಗಳು ಅದರಲ್ಲಿ ಎದ್ದು ಕಾಣುತ್ತವೆ. ಭಾರತದ ಜನಗಣತಿಯ ವರದಿಯಲ್ಲಿ ಆದಿವಾಸಿ ಬುಡಕಟ್ಟುಗಳನ್ನು ಸರ್ವ ಚೇತನವಾದಿಗಳು ಎಂದು ಕರೆದಿದ್ದಾರೆ. ಸರ್ ಜೇಮ್ಸ್ ಫ್ರೇಜರ್ ಹೇಳುವಂತೆ 'ಆದಿವಾಸಿಗಳ ಜೀವನವು ಧರ್ಮದೊಂದಿಗೆ ಲೀನವಾಗಿದೆ. ಅವರ ಇಡೀ ಜೀವನವು ಧರ್ಮದಲ್ಲಿ ಅದ್ದಿ ತೆಗೆದಂತಿದೆ'[4] ಎಂದಿದ್ದಾರೆ.

ಏ. ಒಳಪಂಗಡ ವಿವಾಹ ಪದ್ಧತಿ:

ಬುಡಕಟ್ಟುಗಳಲ್ಲಿ ಒಳಪಂಗಡ ವಿವಾಹಗಳು ಜರುಗುತ್ತವೆ. ಸಮುದಾಯದ ಪವಿತ್ರತೆ ಮತ್ತು ಐಕ್ಯತೆ ದೃಷ್ಟಿಯಿಂದ ಈ ಪದ್ಧತಿಗಳು ಅಸ್ತಿತ್ವಕ್ಕೆ ಬಂದಿವೆ. ವ್ಯಕ್ತಿಯ ತನ್ನ ಬಾಳ ಸಂಗಾತಿಯನ್ನು ತಾನು ಹುಟ್ಟಿದ ಪಂಗಡದಲ್ಲಿಯೇ ಆರಿಸಿಕೊಳ್ಳಬೇಕು. ಅವರವರ ಕುಲಪದ್ಧತಿಗೆ ತಕ್ಕಂತೆ ಗಂಡು ಹೆಣ್ಣುಗಳ ಆಯ್ಕೆ, ವಿವಾಹದ ನಿಯಮಗಳನ್ನು ಪಾಲಿಸುತ್ತಾರೆ. ಬ್ರಾಹ್ಮಣ ಪೌರೋಹಿತ್ಯಕ್ಕೆ ಇವರಲ್ಲಿ ಅವಕಾಶವಿಲ್ಲ. ರಕ್ತ ಸಂಬಂಧಕ್ಕೆ ಬಹಳ ಮಹತ್ವ ಕೊಟ್ಟು ವಿವಾಹ ಸಂಬಂಧ ಬೆಳೆಸುತ್ತಾರೆ. ಉದಾ: ಹೆಳವರು ಮತ್ತು ಗೊಂದಲಿಗರ ಗಂಡು, ಅದೇ ಸಮಾಜದ ಹೆಣ್ಣನ್ನೇ ವಿವಾಹಕ್ಕೆ ಆಯ್ಕೆ ಮಾಡಿದರೂ ಅವರಿಬ್ಬರ ಕುಲ ಅಥವಾ ಬೆಡಗುಗಳು

ಬೇರೆಯಾಗಿರುತ್ತವೆ. ಅರಿತೋ ಅರಿಯದೆಯೋ ಅಂತು ಒಂದೇ ಬೆಡಗಿನಲ್ಲಿ ಮದುವೆಯಾಗಬಾರದು. ಇದರಿಂದ ವಂಶಾಭಿವೃದ್ಧಿಗೆ ಹಾನಿ ಎಂಬ ವೈಜ್ಞಾನಿಕ ಸತ್ಯವನ್ನು ಬುಡಕಟ್ಟು ಜನಾಂಗ ತಿಳಿದುಕೊಂಡಂತೆ ಕಾಣುತ್ತದೆ. ಆದಿವಾಸಿಗಳು ಒಳಪಂಗಡ ವಿವಾಹ ಪದ್ಧತಿ ಅನುಸರಿಸಿದರೂ, ಅವರ ವಿವಾಹ ನಿಯಮ, ವಿವಾಹದ ವಯಸ್ಸು, ಸಂಗಾತಿಗಳ ಆಯ್ಕೆ ಕ್ರಮ, ವಿವಾಹ ವಿಚ್ಛೇದನ, ಲೈಂಗಿಕ ಕಟ್ಟುಪಾಡುಗಳು ಮೊದಲಾದವುಗಳ ವಿಷಯವಾಗಿ ಆದಿವಾಸಿಗಳು ಇತರರಿಗಿಂತ ಭಿನ್ನವಾದ ತನ್ನದೇ ಆದ ನಿಯಮಗಳನ್ನು ಪಾಲಿಸುತ್ತಾರೆ.

ಐ.ಸೌಂದರ್ಯದ ಪ್ರಜ್ಞೆ ಉಳ್ಳವರು:

ಸರಳ ಮತ್ತು ಸ್ವತಂತ್ರ ಜೀವಿಗಳಾದ ಆದಿವಾಸಿಗಳು ಸೌಂದರ್ಯೋಪಾಸಕರು. ಜೀವನದಲ್ಲಿ ಗಾಯನ, ನೃತ್ಯ, ಕೆತ್ತನೆ, ಅಲಂಕಾರ, ವಿಚಿತ್ರ ರೀತಿಯ ಒಡವೆಗಳು ಇವೆಲ್ಲವುಗಳನ್ನು ಅಳವಡಿಸಿಕೊಂಡಿದ್ದು ಕಲೋಪಾಸಕರಾಗಿದ್ದಾರೆ. ಗುಹೆಗಳಲ್ಲಿ, ಬಂಡೆಗಳ ಮೇಲೆ, ತಲೆಬುರುಡೆಗಳ ಮೇಲೆ ಚಿತ್ರಗಳನ್ನು ಬರೆದಿರುವುದನ್ನು ನೋಡಿದಾಗ ಈ ಅಂಶವು ಸ್ಪಷ್ಟವಾಗುವುದು. ಅವರ ಕೇಶಾಲಂಕಾರ, ಹೂವುಗಳನ್ನು ಮುಡಿಯುವ, ಒಡೆವೆಗಳನ್ನು ಧರಿಸುವ, ಬಟ್ಟೆಯನ್ನು ತೊಟ್ಟುಕೊಳ್ಳುವ ರೀತಿ, ಶರೀರದ ಮೇಲೆ ಅಲಂಕಾರಿಕವಾಗಿ ಹಚ್ಚೆ ಹಾಕಿಸಿಕೊಳ್ಳುವ ಕ್ರಮ ಇವೆಲ್ಲವುಗಳಿಂದ ಅವರಲ್ಲಿ ಸೌಂದರ್ಯದ ಪ್ರಜ್ಞೆಯಿದೆ ಎಂದು ಹೇಳಲು ಅಡ್ಡಿಯಿಲ್ಲ. ಪ್ರಾಣಿಗಳ ಕೊಂಬು, ಹಲ್ಲು, ಉಗುರುಗಳನ್ನು ಕೂಡ ಅಲಂಕಾರಕ್ಕಾಗಿ ಬಳಸುತ್ತಾರೆ.

ಒ. ರಕ್ಷಣೆ ಮತ್ತು ಐಕ್ಯತೆಯ ಭಾವನೆ:

ಆದಿವಾಸಿಗಳು ಯಾವಾಗಲೂ ರಕ್ಷಣೆ ಮತ್ತು ಭದ್ರತೆಗೆ ಹೆಚ್ಚಿನ ಮಹತ್ವ ಕೊಡುತ್ತಾರೆ. ತಮ್ಮ ಸಮುದಾಯದ ಒಗ್ಗಟ್ಟನ್ನು ಕಾಪಾಡಿಕೊಂಡು ಬರುತ್ತಾರೆ. ಹೊರಗಿನ ಜನರನ್ನು ಸಂಶಯದಿಂದಲೇ ಕಾಣುತ್ತಾರೆ. ಕೆಲವೊಂದು ಹಟ್ಟಿ, ಹಾಡಿ, ಪಾಳ್ಯ ದೊಡ್ಡಿಗಳಿಗೆ ಸುತ್ತ ಮುಳ್ಳು ಮತ್ತು ಕಳ್ಳಿ ಬೇಲಿಯನ್ನು ಹಾಕಿಕೊಳ್ಳುತ್ತಾರೆ. ಈ ಬೇಲಿ ರಕ್ಷಣೆ ಮತ್ತು ಪವಿತ್ರತೆ ಎರಡೂ ದೃಷ್ಟಿಯಿಂದ ಅನುಕೂಲವಾಗುತ್ತದೆ. ತಮ್ಮ ಸಮೂಹಕ್ಕೋಸ್ಕರ ಪ್ರಾಣ ಕೊಡಲು ಸಿದ್ಧರಾಗುತ್ತಾರೆ.

ಆ. ಭಾರತದಲ್ಲಿ ಬುಡಕಟ್ಟುಗಳ ವಿಂಗಡಣೆ:

ಆದಿವಾಸಿಗಳು ದೇಶಾದ್ಯಂತ ಚದುರಿ ಹೋಗಿ ವಿವಿಧ ಭಾಷೆ, ಸಂಸ್ಕೃತಿ ಮತ್ತು ಜನಾಂಗೀಯ ಆದಿವಾಸಿಗಳನ್ನು ಹೊಂದಿರುವ ರಾಜ್ಯಗಳು ಪ್ರಮುಖವಾಗಿ ಮಧ್ಯಪ್ರದೇಶ, ಒರಿಸ್ಸಾ ಮತ್ತು ಬಿಹಾರ ಈ ಮೂರು ರಾಜ್ಯಗಳಲ್ಲಿ ಅರ್ಧದಷ್ಟು ಆದಿವಾಸಿಗಳು ಕಂಡು ಬರುತ್ತಾರೆ. ಇದರಲ್ಲಿ ಮಧ್ಯಪ್ರದೇಶದಲ್ಲಿ ಹೆಚ್ಚು ಕಂಡು ಬರುತ್ತಾರೆ. ಬಂಗಾಲ ಉಪಸಾಗರದಲ್ಲಿರುವ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಅಂಗೆ, ಒಂಗೆ, ಮತ್ತು ಜಾರವ ಆದಿವಾಸಿ ಪಂಗಡಗಳಿವೆ. ಆದಿವಾಸಿಗಳ ಕಲ್ಯಾಣ ಕಾರ್ಯಕ್ರಮಗಳ ದೃಷಿಯಿಂದ ಅವರು ವಾಸಿಸುವ ಭೂಪ್ರದೇಶಗಳ ಆಧಾರದ ಮೇಲೆ ಭಾರತದ ಆದಿವಾಸಿಗಳನ್ನು ಮೂರು

ವಲಯಗಳಾಗಿ ವರ್ಗೀಕರಿಸಲಾಗಿದೆ. ಅವುಗಳೆಂದರೆ 1. ಉತ್ತರದ ಹಾಗೂ ಈಶಾನ್ಯ ವಲಯದ ಆದಿವಾಸಿಗಳು 2. ಮದ್ಯವಲಯದ ಆದಿವಾಸಿಗಳು 3. ದಕ್ಷಿಣ ವಲಯದ ಆದಿವಾಸಿಗಳು.

ಇ. ಭಾರತದಲ್ಲಿ ಬುಡಕಟ್ಟು ಸಮುದಾಯದ ಸ್ಥಿತಿಗತಿಗಳು

ಭಾರತದಲ್ಲಿ ಬುಡಕಟ್ಟು ಸಮುದಾಯದ ಸ್ಥಿತಿಗತಿಗಳು ತುಂಬಾ ಶೋಚನೀಯವಾಗಿದೆ. ಮುಖ್ಯವಾಗಿ ಅತಿವೃಷ್ಟಿ, ಅನಾವೃಷ್ಟಿ, ಗಾಳಿ ಬೆಳಕಿನ ಕೊರತೆ, ಕಾಡು ಪ್ರಾಣಿ ಮತ್ತು ಪ್ರವಾಹಕ್ಕೆ ಬಲಿ ಮುಂತಾದ ನೈಸರ್ಗಿಕ ದುರಂತಗಳಿಗೆ ಆದಿವಾಸಿಗಳು ಒಳಗಾಗುತ್ತಿದ್ದಾರೆ. ಮೂಡನಂಬಿಕೆ, ಬಾಲ್ಯ ವಿವಾಹ, ದೇವದಾಸಿ ಪದ್ಧತಿ, ಶಿಶುಹತ್ಯೆ, ನರಬಲಿ, ಪ್ರಾಣಿ ಬಲಿ ಮುಂತಾದ ಸಾಮಾಜಿಕ ಸಮಸ್ಯೆಗಳು ಇನ್ನೂ ಜೀವಂತವಾಗಿವೆ. ಕಡಿಮೆ ಉತ್ಪಾದನೆ, ದುಂದು ವೆಚ್ಚ, ಯುವತಿಯರ ಮಾರಾಟ, ಶ್ರೀಮಂತರಿಂದ ಶೋಷಣೆ, ಉಪಜೀವನಕ್ಕಾಗಿ ಕೊಲೆ, ಸುಲಿಗೆ, ದರೋಡೆ ಮುಂತಾದ ಅಪರಾದ ಕೃತ್ಯಗಳಿಂದ ಬದುಕನ್ನು ಸಾಗಿಸುವುದರಿಂದ ಅವರ ಆರ್ಥಿಕ ಜೀವನ ಕಷ್ಟಕರವಾಗಿದೆ. ಬೆಟ್ಟ-ಗುಡ್ಡ, ಕೊರಕಲು, ಅರಣ್ಯ ಪ್ರದೇಶ ಮುಂತಾದ ದುರ್ಗಮ ಪ್ರದೇಶಗಳಲ್ಲಿ ವಾಸಿಸುವ ಆದಿವಾಸಿಗಳಿಗೆ ಸಾರಿಗೆ ಸಂಪರ್ಕಗಳ ಕೊರತೆಯಿಂದ ನಾಗರೀಕ ಜನರ ಸಂಪರ್ಕವೇ ಇರಲಾರದು. ಅವರ ರೀತಿ, ನೀತಿ, ಆಹಾರ, ಉಡುಗೆ-ತೊಡುಗೆ, ರಾಜಕೀಯ, ಆರ್ಥಿಕ ಚಟುವಟಿಕೆಗಳ ಮೇಲೆ ಆಧುನಿಕ ಸಮುದಾಯದ ಪರಿಣಾಮವಿರಲಾರದು.

ವರ್ಣ ಮತ್ತು ಜಾತಿ ಪದ್ಧತಿಯಿಂದ ಬೇರ್ಪಟ್ಟಿರುವ ಆದಿವಾಸಿ ಜನಾಂಗದ ಮೇಲೆ ಹಿಂದೂ ಮತ್ತು ಕ್ರೈಸ್ತ ಧರ್ಮಗಳ ಪ್ರಭಾವದಿಂದಲೂ ಅವರ ಸಂಸ್ಕೃತಿಯಲ್ಲಿ ಅನೇಕ ಬದಲಾವಣೆಗಳು ಕಂಡು ಬಂದವು. ಹಲವು ಸಂಸ್ಕೃತಿಗಳ ಪ್ರಭಾವ ಮತ್ತು ಒತ್ತಡದಿಂದ ಆದಿವಾಸಿಗಳು ಸಾಮಾಜಿಕ ಒಗ್ಗಟ್ಟು ಮತ್ತು ಐಕ್ಯತೆಗಳು ನಾಶವಾದವು. 19ನೇ ಶತಮಾನದಲ್ಲಿ ಇಂಗ್ಲೇಂಡಿನಿಂದ ಕ್ರೈಸ್ತ ಧರ್ಮದ ಪ್ರಚಾರಕ್ಕಾಗಿ ಭಾರತಕ್ಕೆ ಬಂದ ಪಾದ್ರಿ ವೆರಿಯರ್ ಎಲ್ವಿನ್ ಬುಡಕಟ್ಟುಗಳ ಅಧ್ಯಯನಕ್ಕಾಗಿ ತೊಡಗಿ ನಂತರ ತನ್ನ ಧರ್ಮದ ಪ್ರಚಾರ ಕಾರ್ಯವನ್ನೇ ಕೈ ಬಿಟ್ಟಂತ ವ್ಯಕ್ತಿ, ಮುಂದೆ ಆದಿವಾಸಿಗಳ ಸಂಸ್ಕೃತಿಯಲ್ಲಿ ಆಸಕ್ತಿ ಮೂಡಿ ಅವರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಕೊನೆಗೆ ಗೊಂಡರ ಗಿರಿಜನ ಕನ್ಯೆ ಲೀಲಾಳನ್ನೇ ವಿವಾಹ ಮಾಡಿಕೊಂಡರು. ಆದಿವಾಸಿಗಳಿಗೆ ನಾಗರೀಕತೆಯ ಪ್ರಭಾವ ಉಂಟು ಮಾಡುವ ಅಥವಾ ಹಿಂದೂ ಸಂಸ್ಕೃತಿಯೊಡನೆ ಗಿರಿಜನ ಸಂಸ್ಕೃತಿಯನ್ನು ವಿಲೀನಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳನ್ನು ವೆರಿಯರ್ ಎಲ್ವಿನ್ ಒಪ್ಪಲಿಲ್ಲ.

ಭಾರತದ ಬುಡಕಟ್ಟು ಸಮುದಾಯದ ಸ್ಥಿತಿಗತಿಗಳು ಕಾಲದಿಂದ ಕಾಲಕ್ಕೆ ನಿರಂತರವಾಗಿ ಪರಿವರ್ತನೆ ಹೊಂದುತ್ತಲೇ ಬಂದಿವೆ. ದೇಶದ ಸಂಪತ್ತನ್ನು ದೋಚಿಕೊಳ್ಳಲು ಪ್ರಯತ್ನಿಸುತ್ತಿದ್ದ ಬ್ರಿಟಿಷರಿಗೆ ಆದಿವಾಸಿಗಳೊಂದಿಗೆ ನಿರಂತರ ಘರ್ಷಣೆ ಮಾಡಬೇಕಾದ ಪ್ರಸಂಗಗಳು

ಉಂಟಾದವು. ಕೆಲವೊಂದು ಆದಿವಾಸಿಗಳ ನೆಲೆಗಳಿಗೆ ಕ್ರೈಸ್ತ ಪಾದ್ರಿಗಳನ್ನು ಕಳುಹಿಸಿ ಧರ್ಮ ಪ್ರಚಾರ ಮಾಡುವ ನೆಪದಲ್ಲಿ ಬುಡಕಟ್ಟು ಜನರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸಲು ಪ್ರಯತ್ನಿಸಿದರು. ತಮ್ಮ ಸಂಸ್ಕೃತಿ ಮತ್ತು ಸಮುದಾಯಗಳಿಗೆ ಧಕ್ಕೆ ಉಂಟು ಮಾಡುವ, ಸ್ಥಳಾಂತರಿಸುವ, ಕಿರುಕುಳ ಕೊಡುವ, ಬ್ರಿಟೀಷರ ನೀತಿ ಮತ್ತು ಧೋರಣೆಗಳಿಗೆ ಪ್ರತಿಭಟಿಸಿದ ಆದಿವಾಸಿಗಳಿಗೆ ವಿನಾಕಾರಣವಾಗಿ ಅಪರಾಧಿಗಳೆಂಬ ಅಪವಾದವನ್ನು ಕೊಟ್ಟರು. ಬ್ರಿಟೀಷರ ಹೊಸ ಹೊಸ ಯೋಜನೆಗಳು ಆದಿವಾಸಿ ಬುಡಕಟ್ಟು ಜನರಿಗೆ ಪ್ರತ್ಯಕ್ಷವಾಗಿ ಇಲ್ಲವೇ ಅಪ್ರತ್ಯಕ್ಷವಾಗಿ ಅನೇಕ ಸಮಸ್ಯೆಗಳನ್ನು ಹುಟ್ಟು ಹಾಕುತ್ತಿದ್ದವು. ಕೆಲವೊಂದು ಆದಿವಾಸಿಗಳು ಹಣದ ಆಸೆಯಿಂದ ದೇಶ ದ್ರೋಹಿ ಕಾರ್ಯಗಳಲ್ಲಿ ತೊಡಗಿದರು. ಮತ್ತೆ ಕೆಲವು ಬ್ರಿಟೀಷ್ ಸೈನ್ಯ ಪಡೆಯಲ್ಲಿ ಸೇರಿಕೊಂಡು ನಮ್ಮ ದೇಶದ ವಿರುದ್ಧವೇ ಕದನರಂಗಕ್ಕಿಳಿದು ದೇಶದ್ರೋಹಿಗಳಾದರು. ಸ್ವತಂತ್ರ ನಂತರ ಆದಿವಾಸಿಗಳ ಕಲ್ಯಾಣ ಕಾರ್ಯಕ್ರಮಗಳ ದೃಷ್ಟಿಯಿಂದ ಭಾರತ ಹಲವು ಉಪಯುಕ್ತ ಯೋಜನೆಗಳನ್ನು ಕೈಗೊಂಡಿತು. ಆದಿವಾಸಿಗಳು ವಾಸಿಸುವ ಪ್ರದೇಶಗಳಲ್ಲೇ ಶಾಲೆಗಳನ್ನು ತೆಗೆಯುವುದರ ಜೊತೆಗೆ ಅವರ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಹಲವಾರು ಯೋಜನೆಗಳನ್ನು ರೂಪಿಸಲಾಯಿತು. ಆದಿವಾಸಿಗಳ ಆರ್ಥಿಕ ಮಟ್ಟವನ್ನು ಸುಧಾರಿಸುವ ಉದ್ದೇಶದಿಂದ ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಆದಿವಾಸಿಗಳ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಲಾಯಿತು. ವ್ಯಾಪಾರಿಗಳಿಂದಾಗುವ ಆರ್ಥಿಕ ಶೋಷಣೆ ತಪ್ಪಿಸಲು ಬೃಹತ್ ಗಾತ್ರದ ವಿವಿದೋದ್ದೇಶ ಸಹಕಾರಿ ಸಂಘ (LAMPS) ಗಳನ್ನು ಸ್ಥಾಪಿಸಲಾಗಿದೆ. ಆರೋಗ್ಯ ಮತ್ತು ನೈರ್ಮಲ್ಯಗಳ ದೃಷ್ಟಿಯಿಂದ ಆದಿವಾಸಿ ಪ್ರದೇಶಗಳಲ್ಲಿಯೇ ಪ್ರಾಥಮಿಕ ಚಿಕಿತ್ಸಾಲಯ ಹಾಗೂ ಸಂಚಾರಿ ಆಸ್ಪತ್ರೆಗಳನ್ನು ಸ್ಥಾಪಿಸಿ ಅವುಗಳ ಮೂಲಕ ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಸಾಮಾಜಿಕವಾಗಿ, ಆರ್ಥಿಕವಾಗಿ ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಆದಿವಾಸಿಗಳು ಮುಂದೆ ಬರಲು ಸಾರಿಗೆ ಸಂಪರ್ಕಗಳ ವ್ಯವಸ್ಥೆ ಕಲ್ಪಿಸಿಕೊಡಲಾಗಿದೆ.

ಸರಕಾರ ಬುಡಕಟ್ಟು ಜನಾಂಗಗಳ ಪ್ರಗತಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದೆ. ಪ್ರತಿಯೊಂದು ಪಂಚವಾರ್ಷಿಕ ಯೋಜನೆಗಳಲ್ಲಿ ಇದಕ್ಕಾಗಿ ಅಪಾರ ಪ್ರಮಾಣದಲ್ಲಿ ಹಣ ಖರ್ಚು ಮಾಡಲಾಗುತ್ತಿದೆ. ಸಂವಿಧಾನದ ಹದಿನೈದನೇ ವಿಧಿಯ ಪ್ರಕಾರ ಜಾತಿ, ಜನಾಂಗ, ಮತ, ಪಂಥ, ಪಂಗಡಗಳೆಂಬ ಬೇದವಿಲ್ಲದೆ ಆದಿವಾಸಿಗಳನ್ನೊಳಗೊಂಡಂತೆ ದೇಶದ ಎಲ್ಲರಿಗೂ ಸಮಾನಾವಕಾಶಗಳನ್ನು ಕಲ್ಪಿಸಿಕೊಡಲಾಗಿದೆ.

1.4. ಕರ್ನಾಟಕದಲ್ಲಿ ಬುಡಕಟ್ಟುಗಳ ಅಧ್ಯಯನ:

ಕರ್ನಾಟಕದಲ್ಲಿ ಮೊದಲಿಗೆ 1903ರಲ್ಲಿ ಕರ್ನಾಟಕದ ಬುಡಕಟ್ಟುಗಳನ್ನು ಕುರಿತಾದ ಅಧ್ಯಯನ ಪ್ರಾರಂಭವಾಯಿತು. ಹೆಚ್.ವಿ. ನಂಜುಂಡಯ್ಯನವರು ಮೈಸೂರಿನಲ್ಲಿರುವ

ಬುಡಕಟ್ಟುಗಳನ್ನು ಕುರಿತು ಅಧ್ಯಯನ ಮಾಡಿದರು. ಆ ನಂತರ ಅನಂತಕೃಷ್ಣ ಅಯ್ಯರ್‌ರವರು ಇದನ್ನು ಮುಂದುವರೆಸಿಕೊಂಡು ಹೋದರು. ಇವರು `The Mysore Tribes and Caste' ಎಂಬ ಗ್ರಂಥವನ್ನು ನಾಲ್ಕು ಸಂಪುಟಗಳಲ್ಲಿ ಹೊರತಂದಿದ್ದಾರೆ. "ಭಾರತ ಸರಕಾರ ಕರ್ನಾಟಕದಲ್ಲಿ ಗುರುತಿಸಿರುವ 63 ಬುಡಕಟ್ಟುಗಳಲ್ಲಿ ಕೆಲವನ್ನು ಪರಿಶಿಷ್ಟ ಜಾತಿಗೆ, ಕೆಲವನ್ನು ಪರಿಶಿಷ್ಟ ಪಂಗಡಕ್ಕೆ ಮತ್ತು ಉಳಿದವುಗಳನ್ನು ಅಲೆಮಾರಿ, ಅರೆಅಲೆಮಾರಿ, ನೆಲೆನಿಂತ ಬುಡಕಟ್ಟುಗಳೆಂದು ಪರಿಗಣಿಸಿ ಹಿಂದುಳಿದ ವರ್ಗಗಳಿಗೆ ಸೇರಿಸಿದ್ದಾರೆ. ಈ ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳನ್ನು ಗಣನೆಗೆ ತೆಗೆದುಕೊಂಡರೆ ಕರ್ನಾಟಕದಲ್ಲಿ ಬುಡಕಟ್ಟುಗಳ ಅಧ್ಯಯನ ಅಷ್ಟಾಗಿ ನಡೆದಿಲ್ಲ"[5]. ಬುಡಕಟ್ಟುಗಳ ಸಾಂಸ್ಕೃತಿಕ ಅಧ್ಯಯನ ಕುರಿತಂತೆ ಇಂಗ್ಲೀಷ್‌ನಲ್ಲಿ ಪ್ರಕಟವಾಗಿರುವಷ್ಟು ಕೃತಿಗಳು ಕನ್ನಡದಲ್ಲಿ ಪ್ರಕಟವಾಗಿಲ್ಲ. ಇದಕ್ಕೆ ಸರ್ಕಾರಿ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳು ಹೊಂದಿರುವ ಅನಾಸಕ್ತಿಯೇ ಕಾರಣ. 1903ರಲ್ಲಿ "ಎ.ಎ.ಡಿ. ಲೂಹಿಸ್ ಅವರು Tribes of Mysore ಎಂಬ ತಮ್ಮ ಕೃತಿಯಲ್ಲಿ ಮೈಸೂರು ರಾಜ್ಯದಲ್ಲಿರುವ ಇಪ್ಪತ್ತೇಳು ಬುಡಕಟ್ಟುಗಳ ಬಗ್ಗೆ ವಿವರಗಳನ್ನು ಕೊಟ್ಟಿದ್ದಾರೆ. ಭಾರತ ಸರ್ಕಾರ ಮೈಸೂರು ರಾಜ್ಯದಲ್ಲಿ ಅರವತ್ತೂರು ಪರಿಶಿಷ್ಟ ಬುಡಕಟ್ಟುಗಳನ್ನು ಮಾನ್ಯ ಮಾಡಿದೆ."[6] ಆದರೆ ಭಾರತದ ಯಾವುದೇ ಒಂದು ಜಾತಿ ಹಾಗೂ ಜನಾಂಗ ಪರಿಶಿಷ್ಟ ಬುಡಕಟ್ಟಿನ ಮಾನ್ಯತೆ ಪಡೆಯಬೇಕಾದರೆ ಭಾರತದ ಸಂವಿಧಾನದ 342ನೆಯ ನಿಯಮದ ಪ್ರಕಾರ ಅದು ರಾಷ್ಟ್ರಾಧ್ಯಕ್ಷರಿಂದ ಮೊದಲು ಸೂಚಿತವಾಗಿ ನಂತರ ಸಂಸತ್ತಿನಲ್ಲಿ ಒಪ್ಪಿತವಾಗಬೇಕು. ಭಾರತ ಸರ್ಕಾರ ಪರಿಶಿಷ್ಟ ಬುಡಕಟ್ಟು' ಎಂದು ಗುರುತಿಸುವಾಗ ಆ ಜನಾಂಗದ ಗುಣಲಕ್ಷಣ ಮತ್ತು ಆರ್ಥಿಕ ಸ್ಥಿತಿಗತಿಗಳ ಆಧಾರದ ಮೇಲೆಯೇ ಪರಿಶಿಷ್ಟ ವರ್ಗಗಳ ಪಟ್ಟಿ ಮಾಡುತ್ತದೆ. ಈ ಕಾರಣದಿಂದಾಗಿ ಭಾರತದ ಕೆಲವು ಬುಡಕಟ್ಟುಗಳು ಪರಿಶಿಷ್ಟ ಬುಡಕಟ್ಟುಗಳ ಮಾನ್ಯತೆ ಪಡೆಯದೆ ಹೋಗಬಹುದು. ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿರುವ ಕೆಲವು ಬುಡಕಟ್ಟು ಸಮುದಾಯಗಳಾದ ಹೆಳವ, ಬುಡ್ಗ ಜಂಗಮ, ಸುಡುಗಾಡು ಸಿದ್ಧ, ಗೋಂದಳಿ, ದುರುಗಮುರುಗಿ, ಮತ್ತು ಮೇದ ಸಮುದಾಯಗಳು ಬುಡಕಟ್ಟಿನ ಎಲ್ಲಾ ಗುಣ ಲಕ್ಷಣಗಳನ್ನು ಹೊಂದಿದ್ದರೂ ಇವುಗಳಲ್ಲಿ ಕೆಲವನ್ನು ಹಿಂದುಳಿದ ವರ್ಗಗಳಲ್ಲಿ ಕೆಲವನ್ನು ಪರಿಶಿಷ್ಟ ಜಾತಿಯಲ್ಲಿ ಕೆಲವನ್ನು ಅರೆ ಅಲೆಮಾರಿ ಬುಡಕಟ್ಟುಗಳ ವರ್ಗಕ್ಕೆ ಸೇರಿಸಿದ್ದಾರೆ. ಇತ್ತೀಚೆಗೆ ಮಾತ್ರ ಮೇದ ಬುಡಕಟ್ಟು ಸಮುದಾಯವನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಿ ಆದೇಶ ಹೊರಡಿಸಿರುವುದನ್ನು ಇಲ್ಲಿ ಸ್ಮರಿಸಬಹುದು. ಆದರೆ ಒಂದು ಬುಡಕಟ್ಟಿಗೆ ಪರಿಶಿಷ್ಟ ಪಂಗಡಗಳ ಮಾನ್ಯತೆ ಕೊಟ್ಟು ಇನ್ನುಳಿದ ಬುಡಕಟ್ಟುಗಳಿಗೆ ಹಿಂದುಳಿದ ವರ್ಗಗಳ ಮತ್ತು ಪರಿಶಿಷ್ಟ ಜಾತಿಗಳ ಮಾನ್ಯತೆ ಕೊಟ್ಟಿರುವ ಸರ್ಕಾರದ ಈ ದ್ವಂದ್ವ ನೀತಿ ಸರಿಯಲ್ಲ. ಸಮಾಜದಲ್ಲಿ ತೀರ ಹಿಂದುಳಿದಿರುವ ಈ ಸಮುದಾಯಗಳ ಜನರು ಪರಿಶಿಷ್ಟ ಬುಡಕಟ್ಟು ವರ್ಗಕ್ಕೆ ಸೇರಿದವರಾಗಿದ್ದಾರೆ. ಆದರೆ ಇವರನ್ನು ಇತರೆ ಹಿಂದುಳಿದ ವರ್ಗಕ್ಕೆ ಸೇರಿಸಿರುವುದರಿಂದ ಸೂಕ್ತ

ರೀತಿಯಲ್ಲಿ ಸರ್ಕಾರದ ಯಾವುದೇ ಮೀಸಲಾತಿ ಸೌಲಭ್ಯಗಳು ಸಿಗದಂತಾಗಿದೆ. ಈ ಹಿನ್ನೆಲೆಯಲ್ಲಿ ಮೇಲೆ ಹೆಸರಿಸಿದ ಎಲ್ಲಾ ಬುಡಕಟ್ಟು ಸಮುದಾಯಗಳಿಗೆ ಎಸ್ಸಿ, ಎಸ್ಟಿ ಮಾದರಿಯಲ್ಲಿ ಪ್ರತ್ಯೇಕ ವರ್ಗವನ್ನು ರೂಪಿಸಿ ಪ್ರತ್ಯೇಕ ಮೀಸಲಾತಿಯನ್ನು ನೀಡಬೇಕು. ಆ ಮೂಲಕ ಇವರಿಗೆ ಸಂವಿಧಾನ ಬದ್ಧವಾದ ಸೌಲಭ್ಯಗಳನ್ನು ಕಲ್ಪಿಸಿ ಅವರ ಶ್ರೇಯೋಭಿವೃದ್ಧಿಗೆ ನಾಂದಿ ಹಾಡಬೇಕಿದೆ."

ಕರ್ನಾಟಕದಲ್ಲಿ ಇಲ್ಲಿಯವರೆಗೆ ನಡೆದಿರುವ ಬುಡಕಟ್ಟುಗಳ ಅಧ್ಯಯನ ಕ್ರಮವನ್ನು ಅವಲೋಕಿಸಿದರೆ ಪ್ರಾರಂಭದ ದಿನಗಳಲ್ಲಿ ಹೇಳಿಕೊಳ್ಳುವಂತ ಅಧ್ಯಯನಗಳು ನಡೆಯದಿದ್ದರೂ ನಡೆದಿರುವಷ್ಟು ಅಧ್ಯಯನ ಮುಂದಿನ ಸಂಶೋಧಕರಿಗೆ ಮಾರ್ಗಸೂಚಿಗಳಾಗಿವೆ. ಮೊಟ್ಟ ಮೊದಲು ದೇಶ ಮತ್ತು ವಿದೇಶಗಳ ವಿದ್ವಾಂಸರುಗಳಿಂದ ಕರ್ನಾಟಕದ ಬುಡಕಟ್ಟುಗಳ ಅಧ್ಯಯನ ನಡೆದಿದ್ದವು. 1909ರಲ್ಲಿ ಎಡ್ಗರ್ ಥರ್‌ಸ್ಟನ್ ಅವರ Caste and Tribes of Southern India"ಎಂಬ ಏಳು ಸಂಪುಟಗಳು ದಕ್ಷಿಣ ಭಾರತದ ಅನೇಕ ಬುಡಕಟ್ಟುಗಳ ಸಂಕ್ಷಿಪ್ತ ವಿವರಣೆಗಳನ್ನು ಒಳಗೊಂಡ ಉತ್ತಮ ಕೃತಿಗಳಾಗಿವೆ. 1926ರಲ್ಲಿ ಸೈಯದ್ ಸಿರಾಜ್-ಉಲ್-ಹುಸೇನ್ ಅವರ The Caste and Tribes of Nizam's Dominion ಎಂಬ ಗ್ರಂಥದಲ್ಲಿ ಹೈದರಾಬಾದ್ ಕರ್ನಾಟಕದ ಅನೇಕ ಜಾತಿ ಮತ್ತು ಬುಡಕಟ್ಟುಗಳ ಪರಿಚಯವಿದೆ. ಎ.ಎ.ಡಿ., ಲೂಹಿಸ್ ಅವರು 1963ರಲ್ಲಿ Tribes of Mysore"ಎಂಬ ಕೃತಿಯಲ್ಲಿ ಮೈಸೂರು ರಾಜ್ಯದಲ್ಲಿರುವ ಇಪ್ಪತ್ತೇಳು ಬುಡಕಟ್ಟುಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆಗಳನ್ನು ಕೊಟ್ಟಿದ್ದಾರೆ. 1975ರಲ್ಲಿ ಎಲ್.ಜಿ. ಹಾವನೂರು ಅವರ Karnataka Backward Class Commission Report ದಲ್ಲಿ ಕರ್ನಾಟಕದ ವಿವಿಧ ಬುಡಕಟ್ಟುಗಳ ಮಾಹಿತಿಯಿದೆ.

ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಐ.ಬಿ.ಹೆಚ್. ಪ್ರಕಾಶನ ಮತ್ತು ಮೈಸೂರಿನ ಭಾರತೀಯ ಸರ್ವೇಕ್ಷಣ ಸಂಸ್ಥೆಯ ಮಾನವಶಾಸ್ತ್ರಜ್ಞರು ಕರ್ನಾಟಕದ ವಿವಿಧ ಬುಡಕಟ್ಟುಗಳ ಕುರಿತು ಅನೇಕ ಸಣ್ಣ-ಪುಟ್ಟ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಬುಡಕಟ್ಟುಗಳ ಅಧ್ಯಯನಕ್ಕಾಗಿ ವಿಶೇಷ ವಿಭಾಗಗಳು ಇಲ್ಲದಿದ್ದರೂ, ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ 1994ರಿಂದ "ಬುಡಕಟ್ಟು ಅಧ್ಯಯನ ವಿಭಾಗ" ಅಸ್ಥಿತ್ವಕ್ಕೆ ಬಂದಿದೆ. ಪ್ರಸ್ತುತ ಈ ವಿಭಾಗದಲ್ಲಿ ಸುಮಾರು ಐವತ್ತಕ್ಕೂ ಹೆಚ್ಚು ಜನ ವಿದ್ಯಾರ್ಥಿಗಳು ಸಂಶೋಧನೆ ಕೈಗೊಂಡು ಮುಗಿಸಿರುತ್ತಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯವು ಸೇರಿದಂತೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಬುಡಕಟ್ಟು ಅಧ್ಯಯನಗಳಿಗೆ ಡಾಕ್ಟರೇಟ್ ಪದವಿ ದೊರೆತು ಗ್ರಂಥಗಳು ಪ್ರಕಟವಾಗಿವೆ. ಕರ್ನಾಟಕದಲ್ಲಿ ಬುಡಕಟ್ಟು ಸಮುದಾಯಗಳನ್ನು ಕುರಿತು ಅಧ್ಯಯನ ಮಾಡಿದ ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳ ಕೆಲವೊಂದು ಪಿ.ಹೆಚ್.ಡಿ. ಮಹಾ

ಪ್ರಬಂಧಗಳು ಮತ್ತು ಸಂಶೋಧಕರ ಹೆಸರು ಮತ್ತು ಪುಸ್ತಕಗಳು ಮತ್ತು ಲೇಖಕರ ಹೆಸರುಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ.

1. ಕರ್ನಾಟಕದ ಹೆಳವರು: ಒಂದು ಅಧ್ಯಯನ (ಜಾನಪದೀಯ) ಡಾ. ಹರಿಲಾಲ್. ಕೆ. ಪವಾರ್.
2. ಕರ್ನಾಟಕದ ಗೊಂದಲಿಗರು ಹಾಗೂ ಅವರ ಸಾಹಿತ್ಯ ಡಾ. ನಿಂಗಣ್ಣ ಸಣ್ಣಕ್ಕಿ.
3. ಬುಡು-ಬುಡುಕೆಯವರು: ಒಂದು ಅಧ್ಯಯನ, ಡಾ. ಬಿ.ಎನ್. ಪಮ್ಮಾರ.
4. ಕರ್ನಾಟಕ ವಿಮುಕ್ತ ಬುಡಕಟ್ಟುಗಳ ಸಾಮಾಜಿಕ ಅಧ್ಯಯನ- ಮಲ್ಲಿಕಾರ್ಜುನ ಭೀಮರಾಯ.
5. ಸುಡುಗಾಡು ಸಿದ್ಧರು: ಒಂದು ಸಾಂಸ್ಕೃತಿ ಅಧ್ಯಯನ- ಡಾ. ಟಿ.ಎಂ. ಭಾಸ್ಕರ್.
6. ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ- ಡಾ .ಕೆ. ಎಂ. ಮೈತ್ರಿ.
7. ಗುಲಬರ್ಗಾ ಜಿಲ್ಲೆಯ ಬುಡಕಟ್ಟು ರಾಜಕೀಯ ಅಧ್ಯಯನ-ಡಾ. ಚನ್ನಮಲ್ಲಪ್ಪ ಜುಬೇರ್.
8. ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು ಒಂದು ಸಮಾಜಶಾಸ್ತ್ರೀಯ ಅಧ್ಯಯನ-ಡಾ. ಸಾಣೀಕೆರೆ ಸಣ್ಣೋಬಯ್ಯ.
9. ಕರ್ನಾಟಕದ ಲಂಬಾಣಿಗಳು: ಒಂದು ಸಾಂಸ್ಕೃತಿಕ ಅಧ್ಯಯನ- ಡಾ.ಪಿ.ಕೆ. ಖಂಡೋಬಾ.
10. ಬುಡಕಟ್ಟು ಅಭಿವೃದ್ದಿ: ಒಂದು ವಿಮರ್ಶಾತ್ಮಕ ಅಧ್ಯಯನ- ಮುನಿರಾಜು ಎಸ್.ಬಿ.
11. ಕರ್ನಾಟಕದ ಮೂಲ ನಿವಾಸಿ ಬುಡಕಟ್ಟು ಸಮುದಾಯಗಳ ಪರಿಸರ ಮತ್ತು ಅಭಿವೃದ್ಧಿ: ಅರ್ಥಶಾಸ್ತ್ರೀಯ ಅಧ್ಯಯನ: ಸುದರ್ಶನ್‌ಕುಮಾರ್. ಎಂ.

ಪುಸ್ತಕಗಳು ಮತ್ತು ಲೇಖಕರು:

1. ಕರ್ನಾಟಕದ ಬುಡಕಟ್ಟು ಸಮುದಾಯಗಳ-ಡಾ. ತಾರಿಹಳ್ಳಿ ಹನುಮಂತಪ್ಪ.
2. ಗೊಂದಲಿಗರು-ಡಾ. ಗಂಗಾಧರ ದೈವಜ್ಞ.
3. ಆದಿವಾಸಿ ಸಮುದಾಯಗಳ ಅಭಿವೃದ್ಧಿ – ಪ್ರೊ. ಸಿ. ಪಾರ್ವತಮ್ಮ.
4. ಹೆಳವರು-ಡಾ. ಎ. ಎಸ್. ಪ್ರಭಾಕರ್.
5. ದಕ್ಕಲರ ಸಂಸ್ಕೃತಿ-ಡಾ. ಚಲುವರಾಜು.
6. ಸುಡುಗಾಡು ಸಿದ್ಧರ ಸಂಸ್ಕೃತಿ-ಡಾ. ಪಿ. ಕೆ. ಖಂಡೋಬಾ.
7. ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು-ಡಾ. ಎ. ಎಸ್. ಪ್ರಭಾಕರ.
8. ಜನಸಮುದಾಯ ಸಂಪುಟ- ಡಾ.ಹೆಚ್.ಡಿ.ಪ್ರಶಾಂತ್. ಪ್ರಧಾನ ಸಂಪಾದಕರು.

9. ಭಾರತೀಯ ಸಮಾಜ–ಚ. ನ. ಶಂಕರ್‌ರಾವ್.

10. ಬುಡ್ಗ ಜಂಗಮ–ಬಾಲಗುರುಮೂರ್ತಿ ಪ್ರತಾಪ. ರಾ. ಬಹುರೂಪಿ.

ಮುಂತಾದವುಗಳು.

ಮೇಲ್ಕಂಡ ಪ್ರಬಂಧಗಳ ಮತ್ತು ಪುಸ್ತಕಗಳ ಜೊತೆಗೆ ಅವರವರ ಜಾತಿ ಮತ್ತು ಜನಾಂಗಕ್ಕೆ ಸಂಬಂಧಿಸಿದ ಕೆಲವೊಂದು ಪತ್ರಿಕೆಗಳು ಕೂಡ "ಬುಡಕಟ್ಟು ಸಮುದಾಯದ" ಸ್ಥಿತಿಗತಿಗಳ ಕುರಿತು ಲೇಖನಗಳನ್ನು ಪ್ರಕಟ ಮಾಡುತ್ತಿವೆ. 1993ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಉಪಸಂಸ್ಕೃತಿ ಅಧ್ಯಯನ ಮಾಲೆಯಲ್ಲಿ ಬುಡಕಟ್ಟುಗಳ ಬಗ್ಗೆ ಅನೇಕ ಗ್ರಂಥಗಳನ್ನು ಹೊರತಂದಿವೆ. ಈ ಎಲ್ಲಾ ಗ್ರಂಥಗಳು ಕರ್ನಾಟಕದ ಬುಡಕಟ್ಟುಗಳ ಬಗ್ಗೆ ಬೆಳಕು ಚೆಲ್ಲುತ್ತವೆ.

1994ರಲ್ಲಿ ಕನ್ನಡ ವಿಶ್ವವಿದ್ಯಾಲಯ, ಹಂಪಿಯಲ್ಲಿ ಆರಂಭಗೊಂಡ ಬುಡಕಟ್ಟು ಅಧ್ಯಯನ ವಿಭಾಗವು ಕರ್ನಾಟಕದ ಬುಡಕಟ್ಟುಗಳನ್ನು ಕುರಿತು ವಿಶೇಷವಾಗಿ ಅಧ್ಯಯನ ಮಾಡುತ್ತಿದೆ. ಕನ್ನಡ ವಿಶ್ವವಿದ್ಯಾಲಯದ ಮೂಲ ಧ್ಯೇಯವೆನಿಸಿದ ದೇಸಿ ಸಂಸ್ಕೃತಿ ಹುಡುಕಾಟದ ಧೋರಣೆಗೆ ಪೂರಕವಾಗಿ ಡಾ. ಕೆ.ಎಂ. ಮೇತ್ರಿಯವರ 'ಬುಡಕಟ್ಟು ಕುಲಕಸುಬು'ಗಳು ಎಂಬ ಕೃತಿಯು ಕರ್ನಾಟಕದ ನಲವತ್ತೊಂಬತ್ತು ಬುಡಕಟ್ಟುಗಳ ಸಂಕ್ಷಿಪ್ತ ಮಾಹಿತಿಯೊಂದಿಗೆ, ಅವರ ವೃತ್ತಿ ಕಸುಬುಗಳನ್ನು ಪರಿಚಯಿಸುತ್ತದೆ. ಬುಡಕಟ್ಟು ಜನಾಂಗದ ವೈಶಿಷ್ಟ್ಯಗಳನ್ನು ಅವರ ಸಾಮಾಜಿಕ ಹಾಗೂ ಸಾಂಸ್ಕೃತಿಕ ನೆಲೆಗಳನ್ನು ವೈಜ್ಞಾನಿಕ ತಳಹದಿಯ ಮೇಲೆ ಗುರುತಿಸುವ, ಸಂಶೋಧಿಸುವ, ಅಧ್ಯಯನಿಸುವ ಜವಾಬ್ದಾರಿಯನ್ನು ಬುಡಕಟ್ಟು ಅಧ್ಯಯನ ವಿಭಾಗದಿಂದ ಸಾಧ್ಯವಾಗುತ್ತಿದ್ದು, ಕರ್ನಾಟಕದ ಎಲ್ಲಾ ವಿಶ್ವವಿದ್ಯಾನಿಲಯಗಳ ಮಾನವಿಕ ವಿಜ್ಞಾನಗಳ ವಿಭಾಗಗಳಿಂದ ವಿಶೇಷ ಆಸಕ್ತಿವಹಿಸಿ, ಬುಡಕಟ್ಟುಗಳ ಸಮಗ್ರ ಅಧ್ಯಯನ ಇಲ್ಲವೇ ಬೇರೆ ಬೇರೆ ಮಜಲುಗಳಲ್ಲಿ ಅಧ್ಯಯನಿಸುವ ಪ್ರಯತ್ನ ತೀವ್ರತರವಾಗುತ್ತಿರುವುದು ಆಶಾದಾಯಕವೆನಿಸುತ್ತದೆ.

ಹೊಸ ಹೊಳವುಗಳು ಅನೇಕ ಅವ್ಯಕ್ತ ಸಂಗತಿಗಳು ಬಾಹ್ಯ ಪ್ರಪಂಚದಲ್ಲಿ ತೆರೆದುಕೊಳ್ಳುತ್ತಿರುವುದು, ಜ್ಞಾನರಾಶಿಗೆ ಸೇರ್ಪಡೆಯಾಗುತ್ತಿರುವುದು, ಸಂಶೋಧನೆಯ ಸಕ್ರಿಯತೆಯನ್ನು ತೋರಿಸುತ್ತದೆ. ಕರ್ನಾಟಕದ ಬುಡಕಟ್ಟು ಸಮುದಾಯಗಳಿಗೆ ಅವರ ಪಾರಂಪರಿಕ ಮತ್ತು ಭೌಗೋಳಿಕ ಹಾಗೂ ಪರಿಸರ ಮೌಲ್ಯಗಳನ್ನು ರೂಪಿಸಿಕೊಡಲಾರವು. ಏಕೆಂದರೆ ಬುಡಕಟ್ಟು ಸಮುದಾಯಗಳಿಗೆ ಆಧುನಿಕ ಪ್ರಪಂಚದ ಅರ್ಥವಾಗದ ನಾಗರಿಕ ಜಾತ್ರೆಯ ದಿಬ್ಬಣಕ್ಕಿಂತ ತಮ್ಮ ಮೂಲ ಸಂಸ್ಕೃತಿಯ ಆಚರಣೆ ಮತ್ತು ನಂಬಿಕೆ ಮುಖ್ಯ. ಇದರಿಂದಾಗಿ ಕರ್ನಾಟಕ ರಾಜ್ಯದ ಅಭಿವೃದ್ಧಿಯ ನೀತಿಯನ್ನು ಇಲ್ಲಿಯ ಬುಡಕಟ್ಟುಗಳು ಒಪ್ಪಿಕೊಳ್ಳಲಾರವು. ಯಾವುದೇ ಯೋಜನೆಗಳು ಜನಮಾನಸದಲ್ಲಿ ಅಭಿವೃದ್ಧಿ ಪರಿಕಲ್ಪನೆ ಅರ್ಥೈಸಿ, ಸಹನಡಿಗೆ ಹಾಕದವರೆಗೂ ಒತ್ತಾಯದ ಹೇರುವಿಕೆ ಅಭಿವೃದ್ಧಿಗೆ ಹಿನ್ನಡೆಯಾಗುತ್ತದೆ

ಎಂಬುದನ್ನು ಯೋಜನಾಕಾರರು ಅರ್ಥ ಮಾಡಿಕೊಳ್ಳಬೇಕು. ಬುಡಕಟ್ಟುಗಳಿಗೆ ಬೇಕಾದುದನ್ನು ನೀಡಬೇಕೇ ಹೊರತು, ನಮ್ಮಿಷ್ಟದಂತೆ ಕೊಡುವುದು ಎಷ್ಟೋ ವೇಳೆ ಅವರಿಗೆ ಬೇಡವಾಗಿರಬಹುದೆಂಬುದನ್ನು ಪ್ರಭುತ್ವ ಅರ್ಥಮಾಡಿಕೊಳ್ಳದೇ ಹೋಗಬಹುದು.

ಕರ್ನಾಟಕದಲ್ಲಿರುವ ನಾನಾ ಆದಿವಾಸಿ ಬುಡಕಟ್ಟುಗಳು ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳ ಅಧ್ಯಯನದಿಂದ, ಅವರ ಪುನರ್‌ವಸತಿ, ಆಹಾರ ಪದ್ಧತಿ, ಶಿಕ್ಷಣ, ಮಹಿಳೆಯರ ಆರೋಗ್ಯ ಸುಧಾರಣೆಗಳು, ಕೆಲ ಸಮುದಾಯಗಳ ಸ್ಥಿತ್ಯಂತರಗಳು, ಬುಡಕಟ್ಟುಗಳ ಅಭಿವೃದ್ಧಿ ಮತ್ತು ಮೂಲಭೂತ ಹಕ್ಕುಗಳು, ಬುಡಕಟ್ಟುಗಳ ಪುನರ್‌ವ್ಯಾಖ್ಯಾನ, ನಂಬಿಕೆಗಳು, ಸಾಂಸ್ಕೃತಿಕ ಆಚರಣೆಗಳು, ಕಲ್ಯಾಣ ಕಾರ್ಯಕ್ರಮಗಳು, ಸಾಮಾಜಿಕ ಸ್ಥಿತಿಗತಿಗಳು, ಕರಕುಶಲತೆಗಳು, ಅವರ ಪರಿವರ್ತನೆಯ ಹಾದಿ, ಜೀವನ ಕ್ರಮ, ಬುಡಕಟ್ಟುಗಳ ವೈವಾಹಿಕ ಪದ್ಧತಿ, ಆಧುನಿಕತೆಯ ಜೀವನ ಶೈಲಿಯಿಂದ ಬುಡಕಟ್ಟು ಸಂಸ್ಕೃತಿ, ಆಚಾರ, ವಿಚಾರ, ಸಂಪ್ರದಾಯ ಇತ್ಯಾದಿ ಅನೇಕ ಸಮಗ್ರ ಮಾಹಿತಿಗಳನ್ನು ವಿವಿಧ ಮಜಲುಗಳಲ್ಲಿ ಅನಾವರಣಗೊಳಿಸುವ ಪ್ರಯತ್ನವನ್ನು ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗ ಪೂರ್ಣ ಪ್ರಮಾಣದಲ್ಲಿ ಸಂಶೋಧನಾ ಚಟುವಟಿಕೆಯನ್ನು ಕೈಗೊಂಡಿದ್ದು, ನಾಡಿನಾದ್ಯಂತ ಇರುವ ಇಂತಹ ಬುಡಕಟ್ಟುಗಳ ಮೇಲೆ ಕ್ಷ-ಕಿರಣ ಬೀರುತ್ತಿದೆ.

1.5. ಸಂಶೋಧನಾ ವಿಧಾನ, ವಿನ್ಯಾಸ ಮತ್ತು ನಡೆದಿರುವ ಅಧ್ಯಯನಗಳ ಸಮೀಕ್ಷೆ:

ವಿಧಾನ (Methodology)

ಅಧ್ಯಯನದ ವಿಧಾನಗಳನ್ನು ಅಥವಾ ಮಾದರಿಗಳನ್ನು- ಅವಲೋಕನ ವಿಧಾನ, ಪ್ರಶ್ನಾವಳಿ ಮಾದರಿ, ಸಂದರ್ಶನ ವಿಧಾನ, ಸಂಗ್ರಹ ವಿಧಾನ, ಸಮೀಕ್ಷಾ ವಿಧಾನ, ದಾಖಲೆ ವಿಧಾನ, ತುಲನಾತ್ಮಕ ವಿಧಾನ, ಐತಿಹಾಸಿಕ ವಿಧಾನ, ವಿಶ್ಲೇಷಣಾ ವಿಧಾನ, ಅಂತರ್ ಶಿಸ್ತಿಯ ವಿಧಾನ, ಪರಿಕಲ್ಪನಾತ್ಮಕ ವಿಧಾನ, ಸಾಂಸ್ಕೃತಿಕ ಅಧ್ಯಯನ ವಿಧಾನ, ಇತ್ಯಾದಿಗಳಾಗಿ ವಿಂಗಡಿಸಲಾಗಿದೆ. ಅಯಾ ಅಧ್ಯಯನದ ಅವಶ್ಯಕತೆಗೆ ತಕ್ಕಂತೆ ಸೂಕ್ತ ವಿಧಾನಗಳನ್ನು ಆರಿಸಿಕೊಳ್ಳಲಾಗುತ್ತದೆ. ಅದರಲ್ಲಿ ಮುಖ್ಯವಾದವುಗಳೆಂದರೆ-

ಮಾದರಿ ವಿಧಾನ:

ಸಂಶೋಧನಾ ವ್ಯಾಪ್ತಿಯ ಹಾವೇರಿ ಜಿಲ್ಲೆಯಲ್ಲಿನ ಅರೆ ಅಲೆಮಾರಿ ಮತ್ತು ನೆಲೆನಿಂತ ಬುಡಕಟ್ಟುಗಳು ಅತಿ ಹೆಚ್ಚು ಸಂಖ್ಯೆಯಲ್ಲಿ ವಾಸಿಸುವ ಗ್ರಾಮಗಳನ್ನು ಯಾದೃಚ್ಛಿಕ ನಮೂನೆಯಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ. ಆಯ್ಕೆ ಮಾಡಿಕೊಂಡ ಗ್ರಾಮಗಳನ್ನು ಗುಚ್ಛ ನಮೂನೆಯ ವಿಧಾನದ ವೈಯಕ್ತಿಕ ಸಂದರ್ಶನ ಮತ್ತು ಅವಲೋಕನದಂತಹ ತಂತ್ರ ಸಾಧನಗಳನ್ನು ಬಳಸಿಕೊಂಡು ಮಾಹಿತಿ ಸಂಗ್ರಹಿಸಲಾಗಿದೆ. ಆಯ್ದ ಬುಡಕಟ್ಟು

ಸಮುದಾಯಗಳ ಶೇಕಡಾ ಹತ್ತರ ಪ್ರಮಾಣದಲ್ಲಿ ಪ್ರತಿ ಕುಟುಂಬದ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಿ ಕೋಷ್ಟಕದ ಮೂಲಕ ಪ್ರಸ್ತುತ ಪಡಿಸಲಾಗಿದೆ.

ಪ್ರಶ್ನಾವಳಿ ಮಾದರಿ:

ಹಾವೇರಿ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ನೆಲೆಸಿರುವ ಬುಡಕಟ್ಟುಗಳ ಸಾಮಾಜಿಕ ಜೀವನವನ್ನು ಅರ್ಥಮಾಡಿಕೊಳ್ಳಲು ನಿಶ್ಚಿತ ಪ್ರಶ್ನಾವಳಿಯನ್ನು ರಚಿಸಿಕೊಳ್ಳಲಾಗಿದೆ. ಸದರಿ ಪ್ರಶ್ನಾವಳಿಯನ್ನು ಬುಡಕಟ್ಟುಗಳ Household survey ಮಾಡಲು ಬಳಸಲಾಗಿದೆ. ಈ ಪ್ರಶ್ನಾವಳಿಯ ಮೂಲಕ ಅರೆ-ಅಲೆಮಾರಿ ಮತ್ತು ನೆಲೆನಿಂತ ಬುಡಕಟ್ಟುಗಳಾದ ಹೆಳವರು, ಸುಡಗಾಡು ಸಿದ್ಧರು, ಗೊಂದಲಿಗರು, ಬುಡ್ಗ ಜಂಗಮರು, ಬಹುರೂಪಿಗಳು, ಮೇದ ಮತ್ತು ಬೇಡ ಸಮುದಾಯಗಳು ವಾಸಿಸುವ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಸರ್ವೇ ಮಾಡಲಾಗಿದೆ. ಜೊತೆಗೆ ಆ ಬುಡಕಟ್ಟುಗಳ ಪ್ರತೀ ಹಳ್ಳಿಯ ನಾಗರೀಕ ಸೌಲಭ್ಯಗಳ ಕುರಿತು ಮಾಹಿತಿಗಳನ್ನು ಪಡೆದುಕೊಳ್ಳಲಾಗಿದೆ.

ಸಮೀಕ್ಷಾ ವಿಧಾನ:

ಹಾವೇರಿ ಜಿಲ್ಲೆಯಾದ್ಯಂತ ಆಯ್ದ ಬುಡಕಟ್ಟು ಸಮುದಾಯಗಳ ಶೇಕಡಾ ಹತ್ತರ ಪ್ರಮಾಣದಲ್ಲಿ ಪ್ರತಿ ಕುಟುಂಬದ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಿ ಕ್ಷೇತ್ರಕಾರ್ಯ ಮಾಹಿತಿ ಪಟ್ಟಿಯಲ್ಲಿ ದಾಖಲಿಸಿ, ಕೋಷ್ಟಕಗಳ ಮೂಲಕ ಪ್ರಸ್ತುತಪಡಿಸಿದೆ. ಕೋಷ್ಟಕಗಳ ಮಾಹಿತಿಗಳನ್ನು ಅವಶ್ಯವೆನಿಸಿದ ಕಡೆಗಳಲ್ಲಿ ಉಲ್ಲೇಖಿಸಲಾಗಿದೆ. ನನ್ನ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡ ಪ್ರತ್ಯಕ್ಷ ಅನುಭವಗಳನ್ನು ಇಲ್ಲಿ ಮಂಡಿಸಿದ್ದೇನೆ. ಸಾಧ್ಯವಾದ ಕಡೆ ವಕ್ತೃಗಳ ಹೆಸರುಗಳನ್ನು ನಮೂದಿಸಿದ್ದೇನೆ. ಇದು ಕ್ಷೇತ್ರಕಾರ್ಯಾಧಾರಿತ ಅಧ್ಯಯನವಾಗಿದ್ದು, ಕ್ಷೇತ್ರಕಾರ್ಯದ ಮಾಹಿತಿ ಈ ಅಧ್ಯಯನಕ್ಕೆ ಪ್ರಾಥಮಿಕ ಆಕರವಾಗಿರುತ್ತದೆ. ಈ ಕಾರಣದಿಂದ ಮಹಾಪ್ರಬಂಧದಲ್ಲಿ ಅಡಿಟಿಪ್ಪಣಿಗಳು ಸಾಕಷ್ಟಿವೆ. ಹಾವೇರಿ ಜಿಲ್ಲೆಯ ಬಹುತೇಕ ಬುಡಕಟ್ಟುಗಳ ಅಂಕಿ ಅಂಶಗಳು ನನ್ನ ಅಧ್ಯಯನದಿಂದ ದೊರೆಯುತ್ತದೆ. ಅಗತ್ಯಕ್ಕನುಸಾರ ಕೋಷ್ಟಕಗಳನ್ನು ರಚಿಸಿ, ಸವಿವರಗಳನ್ನು ಬಳಸಿಕೊಂಡು ಪ್ರೌಢ ಪ್ರಬಂಧದ ಗುಣಾತ್ಮಕತೆಯನ್ನು ಹೆಚ್ಚಿಸಲು ಪ್ರಯತ್ನಿಸಿದ್ದೇನೆ. ಜೊತೆಗೆ ಅವರ ಸಾಮಾಜಿಕ ಜೀವನದ ಪ್ರತ್ಯಕ್ಷ ಚಿತ್ರಣವನ್ನು ಕೆಲವು ಛಾಯಾಚಿತ್ರಗಳ ಆಧಾರದಲ್ಲಿ ಪ್ರಸ್ತುತಪಡಿಸಿದ್ದೇನೆ.

ಚಾರಿತ್ರಿಕ ವಿಧಾನ:

ಪ್ರಸ್ತುತ ಅಧ್ಯಯನದಲ್ಲಿ ಜಿಲ್ಲೆಯ ಅರೆ-ಅಲೆಮಾರಿ ಮತ್ತು ನೆಲೆ-ನಿಂತ ಬುಡಕಟ್ಟು ಸಮುದಾಯಗಳ ಚಾರಿತ್ರಿಕ ಬೆಳವಣಿಗೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಸಮುದಾಯಗಳ ಮೇಲೆ ನಡೆದ ಅಧ್ಯಯನಗಳನ್ನು ಗಮನಿಸಲಾಗಿದೆ. ಜೊತೆಗೆ ಬೇರೆ ಬೇರೆ

ಸಾಹಿತ್ಯ ಕೃತಿಗಳಲ್ಲಿ ಬುಡಕಟ್ಟು ಸಮುದಾಯಗಳ ಕುರಿತು ಇರುವ ಉಲ್ಲೇಖಗಳನ್ನು ಬಳಸಿಕೊಳ್ಳಲಾಗಿದೆ. ಏಕೆಂದರೆ ಪಾರಂಪರಿಕ ಸಮಾಜದಲ್ಲಿ ಬದುಕುವ ಸಮುದಾಯಗಳ ವರ್ತಮಾನದ ಬದುಕಿನ ಗುಟ್ಟುಗಳು ಬಹುತೇಕ ಚರಿತ್ರೆಯಲ್ಲಿ ಅಡಗಿರುತ್ತವೆ. ಈ ಕಾರಣದಿಂದಾಗಿಯೇ ಐತಿಹಾಸಿಕ ವಿಧಾನವು ತುಂಬಾ ಅಗತ್ಯ ಎಂದು ಮನಗೊಂಡು ಈ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಅನುಷಂಗಿಕ ಆಕರಗಳ ಅಧ್ಯಯನ:

ಈ ಅಧ್ಯಯನಕ್ಕೆ ಬೇಕಾದ ಅನುಷಂಗಿಕ ಮಾಹಿತಿಗಳನ್ನು ಪುಸ್ತಕಗಳು, ಸಾಹಿತ್ಯ, ಸರ್ಕಾರಿ ಇಲಾಖಾ ದಾಖಲಾತಿಗಳು, ಜನಗಣತಿ ದಾಖಲಾತಿಗಳು, ಸಂಖ್ಯಾಶಾಸ್ತ್ರೀಯ ಇಲಾಖಾ ದಾಖಲಾತಿಗಳು, ಹಿಂದುಳಿದ ವರ್ಗಗಳ ಆಯೋಗಗಳ ವರದಿಗಳು, ವೃತ್ತ ಪತ್ರಿಕೆಗಳು, ನಿಯತ ಕಾಲಿಕೆಗಳು, ಬ್ಲಾಗ್‌ಗಳ, ಅಂತರ್ಜಾಲದ, ಸಮೀಕ್ಷಾ ಗ್ರಂಥಗಳು, ವಿಶ್ವಕೋಶಗಳು, ಗೈಜಟಿಯರ್‌ಗಳು, ಲೇಖನಗಳು ಇನ್ನೂ ಮುಂತಾದವುಗಳಿಂದ ಸಂಗ್ರಹಿಸಲಾಗಿದೆ. ಜೊತೆಗೆ ಈಗಾಗಲೇ ಆದಿವಾಸಿ ಬುಡಕಟ್ಟುಗಳ ಕುರಿತು ಕನ್ನಡ ವಿಶ್ವವಿದ್ಯಾಲಯ ಹಂಪಿಯ ಬುಡಕಟ್ಟು ಅಧ್ಯಯನ ವಿಭಾಗವು ಪ್ರಕಟಿಸಿರುವ ಕೃತಿಗಳನ್ನು ಸದರಿ ಅಧ್ಯಯನದ ಸಂದರ್ಭದಲ್ಲಿ ಪರಾಮರ್ಷೆ ಮಾಡಲಾಗಿದೆ.

ಹಾವೇರಿ ಜಿಲ್ಲೆಯ ವಿವಿದ ತಾಲೂಕುಗಳಲ್ಲಿ ನೆಲೆಸಿರುವ ಅರೆ-ಅಲೆಮಾರಿ ಮತ್ತು ನೆಲೆನಿಂತ ಬುಡಕಟ್ಟುಗಳಾದ ಹೆಳವರು, ಸುಡಗಾಡು ಸಿದ್ಧರು, ಗೊಂದಲಿಗರು, ಬುಡ್ಗ ಜಂಗಮರು, ಬಹುರೂಪಿಗಳು, ಮೇದ ಮತ್ತು ಬೇಡ ಸಮುದಾಯಗಳು ವಾಸಿಸುವ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಸಮೀಕ್ಷೆ ಮಾಡಲಾಗಿದೆ. ಇವರೆಲ್ಲರ ಸಾಮಾಜಿಕಾರ್ಥಿಕ ಪರಿಸ್ಥಿತಿಗಳನ್ನು ಪರಸ್ಪರ ಹೊಲಿಸಲು ತುಲನಾತ್ಮಕ ವಿಧಾನವನ್ನು ಬಳಸಲಾಗಿದೆ. ಅಧ್ಯಯನದ ವಿಷಯ ಸಮಾಜಶಾಸ್ತ್ರಕ್ಕೆ ನೇರವಾಗಿ ಸಂಬಂಧಿಸಿದ್ದರೂ ಆ ವಿಷಯಕ್ಕೆ ಮಾತ್ರ ನಮ್ಮನ್ನು ಸೀಮಿತಗೊಳಿಸಬೇಕಿಲ್ಲ. ಸಮಾಜ ವಿಜ್ಞಾನದ ವಿವಿಧ ಶಾಖೆಗಳಾದ ಮಾನವಶಾಸ್ತ್ರ, ಇತಿಹಾಸ, ಅರ್ಥಶಾಸ್ತ್ರ, ಮನಃಶಾಸ್ತ್ರ ಇತ್ಯಾದಿಗಳ ಜೊತೆಗೆ ಗಣಿತ ಮತ್ತು ಸಂಖ್ಯಾಶಾಸ್ತ್ರಗಳನ್ನು ಸಮನ್ವಯಗೊಳಿಸಿ ಬುಡಕಟ್ಟು ಸಮುದಾಯಗಳ ತಾತ್ವಿಕತೆಯನ್ನು ಶೋಧಿಸಲಾಗಿದೆ. ಈ ಮಾದರಿ ವೈಚಾರಿಕ ಭಿನ್ನತೆಗಳನ್ನು ಗೌರವಿಸುತ್ತಲೇ ವಿವಿಧ ಜ್ಞಾನ ಶಿಸ್ತುಗಳೊಡನೆ ಮುಖಾಮುಖಿಯಾಗುತ್ತ ಸಮನ್ವಯಿಸಿಕೊಂಡು ಹೊಸ ಹೊಳಹುಗಳನ್ನು, ಹೊಸ ಜ್ಞಾನ ಶಾಖೆಗಳನ್ನು ಸೃಷ್ಟಿಸುವ ಸೃಜನಶೀಲತೆಯನ್ನು ಒಳಗೊಂಡಿದೆ.

ವಿನ್ಯಾಸ (Design)

ಪ್ರಸ್ತುತ ಅಧ್ಯಯನದ ಮೂಲ ಆಶಯಗಳನ್ನು ಪೂರೈಸಲು ಈ ಪ್ರಬಂಧವನ್ನು ಐದು ಅಧ್ಯಾಯ ಮತ್ತು ಉಪಸಂಹಾರಗಳಲ್ಲಿ ರೂಪಿಸಿಕೊಳ್ಳಲಾಗಿದೆ. ಈ ಅಧ್ಯಾಯಗಳು ಕೆಳಕಂಡ ವಸ್ತು ವಿಷಯಗಳನ್ನು ಒಳಗೊಂಡಿರುತ್ತವೆ.

ಮೊದಲನೆಯ ಅಧ್ಯಾಯದಲ್ಲಿ ಸಂಶೋಧನಾ ವಿಧಾನವನ್ನು ಬಳಸಿಕೊಂಡು ಅಧ್ಯಯನ ವಿಷಯವನ್ನು ಅರ್ಥೈಸುತ್ತಾ ಅಧ್ಯಯನದ ವಿಧಾನಗಳನ್ನು ಬಳಸಿಕೊಂಡು ಸಂಶೋಧನಾ ತಂತ್ರಗಳನ್ನು ಅಳವಡಿಸಿಕೊಂಡು ಮಾಹಿತಿಯನ್ನು ವಿಶ್ಲೇಷಣೆ ಮಾಡಲಾಗಿದೆ. ಭಾರತದಲ್ಲಿ ಬುಡಕಟ್ಟುಗಳ ಅಧ್ಯಯನ, ಆದಿವಾಸಿಗಳ ಅರ್ಥ ವಿವರಣೆ, ಗುಣಲಕ್ಷಣಗಳೊಂದಿಗೆ ಬುಡಕಟ್ಟು ಸಮುದಾಯಗಳ ವಿಂಗಡಣೆಯನ್ನು ನೀಡಲಾಗಿದೆ. ಇದರೊಂದಿಗೆ ಕರ್ನಾಟಕದಲ್ಲಿ ನಡೆದ ಬುಡಕಟ್ಟು ಅಧ್ಯಯನಗಳ ಬಗ್ಗೆಯೂ ಮಾಹಿತಿ ಕೊಡಲಾಗಿದೆ. ಬುಡಕಟ್ಟು ಸಮುದಾಯಗಳ ಕುರಿತಾಗಿ ನಡೆದಿರುವ ಅಧ್ಯಯನಗಳ ಸಮಗ್ರ ಸಮೀಕ್ಷಾ ವರದಿಗಳನ್ನು ಪ್ರಾರಂಭಿಕ ಅಧ್ಯಾಯದಲ್ಲಿ ಉಲ್ಲೇಖಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ಹಾವೇರಿ ಜಿಲ್ಲೆಯ ಕ್ಷೇತ್ರ ಪರಿಚಯ ಮಾಡಿಕೊಡಲಾಗಿದೆ. ಇದರಲ್ಲಿ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ, ಸಾಂಸ್ಕೃತಿಕ ಅನನ್ಯತೆ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪಲ್ಲಟಗಳು, ದೇಸಿಯತೆ ಅಥವಾ ಪಾರಂಪರಿಕತೆ ಮತ್ತು ಅರೆಮಲೆನಾಡು ಮತ್ತು ಬಯಲುಸೀಮೆಗಳಲ್ಲಿನ ಹಬ್ಬ-ಹರಿದಿನಗಳ ತೌಲನಿಕ ಅಧ್ಯಯನವನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಆದಿವಾಸಿ ಸಮುದಾಯಗಳಲ್ಲಿ ಕಂಡುಬರುವ ವಿಶೇಷ ಗುಣಲಕ್ಷಣಗಳ ಆಧಾರದ ಮೇಲೆ ಬುಡಕಟ್ಟುಗಳ ವಿಂಗಡಣೆ ಮಾಡಲಾಗಿದೆ. ಅವುಗಳೆಂದರೆ ವಿಮುಕ್ತ, ಅಲೆಮಾರಿ, ಅರೆ ಅಲೆಮಾರಿ ಮತ್ತು ನೆಲೆ ನಿಂತ ಬುಡಕಟ್ಟುಗಳು. ಪ್ರಸ್ತುತ ಅಧ್ಯಯನದಲ್ಲಿ ಅರೆ ಅಲೆಮಾರಿ ಮತ್ತು ನೆಲೆ ನಿಂತ ಬುಡಕಟ್ಟುಗಳನ್ನು ಮಾತ್ರ ಅಧ್ಯಯನಕ್ಕೊಳಪಡಿಸಲಾಗಿದೆ. ಆಯ್ದ ಬುಡಕಟ್ಟು ಸಮುದಾಯಗಳಾದ ಮೇದ, ಬೇಡ, ಹೆಳವ, ಗೊಂದಲಿಗ, ದುರುಗಮುರುಗಿ, ಬಹುರೂಪಿ ಹಾಗೂ ಸುಡಗಾಡು ಸಿದ್ದ ಸಮುದಾಯಗಳ ಹಿನ್ನೆಲೆ, ಪದನಿಷ್ಪತ್ತಿ, ಮೂಲ, ಪರಂಪರೆ, ಪುರಾಣಗಳು, ಐತಿಹ್ಯಗಳು, ಇದುವರೆಗಿನ ಅಧ್ಯಯನಗಳು, ನೆಲೆಗಳು ಮುಂತಾದ ವಿವರಗಳನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ಜೊತೆಗೆ ಈ ಎಲ್ಲಾ ಸಮುದಾಯಗಳ ಸಾಮಾಜಿಕ ಬದುಕು ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಆಹಾರ ಪದ್ಧತಿ, ವಸತಿ ವ್ಯವಸ್ಥೆ, ಉಡಿಗೆ-ತೊಡಿಗೆ, ವೇಷ-ಭೂಷಣಗಳು, ವೃತ್ತಿಯ ಪ್ರಕಾರಗಳು,

ಒಳಾಡಳಿತ ವ್ಯವಸ್ಥೆ, ಕುಟುಂಬ, ರಕ್ತ-ಸಂಬಂಧ, ಬೆಡಗುಗಳು, ಭಾಷೆ ಮತ್ತು ಸ್ತ್ರೀಯರ ಸ್ಥಾನಮಾನಗಳ ಕುರಿತು ವಿವರವಾಗಿ ಚರ್ಚಿಸಲಾಗಿದೆ.

ಮುಂದುವರೆದ ಭಾಗವಾಗಿ ಜಿಲ್ಲೆಯ ಆಯ್ದ ಬುಡಕಟ್ಟುಗಳ ಆಚರಣೆ, ನಂಬಿಕೆ ಮತ್ತು ಸಂಪ್ರದಾಯಗಳು ಅವರ ಬದುಕಿನಲ್ಲಿ ಯಾವ ರೀತಿ ಬೇರೂರಿವೆ ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ಸಂಸ್ಕಾರಗಳು ಮತ್ತು ಸಂಪ್ರದಾಯಗಳಿಗೆ ಸಂಬಂಧಿಸಿದ ಜನನ, ನಾಮಕರಣ, ಜವಳ ತೆಗೆಸುವುದು, ಋತುಮತಿ ಶಾಸ್ತ್ರ, ಸಂಗಾತಿ ಆಯ್ಕೆ, ಮದುವೆ, ವಿಚ್ಛೇಧನ, ಮರುವಿವಾಹ, ಶವಸಂಸ್ಕಾರ ಮತ್ತು ದಿನನಿತ್ಯ ಕಂಡುಬರುವ ಇನ್ನಿತರ ಕಟ್ಟು ಪಾಡುಗಳನ್ನು ವಿವರವಾಗಿ ಕೊಡಲಾಗಿದೆ. ಇದರೊಂದಿಗೆ ನಂಬಿಕೆಗಳು ಮತ್ತು ಆಚರಣೆಗಳಿಗೆ ಪೂರಕವಾಗಿ ಪ್ರಕೃತಿ ಆರಾಧನೆ, ಧಾರ್ಮಿಕ ಕೇಂದ್ರಗಳು, ಪುರಾತನ ಕಾಲದ ವಸತಿ ದಿಬ್ಬಗಳು, ದೇವರು, ಪೂಜಾ ಪದ್ಧತಿಗಳು, ಹರಕೆ, ಬಲಿ, ಎಡೆ, ಗಂಗೆ ಪೂಜೆ ಮಾಡುವ ವಿಧಾನಗಳು ಇವರು ಆಚರಿಸುವ ಹಬ್ಬ, ಜಾತ್ರೆ, ಉತ್ಸವಗಳು ಮತ್ತು ಇತರ ನಿಯಮಾವಳಿಗಳನ್ನು ಕೂಲಂಕುಷವಾಗಿ ವಿವರಿಸಲಾಗಿದೆ.

ನಾಲ್ಕನೇ ಅಧ್ಯಾಯವು ಸಮಸ್ಯೆ ಹಾಗೂ ಸವಾಲುಗಳನ್ನು ಒಳಗೊಂಡಿದ್ದು, ಸಂಶೋಧನೆಯಲ್ಲಿ ವ್ಯಕ್ತವಾದ ಫಲಿತಗಳಿಂದ ವಿವಿಧ ಬುಡಕಟ್ಟುಗಳ ಪ್ರಚಲಿತ ಸಾಮಾಜಿಕ ಸ್ಥಿತಿಗತಿಗಳು, ಆರ್ಥಿಕ ಸಂಕಷ್ಟಗಳು, ಸಾಂಸ್ಕೃತಿಕ ವ್ಯವಸ್ಥೆ ಹಾಗೂ ಶೈಕ್ಷಣಿಕ ಸ್ಥಿತಿಗತಿಗಳನ್ನು ಚರ್ಚಿಸಿ ಅನೇಕ ಸಮಸ್ಯೆಗಳಿಗೆ ಕೈಗೊಳ್ಳಬಹುದಾದ ಸುಧಾರಣಾ ಕ್ರಮಗಳನ್ನು ಸೂಚಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಸಮಾರೋಪ, ಫಲಿತಗಳು ಮತ್ತು ಸಲಹೆಗಳನ್ನು ನೀಡಲಾಗಿದ್ದು, ಇದರಲ್ಲಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಅತ್ಯಂತ ಉಪಯುಕ್ತ ಮಾಹಿತಿಗಳನ್ನು ಕೊಡಲಾಗಿದೆ. ಈ ಸಂಶೋಧನೆಯಲ್ಲಿ ವ್ಯಕ್ತವಾದ ಅಧ್ಯಯನದ ಫಲಿತಗಳನ್ನು ತಿಳಿಯುವುದರ ಜೊತೆಗೆ ಕೆಲವು ಸಲಹೆಗಳನ್ನು ನೀಡಲಾಗಿದೆ. ನಂತರ ಪ್ರಾಕ್ ಕಲ್ಪನೆಯ ಸತ್ಯಾಸತ್ಯತೆಯನ್ನು ಪರೀಕ್ಷೆಗೆ ಒಳಪಡಿಸಿ ಅವುಗಳು ಎಷ್ಟರ ಮಟ್ಟಿಗೆ ಈ ಸಂಶೋಧನೆಯಲ್ಲಿ ಯಶಸ್ಸು ಕಂಡಿವೆ ಎಂಬ ಅಂಶಗಳನ್ನು ತಿಳಿಸಲಾಗಿದೆ.

ಕೊನೆಯ ಭಾಗವು ಅನುಬಂಧಗಳನ್ನು ಒಳಗೊಂಡಿದ್ದು, ಇದರಲ್ಲಿ ಪರಾಮರ್ಶನ ಗ್ರಂಥಗಳು, ಕೋಷ್ಟಕಗಳು, ಛಾಯಚಿತ್ರಗಳು, ಸಂದರ್ಶನ ಅನುಸೂಚಿ, ಮಾಹಿತಿಗಾಗಿ ಸಂದರ್ಶಿಸಿದ ಪ್ರಮುಖ ವಕ್ತೃಗಳು ಮತ್ತು ನಕ್ಷೆಗಳನ್ನು ನೀಡಲಾಗಿದೆ.

ಅಧ್ಯಯನಗಳ ಸಮೀಕ್ಷೆ

ನೂರಾರು ವರ್ಷಗಳ ಪ್ರಾಚೀನತೆಯನ್ನು ಹೊಂದಿರುವ ಜಿಲ್ಲೆಯ ಬುಡಕಟ್ಟುಗಳ ಕುರಿತು ನಡೆದಿರುವ ಅಧ್ಯಯನಗಳು ಬಹಳ ಕಡಿಮೆಯೆಂದೆ ಹೇಳಬಹುದು ಅಥವಾ ಅಧ್ಯಯನಗಳು

ಇಲ್ಲಿಯವರೆಗೆ ನಡೆದಿಲ್ಲವೆಂದು ಹೇಳಿದರೂ ತಪ್ಪಾಗಲಾರದು. ಮಹಾಕಾವ್ಯಗಳಾದ 'ರಾಮಾಯಣ' ಮತ್ತು 'ಮಹಾಭಾರತ'ಗಳಲ್ಲಿ ಜಿಲ್ಲೆಯಲ್ಲಿ ಕಾಣಬರುವ ಬುಡಕಟ್ಟು ಸಮುದಾಯಗಳಿಗೆ ಸಂಬಂಧಿಸಿದ ಸಾಕಷ್ಟು ಮಾಹಿತಿಗಳಿವೆ. ನಂತರ "ರಾಮಾಯಣ–ಮಹಾಭಾರತಗಳಲ್ಲದೇ ಇನ್ನಿತರ ಪ್ರಾಚೀನ ಗ್ರಂಥಗಳಾದ ಅರ್ಥಶಾಸ್ತ್ರ, ಸ್ಮೃತಿಗಳು, ಭಾಸ–ಕಾಳಿದಾಸರಂತಹ ಕವಿ ಕೃತಿಗಳು ಸಹ ಸಮುದಾಯಗಳಿಗೆ ಸಂಬಂದಪಟ್ಟ ವಿವರಗಳನ್ನು ಒದಗಿಸುತ್ತವೆ."[7] ಅದೇ ರೀತಿ 1909ರಲ್ಲಿ ಎಡ್ಗರ್ ಥರ್‌ಸ್ಟನ್ ಅವರ Caste and Tribes of Southern India ಎಂಬ ಏಳು ಸಂಪುಟಗಳ ಕೃತಿಗಳು ದಕ್ಷಿಣ ಭಾರತದ ಅನೇಕ ಬುಡಕಟ್ಟುಗಳ ಕುರಿತು ಸಂಕ್ಷಿಪ್ತ ವಿವರಣೆಗಳಲ್ಲಿ, ಜಿಲ್ಲೆಯ ಬುಡಕಟ್ಟು ಸಮುದಾಯಗಳ ವೃತ್ತಿ ಗುಣಲಕ್ಷಣಗಳಿವೆ. 1926–1935ರಲ್ಲಿ ಹೆಚ್.ವಿ.ನಂಜುಡಯ್ಯ ಮತ್ತು ಎಲ್.ಕೆ.ಅಯ್ಯರ್ ಅವರ ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಿರುವ The Mysore Tribes And Castes ಎಂಬ ಕೃತಿಗಳಲ್ಲಿ ಬೇಡ, ಮೇದ, ಹೆಳವ, ಗೊಂದಲಿಗ, ಬಹುರೂಪಿ, ಸುಡುಗಾಡು ಸಿದ್ದ ಇನ್ನೂ ಮುಂತಾದವರ ಕುರಿತ ವಿವರಣೆಗಳಿವೆ. Dharwad District Gazettere ನಲ್ಲಿಯೂ ಜಿಲ್ಲೆಯ ಬುಡಕಟ್ಟು ಜನರ ಸಂಕ್ಷಿಪ್ತವಾದ ಮಾಹಿತಿಗಳಿವೆ. 1975 ರಲ್ಲಿ ಎಲ್.ಜಿ. ಹಾವನೂರು ಅವರ Karnataka Backward Class Commisssion Report ದಲ್ಲಿ ನಾನು ಆಯ್ದುಕೊಂಡಿರುವ ಬುಡಕಟ್ಟು ಜನರಿಗೆ ಸಂಬಂಧಿಸಿದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳು ಹಾಗೂ ಬುಡಕಟ್ಟುಗಳ ಸಂಕ್ಷಿಪ್ತವಾದ ವಿವರಣೆಗಳಿವೆ. 1980ರಲ್ಲಿ ನಿಂಗಣ್ಣ ಸಣ್ಣಕ್ಕಿ ಅವರ ಹೆಳವರು ಎಂಬ ಕೃತಿಯಲ್ಲಿ ಹೆಳವರ ಮೂಲಕ್ಕೆ ಸಂಬಂಧಿಸಿದ ಒಂದೆರಡು ಘಟನೆಗಳಿವೆ. 1981ರಲ್ಲಿ ಶಾ.ಮಂ. ಕೃಷ್ಣರಾಯ–ರವರ ಹಾವನೂರು ಸಂಸ್ಥಾನ ಎಂಬ ಪುಸ್ತಕದಲ್ಲಿ, ಬ್ರಾಹ್ಮಣ ವಂಶದವರಾದ ಹನುಮಂತಗೌಡ ಎಂಬ ನಾಯಕ ಹಾವನೂರು ಸಂಸ್ಥಾನವನ್ನು ಹೇಗೆ ಸ್ಥಾಪಿಸಿ ಆಳಿದನು ಮತ್ತು ಆ ಸಂಸ್ಥಾನ ಟಿಪ್ಪು ಸುಲ್ತಾನನ ದಾಳಿಗೆ ಸಿಕ್ಕು ಕೊನೆಯುಸಿರೆಳೆಯಿತು ಎಂಬ ಬಗ್ಗೆ ವಿವರಣೆ ನೀಡಲಾಗಿದೆ. 1982ರಲ್ಲಿ ಆರ್.ರಾಜಣ್ಣನವರ ನಾಯಕ ಜನಾಂಗದ ಇತಿಹಾಸ ಎಂಬ ಕೃತಿಯಲ್ಲಿ ಬೇಡರನ್ನು ಗುರುತಿಸುವುದು, ಬೇಡರ ಮೂಲ ಮತ್ತು ಪರಂಪರೆ, ಪ್ರಾಥಃಸ್ಮರಣೀಯ ನಾಯಕ ಮಣಿಗಳು, ಧರ್ಮ ಮತ್ತು ಸುವ್ಯವಸ್ಥೆಗೆ ಅರ್ಪಿಸಿಕೊಂಡ ನಾಯಕ ವೀರಾಗ್ರಣಿಗಳ ಕುರಿತು ವಿವರಣೆಗಳಿವೆ.

1993ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ ಉಪಸಂಸ್ಕ್ರತಿ ಅದ್ಯಯನ ಮಾಲೆ ಅಡಿಯಲ್ಲಿ ಡಾ. ಎಚ್.ಕೆ.ಪವಾರ ರವರ ಹೆಳವರ ಸಂಸ್ಕ್ರತಿ, ಡಾ.ನಿಂಗಣ್ಣ ಸಣ್ಣಕ್ಕಿಯವರ ಗೊಂದಲಿಗರ ಸಂಸ್ಕೃತಿ, ಗೀತಾ ನಾಗಭೂಷಣ ರವರ ದುರಗಮುರಿಗಿಯರ ಸಂಸ್ಕೃತಿ, ಪಿ.ಕೆ.ಖಂಡೋಬರವರ ಸುಡುಗಾಡು ಸಿದ್ದರ ಸಂಸ್ಕೃತಿ, ಎಂಬ ಪುಸ್ತಕಗಳು ತುಂಬಾ ಸೊಗಸಾಗಿ ಮೂಡಿಬಂದಿದೆ. ಈ ಕೃತಿಗಳಲ್ಲಿ ಬುಡಕಟ್ಟು ಜನರ ಜೀವನ ವಿಧಾನ, ಮತ್ತು ಸಾಮಾಜಿಕ ವ್ಯವಸ್ಥೆ, ಅವರ ಹಿನ್ನೆಲೆ, ಆಚರಣೆ ಮತ್ತು ಕಲೆ, ಭಾಷೆ ಮತ್ತು ಸಾಹಿತ್ಯ, ಪ್ರದರ್ಶನಾತ್ಮಕ

ಕಲೆಗಳು, ಕ್ರೀಡೆಗಳು ಮತ್ತು ಸಾಮಾಜಿಕ ಪರಿವರ್ತನೆ ಮುಂತಾದ ಅಂಶಗಳನ್ನು ವಿವರವಾಗಿ ಕೊಟ್ಟಿದ್ದಾರೆ. ಸಂಪೂರ್ಣ ಕ್ಷೇತ್ರ ಕಾರ್ಯವನ್ನು ಆಧರಿಸಿ ರಚಿಸಿದ ಈ ಕೃತಿಗಳು ಬುಡಕಟ್ಟು ಜನರ ಅದ್ಯಯನಕ್ಕೆ ತುಂಬಾ ಉಪಯುಕ್ತವಾಗಿವೆ. ಇದೇ ರೀತಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ವತಿಯಿಂದ ಪ್ರಕಟವಾದ ಕರ್ನಾಟಕ ಬುಡಕಟ್ಟುಗಳು (ಸಂಪುಟ ಒಂದು ಮತ್ತು ಎರಡು) ಎಂಬ ಕೃತಿಗಳೂ ಸಹ ಕರ್ನಾಟಕದ ಬೇರೆ ಬೇರೆ ಬುಡಕಟ್ಟುಗಳ ಹಿನ್ನೆಲೆ, ಕೌಟುಂಬಿಕ, ಸಾಮಾಜಿಕ, ಆರ್ಥಿಕ, ಒಳಾಡಳಿತ ವ್ಯವಸ್ಥೆ, ಧಾರ್ಮಿಕತೆ, ಆಧುನಿಕತೆಯ ಪರಿಣಾಮಗಳು, ಇನ್ನೂ ಮುಂತಾದ ಉಪಯುಕ್ತ ಮಾಹಿತಿಯನ್ನು ಒಳಗೊಂಡಿದೆ.

1995ರಲ್ಲಿ ಡಾ. ಹಿ.ಚಿ.ಬೋರಲಿಂಗಯ್ಯ ನವರ "ಕಾಡು ಮತ್ತು ಕಾಂಕ್ರೀಟ್" ಎಂಬ ಕೃತಿಯಲ್ಲಿ ಆದಿವಾಸಿ ಸಮುದಾಯಗಳ ಅತಂತ್ರ ಸ್ಥಿತಿಯನ್ನು ವರ್ಣಿಸಿರುತ್ತಾರೆ. 1995ರಲ್ಲಿ ಡಾ. ಭೋಜರಾಜ ಪಾಟೀಲರ 'ನಾಗರಖಂಡ-70-ಒಂದು ಅದ್ಯಯನ ಎಂಬ ಪಿಎಚ್.ಡಿ. ಮಹಾಪ್ರಬಂಧ ಹಾವೇರಿ ಜಿಲ್ಲೆಯ ಕ್ಷೇತ್ರದ ವಿವರಣೆಗಳನ್ನು ಒಳಗೊಂಡ ಮಹಾಪ್ರಬಂಧವಾಗಿದೆ. 1999ರಲ್ಲಿ ಪ್ರಕಟಿತವಾದ ಗೋವಿಂದ ಮೂರ್ತಿ ದೇಸಾಯಿ ಅವರ 'ಸವಣೂರು ನವಾಬರು' ಎಂಬ ಕೃತಿಯು ಸವಣೂರು ನವಾಬರ ಮನೆತನಕ್ಕೆ ಸಂಬಂಧಿಸಿದ ಐತಿಹಾಸಿಕ ಘಟನೆಗಳು ಮತ್ತು ಇತಿಹಾಸವನ್ನು ಒಳಗೂಂಡ ಉಪಯುಕ್ತ ಕೃತಿಯಾಗಿದೆ.

1999ರಲ್ಲಿ ವಿರೂಪಾಕ್ಷಿ ಪೂಜಾರಳ್ಳಿ ಅವರ 'ಗಾದರಿ ಪಾಲನಾಯಕ' ಎಂಬ ಕೃತಿಯಲ್ಲಿ ಮ್ಯಾಸ ಬೇಡರ ಸಾಂಸ್ಕೃತಿಕ ವೀರ ಗಾದರಿ ಪಾಲನಾಯಕನ ಹಿನ್ನೆಲೆ, ಜನಪದ ಕಥೆ, ಮತ್ತು ಮ್ಯಾಸ ಬೇಡರಿಗೆ ಸಂಬಂಧಿಸಿದ ಕೆಲವೊಂದು ವಿವರಣೆಗಳನ್ನು ಕೊಟ್ಟಿದ್ದಾರೆ. 2000ರಲ್ಲಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿರುವ ಡಾ.ಎ.ಎಸ್.ಪ್ರಭಾಕರ ರವರ 'ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು' ಎಂಬ ಪುಸ್ತಕದಲ್ಲಿ ಪರಕೀಯರ ಆಡಳಿತ ವ್ಯವಸ್ಥೆ ಬುಡಕಟ್ಟುಗಳ ಅಭಿವೃದ್ಧಿಗೆ ಮಾರಕವಾಗಿರುವುದನ್ನು ತುಂಬಾ ಮಾರ್ಮಿಕವಾಗಿಯೇ ವಿಶ್ಲೇಷಿಸಿದ್ದಾರೆ. 2000ರಲ್ಲಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದ 'ಕರ್ನಾಟಕ ರಾಜ್ಯಕೋಶ-4 ಜನ ಸಮುದಾಯ ಸಂಪುಟ'ದಲ್ಲಿ ಡಾ. ಹೆಚ್.ಡಿ. ಪ್ರಶಾಂತ್(ಸಂ)ರವರು ಸುಮಾರು 240 ಸಮುದಾಯಗಳಿಗೆ ಸಂಬಂಧಿಸಿದ ಸಂಕ್ಷಿಪ್ತ ವಿವರಣೆಗಳನ್ನು ನೀಡಿದ್ದಾರೆ. 2002ರಲ್ಲಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದ ಡಾ. ವಿರುಪಾಕ್ಷಿ ಪೂಜಾರಳ್ಳಿ ಅವರ 'ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು' ಎಂಬ ಕೃತಿಯಲ್ಲಿ ಬುಡಕಟ್ಟು ವೀರರಿಗೆ ಸಂಬಂಧಿಸಿದ ವಿವರಣೆಗಳು ಅರ್ಥಪೂರ್ಣವಾಗಿವೆ.

2002ರಲ್ಲಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದ ಡಾ.ಕೆ.ಎಂ.ಮೈತ್ರಿ ಅವರ 'ಬುಡಕಟ್ಟು ಕುಲಕಸುಬುಗಳು' ಎಂಬ ಕೃತಿಯಲ್ಲಿ ವಿವಿಧ ಬುಡಕಟ್ಟುಗಳಿಗೆ ಸಂಬಂಧಿಸಿದ ಹಲವು ವೃತ್ತಿಗಳ ಮಾಹಿತಿಗಳಿವೆ. 2007ರಲ್ಲಿ ಡಾ. ಎ.ಎಸ್. ಪ್ರಭಾಕರ (ಸಂ) ಅವರ 'ಆದಿವಾಸಿ ಆಖ್ಯಾನ' ಎಂಬ ಗ್ರಂಥದಲ್ಲಿ ಬೇರೆ ಬೇರೆ ಲೇಖಕರು ವಿವಿಧ ಬುಡಕಟ್ಟು ಸಮುದಾಯಗಳ ಕುರಿತಾಗಿ ಉತ್ತಮ ಲೇಖನಗಳನ್ನು ಬರೆದಿರುತ್ತಾರೆ. 2007ರಲ್ಲಿ ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸಿದ

ಡಾ.ಮಂಜುನಾಥ ಬೇವಿನಕಟ್ಟಿ (ಸಂ) ಅವರ 'ವ್ಯಾದ ಚರಿತೆ' ಎಂಬ ಕೃತಿಯಲ್ಲಿ ತಾರಿಹಳ್ಳಿ ಹನುಮಂತಪ್ಪ, ಎಂ.ವಿ.ಚಿತ್ರಲಿಂಗಯ್ಯ, ಮೀರಸಾಬಿಹಳ್ಳಿ ಶಿವಣ್ಣ, ಹೊನ್ನಪ್ಪ ಮಾಳಿಗಿ, ಎಂ.ಪಿ.ವೀಣಾ, ಎಂ.ಜಿ.ಈಶ್ವರಪ್ಪ ರವರುಗಳ ಲೇಖನಗಳು ಬೇಡ/ನಾಯಕ ಸಮುದಾಯದ ಕುರಿತಾದ ವಿವರಣೆಗಳು ಅರ್ಥಪೂರ್ಣವಾಗಿವೆ.

2007ರಲ್ಲಿ ಪ್ರೊ.ಲಿಂಗರಾಜ ಕಮ್ಮಾರ ಮತ್ತು ಪ್ರೊ.ಗಿರಿಜಾ ಮ. ದುರ್ಗದಮಠ (ಸಂ) ಅವರ 'ಹೆಬ್ಬಾಗಿಲು' ಎಂಬ ಹಾವೇರಿ ಜಿಲ್ಲಾ ಉತ್ಸವ ಸ್ಮರಣ ಸಂಚಿಕೆಯಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬಂದ ಹಾವೇರಿ ಜಿಲ್ಲೆಗೆ ಸಂಬಂಧಿಸಿದ ಕೆಲವೊಂದು ಉಪಯುಕ್ತ ಲೇಖನಗಳಿವೆ. ಚಿತ್ರದುರ್ಗ ಮುರುಘಾಮಠದ ಶಾಖಾ ಮಠವಾದ ಶ್ರೀ ಮೇದಾರ ಕೇತೇಶ್ವರ ಮಠದಲ್ಲಿ ಶ್ರೀ ಕೇತೇಶ್ವರ ಸ್ವಾಮಿಗಳ ಹತ್ತಿರವಿರುವ ಕೆಲವು ಕೃತಿಗಳಲ್ಲಿ ಮೇದ ಸಮುದಾಯಕ್ಕೆ ಸಂಬಂಧಿಸಿದ ವಿವರವಾದ ಮಾಹಿತಿಗಳಿವೆ. 2008ರಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕ ರಾಜ್ಯ ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳ ಒಕ್ಕೂಟದ ಸಹಕಾರದೊಂದಿಗೆ ಕರ್ನಾಟಕ ರಾಜ್ಯದ ಇಪ್ಪತ್ತೆರಡು ಅಲೆಮಾರಿ ಸಮುದಾಯಗಳ ಅಧ್ಯಯನವನ್ನು ಕೈಗೊಂಡಿತು. ಈ ಅಧ್ಯಯನ ಮಾಲಿಕೆಯ ಮುಖ್ಯ ಉದ್ದೇಶ ಸಮುದಾಯಗಳ ಅನನ್ಯತೆ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಇತ್ಯಾದಿ ರಂಗಗಳಲ್ಲಿ ನೈಜ ಸ್ಥಿತಿಗತಿಗಳನ್ನು ವೈಜ್ಞಾನಿಕವಾಗಿ ದಾಖಲಿಸುವುದಾಗಿದೆ. ಸಮುದಾಯಗಳಿಗಿರುವ ಕೀಳರಿಮೆಯನ್ನು ಹೋಗಲಾಡಿಸಲು ಅವರಲ್ಲಿರುವ ಮಾನವೀಯ ಮೌಲ್ಯಗಳ ಮೇಲೆ ಬೆಳಕು ಚೆಲ್ಲುವುದು ಮತ್ತು ಇಂದಿನ ಜ್ವಲಂತ ಸಮಸ್ಯೆಗಳನ್ನು ಗುರುತಿಸಿ ಪರಿಹಾರೋಪಯಗಳನ್ನು ಹುಡುಕುವ ಪ್ರಯತ್ನಗಳು ಈ ಮಾಲಿಕೆಗಳಲ್ಲಿ ಚೆನ್ನಾಗಿ ಮೂಡಿಬಂದಿದೆ.

2010ರಲ್ಲಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದ ಡಾ.ಗಂಗಾಧರ ದೈವಜ್ಞ ರವರ 'ಗೊಂದಲಿಗರು' ಎಂಬ ಕೃತಿಯಲ್ಲಿ ಗೊಂದಲಿಗರ ಹಿನ್ನೆಲೆ, ಜೀವನ ವಿಧಾನ ಮತ್ತು ಸಾಮಾಜಿಕತೆ, ಸಮುದಾಯದ ಆರ್ಥಿಕತೆ ಮುಂತಾದ ವಿಷಯಗಳನ್ನು ವಿವರವಾಗಿ ಕೊಟ್ಟಿದ್ದಾರೆ. 2012ರಲ್ಲಿ ಡಾ.ಭೋಜರಾಜ ಪಾಟೀಲ ರವರ 'ಹಿರೇಕೆರೂರು ತಾಲೂಕು ಗ್ರಾಮನಾಮ ಅಧ್ಯಯನ' ಎಂಬ ಪುಸ್ತಕದಲ್ಲಿ ಎಡೆಗಳನ್ನು ಕಟ್ಟಿದ ಜನಾಂಗದ ಪರಿಚಯವನ್ನೂ ಒದಗಿಸುವ ಮೂಲಕ ಜನಾಂಗೀಯ ಅಧ್ಯಯನಕ್ಕೆ ತಳಪಾಯ ಹಾಕಿರುವುದು ವಿಶೇಷ. ನೂರಮೂವತ್ತಕ್ಕೂ ಹೆಚ್ಚು ಗ್ರಾಮನಾಮಗಳಲ್ಲಿ ಇಪ್ಪತ್ತಕ್ಕೂ ಹೆಚ್ಚು ಗ್ರಾಮಗಳು ಅಲೆಮಾರಿ ಬುಡಕಟ್ಟು ಜನಾಂಗದ ಮೂಲ ನಿವಾಸಿಗಳಿಂದ ನೆಲೆಗೊಂಡಿವೆಯೆಂಬುದನ್ನು ತಿಳಿಸಿಕೊಟ್ಟಿದ್ದಾರೆ. 2013ರಲ್ಲಿ ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ಜ್ಞಾನ ಆಯೋಗದ ಸಹಯೋಗದಲ್ಲಿ ಪ್ರಕಟವಾದ ಹಾವೇರಿ ಜಿಲ್ಲಾ ಜಾನಪದ ಸರ್ವೇಕ್ಷಣೆ ಮತ್ತು ಬಹುಮುಖಿ ದಾಖಲೀಕರಣ ಎಂಬ ಯೋಜನಾ ವರದಿಯಲ್ಲಿ ಹಾವೇರಿ ಜಿಲ್ಲೆಯ ಭೌಗೋಳಿಕ ಲಕ್ಷಣಗಳು

ಸಾಂಸ್ಕೃತಿಕ ವೈಭವ, ಪಾರಂಪರಿಕತೆ, ದೇಸಿಯತೆ ಇನ್ನೂ ಮುಂತಾದ ಮಾಹಿತಿಗಳನ್ನು ಒಳಗೊಂಡ ಸಮಗ್ರ ವರದಿಯಾಗಿದೆ.

ಒಟ್ಟಿನಲ್ಲಿ ನಾನು ಆಯ್ಕೆ ಮಾಡಿಕೊಂಡ ಬುಡಕಟ್ಟು ಸಮುದಾಯಗಳ ಕುರಿತು ಇದುವರೆಗೆ ನಡೆದಿರುವ ಅಧ್ಯಯನಗಳು ಸಾಕಷ್ಟಿವೆ. ಆದರೆ ಹಾವೇರಿ ಜಿಲ್ಲೆಗೆ ಸೀಮಿತಗೊಂಡಂತೆ ಇಲ್ಲಿಯವರೆಗೆ ಯಾವುದೇ ಅಧ್ಯಯನಗಳು ನಡೆದಿಲ್ಲ. ಕೆಲವೊಂದು ಪ್ರಬಂಧ, ಪುಸ್ತಕ ಮತ್ತು ಬಿಡಿ ಲೇಖನಗಳು ಹಾವೇರಿ ಜಿಲ್ಲೆಯ ಬುಡಕಟ್ಟು ಸಮುದಾಯಗಳ ಕುರಿತು ಸಮಗ್ರ ವಿವರಣೆ ಕೊಡಲು ವಿಫಲವಾಗಿವೆ. ಆದ್ದರಿಂದ ಜಿಲ್ಲೆಯ ಬುಡಕಟ್ಟುಗಳ ಸಮಾಜಿಕತೆಯನ್ನು ಪರಿಚಯಿಸುವ ದೃಷ್ಟಿಯಿಂದ **"ಹಾವೇರಿ ಜಿಲ್ಲೆಯ ಬುಡಕಟ್ಟುಗಳ ಸಾಮಾಜಿಕ ಅಧ್ಯಯನ"** ಎಂಬ ವಿಷಯ ಕೈಗೆತ್ತಿಕೊಂಡು, ಕ್ಷೇತ್ರಕಾರ್ಯದ ಆಧಾರದ ಮೇಲೆ ಈ ಮಾಹಾ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಅಡಿ ಟಿಪ್ಪಣಿಗಳು:

1. ಹಿರೇಮಠ ಎಸ್.ಜಿ. ಪಾಶ್ಚಾತ್ಯ ಸಾಮಾಜಿಕ ಚಿಂತನೆಯ ಅಧ್ಯಯನ, 2007,ಪುಟ:34.
2. ಶಂಕರ್‌ರಾವ್ ಚ. ನ. ಸಮಾಜಶಾಸ್ತ್ರ ದರ್ಶನ ಭಾಗ–2, 2011–12, ಪುಟ; 811.
3. ಅದೇ– ಪುಟ; 811.
4. ಅದೇ– ಪುಟ; 813.
5. ಪಮ್ಮಾರ ಬಿ.ಎನ್. ಬುಡುಬುಡುಕೆಯವರು: ಒಂದು ಅಧ್ಯಯನ, 1998, ಪುಟ: 4.
6. ಶಂಕರನಾರಯಣ ತೀ.ನಂ. ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, 1982, ಪುಟ; 16.
7. ನೇಗಿನಾಳ ಎಂ.ಬಿ. ಕರ್ನಾಟಕದ ಬೇಡ ಜನಾಂಗ: ಒಂದು ಪರಿಚಯ (ಲೇಖನ) 'ಹರತಿಸಿರಿ', 1987, ಪುಟ: 327.

ಅಧ್ಯಾಯ–2

1. ಜಿಲ್ಲೆಯ ಕ್ಷೇತ್ರ ಪರಿಚಯ
2. ಹಾವೇರಿ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ
3. ಹಾವೇರಿ ಜಿಲ್ಲೆಯ ಸಾಂಸ್ಕೃತಿಕ ಅನನ್ಯತೆ
4. ಜಿಲ್ಲೆಯ ಹಬ್ಬ–ಹರಿದಿನ ಮತ್ತು ಜಾತ್ರೆ ಉತ್ಸವಗಳು
5. ಸಾಮಾಜಿಕ ಹಾಗೂ ಸಾಂಸ್ಕೃತಿಕ ಪಲ್ಲಟಗಳು

ಅಧ್ಯಾಯ-2

2.1. ಜಿಲ್ಲೆಯ ಕ್ಷೇತ್ರ ಪರಿಚಯ:

ಹಾವೇರಿ ಜಿಲ್ಲೆ ಉತ್ತರ ಕರ್ನಾಟಕದ ಹೆಬ್ಬಾಗಿಲು. ಜಿಲ್ಲೆಯ ಗಡಿ ಭಾಗದಲ್ಲಿ ಹರಿಯುವ ತುಂಗಭದ್ರಾ ನದಿಯು ಇಲ್ಲಿಗೆ ಬರುವವರನ್ನು ಪ್ರೀತಿಯಿಂದ ಬರಮಾಡಿಕೊಳ್ಳುವಂತೆ ಇಲ್ಲಿಂದ ತೆರಳುವವರನ್ನೂ ಹೃದಯತುಂಬಿ ಹರಿಸಿ ಬೀಳ್ಕೊಡುತ್ತಾಳೆ. ಈ ನದಿಗೆ ಹೊಂದಿಕೊಂಡ ರಾಣೇಬೆನ್ನೂರು, ಹಾವೇರಿ ಇದರ ಸುತ್ತಲೂ ಏಳು ತಾಲ್ಲೂಕುಗಳು ಸೇರಿ ದಿ.ಜೆ.ಎಚ್.ಪಟೇಲರ ಗಟ್ಟಿತನ ಹಾಗೂ ಧೃಡ ನಿರ್ಧಾರದ ಫಲವಾಗಿ ಧಾರವಾಡ ಜಿಲ್ಲೆಯಿಂದ ಬೇರ್ಪಟ್ಟು ಹಾವೇರಿ ಜಿಲ್ಲೆ ಎಂಬ ಹೊಸ ಜಿಲ್ಲೆಯಾಗಿ ಉದಯವಾಯಿತು. ಇದು ಬಯಲುಸೀಮೆ ಹಾಗೂ ಮಲೆನಾಡಿನ ನಡುವೆ ಸೇತುವೆಯಂತಿರುವ ಅರೆಮಲೆನಾಡು ಜಿಲ್ಲೆ ಮಲೆನಾಡ ಸೆರಗಿನ ಜಿಲ್ಲೆ. ಈ ಜಿಲ್ಲೆ ಬಹಳ ಹಿಂದಿನ ಕಾಲದಿಂದಲೂ ಅನೇಕ ವೈಶಿಷ್ಟ್ಯಗಳನ್ನು, ವೈವಿಧ್ಯತೆಗಳನ್ನೂ ತನ್ನಲ್ಲಿ ಇರಿಸಿಕೊಂಡು ಬಂದಿದೆ. ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಸಾಹಿತ್ಯಿಕವಾಗಿ ತನ್ನದೇ ಆದ ಛಾಪನ್ನು ಇಟ್ಟುಕೊಂಡಿದೆ. ಇಲ್ಲಿ ಸ್ವಾತಂತ್ರ್ಯ ಹೋರಾಟದ ಕಿಚ್ಚಿದೆ, ಸಾಮಾಜಿಕ ಚಳುವಳಿಗಳ ಕಿಚ್ಚಿದೆ, ಧರ್ಮದ ಸೊಗಡಿದೆ, ಆಧ್ಯಾತ್ಮದ ಸೆಲೆ ಬತ್ತದ ತೊರೆಯಾಗಿ ಹರಿದಿದೆ, ಅನೇಕ ಜಾತಿ ಮತ ಪಂಥಗಳ ತವರು ಮನೆಯಾಗಿದೆ. ಇಲ್ಲಿ ಮೂಲ ನಿವಾಸಿಗಳಿದ್ದಾರೆ. ಜೀವನ ನಿರ್ವಹಣೆಗಾಗಿ ವ್ಯಾಪಾರ ಉದ್ಯೋಗಗಳನ್ನರಸಿ ಬಹಳ ಹಿಂದಿನ ಕಾಲದಿಂದ ವಲಸಿಗರಾಗಿ ದೇಶದ ನಾನಾ ಭಾಗಗಳಿಂದ ಬಂದ ಅಲೆಮಾರಿಗಳಿದ್ದಾರೆ. ಹೀಗೆ ಬೇರೆ ಬೇರೆ ಕಾರಣಗಳಿಂದ ಅಲೆಮಾರಿಗಳಾಗಿ ಬಂದವರಲ್ಲಿ ಅನೇಕ ಬುಡಕಟ್ಟು ಸಮುದಾಯದವರು ಹಾವೇರಿ ಜಿಲ್ಲೆಯಲ್ಲಿ ಬೇರೆ ಬೇರೆ ತಾಲ್ಲೂಕುಗಳಲ್ಲಿ ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಅಲ್ಲಲ್ಲಿ ಕಾಣಸಿಗುತ್ತಾರೆ. ಇಂದಿನ ಆಧುನಿಕತೆಯಲ್ಲಿ ತಮ್ಮ ಮೂಲ ಸಂಸ್ಕೃತಿ, ಧರ್ಮ, ನಂಬಿಕೆ, ಆಚಾರ, ವಿಚಾರ, ಪದ್ದತಿ, ಸಂಪ್ರದಾಯಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಕೆಲವರು ಸಮಾಜದ ಮುಖ್ಯವಾಹಿನಿಯಲ್ಲಿ ನಿಧಾನವಾಗಿ ಈಗಾಗಲೆ ಸೇರ್ಪಡೆಗೊಂಡಿದ್ದಾರೆ. ಇನ್ನು ಕೆಲವರು ಸರಕಾರದ ನಿರ್ಲಕ್ಷದಿಂದಾಗಿಯೋ ಇಲ್ಲವೇ, ತಮ್ಮ ಮೂಲ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ಮನಸ್ಸಿನಿಂದ ಸಮಾಜದ ಮುಖ್ಯವಾಹಿನಿಯಿಂದ ದೂರ ಉಳಿದಿದ್ದಾರೆ. ಇಂಥಹವರಲ್ಲಿ ಹೆಸರಿಸಬಹುದಾದ ನಮ್ಮ ಹಾವೇರಿ ಜಿಲ್ಲೆಯಲ್ಲಿ ಕಂಡುಬರುವ ಬುಡಕಟ್ಟುಗಳೆಂದರೆ ವ್ಯಾದರು/ಬೇಡರು, ಮೇದರು, ಹೆಳವರು, ಸುಡುಗಾಡು ಸಿದ್ದರು, ದುರುಗಮುರುಗಿಯರು, ಹಕ್ಕಿಪಿಕ್ಕಿಯರು, ಇತ್ಯಾದಿ. ಇವರೆಲ್ಲ ಒಂದು ಕಾಲಕ್ಕೆ ದೇಶದ ನಾನಾ ಭಾಗಗಳಲ್ಲಿ ಸುಸಂಘಟಿತರಾಗಿ ಬದುಕು ಸಾಗಿಸುತ್ತಿದ್ದು, ಸಾರ್ವಭೌಮತ್ವಕ್ಕಾಗಿ ನಿರಂಕುಶತ್ವಕ್ಕಾಗಿ ನಡೆದ ಅನೇಕ ವರ್ಗ ಸಂಘರ್ಷಗಳ ದಾಳಿಗೆ ತುತ್ತಾಗಿ ತಮ್ಮ ಅಸ್ತಿತ್ವದ

ಉಳುವಿಗಾಗಿ, ಮುಂದಿನ ಭವಿಷ್ಯದ ಬದುಕಿಗಾಗಿ ದೇಶದ ನಾನಾ ಭಾಗಗಳಿಂದ ಸುರಕ್ಷಿತ ತಾಣವನ್ನು ಅರಸಿ ಬಂದವರು ಹಾಗೂ ಇಲ್ಲಿಯೇ ನೆಲೆ ನಿಂತವರು. ಇನ್ನೂ ಕೆಲವರು ಅರೆ-ಅಲೆಮಾರಿಗಳು. ಇಂತಹವರ ಸಾಮಾಜಿಕ, ಸಾಂಸ್ಕೃತಿಕ ಜೀವನ ಕುರಿತಾದ ಅಧ್ಯಯನವೇ ಬುಡಕಟ್ಟು ಅಧ್ಯಯನ.

2.2.1. ಜನಸಂಖ್ಯೆ:

ಹಾವೇರಿ ಜಿಲ್ಲೆಯು ಕರ್ನಾಟಕ ರಾಜ್ಯದ ಉತ್ತರ ಭಾಗದಲ್ಲಿದ್ದು, ಈ ಜಿಲ್ಲೆಯ ಉತ್ತರಕ್ಕೆ ಧಾರವಾಡ ಮತ್ತು ಗದಗ ಜಿಲ್ಲೆ, ದಕ್ಷಿಣಕ್ಕೆ ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆ, ಪಶ್ಚಿಮಕ್ಕೆ ಉತ್ತರ ಕನ್ನಡ ಜಿಲ್ಲೆ ಮತ್ತು ಪೂರ್ವಕ್ಕೆ ಬಳ್ಳಾರಿಯ ಗಡಿಗಳನ್ನು ಕಾಣಬಹುದು. ಈ ಜಿಲ್ಲೆಯು ಏಳು ತಾಲೂಕಗಳನ್ನು ಒಳಗೊಂಡಿದೆ. ಇದರ ವಿಸ್ತೀರ್ಣವು 4,848 ಚ.ಕಿ.ಮೀ ಇದ್ದು, ರಾಜ್ಯ ವಿಸ್ತೀರ್ಣದ ಶೇ. 2.53ರಷ್ಟು ಇದೆ. ಆಡಳಿತ ವಿಕೇಂದ್ರಿಕರಣದ ದೃಷ್ಟಿಯಿಂದ ಜಿಲ್ಲೆಯಲ್ಲಿ ಎರಡು ಕಂದಾಯ ಉಪ ವಿಭಾಗಗಳು ಇದ್ದು, ಹಾವೇರಿ ಉಪ ವಿಭಾಗಕ್ಕೆ ಹಾವೇರಿ, ಬ್ಯಾಡಗಿ, ಹಿರೇಕೆರೂರು ಮತ್ತು ರಾಣೇಬೆನ್ನೂರು ತಾಲೂಕುಗಳು ಹಾಗೂ ಸವಣೂರು ಉಪವಿಭಾಗಕ್ಕೆ ಶಿಗ್ಗಾಂವ, ಹಾನಗಲ್ ಮತ್ತು ಸವಣೂರು ತಾಲೂಕುಗಳು ಸೇರಿವೆ. 2011 ರ ಜನಗಣತಿಯ ಪ್ರಕಾರ 696 ಜನವಸತಿ ಇರುವ ಗ್ರಾಮಗಳು, ಏಳು ಜನವಸತಿ ಇಲ್ಲದ ಗ್ರಾಮಗಳಿವೆ. ಈ ಜಿಲ್ಲೆಯ ಒಟ್ಟು ಜನಸಂಖ್ಯೆ 15,97,668, ಇದ್ದು (2011ರ ಜನಗಣತಿ) ಇದರಲ್ಲಿ ಪುರುಷರು 8,19,128 ಹಾಗೂ ಮಹಿಳೆಯರು 7,78,540. ಜಿಲ್ಲೆಯ ಜನಸಾಂದ್ರತೆ ಪ್ರತಿ ಚ.ಕಿ.ಮಿ.ಗೆ 331 ಇದ್ದು, ರಾಜ್ಯದ ಜನಸಾಂದ್ರತೆ 319ಕ್ಕಿಂತ ಹೆಚ್ಚಿಗೆ ಇದೆ. ಜಿಲ್ಲೆಯಲ್ಲಿ ಸಾಕ್ಷರತಾ ಪ್ರಮಾಣವು ಶೇ 77.4 ಇದ್ದು, ಗಂಡಸರಲ್ಲಿ 84.0% ಮತ್ತು ಹೆಂಗಸರಲ್ಲಿ 70.5% ಇರುತ್ತದೆ. 2011ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆಯು ಶೇ 13.8 ಇದ್ದು, ಪರಿಶಿಷ್ಟ ಪಂಗಡದ ಜನಸಂಖ್ಯೆಯು 8.8% ಇರುತ್ತದೆ (ಹೆಚ್ಚಿನ ಮಾಹಿತಿಗಾಗಿ ಕೆಳಗಿನ ಕೋಷ್ಟಕಗಳನ್ನು ಗಮನಿಸಿ). ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಸಂಖ್ಯೆಯು ಶೇ 22.62 ರಷ್ಟು ಇರುತ್ತದೆ. ಹಾವೇರಿ ಜಿಲ್ಲೆಯು ಅನೇಕ ಪುಣ್ಯ ಕ್ಷೇತ್ರಗಳನ್ನು ಹಾಗೂ ಪ್ರೇಕ್ಷಣಿಯ ಸ್ಥಳಗಳನ್ನು ಹೊಂದಿದೆ. ಪ್ರಸ್ತುತ ಜಿಲ್ಲೆಯಲ್ಲಿ ಹಿಂದೂ, ಮುಸ್ಲಿಂ ಜೈನ, ಕ್ರೈಸ್ತ ಧರ್ಮಕ್ಕೆ ಸೇರಿದ ಜನ ಸಮುದಾಯಗಳನ್ನು ಕಾಣಬಹುದಾಗಿದೆ.

ಕೋಷ್ಟಕ-1

ಹಾವೇರಿ ಜಿಲ್ಲೆಯ ಜನಸಂಖ್ಯೆ ಮತ್ತು ಆಯ್ದ ಸೂಚಿಗಳು

ಕ್ರ.ಸಂ.	ವಿವರಗಳು	ಹಾವೇರಿ	ಕರ್ನಾಟಕ
01	ಭೌಗೋಳಿಕ ಪ್ರದೇಶ (ಚ.ಕಿ.ಮೀ)	4823.00	191791.0
02	ಒಟ್ಟು ಜನಸಂಖ್ಯೆ	2.62%	6,10,95297
03	ಜನಸಂಖ್ಯೆ ದಶಕವಾರು	1,597669 (11.02%)	15,60%
04	ಪರಿಶಿಷ್ಟ ಜಾತಿ	2.1%	1,04,74992 (17.1%)
05	ಪರಿಶಿಷ್ಟ ಪಂಗಡ	3.3%	42,48,987 (6.9%)
06	ಜನಸಾಂದ್ರತೆ.(ಪ್ರ.ಚ.ಕಿ.ಮೀ)	331	319
07	ಲಿಂಗಾನುಪಾತ(ಪ್ರತಿ ಸಾವಿರ)	950	973
08	ಸಾಕ್ಷರತೆ ಪ್ರಮಾಣ	77.40	75.4%

Source-http: www.census karnataka.gov.in

ಹಾವೇರಿ ಜಿಲ್ಲೆಯ ನಕ್ಷೆ (HAVERI DISTRICT MAP)



ಕೋಷ್ಟಕ-2

2011ರ ಜನಗಣತಿ ಪ್ರಕಾರ ಹಾವೇರಿ ಜಿಲ್ಲೆಯಲ್ಲಿನ ತಾಲೂಕುವಾರು ಪರಿಶಿಷ್ಟ ಪಂಗಡದ ಜನಸಂಖ್ಯೆ

ಕ್ರ.ಸಂ	ತಾಲೂಕುಗಳು	ಒಟ್ಟು ಜನಸಂಖ್ಯೆ	ಪ್ರತಿಶತ	ಗ್ರಾಮೀಣ			ನಗರ		
				ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು
1	ರಾಣೇಬೆನ್ನೂರು	27898	8.32	22477	11439	11038	5421	2735	2686
2	ಹಾವೇರಿ	24952	8.90	21637	11133	10504	3315	1654	1661
3	ಶಿಗ್ಗಾಂವ	11168	5.94	10561	5463	5098	607	293	314
4	ಸವಣೂರ	12490	7.73	11980	6218	5762	510	273	237
5	ಹಾನಗಲ್	20983	8.06	20609	10442	10167	374	173	201
6	ಬ್ಯಾಡಗಿ	19145	13.58	15767	8135	7632	3378	1641	1737
7	ಹಿರೇಕೆರೂರು	24744	10.71	23218	11750	11468	1526	760	766
8	ಒಟ್ಟು	141380	8.85	126249	64580	61669	15131	7529	7602

Source-Haveri District Population Data-2011 Census.

ಹಾವೇರಿ ಜಿಲ್ಲೆಯಲ್ಲಿನ ತಾಲೂಕುಗಳು



2.1.2 ಭೌಗೋಳಿಕ ಪರಿಸರ:

ಒಂದು ಭೂ ಪ್ರದೇಶದ ಅಧ್ಯಯನ ಅವಶ್ಯಕವಾಗಿ ಅಲ್ಲಿ ವಾಸಿಸುವ ಜನತೆಯ ಅಧ್ಯಯನವಾಗಿದ್ದರೂ ಅಲ್ಲಿಯ ಮಾನವನ ಸಾಮಾಜಿಕ-ಸಾಂಸ್ಕೃತಿಕ ಚರಿತ್ರೆಯ ಜೊತೆಗೆ ಭೌಗೋಳಿಕ ಪರಿಸರವನ್ನು ಅಭ್ಯಸಿಸುವುದು ಅಷ್ಟೇ ಮುಖ್ಯವಾಗಿದೆ. ಒಂದು ಅಧ್ಯಯನಕ್ಕೆ ಪೂರಕವಾದ ಅಂಶಗಳನ್ನು ತಿಳಿಯಲು ಭೌಗೋಳಿಕ ಪರಿಸ್ಥಿತಿ ಮಹತ್ವದ್ದಾಗಿದೆ.

ಹಾವೇರಿ ಜಿಲ್ಲೆಯು ಏಳು ತಾಲೂಕುಗಳನ್ನು ಒಳಗೊಂಡಿದ್ದು, ಹದಿನೈದಕ್ಕೂ ಹೆಚ್ಚು ಬುಡಕಟ್ಟು ಸಮುದಾಯಗಳನ್ನು ಒಳಗೊಂಡಿದೆ. ಈ ಬುಡಕಟ್ಟಿನವರು ತಮ್ಮ ಸುತ್ತಮುತ್ತಲಿನ ಭೌಗೋಳಿಕ ಪರಿಸರಕ್ಕೆ ತಕ್ಕಂತೆ ತಮ್ಮ ಜೀವನೋಪಾಯವನ್ನು ಕಂಡುಕೊಂಡಿದ್ದಾರೆ. ಭೌಗೋಳಿಕ ವಿಸ್ತೀರ್ಣ ದೃಷ್ಟಿಯಲ್ಲಿ ಕರ್ನಾಟಕ ರಾಜ್ಯದಲ್ಲಿಯೇ ಈ ಜಿಲ್ಲೆಯು ಎಂಟನೆಯ ದೊಡ್ಡ ಜಿಲ್ಲೆಯಾಗಿದೆ. ದಿನಾಂಕ 24-8-1997ರಂದು ಹಾವೇರಿಯು ಪ್ರತ್ಯೇಕ ಜಿಲ್ಲೆಯಾಗಿ ಅಸ್ತಿತ್ವಕ್ಕೆ ಬಂತು ಮತ್ತು ಆಡಳಿತಾತ್ಮಕ ದೃಷ್ಟಿಯಿಂದ ಹಾವೇರಿ ಕೇಂದ್ರ ಸ್ಥಾನವಾಗಿದೆ.

ಹಾವೇರಿ ಜಿಲ್ಲೆಯು 4848 ಚ.ಕಿ.ಮೀ ವಿಸ್ತೀರ್ಣವನ್ನು ಹೊಂದಿದೆ ಮತ್ತು ಧಾರವಾಡದಿಂದ 150 ಕಿ.ಮೀ ದೂರದಲ್ಲಿದೆ. ಈ ಜಿಲ್ಲೆಯಲ್ಲಿ ಬರುವ ಏಳು ತಾಲೂಕುಗಳು ಹಾವೇರಿ ಜಿಲ್ಲಾ ಕೇಂದ್ರದಿಂದ 50 ಕಿ.ಮೀ ಅಂತರದೊಳಗೆ ಇರುವುದು ಕಂಡು ಬರುತ್ತದೆ. ಬ್ಯಾಡಗಿ 16 ಕಿ.ಮೀ, ಸವಣೂರು 37 ಕಿ.ಮೀ, ಶಿಗ್ಗಾಂವ 30 ಕಿ.ಮೀ, ಹಾನಗಲ್ 35 ಕಿ.ಮೀ ಹಿರೇಕೆರೂರು 50 ಕಿ.ಮೀ, ರಾಣೇಬೆನ್ನೂರು 35 ಕಿ.ಮೀ, ಹೀಗೆ ಜಿಲ್ಲಾ ಕೇಂದ್ರ ಸ್ಥಳದಿಂದ ದೂರ ಇರುವುದು ಕಂಡು ಬರುತ್ತದೆ. ಈ ಜಿಲ್ಲಾ ಕೇಂದ್ರವು ಎಲ್ಲಾ ತಾಲೂಕುಗಳ ಮಧ್ಯದಲ್ಲಿ ಇರುವುದರಿಂದ ಜಿಲ್ಲೆಯ ಸಮಸ್ತ ಅಭಿವೃದ್ಧಿಯ ಕೆಲಸಗಳು ಚುರುಕಾಗಲು ಸಾಧ್ಯವಿದೆ.

ಸಂಪರ್ಕ ವ್ಯವಸ್ಥೆ:

ಒಂದು ಜಿಲ್ಲೆ ಅಂದ ಮೇಲೆ ಅದರ ಸರ್ವತೋಮುಖ ಅಭಿವೃದ್ಧಿಗೆ ಸಂಪರ್ಕ ವ್ಯವಸ್ಥೆಯು ಮುಖ್ಯವಾಗಿ ಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಹಾವೇರಿ ಜಿಲ್ಲೆಯು ಅತ್ಯಂತ ಸಮಂಜಸವಾದ ಸಂಪರ್ಕ ಸ್ಥಳವಾಗಿದೆ. ಇಲ್ಲಿ ರಾಷ್ಟ್ರೀಯ ಹೆದ್ದಾರಿ (ಎನ್.ಹೆಚ್-4) ಹಾಗೂ ಪುಣೆ-ಬೆಂಗಳೂರು ರೈಲ್ವೆ ಮಾರ್ಗ ಹಾದು ಹೋಗಿರುವುದರಿಂದ ಕರ್ನಾಟಕ ಅಷ್ಟೇ ಅಲ್ಲದೇ, ದೇಶದ ವಿವಿಧ ಭಾಗಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಹಾಗೂ ಬಳ್ಳಾರಿ ಮತ್ತು ಕಾರವಾರ ಮಾರ್ಗ ಹಾದು ಹೋಗಿರುವುದರಿಂದ, ಆ ಜಿಲ್ಲೆಗಳೊಂದಿಗೆ ಒಳ್ಳೆ ವ್ಯವಹಾರ ಸಂಬಂಧವನ್ನು ಈ ಜಿಲ್ಲೆ ಹೊಂದಿದೆ.

ಇಲ್ಲಿ ಬುಡಕಟ್ಟುಗಳು ಸಾಕಷ್ಟು ಕಂಡು ಬಂದರು, ಆ ಬುಡಕಟ್ಟಿನ ಜನರು ವಾಸಿಸುವ ಸ್ಥಳಗಳಿಗೆ ಇನ್ನೂ ಸರಿಯಾದ ಸಂಪರ್ಕ ವ್ಯವಸ್ಥೆ ಇರುವುದಿಲ್ಲ. ಬಹಳಷ್ಟು ಸ್ಥಳಗಳಿಗೆ ಕಚ್ಚಾ ರಸ್ತೆಗಳೂ ಇವೆ. ಎಲ್ಲೋ ಬೆರಳಣಿಕೆಯಷ್ಟು ರಸ್ತೆಗಳು ಮಾತ್ರ ಡಾಂಬರಿಕರಣವಾಗಿದ್ದು, ಅವು ಅರ್ಧಂಬರ್ಧವಾಗಿರುವುದು ಕಂಡು ಬರುತ್ತದೆ. ಹೀಗೆ ಸಾರಿಗೆ ವ್ಯವಸ್ಥೆ ಸರಿಯಾದ ರೀತಿಯಲ್ಲಿ

ಇಲ್ಲದ್ದರಿಂದ ಪ್ರತಿಯೊಂದು ಕ್ಷೇತ್ರದಲ್ಲಿ ಬುಡಕಟ್ಟಿನ ಜನರು ಹಿಂದುಳಿದಿರುವುದು ಇಲ್ಲಿ ಕಂಡು ಬರುತ್ತದೆ.

ರಾಜ್ಯ ರಸ್ತೆ ಸಂಪರ್ಕದೊಂದಿಗೆ ಅಂಚೆ ಮತ್ತು ತಂತಿ, ದೂರವಾಣಿ, ದೂರದರ್ಶನಗಳಿಂದ ಸಂಪರ್ಕ ಸೌಲಭ್ಯಗಳನ್ನು ಹೊಂದಿರುವ ಈ ಜಿಲ್ಲೆಯು ವ್ಯಾಪಾರ, ವಾಣಿಜ್ಯ, ರಾಜಕೀಯ ಚಟುವಟಿಕೆಗಳ, ಉದ್ಯಮಗಳ ದೃಷ್ಟಿಯಿಂದ ಹಾವೇರಿ ಕೇಂದ್ರ ಸ್ಥಾನವಾಗಿದೆ. ಆದರೆ ಇಲ್ಲಿಯ ಬುಡಕಟ್ಟಿನ ಜನರು ಅಂಚೆ ಮತ್ತು ತಂತಿ ದೂರವಾಣಿ, ದೂರದರ್ಶನಗಳಂತಹ ಸಂಪರ್ಕ ಸೌಲಭ್ಯಗಳಿಂದ ವಂಚಿತವಾಗಿರುವುದು ಕಂಡು ಬರುತ್ತದೆ.

ವ್ಯವಸಾಯ:

ಹಾವೇರಿ ಜಿಲ್ಲೆಯ ಬಹಳಷ್ಟು ಸಂಖ್ಯೆಯ ಬುಡಕಟ್ಟಿನ ಜನರು ಕೃಷಿಯನ್ನು ಅವಲಂಬಿಸಿದ್ದಾರೆ. ವ್ಯವಸಾಯಕ್ಕೆ ಭೂಮಿ ಇಲ್ಲದಿದ್ದರೂ, ಇದ್ದವರ ಹೊಲ-ಮನೆಗಳಲ್ಲಿ ವ್ಯವಸಾಯಕ್ಕೆ ಸಂಬಂಧವಾದ ಚಟುವಟಿಕೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಇಲ್ಲಿಯ ಭೂ ಭಾಗ ಮಲೆನಾಡು ಮತ್ತು ಬಯಲು ಪ್ರದೇಶವನ್ನು ಹೊಂದಿದ್ದು, ಹಾವೇರಿಯ ಪಶ್ಚಿಮಕ್ಕೆ ಹೋದಂತೆ ಮಳೆ ಹೆಚ್ಚಾದರೆ ಪೂರ್ವಕ್ಕೆ ಮಳೆ ಕಡಿಮೆಯಾಗುತ್ತದೆ. ಹಾವೇರಿ ಮತ್ತು ರಾಣೇಬೆನ್ನೂರು ತಾಲೂಕುಗಳ ಸುತ್ತಮುತ್ತಲಿನ ಪ್ರದೇಶದಲ್ಲಿ ಬೀಜ ಉತ್ಪಾದನೆ ವ್ಯಾಪಕವಾಗಿದ್ದು, ಈ ಪ್ರದೇಶವನ್ನು ಜನರು "ಬೀಜೋತ್ಪಾದನೆಯ ಕಾಶಿ" ಎಂದು ಕರೆಯುತ್ತಾರೆ. ಸವಣೂರಿನಿಂದ ರಫ್ತಾಗುವ ವೀಳ್ಯದೆಲೆ, ಬ್ಯಾಡಗಿ ಮೆಣಸಿನಕಾಯಿ, ಹಾವೇರಿ ಯಾಲಕ್ಕಿ ದೇಶ ವಿದೇಶಗಳಲ್ಲಿ ಖ್ಯಾತಿಯನ್ನು ಪಡೆದಿವೆ.

ಈ ಜಿಲ್ಲೆಯ ಸಮಸ್ತ ರೈತರಿಗೆ ವಿವಿಧ ರೀತಿಯಲ್ಲಿ ತರಬೇತಿ ನೀಡುವ ಹಾಗೂ ಕೃಷಿ ಸಂಶೋಧನೆ ನಡೆಸುವ ಕೃಷಿ ಸಂಶೋಧನಾ ಕೇಂದ್ರ ಹನುಮನಮಟ್ಟಿಯಲ್ಲಿ ಇದ್ದು ಮತ್ತು ದೇವಿ ಹೊಸೂರಿನಲ್ಲಿ 1914ರಲ್ಲಿ ಸ್ಥಾಪನೆಯಾದ ಕೃಷಿ ಪಾಠಶಾಲೆಯಿದೆ. ಹಾಗೂ ಕೇರಿ ಮತ್ತು ಹಳ್ಳಿಯಲ್ಲಿ ರೈತರಿಗೆ ತರಬೇತಿ ನೀಡುವ ಕೇಂದ್ರವಿದೆ. ಇಂತಹ ಕೃಷಿ ಅಭಿವೃದ್ದಿಗೆ ಒತ್ತು ನೀಡುವ ಹಲವಾರು ಕೇಂದ್ರಗಳು ಈ ಜಿಲ್ಲೆಯಲ್ಲಿ ಇರುವುದು ಕಂಡುಬರುತ್ತದೆ. (ಕೃಷಿ ಹಾಗೂ ತೋಟಗಾರಿಕೆಯ ಕ್ಷೇತ್ರದಲ್ಲಿ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ) ಆದರೆ ಈ ಕೃಷಿ ಸೌಲಭ್ಯವು ಜಿಲ್ಲೆಯ ಬುಡಕಟ್ಟಿನವರಿಗೆ ಸರಿಯಾದ ರೀತಿಯಲ್ಲಿ ಮುಟ್ಟದೆ, ಅದರಿಂದ ವಂಚಿತರಾಗಿದ್ದಾರೆ ಮತ್ತು ಈ ತರಬೇತಿ ಕೇಂದ್ರಗಳ ಸರಿಯಾದ ಮಾಹಿತಿಯೇ ಅವರಿಗೆ ತಿಳಿಯದಾಗಿರುವುದು ತುಂಬಾ ಶೋಚನೀಯ ಸಂಗತಿಯಾಗಿದೆ.

ಮುಖ್ಯ ಬೆಳೆಗಳು:

ಭತ್ತ, ಜೋಳ, ಗೋಧಿ, ಮುಸುಕಿನ ಜೋಳ, ಹತ್ತಿ, ಸಾಸವಿ, ಸೂರ್ಯಕಾಂತಿ ಮೆಣಸಿನಕಾಯಿ, ಕಬ್ಬು ಇತ್ಯಾದಿಗಳು.

ನೀರಾವರಿ:

ಹಾವೇರಿ ಜಿಲ್ಲೆಯ ಪೂರ್ವಕ್ಕೆ ತುಂಗಭದ್ರಾ ನದಿಯ 109 ಕಿ.ಮೀ, ಪಶ್ಚಿಮಕ್ಕೆ ವರದಾ ನದಿಯು 94 ಕಿ.ಮೀ, ಧರ್ಮಾನದಿಯು 35 ಕಿ.ಮೀ ಹಾಗೂ ಕುಮದ್ವತಿ ನದಿಯು 38 ಕಿ.ಮೀ ಹರಿಯುತ್ತಿದ್ದು, ಈ ನದಿಗಳ ನೀರಿನಿಂದ ಹಾಗೂ ಸಾಕಷ್ಟು ಪ್ರಮಾಣದಲ್ಲಿ ಕೆರೆ, ಬಾವಿ, ಕೊಳವೆ ಬಾವಿಗಳಿಂದ ನೀರಾವರಿ ಕ್ಷೇತ್ರವನ್ನು ಗಣನೀಯವಾಗಿ ಹೆಚ್ಚಿಸಿಕೊಂಡು ವಾಣಿಜ್ಯ ಮತ್ತು ಆಹಾರ ಬೆಳೆಗಳ ಪ್ರಮಾಣವನ್ನು ಹೆಚ್ಚಿಸಿಕೊಳ್ಳಲಾಗಿದೆ.

ಈ ಜಿಲ್ಲೆಯ ತಾಲೂಕುಗಳಲ್ಲಿ ಸಣ್ಣಪುಟ್ಟ ನೀರಾವರಿ ಯೋಜನೆಯು ಕಾರ್ಯಗತವಾಗಿದ್ದರೂ ಹಿರೇಕೆರೂರು, ರಾಣೇಬೆನ್ನೂರು, ಹಾನಗಲ್ಲ, ಹಾವೇರಿ ಪ್ರದೇಶಗಳ ಸುಮಾರು 86,345 ಹೆಕ್ಟೇರ ಪ್ರದೇಶದಲ್ಲಿ ನೀರಾವರಿ ಒದಗಿಸುವ ತುಂಗಾ ಮೇಲ್ದಂಡೆ ಯೋಜನೆ ಹಾಗೂ ಹಾವೇರಿ, ಹಾನಗಲ್, ಬ್ಯಾಡಗಿ ತಾಲೂಕುಗಳ ಐದು ಸಾವಿರ ಎಕರೆ ಪ್ರದೇಶಕ್ಕೆ ನೀರಾವರಿ ಯೋಜನೆಗಳು ಕಾರ್ಯಗತಗೊಂಡಿರುವ ಕಾರಣ, ಮುಂದಿನ ದಿನಗಳಲ್ಲಿ ಹಾವೇರಿ ಜಿಲ್ಲೆ ರಾಜ್ಯದಲ್ಲಿ ಮಾದರಿ ಜಿಲ್ಲೆಯಾಗುವುದರಲ್ಲಿ ಸಂಶಯವಿಲ್ಲ. ಇದರಿಂದ ಬುಡಕಟ್ಟು ಜನರಿಗೆ ಉದ್ಯೋಗ ಸೃಷ್ಟಿಯಾಗಿ, ಕೂಲಿನಾಲಿ ಮಾಡಿ ಎರಡು ಹೊತ್ತು ಸರಿಯಾದ ಊಟ ಸಿಗುವಂತಾಗಬಹುದೆಂಬ ಆಶಯ.

ಕೈಗಾರಿಕೆ ಅಭಿವೃದ್ಧಿ:

ಹಾವೇರಿ ಜಿಲ್ಲೆಯಲ್ಲಿ ಗೃಹ ಹಾಗೂ ಸಣ್ಣಪ್ರಮಾಣದ ಕೈಗಾರಿಕೆಗಳ ಬೆಳವಣಿಗೆಯು ವ್ಯಾಪಕವಾಗಿ ಅಭಿವೃದ್ಧಿಗೊಂಡಿದೆ. ಹತ್ತಿ, ಎಣ್ಣೆ, ಅಕ್ಕಿ ಗಿರಣಿಗಳು ಇವೆ. ಇಲ್ಲಿಯ ಪರಿಷ್ಕರಣಗೊಂಡ ಏಲಕ್ಕಿ ಹೊರದೇಶಕ್ಕೆ ರಫ್ತಾಗುತ್ತದೆ. ಅಲ್ಲದೆ ಕೈಮಗ್ಗದ ಹಲವಾರು ಕೈಗಾರಿಕೆಗಳು ಇವೆ. ಹಾವೇರಿಯ ಕರ್ನಾಟಕ ಸಕ್ಕರೆ ಕಾರ್ಖಾನೆ ಜಿಲ್ಲೆಯ ಸಹಕಾರ ಕ್ಷೇತ್ರದಲ್ಲಿರುವ ಏಕೈಕ ಸಕ್ಕರೆ ಕಾರ್ಖಾನೆಯಾಗಿದ್ದು ಇದು ಇಂದು ಪ್ರತಿದಿನ 1800 ಮೆಟ್ರಿಕ್ ಟನ್ ಕಬ್ಬನ್ನು ಅರೆಯುವ ಸಾಮಾರ್ಥ್ಯವನ್ನು ಹೊಂದಿದೆ. ಅಲ್ಲದೆ ಶೇಂಗಾ ಎಣ್ಣೆ ತೆಗೆಯುವ ಮಿಲ್ಲುಗಳು, ಹಂಚಿನ ಕೈಗಾರಿಕೆ, ಅಕ್ಕಿ ಗಿರಣಿಗಳು ಕಾರ್ಯನಿರ್ವಹಿಸುತ್ತವೆ. ಹೀಗೆ ಈ ಕೈಗಾರಿಕೆಗಳಲ್ಲಿ ಬುಡಕಟ್ಟಿನ ಜನರು ಕೂಲಿ ರೂಪದಲ್ಲಿ ಉದ್ಯೋಗವನ್ನು ಕೈಗೊಂಡಿದ್ದಾರೆ. ಹಂಚಿನ ಕೈಗಾರಿಕೆಯಲ್ಲಿ ಸುತ್ತಮುತ್ತಲಿನ ಬುಡಕಟ್ಟಿನ ಜನರು ಬಹಳಷ್ಟು ಪ್ರಮಾಣದಲ್ಲಿ ದುಡಿಮೆಯಲ್ಲಿ ತೊಡಗಿರುವುದು ಕ್ಷೇತ್ರ ಕಾರ್ಯದ ಮೂಲಕ ಕಂಡುಬರುತ್ತದೆ.

ಅರಣ್ಯ ಸಂಪತ್ತು:

ಜಿಲ್ಲೆಯ ಪ್ರತೀ ತಾಲೂಕಿನಲ್ಲಿ ಅರಣ್ಯ ಸಂಪತ್ತು ಸಾಕಷ್ಟು ಪ್ರಮಾಣದಲ್ಲಿ ಇದೆ. ರಾಣೇಬೆನ್ನೂರು ತಾಲೂಕಿನಲ್ಲಿ ಇರುವ ಅರಣ್ಯ ಪ್ರದೇಶವು ತುಂಬಾ ವಿಸ್ತಾರವಾಗಿರುವುದು ಕಂಡುಬರುತ್ತದೆ. ಅದು 9968 ಹೆಕ್ಟೇರುಗಳಷ್ಟಿದೆ. ಜಿಲ್ಲೆಯ ಎಲ್ಲಾ ಅರಣ್ಯಗಳಲ್ಲಿ ನಾನಾ ತರಹದ ಗಿಡಮರಗಳು ಇವೆ. ಗೆಬ್ಬಳ, ದಿಂಡುಗ, ಹುರುಗಲು, ನೇರಳೆ, ನೀಲಗಿರಿ, ಮುತ್ತುಗ,

ನಾಗಸಂಪಿಗೆ, ಹೊನ್ನೆ, ಜಂಬೆ, ಕರಜಾಲ, ಬಿಳಿಜಾಲ ಮುಂತಾದ ಮರಗಳನ್ನು ಜಿಲ್ಲೆಯ ಉತ್ತರ ಭಾಗಕ್ಕೆ ಬೆಳೆಸಿದರೆ, ಬಿದಿರು, ಬಳೆಬೋಗಿ ನಾಗಕೇಸರಿ, ಕಿರಲಬೋಗಿ, ನೀಲಗಿರಿ, ಕರೆಮತ್ತೆ, ಬಿಳಿಮತ್ತೆ, ಬೀಟೆ, ಸಾಗವಾನಿ, ಗಂಧ, ಮಾವು, ಗೋಡಂಬಿ, ಜಾಂಬು ಮುಂತಾದ ಹಲವು ಗಿಡಮರಗಳನ್ನು ಜಿಲ್ಲೆಯ ದಕ್ಷಿಣ ಭಾಗದಲ್ಲಿ ಕಾಣಬಹುದು.

ಇದಲ್ಲದೆ ಅರಣ್ಯಗಳಲ್ಲಿ ಕೃಷ್ಣಮೃಗ, ಸಾರಂಗ, ಜಿಂಕೆ, ಮೊಲ, ಕಾಡು ಹಂದಿ, ನರಿ, ಕರಡಿ, ಮುಂತಾದ ಪ್ರಾಣಿಗಳು ಇಲ್ಲಿ ಹೇರಳವಾಗಿ ಕಂಡು ಬರುತ್ತವೆ. ಈ ಎಲ್ಲಾ ಕಾಡುಗಳ ಸುತ್ತಮುತ್ತಲಿನ ಬುಡಕಟ್ಟಿನ ಜನರು ಕಾಡಿನಿಂದ ಅನೇಕ ಉಪಯೋಗಗಳನ್ನು ಪಡೆದಿದ್ದಾರೆ. ಬುಡಕಟ್ಟು ಜನರು ಮೂಲತಃ ಅರಣ್ಯವಾಸಿಗಳು, ಕಾಡಿನ ಮಕ್ಕಳು. ಕಾಡಿನ ಉತ್ಪನ್ನಗಳು ಅವರ ಜೀವನೋಪಾಯಕ್ಕೆ ಆಧಾರ. ವನದೇವತೆ ಅವರಿಗೆ ಪೂಜನೀಯವಾದ ಆರಾಧ್ಯ ದೈವ. ಕಟ್ಟಿಗೆ, ಜೇನು, ಹಣ್ಣುಹಂಪಲು, ಗಿಡಮೂಲಿಕೆಗಳು ಮುಂತಾದವು ಅವರಿಗೆ ಆದಾಯವನ್ನು ತರುವ ಮೂಲಗಳಾಗಿವೆ.

ಬೆಟ್ಟಗುಡ್ಡಗಳು: ಹಾವೇರಿ ಜಿಲ್ಲೆಯ ಅನೇಕ ಸ್ಥಳಗಲ್ಲಿ ಬೆಟ್ಟಗುಡ್ಡಗಳಿರುವುದು ಕಂಡು ಬರುತ್ತದೆ. ರಾಣೇಬೆನ್ನೂರ ತಾಲೂಕಿನಲ್ಲಿ ಐರಣಿ-ಗುಡ್ಡ, ದೇವರಗುಡ್ಡ, ಜೋಗಲ್ಲಾಪುರ ಗುಡ್ಡ, ಚಿನ್ನಮುಳಗುಂದ ಗುಡ್ಡ, ಮುಂತಾದವುಗಳು ಜಿಲ್ಲೆಯಲ್ಲಿ ಹೆಸರುವಾಸಿಯಾಗಿರುವ ಗುಡ್ಡ ಪ್ರದೇಶಗಳಾಗಿವೆ.

2.1.3. ಸಾಹಿತಿಗಳು:

ಪ್ರಾಚೀನ ಸಾಹಿತಿಗಳು: ಪ್ರಸಿದ್ಧ ಜೈನ ದಾರ್ಶನಿಕರಾದ ಜಿನಸೇನಾಚಾರ್ಯ, ಗುಣಭದ್ರಾಚಾರ್ಯ, ಅಜಿತ ಸೇನಾಚಾರ್ಯ ಇವರು ಬಂಕಾಪುರದೊಂದಿಗೆ ಸಂಬಂಧ ಹೊಂದಿದ್ದರು. ಹಾವೇರಿ ಜಿಲ್ಲೆಯ ಭಕ್ತ ಕವಿಗಳಾದ ಕನಕದಾಸ, ಸರ್ವಜ್ಞ, ಹೆಳವನಕಟ್ಟೆ ಗಿರಿಯಮ್ಮ, ಶಿಶುನಾಳ ಶರೀಫರ ಭಕ್ತಿ ಗೀತೆಗಳು ಕನ್ನಡ ಕವನ ಸಾಹಿತ್ಯಕ್ಕೆ ವಿಶೇಷ ಕೊಡುಗೆಗಳಾಗಿವೆ. ಸೇವುಣ ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ, ಕದಂಬ, ವಿಜಯನಗರ ಅರಸರಂಥ ಪ್ರಮುಖ ರಾಜ ಮನೆತನಗಳು ಆಳಿದ ಉಲ್ಲೇಖಗಳು ದೊರೆಯುತ್ತವೆ. ಶರಣರು, ದಾಸರು, ಕವಿಗಳು, ದಾರ್ಶನಿಕರು, ಸಂತರು ಉದಯಿಸಿದ ಈ ನೆಲವು ಸಾಹಿತ್ಯ ಸಂಸ್ಕೃತಿಯಿಂದ ಶ್ರೀಮಂತವಾಗಿದೆ.

ಆಧುನಿಕ ಸಾಹಿತಿಗಳು: ಆಧುನಿಕ ಕನ್ನಡ ಸಾಹಿತ್ಯದಲ್ಲಿಯೂ ಹಾವೇರಿ ಜಿಲ್ಲೆಯ ಕೊಡುಗೆ ಗಮನಾರ್ಹವಾಗಿದೆ. ಉತ್ತರ ಕರ್ನಾಟಕದ ಸಾಹಿತಿಗಳ ನೆಲೆವೀಡುಗಳಲ್ಲಿ ಹಾವೇರಿಯೂ ಒಂದಾಗಿದೆ. ಆದ್ದರಿಂದ ಇದು ಉತ್ತರ ಕರ್ನಾಟಕದ ಸಾಂಸ್ಕೃತಿಕ ಕೇಂದ್ರವಾಗಿ ಮಾರ್ಪಟ್ಟಿದೆ. ಡಾ. ಭೋಜರಾಜ ಪಾಟೀಲ, ಡಾ. ವಿನಾಯಕ ಗೋಕಾಕ, ಡಾ. ಅಮೂರ ಚಂದ್ರಶೇಖರ ಪಾಟೀಲ, ಸತೀಶ ಕುಲಕರ್ಣಿ, ಗಿರಿಜಾ ದುರ್ಗದಮಠ, ಸುಬ್ಬಣ್ಣ ರಂಗನಾಥ ಯಕ್ಕುಂಡಿ, ಎಸ್.ಎಸ್.ಬಸವನಾಳ, ಯಾಗಬಿ ವೀರಪ್ಪ, ಹೊಸಮನಿ ಸಿದ್ದಪ್ಪ, ಆರ್.ವಿ.ಕುಲಕರ್ಣಿ (ರಾ.ಕು)

ಮಹದೇವ ಬಣಕಾರ, ಗಂಗಾಧರನಂದಿ, ವಿಜಯ ಪಾಟೀಲ, ಪುಟ್ಟು ಕುಲಕರ್ಣಿ, ಕೆ.ಎಫ್.ಪಾಟೀಲ, ಟಿ.ಬಿ.ಸೊಲಬಕ್ಕನವರ, ಪ್ರೊ. ಅ.ಸಿ.ಹಿರೇಮಠ, ಚೌಡಯ್ಯ ದಾನಪುರದ ವಿರುಪಾಕ್ಷ ಒಡೆಯರ ಮತ್ತು ಸದಾಶಿವ ಒಡೆಯರ, ಜಿ.ಎಂ. ಮಠದ, ಜಿ.ಎಂ.ರಾಜಶೇಖರ, ಮುಂತಾದ ಅನೇಕ ಸಾಹಿತಿಗಳು ಹಾವೇರಿ ಜಿಲ್ಲೆಗೆ ಹೆಸರು ತಂದಿದ್ದಾರೆ. ಈ ಜಿಲ್ಲೆಯು ವೈವಿಧ್ಯಮಯ ಬರವಣಿಗೆಗಳ ಕಣಜವಾಗಿದೆ ಎನ್ನಬಹುದು. ಸಂಗೀತ ಸಾಮ್ರಟ ಪಂಚಾಕ್ಷರಿ ಗಾವಾಯಿಗಳು, ಧಾರ್ಮಿಕ ಯೋಗಿಗಳಾದ ಕುಮಾರ ಮಹಾಶಿವಯೋಗಿಗಳು, ನೆಲೆಸಿದ ಈ ನಾಡು ಪುಣ್ಯದ ಬೀಡಾಗಿದೆ.

2.2. ಹಾವೇರಿ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ

ಪ್ರಾಚೀನ ಸಾಹಿತ್ಯ ಹಾಗೂ ಶಾಸನಗಳಲ್ಲಿ ಕರ್ನಾಟಕವನ್ನು ಕುಂತಲನಾಡು, ಪುನ್ನಾಟ, ಕರ್ಣಾಟ, ಮಹಿಷಮಂಡಲ ಮುಂತಾಗಿ ಹೆಸರಿಸಲಾಗಿದೆ. ಇವು ಇಂದಿನ ಕರ್ನಾಟಕದ ವಿವಿಧ ಭಾಗಗಳಿಗೆ ಇದ್ದ ಹೆಸರುಗಳು. ಕುಂತಲನಾಡು ಉತ್ತರ ಕರ್ನಾಟಕವನ್ನು ಒಳಗೊಂಡ ಪ್ರದೇಶ. ಅದರ ವಿಸ್ತಾರ ಹಾಗೂ ಸೀಮೆ ನಿರ್ದಿಷ್ಟವಾಗಿರದಿದ್ದರೂ, ಸಾಮಾನ್ಯವಾಗಿ ತುಂಗಭದ್ರೆಯಿಂದ ಉತ್ತರಕ್ಕಿರುವ ಕನ್ನಡನಾಡು ಕುಂತಲವೆಂದು ಗುರುತಿಸಲ್ಪಟ್ಟಿದೆ. ಈ ನಾಡಿನಲ್ಲಿ ಕನ್ನಡಿಗರದೆ ಆದ ಮೊದಲ ರಾಜ್ಯ ಕದಂಬರದು. ಕದಂಬರ ಕಾಲದಲ್ಲಿ ಕನ್ನಡಿಗರಿಗೆ ರಾಜಕೀಯ ಅಧಿಕಾರ ದೊರೆಯಿತು. ಈಗಿನ ಉತ್ತರ ಕನ್ನಡ, ಶಿವಮೊಗ್ಗ, ಚಿತ್ರದುರ್ಗ, ಧಾರವಾಡ ಜಿಲ್ಲೆಯ ಭಾಗಗಳನ್ನು ಅವರು ಆಳಿದರು. ಆದರೆ ಕನ್ನಡಿಗ ರಾಜವಂಶಗಳು ಸಾಮ್ರಾಜ್ಯ ಶಾಹಿಗಳಾಗಿ ಬೆಳೆದದ್ದು ಮಾತ್ರ ಚಾಲುಕ್ಯರ ಕಾಲದಲ್ಲಿ, ಬಾದಾಮಿಯ ಚಾಲುಕ್ಯದೊರೆ ಇಮ್ಮಡಿ ಪುಲಿಕೇಶಿ ತನ್ನ ದಿಗ್ವಿಜಯಗಳಿಂದ ಇಡೀ ದಕ್ಷಿಣಾಪಥವನ್ನು ಕೈವಶ ಮಾಡಿಕೊಂಡು ಮೊದಲ ಸಾಮ್ರಾಜ್ಯವನ್ನು ಕಟ್ಟಿದನು. ಕಾವೇರಿಯಿಂದ ನರ್ಮದೆಯವರೆಗೆ ಅವನ ಸಾಮ್ರಾಜ್ಯ ವಿಸ್ತರಿಸಿತ್ತು. ಸುಮಾರು ಎರಡು ಶತಮಾನಗಳ ಕಾಲ (540 ರಿಂದ 756 ರವರೆಗೆ) ಆಳಿದ ಚಾಲುಕ್ಯರು ಮುಂದೆ ರಾಷ್ಟ್ರಕೂಟರಿಗೆ ಸೋತು ಅಧಿಕಾರ ಕಳೆದುಕೊಂಡರು. ರಾಷ್ಟ್ರಕೂಟರು ಚಾಲುಕ್ಯರ ರಾಜಕೀಯ ಉತ್ತರಾಧಿಕಾರಿಗಳು ಹಾಗೂ ಕನ್ನಡನಾಡಿನ ಸಾಂಸ್ಕೃತಿಕ ಬದುಕಿಗೂ ಉತ್ತರಾಧಿಕಾರಿಗಳಾದರು. ಈ ಕನ್ನಡಿಗ ರಾಜವಂಶ ಇಡೀ ದಕ್ಷಿಣಾಪಥವನ್ನು ಆಳಿದ್ದಲ್ಲದೇ, ಉತ್ತರ ಭಾರತದಲ್ಲೂ ತನ್ನ ಸಾಹಸವನ್ನು ಪ್ರದರ್ಶಿಸಿತು. ಗಂಗಾ ಬಯಲಿನವರೆಗೆ ಯಶಸ್ವಿಯಾದ ದಿಗ್ವಿಜಯ ಯಾತ್ರೆಯನ್ನು ರಾಷ್ಟ್ರಕೂಟ ದೊರೆಗಳಾದ ದೃವ, ಗೋವಿಂದ ಮುಂತಾದವರು ಕೈಗೊಂಡರು. ಕ್ರಿ.ಶ ಹತ್ತನೇ ಶತಮಾನದ ಕೊನೆಯ ವೇಳೆಗೆ (973) ದುರ್ಬಲರಾಗಿದ್ದ ರಾಷ್ಟ್ರಕೂಟ ಪ್ರಭುಗಳನ್ನು ಬದಿಗೆ ಸರಿಸಿ ಅವರ ಮಾಂಡಲಿಕ ದೊರೆಗಳಾಗಿದ್ದ ಚಾಲುಕ್ಯ ವಂಶಿಯರು ತಮ್ಮ ಅಧಿಕಾರವನ್ನು ಸ್ಥಾಪಿಸಿದರು. ಹೀಗೆ ತೈಲಪನಿಂದ ಚಾಲುಕ್ಯ ವಂಶದ ರಾಜ್ಯ ಪುನಃ ಸ್ಥಾಪನೆಯಾಯಿತು. ಈ ಮೂರು ರಾಜವಂಶಗಳ ಕಾಲವು ಕರ್ನಾಟಕದ ಇತಿಹಾದಲ್ಲಿ ಸಾಮ್ರಾಜ್ಯಶಾಹಿ ಯುಗ. ಈ ಕನ್ನಡಿಗ ರಾಜಮನೆತನಗಳು ಇಂದಿನ ಕರ್ನಾಟಕದ

ಮೇರೆಯನ್ನು ಮೀರಿ ವಿಸ್ತಾರವಾದ ಸಾಮ್ರಾಜ್ಯವನ್ನು ಕಟ್ಟಿ ಆಳಿದವು. ಕ್ರಿ.ಶ ಆರನೆಯ ಶತಮಾನದಿಂದ ಕ್ರಿ.ಶ. ಹನ್ನೆರಡನೆಯ ಶತಮಾನದವರೆಗೆ ರಾಜ್ಯಭಾರ ಮಾಡಿದ ಚಾಲುಕ್ಯ ಹಾಗೂ ರಾಷ್ಟ್ರಕೂಟರ ಕಾಲಾವಧಿಯು ಕರ್ನಾಟಕದ ರಾಜಕೀಯ ಹಾಗೂ ಸಾಂಸ್ಕೃತಿಕ ಇತಿಹಾಸದಲ್ಲಿ ಉಜ್ವಲವಾದ ಅವಧಿಯಾಗಿತ್ತು.

ಕರ್ನಾಟಕದ ಈ ಮೂರು ಸಾರ್ವಭೌಮ ಮನೆತನಗಳ ಕೇಂದ್ರ ಸ್ಥಾನವು ಉತ್ತರ ಕರ್ನಾಟಕದ ಬಯಲು ಸೀಮೆಯ ಪ್ರದೇಶವೇ ಆಗಿರುವದು ಗಮನಾರ್ಹ. ಮೂಲ ಚಾಲುಕ್ಯರು ಬಿಜಾಪುರ ಜಿಲ್ಲೆಯ ಬಾದಾಮಿಯನ್ನು ತಮ್ಮ ರಾಜಧಾನಿಯಾಗಿಸಿಕೊಂಡಿದ್ದರೆ, ರಾಷ್ಟ್ರಕೂಟರು ಗುಲ್ಬರ್ಗಾ ಜಿಲ್ಲೆಯ ಮಾನ್ಯಖೇಟ ಅಥವಾ ಮಳಖೇಡವನ್ನು, ಅವರ ನಂತರದ ಚಾಲುಕ್ಯರು ಬೀದರ ಜಿಲ್ಲೆಯ ಕಲ್ಯಾಣವನ್ನು ತಮ್ಮ ಕೇಂದ್ರವಾಗಿಸಿಕೊಂಡಿದ್ದರು. ಕನ್ನಡದ ಮೊದಲ ಗ್ರಂಥವೆನಿಸಿದ ಕವಿರಾಜಮಾರ್ಗದಲ್ಲಿ "ಪುಲಿಗೆರೆ (ಲಕ್ಷ್ಮೇಶ್ವರ), ಕಿಸುವೊಳಲು (ಪಟ್ಟದಕಲ್ಲು), ಕೊಪಣ(ಕೊಪ್ಪಳ) ಒಕ್ಕುಂದಗಳ ಮಧ್ಯದ ನಾಡೆ ತಿರುಳ್ಗನ್ನಡದ ನಾಡೆಂದು"[1] ಉಲ್ಲೇಖಿಸಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.

ಹಾವೇರಿ ಜಿಲ್ಲೆಯು ಮೊದಲು ಧಾರವಾಡ ಜಿಲ್ಲೆಯ ಭಾಗವಾಗಿದ್ದು, 1997 ರಲ್ಲಿ ಪ್ರತ್ಯೇಕ ಜಿಲ್ಲೆಯಾಗಿ ರಚನೆಯಾಯಿತು. ಉತ್ತರ ಕರ್ನಾಟಕವನ್ನು ಆಳಿದ ಎಲ್ಲ ಪ್ರಮುಖ ರಾಜ-ಮನೆತನಗಳ ಕುರುಹುಗಳು ಇಲ್ಲಿ ಕಂಡು ಬರುತ್ತವೆ. ಕ್ರಿ.ಶ ಏಳನೇ ಶತಮಾನದಿಂದ ಅಂದರೆ ಬಾದಾಮಿ ಚಾಲುಕ್ಯರಿಂದ ಆರಂಭಿಸಿ ಹದಿಮೂರನೆಯ ಶತಮಾನದವರೆಗೆ ಶಾಸನಗಳು ಇಲ್ಲಿ ದೊರೆತಿವೆ. ಹಾವೇರಿ ಜಿಲ್ಲೆಯು ಹಾವೇರಿ, ರಾಣೇಬೆನ್ನೂರು, ಬ್ಯಾಡಗಿ, ಹಿರೇಕೆರೂರು, ಹಾನಗಲ್ಲು, ಸವಣೂರು, ಶಿಗ್ಗಾಂವಿ ಈ ಏಳು ತಾಲೂಕುಗಳಿಂದ ಕೂಡಿದ್ದು, ಈ ಏಳು ತಾಲೂಕುಗಳ ಪ್ರದೇಶವು ಒಂದು ಆಡಳಿತ ಕ್ಷೇತ್ರವಾಗಿರಲಿಲ್ಲ. "ರಟ್ಟಪಳ್ಳಿ-70, ಇಟ್ಟಿಗೆ-30, ಬಾಸವೂರು-140, ಸತ್ತಳಿಗೆ-70, ಪಾನುಂಗಲ-500, ಪೆರಿಯಕೆರೆ-12, ಮಾಸೂರು-12, ಹೊನ್ನವತ್ತಿ-12 ಮುಂತಾದ ಕಂಪಣಗಳಿಗೆ ಈ ಪ್ರದೇಶವು ಸೇರಿತ್ತು. ಈ ಕಂಪಣಗಳು ಬನವಾಸಿ ಮಂಡಲದ ಅಂಗಗಳಾಗಿದ್ದವು"[2]. "ಜಿಲ್ಲಾ ಕೇಂದ್ರ ಸ್ಥಳವಾದ ಹಾವೇರಿ ಬಾಸವೂರು-140ರಲ್ಲಿ, ರಾಣೇಬೆನ್ನೂರು ರಟ್ಟಪಳ್ಳಿ ಕಂಪಣದಲ್ಲಿ ಸೇರ್ಪಡೆಯಾಗಿದ್ದವು. ಬಾದಾಮಿ ಚಾಲುಕ್ಯರ 17 ಶಾಸನಗಳಿಲ್ಲಿ ದೊರೆತಿವೆ. ಕರ್ನಾಟಕದಲ್ಲಿ ರಾಷ್ಟ್ರಕೂಟರಿಗೆ ಸೇರಿದ ಶಾಸನಗಳು ಒಟ್ಟು 600 ರಿಂದ 700. ಅವುಗಳಲ್ಲಿ ಹಾವೇರಿ ಜಿಲ್ಲೆಯಲ್ಲಿಯೇ 107 ಶಾಸನಗಳಿವೆ"[3].

ಕರ್ನಾಟಕವನ್ನಾಳಿದ ಚಕ್ರವರ್ತಿ ರಾಜವಂಶಗಳಿಗೆ ಹಾವೇರಿ ಜಿಲ್ಲೆಯ ಪ್ರದೇಶವು ರಾಜಧಾನಿಯಾಗಿರಲಿಲ್ಲ. ಆದರೆ ಅವರ ಪ್ರಮುಖ ಮಾಂಡಲಿಕರು ಈ ಪ್ರದೇಶದ ಅಧಿಕಾರಿಗಳಾಗಿದ್ದು ಅವರ ಆಳ್ವಿಕೆಯ ಕುರುಹುಗಳಾಗಿ ಶಾಸನಗಳು ಮತ್ತು ಅವರು ನಿರ್ಮಿಸಿದ ಸುಂದರ ದೇಗುಲಗಳು ಉಳಿದಿವೆ. ಈ ಭಾಗದ ಪ್ರಮುಖ ಮಾಂಡಲಿಕ ರಾಜರೆಂದರೆ

ಹಾನಗಲ್ಲಿನ ಕದಂಬರು. ನೂರುಂಬಾಡದ ಕದಂಬರು, ಗುತ್ತವೊಳಲಿನ ಗುತ್ತರು, ಬಂಕಾಪುರದ ಚಲ್ಲಕೇತನರು.

ಕದಂಬರು:

ಬನವಾಸಿಯ ಕದಂಬರು ಕರ್ನಾಟಕದ ಮೊದಲ ರಾಜವಂಶ. ಕ್ರಿ.ಶ. 345ರ ವೇಳೆಗೆ ಮಯೂರಶರ್ಮನಿಂದ ಕದಂಬರ ಆಳ್ವಿಕೆ ಪ್ರಾರಂಭವಾಯಿತು. ಮಯೂರಶರ್ಮನು ಪಲ್ಲವರಿಂದ ಆಕ್ರಮಿತವಾಗಿದ್ದ ಕನ್ನಡನಾಡಿನ ಭಾಗಗಳನ್ನು ಗೆದ್ದು ಸ್ವತಂತ್ರವಾದ ರಾಜ್ಯ ಕಟ್ಟಿದನು, ಅವನ ಸಂತತಿಯವರು ಕನ್ನಡಭಾಷೆ ಮತ್ತು ಸಂಸ್ಕೃತಿಯನ್ನು ಪೋಷಿಸಿದರು. ಕನ್ನಡದ ಮೊದಲ ಲಿಖಿತ ದಾಖಲೆಯೆನಿಸಿದ ಹಲ್ಮಿಡಿಶಾಸನವು ಕದಂಬ ದೊರೆ ಕಾಕುತ್ಸವರ್ಮನ ಕಾಲದ್ದಾಗಿದ್ದು ಈ ಮಾತಿಗೆ ಪುಷ್ಟಿಯನ್ನು ಕೊಡುತ್ತದೆ. ಬಾದಾಮಿಯ ಚಾಲುಕ್ಯ ರಾಜ್ಯ ಸ್ಥಾಪನೆಯಾದಾಗ ಕದಂಬರು ಸ್ವತಂತ್ರ ಅಸ್ತಿತ್ವವನ್ನು ಕಳೆದುಕೊಂಡರು.

ಬಾದಾಮಿಯ ಚಾಲುಕ್ಯರು ಕದಂಬರನ್ನು ಸೋಲಿಸಿ ಬನವಾಸಿಯನ್ನು ತಮ್ಮ ರಾಜ್ಯದಲ್ಲಿ ಸಮಾವೇಶ ಮಾಡಿದರು. ಆದರೆ ಕದಂಬ ವಂಶದ ವಿವಿಧ ಶಾಖೆಗಳು ಬೇರೆ ಬೇರೆ ಪ್ರದೇಶಗಳಲ್ಲಿ ಮಾಂಡಲಿಕರಾಗಿ 12ನೇಯ ಶತಮಾನದವರೆಗೂ ಆಳಿದರು. ಹಾವೇರಿ ಜಿಲ್ಲೆಯ ಪ್ರದೇಶದಲ್ಲಿ ಆಳಿದ ಕದಂಬ ವಂಶೀಯರೆಂದರೆ ಹಾನಗಲ್ಲಿನ ಕದಂಬರು ಮತ್ತು ನೂರುಂಬಾಡದ ಕದಂಬರು.

ಹಾನಗಲ್ಲಿನ ಕದಂಬರು:

"ಇವರು ಸುಮಾರು ಹತ್ತನೆಯ ಶತಮಾನದಿಂದ ಹದಿಮೂರನೇ ಶತಕದ ಮೊದಲ ಭಾಗದವರೆಗೆ ಬನವಾಸಿ ಮತ್ತು ಹಾನಗಲ್ಲು ಪ್ರದೇಶವನ್ನು ಆಳಿದವರು. ಈ ಕದಂಬ ಶಾಖೆಯ ಆದ್ಯ ಚಟ್ಟಯ್ಯದೇವ. ಇವನು ಆರಂಭದಲ್ಲಿ ರಾಷ್ಟ್ರಕೂಟ ಕರ್ಕನ ಆಶ್ರಿತನಾಗಿದ್ದು, ಅನಂತರ ಚಾಲುಕ್ಯ ತೈಲಪನ ಸಾಮಂತನಾಗಿ ಬನವಾಸಿ, ಸಾಂತಳಿಗೆ ಪ್ರಾಂತಗಳನ್ನು ಆಳಿದನು"[4]. ಹಾನಗಲ್ಲು ಕದಂಬರ ಶಾಖೆಯೊಂದು ಅಲ್ಪಕಾಲ ಬಂಕಾಪುರದಿಂದ ಆಳ್ವಿಕೆ ಮಾಡಿತು. ಈ ವಂಶದ ದೊರೆ ಮಯೂರವರ್ಮ ಎಂಬುವನು ಚಾಲುಕ್ಯ ಚಕ್ರವರ್ತಿ ಜಯಸಿಂಹನ ಸೋದರಿ ಅಕ್ಕಾದೇವಿಯನ್ನು ವರಿಸಿದ್ದನು. ಅಕ್ಕಾದೇವಿಯು ಬನವಾಸಿ ಮತ್ತು ಬಂಕಾಪುರವನ್ನು ಆಳಿದ ವಿಷಯ ಶಾಸನಗಳಿಂದ ತಿಳಿಯುತ್ತದೆ.

ನೂರಂಬಾಡದ ಕದಂಬರು:

ಇವರು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ತಲೆ ಎತ್ತಿ ರಟ್ಟಪಳ್ಳಿ-70 ಹಾಗೂ ಇಟ್ಟಿಗೆ-30 ಹೀಗೆ 100 ಗ್ರಾಮಗಳನ್ನು ಒಳಗೊಂಡ ಪ್ರದೇಶದಲ್ಲಿ ಆಳುತ್ತಿದ್ದರು. ರಟ್ಟೀಹಳ್ಳಿ ಇವರ ಕೇಂದ್ರ. ಚಾಲುಕ್ಯ ಸಾಮ್ರಾಟನ ಶತ್ರುವನ್ನು ಸೋಲಿಸಿ, ಶತ್ರುವಿನ ಒಂದು ಆನೆಯನ್ನು ವಶಪಡಿಸಿ ಅದನ್ನು, ಚಕ್ರವರ್ತಿಗೆ ನೀಡಿದ್ದರಿಂದ ಈ ನೂರುಂಬಾಡದ ಆಡಳಿತವನ್ನು ಬೀರದೇವನಿಗೆ ನೀಡಲಾಯಿತೆಂದು 1174 ರ ಹಿರೇಕೆರೂರು ಶಾಸನದಿಂದ ತಿಳಿಯುತ್ತದೆ. ತಾವು

ಶಾಖಾಚರೇಂದ್ರ (ಹನುಮಂತ) ಧ್ವಜರೆಂದು ಕದಂಬೇಶ್ವರನ ಪಾದಪದ್ಮಾರಕರೆಂದು ಕರೆದುಕೊಂಡಿದ್ದಾರೆ. ಕದಂಬೇಶ್ವರ ರಟ್ಟೀಹಳ್ಳಿಯಲ್ಲಿರುವ ಚಾಲುಕ್ಯ ಶೈಲಿಯ ಸುಂದರ ದೇವಾಲಯ. ಈ ಅರಸರು ಕಾಳಾಮುಖ ಶೈವರಾಗಿದ್ದರು.

ಗುತ್ತವೊಳಲಿನ ಗುತ್ತರು:

ಹಾವೇರಿ ತಾಲೂಕಿನ ಗುತ್ತವೊಳಲ್ ಅಥವಾ ಗುತ್ತಲದಿಂದ ಆಳಿದ ರಾಜವಂಶ ಗುತ್ತರು, ಇವರು ಕಲ್ಯಾಣ ಚಾಲುಕ್ಯರ ಮಾಂಡಲಿಕರಾಗಿ ಕೆಲಕಾಲ ಸ್ವತಂತ್ರರಾಗಿ, ಮುಂದೆ ದೇವಗಿರಿಯ ಸೇವಣರ ಮಾಂಡಲಿಕರಾಗಿ ಹನ್ನೆರಡನೆಯ ಶತಮಾನದ ಆದಿ ಭಾಗದಿಂದ 13ನೇ ಶತಮಾನದ ಕೊನೆಯವರೆಗೆ ಆಳಿದರು. ಇವರು ತಮ್ಮನ್ನು ಮಗಧದ ಗುಪ್ತರ ಉತ್ತರಾಧಿಕಾರಿಗಳೆಂದು, ಉಜ್ಜಯಿನಿ ಪುರವರಾಧೀಶ್ವರರೆಂದು ಕರೆದುಕೊಂಡಿದ್ದಾರೆ. ಇವರ ಶಾಸನಗಳು ಗುತ್ತಲದ ಬಳಿ ಇರುವ ಚೌಡದಾನಪುರದಲ್ಲಿ ಇವೆ. ಇಲ್ಲಿರುವ ಎಂಟು ಶಾಸನಗಳು ಕ್ಷೇತ್ರದ ಮಹಿಮೆಯನ್ನು, ಅಲ್ಲಿ ನೆಲೆಸಿದ್ದ ಮುನಿ ಶಿವದೇವನನ್ನು ಮತ್ತು ಅಲ್ಲಿ ಆಳುತ್ತಿದ್ದ ಗುತ್ತ ಅರಸರನ್ನು ಕುರಿತು ಹೇಳುತ್ತವೆ. ಕ್ರಿ.ಶ.1115ರ ಶಾಸನದಲ್ಲಿ ಗುತ್ತ ಮಲ್ಲಿದೇವನು ಚಾಲುಕ್ಯ, 6ನೇ ವಿಕ್ರಮಾದಿತ್ಯನ ಮಾಂಡಲಿಕ ಗೋಂವಿಂದರಸನ ಅಧೀನನಾಗಿದ್ದನೆಂದು ತಿಳಿಯುತ್ತದೆ. ಈತನು ಮಹಾವೀರನೆಂದು, ಅನೇಕ ಯುದ್ದಗಳನ್ನು ಗೆದ್ದವನೆಂದು ಶಾಸನಗಳು ಹೇಳಿದ್ದು, ಇವನ ಅಧಿಕಾರಿಯಾಗಿದ್ದ ಜಟಾಚೋಳನಿಂದ ಚೌಡದಾನಪುರದ ಮುಕ್ತೇಶ್ವರ ದೇವಾಲಯ ನಿರ್ಮಾಣವಾಯಿತು.

ಬಂಕಾಪುರದ ಚಲ್ಲಕೇತನರು:

ಸವಣೂರು ತಾಲ್ಲೂಕಿನ ಬಂಕಾಪುರವು ಚಲ್ಲಕೇತನ ವಂಶದ ಮಾಂಡಲಿಕ ಅರಸರ ರಾಜಧಾನಿಯಾಗಿತ್ತು, ಇವರು ರಾಷ್ಟ್ರಕೂಟ ದೊರೆಗಳ ಪ್ರಮುಖ ಮಾಂಡಲಿಕರಾಗಿದ್ದರು. ರಾಷ್ಟ್ರಕೂಟ ದೊರೆ ಅಮೋಘವರ್ಷನ ನೆಚ್ಚಿನ ಸೇನಾನಿಯಾಗಿದ್ದ ಬಂಕೇಯನ ಹೆಸರಿನಲ್ಲಿ ಅವನ ಮಗ ಲೋಕಾದಿತ್ಯನು ಬಂಕಾಪುರವನ್ನು ನಿರ್ಮಿಸಿದ್ದನು. ಇದು ಪ್ರಮುಖ ರಾಜಕೀಯ ಹಾಗೂ ಧಾರ್ಮಿಕ ಕೇಂದ್ರವಾಗಿ ಮೆರೆದಿತ್ತು. ಜೈನ ಧರ್ಮದ ಮುಖ್ಯ ತಾಣವಾಗಿತ್ತು. ಈ ಮತದ ಅಧ್ವರ್ಯುಗಳಾದ ಜಿನಸೇನಾಚಾರ್ಯ, ಗುಣಭದ್ರಾಚಾರ್ಯ, ದೇವೇಂದ್ರ ಮುನಿಗಳು ಬಂಕಾಪುರದೊಂದಿಗೆ ಸಂಬಂಧವಿರಿಸಿಕೊಂಡವರು. ಈ ಮಹಾಮಹಿಮರ ಕೃತಿಗಳು ಜೈನ ಸಾಹಿತ್ಯದಲ್ಲಿ ಅಮೂಲ್ಯವಾದವು. ಪೂರ್ವಪುರಾಣ, ಉತ್ತರ ಪುರಾಣಗಳನ್ನು ಬರೆದ ಜಿನಸೇನ ಮತ್ತು ಗುಣಭದ್ರ ಆಚಾರ್ಯರು ಈ ಊರಿನ ಸ್ಥಾಪಕ ಬಂಕೇಯರಸನ ಹಾಗೂ ಅವನ ಮಗನ ಗುರುಗಳಾಗಿದ್ದರು. ರನ್ನ, ನಾಗವರ್ಮ, ಚಾವುಂಡರಾಯನಿಗೆ ಗುರುಗಳಾಗಿದ್ದ ಅಜಿತಸೇನಾಚಾರ್ಯರು ಇದ್ದದ್ದು ಬಂಕಾಪುರದಲ್ಲಿಯೇ. ದೇವೇಂದ್ರ ಮುನಿಗಳು ಕನ್ನಡದ ಆದಿಕವಿ ಪಂಪನಿಗೆ ಗುರುಗಳಾಗಿದ್ದರು. ಗಂಗ ಅರಸ ಮಾರಸಿಂಹ ಇಲ್ಲಿಯೇ ಸಲ್ಲೇಖನದಿಂದ ಮರಣ ಹೊಂದಿದನು. ಹೊಯ್ಸಳರ ಪ್ರಸಿದ್ದ ಅರಸ ವಿಷ್ಣುವರ್ಧನ ಬಂಕಾಪುರವನ್ನು ಗೆದ್ದು

ತನ್ನ ಎರಡನೆಯ ರಾಜಧಾನಿಯಾಗಿ ಮಾಡಿಕೊಂಡಿದ್ದನು. ವಿಷ್ಣುವರ್ಧನ ಇಲ್ಲಿಯೇ ಮರಣಿಸಿದಂತೆ ತೋರುತ್ತದೆ. ಜೈನಧರ್ಮದ ಉಪಪಂಗಡವಾದ ಯಾಪನೀಯ ಈ ಪ್ರದೇಶದಲ್ಲಿ ಹೆಚ್ಚು ಜನಪ್ರಿಯವಾಗಿತ್ತು. ಸಂಗೂರು, ಹತ್ತಿಮತ್ತೂರು, ತಿಳವಳ್ಳಿ, ಬಾಳೂರು, ಯಳವಟ್ಟಿ ಮುಂತಾದ ಕಡೆಗಳಲ್ಲಿ ಬಸದಿಗಳು ಇದ್ದ ಬಗ್ಗೆ ದಾಖಲೆಗಳು ಸಿಗುತ್ತವೆ. "ರಾಣೇಬೆನ್ನೂರಿನಲ್ಲಿ ದೊರೆತ ಪ್ರಪ್ರಥಮ ಶಾಸನ ಕ್ರಿಶ 856 ರ ಕಾಲದ್ದು. ಇದು ಜೈನ ಶಾಸನವಾಗಿದೆ. 9ನೆಯ ಶತಮಾನದಲ್ಲಿಯೇ ನಾಗುಳರ ಪೊಲ್ಲಬ್ಬೆ ಎಂಬ ಓರ್ವ ಜೈನ ಮಹಿಳೆ ಇಲ್ಲಿ ಒಂದು ಜೈನ ಬಸದಿಯನ್ನು ಕಟ್ಟಿಸಿದ್ದಳೆಂಬುದು ವಿಶೇಷ"[5] ಬಂಕಾಪುರದಲ್ಲಿ ಈಗ ಉಳಿದಿರುವ ಪ್ರಸಿದ್ದ ಸ್ಮಾರಕ ನಗರೇಶ್ವರ ದೇವಾಲಯ, ನಖರರು ಅಥವಾ ವ್ಯಾಪಾರಸ್ಥರಿಂದ ನಿರ್ಮಿತವಾದ ಚಾಲುಕ್ಯ ಶೈಲಿಯ ಸುಂದರ ದೇಗುಲವಿದು.

ಪ್ರಭು ಗಾವುಂಡರು:

ಮಾಂಡಲಿಕ ಅರಸರಲ್ಲದೆ, ಅವರ ಕೈಕೆಳಗೆ ಹಲವು ಗ್ರಾಮಗಳನ್ನೊಳಗೊಂಡ ವಿಭಾಗಕ್ಕೆ ಅಧಿಕಾರಿಗಳಾಗಿದ್ದವರು ಪ್ರಭು ಗಾವುಂಡರು ಇಂತಹ ಕೆಲವು ಹೆಚ್ಚು ಪ್ರಭು ಗಾವುಂಡ ಮನೆತನಗಳ ಚರಿತ್ರೆಯನ್ನು ಶಾಸನಗಳು ಕಟ್ಟಿಕೊಡುತ್ತವೆ. "ಹಿರೇಕೆರೂರು ತಾಲೂಕಿನ ಕೋಣವತ್ತಿ ಮತ್ತು ಸಾತೇನಹಳ್ಳಿ ಗ್ರಾಮಗಳನ್ನು ಆಳಿದ ಸಾಮಂತ ಮನೆತನ ಪೃಥ್ವಿಸೆಟ್ಟಿ ಎಂಬ ವಂಶ. ಇವರು ಬನವಾಸಿ–12000 ಮಂಡಲಕ್ಕೆ ಪ್ರಸಿದ್ದಿ ಪಡೆದವರಾಗಿದ್ದರು. ಕ್ರಿ.ಶ.12ನೇ ಶತಕದ ಮಧ್ಯಭಾಗದಲ್ಲಿ ಕಲ್ಯಾಣ ಚಾಲುಕ್ಯರ ಸಾಮಂತನಾಗಿದ್ದ ತ್ರಿಭುವನಮಲ್ಲ ಪೃಥ್ವಿಸೆಟ್ಟಿ ಈ ವಂಶದ ಮೂಲಪುರುಷ"[6]. ಪರದೇಶಗಳೊಡನೆ ಸಾಗರೋತ್ತರ ವ್ಯಾಪಾರ ನಡೆಸುತ್ತಿದ್ದ ಬಣಜಿಗರು ಇವರಾಗಿದ್ದರಿಂದ ಪೃಥ್ವಿಸೆಟ್ಟಿ ಎಂಬ ಹೆಸರು ಈ ವಂಶಕ್ಕೆ ಬಂದಿರಬಹುದು. "ಈ ಪ್ರಥ್ವಿಸೆಟ್ಟಿಯ ಸೊಸೆ ವೆಣ್ಣೆಲಸೆಟ್ಟಿಕವ್ವೆ ಒಬ್ಬ ವೀರರಮಣಿ. ಸಾತೇನಹಳ್ಳಿಯ ಶಾಸನದಲ್ಲಿ ಅವಳ ಧೈರ್ಯ, ಸಾಹಸ, ಚತುರತೆಯನ್ನು ಮುಕ್ತಕಂಠದಿಂದ ಬಣ್ಣಿಸಲಾಗಿದೆ. ಅವಳ ಪತಿ ಅಕಾಲ ಮರಣ ಹೊಂದಿದ್ದರಿಂದ ವೆಣ್ಣೆಲಸೆಟ್ಟಿಕವ್ವೆ ಅಧಿಕಾರಸೂತ್ರಗಳನ್ನು ಹಿಡಿದು ಆಡಳಿತ ಮಾಡಿದಳು. ರಣರಂಗಕ್ಕಿಳಿದು ದುರ್ಗಿಯಂತೆ ಯುದ್ಧವನ್ನು ಮಾಡಿದಳೆಂದು ಶಾಸನವು ಪ್ರಶಂಸಿಸುತ್ತದೆ"[7].

ಹಾವೇರಿ:

ಶಾಸನಗಳ ಮೇರೆಗೆ ಈ ನಗರ ಪಾವರಿ, ಹಾವರಿ, ಹಾವೇರಿ ಮತ್ತು ನಳಪುರಿ ಎಂಬ ಹೆಸರಿನಿಂದ ಪ್ರಸಿದ್ದವಾಗಿತ್ತು. ರಾಷ್ಟ್ರಕೂಟ ಅರಸ 3ನೇ ಕೃಷ್ಣನ ಒಂದು ಶಾಸನದಲ್ಲಿ ಈ ನಗರದ ಮೊದಲ ಉಲ್ಲೇಖ ಸಿಗುತ್ತದೆ. "ರಾಷ್ಟ್ರಕೂಟ ದೊರೆ ನೃಪತುಂಗನ ಸೊಸೆ ಗೋವಿಂದಬ್ಬೆ ಹಾವೇರಿಯ ಬಳಿಯ ದೇವಗಿರಿಯಲ್ಲಿ ಆಳಿದ ಉಲ್ಲೇಖ ಅಲ್ಲಿಯ ಶಾಸನದಲ್ಲಿ ಬರುತ್ತದೆ. ಅವಳ ಹೆಸರಿನಲ್ಲಿ ಗೋವಿಂದೇಶ್ವರ ಎಂಬ ದೇವಾಲಯವನ್ನು ಅಲ್ಲಿಯ ಜನರು ಕಟ್ಟಿಸಿದರು. ಚಾಲುಕ್ಯ 1ನೇ ಸೋಮೇಶ್ವರನ ಕಾಲದಲ್ಲಿ ಇದು ಅಗ್ರಹಾರವಾಗಿ ಮಾರ್ಪಟ್ಟಿತು.

ಮಹಾಜನರೆಂದು ಕರೆಯಲ್ಪಡುತ್ತಿದ್ದ ನಗರ ಪ್ರತಿನಿಧಿಗಳಿಂದ ಈ ನಗರದ ಆಡಳಿತ ನಡೆಯುತ್ತಿತ್ತು"[8].

ಚಾಲುಕ್ಯ ರಾಜ್ಯದ ನಂತರದ ಅವಧಿ:

ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿ ಕಲ್ಯಾಣದ ಚಾಲುಕ್ಯ ಸಾಮ್ರಾಜ್ಯದ ಅವನತಿಯೊಂದಿಗೆ ದಕ್ಷಿಣಾಪಥದ ರಾಜಕೀಯ ಐಕ್ಯತೆ ಕೊನೆಗೊಂಡಿತು. ಚಾಲುಕ್ಯರ ಪ್ರಬಲ ಸಾಮಾಂತರಾಗಿದ್ದ ಸೇವುಣರು ಮತ್ತು ಹೊಯ್ಸಳರು ಚಾಲುಕ್ಯರ ಪ್ರದೇಶದ ಮೇಲೆ ಪ್ರಭುತ್ವಕ್ಕಾಗಿ ಪೈಪೋಟಿ ನಡೆಸಿದರು. ಈ ಸ್ಪರ್ಧೆಯು ಇಲ್ಲಿ ಆಳುತ್ತಿದ್ದ ಚಿಕ್ಕಪುಟ್ಟ ಮಾಂಡಲಿಕ ಮನೆತನಗಳ ಮೇಲೆ ಪ್ರಭಾವ ಬೀರಿತು, ಹಾವೇರಿ ಜಿಲ್ಲೆಯಲ್ಲಿ ಆಡಳಿತ ಮಾಡುತ್ತಿದ್ದ ಇಂತಹ ಮಾಂಡಲಿಕರು ಕೆಲವೊಮ್ಮೆ ಸೇವುಣರಿಗೆ, ಮಗದೊಮ್ಮೆ ಹೊಯ್ಸಳರಿಗೆ ಅಧೀನರಾಗಿ ಉಳಿದರು.

ಹೊಯ್ಸಳರ ಉತ್ತರಾಧಿಕಾರಿಗಳಾಗಿ ವಿಜಯನಗರದ ದೊರೆಗಳು ತುಂಗಭದ್ರೆಯ ದಕ್ಷಿಣಕ್ಕೆ ತಮ್ಮ ಅಧಿಕಾರ ಸ್ಥಾಪಿಸಿಕೊಂಡು, ಮುಂದೆ ಕೃಷ್ಣಾ ನದಿಯವರೆಗೆ ತಮ್ಮ ಮೇರೆಯನ್ನು ವಿಸ್ತರಿಸಿಕೊಂಡರು. ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ನಡುವಿನ ಪ್ರದೇಶವು ವಿಜಯನಗರ ಹಾಗೂ ಆದಿಲ್‌ಶಾಹಿಗಳ ನಡುವೆ ಸ್ಪರ್ಧೆಯ ಕಣವಾಗಿತ್ತು. ಈ ಪ್ರದೇಶದ ಅಧಿಕಾರವು ಪದೇ ಪದೇ ಈ ಎರಡೂ ಶಕ್ತಿಗಳಲ್ಲಿ ಕೈ ಬದಲಿಸುತ್ತಿತ್ತು. 1565ರಲ್ಲಿ ವಿಜಯನಗರವು ಪತನ ಹೊಂದಿದ ಮೇಲೆ ಬಿಜಾಪುರದ ಆದಿಲ್‌ಶಾಹಿಗಳು ಇಲ್ಲಿ ಪ್ರಭುತ್ವ ಹೊಂದಿದರು. ಹಾವೇರಿ ಜಿಲ್ಲೆಯಲ್ಲಿ ಆದಿಲ್‌ಶಾಹಿಗಳ ಆಶ್ರಯದಲ್ಲಿ ಬೆಳೆದು ಬಂದ ಸಣ್ಣ–ಪುಟ್ಟ ಹಲವು ಸಂಸ್ಥಾನಗಳಿದ್ದವು. ಉದಾಹರಣೆಗೆ ಸವಣೂರು ನವಾಬರ ಸಂಸ್ಥಾನ.

ಸವಣೂರು ಸಂಸ್ಥಾನವು ಅಫ್ಘಾನ್ ಮೂಲದ ದಿಲೇರಜಂಗ ಎಂಬ ಸರದಾರನಿಂದ ಸ್ಥಾಪಿತವಾಯಿತು. ಇವರು ಆದಿಲ್‌ಶಾಹಿಗಳ ಸೇವೆಯಲ್ಲಿದ್ದು, ಕರ್ನಾಟಕ ಸುಭಾದ ಸುಬೇಧಾರನಾಗಿ ನೇಮಿಸಲ್ಪಟ್ಟಿದ್ದನು. ಆದಿಲ್‌ಶಾಹಿ ರಾಜ್ಯವು ಮೊಗಲರಿಂದ ಕೊನೆಗೊಂಡಾಗ ಮೊಗಲ ದೊರೆ ಔರಂಗಜೇಬನು ದಿಲೇರಜಂಗನಿಗೆ ಕರ್ನಾಟಕ ಸುಭಾದ ಅಧಿಕಾರವನ್ನು ನೀಡಿದನು. ಈತ ಬಂಕಾಪುರವನ್ನು ರಾಜಧಾನಿಯಾಗಿಸಿಕೊಂಡು, ನಂತರ ಸವಣೂರು ಎಂಬ ಹೊಸ ರಾಜಧಾನಿಯನ್ನು ಕಟ್ಟಿ, ಅದನ್ನು ತನ್ನ ಆಡಳಿತ ಕೇಂದ್ರ ಮಾಡಿಕೊಂಡನು. ಸವಣೂರಿನ ನವಾಬರ ಆಳ್ವಿಕೆಗೆ ಕೃಷ್ಣಾ ತುಂಗಭದ್ರಾ ನಡುವಿನ ಹಲವು ಪ್ರದೇಶಗಳು ಒಳಪಟ್ಟಿದ್ದವು.

ಹಾವನೂರು ಸಂಸ್ಥಾನ:

ಇದು ಸವಣೂರಿನಂತೆ ಮತ್ತೊಂದು ಸಂಸ್ಥಾನವಾಗಿತ್ತು. ಬ್ರಾಹ್ಮಣ ವಂಶದವನಾದ ಹನುಮಂತಗೌಡ ಎಂಬ ನಾಯಕ ಇದನ್ನು ಸ್ಥಾಪಿಸಿ ಆಳಿದನು. ಈತನು ಗುತ್ತಲ, ಹೊನ್ನತ್ತಿಯ ಗೌಡನಾಗಿದ್ದು, ಆದಿಲ್‌ಶಾಹಿ ಸುಲ್ತಾನರ ಮೆಚ್ಚುಗೆಗೆ ಪಾತ್ರನಾಗಿ ಗುತ್ತಲ, ಹಡಗಲಿ, ರಾಣೇಬೆನ್ನೂರು, ಹಿರೇಕೆರೂರು, ಚಿಕ್ಕೇರೂರು, ಚಪ್ಪಡಿ, ತಿಳವಳ್ಳಿ, ಹೀಗೆ ಏಳು ಮಹಲುಗಳ

ಜಹಗೀರಿಯನ್ನು ಪಡೆದುಕೊಂಡಿದ್ದನು.. ಪರಮ ದೈವಭಕ್ತನೂ, ಜನಪರ ಆಡಳಿತಗಾರನೂ ಆಗಿದ್ದ ಈತನು ತನ್ನ ಶೌರ್ಯ ಸಾಹಸಗಳಿಂದಲೂ ಬಹು ಜನಪ್ರಿಯ ಆಡಳಿತಗಾರನೆನಿಸಿದ್ದನು. ಇವನ ಸಂತತಿಯವರು 1787ರವರೆಗೆ ಆಳಿದರು. ತನ್ನದೇ ಆದ ವೈಶಿಷ್ಟದಿಂದ ಸ್ವತಂತ್ರವಾಗಿ ಬದುಕಿದ ಒಂದು ಪುಟ್ಟ ಸಂಸ್ಥಾನ ಹಾವನೂರು ಸಂಸ್ಥಾನ ಟಿಪ್ಪು ಸುಲ್ತಾನನ ದಾಳಿಗೆ ಸಿಕ್ಕು ಕೊನೆಯುಸಿರು ಎಳೆಯಿತು.

ಹದಿನಂಟನೆಯ ಶತಮಾನವು ದಕ್ಷಿಣದ ರಾಜಕೀಯದಲ್ಲಿ ಗೊಂದಲದ ಅವಧಿ. ಮೊಗಲ್ ಸಾಮ್ರಾಜ್ಯ ಮರೆಯಾಗಿ ದಕ್ಷಿಣದಲ್ಲಿ ಅದರ ಸ್ಥಾನವನ್ನು ತುಂಬಲು ಮರಾಠಾ ಪೇಶ್ವೆಗಳು ಪ್ರಯತ್ನಿಸತೊಡಗಿದ್ದರು. ಮರಾಠರು, ಮೈಸೂರಿನ ಹೈದರಲಿ, ಟಿಪ್ಪು, ಕೆಳದಿ ಮತ್ತು ಚಿತ್ರದುರ್ಗದ ನಾಯಕರು ಇವರುಗಳ ನಡುವೆ ನಿರಂತರವಾಗಿ ಕದನಗಳು ನಡೆದಿದ್ದವು. ಈ ಕದನಗಳ ಪರಿಣಾಮವನ್ನು ಸವಣೂರಿನಂತಹ ಸಂಸ್ಥಾನಗಳು ಅನುಭವಿಸಬೇಕಾಯಿತು. ಮರಾಠರು ತುಂಗಭದ್ರಾ ನದಿಯವರೆಗಿನ ಪ್ರದೇಶವನ್ನು ತಮ್ಮ ಅಂಕೆಗೆ ತೆಗೆದುಕೊಂಡರು. ಅಂದರೆ ಈಗಿನ ಹಾವೇರಿ ಜಿಲ್ಲೆಯ ಪ್ರದೇಶವು ಮರಾಠಾ ಆಳ್ವಿಕೆಗೆ ಒಳಪಟ್ಟಿತು. ಪೇಶ್ವೆಯರ ಪುಣೆಯ ಸರಕಾರಕ್ಕೆ ಅಧೀನವಾಗಿ ದೇಸಾಯಿ, ದೇಶಪಾಂಡೆ ಮುಂತಾದ ಸ್ಥಳೀಯ ಅಧಿಕಾರಿಗಳು ಈ ಪ್ರದೇಶದ ಆಡಳಿತದ ಪ್ರಮುಖರಾದರು. ಸವಣೂರಿನ ನವಾಬರು ಸಹ ಮರಾಠಾ ಪ್ರಭುತ್ವವನ್ನು ಒಪ್ಪಿಕೊಂಡ ಸ್ಥಳೀಯ ದೊರೆಗಳಾದರು.

ಮುಂದೆ 1818ರಲ್ಲಿ ಮರಾಠರು ಬ್ರಿಟಿಷರೊಂದಿಗಿನ ಕದನದಲ್ಲಿ ಸಂಪೂರ್ಣವಾಗಿ ಪರಾಭವಗೊಂಡರು, ಪೇಶ್ವೆಯರ ರಾಜ್ಯವನ್ನು ಕೊನೆಗೊಳಿಸಿದ ಬ್ರಿಟಿಷರು ಪೇಶ್ವೆಗಳ ಪ್ರದೇಶವನ್ನು ಬಾಂಬೆ ಪ್ರಾಂತ್ಯಕ್ಕೆ ಸೇರಿಸಿದರು. ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳು ಧಾರವಾಡ, ಕಾರವಾರ, ವಿಜಾಪುರ, ಬೆಳಗಾವಿ, ಬಾಂಬೆ ಪ್ರಾಂತದ ಭಾಗಗಳಾದವು. ಧಾರವಾಡ ಜಿಲ್ಲೆಯ ಭಾಗವಾಗಿದ್ದ ಹಾವೇರಿಯೂ ಸಹ ಬಾಂಬೆ ಪ್ರಾಂತದಲ್ಲಿದ್ದು ನೇರವಾಗಿ ಬ್ರಿಟಿಷ್ ಆಳ್ವಿಕೆಗೆ ಒಳಪಟ್ಟಿತು. ತುಂಗಭದ್ರಾ ನದಿಯವರೆಗಿನ ಪ್ರದೇಶವು ಬಾಂಬೆ ಪ್ರಾಂತದ ಗಡಿಯಾಗಿತ್ತು. ಬ್ರಿಟಿಷ್ ಅಧಿಕಾರಿಗಳು ಈ ನಾಲ್ಕು ಕರ್ನಾಟಕದ ಜಿಲ್ಲೆಗಳನ್ನು ದಕ್ಷಿಣ ಮಹಾರಾಷ್ಟ್ರ ಎಂದೆ ಗುರುತಿಸಿದ್ದರು.

ಬ್ರಿಟಿಷ್ ಆಳ್ವಿಕೆಗೆ ಒಳಪಟ್ಟಿದ್ದ ಉತ್ತರ ಕರ್ನಾಟಕದ ಜಿಲ್ಲೆಗಳು ಇತರ ಪ್ರದೇಶಗಳಿಗಿಂತ ಶೈಕ್ಷಣಿಕವಾಗಿ ಹೆಚ್ಚು ಪ್ರಗತಿ ಕಂಡವು. ಆಧುನಿಕ ವಿದ್ಯಾಭ್ಯಾಸವನ್ನು ಪಡೆದ ಕನ್ನಡಿಗರು ದೇಶದಲ್ಲಿ ಆಗ ಪ್ರಾರಂಭವಾಗಿದ್ದ ರಾಜಕೀಯ ಚಟುವಟಿಕೆಗಳಿಂದ ಪ್ರಭಾವಿತರಾದರು. 1885ರಲ್ಲಿ ಜರುಗಿದ ರಾಷ್ಟ್ರೀಯ ಕಾಂಗ್ರೆಸ್ಸಿನ ಮೊದಲ ಅಧಿವೇಶನದಲ್ಲಿ ಈ ಭಾಗದ ಕನ್ನಡಿಗರೂ ಪಾಲ್ಗೊಂಡಿದ್ದರು. ವಿಶೇಷವಾಗಿ ಟಿಳಕರ ಪ್ರಭಾವ ಇಲ್ಲಿ ಹೆಚ್ಚಾಗಿತ್ತು. ಟಿಳಕರ ಅನುಯಾಯಿಯಾಗಿದ್ದ ಗಂಗಾಧರರಾವ್ ದೇಶಪಾಂಡೆ ಎಂಬ ನಾಯಕನು ಧಾರವಾಡದಲ್ಲಿ 1916ರಲ್ಲಿ ಕರ್ನಾಟಕ ಹೋಮ್‌ರೂಲ್ ಲೀಗ್‌ನ್ನು ರಚಿಸಿದನು. 1920ರಲ್ಲಿ ಕೆ.ಪಿ.ಸಿ.ಸಿ

ಕಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ.ಹಂಪಿ.

(ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ) ಯ ರಚನೆಯೊಂದಿಗೆ ಹಾವೇರಿ ಜಿಲ್ಲೆಯು ಅಧಿಕೃತವಾಗಿ ರಾಷ್ಟ್ರೀಯ ಆಂದೋಲನದಲ್ಲಿ ಭಾಗಿಯಾಯಿತು. ಗಾಂಧೀಜಿಯ ನಾಯಕತ್ವದಲ್ಲಿ ನಡೆದ ಮೂರು ಪ್ರಮುಖ ಆಂದೋಲನಗಳಲ್ಲಿ ಅಸಹಕಾರ, ಕಾನೂನುಭಂಗ, ಕ್ವಿಟ್ ಇಂಡಿಯಾಗಳಲ್ಲಿ ಜಿಲ್ಲೆಯ ಜನತೆ ಭಾಗಿಯಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿದರು. ದೇಶ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡ ಇವರ ತ್ಯಾಗ ಹಾಗೂ ಸಾಹಸಗಳು ಇಂದಿಗೂ ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿವೆ. ಮೋಟೆಬೆನ್ನೂರಿನ ಮೈಲಾರ ಮಹದೇವಪ್ಪ, ಹಾವೇರಿಯ ಹೊಸಮನಿ ಸಿದ್ದಪ್ಪ, ಹೊಸರಿತ್ತಿಯ ಗುದ್ಲೆಪ್ಪ ಹಳ್ಳಿಕೇರಿ, ರಾಣೇಬೆನ್ನೂರಿನ ಕೆ.ಎಫ್.ಪಾಟೀಲ, ಹಿರೇಕೆರೂರಿನ ವೀರನಗೌಡ ಪಾಟೀಲ, ರಾಣೇಬೆನ್ನೂರಿನ ತಿಮ್ಮನಗೌಡ ಮೆಣಸಿನಹಾಳ ಮುಂತಾದ ಸ್ವಾತಂತ್ರ್ಯ ಹೋರಾಟಗಾರರು ನಾಡಿನ ಇತಿಹಾಸದಲ್ಲಿ ಅಮರರಾಗಿದ್ದಾರೆ.

132012

2.3. ಹಾವೇರಿ ಜಿಲ್ಲೆಯ ಸಾಂಸ್ಕೃತಿಕ ಅನನ್ಯತೆ:

ಜಿಲ್ಲೆಯು ಏಳು ತಾಲೂಕುಗಳು ಅರೆ-ಮಲೆನಾಡು ಮತ್ತು ಬಯಲು ಸೀಮೆಯ ಪ್ರದೇಶಗಳನ್ನು ಒಳಗೊಂಡಿದ್ದು ಹಲವು ವೈಶಿಷ್ಟ್ಯಗಳನ್ನು ಹೊಂದಿವೆ. ಹಿರೆಕೆರೂರು, ಹಾನಗಲ್ಲು, ಶಿಗ್ಗಾಂವಿ ತಾಲೂಕಿನ ಅರ್ಧಭಾಗ ಮಲೆನಾಡಿನ ಸೆರಗಿಗೆ ಅಂಟಿಕೊಂಡು, ಅಲ್ಲಿಯ ಕೃಷಿ ಮತ್ತು ಉತ್ಪಾದನಾ ವಿಧಾನಗಳು, ಆಹಾರ ವಿಹಾರಗಳು ಹಾಗೂ ಇನ್ನಿತರೆ ಸಂಗತಿಗಳು ಬಯಲು ಸೀಮೆಗಿಂತ ಸ್ವಲ್ಪ ಭಿನ್ನವಾಗಿವೆ. ಹಿರೇಕೆರೂರು ತಾಲೂಕು ಒಂದು ಕಾಲಕ್ಕೆ ವಿಪರೀತ ಮಳೆ ಬೀಳುತ್ತಿದ್ದ ಪ್ರದೇಶವಾಗಿದ್ದು, ಗುಡ್ಡ ಬೆಟ್ಟಗಳು, ದಟ್ಟ ಕಾಡುಗಳಿಂದ ಕೂಡಿದ ಪ್ರದೇಶವಾಗಿತ್ತು ಎಂಬುದು ನಿರ್ವಿವಾದದ ಸಂಗತಿ. ಇಲ್ಲಿ ಕೆರೆ-ಕಟ್ಟೆಗಳಂತೂ ಸಾಕಷ್ಟಿವೆ, ಕುಮದ್ವತಿ ಮತ್ತು ತುಂಗಭದ್ರೆ ನದಿಗಳು ಹರಿಯುತ್ತಿವೆ. ಇಂತಹ ಪ್ರಾಕೃತಿಕ ಸಂಪತ್ತಿನ ಕೇಂದ್ರವಾದ ತಾಲೂಕಿನ ಗ್ರಾಮಗಳು ಅನೇಕ ವೈಶಿಷ್ಟತನದಿಂದಲೇ ಕೂಡಿವೆ.

ಡಾ. ಬೋಜರಾಜ ಪಾಟೀಲರು ತಮ್ಮ "ಹಿರೇಕೆರೂರು ತಾಲೂಕು ಗ್ರಾಮನಾಮ ಅಧ್ಯಯನ[1]" ಎಂಬ ಕೃತಿಯ ಮೂಲಕ ಜಿಲ್ಲೆಯ ಜನಾಂಗೀಯ, ಸಾಂಸ್ಕೃತಿಕ, ಭಾಷಿಕ, ಅಧ್ಯಯನಕ್ಕೆ ತಳಪಾಯ ಹಾಕಿರುವುದು ವಿಶೇಷ. 130ಕ್ಕೂ ಹೆಚ್ಚು ಗ್ರಾಮನಾಮಗಳಲ್ಲಿ 30 ರಿಂದ 40ಕ್ಕೂ ಹೆಚ್ಚು ಗ್ರಾಮಗಳು ಅಲೆಮಾರಿ ಬುಡಕಟ್ಟು ಜನಾಂಗದ ಮೂಲ ನಿವಾಸಿಗಳಿಂದ ನೆಲೆಗೊಂಡಿವೆ ಎಂಬುದನ್ನು ಖಚಿತಪಡಿಸಿದ್ದಾರೆ. ಇಂತಹ ಕೆಳವರ್ಗದ ಅಧ್ಯಯನ ಮಾದರಿಯನ್ನು ಗ್ರ್ಯಾಂಸ್ಕಿ ಎನ್ನುವ ಎಡಪಂಥೀಯ ಚಿಂತಕ ಸೆಬಲ್ಟ್ರಾನ್ ಅಧ್ಯಯನದ ಮಾದರಿ ಎನ್ನುತ್ತಾರೆ. ಕನ್ನಡದಲ್ಲಿ ಇಂತಹ ಮೊಟ್ಟ ಮೊದಲು ಪ್ರಯೋಗ ನಡೆಸಿದವರು ಕನ್ನಡದ ಅರ್ನಾಲ್ಡ್ ಟಾಯನ್‌ಬಿ ಎಂದೇ ಗುರುತಿಸಲಾಗಿರುವ ದಿ. ಶಂ.ಬಾ. ಜೋಶಿ. ಇವರು ತಮ್ಮ "ಎಡೆಗಳು ಹೇಳುವ ಕಂನಾಡ ಕತೆ" (1947) ಕೃತಿಯ ಮೂಲಕ ಕನ್ನಡ ನಾಡಿನ ಎಡೆಗಳಿಗೆ

ಐತಿಹಾಸಿಕ ಹಾಗೂ ಸಾಂಸ್ಕೃತಿಕ ಸ್ವರೂಪ ನೀಡಿ ಇಲ್ಲಿನ ಎಡೆ (ಊರು) ಗಳಿಗೆ "Ethnical"ನ ಮಹತ್ವ ಗುರುತಿಸಿದ್ದಾರೆ.

ಕಾಡಿನಿಂದ ನಾಡಿಗೆ (ಜಂಗಮತ್ವದಿಂದ ಸ್ಥಾವರದೆಡೆಗೆ)

ಮನುಷ್ಯ ಮೂಲತಃ ಅಲೆಮಾರಿ ತನ್ನ ಹೊಟ್ಟೆ-ಬಟ್ಟೆ ನೆಮ್ಮದಿಯ ಬದುಕನ್ನು ಅರಸುತ್ತಲೇ ಒಂದು ಸ್ಥಳದಿಂದ ಇನ್ನೊಂದು ಸ್ಥಳದ ಕಡೆಗೆ ಗುಳೆ ಹೊರಟು ಕೊನೆಗೆ ತನಗೆ ನೆಮ್ಮದಿ ತರುವ ಸ್ಥಳ ಸಿಕ್ಕ ಕೂಡಲೇ ಅಲ್ಲಿ ತನ್ನೆಲ್ಲ ಅಸ್ತಿತ್ವವನ್ನು ಸ್ಥಾಪಿಸಿಕೊಂಡು ಬಿಡುತ್ತಾನೆ. ಅಂದರೆ ಬಹುತೇಕ ಸಮುದಾಯಗಳ ಹುಡುಕಾಟದ ಮೂಲ ಸೆಲೆ ನೀರಿನ ಮೂಲವಾಗಿರುವುದು ಕಂಡು ಬರುತ್ತದೆ. ಈ ದಿಸೆಯಲ್ಲಿ ಡಾ. ರಾಮಮನೋಹರ ಲೋಹಿಯರವರ ಮಾತು ಸತ್ಯವೆನಿಸುತ್ತದೆ. ಮನುಷ್ಯ ತನ್ನ ವಾಸಸ್ಥಾನದ ನೆಲೆ ಕಂಡುಕೊಂಡದ್ದೇ ಜಲ ಸಂಪನ್ಮೂಲದ ಮೂಲಕ ಎನ್ನುತ್ತಾರೆ. ಅವರು ಮುಂದುವರೆದು ಮನುಷ್ಯನ ಮೂಲ ನೆಲೆಯನ್ನು ಗುರುತಿಸುವುದೇ ನದಿ ಮೂಲ, ತಪ್ಪಲು ಮೂಲದಿಂದ ಎಂದು ನಿಖರ ಮಾಹಿತಿ ಒದಗಿಸುತ್ತಾರೆ.

ಈ ರೀತಿ ಅಲೆಮಾರಿಗಳಾಗಿ ವಲಸೆ ಬಂದವರಲ್ಲಿ ಅನೇಕ ಬುಡಕಟ್ಟು ಸಮುದಾಯಗಳು ಜಿಲ್ಲೆಯ ಬೇರೆ ಬೇರೆ ತಾಲೂಕುಗಳಲ್ಲಿ, ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಅಲ್ಲಲ್ಲಿ ಕಂಡು ಬರುತ್ತಾರೆ. ಕೆಲವರು ತಮ್ಮ ಮೂಲ ವೃತ್ತಿಯನ್ನೇ ಅವಲಂಬಿಸಿದ್ದಾರೆ, ಇನ್ನೂ ಕೆಲವರು ಕೃಷಿ ಮತ್ತು ಕೃಷಿ ಪೂರಕವಾದ ಉದ್ಯೋಗಗಳನ್ನು ಅವಲಂಬಿಸಿರುತ್ತಾರೆ. ಆದರೆ ಇಂದು ಕೃಷಿ ಮೂಲದ ಉತ್ಪಾದಕ ಸಂಸ್ಕೃತಿಯ ಆಧುನಿಕತೆಯ ಆವಿಷ್ಕಾರಕ್ಕೆ ಕಟ್ಟು ಬಿದ್ದ, ತನ್ನ ಸಾಂಪ್ರದಾಯಿಕ ನೆಲೆಯಿಂದ ತನ್ನ ಸ್ವರೂಪವನ್ನೇ ಕಳೆದುಕೊಂಡಿದೆ. ಯಾಂತ್ರೀಕೃತ ಬೇಸಾಯ ತಲ್ಲಣಗೊಳಿಸಿದೆ. ನಮ್ಮ ಸಾಂಪ್ರದಾಯಿಕ ಬೀಜಗಳು, ಗೊಬ್ಬರಗಳು ಕಣ್ಮರೆಯಾಗಿ ಕುಲಾಂತರಿ ತಳಿಗಳು ಮತ್ತು ರಾಸಾಯನಿಕ ಗೊಬ್ಬರಗಳು ಕಾಣಿಸಿಕೊಂಡು ಉತ್ಪಾದನಾ ವಿಧಾನವನ್ನು ಪಲ್ಲಟಗೊಳಿಸಿದೆ. ಹಾಗೆಯೇ ಅವುಗಳನ್ನು ಕ್ರೋಢೀಕರಿಸುವ, ಸಂಗ್ರಹಣೆ ಮಾಡುವ ವಿಧಾನವೂ ಬದಲಾಗಿದೆ. ಇದರಿಂದಾಗಿ ರೈತ ಸಮುದಾಯ ಉಳಿಮೆ ಮಾಡುವ, ಬಿತ್ತುವ, ಎಡೆ ಹೊಡೆಯುವ, ಕಳೆಕೀಳುವ, ಕೊಯ್ಯುವ, ಬಣವೆ ಒಟ್ಟುವ, ರಾಶಿ ಹಾಕುವ, ಹಬ್ಬ-ಹರಿದಿನಗಳನ್ನು ಆಚರಿಸುವ ಎಲ್ಲಾ ಕ್ರಿಯೆಗಳು ಬದಲಾವಣೆಗೊಂಡು ಬೇರೆ ರೂಪ ಪಡೆದುಕೊಂಡಿವೆ. ಈಗ ಅವು ಪಳೆಯುಳಿಕೆಯಂತೆ ಗೋಚರಿಸುತ್ತವೆ. ಈ ಹಿನ್ನೆಲೆಯಲ್ಲಿಯೇ ಸಂಸ್ಕೃತಿಯ ಪ್ರತೀಕಗಳಾದ ಹಾಡು, ಒಗಟುಗಳು, ಗಾದೆಮಾತುಗಳು, ಕತೆಕಟ್ಟುವುದು, ಆಟ, ನಾಟಕ, ಕ್ರೀಡೆಗಳು, ಮನರಂಜನೆಗಳು ವಿಭಿನ್ನ ನೆಲೆಯನ್ನು ಕಂಡುಕೊಳ್ಳಲಿಕ್ಕೂ ಆಗದೆ, ಯಥಾಸ್ಥಿತಿಯಲ್ಲಿ, ಮುಂದುವರಿಯಲಿಕ್ಕೂ ಆಗದೆ ಗೊಂದಲದಲ್ಲಿ ಸಿಲುಕಿಕೊಂಡಿವೆ. ಇವೆಲ್ಲವುಗಳಿಗೆ ಮುಖ್ಯ ಕಾರಣ ಬಿರುಗಾಳಿಯಂತೆ ಅಬ್ಬರಿಸಿರುವ ವಿದೇಶಿ ಸಂಸ್ಕೃತಿ ಮತ್ತು ಆ ಸಂಸ್ಕೃತಿಯನ್ನು ಪ್ರತಿಬಿಂಬಿಸಲು ತುದಿಗಾಲ ಮೇಲೆ ನಿಂತಿರುವ ವಿದ್ಯುನ್ಮಾನ ವಾಹಿನಿಗಳು.

ಜನಪದ ಸಾಹಿತ್ಯ ಹುಟ್ಟಿದ್ದೇ ಕೃಷಿ ಮೂಲ ಮತ್ತು ಬುಡಕಟ್ಟು ಮೂಲ ನೆಲೆಯಿಂದ ಎಂಬ ಸಂಗತಿ ನಮ್ಮ ಅವಗಾಹನೆಗೆ ಬರಬೇಕಿದೆ. ಜನಪದವೆಂಬುದು ಸೃಜನಶೀಲತೆಯ ವಿವಿಧ ಮಜಲುಗಳನ್ನು ವೈವಿಧ್ಯಮಯವಾಗಿ ಹೊಂದಿದ್ದರೂ ಸಹ ಅದು ನಿಂತ ನೀರಲ್ಲ, ಪರಿವರ್ತನಾ ಶೀಲದಿಂದ ದಾರಿ ಸಾಗಿಸುತ್ತದೆ. ಪ್ರತಿ ಸಂಸ್ಕೃತಿ ಹುಟ್ಟು ಪಡೆಯುವುದು ಜನಪದದ ಅಲೆಮಾರಿ ಪ್ರವೃತ್ತಿಯಿಂದ, ಅದು ನೆಲೆಯಾಗಿ ನಿಂತು ಸಂಸ್ಕೃತಿಯ ವಾರಸುದಾರಿಕೆ ಪಡೆದುಕೊಳ್ಳುವುದು ಲಿಖಿತ ಆಯಾಮದಲ್ಲಿ ಆವಿಷ್ಕಾರಗೊಳ್ಳುವುದರ ಮೂಲಕ.

ಜನಪದ ಸಾಹಿತ್ಯ ವಲಯದಲ್ಲಿ ಹೆಸರು ಮಾಡಿದ ಅನೇಕಾನೇಕ ಜನಪದ ಕಲಾವಿದರು ಇಂದು ನಗಣ್ಯರಾಗಿದ್ದಾರೆ. ಕವಿ ಚರಿತ್ರೆಕಾರರಾಗಲೀ ಜನಪದ ಮಹಾಕಾವ್ಯಗಳನ್ನು ದಾಖಲೀಕರಣ–ಗೊಳಿಸದೇ ಶಿಷ್ಟ ಸಾಹಿತ್ಯ ಕೃತಿಗಳನ್ನು ಕುರಿತು ಬರೆಯುತ್ತಲೇ ಹೋಗಿ ಮಣ್ಣಿನ ಮೂಲ ವಾಹಿನಿಯ ಸಂಸ್ಕೃತಿಯನ್ನು ಸಾಹಿತ್ಯವನ್ನು ಕಡೆಗಣಿಸಿ ಒಂದು ರೀತಿಯಿಂದ ಅಪಚಾರವನ್ನೇ ಎಸಗಿದ್ದಾರೆ. ಜನಪದ ಸಾಹಿತ್ಯವೆಂಬುದು ಇಹದ ಬದುಕನ್ನು ಮಾನವೀಕರಣಗೊಳಿಸುತ್ತದೆ. ಆ ಮೂಲಕ ಇದಕ್ಕೆ ಮಹತ್ವದ ದಾರಿಯನ್ನು ಒದಗಿಸಿದ ಮೇರುಗುಣ ಅದಕ್ಕಿದೆ. ಇವರೆಲ್ಲ ಅಕ್ಷರ ಬಲ್ಲವರೂ ಇರಬಹುದು. ವಂಚಿತರೂ ಇದ್ದಾರೆ. ಆದರೆ ಇವರೆಲ್ಲಾ ಬದುಕನ್ನು ಪ್ರೀತಿಸಿದ ರೀತಿ ಮಾತ್ರ ಅನನ್ಯವಾದದ್ದು.

ಈ ಹಿನ್ನೆಲೆಯಲ್ಲಿ ಹಾವೇರಿ ಜಿಲ್ಲೆಯ ವೈವಿಧ್ಯಮಯವಾದ ಸಂಸ್ಕೃತಿಯ ಕುರಿತು ಪರಿಪೂರ್ಣ ಕಾರ್ಯ ನಡೆದಿಲ್ಲವೆಂದೇ ವಿಷಾದದಿಂದ ಹೇಳಬೇಕಿದೆ. ಬೆರಳೆಣಿಕೆಯಷ್ಟು ಜನ ಅಲ್ಪ ಸ್ವಲ್ಪ ಕೆಲಸ ಮಾಡಿದ್ದರೂ ಅದು ಅತ್ಯಂತ ನಗಣ್ಯವೆಂದೇ ಹೇಳಬೇಕಾಗಿದೆ. ಈ ಜಿಲ್ಲೆಯ ವೈಶಿಷ್ಟ್ಯಗಳ ಖನಿಜದಂತಿರುವ ಈ ಬಹುಮುಖೀ ಸಂಸ್ಕೃತಿಯ ಸಂಗ್ರಹಣೆ, ವಿಶ್ಲೇಷಣೆಯ ಕಾರ್ಯ ಇನ್ನು ಮುಂದಾದರೂ ವ್ಯಾಪಕವಾಗಿ ನಡೆಯಬಹುದೆಂಬ ಆಶೆಯಿಂದ, ನನ್ನ ಗಮನಕ್ಕೆ ಬಂದ ಕೆಲವು ಪ್ರಕಾರಗಳು ಹಾಗೂ ಅವುಗಳ ಹರಿಕಾರರನ್ನು ಮಾತ್ರ ಹೆಸರಿಸುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡುತ್ತಿದ್ದೇನೆ.

ಕೋಲಾಟ:

ಇಲ್ಲಿ ನನ್ನ ಗಮನಕ್ಕೆ ವಿಶೇಷವಾಗಿ ಬಂದ ಕೋಲಾಟದಲ್ಲಿ ಬರುವ ಹಾಡೊಂದನ್ನು ಉಲ್ಲೇಖಿಸಬೇಕಿದೆ. ಅದು ಹಾನಗಲ್ಲು ತಾಲ್ಲೂಕಿನ ಕಂಚಿ–ನೆಗಳೂರಿನ ಮಧ್ಯೆ ನಡೆದ ಕಾಳಗದ ಕತೆ. ಇಲ್ಲಿ ಅಣ್ಣ ರಾಮಣ್ಣ ತಮ್ಮ ಗೋಲಣ್ಣ ನೂರೆಂಟು ಗೋವುಗಳನ್ನು ಸಾಕಿ ಸಲಹಿದ್ದ ಸಂಗತಿ. ನಂತರ ಗೋವುಗಳ್ಳರು ಗೋವುಗಳನ್ನು ಕದ್ದು ಹೋಗುವಾಗ ನಡೆದ ಕಾಳಗದಲ್ಲಿ ಅಣ್ಣ ತಮ್ಮಂದಿರು ಮಡಿದ ಘಟನೆಯಾಗಲೀ ಯಾವ ಇತಿಹಾಸಗಳ ಪುಟದಲ್ಲಿಯೂ ನಮೂದಾಗಿಲ್ಲ. ಆದರೆ ಜನಪದ ಹಾಡುಗಾರ ಮಾತ್ರ ಇದನ್ನು ತನ್ನದೇ ರೀತಿಯಲ್ಲಿ ಹಾಡಾಗಿ ಹಾಡುತ್ತಲೇ ನಡೆದ ಐತಿಹಾಸಿಕ ಸಂಗತಿಗೆ ದಾಖಲೆ ಒದಗಿಸಿ ಅದರ ಮಹತ್ವ ನೀಡಿರುವುದು ವಿಸ್ಮಯವೆನಿಸುತ್ತದೆ. ಈ ಘಟನೆ ಮಹಾಭಾರತದ ಸಂದರ್ಭದಲ್ಲಿ ಪಾಂಡವರು ವಿರಾಟನಲ್ಲಿ

ಆಶ್ರಯ ಪಡೆದಿದ್ದು, ಈ ಸುದ್ದಿ ತಿಳಿದ ಕೌರವರು ವಿರಾಟನ ನಗರಕ್ಕೆ ದಾಳಿಯಿಟ್ಟಿದ್ದು, ಗೋವುಗಳನ್ನು ಕದ್ದೊಯ್ದು ಯುದ್ಧದ ಸಂದೇಶವನ್ನು ವಿರಾಟನಿಗೆ ರವಾನಿಸಿದ್ದು, ಯುದ್ದಾನಂತರದ ಸಂಗತಿಗಳ ಸರಮಾಲೆಯೇ ನಮ್ಮ ಮುಂದೆ ನಿಲ್ಲುವಂತಿದೆ ಈ ಹಾಡಿನ ರೀತಿ.

ಕಂಚೀಯ ನೆಗಳೂರು ನಡುವೊಂದು ಹರದಾರಿ
ಗಾಡೀಗೆ ಗಾಡಿ ಬಹುದುಡುಕೋ । ಕೋಲೆನ್ನ ಕೊಲೆ
ಅಣ್ಣನು ರಾಮಣ್ಣ ತಮ್ಮನು ಗೋಲಣ್ಣ
ನೂರೆಂಟು ಸಾವಿರದನ ಸಲಹಿದಧ । ಕೋಲೆನ್ನಕೋಲೆ

ಈ ರೀತಿಯ ಅನೇಕಾನೇಕ ಕಥನ ಕಾವ್ಯಗಳು ಈ ನಾಡಿನಲ್ಲಿ ಹುಡುಕುತ್ತಾ ಹೋದಂತೆಲ್ಲ ವಿಫುಲವಾಗಿ ಸಿಗುತ್ತವೆ. ಇಂತಹ ಕೋಲಾಟದ ತಂಡಗಳು ಈ ಜಿಲ್ಲೆಯಲ್ಲಿ ವಿಪುಲವಾಗಿಯೇ ಇವೆ. ಉದಾಹರಣೆಗೆ ಹಿರೇಕೆರೂರು ತಾಲ್ಲೂಕಿನ ಯತ್ತಿನಹಳ್ಳಿ, ಭೋಗಾವಿ, ಅರೀಕಟ್ಟೆ, ಗಳಲ್ಲಲ್ಲದೇ ಲಂಬಾಣಿ ಮಹಿಳೆಯರು ತಮ್ಮದೇ ವಿಶಿಷ್ಟ ಶೈಲಿಯಲ್ಲಿ ಕೋಲಾಟದ ಪ್ರದರ್ಶನ ಮಾಡುವುದು ಗಮನೀಯವಾದ ಸಂಗತಿ.

ಸೊಬಾನೆಪದ:

ಈ ಭಾಗದ ಸೋಬಾನೆ ಪದದಲ್ಲಿ ಕಾಣುವ ಒಂದು ವಿಶಿಷ್ಟ ಸಂದರ್ಭದಲ್ಲಿ ಹಾಡುವುದನ್ನು ಗುರುತಿಸಬಹುದಾಗಿದೆ. ಹೆಣ್ಣು ಮಗಳೊಂದು 'ರಜಸ್ವತಿ' (ಋತುಮತಿ) ಯಾದಾಗ ಅವಳನ್ನು ವಾರಗಳ ಕಾಲ ಆರೈಕೆ ಮಾಡಿ, ಮರೆಸುವ ಸಂದರ್ಭದ ಹಾಡು

ಏರಿ ಏರಿ । ಎರಿ ಚಿನ್ನದೇರಿ
ಏರಿಂದ ಕೆಳಗ । ಎಲಿದೋಟ।
ಏರಿಂದ ಕೆಳಗ ಎಲಿದೋಟ ದೊಳಗಿರುವ ।
ಅವರಣ್ಣ ಕೇಳ್ಯಾನ । ಹೊಸ ಸುದ್ದಿ ।
ಹೊಸ ಸುದ್ದಿ ಕೇಳ್ಯಾನ । ಹುಸಿ ನಗಿಯ ನಕ್ಕಾಗ ।
ಎಸಳ ಮಲ್ಲಿಗಿ । ಇಳುಹ್ಯಾನ
ಎಸಳೇನ ಮಲ್ಲಿಗಿ ಇಳುಹಿ ಅವರಣ್ಣ ।
ಮಾವಯ್ಯಗ ಸುದ್ದಿ (ಹೇಳಿ) ಕಳುಸ್ಯಾನ। ಸೋಬಾನವೆ

ಇಂತಹ ವಿಶಿಷ್ಟ ಆಚರಣೆಯ ಹಾಡುಗಳಿಗೂ ನಮ್ಮಲ್ಲಿ ಬರವಿಲ್ಲ.

ಡೊಳ್ಳು ಕುಣಿತ:

ಡೊಳ್ಳು ಕುಣಿತ, ಡೊಳ್ಳಿನ ಹಾಡುಗಳು ಜಿಲ್ಲೆಯಲ್ಲಿ ವಿಫುಲವಾಗಿಯೇ ಇವೆ. ಇಲ್ಲಿ ಮುಖ್ಯವಾಗಿ ನಾವು ಗಮನಿಸಬೇಕಾದ ಸಂಗತಿಯಂದರೆ, ಬಹುಸಂಖ್ಯಾತ ಡೊಳ್ಳು ಕುಣಿತ–ಹಾಡುಗಳು "ಕುರುಬ" ಜನಾಂಗಕ್ಕೆ ಮೀಸಲಿವೆ. ಆದರೆ, ಹಿರೇಕೆರೂರು ತಾಲೂಕಿನ ದೀವಿಗಿಹಳ್ಳಿ

ಗ್ರಾಮದಲ್ಲಿ ನಾಯಕ (ವಾಲ್ಮೀಕಿ) ಜನಾಂಗದವರು ಡೊಳ್ಳು ಬಾರಿಸುವ, ಕುಣಿಯುವ ಹಾಗೂ ಹಾಡು ಹೇಳುವ ಕಲೆ ರೂಢಿಸಿಕೊಂಡಿದ್ದಾರೆ. ಈ ಗ್ರಾಮದ ಭರಮಪ್ಪ ತಿಂಕಿಹಳ್ಳಿ ಈ ಕಲೆಯಲ್ಲಿ ಪ್ರಾವೀಣ್ಯತೆ ಪಡೆದವನಾಗಿದ್ದ. ಅನೇಕ ಕಥನ ಕವನಗಳನ್ನು ಡೊಳ್ಳಿನ ಕೈಪೆಟ್ಟಿನಿಂದ ಹಾಡುತ್ತಿದ್ದುದು ವಿಶೇಷ 'ಶಂಕಿ ತೊಂಡಿಯ ಕಲೆ' ಬಲ್ಲಾಳನ ಕಥೆ, ಹೀಗೆ ವೈವಿಧ್ಯಮಯ ಹಾಡುಗಳನ್ನು ಆತ ಬೆಳ್ಳಂಬೆಳಗ್ಗೆ ಹಾಡುತ್ತಿದ್ದುದು ಗಮನಿಸಿದ್ದೇನೆ.

ದೊಡ್ಡಾಟ ಮತ್ತು ಸಣ್ಣಾಟ:

ದೊಡ್ಡಾಟಗಳನ್ನು ಇಂದಿಗೂ ಮಲೆನಾಡಿನ ತಾಲೂಕುಗಳಾದ ಹಿರೇಕೆರೂರು, ಬ್ಯಾಡಗಿ, ಹಾನಗಲ್ಲು, ಶಿಗ್ಗಾಂವಿ, ಸವಣೂರು ಮುಂತಾದ ತಾಲೂಕುಗಳಲ್ಲಿ ಆಡುತ್ತಾರೆ. ಅನೇಕ ಹವ್ಯಾಸಿ ತಂಡದ ಜನ ಮ್ಯಾಳ ಕಟ್ಟಿಕೊಂಡು ವರ್ಷದಲ್ಲಿ ಒಂದೆರಡು ಪ್ರದರ್ಶನ ಮಾಡುವುದು ಉಂಟು. ಇವುಗಳಲ್ಲಿ "ಲಂಕಾದಹನ" "ಚಿತ್ರಪಟ ರಾಮಾಯಣ" 'ಅಹಿರಾವಣ ಮಹಿರಾವಣ' ಮುಂತಾದವುಗಳು. ಹಿರೇಕೆರೂರ ತಾಲ್ಲೂಕಿನ ಗುಂಡಗಟ್ಟಿ ಗ್ರಾಮದ ದೊಡ್ಡಾಟದ ತಂಡ ಹಾಗೂ ಹಾನಗಲ್ಲ ತಾಲ್ಲೂಕಿನ ಕಲಕೇರಿ ದೊಡ್ಡಾಟದ ತಂಡಗಳು ರಾಜ್ಯ ಮಟ್ಟದ ಪ್ರಶಸ್ತಿ ಪಡೆದು ದೊಡ್ಡಾಟ ಕಲೆಯನ್ನು ಇನ್ನೂ ಜೀವಂತವಾಗಿರಿಸಿಕೊಂಡಿರುವುದು ಗಮನಿಸುವ ಅಂಶ.

ಈ ಸಂದರ್ಭದಲ್ಲಿ ನಾವು ವಿಶೇಷವಾಗಿ ನಮೂದಿಸಬೇಕಾದ ತಂಡ ಶಿಗ್ಗಾವಿಯ "ದೊಡ್ಡಾಟ-ಅಡ್ಡಾಟ" ತಂಡ ಇದರ ನೇತೃತ್ವ, ಸಂಘಟನೆ, ಆಟಗಳ ನಿರ್ದೇಶನ ಶ್ರೀ ಸೊಲಬಕ್ಕನವರ ಅವರದು. ಇದಕ್ಕಾಗಿ ಅವರು ತಮ್ಮ ಸರ್ವಸ್ವವನ್ನು ಧಾರೆಯೆರೆದು ಎರಡು ಪ್ರಮುಖ ದೊಡ್ಡಾಟಗಳನ್ನು ಪ್ರಯೋಗಿಸುವ ಸಾಹಸಕ್ಕೆ ಕೈ ಹಾಕಿದ್ದರು. ಇವರ ಎರಡು ಆಟಗಳು. ಒಂದು ರೇಣುಕಾ ಮಹಾತ್ಮೆ ಎರಡನೆಯದು ಬಸವ ವಿಜಯ. ಈ ಎರಡೂ ದೊಡ್ಡಾಟಗಳ ಕೃತಿ ರಚನೆ ಮಾಡಿ ನೆಲೆಯಾಗಿ ನಿಂತವರು ಪ್ರೊ. ಶ್ರೀಶೈಲ ಹುದ್ದಾರ. ಇಂದಿಗೂ ದೊಡ್ಡಾಟದ ಹುಚ್ಚು ಹಚ್ಚಿಕೊಂಡು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಸಂಚರಿಸಿ ದೊಡ್ಡಾಟಗಳನ್ನು ಆಡಿಸುವಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿದ್ದಾರೆ. ಹಾಗೆಯೇ ಹಿರೇಕೆರೂರ ಆಲೂರೆ ಶ್ರೀ ಅಶೋಕ ಹಳ್ಳಿ ಸಹಿತ ಇಂತಹ ಪ್ರಯೋಗಶೀಲತೆಗೆ ಮುಂದಾಗಿರುವುದು ಸ್ವಾಗತಾರ್ಹ.

ಮೇಲಿನ ಎರಡೂ ದೊಡ್ಡಾಟಗಳ ವಸ್ತುಗಳು ವಿಭಿನ್ನ. ಒಂದು ಪೌರಾಣಿಕ ಕಥಾವಸ್ತುಗಳನ್ನೊಳಗೊಂಡ ರೇಣುಕಾ-ಜಮದಗ್ನಿ, ಕಾರ್ತ ವೀರಾರ್ಜುನರ ಕತೆಯಾದರೆ ಇನ್ನೊಂದು ಭಕ್ತಿ ಭಂಡಾರಿ ಬಸವಣ್ಣನವರ ಕುರಿತಾದ ಕತೆ, ಇದೊಂದು ಪ್ರಾಯೋಗಿಕತೆಯೆಂದು ಹೇಳಬಹುದು. ಯಾಕೆಂದರೆ ದೊಡ್ಡಾಟಗಳ ಕಥಾವಸ್ತುವೇ ಪೌರಾಣಿಕ ಹಿನ್ನೆಲೆಯಾಗಿದ್ದು, ಕ್ಷಾತ್ರ-ವೀರ-ರೌದ್ರವಗಳೇ ಇಲ್ಲಿನ ಜೀವಾಳ. ಆದರೆ ಮಧ್ಯಯುಗಿನ ಕಾಲದ ಭಕ್ತಿ ಪಂಥದ ಕತೆಯನ್ನು ಈ ರಂಗಮಂದಿರಕ್ಕೆಳೆದು ತಂದದ್ದು ಎಷ್ಟರ ಮಟ್ಟಿಗೆ ಸಿಂಧುವೆನ್ನುವುದು ನನ್ನನ್ನಿಂದೂ ಕಾಡುವ ಪ್ರಶ್ನೆ. ಹೀಗಾಗಿ ಇದೊಂದು ಪ್ರಾಯೋಗಿಕ

ಪ್ರಯತ್ನವನ್ನಷ್ಟೇ ಮಾಡಬಹುದೇನೋ? ಆದರೆ ಎಲ್ಲರೂ ದೊಡ್ಡಾಟಗಳ ಬಗೆಗೆ ಮಾತಾಡುವವರೇ ವಿನಃ ಆ ಆಟಗಳನ್ನು ಸಂಗ್ರಹಿಸಿ ಪ್ರಕಟಿಸುವ ಸಾಹಸಕ್ಕೆ ಇಳಿದಿಲ್ಲ.

ಅದೇ ರೀತಿಯ ಸಣ್ಣಾಟ. ಇದು ಅತ್ಯಂತ ವಿರಳವಾಗಿ ಸಂಘಟನೆಗೊಂಡು ಪ್ರಯೋಗ-ಗೊಳ್ಳುತ್ತಿರುವ ಪ್ರಕಾರವಾಗಿದೆ. ಮೂಲತಃ ಹಿರೇಕೆರೂರು, ಬ್ಯಾಡಗಿ, ಹಾನಗಲ್ಲ ತಾಲೂಕುಗಳಿಗೆ ಮಾತ್ರ ಸೀಮಿತವಾಗಿದೆ. ಇವುಗಳಲ್ಲಿ ಬಹಳ ಪ್ರಮುಖವಾಗಿ ಆಡುವ ಸಣ್ಣಾಟ ಸಂಗ್ಯಾಬಾಳ್ಯಾ. ಬೆಳಗಾವಿ ಜಿಲ್ಲೆಯ ಸಂಗ್ಯಾಬಾಳ್ಯಾದ ಹಾಡುಗಳಿಗೂ ಅಲ್ಲಿನ ಲಯಬದ್ದತೆಗೂ ಹಾಡುಗಾರಿಕೆ, ನೃತ್ಯದ ಬಗೆಗೂ ಇಲ್ಲಿನ ಬಗೆಗೂ ತುಂಬ ಅಂತರ ಕಂಡು ಬರುತ್ತದೆ. ಮಲೆನಾಡವರ ಲಯಮಾಧುರ್ಯನಾದ ಮಾಧಯ್ಯ ತಾಳದ ಗತ್ತುಗಳು ಕಿವಿಗೆ ಮಧುರವಾದವುಗಳು, ಇಂಪಾಗಿ ತೇಲಿ ಬರುವಂತವುಗಳು.

ಈ ಸಂಗ್ಯಾಬಾಳ್ಯಾ ಮಾದರಿಯಲ್ಲಿಯೇ ಈ ಸುತ್ತಿನಲ್ಲಿ ಅನೇಕ ಸಣ್ಣಾಟಗಳು ಪ್ರಯೋಗಿಸಲ್ಪಡುತ್ತಿವೆ. ಅಲ್ಲಮಪ್ರಭು, ಭಕ್ತಪ್ರಹ್ಲಾದ, ಕಚದೇವಯಾನಿ, ವಿಕ್ರಮರಾಜ, ಮದುಗದ ಕೆಂಚವ್ವ ಮುಂತಾದ ಸಣ್ಣಾಟಗಳು ವಿಶೇಷವಾಗಿ ಹಿರೇಕೆರೂರ ತಾಲೂಕಿನ ಯತ್ತಿನಹಳ್ಳಿ, ದೀವಿಗಿಹಳ್ಳಿ ಭೋಗಾವಿ, ಬೆಟಕೇರೂರ ಮುಂತಾದ ಕಡೆ ನಡೆದರೆ ಬ್ಯಾಡಗಿ ತಾಲೂಕಿನ ಅಣೂರ, ಬಿಸಲಿಹಳ್ಳಿ, ಬನ್ನಿಹಟ್ಟಿ, ಮುಂತಾದ ಊರುಗಳಲ್ಲಿ ಚಾಲ್ತಿಯಲ್ಲಿವೆ.

ಭೋಗಾವಿ ಗ್ರಾಮದ ಯುವ ತಂಡ ರಾಜ್ಯಮಟ್ಟದ ಪ್ರಶಸ್ತಿ ಪಡೆದು ಮದುಗದ ಕೆಂಚವ್ವ ಸಣ್ಣಾಟವನ್ನು ಪ್ರತಿವರ್ಷವೂ ಆಡುವ ರೂಢಿಯನ್ನು ರೂಢಿಸಿಕೊಂಡಿದ್ದಾರೆ. ಹಾಗೆಯೇ ದುರಗಪ್ಪ ಅಂಬಾರು, ಹನುಮಂತಪ್ಪ ಹರಿಜನ, ರಾಮು ಹರಿಜನ, ದೀವಿಗಿಹಳ್ಳಿಯ ನೀಲಪ್ಪ ಹರಿಜನ ಮುಂತಾದ ಸಣ್ಣಾಟದ ಹಾಡುಗಾರರ ತಂಡವೇ ಈ ತಾಲೂಕಿನಲ್ಲಿ ಸಿಗುತ್ತವೆ.

ಗೀಗಿಪದ ಮತ್ತು ಲಾವಣಿ ಪದಗಳು: ಜನಪದ ಪ್ರಕಾರಗಳಲ್ಲಿ ಬಹಳ ಪ್ರಮುಖವಾದ ಪ್ರಕಾರವೆಂದರೆ ಗೀಗೀಪದ ಹಾಗೂ ಲಾವಣಿ ಪದಗಳು, ಕಥೆ ಕವನ, ನೀತಿ ಕವನ, ನಾಡು-ನುಡಿಯ ವೈಭವೀಕರಣ, ಸಂಸ್ಕೃತಿಯ ಅಧಃಪತನ, ಹೊಸ ಸಂಸ್ಕೃತಿಯ ಅವಘಡಗಳು ಹೀಗೆ ಹಲವಾರು ವಿಚಾರಧಾರೆಯನ್ನು ಈ ಎರಡು ಪ್ರಕಾರಗಳು ಪ್ರವಹಿಸುವ ರೀತಿ ಅನನ್ಯವಾದವುಗಳೆಂದೇ ಹೇಳಬೇಕು. ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಂತೂ ಈ ಎರಡೂ ವಾಹಿನಿಗಳು ಜನ ಮಾನಸದ ಆಳಕ್ಕಿಳಿದು. ಪ್ರೇರೇಪಿಸಿದ್ದುದು ಮರೆಯಲಾರದ ಘಟನೆ. ನಮ್ಮ ಜಿಲ್ಲೆಯಲ್ಲಿ ಗಿಗೀ ಹಾಡಿನ ಪರಂಪರೆ, ತಂಡಗಳು, ಹಾವೇರಿ, ಸವಣೂರು, ಶಿಗ್ಗಾಂವಿ ತಾಲೂಕುಗಳಲ್ಲಿ ಸಿಗುತ್ತವೆ. ಅಂತಹ ತಂಡಗಳೂ ಪ್ರಚಲಿತದಲ್ಲಿವೆ.

ಲಾವಣಿ ಹಾಡುಗಳೂ ಕೂಡ ಈ ಮೇಲಿನ ತಾಲೂಕುಗಳಲ್ಲಿಯೇ ವಿಫುಲವಾಗಿದ್ದು ವಿಶೇಷವಾಗಿ ಗಮನ ಸೆಳೆದ ಲಾವಣಿಕಾರರೆಂದರೆ ರಾಣೇಬೆನ್ನೂರು ತಾಲ್ಲೂಕಿನ ಸಮ್ಮದ್ ಸಾಹೇಬ ಎಂಬುವವರು. ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಕಾಲಘಟ್ಟಗಳೆರಡರಲ್ಲಿ ಜೀವಿಸಿದ್ದ ಈ ಲಾವಣಿಕಾರ ನಮ್ಮ ಜಿಲ್ಲೆ ಕಂಡ ಅತ್ಯಂತ ಅಪರೂಪದ ಲಾವಣಿಕಾರರೆಂದೇ

ಹೇಳಬೇಕು. ವಸಾಹತುಶಾಹಿ ಹಾಗೂ ವಸಾಹತೋತ್ತರ ಭಾರತದ ಜನಜೀವನದ ಆಳ-ವಿಸ್ತಾರಗಳು ಸಣ್ಣತನ, ಸ್ವಾರ್ಥತನಗಳು ಈತನ ಲಾವಣಿಗಳಲ್ಲಿ ನಿರರ್ಗಳವಾಗಿ ಹರಿದು ಆ ಪ್ರಕಾರಕ್ಕೆ ಅನನ್ಯತೆ ಒದಗಿಸುವಲ್ಲಿ ಮಹತ್ತರ ಪಾತ್ರವಹಿಸಿವೆ. ಅದೇ ರೀತಿ ಸ್ವಾತಂತ್ರ್ಯ ಹೋರಾಟದ ಪ್ರಮುಖರ ಜೀವನ ಚಿತ್ರ ಸಾರುವ ವೀರಗಾಥೆ ಲಾವಣಿಗಳಲ್ಲಿವೆ. ಹುತಾತ್ಮ ಮೈಲಾರ ಮಹದೇವ, ವಾಲಿ ಚನ್ನಪ್ಪ ಗಾಂಧೀಜಿ. ಮುಂತಾದವರು ಈತನ ಲಾವಣಿಗಳಲ್ಲಿ ಅಮರತ್ವವನ್ನು ಪಡೆದವರು. ಈತ ತನ್ನ ಲಾವಣಿಗಳಲ್ಲಿ ಕಟ್ಟಿಕೊಡುವ ರೂಪಾತ್ಮಕತೆ ಈತನ ಶೈಲಿಗೆ ನಿದರ್ಶನ.

ಮೈಲಾರ ಮಹದೇವ ಲಾವಣಿ ಹೀಗಿದೆ.

ಕಾಂತನ ಕಳ್ಕೊಂಡು ಕಾಮಿನಿಯಂತೆ
ಭಾರತ ಹಾಕುವುದ ಕಣ್ಣೀರ।
ಶಾಂತಿಸಮರದೊಳು ಗುಂಡಿನೇಟಿಗೆ
ಮಡಿದ ಮಹದೇವಪ್ಪ ಮೈಲಾರ।
ತುಂಟರ ತುಂಟ ಬಂಟರ ಬಂಟ
ಸಾತ್ವಿಕರೊಳು ಅತಿಸಾತ್ವಿಕನು ॥

ಪಾಳೆಗಾರಿ ಹಾಗೂ ವಸಾಹತುಶಾಹಿ ಆಳರಸರ ಏಜೆಂಟರಂತೆ ವರ್ತಿಸುತ್ತಿದ್ದ ಪುರೋಹಿತಶಾಹಿ ಹಾಗೂ ಭೂ ಮಾಲೀಕರ ವಿರುದ್ಧ ಸೆಡ್ಡು ಹೊಡೆದ ಕನ್ನೇಶ್ವರರಾಮ ಈತನ ಹೀರೋ. ಬ್ರಿಟಿಷ್ ಸಾಮ್ರಾಜ್ಯಶಾಹಿಗಳನ್ನು ಯಾವ ಎಗ್ಗಿಲ್ಲದೇ ತನ್ನ ಲಾವಣಿಗಳಲ್ಲಿ ನಿರೂಪಿಸುವ ಧೈರ್ಯ-ಕೆಚ್ಚು ಈತನದಾಗಿತ್ತು.

ವಸಾಹತುಶಾಹಿಯ ಅವಸಾನದ ನಂತರದ ಭಾರತವನ್ನು ಈ ಲಾವಣಿಕಾರ ಅತ್ಯಂತ ನಿರ್ಭಿಡೆಯಿಂದಲೇ ನಿರೂಪಿಸುತ್ತಾನೆ. ಭಾರತೀಯರು ಹುದುಗಿಟ್ಟುಕೊಂಡಿದ್ದ ಆಶೆ, ಆಕಾಂಕ್ಷೆಗಳು, ವೇಗವಾಗಿ ಪರಿವರ್ತಿತವಾಗುತ್ತಿರುವ ಸಮಾಜವನ್ನು ತೀಕ್ಷ್ಣವಾಗಿಯೇ ಖಂಡಿಸುತ್ತಾನೆ. ಇವೆಲ್ಲವುಗಳನ್ನು ಜನತೆಗೆ ಕರೆ ಕರೆದು ಹೇಳು ಎಂದು ಲಾವಣಿ ಬರೆದು ಹೇಳುತ್ತಾನೆ.

ಭರತಖಂಡದೊಳು ಬದಲಾಯಿತು ಜನ
ಹೊಸ ಹೊಸ ಫ್ಯಾಶನ್ ಕಲಿತಾಯ್ತು ।
ಕರೆದ್ಹೇಳಲು ಲಾವಣಿ ಪದವಾಯ್ತು
ಹರೆಯಲೆದ್ದು ಹರಿ ಸ್ಮರಣೆಯ ಮರೆತರು
ಶಿರದೊಳು ದ್ವಾಸಿಯ ಪ್ಲೇಟಾಯ್ತು ॥

ಎನ್ನುತ್ತ ನಗರೀಕರಣದತ್ತ ದಾಪುಗಾಲು ಹಾಕಲಾರಂಭಿಸಿದ ಭಾರತದ ಚಿತ್ರಣ ನೀಡುತ್ತಾನೆ. ಅದೇ ರೀತಿ ನಮ್ಮೊಳಡಗಿ ಕುಳಿತಿದ್ದ ಆಶೆ, ಆಮಿಶಗಳನ್ನು ಆತ ಬಯಲಿಗೆಳೆಯುವ ಪರಿ ಅತ್ಯುತ್ತಮವಾದದ್ದು.

ಮಳ್ಳ ಮನುಜನೊಬ್ಬ ಕಳ್ಳ ಪ್ಯಾಟಿಯಲಿ
ಬ್ಲ್ಯಾಕ್ ಮಾಡಿ ಹಣಗಳಿಸಿದ್ದ
ಕೇಳ್ವದೇನು ಒಣಚೈನಿ ಮಾಡಲಿಕ್ಕೆ
ಹಳ್ಳಿ ಜರಿದು ಪ್ಯಾಟಿ ಸೇರಿದ್ದಾ

ಎಂದು ಹಾಡುತ್ತಲೇ ನೇಪಥ್ಯಕ್ಕೆ ಸರಿದು ಅಜ್ಞಾತವಾದ. ಕೈಯಲ್ಲಿ ದುಂದುಮೆ ಹಿಡಿದು ಪೇಟೆಯಲ್ಲಿ ನಾಟಿ ಔಷಧಿ ಮಾರಿ ಜೀವನ ಸಾಗಿಸಿದ ಈ ಸಮ್ಮದ್ ಸಾಹೇಬನ ಹಾಡುಗಳು ಎಲ್ಲಿವೆಯೆಂಬುದು ನಿಗೂಢ. ವಿಶ್ವವಿದ್ಯಾಲಯದ ಪ್ರಾಧ್ಯಾಪಕರೊಬ್ಬರು ಈತನ ಹಾಡುಗಳನ್ನು ಪ್ರಕಟಿಸುವ ಆಶೆ ತೋರಿಸಿ ಅವುಗಳನ್ನು ಕೊಳೆ ಹಾಕಿದ್ದರೆಂಬುದು ನಿಜಕ್ಕೂ ವಿಷಾದದ ಸಂಗತಿ.

ಜೋಗೇರ ಆಟ, ಜೋಗಿ ಹಾಡುಗಳು:

ಹಾನಗಲ್ಲ ತಾಲೂಕಿನ ತಿಳಿವಳ್ಳಿಯಲ್ಲಿರುವ ಜೋಗಿ ಕುಟುಂಬಗಳು ತುಂಬ ಪ್ರಸಿದ್ದ ಮನೆತನಗಳು. ತಲತಲಾಂತರದಿಂದ ಈ ಕಾಯಕವನ್ನು ಅನೂಚಾನವಾಗಿ ನಡೆಸಿಕೊಂಡು ಬಂದಿರುವುದು ಈ ಮೆನತನಗಳ ಹಿರಿಮೆ. ಕಿನ್ನರ ಜೋಗಿಗಳು ಹಳ್ಳಿಹಳ್ಳಿಗಳಿಗೆ ವಿಶೇಷ ದಿನಗಳಲ್ಲಿ ಸಂಚರಿಸಿ ಮನೆ–ಮನೆಗಳಿಗೆ ಹೋಗಿ ನೀತಿಪಾಠಗಳ ಹಾಡು ಹೇಳುತ್ತ ಭಿಕ್ಷಾಟನೆ ಮಾಡುವ ಒಂದು ವರ್ಗವಿದ್ದರೆ ಎಣ್ಣೆ ಜೋಗಿಗಳದು ಮತ್ತೊಂದು ರೀತಿಯ ಪರಂಪರೆ.

ಇವೆಲ್ಲವುಗಳಿಗೂ ತಿಲಕವಿಟ್ಟಂತೆ ಪ್ರಯೋಗಿಸಲ್ಪಡುವ ಆಟ ಜೋಗೇರ ಆಟ. ಸಣ್ಣದಾದ ರಂಗ ಸಜ್ಜಿಕೆಯ ಮೇಲೆ ಏಕವ್ಯಕ್ತಿ ಹಾಗೂ ಸಂಗಡಿಗರು ನಡೆಸಿಕೊಡುವ ಆಟ ಇಡೀ ಪ್ರದರ್ಶನ ಕಲೆಗಳಲ್ಲಿಯೇ ಅತ್ಯದ್ಭುತವಾದದ್ದು, ಒಂದು ಕಥಾನಕವನ್ನು ಹಾಡು ಸಂಭಾಷಣೆ, ಅಭಿನಯಗಳ ಮೂಲಕ ನವರಸಭರಿತವಾಗಿ ಪ್ರಸ್ತುತಪಡಿಸುವ ಕ್ರಿಯೆ ಪ್ರೇಕ್ಷಕರನ್ನು ಮಂತ್ರಮುಗ್ದರನ್ನಾಗಿಸುತ್ತದೆ. ನಮ್ಮ ಸುತ್ತಲಿನ ಜೋಗೇರ ಆಟವನ್ನು ಸಂಗ್ರಹಿಸುವ ಕ್ರಿಯೆಗೇನಾದರೂ ಚಾಲನೆ ದೊರಕಿದರೆ ಅವರು ಅಭಿನಯಿಸುವ ರೂಪಕಗಳು ಮಂಟೇಸ್ವಾಮಿ ಇತ್ಯಾದಿ ಮಹಾಕಾವ್ಯಗಳಷ್ಟೇ ಪರಂಪರೆಯ ಸಾಲಿನಲ್ಲಿ ನಿಲ್ಲಬಲ್ಲ ಜಾನಪದ ಪ್ರಕಾರಗಳೆಂಬುದರಲ್ಲಿ ಎರಡು ಮಾತಿಲ್ಲ. ನಾಗರಾಜ ಜೋಗಿ ಆತನ ಇಡೀ ಕುಟುಂಬವೇ ಇದರಲ್ಲಿ ತನ್ಮಯತೆಯಿಂದ ತೊಡಗಿಕೊಂಡಿರುವುದು ಉಲ್ಲೇಖನಾರ್ಹ.

ಗೊರವರು:

ನಮ್ಮ ದೇಶೀಯ ಸಂಸ್ಕೃತಿಯ ಮತ್ತೊಂದು ಮಜಲೇ ಶ್ವಾರಪ್ಪನ ಹಾಡುಗಳು. ಇವು ಗೊರವರ ಹಾಡುಗಳೆಂದೇ ಪ್ರಸಿದ್ದ. ದೇವರಗುಡ್ಡದ ಮಾಲತೇಶ, ಮೈಲಾರದ ಲಿಂಗಪ್ಪ, ಇವರ ಆರಾಧ್ಯ ದೈವವಾಗಿದ್ದು, ಆತನ ಮಹಿಮೆಯನ್ನು ಸಾರುವ ಈ ಹಾಡುಗಳು ಗುಂಪು

ಹಾಡುಗಳು ಹೌದು. ಪ್ರತಿ ವರ್ಷ ದೇವರಗುಡ್ಡ (ರಾಣೇಬೆನ್ನೂರಲ್ಲೂ) ದಲ್ಲಿ ಮಹಾನವಮಿಯಂದು ನಡೆಯುವ ಕಾರ್ಣಿಕೋತ್ಸವ, ಭರತ ಹುಣ್ಣಿಮೆಯ ಕಾರ್ಯಕ್ರಮಗಳು, ಕಾರಹುಣ್ಣಿಮೆಯಂದು ನಡೆಯುವ ಗುಡದಯ್ಯನ ಕಡೇ ಲಗ್ನ ಹಾಗೂ ಇಲ್ಲಿ ನಡೆಯುವ ಪವಾಡಗಳು ಮೈ ನಿಮಿರೇಳಿಸುವಂತಿದ್ದು ಜನಪದ ಸಮೂಹದ ನಂಬಿಕೆಗಳಿಗೆ ಸಾಕ್ಷಿಯಾಗಿವೆ. ಇವುಗಳನ್ನು ಆಚರಣೆ ಮಾಡುವ ಕುಟುಂಬಗಳೇ ಇಲ್ಲ. ಈ ಕುರಿತು ಅನೇಕ ವಿದ್ವಾಂಸರು, ಕೆಲಸ ಮಾಡಿ ವಿವಿಧ ರೀತಿಯಿಂದ ಚರ್ಚಿಸಿರುವುದು ಆರೋಗ್ಯಕರ ಬೆಳವಣಿಗೆ. ಅಸಾದಿಯ ಪರಂಪರೆಯೇ ವಿಶಿಷ್ಟವಾದದ್ದು. ದುರದೃಷ್ಟವಶಾತ್ ಈ ಪಾರಂಪರಿಕ ಆಚರಣೆಯನ್ನು ಶಿಷ್ಯರು, ಹಾಸ್ಯಗಾರರು, ಹಾಸೇಗಾರರು ಎನ್ನುವ ಬಹುರೂಪಿ ಪಂಗಡಕ್ಕೆ ಸೇರಿಸಿಬಿಟ್ಟು ಈ ಸಮೂದಾಯದ ವೈಶಿಷ್ಟ್ಯವನ್ನೇ ಮರೆಮಾಚಿ ಬಿಟ್ಟಿದ್ದಾರೆ.

ಅಸಾದಿಗಳು:

ಮೂಲತಃ "ಅಸಾದಿಗಳು" ದೇವಿ ಜಾತ್ರೆಯ ಸಂದರ್ಭದಲ್ಲಿ ವಿಶೇಷವಾಗಿ ಕಾಣಿಸಿಕೊಂಡು ಜಾತ್ರೆಯ ಸಕಲ ವಿಧಿ ವಿಧಾನಗಳನ್ನು ನಡೆಸಿಕೊಡುವುದು ಇವರ ಜಾಯಮಾನ. ಜೊತೆಗೆ ದೇವಿ ಮಹಾತ್ಮೆಯ ಕುರಿತು ರೂಪಕಗಳನ್ನು ಪ್ರದರ್ಶಿಸುವ ಈ ಕ್ರಿಯೆ ಆರಾಧನಾ ಪರಂಪರೆಯ ಪ್ರಮುಖಘಟ್ಟ. ಗ್ರೀಕ್ ಪುರಾಣಗಳಲ್ಲಿ ಬರುವ ಕ್ರಿಯೆಯಂತೆಯೇ ಈ ವರ್ಗದ ಜನಗಳೂ ಜಾತ್ರೆಯ ರೂವಾರಿಗಳು. ಇವರಿಗೆ 'ರಾಣಿ ಶ್ಯಾ' ಎಂದೂ ಕರೆಯುವುದುಂಟು. ಈತನ ಬೆತ್ತ ಬಲಿಪಶುವಿನ ಕುತ್ತಿಗೆಯ ಮೆಟ್ಟಿ ನಂತರವೇ ಕೋಣನನ್ನು ಬಲಿಕೊಡುವ ಕ್ರಿಯೆ ನಡೆಯುತ್ತದೆ. ಇವರು ಎಡಗೈ ಬಣದವರೆಂದೂ ಗುರುತಿಸಿಕೊಂಡಿದ್ದು, ಬಲಿಯಾದ ಪಶುವಿನ ತಲೆ, ತಲೆಯೊಳಗಿನ ಮಾಂಸ ಮಾತ್ರ ಇವರಿಗೆ ಸೇರಿದ್ದು, ಇಂತಹ ವಿಶಿಷ್ಟ ಜನವರ್ಗವಿರುವುದು ಹಿರೇಕೆರೂರ ತಾಲೂಕಿನ ಚಿಕ್ಕಬೂದಿಹಾಳ ಗ್ರಾಮದಲ್ಲಿ ಮಾತ್ರ.

ಬಾಲಬಸವರು:

ಇವರು ಬಸವಣ್ಣನ ಮರಿ ಮಕ್ಕಳೆಂದು ನಂಬಿ ತಮ್ಮನ್ನು ಬಾಲಬಸವರೆಂದು ಕರೆದುಕೊಳ್ಳುತ್ತಾರೆ. ಬೇಸಿಗೆಯ ಸಂದರ್ಭದಲ್ಲಿ ಕಾವಿಯ ನಿಲುವಂಗಿ, ಬಿಳಿ ಛತ್ರಿ, ತಂಬೂರಿ ಹಿಡಿದು ಊರಿನಲ್ಲಿ ಸಂಚರಿಸಿ ಆ ವರ್ಷದ ಮಳೆ-ಬೆಳೆ-ಸಾಮಾಜಿಕ ಸ್ಥಿತಿಗತಿಗಳ ಕುರಿತು ಭವಿಷ್ಯ ಹೇಳುವುದು ಇವರ ಕಾಯಕ. ಗ್ರಾಮೀಣ ರೈತ ಸಮುದಾಯದಲ್ಲಿ ಇವರ ಬಗೆಗೆ ವಿಶೇಷ ಆಸಕ್ತಿ ಹಾಗೂ ನಂಬಿಕೆಗಳುಂಟು. ಇವರ ಕಾಲಜ್ಞಾನ ನಿಜವಾಗುವುದೆಂದು ನಂಬಿ ಅನೇಕ ಆಚರಣೆಗಳನ್ನು ಆಚರಿಸುವ ಸಂಪ್ರದಾಯ ಗ್ರಾಮೀಣ ಜನರದ್ದು, ವಿಶೇಷ ವೇಷಭೂಷಣ ಹಾಗೂ ಮೈತುಂಬ ವಿಭೂತಿ ಧರಿಸಿಕೊಂಡು ಕೊರಳಿಗೆ ದೊಡ್ಡದಾದ ಲಿಂಗಧಾರಣೆ ಮಾಡಿಕೊಂಡು ಗ್ರಾಮಾಂತರ ಪ್ರದೇಶದಲ್ಲಿ ಸಂಚರಿಸಿ ಓಣಿ ಓಣಿಗಳಲ್ಲಿ ನಿಂತು ಲಯಬದ್ಧವಾಗಿ ಪಡೆನುಡಿಗಳ ಮೂಲಕ ವಚನಗಳ ರೂಪದಲ್ಲಿ ಕಾಲಜ್ಞಾನ ಸಾದರಪಡಿಸುವ ಸಂದರ್ಭದಲ್ಲಿ ಜನ ಹೆಣ್ಣು-ಗಂಡುಗಳೆಲ್ಲರು ಸಂದರ್ಶಿಸಿ ಆ ವರ್ಷದ ಆಗು ಹೋಗುಗಳ

ಕುರಿತು ಭಯಭಕ್ತಿಗಳ ಮೂಲಕ ಕೇಳಿ ಅವರಿಗೆ ದವಸ-ಧಾನ್ಯಗಳ ದಾನ ನೀಡಿ ಬೀಗುತ್ತಾರೆ. ಆಗು ಹೋಗುಗಳ ವಿಚಾರ ವಿಮರ್ಶೆಗಳನ್ನು ತಮ್ಮ ತಮ್ಮ ಅನುಭವ ಹಾಗೂ ಬುದ್ಧಿಮತ್ತೆಗಳಿಗನುಗುಣವಾಗಿ ಅರ್ಥೈಸಿಕೊಳ್ಳುತ್ತಾರೆ. ಈ ಕಾಯಕದಲ್ಲಿ ತೊಡಗಿರುವ ಜನ ದಲಿತ ವರ್ಗದವರೆಂಬುದು ಇನ್ನೂ ವಿಶೇಷ. ಹಿರೇಕೆರೂರ ತಾಲೂಕಿನ ಚಿಕ್ಕ ಬೂದಿಹಾಳ ಗ್ರಾಮದಲ್ಲಿ ಸಾಕಷ್ಟು ಸಂಖ್ಯೆಯಲ್ಲಿರುವ ಈ ಜನರ ಸಂಬಂಧಗಳು ಹರಿಹರ ದಾವಣಗೆರೆ ತಾಲೂಕುಗಳಲ್ಲಿ ಚಾಚಿಕೊಂಡಿವೆ. ಇವರ ವಚನ ರೂಪ ಕಾಲಜ್ಞಾನದ ಮಾದರಿ.

ಹೀಗೆ ಇನ್ನೂ ಹತ್ತಾರು ಸಮುದಾಯಗಳ ಸಾಂಸ್ಕೃತಿಕ ವೈವಿಧ್ಯತೆಯನ್ನು ಈ ಜಿಲ್ಲೆಯಲ್ಲಿ ಕಾಣಬಹುದಾಗಿದೆ. ನಾನು ಆಯ್ಕೆ ಮಾಡಿಕೊಂಡ ಬುಡಕಟ್ಟು ಸಮುದಾಯಗಳಾದ ಗೊಂದಲಿಗರು, ಸುಡುಗಾಡು ಸಿದ್ದರು, ಹೆಳವರು, ಬೇಡ, ಮೇದ, ಬುಡ್ಗ ಜಂಗಮ, ದುರಗ ಮುರುಗಿ ಮುಂತಾದವರ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಧ್ಯಯನವನ್ನು ಮುಂದಿನ ಅಧ್ಯಾಯಗಳಲ್ಲಿ ಕ್ಷೇತ್ರ ಕಾರ್ಯದ ಮೂಲಕ ವಿಶ್ಲೇಷಣೆ ಮಾಡಲಾಗಿರುತ್ತದೆ.

2.4. ಜಿಲ್ಲೆಯ ಹಬ್ಬ-ಹರಿದಿನ ಮತ್ತು ಜಾತ್ರೆ ಉತ್ಸವಗಳು:

ಬುಡಕಟ್ಟು ಸಮೂಹಗಳ ಸಾಮಾಜಿಕ ಜೀವನದಲ್ಲಿ ಹಬ್ಬ-ಉತ್ಸವಗಳು ಅತಿ ಮುಖ್ಯ ಪಾತ್ರ ವಹಿಸುತ್ತವೆ. ಒಂದೊಂದು ಋತುಗಳು ಬದಲಾವಣೆಯಾದಂತೆ, ಆಯಾ ಕಾಲಕ್ಕೆ ತಕ್ಕಂತೆ ಮನರಂಜನೆ ಮತ್ತು ಸುಖ ಸಂತೋಷಗಳಿಗಾಗಿ ಒಪ್ಪುವಂತಹ ಹಬ್ಬ-ಹರಿದಿನಗಳನ್ನು ಆಚರಿಸುವ ಪದ್ಧತಿ ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಬುಡಕಟ್ಟು ಸಮುದಾಯಗಳಲ್ಲಿ ಕಂಡುಬರುತ್ತವೆ. ಮಾನವನು ಸಾಂಪ್ರದಾಯಿಕ ಬಯಕೆಯನ್ನು ತೀರಿಸಿಕೊಳ್ಳಲು, ಧರ್ಮದ ಕೆಲವು ನಿಯಮ ಮತ್ತು ಆಚರಣೆಗಳನ್ನು ಪಾಲಿಸಲು ನಿರ್ದಿಷ್ಟ ಅವಧಿಗೊಮ್ಮೆ ಮನೆಯವರ ಜೊತೆಗೂಡಿ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಸಂತೋಷವಾಗಿ ಆಚರಿಸುವ ಪದ್ಧತಿಗೆ 'ಹಬ್ಬ' ಎಂದು ಕರೆಯುತ್ತಾರೆ.

ಈ ಹಬ್ಬಗಳು ಜನರಲ್ಲಿ ಏಕತೆಯನ್ನು ಮೂಡಿಸುತ್ತವೆ. ಹಬ್ಬದ ದಿನದಂದು ಜನರು ತಮ್ಮ ಎಲ್ಲ ಕಷ್ಟ ನಷ್ಟಗಳನ್ನು ಮರೆತು ಸಂತೋಷದಿಂದ ಆಚರಿಸುತ್ತಾರೆ. ಯಾವುದೇ ಹಬ್ಬವಿರಲಿ ಮೂಲ ಉದ್ದೇಶ ತಾವು ನಂಬಿರುವ ದೇವರು-ದೇವತೆ ಆರಾಧನೆಗಾಗಿ ಆಂದು ಮನೆ-ಮನೆಗಳಲ್ಲಿ ದೇವರ ಪೂಜೆ, ಆರಾಧನೆ ನಡೆಯುವಂತೆ ಆಯಾ ದೇವರುಗಳಿಗಾಗಿ ಮೀಸಲಾದ ಗುಡಿ ಗೋಪುರಗಳಲ್ಲಿ ವಿಶೇಷ ಪೂಜಾ ಕಾರ್ಯಗಳು ನಡೆಯುತ್ತವೆ. ಪ್ರತಿಯೊಂದು ಹಬ್ಬಗಳಲ್ಲಿ ನಿಷ್ಠೆ ತರಲು ಪುರಾಣ, ಕಥೆಗಳಲ್ಲಿ ಅವುಗಳ ಮಹತ್ವ, ಅಸ್ತಿತ್ವಗಳನ್ನು ಸೇರಿಸಿ, ಯಾವ ಯಾವ ಹಬ್ಬಗಳನ್ನು ಹೇಗೆ ಆಚರಿಸಿ ಯಾವ ರೀತಿಯ ಶುಭ ಪುಣ್ಯ ಫಲಗಳನ್ನು ಪಡೆದುಕೊಳ್ಳಬಹುದು ಎಂಬುದನ್ನು ಅಲ್ಲಿ ಪ್ರಸ್ತಾಪ ಮಾಡಿರುವುದರಿಂದ ಆಯ್ದ ಬುಡಕಟ್ಟು ಸಮುದಾಯಗಳು ತಮ್ಮವೇ ಆದ ಹಲವು ವೈಶಿಷ್ಟ್ಯಪೂರ್ಣ ಹಬ್ಬಗಳ ಆಚರಣೆಯಲ್ಲಿ ಆಪಾರ ಶ್ರದ್ಧೆ ತೋರಿಸುತ್ತಾರೆ.

ಯಾವುದೇ ಬುಡಕಟ್ಟು ಸಮುದಾಯದ ಸಂಪ್ರದಾಯ, ನಂಬಿಕೆ, ಆಚಾರ–ವಿಚಾರ, ಉಡುಗೆ–ತೊಡುಗೆ, ಮತ್ತು ಸಂಸ್ಕೃತಿಯನ್ನು ಅವರು ಆಚರಿಸುವ ಹಬ್ಬ–ಹರಿದಿನಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಅದೇ ರೀತಿ ಹಾವೇರಿ ಜಿಲ್ಲೆಯ ಬುಡಕಟ್ಟು ಸಮುದಾಯಗಳು ಋತುಮಾನಕ್ಕನುಗುಣವಾಗಿ ಯುಗಾದಿ, ಕಾರಹುಣ್ಣಿಮೆ, ಶ್ರಾವಣ ಮಾಸದ ನಾಗರ ಪಂಚಮಿ, ಭಾದ್ರಪದ ಶುದ್ಧ ಚೌತಿ, ಗೌರಿ ಗಣೇಶ, ಜೋಕುಮಾರ, ನವರಾತ್ರಿ ದಸರಾ, ಸೀಗೇ ಹುಣ್ಣಿಮೆ, ಹಟ್ಟಿ ಹಬ್ಬ (ದೀಪಾವಳಿ), ಕಾರ್ತಿಕೋತ್ಸವ, ಗೌರಿಹುಣ್ಣಿಮೆ, ಶಿವರಾತ್ರಿ, ಹೋಳಿಹುಣ್ಣಿಮೆ ಮೊದಲಾದ ಹಬ್ಬಗಳನ್ನು ವೈಶಿಷ್ಟಪೂರ್ಣವಾಗಿ ಆಚರಿಸುತ್ತಾರೆ. ಸಾಮಾನ್ಯವಾಗಿ ಹಬ್ಬಗಳು ಸಂತೋಷ, ಸಡಗರ, ಶುಚಿತ್ವ ಮತ್ತು ದೈವಶ್ರದ್ಧೆಯ ಸಾಂಕೇತಿಕವಾಗಿ ಪ್ರಾದೇಶಿಕ ವೈವಿದ್ಯತೆಗಳೊಡನೆ ಆಚರಿಸಲ್ಪಡುವುದರ ಜೊತೆಗೆ, ಆ ದಿನ ಹೊಸದಾದ ಇಲ್ಲವೇ ಸಾಂಪ್ರದಾಯಿಕ ಉಡುಗೆ–ತೊಡುಗೆಗಳನ್ನು ಧರಿಸುತ್ತಾರೆ. ದೇವರು, ಧರ್ಮ ಮತ್ತು ಹಬ್ಬಗಳ ವಿಷಯವಾಗಿ ಮಲೆನಾಡು ಮತ್ತು ಬಯಲು ಸೀಮೆಗಳ ನಡುವೆ ಪರಸ್ಪರ ಹೊಂದಾಣಿಕೆ ಹಾಗೂ ಸಾಮ್ಯತೆಗಳ ಜೊತೆಗೆ ಭಿನ್ನತೆಗಳು ಕಂಡುಬರುತ್ತವೆ.

ಮೂಲತಃ ಕೃಷಿ ಪ್ರಧಾನವಾದ ಈ ನಾಡು ಕೃಷಿ ಉತ್ಪಾದನೆ, ಆದಾಯದ ಮೂಲ, ರೀತಿ, ರಿವಾಜುಗಳನ್ನು ತನ್ನ ಆಚರಣೆಯಲ್ಲಿ ಅಳವಡಿಸಿಕೊಂಡೇ ಅವುಗಳಿಗೆ ದೈವಿಕ ಆವಿಷ್ಕಾರ ಕೊಟ್ಟು ಪಡೆದುಕೊಂಡು, ಸಂತೃಪ್ತವಾಗುವ ಇಂಥ ಆಚರಣೆಗಳು ಉದ್ಯೋಗ, ಉತ್ಪಾದನಾ ಮೂಲಗಳೇ ಆಗಿವೆ. ಅಂತಹ ಮೂಲಗಳ ಕುರಿತ ನಮ್ಮ ಹಬ್ಬಗಳನ್ನು ಅವುಗಳ ರಿಚುಯಲ್ಸ್‌ಗಳ (Rituals) ಸೂಕ್ಷ್ಮ ಅವಲೋಕನ ಇಲ್ಲಿದೆ. **ಮಲೆನಾಡು–ಬಯಲು ಸೀಮೆಗಳ ಸೂಕ್ಷ್ಮತೆಗಳನ್ನು ಗುರುತಿಸುತ್ತಲೇ ಅಲ್ಲಿನ ಸಾಮ್ಯತೆಯ ಬಗೆಯನ್ನು ಕಂಡುಕೊಳ್ಳುವ ಪ್ರಯತ್ನ ಇಲ್ಲಿದೆ.**

ಅಮವಾಸ್ಯೆಯ ಕತ್ತಲಿನ ಯುಗಾದಿಯ ದಿನ ಚಂದ್ರನ ಹುಡುಕಾಟದಿಂದ ಪ್ರಾರಂಭಗೊಂಡ ಈ ಆವಾಹನೆ ಅರಿಷಡ್‌ವರ್ಗಗಳನ್ನು ಸುಟ್ಟು ಕಾಮನನ್ನು ದಹಿಸಿ ಪೂರ್ಣತೆಯ ಬೆಳಕಿನಡೆ ಸಾಗುವ ಈ ಕೃಷಿ ಉತ್ಪಾದನಾ ಸಂಸ್ಕೃತಿ ಮನುಕುಲದ ಅಭ್ಯುದಯಕ್ಕೆ ನೀಡಿದ ಬಹು ದೊಡ್ಡ ಕೊಡುಗೆ. ಅಂತಹ ಕೊಡುಗೆಯ ಹುಡುಕಾಟ ನಮ್ಮ ಮೂಲ ಆಶಯವಾಗಿದೆ.

ಯುಗಾದಿ ಹಬ್ಬ:

'ಉಂಡದ್ದು ಯುಗಾದಿ, ಮಿಂದದ್ದು ದೀಪಾವಳಿ' ಎಂಬ ಗಾದೆ ಯುಗಾದಿಯ ಮಹತ್ವವನ್ನು ತಿಳಿಸುತ್ತದೆ. ಚೈತ್ರ ಮಾಸದಲ್ಲಿ ಬರುವ ಯುಗಾದಿ ಹಬ್ಬವನ್ನು ಬುಡಕಟ್ಟು ಜನರಾದಿಯಾಗಿ ಎಲ್ಲರೂ ಈ ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬದ ಹೆಸರೇ ಹೇಳುವಂತೆ ಯುಗದ–ಆದಿ ವರ್ಷದ ಆರಂಭ. ಹೊಸ ಶಕೆ, ಯುಗ, ವರ್ಷವನ್ನು ಆರಂಭ ಮಾಡುವ ಸಂಭ್ರಮವೇ ಇದಾಗಿದ್ದು, ಅಮವಾಸ್ಯೆ ಕಳೆದುಕೊಂಡು ಬರುತ್ತದೆ.

ಅಮವಾಸ್ಯೆ, ಪಾಡ್ಯ, ಬಿದಿಗೆ, ಹೀಗೆ ಮೂರು ದಿನಗಳ ಕಾಲ ಆಚರಿಸಲ್ಪಡುವ ಈ ಹಬ್ಬ ಕೃಷಿಕರಿಗೆ ಅತ್ಯಂತ ಪವಿತ್ರವೂ, ಮಹತ್ವವೂ ಆದ ಹಬ್ಬವಾಗಿದೆ.

ಅಮವಾಸ್ಯೆಯಂದು ನೀರು ತುಂಬಿ, ಪಾಡ್ಯದಂದು ಎಣ್ಣೆಸ್ನಾನ ಮಾಡಿಕೊಂಡು ಹೊಸ ಬಟ್ಟೆ ಧರಿಸಿ, ಆ ವರ್ಷದ ರಾಶಿಫಲ ನೋಡಿಕೊಂಡು ಹೆಣ್ಣು ಮಕ್ಕಳೊಂದಿಗೆ ಆರತಿ ಬೆಳಗಿಸಿಕೊಂಡು, ಗಂಡು ಮಕ್ಕಳನ್ನು ಕರೆದುಕೊಂಡು ಬೇಸಾಯ ಹೂಡಿ ಕೊಂಡು ಗಳೇವು ಚಟುವಟಿಕೆ ಆರಂಭಿಸುವ ಕಾಲ ಕೃಷಿ ಮಕ್ಕಳದ್ದು.

ನಂತರ ಅಮವಾಸ್ಯೆಯ ಮೂರನೆಯ ದಿನ ಬಿದಿಗೆಯ ಚಂದ್ರನ ದರ್ಶನ. ಅಂದು ಹೋಳಿಗೆಯ ಊಟ ಮಾಡಿ ಸಂಭ್ರಮದಿಂದ ಸಾಯಂಕಾಲ ಚಂದ್ರ ದರ್ಶನ ಮಾಡಿ, ಊರ ಹಿರಿಯರಿಗೆ ಕಾಲಿಗೆ ಬಿದ್ದು ಆಶೀರ್ವಾದ ಪಡೆದು ನಂತರ ದೇವರಿಗೆ ಹಣ್ಣುಕಾಯಿ ಮಾಡಿಸಿಕೊಂಡು ಆಚರಿಸುವ ಹಬ್ಬವೇ ಯುಗಾದಿ. ಇದಕ್ಕೆ ಚಂದ್ರಮಾನ ಯುಗಾದಿ ಎಂದೂ ಹೆಸರು.

ಅಮವಾಸ್ಯೆ ಪಾಡ್ಯದಂದು ಎಣ್ಣೆ ಜಳಕ ಮಾಡುವ ಕ್ರಿಯೆಗೆ ಬೂರೇ, ಬೂರೇವೂ ಎನ್ನುವುದುಂಟು. ಹೊಸ ಗುಡಾಣಕ್ಕೆ (ಮಡಿಕೆ) ನೀರು ತುಂಬಿ ಪೂಜಿಸಿ, ನೀರು ಕಾಯಿಸಿ, ತಲೆ, ಮೈಯಗೆಲ್ಲ ಕೊಬ್ಬರಿ ಎಣ್ಣೆ ಹಚ್ಚಿಕೊಂಡು ನೀರಿನಲ್ಲಿ ಬೇವಿನ ಸೊಪ್ಪು ಹಾಕಿ ಕಾಯಿಸಿ ಜಳಕ ಮಾಡಿ, ಪೂಜೆ ಮಾಡಿ ಆರತಿ ಬೆಳಗಿಸಿಕೊಂಡು, ಬೇವು, ಬೆಲ್ಲ, ವಿತರಿಸಿ ಅಂದು ಬದುಕಿನ ಸುಖ-ದುಃಖಗಳ ಸಮಕೃತ್ವದ ಸಾರ್ಥಕ ಕಾಣುವ ಹಂಬಲದಿಂದ ಆರಂಭವಾಗುವ ಈ ಹಬ್ಬ ಕವಿ ಮನಸ್ಸುಗಳಿಗೆ ವಿಶೇಷ ಸಂದೇಶ ಬಿತ್ತಿದೆ. ಬೇಂದ್ರೆಯವರು- ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ.......................... ಹೊಸತು, ಹೊಸತು, ತರುತಿದೆ ಎಂದು ಸಾರಿದ್ದಾರೆ.

ಹೀಗೆ ಮಜ್ಜನ(ಸ್ನಾನ) ಮಾಡುವುದು, ರಾತ್ರಿ ನೀರು, ಬೆಳಗಿನ ನೀರು ಎಂದು ವಿಭಾಗಿಸುವುದುಂಟು. ಸಂಜೆ ನೀರು ಎಂದರೆ ಅಮವಾಸ್ಯೆಯ ಹಿಂದಿನ ದಿನವೇ ಮಜ್ಜನಗೈಯುವುದು. ಬೆಳಗಿನ ನೀರು ಎಂದರೆ ಅಮವಾಸ್ಯೆಯ ದಿನ ಮಜ್ಜನಗೈಯುವುದು. ಹೀಗೆ ನೀರು ಹೊಯ್ದುಕೊಳ್ಳುವುದಕ್ಕೆ 'ಎರೆದುಕೊಳ್ಳುವುದು' ಎನ್ನಲಾಗುತ್ತದೆ. ಬೇವಿನಸೊಪ್ಪು ಹಾಕಿ ನೀರು ಕಾಯಿಸಿ ಕೊಬ್ಬರಿಯೆಣ್ಣೆ ಮೈಗೆಲ್ಲ ತಪ ತಪ ಎನ್ನುವಂತೆ ಹಚ್ಚಿಕೊಂಡು ಎರೆದುಕೊಳ್ಳುವುದು ಬೇಸಿಗೆಯ ದಿನಮಾನಕ್ಕೆ ದೇಹ ತಂಪಾಗಿರಲು ಎನ್ನುವ ಆಶಯ ಜಾನಪದರದ್ದಿರಬಹುದು ಅದೇ ರೀತಿ ಬೇವು, ಬೆಲ್ಲ ಮಿಶ್ರಣ ಮಾಡುವುದು ಹಾಗೂ ತಿನ್ನುವುದು ಆಗಿರಬಹುದು.

ಶ್ಯಾವಿಗೆ, ಬೇವು ಬೆಲ್ಲ, ಹೋಳಿಗೆ ತಿಂದು ಮಕ್ಕಳೆಲ್ಲ ಚಂಡಾಟ, ಲಗೋರಿ ಆಟ, ಚಿನ್ನಿ-ದಾಂಡು ಆಡುವುದು ಒಂದು ಕ್ರೀಡೆಯಾದರೆ, ಯುವಕರು ರೊಕ್ಕ ಹಚ್ಚಿ ಇಸ್ಪೀಟು ಆಡಿ

ಗೆಲ್ಲುವುದು, ಲಿಂಬೆಕಾಯಿ ಎಸೆದು ಸ್ಪರ್ಧಿಸುವುದು ಮುಂತಾದ ಮೋಜಿನ ಆಟಗಳೂ ಜನಪ್ರಿಯ ವಾದವುಗಳು.

ಚಂದ್ರ ದರ್ಶನದ ಮರುದಿನವೇ ಆಚರಿಸುವ ದಿನ ವರ್ಷದ ತೊಡಕು, ಅದು ಹೊಸ ವರ್ಷದ ಆರಂಭದ ದಿನ ಅಂದು ಪವಿತ್ರ ದಿನ, ಬೇಟೆಗಾರರು ಬೇಟೆಗೆ ಹೋಗುವುದೂ ವಾಡಿಕೆ. ಅಂದು ಬಲಿ ತರಲೇಬೇಕು. ಸ್ಪರ್ಧಿಗಳು ಜಯಿಸಲೇಬೇಕೆಂಬ ನಂಬಿಕೆಯೇ ಈ ಆಚರಣೆಗಳ ಮೂಲ ಸೆಲೆ.

ಯುಗಾದಿ ಮುಗಿದ ನಂತರವೇ ಹೊಸ ವರ್ಷ ಆರಂಭ. ಅಂತೆಯೇ ಹೊಸ ಮಳೆಗಳು ಮುಂಗಾರಿನ ಹಂಗಾಮದ ಆರಂಭ. ಕೃಷಿಕರು ತಮ್ಮ ಹೊಲ ಗದ್ದೆಗಳನ್ನು ಸ್ವಚ್ಛ ಗೊಳಿಸುವುದು, ಹದಗೊಳಿಸಿ ಬಿತ್ತನೆಗೆ ಹಣಿ ಮಾಡುವುದು. ತಿಪ್ಪೆಯ ಗೊಬ್ಬರವನ್ನೆಲ್ಲ ಚಕ್ಕಡಿ ಮೂಲಕ ಹೊಲಗಳಿಗೆ ಸಾಗಿಸುವುದು. ಎಲ್ಲ ಕೃಷಿ ಪ್ರಕ್ರಿಯೆಗಳು ಪೂರ್ಣಗೊಂಡು ಸಕಾಲಕ್ಕೆ ಹದ ಮಳೆಯಾದರೆ ಬಿತ್ತನೆಯ ಕಾರ್ಯಗಳೂ ಆರಂಭಗೊಂಡು ಕಾರ ಹುಣ್ಣಿಮೆಯೊಳಗೆ ಸಕಲ ಬಿತ್ತನೆ ಕಾರ್ಯ ಮುಗಿಯಲೇಬೇಕು. "ಹದನೋಡಿ ಉತ್ತಿ, ಬೆದೆ ನೋಡಿ ಬಿತ್ತು" ಎಂಬ ಗಾದೆಯನ್ನೂ ಇಲ್ಲಿನ ರೈತಾಪಿ ವರ್ಗ ಕಟ್ಟಿಕೊಂಡು ಕಾರ್ಯ ಪ್ರವೃತ್ತರಾಗುವುದು ವಾಡಿಕೆ. ಈ ನಡುವೆ ಬೇಸಿಗೆಯ ಬಿರು ಬಿಸಿಲು ಬಿಡುವು ಆಗಿರುವುದರಿಂದ ತಮ್ಮ ತಮ್ಮ ಗ್ರಾಮಗಳ ದೇವರುಗಳ ಜಾತ್ರೆ, ಉತ್ಸವ ಮುಂತಾದ ಆರಾಧನೆಗಳಲ್ಲಿ ಪಾಲ್ಗೊಳ್ಳುವುದೂ ಉಂಟು.

ಯುಗಾದಿಯ ನಂತರ ಬರುವ ದವನದ ಹುಣ್ಣಿಮೆ, ಹುಣ್ಣಿಮೆಯಾಗಿ ಆಚರಿಸಲ್ಪಡುತ್ತದೆಯೇ ಹೊರತು ವಿಶೇಷತೆ ಇಲ್ಲ. ಆದರೆ ತೇರು-ಉತ್ಸವಗಳನ್ನು ಆಚರಿಸುವವರು ಈ ಹುಣ್ಣಿಮೆಯನ್ನೂ ಗಮನಿಸುವುದುಂಟು. ನಂತರ ಬರುವ ಅಕ್ಷಯ ತದಿಗೆ ಅಮವಾಸ್ಯೆ-ನನಗೆ ಇನ್ನೂ ನಿಗೂಢವಾಗಿಯೇ ಇರುವ ಸಂಗತಿಯಂದರೆ, ಈ ಅಮವಾಸ್ಯೆಯನ್ನು "ಅಮೃತ" ಅಮವಾಸ್ಯೆ ಎಂದು ನಮ್ಮ ಮಲೆನಾಡ ಸೆರಗಿನ ಭಾಗದಲ್ಲಿ ಆಚರಿಸುವುದುಂಟು. ಈ ಅಮವಾಸ್ಯೆಯ ಆಚರಣೆಯ ವಿಶೇಷವೆಂದರೆ ನಮ್ಮ ಮಲೆಯ ಸೆರಗಿನ ಹಳ್ಳಿಗಾಡಿನ ಪ್ರತಿ ಹಳ್ಳಿಯ ಪ್ರತಿ ಮನೆಯಲ್ಲಿಯೂ ವಿಶೇಷ ತಿಂಡಿ-ಊಟವೆಂದರೆ ದೋಸೆ ಮಾಡುವುದು. ಯಾಕೆಂದು ಇದುವರೆಗೂ ನನಗೆ ನಿಗೂಡವಾದ ಸಂಗತಿ ಇದಾಗಿದ್ದು, ಬಯಲು ಸೀಮೆಗಳ ಹಳ್ಳಿಗಳಲ್ಲಿ ಈ ಆಚರಣೆ ಅಷ್ಟಾಗಿ ಕಂಡುಬಾರದು. ಅದು ನನ್ನ ಗಮನಕ್ಕೂ ಬಂದಿಲ್ಲವೆಂದೇ ಹೇಳಬೇಕು. ಅಂತೂ ಇದನ್ನು ಅಮೃತ ಅಮವಾಸ್ಯೆ, ದೋಸೆ ಹಬ್ಬವೆಂಬಂತೆ ಆಚರಿಸುತ್ತಿರುವುದು ವಿಶೇಷ.

ಇಷ್ಟೊತ್ತಿಗಾಗಲೇ ಪ್ರಾಕೃತಿಕವಾಗಿ ಮುಂಗಾರು ಮಳೆ ಹೊಯ್ದು ಭೂಮಿ ಹದಗೊಳ್ಳಲು ಅಣಿಯಾಗಿರುತ್ತದೆ. ಬಂದೇ ಬಿಡುತ್ತದೆ ಆಗಿಹುಣ್ಣಿಮೆ. ಈ ಹುಣ್ಣಿಮೆಯ ನಂತರ ರೈತರ ಕೃಷಿ ಚಟುವಟಿಕೆಗಳು ಅತಿ ಬಿರುಸುಗೊಂಡು ಮಡಿ ಮಾಡುವ, ಬೀಜ ಬಿತ್ತುವ, ಸಸಿ ಬೆಳಸುವ ಪ್ರಕ್ರಿಯೆ ಆರಂಭವಾಗಿ ಬಿಡುತ್ತದೆ. ಒಂದು ಕಾಲಕ್ಕೆ ಮೆಣಸಿಕಾಯಿ ಬೆಳೆಗೆ ಪ್ರಸಿದ್ದಿ ಪಡೆದ

ಹಿರೇಕೆರೂರು ಹಾನಗಲ್, ಬ್ಯಾಡಗಿ ತಾಲ್ಲೂಕುಗಳ ರೈತರು ಮೆಣಸಿನ ಮಡಿ ಮಾಡಿ, ನೀರು ಹೊಯ್ದು ಬೆಳೆಸುವ ಕ್ರಿಯೆ ತುರುಸಿನಿಂದಲೇ ಮಾಡುತ್ತಿದ್ದರು. ಇಂದು ಆ ಕ್ರಿಯೆ ಹಿಂಬಡ್ತಿ ಹೊಂದಿ ಹುಣ್ಣಿಮೆ ಆಚರಣೆ, ನಂತರ ಬರುವ ಬಾದಾಮಿ ಅಮವಾಸ್ಯೆಗಳು ಸಾಧಾರಣವಾಗಿ ಆಚರಣೆಗೊಳ್ಳಲ್ಪಡುತ್ತವೆ.

ಈಗ ಮಳೆ ಉತ್ತಮವಾಗಿ ಬಿದ್ದರೆ ಹದ ಚನ್ನಾಗಿ ಆಗಿ, ಬಿತ್ತನೆಯ ಕಾರ್ಯ ಚುರುಕಾಗಿಯೇ ಆಗತಕ್ಕದ್ದು. ಭತ್ತ, ಹತ್ತಿ, ರಾಗಿ, ಸಾಸಿವೆ, ನವಣೆ, ಮುಂತಾದ ಫಸಲುಗಳ ಬಿತ್ತನೆ ಕಾರ್ಯ ಭರದಿಂದಲೇ ನಡೆಯುತ್ತಲಿದ್ದವು. ಆದರೆ ಇಂದು ಕೃಷಿಯೆಂಬುದು ಪರ್ಯಾಯ ಅಥವಾ ಬಹು ಬೆಳೆಯ ಪದ್ಧತಿ ಕಳೆದುಕೊಂಡು ಆ ಜಾಗದಲ್ಲಿ ಮೆಕ್ಕೆಜೋಳ, ಹತ್ತಿ ಮಾತ್ರ ಏಕಸ್ವಾಮ್ಯತ್ವ ಪಡೆದುಕೊಂಡಿವೆ. ಅಂತೆಯೇ ವಿಪತ್ತುಗಳೊಂದಿಗೆ ಬೇಸಾಯಕ್ಕೆ ಪರ್ಯಾಯವಾಗಿ ಟ್ರಾಕ್ಟರ್‌ಗಳು ಬಂದು ಉಳುಮೆಯ ಕ್ರಿಯೆಯನ್ನು ಹಗುರ ಮಾಡಿವೆಯಾದರೂ ಬಹು ದುಬಾರಿಯಾದ ಕೃಷಿಯಾಗಿ ಪರಿವರ್ತನೆಗೊಂಡಿದೆ. ಪ್ರಾರಂಭಿಕ ಕೃಷಿ ಸಂಸ್ಕೃತಿ ಪಲ್ಲಟಗೊಂಡು ಯಾಂತ್ರೀಕೃತ ಕೃಷಿ ಪದ್ಧತಿ ಜಾರಿಗೆ ಬಂದಿದೆ.ಇಂತಹ ವಿಪರ್ಯಾಸದ ದಿನಮಾನಗಳಲ್ಲಿಯೇ ನಮ್ಮ ಹಬ್ಬ-ಹರಿದಿನಗಳು ಆಚರಿಸಲ್ಪಡುತ್ತಿವೆ.

ಕಾರಹುಣ್ಣಿಮೆ:

ಕಾರ್-ಎಂದರೆ ಕಪ್ಪ. ಬಿರು ಬಿಸಲ ಬೇಗೆಯಿಂದ ಬಸವಳಿದ ಪ್ರಕೃತಿ, ಕಪ್ಪು ಮೊಡಗಳಿಂದ ಆಚ್ಛಾದಿತವಾಗಿ ಸುರಿಯಲು ತವಕಿಸುವ ಕಾಲ. ಅದುವೇ ಕಾ-ಹುಣ್ಣಿಮೆಯ ಕಾಲ. ಇಷ್ಟರಲ್ಲಾಗಲೇ ರೈತರು ಬಿತ್ತನೆಯ ಕಾರ್ಯ ಮುಗಿಸಿರಬೇಕು. "ಕಾರಹುಣ್ಣಿಮೆಗೆ ಕಡೆಯ ಬಿತ್ತಿಗೆ" ಎಂಬ ಗಾದೆ ಇದೆ. ಹಾಗೆಯೇ ಮದುವೆಗಳಿಗೂ ಕಾರ ಹುಣ್ಣಿಮೆಯೇ 'ಕಡೆಯ ಲಗ್ನ' ಮಾಡುವ ವಾಡಿಕೆಯೂ ನಮ್ಮಲ್ಲಿ ಒಡಮೂಡಿರುವ ನಂಬಿಕೆ. ಹೀಗಾಗಿ ರೈತಾಪಿ ವರ್ಗ ಕಾರಹುಣ್ಣಿಮೆಯನ್ನು ವಿಶೇಷವಾಗಿ ಆಚರಣೆ ಮಾಡುವ ಪದ್ಧತಿ ಜಾರಿಯಲ್ಲಿದ್ದುದು ಕಂಡು ಬರುತ್ತದೆ. ಕಾರಹುಣ್ಣಿಮೆಯನ್ನು ರೈತಾಪಿ ಜನ 'ಕರಿ' ಹಬ್ಬವೆಂದೂ ಆಚರಣೆ ಮಾಡುವುದುಂಟು. ಕರಿ ಹರಿಯುವುದು ಮುಖ್ಯವಾದ ಪ್ರಕ್ರಿಯೆ. ಒಂದರ್ಥದಲ್ಲಿ ಇದು ಎತ್ತುಗಳ ಹಬ್ಬ ಎಂದರೂ ತಪ್ಪಾಗರಾದು. ಇಲ್ಲಿಯ ತನಕ ಒಣ ಹುಲ್ಲು ತಿಂದು ಸೊರಗಿ ಹೋದ ದನ ಕರುಗಳು ಈ ಹಬ್ಬದಂದು ಹಸಿರು ಹುಲ್ಲು ಮೆಯಲು ಬಿಡುವ ಕಾಲ. ಹೀಗಾಗಿ ಅವುಗಳಿಗೆ ವಿಶೇಷ ಆಚರಣೆಯಾಗಿ ಕಂಡುಬರುತ್ತದೆ.

ಕಾರ ಹುಣ್ಣಿಮೆಯಂದು ಊರ ಪ್ರಮುಖರೆಲ್ಲ ಕೂಡಿಕೊಂಡು ಊರ ಬಣಕಾರರ ಮನೆಯಿಂದ ತಳಿರು, ತೋರಣಗಳಿಂದ ಕಟ್ಟಲ್ಪಟ್ಟ ಕೊಬ್ಬರಿ ಬಟ್ಟಲವನ್ನು ಊರಿನ 'ಕರಿ' ಕಂಬಕ್ಕೆ ಕಟ್ಟಿ ಪೂಜಿಸುತ್ತಾರೆ. ರೈತರೆಲ್ಲ ತಮ್ಮ ಎತ್ತುಗಳನ್ನೆಲ್ಲ ಸಿಂಗರಿಸಿ ಕಾಲುಗಳಿಗೆ ಕೊಬ್ಬರಿ ಕಟ್ಟಿ ಹೋರಿ ಬೆದರಿಸುತ್ತಾರೆ. ಅದನ್ನು ಹಿಡಿಯುವ ಗುಂಪು ಗೆಲುವು ಸಾಧಿಸಿದರೆ ಗೆದ್ದ ಗುಂಪು

ಅದರ ಮೂಲಕ ಖುಷಿಯಿಂದ ಕುಣಿಯುವುದೂ ಉಂಟೂ. ಇಡೀ ದಿನ ಹೋರಿ ಓಡಿಸಿ, ಸಾಯಂಕಾಲ 'ಕರಿ' ಹರಿಯುವ ಕಾರ್ಯಕ್ರಮ. ಯುವಕರೆಲ್ಲ ಎರಡೂ ಹಗ್ಗದಲ್ಲಿ ಕಟ್ಟಿ ಕರಿಕಲ್ಲಿಗೆ ಕಟ್ಟಿದ ಕೊಬ್ಬರಿಯನ್ನು ಹಾರಿ (ಜಿಗಿದು) ಹರಿಯುವ ಪ್ರಕ್ರಿಯೆ, ಹೀಗೆ ಸ್ಪರ್ಧೆಯು ನಡೆಯುತ್ತದೆ.

ಈ ಕರಿ ಕಟ್ಟಿದ ನಂತರ ಆಕಳು, ಎಮ್ಮೆಗಳನ್ನು ಕರಿ ದಾಟದಂತೆ ನೋಡಿಕೊಳ್ಳಲಾಗುತ್ತದೆ. ಯಾಕೆಂದರೆ ಹಾಗೊಂದು ವೇಳೆ ಆಕಳು, ಎಮ್ಮೆಗಳು ಕರಿ ದಾಟಿದವೆಂದರೆ ಅವುಗಳು ಗೊಡ್ಡು (ಬರಡು) ಬೀಳುತ್ತವೆಯೆಂಬ ನಂಬಿಕೆ. ಹೀಗಾಗಿ ಬರಿ ಎತ್ತುಗಳನ್ನು (ಹೋರಿ) ಮಾತ್ರ ಕರಿ ದಾಟಿಸಲಾಗುತ್ತದೆ.

ಇದಕ್ಕೂ ಮುಂಚೆ ಅಂದರೆ ಹಿಂದಿನ ದಿನ ರೈತರಲ್ಲಿ ತಮ್ಮ ಬಂಡಿ (ಚಕ್ಕಡಿ) ಗಳನ್ನೆಲ್ಲ ಬಿಚ್ಚಿ ಗಾಲಿ ಪೂಜೆ ಮಾಡುತ್ತಾರೆ. ಅಲ್ಲದೇ ಬಿತ್ತಲು ಬಳಸಿದ ಕೂರಿಗೆಯನ್ನೂ ಪೂಜಿಸಿ ಬಿಚ್ಚಿಡಲಾಗುತ್ತದೆ. ನಂತರ ಎತ್ತುಗಳನ್ನು ಮನೆಯ ಒಳಗೆ ಕರೆದುಕೊಂಡು ಬಂದು ಅವುಗಳನ್ನು ಪೂಜಿಸಿ, ಧವಸ ಧಾನ್ಯ ತಿನ್ನಿಸಿ, ಮತ್ತೆ ಹಕ್ಕೆಗೆ ಒಯ್ಯುವ ಸಂಪ್ರದಾಯ. ಒಳಗೆ ದೇವರ ಮುಂದೆ ಪೂಜಿಸಿದ ಹೋರಿ ಸಗಣಿ ಹಾಕಬೇಕು ಅಥವಾ ಮೂತ್ರ ವಿಸರ್ಜಿಸಬೇಕೆಂಬ ನಂಬಿಕೆ ಜನರಲ್ಲಿದೆ. ಅಲ್ಲದೆ, ಅದರ ಮೇಲೆ ವರ್ಷದ ಮಳೆ, ಬೆಳೆ, ವಿಚಾರದ ಲೆಕ್ಕ ಹಾಕುವುದುಂಟು.

ಕರಿ ಹರಿಯುವ ಸಂಪ್ರದಾಯ ಮಲೆನಾಡ ಭಾಗದಲ್ಲಿ ಪ್ರಚಲಿತವಿದ್ದರೆ ಬಯಲು ಸೀಮೆಯಲ್ಲಿ ಪೂಜೆಗೊಂಡ ಎತ್ತುಗಳನ್ನು ಬಂಡಿ ಕಟ್ಟಿ ಓಡಿಸುವ ಸ್ಪರ್ಧೆ ಏರ್ಪಡಿಸುವುದು ರೂಢಿಯಲ್ಲಿದೆ.

ಕಾರ ಹುಣ್ಣಿಮೆಯಂದು ಹಾವೇರಿ ತಾಲ್ಲೂಕಿನ ಕರ್ಜಗಿ ಗ್ರಾಮದಲ್ಲಿ ಆ ಗ್ರಾಮದ ಬ್ರಹ್ಮದೇವರಿಗೆ ವಿಶೇಷ ಪೂಜೆ ನೆರವೇರಿಸಿ ಊರ ಪ್ರಮುಖರೆಲ್ಲ ಸೇರಿ ಬ್ರಹ್ಮೇಶ್ವರನಿಗೆ ಕಣ್ಣು ಕಟ್ಟಿಕೊಂಡು ಹೊರಣ ತಿಕ್ಕುವ ಕಾರ್ಯಕ್ರಮ ಆಚರಿಸಲಾಗುತ್ತದೆ. ಬ್ರಹ್ಮದೇವರ ನೆತ್ತಿ ಹಸುಮಕ್ಕಳ ನೆತ್ತಿಯಂತಾಗಿದ್ದು ಅದು ಭಕ್ತರು ತಿಕ್ಕಿದ ಹೊರಣ ತಿನ್ನುವುದೆಂಬ ಪ್ರತೀತಿ ಗ್ರಾಮಸ್ಥರು ಇಂದಿಗೂ ನಿರಂತರವಾಗಿ ನಡೆಸಿಕೊಂಡು ಬಂದಿದ್ದಾರೆ.

ರಾಣೇಬೆನ್ನೂರು ತಾಲ್ಲೂಕಿನ ದೇವರಗುಡ್ಡದ ಮಾಲತೇಶ ಸ್ವಾಮಿಗೆ ಕಾರಹುಣ್ಣಿಮೆಯಂದು ಗಂಗೆಮಾಳಮ್ಮನೊಂದಿಗೆ ಮದುವೆ ಮಾಡುವ ಸಂಪ್ರದಾಯ ಇಂದಿಗೂ ನಡೆಯುತ್ತಿದೆ. ಹೀಗಾಗಿ ಕಾರ ಹುಣ್ಣಿಮೆಗೆ ಕಡೆಯ ಲಗ್ನವೆನ್ನುವ ಪ್ರತೀತಿ ಉಂಟು.

ಹೀಗೆ ಕಾರಹುಣ್ಣಿಮೆ ಆಚರಿಸಿದ ರೈತಾಪಿ ಜನ ತಮ್ಮ ರಾಸುಗಳನ್ನು ಹುಲ್ಲು ಮೇಯಲು ಬಿಡುವುದುಂಟು.

ಕಾರಹುಣ್ಣಿಮೆ ಕಳೆದು ಬರುವ ಅಮವಾಸ್ಯೆಯಿಂದ ಆರಂಭವಾಗುವುದೇ ಆಶಾಡ ಮಾಸ:

ಆಶಾಡ ಮಾಸ ಬಂದೀತಮ್ಮ, ಅಣ್ಣ ಬರಲಿಲ್ಲ ಕರಿಯಾಕ, ಜಾನಪದರ ಬದುಕು ಆಶಾಡ ಮಾಸವನ್ನು ವಿಶೇಷವಾಗಿ ಆಚರಿಸುತ್ತಾರೆ. ಅದರಲ್ಲೂ ಮದುವೆಯಾಗಿ ಗಂಡನ ಮನೆಗೆ ತೆರಳಿದ ಹೆಣ್ಣು ಮಕ್ಕಳು ತವರಿನ ದಾರಿ ಕಾಯುವುದು, ತವರಿನವರು ಬಂದು ಕರೆದುಕೊಂಡು ಹೋಗುವುದು ಸಂಪ್ರದಾಯ.

"ಆಶಾಡದಾಗ ಅತ್ತಿ ಸೊಸಿ ಕೂಡಿರಬಾರದು" ಎನ್ನುವ ಗಾದೆ ಜನಜನಿತ. ಒಂದು ತಿಂಗಳ ಕಾಲ ತವರಿನಲ್ಲಿ ಕಳೆಯುವ ಸಂಭ್ರಮ, ಹೆಣ್ಣು ಮಕ್ಕಳದ್ದಾಗಿದೆ.

ಈ ಹೊತ್ತಿಗಾಗಲೇ ಪ್ರಾಕೃತಿಕ ಸ್ವರೂಪದಲ್ಲಿ ಅನೇಕ ಬದಲಾವಣೆಗಳಾಗಿರುತ್ತವೆ. ಮುಗಿಲೆಂಬುದು ಕಪ್ಪು ಮೋಡಗಳಿಂದ ಭರಪೂರವಾಗಿ ತುಂಬಿದ್ದು ಮಾನ್ಸೂನ್ ಗಾಳಿಗಳ ಮಳೆ ಶುರುವಾಗಲಾರಂಭಿಸುತ್ತದೆ. ಸಮುದ್ರದ ತಂಪು ಗಾಳಿ ಬೀಸಿ ಬೀಸಿ ಹೊಡೆದು ವಿಪರೀತ ಚಳಿ ಗಾಳಿಗಳು ಬೀಸಲಾರಂಭಿಸಿ ಹೊಲ-ಮನೆಗಳಲ್ಲಿ ಕೆಲಸ ಮಾಡುವವರ ಜೀವ ತಲ್ಲಣಿಸಿ ಬಿಟ್ಟು ಘಾಸಿಯಾಗಿ ಹೋಗಿರುತ್ತದೆ. ಹೀಗಾಗಿ ಮಲೆನಾಡ ಜನ "ಆಶಾಢದಾಗಿನ ಗಾಳಿ ಬೀಸಿ ಬೀಸಿ ಹೊಡೆಯುವಾಗ ಯಾಕೆ ನನ್ನ ಜೀವ ಹೆಣ್ಣಾಗಬಾರದಿತ್ತಾ" ಎಂದು ಉದ್ಗಾರ ತೆಗೆಯುವ ಗಾದೆ ಮಾತು ಜನಪ್ರಿಯವಾಗಿ ಬಿಟ್ಟಿದೆ. ಬಿತ್ತಿದ ಕಾಳುಗಳೆಲ್ಲ ಮೊಳಕೆ ಬಂದು ಎರಡು ಮೂರು ಎಸಳು ಬಂದು ಹಸಿರಿನ ಮೇಲಂಗಿಯಂತೆ, ಭೂಮಿ, ಶೃಂಗಾರ ರಸಿಕರನ್ನು ಮುದ ಗೊಳಿಸುತ್ತದೆ.

ಕವಿ ಕಾಳಿದಾಸ ಮೇಘ ಸಂದೇಶ ಕಳಿಸಿದ್ದು, ಯಕ್ಷ, ಯಕ್ಷಿಣಿಯರ ವಿರಹ ವೇದನೆಗೆ ಮುನ್ನುಡಿ ಬರೆದದ್ದು ಆಶಾಢ ಮಾಸದಲ್ಲಿಯೇ.

ಇಲ್ಲಿಂದ ಒಂದು ತಿಂಗಳ ತನಕ ಈ ಕ್ರಿಯೆ ನಡೆದು ಕೆರೆ-ನದಿಗಳೆಲ್ಲ ಉಕ್ಕಿ ಹರಿಯುವ ಕಾಲ.'ಬಾಗಣ ಅರ್ಪಿಸುವ ಕಾಲ'. ಮುಂದೆ ಅಮವಾಸ್ಯೆಯ ತನಕ ನಡೆದು ನಾಗರ ಅಮವಾಸ್ಯೆ ಬಂದು ಶ್ರಾವಣ ಮಾಸಕ್ಕೆ ಆಹ್ವಾನ ನೀಡುತ್ತದೆ. ಅಮವಾಸ್ಯೆ ಕಳೆದು ಪಂಚಮಿಯಂದು ನಾಗನಿಗೆ ಹಾಲೆರುಯುವ ಕ್ರಿಯೆ ಎಲ್ಲ ಭಾಗದಲ್ಲೂ ಸರ್ವೆಸಾಮಾನ್ಯ.

ಆದರೆ ಹಿರೇಕೆರೂರ ತಾಲೂಕಿನ ಕೆಲವು ಹಳ್ಳಿಗಳಲ್ಲಿ ಶ್ರಾವಣ ಮಾಸದ ಪಂಚಮಿಯಂದು ನಾಗಪ್ಪನಿಗೆ ಹಾಲೆರೆಯುವುದಿಲ್ಲ. ಬದಲಾಗಿ ಭಾದ್ರಪದ ಶುದ್ಧ ಚೌತಿಯ ದಿನ ಹಾಲೆರೆಯುವ ವಾಡಿಕೆ ಇದೆ.

ಅಂತೂ ಶ್ರಾವಣದ ನಾಗರಪಂಚಮಿ ನಾರಿಯರ ಹಬ್ಬ. ಹಾಲೆರೆದು, ಉತ್ತುತ್ತಿ-ಕೊಬ್ಬರಿ ತಿಂದು ಜೋಕಾಲಿ ಜೀಕುವ ಸಂಭ್ರಮ ಇದಾಗಿದ್ದು, ಕವಿ ಬೇಂದ್ರೆಗೆ ಶ್ರಾವಣ ಬಂತು ನಾಡಿಗೆ, ಕಾಡಿಗೆ, ಬೀಡಿಗೆ ಎಂದು ಹಾಡಿದ್ದು ಅವಿಸ್ಮರಣೀಯ.

ಗ್ರಾಮೀಣ ರೈತಾಪಿ ವರ್ಗದ ಜನ ಸಮೂಹ ಶ್ರಾವಣ ಮಾಸವನ್ನು 'ಸಣ್ಣ ವಾರ' ವೆಂದು ಆಚರಿಸಿ ಸಂಭ್ರಮ ಪಡುವುದು ತಿಂಗಳುದ್ದಕ್ಕೂ ನಡೆಯುತ್ತದೆ.

ಗೌರಿ-ಗಣೇಶ ಹಬ್ಬ:

ಭಾದ್ರಪದ ಮಾಸದ ಶುಕ್ಲಪಕ್ಷದ ಚೌತಿ, ಚತುರ್ಥಿಯನ್ನು ನಾಡಿನಾದ್ಯಂತ ಗಣೇಶನ ಹಬ್ಬವನ್ನು ಅತ್ಯಂತ ಸಡಗರ, ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಪ್ರಾಯಶಃ ಈ ಹಬ್ಬ ವಸಾಹತು ಕಾಲಘಟ್ಟದಿಂದ ಆರಂಭಗೊಂಡು ವಸಾಹತೋತ್ತರ ಕಾಲಘಟ್ಟದಲ್ಲಿ ಅತ್ಯಂತ ಪ್ರಭಾವಿ ಹಬ್ಬವಾಗಿ ವೈಭವಪೂರಿತ ಹಬ್ಬವಾಗಿ ಆಚರಿಸಲ್ಪಡುತ್ತಿರುವುದು ವಿಶೇಷ. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಮಹಾರಾಷ್ಟ್ರದ ಹೋರಾಟಗಾರರು ಆರಂಭಿಸಿದ ಈ ಹಬ್ಬ ನಾಡಿನಾದ್ಯಂತ ಬಹುಬೇಗನೇ ವಿಸ್ತಾರ ಪಡೆದು ಕೊಂಡಿರುವುದು ಕಾಲಘಟ್ಟದ ಮಹತ್ವದ ಬೆಳವಣಿಗೆ.

ಹಾಗೆ ನೋಡಿದರೆ ಗಣೇಶನ ಹಬ್ಬವನ್ನು ಗ್ರಾಮೀಣ ಜನತೆ ಇಷ್ಟೊಂದು ವೈಭವದಿಂದ ಆಚರಿಸಿದ್ದ ಉದಾಹರಣೆಗಳು ಅತಿ ವಿರಳ. ಶಾಲೆಗಳಲ್ಲಿಯೂ ಪ್ರತಿಷ್ಠಿತ, ಸುಶಿಕ್ಷಿತ, ಮೇಲ್ವರ್ಗದ, ಮೇಲ್ಜಾತಿಯ ಜನರ ಮನೆಯಲ್ಲಿಯೇ ಪ್ರತಿಷ್ಠಾಪನೆಗೊಂಡು, ವೈಭವದಿಂದ ವಿಸರ್ಜಿತಗೊಳ್ಳುವ ಗಣೇಶ ಇಂದು ಜನಮಾನಸದಲ್ಲಿ ಸಾಂಸ್ಕೃತಿಕ ಮಹತ್ವ ಪಡೆದಿರುವುದು ವಸಾಹತೋತ್ತರ ಕಾಲಘಟ್ಟದ ಮಹತ್ವದ ಬೆಳವಣೆಗೆ.

ಇಂದಿಗೂ ಗ್ರಾಮೀಣ ಭಾಗದಲ್ಲಿ ಬೆರಳೆಣಿಕೆಯಷ್ಟು ಜನ ಮಾತ್ರ ಗಣೇಶನ ಪ್ರತಿಷ್ಠಾಪನೆ ಮಾಡುವ ವಾಡಿಕೆಯಿದೆ. ಗ್ರಾಮೀಣ ಜನಪದರಿಗೆ ಬೆನಕನ ಹಬ್ಬಕ್ಕಿಂತಲೂ ಜೋಕುಮಾರನ ಹಬ್ಬ ಮಹತ್ವವಾಗಿ ಪರಿಗಣನೆಗೊಂಡು ಆಚರಣೆಗೊಳ್ಳುತ್ತಿರುವುದು ಇಂದಿಗೂ ಪ್ರಚಲಿತವಿರುವ ಸಂಗತಿ.

ಗಣೇಶನ ಹಬ್ಬವನ್ನು ಚೌತಿಯಂದು ಆಚರಿಸಿದರೆ ಜೋಕುಮಾರನ ಹಬ್ಬದ ಆರಂಭ; ಅಷ್ಟಮಿಯಂದು ಆರಂಭವಾಗುವುದು. ಅಂದು ಊರಿನ ಕೆಲವೂಂದು ಕುಟುಂಬಗಳು "ಅಣಜಿಗೆವ್ವ"ನನ್ನು ಪ್ರತಿಷ್ಠಾಪಿಸುವರು. ಅಂದೇ ಅವಳಿಗೆ ಪ್ರಸವ ವೇದನೆ ಆರಂಭಗೊಂಡು ಜೋಕುಮಾರನ ಜನನವಾಗುವುದೆಂದೂ ಮರುದಿನದಿಂದ ಜೋಕುಮಾರನನ್ನೂ ಊರೂರು ಸುತ್ತಾಡಿಸುವ ಆತನ ಗುಣಗಾನದ ಹಾಡು ಹೇಳುತ್ತ ಸುತ್ತುವುದು ಸಂಪ್ರದಾಯ. ಸುಣಗಾರರು ಈ ಸಂಪ್ರದಾಯ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರಧಾರಿಗಳು. ಹುಟ್ಟಿದ ದಿನದಿಂದ ಏಳು ದಿನ ಆತನ ಪ್ರದಕ್ಷಿಣೆ, ಆತನ ಬಲಿಯಾಗುವುದು ಹಾಡುಗಳಲ್ಲಿ ಸ್ವಾರಸ್ಯವಾಗಿ ಒಡಮೂಡುತ್ತದೆ.

"ಕುಂಬಾರ ಕೇರಿನ ಹೊಕ್ಕಾನ, ನನಕುಮಾರ
ಕುಂಬಾಳ ಹೂವ ಮುಡಿದಾನ ।
ಕುಂಬಾಳ ಹೂವ ಮುಡಿದಾಗ । ತಾಯವ್ವ

ದಿಟನಾ ದೇವಿಯ ಮಗನವ್ವ ।

ಎನ್ನುವ ಹಾಡಿನಲ್ಲಿ ಆತನ ತಾಯಿ ದಿಟ್ನಾ ದೇವಿ ಎಂದು ತಿಳಿದು ಬರುತ್ತದೆ. ಆ ತಾಯಿಯೇ ಗ್ರಾಮೀಣರು 'ಅಣಜಿಗವ್ವ' ಎಂದೂ ಕರೆಯುವುದುಂಟು. ಅಂದೇ ಎಳೆ ಅಷ್ಟಮಿಯನ್ನೂ ಆಚರಿಸಿ, ಊರವರೆಲ್ಲ ಆ ಮನೆಯಿಂದ ಹತ್ತಿಯ ನೂಲಿನ ಎಳೆ ಒಯ್ದು ಪೂಜಿಸುವ ವಾಡಿಕೆ.

"ಆಡಿ ಬಾರ ನನ ಕಂದ ಲೋಕೆಲ್ಲಾ ತಣಿಯಲಿ
ಬೇಗಾನೆ ಬೆಣ್ಣಿ ಕೊಡಿರವ್ವ" ।

ಎಂದು ಆತನಿಗೆ ಬೆಣ್ಣೆ, ಹಾಲು, ಹೈನದ ಅಭಿಷೇಕ ಮಾಡಿಸುತ್ತಾರೆ. ಈ ಹೊತ್ತಿಗಾಗಲೇ ಪ್ರಕೃತಿಯ ಮೇಲೆ ಅನೇಕ ಮಹತ್ವದ ಬದಲಾವಣೆಗಳಾಗಿ ಜಿಟಿ ಜಿಟಿ ಮಳೆಗೆ ಬದಲಾಗಿ ಅಡ್ಡ ಮಳೆ ಸುರಿಯುವ ಕಾಲ ಇದಾಗಿದ್ದು ಜೋಕುಮಾರನ ಹಾಡು ಸೊಗಸಾಗಿ ಬಿಂಬಿಸುತ್ತದೆ.

ಅಡ್ಡಡ್ಡ ಮಳಿ ಬಂದು ದೊಡ್ಡ ದೊಡ್ಡ
ಕೆರಿ ತುಂಬಿ । ಗೊಡ್ಡುಗಳೆಲ್ಲ ಹಯನಾಗಿ
ಗೊಡ್ಡುಗಳೆಲ್ಲ ಹಯನಾಗಿ ಗೌಡರ
ಸೆಡ್ಡಿಯ ಮ್ಯಾಲ ಸಿರಿ ಬರಲಿ ॥

ಎಂದು ಜೋಕುಮಾರನನ್ನು ಹೊತ್ತು ತಂದ ಮಹಿಳೆಯರು ಹಾರೈಸುವುದು ಗಮನಾರ್ಹವಾದ ವಿಷಯ.

ಹೀಗಾಗಿ ಕೃಷಿ ಸಂಸ್ಕೃತಿ ಜೋಕುಮಾರನನ್ನು ವಿಜೃಂಭಣೆಗೊಳಿಸುತ್ತದೆಯೇ ಹೊರತು ಗಣೇಶನನ್ನಲ್ಲ. ನಂತರ ಜೋಕುಮಾರನ ಬಲಿಯಾಗುವುದು, ಮಡಿವಾಳರು ಆತನ ತಿಥಿ ಆಚರಣೆ ಮಾಡುವುದು ವಿಶೇಷ. ಸುಣಗಾರ ಮಹಿಳೆಯರು ಜೋಕುಮಾರನನ್ನು ಹೊತ್ತೊಯ್ದು ಬಿಕ್ಷಾಟನೆ ಮಾಡುವುದು ಕಂಡು ಬರುತ್ತದೆ. ಒಟ್ಟಿನಲ್ಲಿ ಹಬ್ಬದ ಆಚರಣೆ ಕೃಷಿಕರು, ಕೃಷಿ ಉಪಕಸುಬುದಾರರು ಆಚರಿಸುವ ಹಬ್ಬವಾಗಿರುವುದು ವಿಶೇಷ. ಕೃಷಿ ಮೂಲ, ಗ್ರಾಮ ಮೂಲದ ಜೋಕುಮಾರನ ಹಬ್ಬಕ್ಕೆ ನಗರೀಕೃತ, ಸುಸಂಸ್ಕೃತ ಮೂಲದ ಗಣೇಶೋತ್ಸವ ಸವಾರಿ ಮಾಡಿರುವುದು ವಿಪರ್ಯಾಸವೇ ಅಲ್ಲವೆ?

ಇನ್ನು ಇದೇ ಸಂದರ್ಭದಲ್ಲಿ ಗೌರಿ ಹಬ್ಬವನ್ನು ಗೌರಿ ಗಣೇಶ ಹಬ್ಬವೆಂದು ಆಚರಿಸುವುದು ವಾಡಿಕೆ. ಗಣೇಶನ ಜೊತೆಗೆ ಗೌರಿಯನ್ನು ಕೂಡ್ರಿಸಿ ಆಚರಣೆ ಮಾಡುವುದು ಪದ್ಧತಿ.

ಆದರೆ ಹಿರೇಕೆರೂರ ತಾಲೂಕಿನ ಎತ್ತಿನ ಹಳ್ಳಿ ಗ್ರಾಮದಲ್ಲಿ ಗೌರಿ ಹಬ್ಬವನ್ನು ವಿಶೇಷವಾಗಿ ಆಚರಣೆ ಮಾಡುವುದು ಪರಂಪರೆಯಾಗಿ ನಡೆದು ಬಂದಿದೆ. ಮೂರು ದಿನಗಳ ಕಾಲ ಗೌರಿಯನ್ನು ವಿಶೇಷ ಅಲಂಕಾರಗಳಿಂದ ಪೂಜಿಸಿ, ವಿಸರ್ಜನೆ ಮಾಡುವ ಸಾಂಪ್ರದಾಯಿಕತೆ ಸಾಂಸ್ಕೃತಿಕ ವಲಯದಲ್ಲಿ ಮಹತ್ವದ ಘಟ್ಟವೆಂದೇ ಭಾವಿಸಬಹುದಾಗಿದೆ. ಜಿಲ್ಲೆಯ ಯಾವುದೇ ಭಾಗದಲ್ಲಿ ಇಂತಹ ಆಚರಣೆ ಕಂಡುಬರುವುದಿಲ್ಲ.

ಆಶ್ವೀಜ ಶುದ್ಧ ಮಾರ್ನೋಮಿ ಬರಲೆಂದು
ಲೇಸಾಗಿ ಹರಸಿದೆವು ಬಾಲಕರು ಬಂದು.

ಆಶ್ವೀಜ ಮಾಸದಲ್ಲಿ ಬರುವ ಮಹಾನವಮಿ ಹಬ್ಬದ ನಿಮಿತ್ಯ, ಶಾಲಾ ಬಾಲಕರೆಲ್ಲ ಊರತುಂಬ ಪ್ರಭಾತ ಪೇರಿ ನಡೆಸಿ ಶಿಕ್ಷಣ-ಶಿಕ್ಷಕರ ಬಗೆಗೆ ಜನರಿಗಿಲ್ಲಿ ತಿಳುವಳಿಕೆ ನೀಡುತ್ತ ಸಾಗುವುದು ಅಂದಿನ ನಮ್ಮಂಥ ವಿದ್ಯಾರ್ಥಿ ಬಾಲಕರಿಗೆ ಸಂಭ್ರಮದ ದಿನಗಳಾಗಿದ್ದವು. ಊರ ನಾಗರೀಕರಿಂದ ಸಂಗ್ರಹವಾದ ಧಾನ್ಯಗಳನ್ನೆಲ್ಲ ಶಿಕ್ಷಕರು ತಮ್ಮ ಉಪ ಜೀವನಕ್ಕೆ ಉಪಯೋಗಿಸುತ್ತಿದ್ದ ಅಂದಿನ ದಿನಮಾನಗಳ ಗೌರವಿತ ಶಾಲಾ ಶಿಕ್ಷಕರಿಗೂ, ಇಂದಿನ ಶಾಲಾ ಶಿಕ್ಷಕರಿಗೂ ಎಂತಹ ಅಂತರ.

ಮಹಾನವಮಿಗೆ ಮನೆ ನೋಡಲಿಕ್ಕೆ ಬರುವ ಚಳಿಗಾಲದ ತೀವ್ರ ಚಳಿಯ ಆತ್ಮೀಯ ಸ್ವಾಗತ ಮಾಡಿ ನವರಾತ್ರಿ-ಹಬ್ಬ ಆಚರಣೆ ವಿಶಿಷ್ಠವಾದದ್ದು. ಇದನ್ನು ಬನ್ನಿ ಹಬ್ಬ ಎಂದು ಕರೆಯುವುದು ರೂಢಿ. ಶಕ್ತಿದೇವತೆ ಬನ್ನಿ ಮಹಾ ಕಾಳಿಗೆ ಬನ್ನಿ ಮುಡಿದು ಊರವರಿಗೆಲ್ಲ ಬನ್ನಿ ಪತ್ರಿ ಹಂಚಿ ಆಶೀರ್ವಾದ ಪಡೆಯುವುದು ಸಂಪ್ರದಾಯವಾಗಿತ್ತು. ಬನ್ನಿ ವಿತರಿಸಿ ಕಾಲು ಮುಟ್ಟಿ ನಮಸ್ಕರಿಸಿ, ಕೈಮುಗಿದು ಆಶೀರ್ವಾದ ಪಡೆಯುವುದು ಜನ-ಜಾನಪದರ ನಂಬಿಕೆ. ಬನ್ನಿಗೆ 'ಬಂಗಾರ'ವೆಂದೂ ಕರೆಯುವುದುಂಟು.

ಜಾನಪದ ಕೋಲಾಟವೊಂದರಲ್ಲಿ ಬರುವ ಹಾಡು:
ಬನ್ನಿ ಮುಡಿಯೋಣ ಬಾರ, ಕೋಲು ಕೋಲ
ಚಿನ್ನ ತರೋಣ ಬಾರ, ಕೋಲು ಕೋಲ ಎಂದು

ಸಂಭ್ರಮದಿಂದ ಕೋಲುಹಾಕಿ ಕುಣಿಯುತ್ತ ಬನ್ನಿ ವಿತರಿಸುವ ಸಂಭ್ರಮ ಅಸಾಧಾರಣ. ಕಾರಿ ಮುಳ್ಳಿಗೆ ಚಂಡು ಹೂವು ಚುಚ್ಚಿಕೊಂಡು, ಆರತಿ ಬಟ್ಟಲಲ್ಲಿ ಸಿಕ್ಕಿಸಿ ಬನ್ನಿ ಗಿಡಕ್ಕೋಗಿ ಬನ್ನಿ ಮುಡಿಯುವ ಕ್ರಿಯಾ ಚರಣ ಇಂದಿಗೂ ಚಾಲ್ತಿಯಲ್ಲಿದೆ.

ಊರ ದೇವಿಯನ್ನು ಪಲ್ಲಕ್ಕಿಯಲ್ಲಿ ಕೂಡ್ರಿಸಿಕೊಂಡು ಬನ್ನಿ ಮರಕ್ಕೆ ಹೋಗಿ ಅಲ್ಲಿ ಪೂಜೆ ಸಲ್ಲಿಸಿ, ಪೂಜಾರಿ-ಬಣಕಾರರು ಮೊದಲೇ ಬನ್ನಿ ಮರದಲ್ಲಿ ಇರಿಸಿಬಂದ ಬಿಲ್ಲು, ಬಾಣಗಳನ್ನು ತೆಗೆದುಕೊಂಡು ಗುರಿ ಹೊಡೆಯುವ ಕಾರ್ಯಕ್ರಮ ಮುಗಿಸಿಕೊಂಡು ಮರಳಿ ಆ ಬಿಲ್ಲು ಬಾಣಗಳನ್ನು ಅದೇ ಬನ್ನಿ ಮರಕ್ಕೆ ನೇತು ಹಾಕಿ ಬರುವುದುಂಟು. ಈ ಕ್ರಿಯೆ ವಿರಾಟ ನಗರದ ಮೇಲೆ ಆಕ್ರಮಣಕ್ಕೆ ಬಂದ ಕೌರವರ ಪಾಳೆಯವನ್ನು ಉತ್ತರ ಹಾಗೂ ಶಿಖಂಡಿ ,ಅರ್ಜುನರು ನಡೆಸಿದ ಕಾಳಗದ ಸಂದರ್ಭ ನೆನಪಿಗೆ ಬಾರದಿರದು. ಹಿರೇಕೆರೂರ ತಾಲ್ಲೂಕಿನ ಸಾತೇನ ಹಳ್ಳಿಯ ಶಾಂತೇಶ ದೇವಸ್ಥಾನದಲ್ಲಿ ಈ ಹಬ್ಬದಂದು ವಿಶೇಷ ಪೂಜೆ ನಡೆಯುವುದು. ಅಂದು ಮಕ್ಕಳಾಗದ ಹೆಂಗಸರು ಹಾಗೂ ಬರಡು ದನಗಳಿಗೆ ಔಷಧಿ ಕೊಡುವ ವಿಶೇಷ ಕಾರ್ಯಕ್ರಮವಿದ್ದು ನೂರಾರು ಜನ, ಜಾನುವಾರುಗಳು ಆಗ ಬರುವುದುಂಟು.

ಈ ಹಬ್ಬವನ್ನು ನಾಡಹಬ್ಬವಾಗಿಯೂ ಆಚರಿಸುವ ಪದ್ಧತಿಯುಂಟು. ಹಾನಗಲ್ಲು ನಗರದಲ್ಲಿ ಇಂದಿಗೂ ಪ್ರತಿ ವರ್ಷ ನಾಡ ಹಬ್ಬದ ಕಾರ್ಯಕ್ರಮಗಳನ್ನು ಔಪಚಾರಿಕವಾಗಿ ನಡೆಸಿಕೊಂಡು ಬರುತ್ತಿರುವುದು ಗಮನಾರ್ಹ.

ಭೂಮಿ ಹುಣ್ಣಿಮೆಯ-ಚರಗ ಚಲ್ಲುವುದು:

ಕಾರಹುಣ್ಣಿಮೆಯ ನಂತರ ಜಾನಪದರು ಆಚರಿಸುವ ಹುಣ್ಣಿಮೆಗಳಲ್ಲಿ ಭೂಮಿ ಹುಣ್ಣಿಮೆ ಪ್ರಮುಖ. ಕಾರಹುಣ್ಣಿಮೆಗೆ ಕಡೆ ಬಿತ್ತಿಗೆಯಾಗಿ ಬಿತ್ತಿದ ಪೀಕುಗಳೆಲ್ಲ ಬೆಳೆದು ಫಸಲಿಗೆ ಬಂದು ಪೈರುಗಳೆಲ್ಲ ಹೊಡೆ ತುಂಬಿ ಗರ್ಭಧರಿಸಿದ ಗೃಹಿಣಿಯಂತಾಗಿ ಭೂಮಿ ತಾಯಿಗೆ ಕೃಷಿಕರು ತೀರಿಸುವ ಋಣ ಈ ಹಬ್ಬ. ಸೀಗಿಹುಣ್ಣಿಮೆ, ತುಂಬು ಗರ್ಭಿಣಿ ಸ್ತ್ರೀಗೆ ಮಾಡುವ 'ಸೀಮಂತ' ಕಾರ್ಯದಂತೆ ರೈತಾಪಿ ಜನ ಜಾನಪದರು ಗರ್ಭವತಿ ಭೂತಾಯಿಗೆ ವೈವಿಧ್ಯಮಯ ಭಕ್ಷ, ಭೋಜನಾದಿಗಳೊಂದಿಗೆ ಹೊಲಕ್ಕೆ ಹೋಗಿ ಪೂಜೆ ಸಲ್ಲಿಸಿ ಅಲ್ಲಿಯೇ ಊಟ ಮಾಡಿ ಸಂಭ್ರಮಿಸುವುದನ್ನು ಅನುಭವಿಸಬೇಕು. ಕಾಂಕ್ರಿಟ್ ಕಾಡಿನ ಜನಕ್ಕೆ ಅನುಭವವಾಗುವುದಾದರೂ ಹೇಗೆ.

ಹಬ್ಬದ ಹಿಂದಿನ ದಿನ ರೈತರು, ಬೇಲಿ-ಮೇಲಿನ ವಿವಿಧ ಸೊಪ್ಪು ಸೆದೆಗಳನ್ನೆಲ್ಲ ತಂದು ಬೇಯಿಸಿ, ಚರಿಗೆಗೆ ತುಂಬಿ, ಪೂಜಿಸಿ, ಮರುದಿನ ಬೆಳಗ್ಗೆ ಅವರ ಎಲ್ಲ ಹೊಲಗಳ ಸುತ್ತ ಚರಗ ಚಲ್ಲುವುದು ಮೂಲ ಕ್ರಿಯೆ.

ನಂತರ ಮದ್ಯಾಹ್ನ ಪೂಜೆ ಸಲ್ಲಿಸಿ, ವಿವಿಧ ಪಕ್ವಾನ್ನಗಳನ್ನು ಒಟ್ಟುಗೂಡಿಸಿ, ಕಲಿಸಿ ಮತ್ತೆ ಚರಗ ಚಲ್ಲುವ ಕ್ರಿಯೆ ಸಾಂಗವಾಗಿಯೇ ನೆರವೇರಿಸಲಾಗುತ್ತದೆ.

ಪೂಜೆಗೆ ಪಾಂಡವರು-ಕುಂತಿಯ ಮೂರ್ತಿಗಳನ್ನು ಮಾಡಿ, ಹಿಂದೆ ಕೃಷ್ಣನನ್ನು ಮಾಡುವ ಪ್ರಕ್ರಿಯೆ ಮಲೆನಾಡು ಭಾಗದಲ್ಲಿ ಚಾಲ್ತಿಯಲ್ಲಿದ್ದರೆ ಶಿಗ್ಗಾಂವ, ಸವಣೂರು ಮುಂತಾದ ಬಯಲು ಸೀಮೆಯ ಪ್ರದೇಶಗಳಲ್ಲಿ ಕೃಷ್ಣನ ಬದಲಿಗೆ ಕರ್ಣನ ವಿಗ್ರಹ (ಕಲ್ಲಿಗೆ ಸುಣ್ಣ ಹಚ್ಚಿ ಮಾಡಿದ ಮೂರ್ತಿ) ವನ್ನು ಪೂಜಿಸುವ ವಾಡಿಕೆಯಿದೆ. ಎಲ್ಲರಿಗೂ ಎಡೆಮಾಡಲಾಗುತ್ತದೆ. ಕೃಷ್ಣ-ಕರ್ಣರಿಗೆ ಹಿಂದುಗಡೆಯೇ ಎಡೆಮಾಡಿ ನೈವೇದ್ಯ ಹಿಡಿದು ಅದನ್ನು ಅಲ್ಲಿಯೇ ದಫನ ಮಾಡುವುದು ಎಲ್ಲ ಭಾಗದ ಸಮಾನ ಪದ್ಧತಿ.

ಊಟ ಅಡುಗೆಯ ವಿಷಯಕ್ಕೆ ಬಂದರೆ ಆಯಾಯ ಪ್ರದೇಶದಲ್ಲಿ ಬೆಳೆಯುವ ಧಾನ್ಯಗಳೇ ಪ್ರಧಾನ. ಮಲೆನಾಡಿನಲ್ಲಿ ಅಕ್ಕಿ, ಕುಂಬಳಕಾಯಿ ಹೆಚ್ಚು ಬೆಳೆಯಾಗಿದ್ದರಿಂದ ಕರಿಬುತ್ತಿ, ಬಿಳಿಬುತ್ತಿ, ಕುಂಬಳಕಾಯಿ ಕಡುಬು, ಸಂಡಿಗೆ, ಹಪ್ಪಳ, ಸಿಹಿ ಪದಾರ್ಥಗಳು ಮಹತ್ವ ಪಡೆದರೆ, ಬಯಲು ಸೀಮೆಯಲ್ಲಿ ಎಳ್ಳು ಹೋಳಿಗೆ, ಹುರಿಟ್ಟು ಹೋಳಿಗೆ, ಶೇಂಗಾಹೋಳಿಗೆ, ಸಜ್ಜಕದ ಹೋಳಿಗೆಗಳು ಪ್ರಧಾನ ಪಾತ್ರ ವಹಿಸುತ್ತವೆ.

ಅಂತೂ ಎಲ್ಲರೂ ಭೂ ತಾಯಿಗೆ ತಮ್ಮ ಕೃತಜ್ಞತೆಯನ್ನು ಭಕ್ತಿ, ಭಾವದಿಂದ ಸಲ್ಲಿಸಿ ಧನ್ಯತೆಯಿಂದ ಬೀಗುವುದೇ ಸೀಗೆ ಹುಣ್ಣಿಮೆ, ಅಥವಾ ಭೂಮಿಹುಣ್ಣಿಮೆಯ ಪ್ರಧಾನ ಲಕ್ಷಣ.

ದೀಪಾವಳಿ ಅಥವಾ ಹಟ್ಟಿ ಹಬ್ಬ:

ಗ್ರಾಮವಾಸಿಗರಿಗೆ-ಕೃಷಿಕರಿಗೆ ಇದೊಂದು ವಿಶೇಷ ಹಬ್ಬ. ಮಳೆಗಾಲ ಮುಗಿದು ಚಳಿಗಾಲ ಆರಂಭವಾಗುವ ಈ ಕಾಲ-ಸುಗ್ಗಿಯ ಆಗಮನದ ಆಹ್ವಾನದಂತೆ ಕೃಷಿಕರೆಲ್ಲ ಅತ್ಯಂತ ವಿಜೃಂಭಣೆಯಿಂದ ಈ ಹಬ್ಬ ಆಚರಿಸುವ ಮೂಲಕ ಹೊಸ ಮನ್ವಂತರಕ್ಕೆ ಸ್ವಾಗತ ಕೋರುವಂತೆ ಆಚರಿಸುವುದುಂಟು ಅಮವಾಸ್ಯೆಯಿಂದ ಮೂರು ದಿನಗಳ ಕಾಲ ಆಚರಣೆಗೊಳ್ಳುವ ಈ ಹಬ್ಬದ ಸಡಗರ-ಸಂಭ್ರಮ ಹೇಳತೀರದು.

ಕಾರಹುಣ್ಣಿಮೆಗೆ ಬಿಚ್ಚಿಟ್ಟ ಕೃಷಿ ಉಪಕರಣಗಳು-ಬಂಡಿ ಚಕ್ಕಡಿಗಳನ್ನು ಹೊರತೆಗೆದು ಸ್ವಚ್ಛಗೊಳಿಸಿ, ಪೂಜಿಸಿ ಪುನಃ ಸಾಗುವಳಿಗೆ ಉಪಯೋಗಿಸುವುದು ವಾಡಿಕೆ.

ಆಮವಾಸ್ಯೆ ಹಿಂದಿನ ದಿನ ನೀರೆರೆದು ಕೊಂಡು ಅಮವಾಸ್ಯೆಯ ಪಾಡ್ಯ ಆಚರಿಸುವ ಒಂದಿಷ್ಟು ಜನರಿದ್ದರೆ ಅಮವಾಸ್ಯೆಯ ಮುಂಜಾನೆ ನೀರೆರೆದು ಕೊಳ್ಳುವ ಪದ್ದತಿ ಮತ್ತೆ ಕೆಲವರಲ್ಲಿ ಉಂಟು. ಇದಕ್ಕೆ ಬೆಳಗಿನ ನೀರು-ಸಂಜೆ ನೀರು ಎಂದೂ ಕರೆಯಲಾಗುತ್ತಿದೆ. ನೀರೆರೆದುಕೊಂಡು ಪೂಜೆಮಾಡಿ, ಆರತಿ ಬೆಳಗಿಸಿಕೊಂಡು ಅಕ್ಕಿ ಹಿಟ್ಟಿನಿಂದ ತಯಾರಿಸಿದ 'ಸಣ್ಣ ಸಾವಿಗೆ' ಉಣ್ಣುವ ಪದ್ಧತಿ ಮಲೆನಾಡ ರೈತರ ಪದ್ಧತಿಯಾದರೆ, ಬಯಲುಸೀಮೆಯ ಜನ ಗೋಧಿ ಸಾವಿಗೆ ಊಟ ಮಾಡುವ ಪದ್ಧತಿ ಇದೆ.

ಹೇಳಿ ಕೇಳಿ ಈ ಹಬ್ಬ ಹಟ್ಟಿ ಹಬ್ಬ. ಹಟ್ಟಿ ಎಂದರೆ ದನಗಳ ಕೊಟ್ಟಿಗೆ ಎಂದು ಅರ್ಥೈಸಲಾಗುತ್ತದೆ. ಅಂತೆಯೇ ಹಟ್ಟಿಗೆ-ದನಗಳ ಸಗಣಿ ಎಂದೂ ಭಾವಿಸಿ ಪೂಜಿಸುವ ವಾಡಿಕೆಯೂ ಇದೆ. ಸಗಣಿಯನ್ನು "ಲಕ್ಷ್ಮಿ"ಎಂದು ಪೂಜಿಸಿ 'ಹಟ್ಟಿ ಲೆಕ್ಕವ'ನೆಂದು ಕರೆದು ಆರಾಧಿಸುವ ಪರಂಪರೆ ಕೃಷಿಕರದು. ಸಗಣಿಯಿಂದ ತಯಾರಿಸಿದ ಗುರುಜಿಗೆ ತರಹೇವಾರಿ ಹೂವುಗಳಿಂದ ಅಲಂಕರಿಸಿ ಮನೆಯ ತುಂಬಾ ಇರಿಸಿ ಹಟ್ಟಿ ಬಳಿದು ದೀಪ ಹಚ್ಚಿ ಪೂಜಿಸಿ ಧನ್ಯತೆ ಪಡೆಯುವುದು ಕೃಷಿ ಮೂಲ ಸಂಸ್ಕೃತಿಯ ಮಹತ್ವದ ಘಟ್ಟ.

ಹಾಗೆಯೇ ದನಗಳನ್ನು ಸುಣ್ಣ, ಕೆಮ್ಮಣ್ಣುಗಳಿಂದ ಅಲಂಕರಿಸುವುದು ಮನೆಗಳಗೂ ಸುಣ್ಣ, ಕೆಂಮ್ಮಣ್ಣು ಬಳಿದು, ಬೊಟ್ಟು (ಸುಣ್ಣ ಕೆಮ್ಮಣ್ಣ) ಗಳಿಂದ ಚುಕ್ಕೆ ಇಟ್ಟು ಶೃಂಗರಿಸಲಾಗುವುದು. ಇದು ನೋಡುಗರ ಕಣ್ಣಿಗೆ ಆನಂದ ನೀಡುತ್ತದೆ. ಎತ್ತುಗಳಿಗೆ ಸೊಪ್ಪಿನಿಂದ ಹೊಡೆಯುವುದು, ಮನೆ ಬೆಳಗಿಸಿ, ಹೋಳಿಗೆ ಉಂಡು ರಾತ್ರಿ ಇಡೀ ಪಂಜು ಹಚ್ಚಿಕೊಂಡು ಓಡಾಡುವುದು ಹಳ್ಳಿಗರು ಹಟ್ಟಿ ಹಬ್ಬ ಆಚರಣೆಯ ವಿಶೇಷತೆ.

ನಗರವಾಸಿಗಳು–ನರಕ ಚತುರ್ಥಶಿ, ಬಲಿಚಕ್ರವರ್ತಿಯ ಪೂಜೆ–ಲಕ್ಷ್ಮೀ ಪೂಜೆ ಮಾಡಿ, ಬಾನೆತ್ತರಕ್ಕೆ ಪಟಾಕಿ, ಸಿಡಿಮದ್ದು ಸಿಡಿಸಿ, ಪರಿಸರ ನಾಶಕ್ಕೆ ಕಾರಣವಾದರೆ ಗ್ರಾಮವಾಸಿಗಳು ಅಂತಹ ಅನಾಹುತಗಳಿಗೆ ಅವಕಾಶ ನೀಡುವುದಿಲ್ಲ.

ಮಲೆನಾಡಿನ ಭಾಗದ ಜನರು ಪಂಜು ಮಾಡುವುದು ಕಟ್ಟಿಗೆಯಿಂದ ಅವುಗಳನ್ನು ಕೊಚ್ಚಿ–ಒಣಗಿಸಿ ಪಂಜುಮಾಡಿದರೆ ಬಯಲು ಸೀಮೆಯ ಜನ ಎಳ್ಳು ಕಟ್ಟಿಗೆಯನ್ನು ಸಿವುಡು ಕಟ್ಟಿ ಒಣಗಿಸಿ ಪಂಜು ಹಿಡಿಯುವುದು ಕಂಡುಬರುತ್ತದೆ.

ಕೃಷಿಕರ ಇನ್ನೊಂದು ಮಹತ್ವದ ಕಾಯಕವೆಂದರೆ "ಮೇಟಿ" ಕಡಿದು ಪೂಜಿಸುವುದು. ಅಮವಾಸ್ಯೆಯ ನೀರೆರೆದುಕೊಂಡು (ಬೂರೆ) ಆಲದ ಮರದಿಂದಲೋ, ಪಿಳಲಿ ಮರದಿಂದಲೋ ದಪ್ಪನೆಯ ಟೊಂಗೆ(ಹರಿ)ಯನ್ನು ಕಡಿದು ತಂದು ಅದಕ್ಕೆ ಸುಣ್ಣ ಕೆಮ್ಮಣ್ಣುವಿನ ಕಟ್ಟು ಬಳಿದು, ಚುಕ್ಕೆ ಇಟ್ಟು ಗುರಂಜಿ ಇಟ್ಟು, ಹಗ್ಗ ಕಣ್ಣಿ ಕಟ್ಟಿ ಪೂಜಿಸಿ ಸುಗ್ಗಿಗೆ ಬೇಕಾದ ಮೇಟಿಯನ್ನು ಕಣದ ನಟ್ಟ ನಡುವೆ ನೆಟ್ಟು ಒಕ್ಕಲು ಅಣಿಮಾಡುವುದುಂಟು. ಇಲ್ಲಿಂದಲೇ ಒಕ್ಕಲು, ಸುಗ್ಗಿಯ ದಿನಮಾನದ ಆರಂಭ. ಅದಕ್ಕೆ ಮೇಟಿಯೇ ಮೂಲಾದಾರ. ಕೆಲವು ಮನೆಯವರು ಹಟ್ಟಿ ಹಬ್ಬದಂದು ಕಡಿದ ಮೇಟಿಯನ್ನು ಮನೆಯಲ್ಲಿ ಮೊಸರು ಕಡೆಯುವ ಗೂಟವಾಗಿ ಬಳಸುವುದುಂಟು. ಹೀಗೆ ಗ್ರಾಮೀಣರಿಗೆ ಹಟ್ಟಿ (ದೀಪಾವಳಿ) ಹಬ್ಬ ಒಂದು ವಿಶಿಷ್ಟವಾದ ಹಬ್ಬವಾಗಿದ್ದು, ಎತ್ತುಗಳನ್ನು ಬೆದರಿಸುವ ಪರಿಪಾಠ ಮಲೆನಾಡಿಗರಲ್ಲಿ ಇದೆ. ಅದಕ್ಕೆ ಒಂದು ಗಾದೆ ಮಾತು ಇದೆ. "ಪಂಚಮಿ ಹಬ್ಬದಲ್ಲಿ ಹೆಂಗಸನ್ನು ಹಿಡಿಯಲಾಗದು, ಹಟ್ಟಿ ಹಬ್ಬದಲ್ಲಿ ಎತ್ತು ಹಿಡಿಯಲಾಗದು" ಎಂದು ಕತ್ತಲೆಯಿಂದ ಬೆಳಕಿನಡೆ ಧಾವಿಸುವ ಈ ಹಬ್ಬ ಜಾನಪದರ ಬಾಯಲ್ಲಿ ಹಾಡಾಗಿ, ಪಲ್ಲವಿಯಾಗಿ ಅನುಕರಣಿಸುವ ಕ್ರಿಯೆ ಅನನ್ಯವಾದದ್ದು.

ಅಂತಹ ಕೆಲ ಹಾಡುಗಳು ಈ ಕೆಳಗಿನಂತಿವೆ.

ಬಲ್ಲಾಳ ಬಲವಿಂದ್ರನ । ರಾಜ್ಯಕೆಲ್ಲರು ಸಿರಿವಂತರ ।ಪ
ಹಟ್ಟಿಯ ಲೆಕ್ಕವ್ವ ಪಟ್ಟಿಯ ಬೇಡಿ ಅಳತಾಳ ।
ಪಟ್ಟಿ ಮಾಡಕ ನನ ತಮ್ಮ । ಆಚಾರಿ
ಮನಿಗೆ ಹೋಗ್ಯಾನ
ಸೀರೆ, ನತ್ತು, ಬಂದಿ, ಬುಗುಡು
ಹಟ್ಟೀಯ ಹೋರಿ ಬಂದು । ಮೆಟ್ಟೀಲು ತುಳಿದಾಗ
ಹಟ್ಟೀಯ ಕಲ್ಲ ಸಡಿಲ್ಯಾವ । ನನ ತಮ್ಮ
ಹಟ್ಟೀಯ ಹೋರಿ ತರುಭ್ಯಾನ ॥
ತುಂಬಿದ ಹೊಳಿಯಾಗ । ಕೊಂಬ ಕಾಣಿಸತಾವ
ಇಂಬುಳ್ಳ ಇನಿಯ ಬಸವಣ್ಣ । ಬರುವಾಗ

ಗಂಗೆ ಎದ್ದು ಕೈ ಮುಗಿದಾಳ ॥ ಬಲ್ಲಾಳ
ಕಲ್ಲ ಕಡಬ ಮಾಡಿ-ಮುಳ್ಳಶ್ಯಾವಿಗಿ ಮಾಡಿ
ಬನ್ನಿ ಎಲಿಯಾಗ ಎಡಿಮಾಡಿ । ಹೋಗ್ಯಾರ
ಪಾಂಡವರು ವನವಾಸಕ್ಕ
ಆಕಾಳ ಕರು ಬಂದು ಅಂಬಾಅಂಬಾ ಎಂದು
ತಮ್ಮ ಅವ್ವನ ಮಲಿಯ ಕುಡಿವಾಗ । ನಮ್ಮವ್ವ
ನೆನಪು ನನಗಾಗಿ.

ಈ ಜಾನಪದ ಹಾಡನ್ನು ಹೇಳಿದವರು ಪ್ರೊ.ಶಾಂತಕುಮಾರ್ ಹಾದಿಮನಿ.

ಹೀಗೆ ಹಟ್ಟಿಹಬ್ಬವೆಂಬುದು ಜಾನಪದರ ಅನೇಕ ರೀತಿಯ ಸಂಭ್ರಮಕ್ಕೆ ಎಡೆ ಮಾಡಿಕೊಡುವುದು. ಎತ್ತುಗಳು ಸೊಕ್ಕಿನಿಂದ ಕುಣಿಯುವುದು, ಅದನ್ನು ನೋಡಿ ಸಂಭ್ರಮಿಸುವುದು ರೈತಾಪಿ ಜನರ ಒಡಲಾಳದ ಮಾತು.

ಇನ್ನು ಹಿರೇಕೆರೂರ ತಾಲ್ಲೂಕಿನ ಮಾಸೂರು ಗ್ರಾಮದಲ್ಲಿ ಪ್ರತಿ ವರ್ಷ ದೀಪಾವಳಿಯ ದಿನವೆ ಆಕಾಶ ಬುಟ್ಟಿ ಮಾಡಿ ಆಕಾಶಕ್ಕೆ ಹಾರಿ ಬಿಡುವ ಕಾರ್ಯಕ್ರಮ ಅತ್ಯಂತ ನಯನ ಮನೋಹರವಾದದ್ದೆಂದು ಗ್ರಾಮದ ಮುಖಂಡ, ಸಾಹಿತಿ ನಿಂಗಪ್ಪ ಚಳಗೇರಿ ಹೇಳುತ್ತಾರೆ.

ಇಲ್ಲಿಂದ ಆರಂಭವಾಗುವ ಕಾರ್ತಿಕ ಮಾಸ ಒಂದು ತಿಂಗಳ ಕಾಲ ಗ್ರಾಮ ಗ್ರಾಮಗಳಲ್ಲಿ ದೀಪೋತ್ಸವದ ನಿತ್ಯ ಹರಿದ್ವರ್ಣ, ಝುಗಮಗಿಸುವ, ಕಣ್ಣು ಕೋರೈಸುವ ದೀಪಗಳ ಸಾಲು, ಕಾರ್ತಿಕೊತ್ಸವ, ತೆಪ್ಪಗಳಲ್ಲಿ ದೀಪ ಹಚ್ಚಿ, ನೀರಿನಲ್ಲಿ ತೇಲಿಬಿಟ್ಟು, ತೆಪ್ಪೋತ್ಸವ ಆಚರಿಸುವ ಪರಿಪಾಠ ಹಿರೇಕೆರೂರಿನ ಸಾತೇನಹಳ್ಳಿ, ಸುತ್ತಗೋಟಿ, ಬ್ಯಾಡಗಿ ತಾಲೂಕಿನ ಕದರಮಂಡಲಗಿಗಳಲ್ಲಿ ಆಚರಿಸ್ಪಡುತ್ತದೆ.

ಗೌರಿ ಹುಣ್ಣಿಮೆ:

ಕಾರ್ತಿಕ ಮಾಸದಲ್ಲಿ ಸಂಭ್ರಮ ಮತ್ತು ಸಡಗರದಿಂದ ಆಚರಿಸಲ್ಪಡುವ ಹಬ್ಬವೇ ಗೌರಿ ಹುಣ್ಣಿಮೆ ಹಬ್ಬ. ಶಿಗ್ಗಾಂವಿ-ಸವಣೂರಿನಲ್ಲಿ ವಿಶೇಷವಾಗಿ ಈ ಹಬ್ಬವನ್ನು ಆಚರಿಸುತ್ತಾರೆ. ಚಿಕ್ಕ ಮಕ್ಕಳಿಂದ ಹಿಡಿದು ಹಿರಿಯರವರೆಗೂ ತಲೆಗೆ ದಂಡೆ ಮುಡಿದುಕೊಂಡು ಕೈಯಲ್ಲಿ ಬಣ್ಣ ಬಣ್ಣದ ಸಕ್ಕರೆ ಹಚ್ಚಿನ ಆರತಿ ಹಿಡಿದು ಕೊಂಡು ದೇವಸ್ಥಾನಕ್ಕೆ ತೆರಳಿ ತವರು ಮನೆಗೆ ಶುಭವಾಗಲೆಂದು ಬೇಡಿಕೊಳ್ಳುವರು. ಮದುವೆಯಾದ ಹೊಸದರಲ್ಲಿ ಮೂರು-ನಾಲ್ಕು ವರ್ಷ ಸಕ್ಕರೆ ಹಚ್ಚುಗಳನ್ನು ತವರು ಮನೆಯವರೇ ಹೆಣ್ಣು ಮಕ್ಕಳಿಗೆ ತಂದು ಕೊಡುವುದು ಈ ಭಾಗದವರ ವಿಶೇಷತೆ. ಗೌರಿ ಹುಣ್ಣಿಮೆ ನಿಮಿತ್ತ ಪಟ್ಟಣದ ಮನೆ ಮನೆಯಲ್ಲಿ ಮುತ್ತೈದೆಯರು ಗೌರಿ ಮೂರ್ತಿಯನ್ನು ಪ್ರತಿಷ್ಠಾಪಿಸಿ ಭಕ್ತಿಯಿಂದ ಪ್ರಾರ್ಥನೆಗೈಯುವರು.

ವಿಶೇಷವಾಗಿ ಗೌರಿಯನ್ನು ಪ್ರತಿಷ್ಠಾಪಿಸಿ, ಮುತ್ತೈದೆಯರು ಉಡಿ ತುಂಬಿಸಿಕೊಂಡು ಗೌರಿಗೆ ಸೀಮಂತ ಕಾರ್ಯವನ್ನು ನೆರವೇರಿಸುವರು. ನಂತರ ಗೌರಿ ಪುತ್ರ ಗಣೇಶನನ್ನು ತೊಟ್ಟಿಲಿಗೆ ಹಾಕಿ ಜೋಗುಳ ಪದಗಳನ್ನು ಹಾಡಿ ನಾಮಕರಣ ಮಾಡುವರು. ಪಂಡಿತ ಪುಟ್ಟರಾಜ ಕಲಾವಿದರ ಸಂಘದ ಕಲಾವಿದರಾದ ಶಂಕರ ಅಯ್ಯಣ್ಣನವರ ಮತ್ತು ಭಾರತಿ ಛಬ್ಬಿ, ಗೌರಿ ಹುಣ್ಣಿಮೆಯ ಕುರಿತಾದ ಹಾಡುಗಳನ್ನು ರಚಿಸಿರುತ್ತಾರೆ. ಮತ್ತು ಸುಶ್ರಾವ್ಯವಾಗಿ ಹಾಡುತ್ತಾರೆ. ಇದೇ ಸಂದರ್ಭದಲ್ಲಿ ಕೆಲವು ಕಡೆ ಜಾನಪದ ಹಾಡುಗಳನ್ನು ಹಾಡಿ, ಕೋಲಾಟ ಹಾಕಿ ಗೌರಿ ಹುಣ್ಣಿಮೆಯ ಬೆಳದಿಂಗಳಲ್ಲಿ ರಾತ್ರಿ ಪೂರ್ತಿ ಜಾಗರಣೆ ಮಾಡುವರು. ಅಂತಹ ಒಂದು ಹಾಡನ್ನು ಇಲ್ಲಿ ಉದಾಹರಿಸಬಹುದು.

ಗೌರಿ ಗೌರಿ ಗಾಣಾಗೌರಿ ಮ್ಯಾಣಾ ಗೌರಿ
ಅವರಿಯಂತ ಅಣ್ಣನ ಕೋಲ, ಅಣ್ಣನ ಕೋಲ
ತೊಗರಿಯಂತಾ ತಮ್ಮನ ಕೋಲ, ತಮ್ಮನ ಕೋಲ
ನಿಲ್ಲ ನಿಲ್ಲ ಗೌರವ್ವ, ನಿಲ್ಲಿಸಿಕೊಂಡು ಕಳಿಸೇನೆ, ಕಳಿಸೇನೆ,
ಅರಿಷಿಣ ಪತ್ಲ ಉಡಿಸೇನೆ, ಉಡಿಸೇನೆ
ಸಕ್ಕರೆ ಗೊಂಬಿ ಆರತಿ ಮಾಡಿ ಕಳಿಸೇನೆ, ಕಳಿಸೇನೆ,
ಆಡಲಾರನೆ ಗೌರಿ, ಪಾಡಲಾರನೆ ಗೌರಿ,
ಚಿನ್ನದ ಚಿಗಟಾಣೆ ಗೌರಿ, ಬಣ್ಣದ ಕೋಲ ಗೌರಿ
ಡಾಳಂಬರಿಗೋ ಡಾಳಂಬರಿಗೋ.

ಕೃಷಿಕರಿಗೆ ಈ ಹಬ್ಬ ಮುಗಿದ ನಂತರ ಕೃಷಿ ಚಟುವಟಿಕೆಗಳು ಬಿಡುವಿಲ್ಲದಂತೆ ಸಾಗುತ್ತವೆ. ಕೊಯ್ಯುವುದು, ಒಟ್ಟುವುದು, ಕಣ ಮಾಡುವುದು ಒಣಗಿಸುವುದು ದುಂಡೆಹೊಡೆಯುತ್ತ, ಹರಟೆ ಹೊಡೆಯುತ್ತ ಒಕ್ಕುವುದು, ಮನೆಗೆ ತುಂಬುವುದು, ಸಂಕ್ರಾಂತಿ ಸಂಭ್ರಮಿಸುವುದು ಅದೊಂದು ಅವಿಸ್ಮರಣೀಯ ಅನುಭವ. ಇಲ್ಲಿಂದ ಮುಂದೆ ಜಾತ್ರೆ, ಉತ್ಸವಗಳನ್ನು ಆಚರಿಸುತ್ತ ಬದುಕಿನ ಬುತ್ತಿ ಕಟ್ಟುವ ರೈತಾಪಿ ವರ್ಗದ ಅನುಭವ ಅವರೇ ಹೇಳಬೇಕು.

ಈ ನಡುವೆ ಚಿಕ್ಕ ಪುಟ್ಟ ಹಬ್ಬಗಳನ್ನು ಆಚರಿಸಿದರೂ ಹಳ್ಳಿಗರಿಗೆ ನಗಣ್ಯ. ಬನದ ಹುಣ್ಣಿಮೆಯ ಜಾರಿ ಬನವನ್ನೇ ನಡುಗಿಸಿತ್ತು. ಎಂದು, ಹೊಸ್ತಿಲು ನಡುಗಿಸಿತ್ತು ಎನ್ನುತ್ತ, ಭರತ ಹುಣ್ಣಿಮೆಯ ಪೂರ್ಣ ಬೆಳಕಿಗಾಗಿ ಹಾತೊರೆದು, ಶೆಕೆಯ ಅನುಭವ ಪಡೆಯುತ್ತ ಶಿವರಾತ್ರಿಗೆ ಶಿವ ಶಿವಾ ಎಂದು ಹಪಹಪಿಸುವ ಬಿಸಿಲ ಧಗೆಗೆ ಸುಣ್ಣವಾಗುತ್ತಾರೆ. ಕಾಮದಹನ ಮಾಡಿ ಹೋಳಿ ಹುಣ್ಣಿಮೆ ಆಚರಿಸಿ ಮತ್ತೆ ಯುಗಾದಿಯ ದಾರಿ ಕಾಯುತ್ತ ಬದುಕು ಸವೆಸುತ್ತ ಬೇವಿನ ಗಿಡದ ಆಶ್ರಯ ಪಡೆಯುವುದು ಗ್ರಾಮೀಣ ಜನರ ಪರಿ.

ಹಿರೇಕೆರೂರು ತಾಲ್ಲೂಕಿನ ಮೇದೂರು ಹಾಗೂ ರಾಣೇಬೆನ್ನೂರು ನಗರದ ಕಾಮನ ಹಬ್ಬಗಳು ಈ ಜಿಲ್ಲೆಯ ವಿಶೇಷ ಆಚರಣೆ ಎಂದರೂ ತಪ್ಪಾಗದು.

ಜಾತ್ರೆಗಳು-ಉತ್ಸವಗಳು:

ಜನ ಸೇರುವ ತಾಣಗಳನ್ನು ಜಾತ್ರೆ ಎನ್ನುತ್ತಾರೆ. ಜಾತ್ರೆ ಎಂಬ ಪದ 'ಯಾತ್ರಾ' ಎಂಬ ಸಂಸ್ಕೃತ ಪದದಿಂದ ಬಂದಿದೆ. ಜಾತ್ರೆಯಲ್ಲಿ ನೋಟವೇ ಹೆಚ್ಚು, ಹೀಗಾಗಿ 'ಯಾತ್ರ' ಪದದ ಅರ್ಥವನ್ನು 'ಜಾತ್ರೆ' ಶಬ್ದ ಉಳಿಸಿಕೊಂಡಿದೆ. ಈ ಜಾತ್ರೆ ಭಾರತಕ್ಕೆ ಮಾತ್ರ ಸಿಮೀತವಲ್ಲ, ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೂ ಕೂಡ ಜಾತ್ರೆ ನಡೆಯುತ್ತಿದ್ದವು ಎಂಬುದಕ್ಕೆ ನಿದರ್ಶನಗಳಿವೆ. ಹಬ್ಬ ಮತ್ತು ಜಾತ್ರೆಗಳಿಗಿರುವ ಪ್ರಮುಖ ವ್ಯತ್ಯಾಸಗಳೆಂದರೆ, ಹಬ್ಬಗಳನ್ನು ಪ್ರತಿಯೊಂದು ಮನೆಯಲ್ಲಿಯೂ ಆಚರಿಸುತ್ತಾರೆ. ಯಾವುದೇ ಜಾತ್ರೆಗಳಾಗಲಿ ಸಾಮೂಹಿಕವಾಗಿ ನಡೆಯುತ್ತವೆ. ಒಂದೆರಡು ದಿನಗಳಿಂದ ಹಿಡಿದು ಹತ್ತು ಹದಿನೈದು ದಿನಗಳಕಾಲ ನಡೆಯುವ ಜಾತ್ರೆಗಳು ಹಾವೇರಿ ಜಿಲ್ಲೆಯಲ್ಲಿ ಕಂಡುಬರುತ್ತವೆ. ದೇವರ ಆರಾಧನೆ ಮತ್ತು ಕೂಡಿಬಾಳುವ ಉದ್ದೇಶವೇ ಜಾತ್ರೆಯ ಮುಖ್ಯಾಂಶಗಳು.

ಮಹಿಳೆಯರಿಂದಲೇ ಸಾಗುವ ಮಂತ್ರವಾಡಿ ರಥ

ಮಹಿಳೆಯರೇ ದೇವರ ರಥವನ್ನೆಳೆಯುವ ವಿಶಿಷ್ಠ ಸಂಭ್ರಮ ಸಡಗರದ ಉತ್ಸವದ ಬಗ್ಗೆ ನೀವು ಕೇಳಿರುವಿರೇನು? ಹಾವೇರಿ ಜಿಲ್ಲೆ, ಸವಣೂರು ತಾಲೂಕಿನ ಮಂತ್ರವಾಡಿಯ ರೇವಣಸಿದ್ಧೇಶ್ವರ ಮಠದಲ್ಲಿ ಪ್ರತಿವರ್ಷ ಜರುಗುವ ಅಕ್ಕಮಹಾದೇವಿ ಉತ್ಸವದ ಪರಿ ಇದು. ಪಾರ್ವತಿ ದೇವಿಯ ರಥವನ್ನು ಇಲ್ಲಿ ಎಳೆಯುವವರೆಲ್ಲರೂ ಮಹಿಳೆಯರೇ.

ಪಂಚಪೀಠಗಳಲ್ಲಿ ಒಂದಾಗಿರುವ ರಂಭಾಪುರಿ ಮಠದ ಶಾಖೆಯಾದ ರೇವಣಸಿದ್ದೇಶ್ವರ ಮಠವು ಮಂತ್ರವಾಡಿಯ ಪುರಾತನ ಮಠಗಳಲ್ಲಿ ಒಂದಾಗಿದೆ. ಪ್ರತಿವರ್ಷ ಜನವರಿ-ಫೆಬ್ರವರಿ ತಿಂಗಳುಗಳಲ್ಲಿ ಬರುವ ಅಪರಾತ್ರಿ ಅಮವಾಸ್ಯೆಯಿಂದ ಭರತ ಹುಣ್ಣಿಮೆಯವರೆಗೆ ಪಾರ್ವತಮ್ಮನ ಜಾತ್ರೆ ಅದ್ದೂರಿಯಿಂದ ಜರುಗುತ್ತದೆ. ಮೊದಲನೆ ದಿನ ಪರಮೇಶ್ವರನ ರಥೋತ್ಸವಕ್ಕೆ ಮೀಸಲಾದರೆ ಮರುದಿನ ಪಾರ್ವತಿದೇವಿಯ ರಥೋತ್ಸವ.

ಪ್ರಸಿದ್ಧ ವಚನಗಾರ್ತಿ ಶಿವಶರಣೆ ಅಕ್ಕಮಹಾದೇವಿಯ ಹೆಸರಿನಿಂದ ಪಾರ್ವತಿದೇವಿಯ ರಥೋತ್ಸವವನ್ನು ಎಂಬತ್ತು ವರ್ಷಗಳ ಹಿಂದೆ ಆರಂಭಿಸಿದವರು ಹಿಂದಿನ ಮಠಾಧೀಶರಾದ ಲಿಂ। ಶ್ರೀ ಕೆಂಚುಂಡೇಶ್ವರ ಶಿವಾಚಾರ್ಯ ಸ್ವಾಮಿಜಿಗಳು. ಸ್ತ್ರೀ ಸಮಾನತೆಯ ಬಗ್ಗೆ ಅರಿವೇ ಇಲ್ಲದಿದ್ದ ಕಾಲದಲ್ಲಿ ಸ್ತ್ರೀಯರಿಂದಲೇ ದೇವರ ರಥೋತ್ಸವ ಮಾಡಿಸಿ ಪರಂಪರೆ ಸೃಷ್ಠಿಸಿದ್ದು ಮಹತ್ಸಾಧನೆಯೇ ಆಗಿದ್ದು, ಅದೇ ಪರಂಪರೆ 80 ವರ್ಷಗಳಿಂದ ಸುಸೂತ್ರವಾಗಿ ಮುಂದುವರೆಯುತ್ತಾ ನಾಡಿನ ಗಮನ ಸೆಳೆಯುತ್ತಿದೆ. ಈ ದೃಶ್ಯವನ್ನು ವೀಕ್ಷಿಸಲು ರಾಜ್ಯದ ಮೂಲೆ ಮೂಲೆಗಳಿಂದ ಸಾವಿರಾರು ಭಕ್ತರು ಆಗಮಿಸುತ್ತಾರೆ. ಅಕ್ಕಮಹಾದೇವಿಯ

ಫೋಟೋವನ್ನು ಇಟ್ಟು ಆಚರಿಸುವ ಈ ತೇರನ್ನು ಮಹಿಳೆಯರೇ ಬೆಟ್ಟದ ಮೇಲಿನಿಂದ ಎಳೆದು ತಂದು ಮತ್ತೆ ಬೆಟ್ಟದ ಮೇಲಿನ ಮಠದ ಆವರಣದ ಒಳಗಡೆ ನಿಲ್ಲಿಸಲಾಗುತ್ತದೆ. ಜೊತೆಗೆ ದಾಸೋಹದ ಏರ್ಪಾಡೂ ಕೂಡ ಮಾಡಲಾಗುತ್ತದೆ ಎಂದು ಶಿಗ್ಗಾವಿಯ ಕುನ್ನೂರು ಶಿಕ್ಷಣ ಸಂಸ್ಥೆಯ ಪ್ರಾಥಮಿಕ ಶಾಲೆಯ ಮುಖ್ಯ ಪ್ರಾಧ್ಯಾಪಕಿ ಶ್ರೀಮತಿ ಜಿ.ಎಂ.ಅರಗೋಳ ತಿಳಿಸಿದರು.

ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲ್ಲೂಕಿನ ಮಾಸೂರು ಗ್ರಾಮದಲ್ಲಿ ನಡೆಯುವ ಇನ್ನೊಂದು ಹಾಗೂ ಏಕೈಕ ಉತ್ಸವ ವೆಂದರೆ ಕರಗೋತ್ಸವ. ದಕ್ಷಿಣ ಕರ್ನಾಟಕಕ್ಕೆ ಮಾತ್ರ ಅದರಲ್ಲೂ ಬೆಂಗಳೂರಿಗೆ ಮಾತ್ರ ಸೀಮಿತವಾಗಿದ್ದ ಕರಗೋತ್ಸವ ಉತ್ತರ ಕರ್ನಾಟಕದ ಹಿರೇಕೆರೂರ ತಾಲೂಕಿನಲ್ಲಿ ಮಾಸೂರು ಗ್ರಾಮದಲ್ಲಿ ಜರುಗುವುದು. ವಿರಳಾತಿ ವಿರಳಗಳಲ್ಲೊಂದು ಹಾಗೂ ವಿಶೇಷಾತಿ ವಿಶೇಷವಾದದ್ದು. ವೈದಿಕ ಕುಲದ-ತಿಗಳ ಸಮಾಜದ ಜನರು ಆಚರಿಸುವ ಈ ಕರಗೋತ್ಸವ ದ್ರೌಪದಿ ಕರಗವೆಂದೇ ಹೆಸರುವಾಸಿ. ಈ ಗ್ರಾಮದಲ್ಲಿ ಧರ್ಮರಾಯ ದ್ರೌಪದೆಯ ಗುಡಿ ರಚಿಸಿ ದಸರೆಯ ಹಬ್ಬದಂದು ಆಚರಿಸಲಾಗುತ್ತದೆ. ಸುಮಾರು ಮೂರರಿಂದ ಎಂಟು ಸಾವಿರ ಭಕ್ತರು ಈ ಕರಗೋತ್ಸವದಲ್ಲಿ ಪಾಲ್ಗೊಂಡು ರಸ್ತೆಯುದ್ದಕ್ಕೂ ಕ್ವಿಂಟಲ್ ಗಂಟಲೆ ಕರ್ಪೂರ ಹವಿ ಆಚರಿಸುವ ಈ ಕರಗೋತ್ಸವ ವಿಶೇಷವೆಂದೇ ಮಾಸೂರಿನ ನಾಗರಿಕರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಅಂತೆಯೇ ಇದೇ ಗ್ರಾಮದ ಕೆರೆಗೆ ಹಾರವಾದ-ದಂತಕತೆಯಾದ ಮುದುಗದ ಕೆಂಚಮ್ಮ ಉತ್ಸವವನ್ನು ಯುಗಾದಿ ತಿಥಿಗೆ ಅಂದರೆ ಫೆಬ್ರುವರಿ-ಮಾರ್ಚ ತಿಂಗಳಲ್ಲಿ ಆಚರಿಸುವುದೂ ಅನೂಚಾನವಾಗಿ ನಡೆದುಕೊಂಡೇಬಂದಿದೆ.

ಕೆಂಗೊಂಡದ ದುರುಗಮ್ಮನ ಜಾತ್ರೆ

ಎಲ್ಲ ಊರುಗಳಲ್ಲಿ (ಬಹುತೇಕ) ಸ್ತ್ರೀ ದೇವತೆಗಳ ಜಾತ್ರೆ ಉತ್ಸವ, ಬಲಿ ಮುಂತಾದವುಗಳು ನಡೆಯುತ್ತದೆ. ಆದರೆ ಈ ಕೆಂಗೊಂಡ ದ್ಯಾಮವ್ವನ ಜಾತ್ರೆ ವಿಶೇಷ. ಯಾಕೆಂದರೆ ಇದನ್ನು ಪೂರ್ಣಪ್ರಮಾಣದಲ್ಲಿ ಆಚರಿಸುವವರು ಬುಡಕಟ್ಟು ಸಮೂಹದ ಬಂಜಾರರು-ಲಂಬಾಣಿಗರು. ವಾಸ್ತವವಾಗಿ ಈ ಗ್ರಾಮದಲ್ಲಿ ಈ ಸಮುದಾಯಕ್ಕೆ ಸೇರಿದ ಒಂದೇ ಒಂದು ಕುಟುಂಬವೂ ವಾಸವಾಗಿಲ್ಲ. ಆದರೆ ಸುತ್ತಮುತ್ತಲ ತಾಂಡಾಗಳಲ್ಲಿ ವಾಸಿಸುವ ಜಿಲ್ಲೆ ಹಾಗೂ ಸುತ್ತಮುತ್ತಲ ಜಿಲ್ಲೆಗಳ ಊರುಗಳಿಂದ ಬಂದ ಲಂಬಾಣಿ ಸಮೂಹ ಇಡೀ ರಾತ್ರಿ ಈ ಜಾತ್ರೆ ಮಾಡುವುದೊಂದು ವಿಶಿಷ್ಠ ಪದ್ಧತಿ. ಅನೇಕ ವರ್ಷಗಳಿಂದ ನಡೆದು ಕೊಂಡು ಬಂದ ಈ ಸಂಪ್ರದಾಯ ಇಂದಿಗೂ ಚಾಚೂ ತಪ್ಪದೆ ನಡೆಯುತ್ತಿರುವುದೇ ವಿಶೇಷ. ಬಂಜಾರ ಸಮುದಾಯದವರಿಂದ ಆಚರಿಸಲ್ಪಡುವ ಕೆಂಗೊಂಡದ ದ್ಯಾಮವ್ವನ ಜಾತ್ರೆ ಜನವರಿ ತಿಂಗಳಲ್ಲಿ ಇಡೀ ರಾತ್ರಿಯಲ್ಲಿ ಜರುಗಿ ಮರುದಿನ ಯಥಾಸ್ಥಿತಿಗೆ ತಲುಪಿಬಿಡುವುದು.

ಕೃಷಿ ಸಂಸ್ಕೃತಿಯ ಮೂಲವಾದ ಇಲ್ಲಿನ ಸಾಂಸ್ಕೃತಿಕ ಪರಂಪರೆಯ ಹಬ್ಬ, ಹರಿದಿನ, ಜಾತ್ರೆ ಉತ್ಸವಗಳು ಇಂದು ತನ್ನ ಮೂಲ ಆಶಯವನ್ನೇ ಕಳೆದುಕೊಂಡು ಅಣಕವಾಡು ಉತ್ಸವಗಳಾಗಿ ಬಿಟ್ಟವೆ. ಕೃಷಿ ಉತ್ಪಾದನೆಯಲ್ಲಾದ ಸ್ಥಿತ್ಯಂತರಗಳು, ಪಲ್ಲಟಗಳು, ಉದ್ಯಮೀಕರಣಗೊಂಡ ವ್ಯವಸ್ಥೆಗೆ ಬಲಿಪಶುವಾಗಿ ಸಾಯಲೂ ಆಗದೇ, ತಲೆಯೆತ್ತಿ ನಿಲ್ಲಲೂ ಆಗದೇ ಕೇವಲ ಅಣಕು ಗೂಡಾಗಿವೆ. ಭೋಗ ಸಂಸ್ಕೃತಿಯ ಮುಖವಾಡ ಧರಿಸಿ ಶ್ರೀ ಸಾಮಾನ್ಯನನ್ನು ಚಿತ್ರಹಿಂಸೆಗೆ ಗುರಿಪಡಿಸಿಬಿಟ್ಟವೆ.

ಬ್ಯಾಡಗಿ ಗುತ್ತೆವ್ವನ ಜಾತ್ರೆ (ಚಂದ್ರಗುತ್ತಿಯ ಶಾಖೆ)–ಫೆಬ್ರುವರಿ ತಿಂಗಳಲ್ಲಿ ನಡೆಯುವ ಈ ಜಾತ್ರೆ ಚಂದ್ರ ಗುತ್ತಿಯ ಗುತ್ತೆವ್ವನ ಜಾತ್ರೆಯಂತೆಯೇ ನಡೆಯುತ್ತಿತ್ತು. ಇಲ್ಲಿಯೂ ಕೂಡ ದೇವಿಗೆ ಬೆತ್ತಲೆ ಸೇವೆ ನಡೆಯುವ ವಾಡಿಕೆ ಇದ್ದಿತ್ತು. ಆದರೆ ಸರಕಾರದ ಬಿಗಿ ನಿಲುವಿನಿಂದ ಮಹಿಳೆಯರು ಬೆತ್ತಲೆ ಸೇವೆಗೆ ಬದಲಾಗಿ ಬೇವಿನ ಉಡಿಗೆ ಉಟ್ಟು ಹರಕೆ ತೀರಿಸುವ ವಾಡಿಕೆ ಇದೆ. ಆದರೆ ಬಾಲೆಯರು ಇಂದಿಗೂ ಬೆತ್ತಲೆ ಸೇವೆ ಪರಂಪರೆಯನ್ನು ನಡೆಸಿಕೊಂಡೇ ಬಂದಿರುವರು.

ಹಿಂದೂ ಸಂಪ್ರದಾಯದ ಪ್ರತೀಕಗಳೇ ಹಬ್ಬ–ಹರಿದಿನಗಳು ಮತ್ತು ಜಾತ್ರೆ–ಉತ್ಸವಗಳು. ಅಪ್ರತಿಮ ದೈವಾರಾಧಕರಾದ ಹಿಂದೂಗಳು, ತಮ್ಮ ಸಾಧನೆಗಳನ್ನು, ಈ ಮೂಲಕ ಆಚರಿಸುತ್ತಾರೆ. ಒಂದೆಡೆ ತಮ್ಮ ಇಷ್ಟದೈವದ ಸಂತೃಪ್ತಿ, ಮತ್ತೊಂದಡೆ ಆತ್ಮೋನ್ನತಿ, ಆತ್ಮ ಸಂತೃಪ್ತಿ, ಇದು ಪರಿಶುದ್ದತೆಯ ಪರಿಕಲ್ಪನೆ. ಅಮೂರ್ತ ದೈವತ್ವವನ್ನು ಮೂರ್ತಿಕರಿಸಿ, ಆರಾಧನೆ ಮಾಡುತ್ತ ಒಲೈಸಿಕೊಳ್ಳವ ಕ್ರಿಯೆಯಲ್ಲಿ ಸಂತೃಪ್ತರು, ಸಿದ್ಧಹಸ್ತರು ನಾವು.

ಇಂತಹ ಆರಾಧನಾ–ಉತ್ಸವಗಳನ್ನು ವರ್ಷದ 12 ತಿಂಗಳು ಒಂದಿಲ್ಲೊಂದು ರೀತಿಯಲ್ಲಿ ಆಚರಿಸುವ ರೂಢಿ ನಮ್ಮದಾಗಿದ್ದು ಅದಕ್ಕಾಗಿ ಹಿಂದೂ ಕ್ಯಾಲೆಂಡರ (ಪಂಚಾಂಗ) ಪ್ರಕಾರ ಹುಣ್ಣಿಮೆ–ಅಮವಾಸ್ಯೆಗಳನ್ನು ಆಯ್ದುಕೊಂಡು ಆಚರಿಸುತ್ತೇವೆ. ಆ ಮೂಲಕ ಪ್ರಕೃತಿ, ಮೊದಲು ದೇವರ ಸ್ಥಾನ ಪಡೆದುಬಿಡುತ್ತದೆ. ಇದನ್ನೇ ಕವಿಗಳು ಪ್ರಕೃತಿಯೇ ಗುರು, ಗಗನಲಿಂಗ ಜಗವೇ ಕೂಡಲ ಸಂಗವೆನ್ನುತ್ತಾರೆ. ಪ್ರಕೃತಿ–ಪುರುಷರ ಸಮಾಗಮ, ಅದರಿಂದ ಉದ್ಭವಗೊಳ್ಳುವ ಚೇತನ, ವಿಕಾಸನ ದಾರಿಯೇ ಆರಾಧನೆಯ ಮೂಲವೆನ್ನುವುದು ನಮ್ಮ ಕಲ್ಪನೆ.

ಇಂತಹ ಕ್ರಿಯೆ–ಪ್ರಕ್ರಿಯೆಗಳ ಚಲನ ಶೀಲತೆಯಲ್ಲಿ ಆಗುವ ಮಹತ್ತರ ಬದಲಾವಣೆಗಳು ಗತಿ–ಅವಗತಿಗಳನ್ನು ಗುರುತಿಸುತ್ತವೆ. ಅವುಗಳ ಕಾಂತೀಯತೆ ಮತ್ತು ಅಪಕಾಂತಿಯತೆಗಳ ಭಯದಿಂದ ಭಕ್ತಿಯುಂಟಾಗಿ, ಆರಾಧನೆಯ ಮೂಲಕ ಪ್ರಕೃತಿಯನ್ನು ಸಂತೃಪ್ತಿಗೊಳಿಸುವ ಕ್ರಿಯೆಗಳ ಆಚರಣೆ, ಹಬ್ಬ, ಹರಿದಿನ, ಇವುಗಳ ಮೂಲ ಕೇಂದ್ರ ಬಿಂದುಗಳೇ ಪೃಥ್ವಿ, ಸೂರ್ಯ,

ಚಂದ್ರ, ಗ್ರಹ, ನಕ್ಷತ್ರಗಳು. ಅವುಗಳ ಚಲನಶೀಲತೆಯಿಂದುಂಟಾಗುವ ಹಗಲು ರಾತ್ರಿಗಳು, ವಾರ, ಮಾಸಗಳು, ಹುಣ್ಣಿಮೆ, ಅಮವಾಸ್ಯೆಗಳು, ತಿಥಿ, ನಕ್ಷತ್ರಗಳು, ಗ್ರಹಣಾದಿಗಳು, ಸಂಕ್ರಮಣಾದಿ ಪ್ರಾಕೃತಿಕ ಪಥಸಂಚಲನಗಳು, ನಮ್ಮ ಭವಿಷ್ಯದ ಬದುಕಿನ ಉಜ್ವಲತೆಗಾಗಿ, ಸಾರ್ಥಕತೆಗಾಗಿ, ಸುಂದರ, ಸುಮಧುರ ಕ್ಷಣಗಳ ಭವಿಷ್ಯಕ್ಕಾಗಿ, ಒಟ್ಟಾರೆಯಾಗಿ ಮನುಕುಲದ ಏಳಿಗೆಗಾಗಿ ನಡೆಸುವ ಈ ಆರಾಧನಾ ಕ್ರಿಯೆಗಳೇ ಹಬ್ಬ, ಹರಿದಿನ, ತೇರು, ಜಾತ್ರೆಗಳು, ಉತ್ಸವಗಳು, ಆಚರಣೆಗಳು. ಇವೆಲ್ಲವುಗಳ ಮೂಲ ಸೆಲೆಯೇ ನಂಬಿಕೆ.

ಆರಾಧನಾ ಸಂಸ್ಕೃತಿ ರೂಢಿಸಿಕೊಂಡ ಮಾನವ ತನ್ನ ಹೊಟ್ಟೆ ಪಾಡಿಗಾಗಿ ಮತ್ತು ಮಾನಸಿಕ ಸಂತೃಪ್ತಿಗಾಗಿ, ಉತ್ಪಾದನಾ ಸಂಸ್ಕೃತಿಯನ್ನು ರೂಡಿಸಿಕೊಳ್ಳತೊಡಗಿದಂತೆಲ್ಲ ಹೊಸ ಹೊಸ ಅನ್ವೇಷಣೆಯನ್ನು ತೊಡಗಿಸಿಕೊಂಡು ನಂತರ ನೆಲ, ಜಲ, ವಾಯು, ಬೆಳಕುಗಳ ಯಥೇಚ್ಛತೆಯನ್ನು ಬಳಸಿಕೊಳ್ಳುತ್ತಲೆ, ಕೃಷಿ ಸಂಸ್ಕೃತಿಗೆ ಆಹ್ವಾನ ನೀಡತೊಡಗಿದೆ. ಅಲ್ಲಿಂದ ಆತನ ಬದುಕೇ ಬದಲಾಗತೊಡಗಿ, ಪ್ರಕೃತಿಯ ರಹಸ್ಯತೆ, ನಿಗೂಢತೆಯನ್ನೆಲ್ಲ ಭೇದಿಸುತ್ತಾ, ಅವುಗಳ ನಿಗೂಢತೆಗೆ ಬೆರೆಗಾಗಿ ಹೊಸ ಹೊಸ ಮಾದರಿಯ ಆರಾಧನಾ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳುತ್ತಲೇ ಅವುಗಳ ಅನುಷ್ಠಾನಕ್ಕೆ ಆಚರಣೆಯೆಂಬ ಮಂತ್ರ ಜಪಿಸತೊಡಗಿದ. ನಂತರದ ಕಾಲ ಘಟ್ಟದಲ್ಲಿ ಅರ್ಘ್ಯ(ಸಮರ್ಪಿಸು), ಬಲಿ, ನೈವೇದ್ಯಗಳು ಅಸ್ತಿತ್ವ ಪಡೆದುಕೊಳ್ಳುತ್ತ ಹೋದಂತೆಲ್ಲ ಅವುಗಳನ್ನೆಲ್ಲ ಪ್ರತಿಷ್ಠಾಪಿಸಿ, ಅನುಷ್ಠಾನಗೊಳಿಸಲು ಸಮಯ ದಿನಗಳನ್ನು ನಿಗದಿಗೊಳಿಸುವ ಹವಣಿಕೆ ನಡಿಸಿದಾಗಲೇ ಹುಣ್ಣಿಮೆ ಅಮವಾಸ್ಯೆಗಳ ಜೊತೆಗೆ ವಾರ, ನಕ್ಷತ್ರ, ತಿಥಿ ಮುಂತಾದವುಗಳನ್ನು ಮುಂದೊಡ್ಡಲಾಯಿತೆನ್ನಬಹುದು. ಕೃಷಿ ಉತ್ಪಾದನೆಯ ಸುಗ್ಗಿಯೆಂಬ ಸಂಗ್ರಹ ಕಾರ್ಯ ಮುಗಿದ ನಂತರ ಸಿಗುವ ಬಿಡುವುಗಳಲ್ಲಿ ವಿಶೇಷವಾದ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳತೊಡಗಿದೆ. ಹೀಗಾಗಿ ಮಳೆ, ಚಳಿ, ಬೇಸಿಗೆಯ ಕಾಲಗಳು, ಋತುಮಾನದ ಚೌಕಟ್ಟುಗಳಾಗಿ ಆಚರಣೆಗಳ ಆದ್ಯತೆಗಳಿಗೆ ದಾರಿಗಳಾದವು. ಇವುಗಳ ಜೊತೆಗೆ 'ಮದುವೆ' ಎನ್ನುವ ಕೌಟುಂಬಿಕ ವ್ಯವಸ್ಥೆ ಮತ್ತು ಸಾಂಸ್ಥೀಕರಣಗೊಂಡಂತೆಲ್ಲ ಅವ್ಯವಸ್ಥೆಯನ್ನೇ ಸ್ಥಾವರ ರೂಪಕ್ಕಿಳಿಸಿ, ಗಂಡ, ಹೆಂಡತಿ, ಮಕ್ಕಳು ಮುಂತಾದ ಕುಟುಂಬ ವ್ಯವಸ್ಥೆ ರಚಿಸಿಕೊಂಡು, ರಕ್ಷಣೆ, ಭದ್ರತೆ, ಹತ್ತು ಹಲವು ಸಾಮಾಜಿಕ ಸ್ಥಿತಿಗತಿಗಳನ್ನು ಕಟ್ಟಿಕೊಂಡು, ಬಂಧಿಯಾಗಿಬಿಟ್ಟ. ತಾನೇ ಕಟ್ಟಿದ ಸ್ವರ್ಗ, ನರಕಗಳ ಕಲ್ಪನೆಯಲ್ಲಿ ಸಿಕ್ಕು ನರಳುತ್ತ ನೀತಿ-ಅನೀತಿ, ಧರ್ಮ-ಅಧರ್ಮ, ಸತ್ಯ-ಅಸತ್ಯಗಳ ಸಾಮಾಜಿಕ ಬದ್ಧತೆಗಳನ್ನು ಸೃಷ್ಟಿಸಿಕೊಂಡು ಬದುಕತೊಡಗಿದ ಎಲ್ಲವುಗಳಿಂದ ಬಾಹಿರನಾಗಿ ಬದುಕುವವನಿಗೆ ದೇವರೆಂಬ ಅಶರೀರ ಶಕ್ತಿಯ ಭಯ ಬಿತ್ತಿ ಆಳುತ್ತಲೇ, ಹಬ್ಬ-ಹರಿದಿನಗಳ ಆಚರಣೆಯಂತಹ ಧಾರ್ಮಿಕ ರೀತಿ-ರಿವಾಜುಗಳ ವಾರಸುದಾರಿಕೆ ಮೆರೆಯತೊಡಗಿದ, ಇಂತಹ ವಾರಸುದಾರಿಕೆಯ ಹುಡುಕಾಟವೇ ಈ ಜಿಲ್ಲೆಯ ಹಬ್ಬ ಹರಿದಿನಗಳ ಅಧ್ಯಯನದ ಮುಖ್ಯ ಆಶಯ.

2.5. ಸಾಮಾಜಿಕ ಹಾಗೂ ಸಾಂಸ್ಕೃತಿಕ ಪಲ್ಲಟಗಳು:

ಸಮಾಜವು ಸ್ಥಿರವಾದುದಲ್ಲ. ಅದು ನಿತ್ಯ ಪರಿವರ್ತನಾಶೀಲವಾದುದು. ತನ್ನೊಳಗಿನ ಹಲವಾರು ಅಂಶಗಳಲ್ಲಿ ಬದಲಾವಣೆಗಳನ್ನು ಕಂಡುಕೊಂಡಿದೆ. ಮಾನವ ಮತ್ತು ಸಮಾಜ ಇವು ಒಂದನ್ನು ಬಿಟ್ಟು ಮತ್ತೊಂದಿಲ್ಲ. ಮಾನವ ಸಮಾಜದ ಚರಿತ್ರೆ ತುಂಬಾ ದೀರ್ಘವಾದುದು. ಒಂದು ಕಾಲದ ಅನಾಗರಿಕ ಮಾನವ ಸಮುದಾಯ ಬೆಳೆದು ಆಧುನೀಕರಣಗೊಂಡಿದೆ. ಅಂದರೆ ನಾಗರೀಕತೆ ಹೊಂದಿದೆ ಎಂದು ಹೇಳಬಹುದು. ಮಾನವನು ಜನಿಸಿ ಹಂತ ಹಂತವಾಗಿ ವಿಕಾಸ ಹೊಂದಿ ಬೌದ್ಧಿಕ ಹಾಗೂ ಭೌತಿಕ ಅಂಶಗಳಲ್ಲಿ ಬದಲಾವಣೆ ಹೊಂದಿದ್ದಾನೆ. ಅದೇ ರೀತಿ ಸಮಾಜವೂ ಸಹ ವಿಕಾಸ ಹೊಂದುತ್ತಲೇ ಬಂದಿದೆ. ಆದರೆ ಸಮಾಜ (ಅ) ವಿನಾಶ ಗುಣವನ್ನು ಹೊಂದಿದೆ. ಮಾನವ ಇದರಿಂದ ಹೊರತಾಗಿದ್ದಾನೆ. ಇದಕ್ಕೆ ಆಧಾರವಾಗಿ ಸುಪ್ರಸಿದ್ಧ ಸಮಾಜಶಾಸ್ತ್ರಜ್ಞ ಹರ್ಬರ್ಟ್ ಸ್ಪೆನ್ಸರ್ ರವರ ಸಾಮಾಜಿಕ ವಿಕಾಸವಾದ ಮತ್ತು ಜೈವಿಕ ಸಾದೃಶ್ಯ ಸಿದ್ಧಾಂತಗಳು ಪುಷ್ಟೀಕರಿಸಿರುವುದು ಕಂಡುಬರುತ್ತದೆ.

ಪರಿವರ್ತನಾ ಅಂಶಗಳಲ್ಲಿ ಬುಡಕಟ್ಟು ಸಮುದಾಯಗಳ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನವೂ ಒಂದಾಗಿದೆ. ಸಮಾಜದ ವಿವಿದೆಡೆ ನೆಲೆಸಿರುವ ಬುಡಕಟ್ಟು ಜನರ ಬದುಕು ವಿವಿಧ ಕಾರಣಗಳಿಂದಾಗಿ ಪಲ್ಲಟಗೊಳ್ಳುತ್ತಿದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಹಾವೇರಿ ಜಿಲ್ಲೆಯಲ್ಲಿನ ವಿವಿಧ ಬುಡಕಟ್ಟು ಸಮುದಾಯದವರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಂಶಗಳಲ್ಲಿ ಇಂದು ಸ್ವಲ್ಪ ಬದಲಾವಣೆ ಆಗಿರುವುದನ್ನು ಸೂಕ್ಷ್ಮವಾಗಿ ಗಮನಿಸಬಹುದಾಗಿದೆ. ಸಾಮಾಜಿಕ ಪರಿವರ್ತನೆಯ ಹಾದಿಯಲ್ಲಿ ಸಾಕಷ್ಟು ಬುಡಕಟ್ಟು ಸಮುದಾಯಗಳು ಸಾಗುತ್ತಿರುವುದನ್ನು ಕಾಣಬಹುದು. ಇಂದಿನ ದಿನಗಳಲ್ಲಿ ಸಮಾಜದ ಮೇಲೆ ಪ್ರಭುತ್ವ ಸಾಧಿಸಿರುವ ಮುಖ್ಯ ಪರಿಕಲ್ಪನೆಗಳಾದ ಆಧುನೀಕರಣ, ನಗರೀಕರಣ, ಪಾಶ್ಚಾತೀಕರಣ, ಔದ್ಯೋಗಿಕರಣ, ಜಾಗತೀಕರಣ, ಖಾಸಗೀಕರಣ, ಉದಾರೀಕರಣಗಳ ಪ್ರಭಾವಕ್ಕೆ ಒಳಗಾಗಿ ಸ್ಥಿತ್ಯಂತರಗೊಳ್ಳತೊಡಗಿದ್ದಾರೆ. ಬುಡಕಟ್ಟು ಸಮುದಾಯಗಳ ಮೇಲೆ ಇತರೆ ಜಾತಿ ಸಮುದಾಯಗಳ ಪ್ರಭಾವದಿಂದಲೂ, ಇಂದು ತಮ್ಮಲ್ಲಿರುವ ಕೆಲವು ಆಚರಣಾ ಕ್ರಮ ಹಾಗೂ ಜೀವನ ವಿಧಾನದಲ್ಲಿ ಬದಲಾವಣೆಯಾಗಿರುವುದು ಕಂಡುಬರುತ್ತಿದೆ. ಜೊತೆಗೆ, ಇವುಗಳು ಸಾಮಾಜಿಕ, ಆರ್ಥಿಕ, ರಾಜಕೀಯ, ಶಿಕ್ಷಣ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಇಂದು ಪರಿವರ್ತನೆಗೊಂಡಿವೆ ಮತ್ತು ಪರಿವರ್ತನೆಗೊಳ್ಳುವ ಹವಣಿಕೆಯಲ್ಲಿವೆ.

"ಸಮಾಜ ಜೀವನದಲ್ಲಿ ಈ ಹಿಂದೆ ಇದ್ದ ರೀತಿ ನೀತಿಗಳನ್ನು ಬದಲಿಸುವ ಅಥವಾ ಮಾರ್ಪಡಿಸುವ ಹೊಸ ಶೋಬಾಚಾರ ಅಥವಾ ವಿಧಾನಕ್ಕೆ ಸಾಮಾಜಿಕ ಬದಲಾವಣೆ ಎಂದು ಹೇಳಬಹುದು. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ, ಜನ ಜೀವನದಲ್ಲಿ ಅಥವಾ ಸಮಾಜ ವ್ಯವಸ್ಥೆಯಲ್ಲಿ ಹಳೆಯ ರೀತಿ ನೀತಿಗಳನ್ನು ಬದಲಿಸುವ ಅಥವಾ ಮಾರ್ಪಡಿಸುವ ಹೊಸ

ಪ್ಯಾಶನ್ನುಗಳನ್ನು ಸಾಮಾಜಿಕ ಬದಲಾವಣೆ ಎಂದು ಹೇಳಬಹುದಾಗಿದೆ."[9] ಸಮಾಜಶಾಸ್ತ್ರಜ್ಞರಾದ ಕೆ.ಡೇವಿಸ್ ರವರು ಸಾಮಾಜಿಕ ಪರಿವರ್ತನೆಯನ್ನು "ಸಾಮಾಜಿಕ ರಚನೆ ಹಾಗೂ ಕಾರ್ಯಗಳಲ್ಲಿನ ವ್ಯತ್ಯಾಸ" ಎಂದಿದ್ದಾರೆ. ಈ ರೀತಿಯ ಬದಲಾವಣೆಗೆ ಸಾಕಷ್ಟು ಕಾರಣಗಳಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಸಾಂಸ್ಕೃತಿಕ ಅಂಶಗಳು, ತಾಂತ್ರಿಕ ಅಂಶಗಳು, ಜೈವಿಕ ಅಂಶಗಳು, ಪರಿಸರದ ಅಂಶಗಳು ಇತ್ಯಾದಿಗಳು. ಈ ಎಲ್ಲಾ ಕಾರಣಗಳಿಂದಾಗಿ ಸಮಾಜದಲ್ಲಿ ಹಾಗೂ ಸಮಾಜದಲ್ಲಿನ ಸಮುದಾಯಗಳಲ್ಲಿ ಬದಲಾವಣೆಗಳಾಗುವುದು ಖಚಿತವಾಗಿದೆ. ಈ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಒಮ್ಮೆ ಹಾವೇರಿ ಜಿಲ್ಲೆಯ ಆಯ್ದ ಬುಡಕಟ್ಟು ಸಮುದಾಯಗಳತ್ತ ದೃಷ್ಟಿ ಹಾಯಿಸಿದಾಗ ಸಾಕಷ್ಟು ವಿಷಯಗಳಲ್ಲಿ ಮಾರ್ಪಾಡುಗಳಾಗಿರುವುದು ನಮಗೆ ಗೋಚರಿಸುತ್ತದೆ. ಇಂದು ಜಿಲ್ಲೆಯ ವಿವಿಧ ಬುಡಕಟ್ಟು ಸಮುದಾಯಗಳ ಸಾಮಾಜಿಕ ಪರಿಸ್ಥಿತಿಗಳನ್ನು ಪರಿಶೀಲಿಸಿ ನೋಡಿದಾಗ, ಅವುಗಳ ಆಹಾರ ಪದ್ಧತಿ, ವಸತಿ ವ್ಯವಸ್ಥೆ, ಕುಟುಂಬ ವ್ಯವಸ್ಥೆ, ಒಳಾಡಳಿತ ಪದ್ಧತಿ, ವಿವಾಹ, ಉಡುಗೆ-ತೊಡುಗೆ, ಆಚರಣೆಗಳು ಇತ್ಯಾದಿ ವಿಷಯಗಳಲ್ಲಿ ಪಲ್ಲಟಗಳಾಗಿರುವುದು ಕಂಡು ಬರುತ್ತದೆ.

ನಮ್ಮಲ್ಲಿ ಸಂಸ್ಕೃತಿಯ ಕುರಿತು ಮತ್ತು ಅದರೊಳಗಿನ ಸ್ಥಿತ್ಯಂತರಗಳ ಕುರಿತಾಗಿ ಅಷ್ಟಾಗಿ ಚಿಂತನೆಗಳು ನಡೆದಿಲ್ಲ. ಇತ್ತೀಚೆಗೆ ಸಾಂಸ್ಕೃತಿಕ ಪಲ್ಲಟಗಳ ಕುರಿತು ಅನೇಕರು ಚರ್ಚಿಸುತ್ತಿರುವುದು ಗಮನಾರ್ಹವಾಗಿದೆ ಹಾಗೂ ಸ್ವಾಗತರ್ಹ. "ಭಾರತದಲ್ಲಿ ಸಂಸ್ಕೃತಿಯ ಕುರಿತು ಚರ್ಚೆಯನ್ನು ಹುಟ್ಟು ಹಾಕಿದವರು ಇಂಗ್ಲೀಷರು. ಅದಕ್ಕೆ ಪೂರಕವಾದ ಆಕರಗಳ ಅಧ್ಯಯನವೂ ಅಂದಿನಂದಲೇ ಪ್ರಾರಂಭವಾಯ್ತು. ಮೆಕೆಂಝಿ, ಫ್ಲಿಟ್, ರೈಸ್, ಕಿಟೆಲ್ ತರದವರು ಇಲ್ಲಿನ ಪುರಾಣ, ಶಾಸ್ತ್ರ, ಶಾಸನ, ಚರಿತ್ರೆ, ಮೀಮಾಂಸೆ, ನಿಘಂಟು ಎಲ್ಲ ಜ್ಞಾನ ಶಿಸ್ತುಗಳ ಕುರಿತು ಆಸಕ್ತಿ ತೋರಿದರು. 'ನಿಮಗೆ ಚಾರಿತ್ರಿಕ ಪ್ರಜ್ಞೆ ಇಲ್ಲದಿರುವುದರಿಂದ ನಾವು ಅದನ್ನು ಪುನಾರಚಿಸಿಕೊಡುತ್ತೇವೆ' ಎಂದು ಭಾರತೀಯರನ್ನು ಲೇವಡಿ ಮಾಡಿದರು. ಹೀಗೆ 'ಕಟ್ಟಿ ಕೊಡುವ' ಹಿಂದೆ ತಮ್ಮ ಸಾಮ್ರಾಜ್ಯದ ಹಿತಾಸಕ್ತಿ ಇದೆ ಎಂಬುದನ್ನು ಅವರು ಮರೆಮಾಚಿದ್ದರು ಸಹ. ಇಂತಹ ಅಪದ್ಧ ಕಾಲಘಟ್ಟದಲ್ಲಿನ ಅವರ ಅಧ್ಯಯನಗಳು ವೈದಿಕರ ಸಾಹಿತ್ಯವನ್ನು, ಸಂಸ್ಕೃತಿಯನ್ನು ಇಡೀ ಭಾರತದ ಸಂಸ್ಕೃತಿ ಎಂದು ಪರಿಗಣಿಸಿದವು ಇದಕ್ಕೆ ಅನೇಕ ಒಳಕಾರಣಗಳೂ ಉಂಟು."[10] .

"ವಸಾಹತುಶಾಹಿ ಮತ್ತು ದೇಶಿಯ ಮಧ್ಯವರ್ತಿ ಸಮುದಾಯಗಳ ಅಪವಿತ್ರ ಮೈತ್ರಿಕೂಟದ ರಾಜಕಾರಣದ ಫಲವಾಗಿ, ಆದಿವಾಸಿ ಮತ್ತು ಕೆಳಜಾತಿ ಕೃಷಿಕ ಸಮಾಜಗಳಲ್ಲಿ ಅನೇಕ ರೂಪಾಂತರಗಳು ಸಂಭವಿಸಿದವು. ಭೂಮಿಯ ಜೊತೆಗಿನ ಈ ಸಮುದಾಯಗಳ ಪಾರಂಪರಿಕ ಅಧಿಕಾರಗಳ ನಾಶ, ಈ ಬಗೆಯ ಸ್ಥಿತ್ಯಂತರಗಳಿಗೆ ಕಾರಣವಾಯ್ತು."[11] .ಇದೇ ಕಾಲಘಟ್ಟದಲ್ಲಿ, ಕರಕುಶಲ ಮತ್ತು ಪ್ರದರ್ಶಕ ಕಲೆಗಳನ್ನೇ ನಂಬಿ ಬದುಕನ್ನು ಸಾಗಿಸುತ್ತಿದ್ದ

ಅನೇಕ ಸಮುದಾಯಗಳು ವಿನಾಶದ ಅಂಚಿಗೆ ತಳ್ಳಲ್ಪಟ್ಟವು. ನವವಸಾಹತುಶಾಹಿಯ ಸಂದರ್ಭದಲ್ಲಿ ಈ ಉತ್ಪಾದಕ ಸಂಸ್ಕೃತಿ ಹೊಸ ರೂಪ ಪಡೆದುಕೊಳ್ಳುವ ರೀತಿ ಯಾಂತ್ರೀಕೃತ ಬದುಕಿಗೆ ಕೈಗನ್ನಡಿಯಂತಿದೆ. ಹಳೆಯ ಒಡಂಬಡಿಕೆಗಳನ್ನು ಹೀಗಳೆಯುತ್ತಲೇ ಹೊಸ ಬದುಕನ್ನು ಒಡಂಬಡಿಕೆ ಮಾಡಿಕೊಳ್ಳುವ ಸಂದರ್ಭ ನಮ್ಮನ್ನು ಹೊಸ ಸವಾಲುಗಳಿಗೆ ಅನಿವಾರ್ಯವಾಗಿ ದೂಕುತ್ತದೆ.

"ಜನಪದ ಸಾಹಿತ್ಯ ಹುಟ್ಟಿದ್ದೇ ಬಹುತ್ವದ ಧಾರೆಯ ಮೂಲ ಸೆಲೆಯಿಂದ ಎಂಬ ಸಂಗತಿ ನಮ್ಮ ಅವಗಾಹನೆಗೆ ಬರಬೇಕಿದೆ. ಅದು ಶ್ರಮ ಸಂಸ್ಕೃತಿಯ ವಾಹಕ. ಉತ್ಪಾದಕ ಸಂಸ್ಕೃತಿಯೆಂಬುದರ ಅಭಿವ್ಯಕ್ತಿ, ಹೀಗಾಗಿ ಈ ದೇಶದ ಬಹುಮುಖಿ ಸಂಸ್ಕೃತಿ ವ್ಯಕ್ತವಾಗಿರುವುದೇ ಜನಪದ ಸಾಹಿತ್ಯದಲ್ಲಿ, ಆದರೆ ಸಾಹಿತ್ಯ ಚರಿತ್ರೆಯೆಂಬ ದಾಖಲೀಕರಣದ ಕ್ರಿಯೆ ಚಲಾವಣೆಗೆ ಬಂದಿರುವುದು ಈ ಬಹುತ್ವದ ಧಾರೆಯನ್ನು ನಿರಾಕರಣೆ ಮಾಡುವ ಮೂಲಕವೇ ಎಂಬುದು ಕಟುಸತ್ಯ. ಈ ಬಹುತ್ವದ ಧಾರೆಗಳ ಮೂಲ ಅಡಗಿರುವುದೇ ಕೃಷಿ ಉತ್ಪಾದನೆಯ ವಿವಿಧ ಆಯಾಮಗಳಿಂದ ಹೀಗಾಗಿ ಜನಪದವೆಂಬುದು ಸೃಜನಶೀಲತೆಯ ಮಜಲುಗಳನ್ನು ವೈವಿಧ್ಯಮವಾಗಿ ಹರವಿಕೊಂಡಿದ್ದರೂ ಜನಪದವೆಂಬುದು ನಿಂತ ನೀರಲ್ಲ ಪರಿವರ್ತನಾಶೀಲ ವ್ಯವಸ್ಥೆಯನ್ನು ನೊಂದ ನಾಯಿಯ ಹಾಗೆ ಗೊಣಗುತ್ತಲೇ ಸ್ವೀಕರಿಸುತ್ತದೆ. ಕುಂಯ್ ಗುಡುತ್ತಲೇ ದಾರಿ ಸಾಗಿಸುತ್ತದೆ. ಪ್ರತಿ ಸಂಸ್ಕೃತಿ ಹುಟ್ಟು ಪಡೆಯುವುದು ಜನಪದ ಜಂಗಮಶೀಲ ಪ್ರವೃತ್ತಿಯಿಂದ. ಅದು ಸ್ಥಾಯಿಯಾಗಿ ನಿಂತು ಸಂಸ್ಕೃತಿಯ ವಾರಸುದಾರಿಕೆ ಪಡೆದುಕೊಳ್ಳವುದು ಲಿಖಿತ ಆಯಾಮದಲ್ಲಿ ಆವಿಷ್ಕಾರಗೊಳ್ಳುವುದರ ಮೂಲಕ."[12]

ಕೆಲವು ವರ್ಷಗಳ ಹಿಂದೆ ಧಾರವಾಡ ಆಕಾಶವಾಣಿ ಕೇಂದ್ರದಿಂದ ಒಂದು ಜಾಹಿರಾತು ಬಿತ್ತರಗೊಳ್ಳುತ್ತಿತ್ತು ಅದು 'ಇಂಡಿಯನ್ ಗ್ಯಾಸ್ ಕಂಪನಿಯ ಪ್ರಚಾರ' ಲಾವಣಿ ಹಾಡಿನ ಮೂಲಕ ಉತ್ಪಾದನೆಯ ಪ್ರಚಾರ ಆರಂಭವಾಗುತ್ತದೆ.

ಗಂ– ಜ್ಞಾನಿಯಾಗಬೇಕಂದ್ರ । ಗ್ರಂಥಾ ಓದಬೇಕ
ಗೃಹಿಣಿಯಾಗಬೇಕಂದ್ರ । ಗ್ಯಾಸ ಬಳಸಬೇಕ ॥
ಹೆಂ– ಒಲಿಮುಂದ ಕುಂತು ಕುಂತು ।ರೋಗವೆಲ್ಲ ಬಡಿದುಹೊಯ್ತು ।
ಹೊಗಿನೆಲ್ಲ ಕುಡುದು ಕುಡುದು ।ಕೆಮ್ಮ ಎಲ್ಲ ಬಂದು ಹೋಯ್ತು.
ಗಂ–ನೀ ಮೊದಲು ಗ್ಯಾಸ ಬಳಸು । ಆಮೇಲೆ ಗೃಹಿಣಿಯಾಗು
ನೀ ಗ್ಯಾಸ ಬಳಸಬೇಕ । ಇಂಡೇನ್ ಗ್ಯಾಸ ಬಳಸಬೇಕು.
ಆಧುನಿಕ ಜಾನಪದ ಆಕಾಶವಾಣಿ ಧಾರವಾಡದಿಂದ ಬಿತ್ತರ/"[13].

"ಇದು ಆಧುನಿಕ ಉತ್ಪಾದಕ ಸಂಸ್ಕೃತಿಯ ವಿಕಾರ ಸ್ವರೂಪ ಯಾವುದು ಬಹುಧಾರಣ ಸಂಸ್ಕೃತಿಯ ಪ್ರತಿರೂಪವಾಗಿತ್ತೊ ಅದು ಏಕಧಾರಾ ಸಂಸ್ಕೃತಿಯ ವಾಹಕವಾಗಿ

ಪರಿವರ್ತನೆಗೊಂಡು ಭೋಗ ಸಂಸ್ಕೃತಿಯ ಸರಕಾಗಿ ಪರಿವರ್ತನೆಗೊಂಡು, ಬಹುತ್ವದ ಧಾರೆಯ ಸಂಸ್ಕೃತಿಯ ಅವಹೇಳನ ಮಾಡುತ್ತಲೇ, ಕೊಳ್ಳಬಾಕ ಸಂಸ್ಕೃತಿಯ ಒತ್ತಡ ತಂದು ಇಡೀ ಬದುಕನ್ನೇ ಭ್ರಮಾತ್ಮಕತೆಯನ್ನೇ ದಿವಾಳಿ ಅಂಚಿಗೆ ನೂಕುವ ಹುನ್ನಾರ ಆರಂಭಗೊಂಡಿದ್ದುದು ಸಾಮಾಜಿಕ ಅದಃಪತನದ ಕಡೆಗೆ ಕೊಂಡಯ್ಯಲಾರಂಭಿಸಿತು ಇದು ಆಧುನಿಕ ಉತ್ಪಾದಕ ಸಂಸ್ಕೃತಿಯ ವಿಕೃತ ಮುಖವಾಡ."[14].

ಒಟ್ಟಾರೆ ಹೇಳುವುದಾದರೆ ಮೊದಲಿದ್ದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸ್ಥಿತಿಗಳಿಗೂ ಸಮಕಾಲೀನ ಸ್ಥಿತಿಗತಿಗೆ ಹೋಲಿಸಿದರೆ ಸಾಕಷ್ಟು ಪರಿವರ್ತನೆಗಳಾಗಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣಗಳು ಅನೇಕಾನೇಕ. ಜೊತೆಗೆ ಇನ್ನೂ ಅನೇಕ ಚಾರಿತ್ರಿಕ ಕಾರಣಗಳಿಂದಾಗಿ ಕೆಳವರ್ಗಗಳ, ಬುಡಕಟ್ಟುಗಳ ಜೀವನ ವಿಧಾನಗಳೂ ಸಹ ತುಂಬಾ ಕೀಳಾಗಿ ಕಾಣತೊಡಗಿದವು. ಆದರೆ ಸಂಸ್ಕೃತಿಯ ಚಲನಶೀಲ ಪ್ರವೃತ್ತಿ ಮತ್ತು ಭಾರತೀಯ ಬಹುರೂಪಿ ಸಂಸ್ಕೃತಿಗಳು, ತೀರ ಇತ್ತೀಚೆಗೆ ನಮ್ಮನ್ನು ಬೆರಗುಗೊಳಿಸಿವೆ. ಮತ್ತು ಇಂತಹ ಸೂಕ್ಷ್ಮವಾದ ವಿಷಯಗಳ ಕುರಿತು ಸಂಶೋಧನೆ ಕೈಗೊಳ್ಳಲು ತುಂಬಾ ಅನುಕೂಲವೂ ಆಗಿದೆ.

ಆಧಾರಗಳು:

1. ಭೋಜರಾಜ ಪಾಟೀಲ, ಹಾವೇರಿ ಜಿಲ್ಲೆಯ ಶಾಸನ ಸಂಪತ್ತು ಲೇಖನ–1, 2000.
2. ಭೋಜರಾಜ ಪಾಟೀಲ, ಹಾವೇರಿ ಜಿಲ್ಲೆಯ ಶಾಸನ ಸಂಪತ್ತು, ಲೇಖನ–1, 2000.
3. ಭೋಜರಾಜ ಪಾಟೀಲ, ಹಾವೇರಿ ಜಿಲ್ಲೆಯ ಶಾಸನ ಸಂಪತ್ತು, ಲೇಖನ–1, 2000.
4. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, 1979. ಪುಟ–133.
5. ಭೋಜರಾಜ ಪಾಟೀಲ, ಹಾವೇರಿ ಜಿಲ್ಲೆಯ ಶಾಸನ ಸಂಪತ್ತು ಲೇಖನ–6 2000.
6. ಭೋಜರಾಜ ಪಾಟೀಲ, ನಾಗರಖಂಡ–70 1995, ಪುಟ–71
7. ಅದೇ. ಪುಟ–72.
8. ಕರ್ನಾಟಕ ಕನ್ನಡ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ–1979. ಪುಟ: 1590.
9. ವಿರುಪಾಕ್ಷಿ ಪೂಜಾರಹಳ್ಳಿ, 'ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ,' 2008 ಪುಟ: 164.
10. ಪ್ರಭಾಕರ ಎ.ಎಸ್. 'ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು' 2000 ಪುಟ: 03.
11. ಅದೇ ಪುಟ: 04.
12. ಲಿಂಗರಾಜ ಕಮ್ಮಾರ, 'ಬಹುತ್ವಧಾರೆ–ಸಂಸ್ಕೃತಿಕ ಪಲ್ಲಟಗಳು'2000. ಪುಟ: 37.
13. ಅದೇ, ಪುಟ: 37.
14. ಅದೇ: ಪುಟ: 38.

ಅಧ್ಯಾಯ 3

ಬುಡಕಟ್ಟುಗಳ ವರ್ಗೀಕರಣ ಮತ್ತು ಸಾಮಾಜಿಕತೆ

1. ಬುಡಕಟ್ಟುಗಳ ವರ್ಗೀಕರಣ:
2. ಬುಡಕಟ್ಟುಗಳ ಸಾಮಾಜಿಕ ಜೀವನ ಮತ್ತು ಸಾಮಾಜಿಕ ವ್ಯವಸ್ಥೆ:
3. ಬುಡಕಟ್ಟುಗಳ ಆಚರಣೆ, ನಂಬಿಕೆ, ಮತ್ತು ಸಂಪ್ರದಾಯಗಳು:
4. ಮೇದ ಬುಡಕಟ್ಟಿನ ಸಾಮಾಜಿಕತೆ :
5. ಬೇಡ ಸಮುದಾಯದ ಸಾಮಾಜಿಕತೆ
6. ಹೆಳವ ಸಮುದಾಯದ ಸಾಮಾಜಿಕತೆ:
7. ಸುಡಗಾಡು ಸಿದ್ಧ ಸಮುದಾಯದ ಸಾಮಾಜಿಕತೆ:
8. ಗೊಂದಲಿಗ ಸಮುದಾಯದ ಸಾಮಾಜಿಕತೆ:
9. ದುರುಗಮುರಗಿ ಸಮುದಾಯದ ಸಾಮಾಜಿಕತೆ:
10. ಬುಡ್ಗ ಜಂಗಮ ಸಮುದಾಯದ ಸಾಮಾಜಿಕತೆ:

ಬುಡಕಟ್ಟುಗಳ ವರ್ಗೀಕರಣ ಮತ್ತು ಸಾಮಾಜಿಕತೆ

ಪೀಠಿಕೆ

ಬುಡಕಟ್ಟುಗಳ ಬಗ್ಗೆ ಅಧ್ಯಯನ ಆರಂಭಿಸಿದವರಲ್ಲಿ ಭಾರತದ ಮಟ್ಟಿಗೆ ಬ್ರಿಟಿಷರೆ ಮೊದಲೆನ್ನಬಹುದು. ಅಧಿಕಾರಿಗಳು, ಕ್ರೈಸ್ತ ಪಾದ್ರಿಗಳು ಕ್ರಮವಾಗಿ ಆಡಳಿತ ಹಾಗೂ ಧರ್ಮ ಪ್ರಚಾರಗಳಿಗೆ ಅನುಕೂಲವಾಗುವಂತೆ ಬುಡಕಟ್ಟುಗಳ ಅಧ್ಯಯನ ನಡೆಸಿದ್ದಾರೆ. ಇಂಥವರ ಜೊತೆಗೆ ಕೂತೂಹಲ ಹಾಗೂ ಅಪಾರ ಮಾನವೀಯ ಅಂತಃಕರಣದಿಂದ ಅಧ್ಯಯನ ನಡೆಸಿದ ವೆರಿಯರ್ ಎಲ್ವಿನ್ ಅಂಥವರು ಇದ್ದಾರೆ. ಬ್ರಿಟಿಷ್ ವಿದ್ವಾಂಸರು 'Tribe' ಎನ್ನುವ ಹೆಸರಿನಿಂದ ಗುರುತಿಸಿದ ಸಮುದಾಯಗಳನ್ನು ಸ್ವಾತಂತ್ರ್ಯ ನಂತರ ಅಧ್ಯಯನ ಮಾಡಿದ ದೇಶಿ ವಿದ್ವಾಂಸರು, ಗಿರಿಜನರು, ಆದಿವಾಸಿಗಳು, ಬುಡಕಟ್ಟುಗಳು ಮೊದಲಾದ ಹೆಸರುಗಳಿಂದ ಕರೆದರು. ಮೇಲಿನ ಹೆಸರುಗಳೇ ಸೂಚಿಸಿದಂತೆ ಮನುಕುಲದ ಮೂಲಪುರುಷರು, ಗಿರಿಗಳಲ್ಲಿ ವಾಸ ಮಾಡುವವರು ಬುಡಕಟ್ಟು ಜನ ಎನಿಸಿಕೊಂಡರು. ಬುಡಕಟ್ಟು ಎಂಬ ಪದದ ಅರ್ಥವೂ ಕೂಡ ಅದೇ ಆಗಿದೆ. "ಬುಡ ಅಂದರೆ ಮೂಲ, ಕಟ್ಟು ಎಂದರೆ ಸಾಂಸ್ಕೃತಿಕ ಮೌಲ್ಯಗಳ ಕಟ್ಟು ಕಟ್ಟಳೆ ಆಚರಣೆ. ಒಂದೇ ಮೂಲಕ್ಕೆ ಸೇರಿದ ಸಂಪ್ರದಾಯವನ್ನು ಪಾಲಿಸುವವರು ಬುಡಕಟ್ಟು ಜನ."[1] ಇಂಥ ವ್ಯಾಖ್ಯಾನಗಳು ಬುಡಕಟ್ಟನ್ನು ನಿಖರವಾಗಿ ವ್ಯಾಖ್ಯಾನಿಸಲಾರವು. ಆದ್ದರಿಂದ ಬುಡಕಟ್ಟು ಎಂದರೇನು? ಎಂಬುದನ್ನು ವ್ಯಾಖ್ಯಾನಿಸುವುದಕ್ಕಿಂತ ಬುಡಕಟ್ಟು ಎಂದರೆ ಯಾವುದು ಎಂದು ಹೇಳುವುದು ಸುಲಭ. ಕರ್ನಾಟಕದ ಬುಡಕಟ್ಟೊಂದನ್ನು ಪ್ರಥಮವಾಗಿ ದೀರ್ಘ ಅಧ್ಯಯನಕ್ಕೆ ಒಳಪಡಿಸಿದ ತೀ.ನಂ. ಶಂಕರನಾರಾಯಣ ಅವರು ಅಂಥದೊಂದು ಪ್ರಯತ್ನ ಮಾಡಿದ್ದಾರೆ. ಅವರು ಹೇಳುವಂತೆ "ಭಾರತದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ಜಾತಿಗಳು ಮಾತ್ರವಲ್ಲದೆ ಹರಿಜನರಿಂದ ಕೂಡಿದ ಐದನೇ ಜಾತಿಯೂ ಇದೆ. ಈ ಜಾತಿಗಳನ್ನು ಬಿಟ್ಟು ಉಳಿದ ಹಿಂದೂ ಸಾಮಾಜಿಕ ವರ್ಗಗಳನ್ನೆಲ್ಲ ಭಾರತದಲ್ಲಿ ಬುಡಕಟ್ಟುಗಳೆಂದು ಕರೆಯಬಹುದು."[2] ಈ ತರಹದ ವ್ಯಾಖ್ಯಾನ ಕೂಡ ಇಂದು ಅಷ್ಟೊಂದು ಸಮಂಜಸವಾಗಿ ಕಾಣುವುದಿಲ್ಲ. ಏಕೆಂದರೆ ಬುಡಕಟ್ಟು ಜಾತಿಗಳಾಗುವ, ಜಾತಿ ಬುಡಕಟ್ಟುಗಳಾಗುವ ಈಗಿನ ಸಂಕೀರ್ಣ ಸಂದರ್ಭದಲ್ಲಿ ಮೇಲೆ ಸೂಚಿಸಿದಂತೆ ಬುಡಕಟ್ಟುಗಳನ್ನು ಗುರುತಿಸುವುದು ಅಸಾಧ್ಯ.

ಆದಾಗ್ಯೂ ಬುಡಕಟ್ಟು ಸಮುದಾಯಗಳ ಕುರಿತು ಮೊದಲ ಅಧ್ಯಾಯದಲ್ಲಿಯೇ ಸಾಕಷ್ಟು ವ್ಯಾಖ್ಯೆಗಳ ಮೂಲಕ ಅರ್ಥೈಸಲಾಗಿದೆ. ಜೊತೆಗೆ ಸಮುದಾಯಗಳ ಬಗ್ಗೆ ನಡೆದಿರುವ ಅಧ್ಯಯನಗಳನ್ನು ಸಹ ಉಲ್ಲೇಖಿಸಲಾಗಿದೆ. "ಬುಡಕಟ್ಟು ಎನಿಸಿಕೊಳ್ಳಬೇಕಾದರೆ ಒಂದು ಸಮುದಾಯ ಹೊಂದಿರಬೇಕಾದ ಅನೇಕ ಲಕ್ಷಣಗಳನ್ನು ವಿದ್ವಾಂಸರು ಪಟ್ಟಿ ಮಾಡಿದ್ದಾರೆ. ಅವುಗಳನ್ನು ಮುಂದಿನಂತೆ ಪಟ್ಟಿ ಮಾಡಬಹುದು. 1. ಪ್ರತ್ಯೇಕ ಸಂಸ್ಕೃತಿ 2. ರಕ್ತ ಸಂಬಂಧದ ಅತಿಯಾದ ಅವಲಂಬನೆ, 3. ಅನ್ಯರನ್ನು ಅನುಮಾನದಿಂದ ನೋಡುವ ದೃಷ್ಟಿ, 4. ಅತಿಯಾದ

ಪಾವಿತ್ರ್ಯತೆ, 5. ದೈವದ ವಿಶಿಷ್ಟ ಕಲ್ಪನೆ ಹಾಗೂ ಅಪಾರ ಭಕ್ತಿ, 6. ಪ್ರಕೃತಿಗೆ ಹತ್ತಿರವಾದ ಹಾಗೂ ಅವಲಂಬನೆಯ ಬದುಕು, 7. ಪ್ರತ್ಯೇಕ ಭಾಷೆ ಇತ್ಯಾದಿಗಳು."[3] (ಇವುಗಳನ್ನು ಮೊದಲ ಅಧ್ಯಾಯದಲ್ಲಿ ವಿವರಿಸಲಾಗಿದೆ)

ಈ ಎಲ್ಲಾ ಲಕ್ಷಣಗಳು ಒಂದೇ ಸಮುದಾಯದಲ್ಲಿ ದೊರೆಯುವುದು ವಿರಳ. ಇಂದು ಶುದ್ಧ ಬುಡಕಟ್ಟುಗಳೆಂದು ಕರೆಸಿಕೊಂಡ ಸಮುದಾಯಗಳಲ್ಲಿ ಕೂಡ ಈ ಎಲ್ಲಾ ಅಂಶಗಳು ಪೂರ್ಣ ಪ್ರಮಾಣದಲ್ಲಿ ಸಿಗಲಾರವು. ಈ ಹಿನ್ನೆಲೆಯಲ್ಲಿ ಹಾವೇರಿ ಜಿಲ್ಲೆಯಲ್ಲಿ ಕಂಡುಬರುವ ಪ್ರಮುಖ ಸಮುದಾಯಗಳಲ್ಲಿ ದೊರೆಯುವ ಬುಡಕಟ್ಟು ಅಂಶಗಳನ್ನು ಗುರುತಿಸಬಹುದಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಜಿಲ್ಲೆಯ ಏಳೂ ತಾಲೂಕುಗಳಲ್ಲಿ ಕಂಡುಬರುವ ಬೇಡ, ಮೇದ, ಹೆಳವ ಗೋಂದಳಿ, ದುರುಗಮುರಗಿ, ಸುಡಗಾಡುಸಿದ್ಧ, ಮತ್ತು ಹಗಲುವೇಷಗಾರ ಸಮುದಾಯಗಳ ಸಾಮಾಜಿಕ ಜೀವನ, ಸಾಮಾಜಿಕ ವ್ಯವಸ್ಥೆ, ಆಚರಣೆಗಳು, ನಂಬಿಕೆಗಳು ಮತ್ತು ಸಂಪ್ರದಾಯಗಳನ್ನು ಕ್ಷೇತ್ರಾಧ್ಯಯನದ ಮೂಲಕ ಸಂಗ್ರಹಿಸಲಾಗಿದೆ ಹಾಗೂ ಈ ವಿಷಯದ ಬಗ್ಗೆ ಆರಂಭದಿಂದ ಇಲ್ಲಿಯವರೆಗೆ ನಡೆದ ವಿದ್ವಾಂಸರ ಅಧ್ಯಯನಗಳಿಂದಲೂ ಹಲವಾರು ಮಾಹಿತಿಗಳನ್ನು ಬಳಸಿಕೊಳ್ಳಲಾಗಿದೆ.

3.1. ಬುಡಕಟ್ಟುಗಳ ವರ್ಗೀಕರಣ:

ವಿಶ್ವದ ಮೂಲನಿವಾಸಿಗಳೇ ಅಲೆಮಾರಿ ಆದಿವಾಸಿಗಳು. ಇವರಲ್ಲಿ ಹಲವು ವಿಧ. ಅವುಗಳೆಂದರೆ ಅಲೆಮಾರಿ ಬುಡಕಟ್ಟುಗಳು, ಬೇಟೆ ಹಾಗೂ ಆಹಾರ ಸಂಗ್ರಾಹಕ ಬುಡಕಟ್ಟುಗಳು, ಪಶುಪಾಲಕ ಬುಡಕಟ್ಟುಗಳು, ಕೃಷಿಕ ಬುಡಕಟ್ಟುಗಳು, ಅಪರಾಧಿ ಬುಡಕಟ್ಟುಗಳು, ವಿಮುಕ್ತ ಬುಡಕಟ್ಟುಗಳು, ಅರೆ-ಅಲೆಮಾರಿ ಬುಡಕಟ್ಟುಗಳು, ಸಮನಾಂತರ ಮತ್ತು ಪರ್ಯಾಯ ಬುಡಕಟ್ಟುಗಳು, ನೆಲೆ ನಿಂತ ಬುಡಕಟ್ಟುಗಳು ಇತ್ಯಾದಿ. ವಿಶ್ವಸಂಸ್ಥೆಯ ಇತ್ತೀಚಿನ ಅಂದಾಜಿನ ಪ್ರಕಾರ ವಿಶ್ವದಲ್ಲಿ ಶೇಕಡ 20ರಷ್ಟು ಅಲೆಮಾರಿಗಳಿದ್ದಾರೆ. ನಮ್ಮ ದೇಶದ ಜನಸಂಖ್ಯೆಯನ್ನು ಗುರುತಿಸಲು ಪ್ರಪ್ರಥಮವಾಗಿ ಜನಗಣತಿಯನ್ನು 1881 ರಲ್ಲಿ ಪ್ರಾರಂಭಿಸಲಾಯಿತು. ಇದರ ಪ್ರಕಾರ ಭಾರತದಲ್ಲಿ ಒಟ್ಟು 1929 ಜಾತಿ ಮತ್ತು ಬುಡಕಟ್ಟು ಸಮುದಾಯಗಳು ದಾಖಲಾಗಿವೆ. ಭಾರತೀಯ ಆಡಳಿತ ಸೇವೆಯಲ್ಲಿದ್ದ ಕೆ.ಎಸ್. ಸಿಂಗ್ ಅವರು ಭಾರತೀಯ ಮಾನವ ಸರ್ವೇಕ್ಷಣಾ ಸಂಸ್ಥೆಯ ಡೈರೆಕ್ಟರ್ ಜನರಲ್ ಆಗಿ ಸೇವೆ ಸಲ್ಲಿಸಿ ಭಾರತೀಯರ ಹಾಗೂ ಬುಡಕಟ್ಟುಗಳ ಕುರಿತು ಅಪಾರ ಅನುಭವ ಹೊಂದಿದ್ದರು. ಅವರು ಭಾರತೀಯ ಜನ ಯೋಜನೆಯನ್ನು ಪೂರ್ಣಗೊಳಿಸಿದರು. ಈ ಯೋಜನೆಯ ಆರಂಭದಲ್ಲಿ ಭಾರತದಲ್ಲಿ 6748 ಸಮುದಾಯಗಳನ್ನು ಗುರುತಿಸಲಾಗಿತ್ತು. ಅಂತಿಮದಲ್ಲಿ 4635 ಸಮುದಾಯಗಳ ಅಧ್ಯಯನ ಸಾಧ್ಯವಾಯಿತು (Singh.K.S:1996:vol.VIII:ix.x). ಇದರಿಂದ ಭಾರತೀಯ ಸಮುದಾಯಗಳ ಗುರುತಿಸುವಿಕೆಯು ಸರಳವಾಯಿತೆನ್ನಬಹುದು.

ನವದೆಹಲಿಯ ರಾಷ್ಟ್ರೀಯ ವಿಮುಕ್ತ ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟುಗಳ ಆಯೋಗದ ಅಂದಾಜು ಪಟ್ಟಿಯ ಪ್ರಕಾರ ಭಾರತದಲ್ಲಿ ಸುಮಾರು 749 ವಿಮುಕ್ತ ಮತ್ತು ಅಲೆಮಾರಿ ಸಮುದಾಯಗಳು ಅಸ್ತಿತ್ವದಲ್ಲಿರುವುದನ್ನು ಕಾಣಬಹುದು. ಪ್ರಸ್ತುತ ಇವುಗಳ ಒಟ್ಟು ಜನಸಂಖ್ಯೆ ಸುಮಾರು 10 ಕೋಟಿಯನ್ನು ಮೀರಿದೆ. ಅಂದರೆ ಭಾರತದ ಒಟ್ಟು ಜನಸಂಖ್ಯೆಯ ಸುಮಾರು ಶೇಕಡ 10ರಷ್ಟು ಜನ ಈ ಹಿನ್ನೆಲೆಯವರಿರುವರು. ಮಹಾರಾಷ್ಟ್ರದಲ್ಲಿ ಅತ್ಯಧಿಕ ಸಮುದಾಯಗಳಿದ್ದರೆ, ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಆದರೆ ಭಾರತ ಸಂವಿಧಾನದ ಮೀಸಲಾತಿಯಲ್ಲಿ ಈ ಸಮುದಾಯಗಳು ಪರಿಶಿಷ್ಟರ ಮತ್ತು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಹಲವಡೆ ಹಂಚಿಹೋಗಿವೆ. ಸ್ವತಂತ್ರ ಭಾರತದಲ್ಲಿ ಅಲೆಮಾರಿ, ಅರೆಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟುಗಳನ್ನು ಸಂವಿಧಾನ ಬದ್ಧವಾಗಿ ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳಲ್ಲಿ ಇರಿಸಲಾಗಿದೆ. ಮುಕ್ತಗೊಳಿಸಿ 489 ಸಮುದಾಯಗಳಲ್ಲಿ 235 ಪ.ಜಾತಿ, 47 ಪ.ಪಂಗಡ ಮತ್ತು 207 ಸಮುದಾಯಗಳನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಇಡಲಾಗಿದೆ. 266 ಅಲೆಮಾರಿ ಸಮುದಾಯಗಳಲ್ಲಿ 65 ಪ.ಜಾತಿ, 30 ಪ. ಪಂಗಡ ಮತ್ತು 165 ಸಮುದಾಯಗಳನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಇಡಲಾಗಿದೆ.

ಭಾರತದಲ್ಲಿ 1950ರಿಂದ ಇದುವರೆಗೆ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಅನುಚ್ಛೇದ 342 (1) ಹಾಗೂ (2) ರ ಪ್ರಕಾರ ಸೇರಿರುವ ಬುಡಕಟ್ಟುಗಳ ಸಂಖ್ಯೆ 636. ಇನ್ನು ಈ ಸಂಖ್ಯೆಯಲ್ಲಿ ವೃದ್ಧಿಯಾಗುವ ಸಂಭವವಿದೆ. ಕಾರಣ ಇನ್ನು ಹಲವಾರು ಸಮುದಾಯಗಳು ಈ ಪಟ್ಟಿಗೆ ಸೇರಲು ಅರ್ಹವಾಗಿವೆ.

ಕೆಲವು ಬುಡಕಟ್ಟುಗಳು ಬುಡಕಟ್ಟಿನ ಲಕ್ಷಣಗಳಿದ್ದರೂ ಬುಡಕಟ್ಟಾಗದ ಮತ್ತು ಯಾವ ಪಟ್ಟಿಗೂ ಸೇರದ ಸಮುದಾಯಗಳು ಕರ್ನಾಟಕದಲ್ಲಿರುವುದು ಕಂಡುಬರುತ್ತದೆ. ಉದಾಹರಣೆ ಅಡವಿಗೊಲ್ಲ, ಹಾಲಕ್ಕಿ, ಒಕ್ಕಲಿಗ, ಹೆಳವ, ಸುಡುಗಾಡು ಸಿದ್ಧ, ಕವಲೆತ್ತಿನವರಂತಹ ಹಲವಾರು ಸಮುದಾಯಗಳು ಬುಡಕಟ್ಟಿನ ಪಟ್ಟಿಯಲ್ಲಿ ಸೇರಬೇಕಾದವುಗಳು. ಅವುಗಳಲ್ಲಿ ಬುಡಕಟ್ಟಿನ ಲಕ್ಷಣಗಳಿದ್ದರೂ ಈ ಪಟ್ಟಿಯಲ್ಲಿ ಸೇರಲಿಲ್ಲ. ಅಲ್ಲದೆ ಬೇಡಗಂಪಣ, ಓಡಿಗ, ಕಿನ್ನರ ಜೋಗಿ, ಲಾಳಗೊಂಡದಂತಹ ಹಲವಾರು ಸ್ವತಂತ್ರ ಸಮುದಾಯಗಳಿದ್ದರೂ ಅವು ಮೀಸಲಾತಿಯ ಯಾವುದೇ ಪಟ್ಟಿಯಲ್ಲಿ ದಾಖಲಾಗದೆ ಇರುವುದು ವಿಪರ್ಯಾಸ. ಕರ್ನಾಟಕದಲ್ಲಿಯ ಘೋಷಿತ ಬುಡಕಟ್ಟು ಸಮುದಾಯಗಳಲ್ಲಿ ಹಲವು ಅಲೆಮಾರಿತನ, ಅರೆ ಅಲೆಮಾರಿತನ, ಮುಂದುವರಿಸುತ್ತಿದ್ದರೆ ಇನ್ನೂ ಕೆಲವು ಬೇಟೆ, ಪಶುಪಾಲನೆ, ಕೃಷಿ ಮತ್ತು ಕೂಲಿಗಳನ್ನು ಅವಲಂಬಿಸಿವೆ. ಶ್ರಮ ವಿಭಜನೆಯ ಆಧಾರದ ಮೇಲೆ ಕುಲಗಳು ಹುಟ್ಟುವ ಮುನ್ನ ಅವರೆಲ್ಲದ್ದು ಒಂದೇ ಬುಡಕಟ್ಟು.

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸಿರುವ ಸುಮಾರು ಇಪ್ಪತ್ತೆರಡು ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲಿಕೆಯಲ್ಲಿ ಡಾ.

ಕೆ.ಎಂ.ಮೈತ್ರಿಯವರು ಪ್ರಸ್ತಾವನೆಯಲ್ಲಿ ಬುಡಕಟ್ಟು ಸಮುದಾಯಗಳ ಕುರಿತು ವಿಸ್ತೃತವಾದ ವಿವರಣೆಯನ್ನು ಅಂಕಿ ಸಂಖ್ಯೆಗಳ ಮೂಲಕ ನೀಡಿರುವುದು ಗಮನಾರ್ಹವಾಗಿದೆ. ಇಲ್ಲಿ ಬುಡಕಟ್ಟುಗಳನ್ನು ವಿಮುಕ್ತ, ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟುಗಳೆಂದು ವರ್ಗೀಕರಿಸಲಾಗಿದೆ. ಇವುಗಳ ಜೊತೆಗೆ ನೆಲೆ ನಿಂತ ಬುಡಕಟ್ಟುಗಳು ಎಂದು ಮತ್ತೊಂದು ವರ್ಗೀಕರಣ ಮಾಡಬೇಕಾದ ಅಗತ್ಯತೆ ಇದೆ.

3.1.1. ಬುಡಕಟ್ಟುಗಳಲ್ಲಿನ ಪ್ರಕಾರಗಳು:

ಅ. ವಿಮುಕ್ತ ಬುಡಕಟ್ಟುಗಳು (Denotified Tribes)

ಆ. ಅಲೆಮಾರಿ ಬುಡಕಟ್ಟುಗಳು (Nomadic Tribes)

ಇ. ಅರೆ–ಅಲೆಮಾರಿ ಬುಡಕಟ್ಟುಗಳು (Semi-nomadic Tribes)

ಈ. ನೆಲೆನಿಂತ ಬುಡಕಟ್ಟುಗಳು (Settled Tribes)

ಇತ್ತೀಚಿನ ಅಧ್ಯಯನಕಾರರು ಹೆಚ್ಚಾಗಿ ಕರ್ನಾಟಕದ ಬುಡಕಟ್ಟುಗಳನ್ನು

- ಮಲೆನಾಡಿನ ಬುಡಕಟ್ಟುಗಳು,
- ಕರಾವಳಿ ಬುಡಕಟ್ಟುಗಳು ಮತ್ತು
- ಬಯಲುಸೀಮೆಯ ಬುಡಕಟ್ಟುಗಳೆಂದು ಪ್ರದೇಶಿಕವಾಗಿ ವಿಭಜಿಸಿ ಅಧ್ಯಯನಿಸುವುದುಂಟು.

ಇವುಗಳ ಜೊತೆಗೆ ಬುಡಕಟ್ಟುಗಳ ವೈವಿಧ್ಯತೆ ಮತ್ತು ವೈಶಿಷ್ಟ್ಯತೆಗಳಿಗೆ ಅನುಗುಣವಾಗಿಯೂ ಸಮುದಾಯಗಳನ್ನು ನಾನಾ ರೀತಿಯಾಗಿ ವರ್ಗೀಕರಿಸಿ ಅಧ್ಯಯನಿಸಿರುವುದುಂಟು. ಉದಾಹರಣೆ–

- ಅರಣ್ಯವಾಸಿ ಬುಡಕಟ್ಟುಗಳು
- ಬೇಟೆ ಹಾಗೂ ಆಹಾರ ಸಂಗ್ರಾಹಕ ಬುಡಕಟ್ಟುಗಳು
- ಪಶುಪಾಲಕ ಬುಡಕಟ್ಟುಗಳು
- ಕೃಷಿಕ ಬುಡಕಟ್ಟುಗಳು
- ಸಮಾನಂತರ ಮತ್ತು ಪರ್ಯಾಯ ಬುಡಕಟ್ಟುಗಳು
- ಬುಡಕಟ್ಟು ಲಕ್ಷಣಗಳಿದ್ದರೂ ಬುಡಕಟ್ಟಾಗದ ಸಮುದಾಯಗಳು. ಇತ್ಯಾದಿಗಳು.

ಅ. ವಿಮುಕ್ತ ಬುಡಕಟ್ಟುಗಳು:

ಭಾರತದ ಬುಡಕಟ್ಟುಗಳಲ್ಲಿ ಜಾತಿ ಪಂಚಾಯತಿಯು ಬಿಗಿಯಾಗಿತ್ತು. ಜಾತಿ ಕಟ್ಟು ಪಾಡುಗಳನ್ನು ಮೀರಿದವರಿಗೆ ಅಪರಾಧಿಗಳೆಂದು ಜಾತಿಯಿಂದ ಹೊರಹಾಕಲಾಗುತ್ತಿತ್ತು. ಜಾತಿಯ ಆಶ್ರಯವನ್ನು ಕಳೆದುಕೊಂಡ ಕುಟುಂಬಗಳು ಬಲಹೀನವಾಗಿ ಸಮೂಹ ರೂಪದಲ್ಲಿ ಅಲೆಮಾರಿ ಅಪರಾಧಿ ಬುಡಕಟ್ಟುಗಳಾಗಿ ರಚನೆಗೊಂಡವು. ಈ ಅಪರಾಧಿ ಬುಡಕಟ್ಟುಗಳಿಂದ

ಎಚ್ಚರದಿಂದಿರಲು ಹಾಗೂ ವಿಶೇಷ ಸೌಲಭ್ಯಗಳನ್ನು ಕಲ್ಪಿಸಲು ಬ್ರಿಟಿಷ್ ಸರಕಾರ ಇಂತಹ ಗುಂಪುಗಳನ್ನು ಪತ್ತೆಹಚ್ಚಿ ಅಪರಾಧಿ ಬುಡಕಟ್ಟು ಅಧಿನಿಯಮ 1871ರಲ್ಲಿ ರಚಿಸಿತ್ತು. ಈ ಅಧಿನಿಯಮ ಉತ್ತರ ಭಾರತದಲ್ಲಿ ಪ್ರಕೃತಿ ಅವಲಂಬಿತ ಮತ್ತು ತನ್ನ ಆಡಳಿತದ ಪರಿಧಿಗೆ ಬರದೇ ಇರುವ ಸಮುದಾಯಗಳನ್ನು ಗುರುತಿಸಿ ಅವುಗಳನ್ನು ಅಪರಾಧಿ ಬುಡಕಟ್ಟುಗಳೆಂದು ಅಧಿಸೂಚಿಸಿತು. ಈ ಕಾಯಿದೆಯು 1911ರಲ್ಲಿ ಬ್ರಿಟಿಷರು ಆಳುವ ಭಾರತದಲ್ಲಿ ಪರಿಷ್ಕರಿಸಿ ವಿಸ್ತರಿಸಲಾಯಿತು. ಮುಂದುವರಿದು 1897, 1911, 1923, 1924 ಮತ್ತು 1947 ಈ ವರ್ಷಗಳಲ್ಲಿ ಈ ಅಧಿನಿಯಮಕ್ಕೆ ತಿದ್ದುಪಡಿ ಮಾಡಿ ಪರಿಷ್ಕರಿಸಲಾಯಿತು. ಇದರಿಂದ ಪೋಲಿಸರಿಗೆ ಈ ಗುಂಪುಗಳನ್ನು ಹಿಡಿತದಲ್ಲಿರಿಸಲು ಮತ್ತು ದಂಡಿಸಲು ಹೆಚ್ಚಿನ ಅಧಿಕಾರ ಪ್ರಾಪ್ತವಾಯಿತು. ಈ ಗುಂಪುಗಳನ್ನು ವಸಾಹತುಗಳಲ್ಲಿ ಬೇಲಿಹಾಕಿ ಇಡಲಾಗುತ್ತಿತ್ತು. ಇವರು ದಿನಾಲು ಅಲ್ಲಿಯ ಅಧಿಕಾರಿಗಳಿಗೆ ಹಾಜರಿಯನ್ನು ನೀಡುವುದು ಕಡ್ಡಾಯವಾಗಿತ್ತು. ಇವರ ವಸಾಹತುಗಳು ಇವರಿಗೆ ಜೇಲುಗಳಾಗಿದ್ದವು. ಇವರ ಮಕ್ಕಳಿಗಾಗಿ ಶಾಲೆಗಳನ್ನು ಹಾಗೂ ಇವರಿಗೆ ತರಬೇತಿ ಕೇಂದ್ರಗಳನ್ನು ಆರಂಭಿಸಲಾಯಿತು. ಇವರನ್ನು ನೋಡಿಕೊಳ್ಳಲು ಒಬ್ಬ ಸಮಾಜ ಕಲ್ಯಾಣ ಅಧಿಕಾರಿಯೂ ಇರುತ್ತಿದ್ದರು. ಈ ತರಹದ ಅಪರಾಧಿ ಬುಡಕಟ್ಟುಗಳ ವಸಾಹತುಗಳು ಕರ್ನಾಟಕದ ಗದಗ, ಹುಬ್ಬಳ್ಳಿ, ಧಾರವಾಡ, ಬಾಗಲಕೋಟ, ಬಿಜಾಪುರ, ಇಂಡಿ ಇತ್ಯಾದಿಗಳಲ್ಲಿ ಸ್ಥಾಪನೆಗೊಂಡವು. ಆದರೆ ವ್ಯಕ್ತಿಗತ ಮಾಡುವ ತಪ್ಪುಗಳನ್ನು ಅಥವಾ ಅಪರಾಧಗಳನ್ನು ಸಮುದಾಯಕ್ಕೆ ಸಮೀಕರಿಸುವುದು ತಪ್ಪೆಂದು 1947ರಲ್ಲಿ ಮದ್ರಾಸ್ ಮತ್ತು 1949ರಲ್ಲಿ ಮುಂಬೈ ಅಧಿಪತ್ಯಗಳಲ್ಲಿಯ ಅಪರಾಧಿ ಬುಡಕಟ್ಟು ಅಧಿನಿಯಮವನ್ನು ಹಿಂದಕ್ಕೆ ತೆಗೆದುಕೊಳ್ಳಲಾಯಿತು. ಮುಂದೆ ಭಾರತೀಯ ಅಪರಾಧಿ ಬುಡಕಟ್ಟುಗಳ ತನಿಖಾ ಸಮಿತಿಯ ಮೌಲ್ಯಮಾಪನದ ವರದಿಯ ಮೇರೆಗೆ 1952ರಲ್ಲಿ ಅಪರಾಧಿ ಬುಡಕಟ್ಟುಗಳನ್ನು ವಿಮುಕ್ತಗೊಳಿಸಲು ಈ ಸಂಬಂಧದ ಅಧಿನಿಯಮವನ್ನು ರದ್ದುಪಡಿಸಲಾಯಿತು. ಅಂದಿನಿಂದ ಈ ಗುಂಪುಗಳನ್ನು ವಿಮುಕ್ತ ಬುಡಕಟ್ಟುಗಳು ಇಲ್ಲವೆ ಡಿನೋಟಿಫೈಡ್ ಟ್ರೈಬ್ಸ್ ಎಂದು ಕರೆಯಲಾಗುವುದು. ಹೀಗಾಗಿ ಸ್ವತಂತ್ರ ಪೂರ್ವದ ಬ್ರಿಟಿಷ್ ಸರಕಾರದಲ್ಲಿಯೇ ಈ ಗುಂಪುಗಳ ಗುರುತಿಸುವಿಕೆಯ ಕಾರ್ಯ ನಡೆದಿರುವುದಲ್ಲದೇ ಇವರಿಗೆ ಪ್ರತ್ಯೇಕ ಮೀಸಲಾತಿ ವ್ಯವಸ್ಥೆಯನ್ನು ಕಲ್ಪಸಲಾಗಿತ್ತು ಎಂಬುವುದು ಸ್ಪಷ್ಟವಾಗುತ್ತದೆ. 1961ರ ಜನಗಣತಿಯ ಪ್ರಕಾರ ಭಾರತದಲ್ಲಿ 2.71,02,180 ಜನರು ಈ ಹಿನ್ನೆಲೆಯನ್ನು ಹೊಂದಿದ್ದರೆಂದು ದಾಖಲಿಸಲಾಗಿದೆ.

ಈ ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟು ಸಮಸ್ಯೆಗಳ ಕುರಿತು ಇತ್ತೀಚಿನ ದಿನಗಳಲ್ಲಿ ಭಾರತೀಯ ಮಟ್ಟದಲ್ಲಿ ಸಮಾನ ಮನಸ್ಕರ ಗಮನ ಸೆಳೆದವರಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತೆ ಮಹಾಶ್ವೇತಾದೇವಿಯವರು ಪ್ರಥಮರು. ಇವರ ಆಶ್ರಯಕ್ಕೆ ದನಿಗೂಡಿಸಿದವರಲ್ಲಿ ಡಾ.ಗಣೇಶದೇವಿ, ಲಕ್ಷ್ಮಣ ಗಾಯಕ್ವಾಡ, ಲಕ್ಷ್ಮಣ ಮಾನೆ, ದಕ್ಷಿಣ ಬಜರಂಗೆ, ಡಾ.ಮೀನಾ ರಾಧಕೃಷ್ಣನ್, ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ, ಡಾ.ಕೆ.ಎಂ.ಮೇತ್ರಿ ಅವರುಗಳು

ಪ್ರಮುಖರು. ಚಿಂತಕರ ಧ್ವನಿ ಭಾರತ ಸರಕಾರಕ್ಕೆ ಎಚ್ಚರಗೊಳಿಸುವಲ್ಲಿ ಸಹಕಾರಿಯಾಯಿತು. ಭಾರತ ಸರಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಈ ಸಮುದಾಯಗಳ ಕುರಿತು ಅಧ್ಯಯನ ಮಾಡಿ ಸಲಹೆ ಸೂಚನೆಗಳನ್ನು ನೀಡಲು ಒಂದು ಆಯೋಗವನ್ನು ರಚಿಸಿತು. ಇದಕ್ಕೆ ಪೂರಕವಾಗಿ ಕರ್ನಾಟಕದಲ್ಲಿಯೂ ಕೂಡ ಒಂದು ಒಕ್ಕೂಟ ರಚನೆಯಾಯಿತು. ಇದರ ಅಡಿಯಲ್ಲಿ ಅನೇಕ ಸಭೆ, ಸಮಾರಂಭಗಳನ್ನು ಸಂಘಟಿಸಲಾಯಿತು. ಆಯೋಗಕ್ಕೆ ಪೂರಕವಾಗಿ ಮಾಹಿತಿ ಒದಗಿಸಲು ಡಾ.ಗಣೇಶದೇವಿ ಅವರ ಅಧ್ಯಕ್ಷತೆಯಲ್ಲಿ ಏಳು ಜನ ಸದಸ್ಯರ (ಅದರಲ್ಲಿ ಡಾ.ಕೆ.ಎಂ. ಮೇತ್ರಿಯವರೂ ಒಬ್ಬರು) ತಾಂತ್ರಿಕ ಸಲಹಾ ಸಮಿತಿಯೊಂದನ್ನು ನೇಮಿಸಿತು. ನವದೆಹಲಿಯ ICSSR ದಲ್ಲಿ ಸಮಿತಿಯು ನಾಲ್ಕು ಸಭೆಗಳನ್ನು ಸೇರಿ ತನ್ನ ವರದಿಯನ್ನು ಎರಡು ಸಂಪುಟಗಳಲ್ಲಿ ಆಯೋಗಕ್ಕೆ ಸಲ್ಲಿಸಿದೆ. 2006ರಲ್ಲಿ ಸಲ್ಲಿಸಿದ ಶಿಫಾರಸ್ಸುಗಳಲ್ಲಿ ವಿಮುಕ್ತ ಬುಡಕಟ್ಟುಗಳನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಿದೆ.

'ಯಾವ ರೀತಿ ಪರಿಶಿಷ್ಟ ಪಂಗಡ ಮತ್ತು ಜಾತಿ ಸಮುದಾಯಗಳಿಗೆ ಒಂದು ಸೂಚಿ ಇದೆಯೋ ಹಾಗೆಯೇ ವಿಮುಕ್ತ ಬುಡಕಟ್ಟುಗಳಿಗಾಗಿ ಒಂದು ಸೂಚಿ ಎಂಬುದಿಲ್ಲ. ಭಾರತದ ಬ್ರಿಟೀಷ್ ಆಡಳಿತದಲ್ಲಿ ಅಧಿಸೂಚಿತ 'ಅಪರಾಧಿ ಬುಡಕಟ್ಟು ಕಾಯ್ದೆ'ಯನ್ನು ಜಾರಿಗೆ ತರಲಾಗಿತ್ತು. ಈ ಕಾಯ್ದೆಯಡಿಯಲ್ಲಿ ಅಪರಾಧಿ ಬುಡಕಟ್ಟುಗಳ ಪಟ್ಟಿಯೊಂದನ್ನು ಸಿದ್ಧಗೊಳಿಸಲಾಗಿತ್ತು. ಸ್ವತಂತ್ರ ಭಾರತದಲ್ಲಿ ಆನಂತರ ಈ ಪಟ್ಟಿಯಲ್ಲಿನ ಕೆಲವು ಸಮುದಾಯಗಳು ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿ ಹಾಗೂ ಕೆಲವು ಸಮುದಾಯಗಳು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡವು, ಆದಾಗ್ಯೂ ಕೆಲವು ಸಮುದಾಯಗಳು ಈ ಎಲ್ಲಾ ಸೂಚಿಗಳಿಂದ ಹೊರಗುಳಿಯಲ್ಪಟ್ಟವು.

ವಸಾಹತು ಶಾಹಿ ಕಾಲಘಟ್ಟದಲ್ಲಿ, 1871 ಹಾಗೂ ಅದರ ನಂತರ 'ಕ್ರಿಮಿನಲ್ ಟ್ರೈಬ್ಸ್ ಆಕ್ಟ್'ನ ಅಡಿಯಲ್ಲಿ ಪಟ್ಟಿ ಮಾಡುವ ಸಮುದಾಯಗಳನ್ನು ಅಥವಾ ಗುಂಪುಗಳನ್ನು 1950ರ ನಂತರದಲ್ಲಿ ವಿಮುಕ್ತಗೊಳಿಸಲಾಯಿತು. ಇಂದು ಭಾರತದ ಯಾವುದೇ ಪ್ರದೇಶದಲ್ಲಿ ಕಾಣಸಿಗುವ ಇವರನ್ನು 'ವಿಮುಕ್ತ ಬುಡಕಟ್ಟು' (Denotified Tribes) ಎಂದು ವ್ಯಾಖ್ಯಾನಿಸುವುದು.

ವಿಮುಕ್ತ ಬುಡಕಟ್ಟುಗಳ ಪ್ರಮಾಣಬದ್ಧ ಸೂಚಿಯನ್ನು ಭಾರತ ಸರಕಾರ ನೇಮಿಸಿದ ಅಯ್ಯಂಗರ್ ಸಮಿತಿಯು ತಯಾರಿಸಿತು. (RN.22/01/49. ಪೋಲಿಸ್-1 ದಿನಾಂಕ 28/9/1949 ರ ಪ್ರಕಾರ ಸ್ಥಾಪನೆಗೊಂಡ ಸಮಿತಿ). ಇದನ್ನೇ ಅಧಿಕೃತ ಪಟ್ಟಿಯೆಂದು ಪರಿಗಣಿಸುವುದು.'[4] ಉದಾಹರಣೆ ಆದಿ ದ್ರಾವಿಡ, ಲಂಬಾಣಿ, ದೊಂಬರ, ಹರಿಣಿಶಿಕಾರಿ, ಬೇಡರು, ಜೋಗಿ, ಛೀಸಾಡಿ ಇನ್ನೂ ಮುಂತಾದವುಗಳು.

ಈ ಮೇಲೆ ತಿಳಿಸಿದ ವಿಮುಕ್ತ ಬುಡಕಟ್ಟುಗಳ ಅರ್ಥ ಮತ್ತು ವ್ಯಾಖ್ಯೆಗಳನ್ನು ಸೂಕ್ಷ್ಮವಾಗಿ ಅವಲೋಕನ ಮಾಡಿದಾಗ ಇಂತಹ ಸಮುದಾಯಗಳಿಗೆ ಸಂವಿಧಾನಬದ್ಧವಾಗಿ ಪರಿಶಿಷ್ಟರ ಪಟ್ಟಿಗೆ ಸೇರುವ ಎಲ್ಲಾ ಅರ್ಹತೆಗಳಿದ್ದರೂ ಸರಕಾರ ದಿವ್ಯ ನಿರ್ಲಕ್ಷತೆ ವಹಿಸಿರುವುದು ಕಂಡು ಬರುತ್ತದೆ. ಈ ಕುರಿತು ನ್ಯಾಯ ಒದಗಿಸಬೇಕಾದ ಸರಕಾರಗಳು, ಆಯೋಗಗಳು, ಸಮುದಾಯಗಳು, ಸಂಘಟನೆಗಳು, ಸಂಶೋಧನಾ ಸಂಸ್ಥೆಗಳು ಸುಮ್ಮನಿರದೆ, ಜಾತಿ ಆಧಾರಿತ ಮೀಸಲಾತಿ ಅನುಸರಿಸುವ ಭಾರತ ಸರಕಾರ ಮತ್ತು ರಾಜ್ಯ ಸರ್ಕಾರಗಳು ನಿರ್ಲಕ್ಷಿತ ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟು ಸಮುದಾಯಗಳಿಗೆ ಮೊದಲು ಮೀಸಲಾತಿ ಪಟ್ಟಿಯಲ್ಲಿ ಸೂಕ್ತ ಸ್ಥಾನ ಕಲ್ಪಿಸಬೇಕು. ಇದು ಆಗದಿದ್ದರೆ, ಜಾತಿ ಆಧಾರಿತ ಮೀಸಲಾತಿಯನ್ನು ತಕ್ಷಣ ಕೈಬಿಟ್ಟು ಈ ಸಮುದಾಯಗಳ ಅಭಿವೃದ್ಧಿಗಾಗಿ ಪ್ರತ್ಯೇಕ ಕಾರ್ಯಯೋಜನೆಗಳನ್ನು ಮತ್ತು ಮಾರ್ಗಗಳನ್ನು ಅನುಸರಿಸುವುದು ಉತ್ತಮ. ಇಂದಿನ ಪರಿಶಿಷ್ಟರ ಮತ್ತು ಹಿಂದುಳಿದವರ ಮೀಸಲಾತಿಯ ಪಟ್ಟಿಯು ಅಸಮಾನತೆಯಿಂದ ಕೂಡಿರುವುದು. ಹೀಗಾಗಿ ಮೀಸಲಾತಿಯು, ಆಯಾ ಪಟ್ಟಿಯಲ್ಲಿಯ ಬಲಿಷ್ಟರ ಪಾಲಾಗಿ, ದುರ್ಬಲರು ಕೊನೆಗೆ ನೂಕಲ್ಪಟ್ಟಿರುವರು. ಇವರಲ್ಲಿ ಪ್ರತಿನಿತ್ಯ ತೀವ್ರತರವಾದ ಸಮಸ್ಯೆಗಳನ್ನು ಎದುರಿಸುತ್ತಿರುವ ಅಲೆಮಾರಿಗಳು ಮತ್ತು ವಿಮುಕ್ತ ಬುಡಕಟ್ಟಿನವರು ಪ್ರಮುಖರಾಗಿದ್ದಾರೆ.

ಆ. ಅಲೆಮಾರಿ ಹಾಗೂ ಅರೆ ಅಲೆಮಾರಿ ಬುಡಕಟ್ಟುಗಳು:

ಅಲೆಮಾರಿ ಎಂಬ ಪದಕ್ಕೆ ತಮಿಳಿನಲ್ಲಿ ಪೂಕ್ಕನ್, ತುಳುವಿನಲ್ಲಿ ತೆಂಡುಳಿ, ತೆಲುಗಿನಲ್ಲಿ ತಿರುಗುಬೋತು, ಮಲೆಯಾಳಂನಲ್ಲಿ ತೆಂಟಿ, ಮರಾಠಿಯಲ್ಲಿ ಭಟಕ್ಯ, ಹಿಂದಿಯಲ್ಲಿ ಸಂಚಾರಿ, ಘುಮಂತು, ಗ್ರೀಕಿನಲ್ಲಿ ನೆಮಿನ್(nemein), ಲ್ಯಾಟಿನಿನಲ್ಲಿ ನೋಮಾಸ್(nomas), ಇಂಗ್ಲಿಷಿನಲ್ಲಿ ನೊಮ್ಯಾಡ್ (nomad), ಜೊತೆಗೆ ಪರದೇಶಿ, ನೆಲೆಯಿಲ್ಲದವರು ದೇಶ ಸಂಚಾರಿಗಳು, ಪರಸ್ಥಳದವರು, ಹೊರಗಡೆಯವರು, ಉಚಲ್ಯಾ, ಜಿಪ್ಸಿ, ಬೀಡು ಬಿಡುವವರು, ಗುಳೆ ಹೋಗುವವರು, ವಲಸಿಗರು, ಗಿರಿಜನರು ಸನ್ಯಾಸಿಗಳು ಎಂಬಿತ್ಯಾದಿ ಹೆಸರುಗಳಿಂದಲೂ ಕರೆಯಲಾಗುತ್ತದೆ. ಭಿಕ್ಷಾವೃತ್ತಿಯ ಹಿನ್ನೆಲೆಯಲ್ಲಿ ಇವರನ್ನು ತಮಿಳಿನಲ್ಲಿ ಪಚ್ಚೈಕರಾ, ಹಿಂದಿಯಲ್ಲಿ ಭಿಕಾರಿ, ಕನ್ನಡದಲ್ಲಿ ಭಿಕ್ಷುಕರೆಂತಲೂ ಗುರುತಿಸಲಾಗುವುದು. ಜನಪದರು ಇವರನ್ನು ಗೋಸಾಯಿ, ಜಂಗಾಲಿ, ಜಂಗಮ, ಜೋಗಿ, ದಾಸಯ್ಯ ಎಂತಲೂ ಕರೆಯುವರು. ಮಾನವಶಾಸ್ತ್ರಜ್ಞರು ಆರಂಭದಲ್ಲಿ ಪಶುಪಾಲನೆಯ ಹಿನ್ನೆಲೆಯವರನ್ನು ಮಾತ್ರ ಅಲೆಮಾರಿ ಸಮುದಾಯದವರೆಂದು ಗುರುತಿಸಿದ್ದಾರೆ. ಎನ್ಸೈಕ್ಲೋಪೆಡಿಯ ಬ್ರಿಟಾನಿಕಾದ ಪ್ರಕಾರ ಅಲೆಮಾರಿತನವು ಒಂದು ಜೀವನ ವಿಧಾನ. ಬೇಟೆ ಮತ್ತು ಆಹಾರ ಸಂಗ್ರಹಣೆ, ಪಶುಪಾಲನೆ ಅಥವಾ ವ್ಯಾಪಾರಕ್ಕಾಗಿ ಮಾನವ ಒಂದೆಡೆ ನೆಲೆಯೂರದೇ, ದಿಕ್ಕುದೆಸೆಯಿಲ್ಲದ ಅಥವಾ ಕಾಲಕ್ರಮಾನುಸಾರದ ಅಲೆಯುವಿಕೆಯನ್ನು ಅಲೆಮಾರಿತನ ಎನ್ನಲಾಗುತ್ತದೆ ಎಂದು ಅರ್ಥೈಸಿದೆ.

ನವದೆಹಲಿಯ ICSSR ದಲ್ಲಿ ತಾಂತ್ರಿಕ ಸಲಹಾ ಸಮಿತಿಯು ಸಭೆ ಸೇರಿ ತನ್ನ ವರದಿಯನ್ನು, ಭಾರತ ಸರಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ರಚಿಸಿದ ರಾಷ್ಟ್ರೀಯ ವಿಮುಕ್ತ, ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟುಗಳ ಆಯೋಗಕ್ಕೆ ಸಲ್ಲಿಸಿದೆ. 2006ರಲ್ಲಿ ಮಾಡಿದ ವರದಿಯ ಶಿಫಾರಸ್ಸುಗಳಲ್ಲಿ ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟುಗಳನ್ನು ಈ ಕೆಳಗಿನಂತೆ ವಿವರಿಸಿದೆ.

'ಅಲೆಮಾರಿ ಹಾಗೂ ಅರೆ ಅಲೆಮಾರಿ ಬುಡಕಟ್ಟುಗಳಿಗೆ ಭಾರತ ಸರಕಾರ ಅಧಿಕೃತವಾಗಿ ಯಾವ ವ್ಯಾಖ್ಯಾನವನ್ನು ನೀಡಿಲ್ಲ. 1931ರ ಭಾರತದ ಜನಗಣತಿಯಲ್ಲಿ ಮಾಡಲಾದ ಅಲೆಮಾರಿ ಬುಡಕಟ್ಟುಗಳ ಪಟ್ಟಿಯನ್ನು ಮಾತ್ರ ವಿಶ್ವಾಸನೀಯ ದಾಖಲೆ ಎಂದು ಹೇಳಬಹುದು.

1931ರ ಜನಗಣತಿಯಲ್ಲಿ ಅಲೆಮಾರಿ ಹಾಗೂ ಅರೆ ಅಲೆಮಾರಿ ಬುಡಕಟ್ಟು ಹಾಗೂ ಸಮುದಾಯಗಳನ್ನು ಗುರುತಿಸಿ ದಾಖಲಿಸಲಾಗಿದೆ. ಇವುಗಳು ಭಾರತದ ಯಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಗಳಲ್ಲಿ ಇರುವುದಾದರೆ ಅವುಗಳನ್ನು ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟುಗಳೆಂದು ಗುರುತಿಸುವುದು.

ಜನಗಣತಿ ಇಲಾಖೆಯು ಜನಗಣತಿಯ ಸಂದರ್ಭದಲ್ಲಿ ಅಲೆಮಾರಿ ಮತ್ತು ಅರೆ ಅಲೆಮಾರಿ ಜೀವನ ಶೈಲಿ ಹೊಂದಿರುವ ಯಾವುದೇ ಸಮುದಾಯವನ್ನು ಗುರುತಿಸಿ ಅಂತಹ ಸಮುದಾಯಗಳನ್ನು ಕೂಲಂಕುಶ ಅಧ್ಯಯನ ಮಾಡಿ ಅಲೆಮಾರಿ ಬುಡಕಟ್ಟುಗಳ ಪಟ್ಟಿಗೆ ಸೇರುವುದು.'[5] ಉದಾಹರಣೆ, ಗೋಂಧಳಿ, ಹೆಳವ, ಬುಡ್ಗ ಜಂಗಮ, ದುರುಗಮುರುಗಿ, ನಂದಿವಾಲ, ಸುಡುಗಾಡು ಸಿದ್ಧರು ಇನ್ನೂ ಮೊದಲಾದವರು.

ಈ ಮೇಲೆ ವಿವರಿಸಿದ ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟು ಸಮುದಾಯಗಳ ಅರ್ಥ ವಿವರಣೆ ಆಧಾರದ ಮೇಲೆ ಈ ಸಮುದಾಯಗಳ ಲಕ್ಷಣಗಳನ್ನು ಹೀಗೆ ಪಟ್ಟಿ ಮಾಡಬಹುದು.

1. ಪಾರಂಪರಿಕ ವನ್ಯಜೀವಿಗಳ ಬೇಟೆ, ಪಳಗಿಸುವಿಕೆ ಮತ್ತು ಪ್ರದರ್ಶನ, ಪಶುಪಾಲನೆ ನಾಟಿವೈದ್ಯ, ಕಲಾ ಪ್ರದರ್ಶನ, ದೈವಾರಾಧನೆ, ಪ್ರದರ್ಶನ ಮತ್ತು ಭಿಕ್ಷಾಟನೆ ಇತ್ಯಾದಿಗಳಿಗಾಗಿ ಅಲೆತ. ಉದಾರಹಣೆ ಕರಡಿ, ಕೋತಿ ಹಾವು, ನಂದಿಗಳ ಪ್ರದರ್ಶನ, ಕುರಿ, ಮೇಕೆ, ಕತ್ತೆ, ಹಂದಿ, ಒಂಟೆಗಳ ಪಾಲನೆ, ಹಗಲುವೇಷ, ಬುರ್ರಕಥೆ, ಗೋಂಧಳ, ದಾಸರ ಪದ, ಯಕ್ಷಗಾನ, ಬಯಲಾಟ, ತೊಗಲು ಗೊಂಬೆಯಾಟ, ದೊಂಬರಾಟ, ಮಾರಮ್ಮ ದೈವ ಇತ್ಯಾದಿಗಳ ಪ್ರದರ್ಶನ, ನಾಟಿವೈದ್ಯ, ಸಣ್ಣ ಪುಟ್ಟ ವಸ್ತುಗಳ ಮಾರಟ ಮತ್ತು ರಿಪೇರಿ, ಹಾಳಾದ ಪ್ಲಾಸ್ಟಿಕ್ ವಸ್ತುಗಳನ್ನು ಆರಿಸಿ ಮಾರಲು ನಡೆಸುವ ಅಲೆಮಾರಿ ಜೀವನ.
2. ನಿರಾಡಂಬರ, ನಿಷ್ಕಪಟ, ಸಹಜ ಸರಳ ನಿರಕ್ಷರಿಗಳು, ಬಂಡಮಾಳ ಶೂನ್ಯ ಅಥವಾ ಅಲ್ಪ ಬಂಡವಾಳದ ಕಾಯಕ ಜೀವಿಗಳು.

3. ಸರ್ವಚೇತನವಾದಿಗಳು, ಪ್ರಕೃತಿಯ ಅಗೋಚರ ಶಕ್ತಿಗಳ ಸಿದ್ಧ ಹಸ್ತರು.

4. ಮೆರಗು ಭಾಷೆ ಅವಲಂಬಿತ ಮಾತೃಭಾಷಿಗಳು.

5. ಹಾಳು ಗುಡಿ ಗುಂಡಾರಗಳಲ್ಲಿ, ಬಯಲಿನ ಮರಗಿಡಗಳ ಕೆಳಗೆ ಅಥವಾ ನಗರಗಳ ಕೊಳಚೆ ಪ್ರದೇಶಗಳಲ್ಲಿ ಪ್ರತ್ಯೇಕ ಮತ್ತು ತಾತ್ಕಾಲಿಕ ವಾಸ.

ಈ ಲಕ್ಷಣಗಳೆಲ್ಲವೂ ಪಶುಪಾಲಕ, ಪ್ರದರ್ಶನ ಹಿನ್ನೆಲೆಯ ಪಾರಂಪರಿಕ ಭಿಕ್ಷುಕ ಮತ್ತು ಬಂಡವಾಳ ಶೂನ್ಯ ಅಥವಾ ಅಲ್ಪ ಬಂಡವಾಳದ ವೃತ್ತಿ ಅವಲಂಬಿತ ಅಲೆಮಾರಿಗಳಿಗೆ ಸಮಾನವಾಗಿ ಪೂರ್ಣಪ್ರಮಾಣದಲ್ಲಿ ಅನ್ವಯಿಸುವುದು ಕಷ್ಟಸಾಧ್ಯ.

ಇತ್ತೀಚಿಗೆ ಹಲವೆಡೆ ಕೆಲವು ಅಲೆಮಾರಿ ಸಮುದಾಯಗಳು ಸರಕಾರದ ಯೋಜನೆಗಳಿಂದ ಮತ್ತು ಸಮುದಾಯಗಳ ಸಹಕಾರದಿಂದ ನೆಲೆಕಂಡಿವೆ. ಅದರೂ, ಬದುಕಿಗಾಗಿ ತಿಂಗಳುಗಟ್ಟಲೇ ನೂರಾರು ಕಿಲೋಮೀಟರ ಅಂತರದ ಅಲೆಮಾರಿತನ ಮುಂದುವರೆಸಿವೆ. ಇವುಗಳನ್ನು ಅರೆ ಅಲೆಮಾರಿಗಳೆಂದು ಕರೆಯಬಹುದಾಗಿದೆ. ಸಮುದಾಯಗಳ ಆರ್ಥಿಕ, ಶೈಕ್ಷಣಿಕ, ರಾಜಕೀಯ ಮತ್ತು ಸಾಮಾಜಿಕ ಭದ್ರತೆಯ ಹಿನ್ನೆಲೆಯಲ್ಲಿ ಅಲೆಮಾರಿ ಮತ್ತು ಅರೆ ಅಲೆಮಾರಿತನದ ಸ್ಥಿತಿಯನ್ನು ನಿರ್ಧರಿಸಬಹುದಾಗಿದೆ.

ಈ. ನೆಲೆನಿಂತ ಬುಡಕಟ್ಟುಗಳು:

ಮನುಷ್ಯ ಮೂಲತಃ ಅಲೆಮಾರಿ, ತನ್ನ ಹೊಟ್ಟೆ-ಬಟ್ಟೆ ನೆಮ್ಮದಿಯ ಬದುಕನ್ನು ಅರಸುತ್ತಲೇ ಒಂದು ಸ್ಥಳದಿಂದ ಇನ್ನೊಂದು ಸ್ಥಳದ ಕಡೆಗೆ ಗುಳೆ ಹೊರಟು ಕೊನೆಗೆ ತನಗೆ ನೆಮ್ಮದಿ ತರುವ ಸ್ಥಳ ಸಿಕ್ಕ ಕೂಡಲೇ ಅಲ್ಲಿ ತನ್ನೆಲ್ಲ ಅಸ್ತಿತ್ವವನ್ನು ಸ್ಥಾಪಿಸಿಕೊಂಡು ಬಿಡುತ್ತಾನೆ. ಅಂದರೆ ಬಹುತೇಕ ಸಮುದಾಯಗಳ ಹುಡುಕಾಟದ ಮೂಲ ಸೆಲೆ ನೀರಿನ ಮೂಲವಾಗಿರುವುದು ಕಂಡುಬರುತ್ತದೆ. ಈ ದಿಸೆಯಲ್ಲಿ ಡಾ. ರಾಮಮನೋಹರ ಲೋಹಿಯರವರ ಮಾತು ಸತ್ಯವೆನಿಸುತ್ತದೆ. ಮನುಷ್ಯ ತನ್ನ ವಾಸಸ್ಥಾನದ ನೆಲೆ ಕಂಡುಕೊಂಡದ್ದೇ ಜಲ ಸಂಪನ್ಮೂಲದ ಮೂಲಕ ಎನ್ನುತ್ತಾರೆ. ಅವರು ಮುಂದುವರೆದು ಮನುಷ್ಯನ ಮೂಲ ನೆಲೆಯನ್ನು ಗುರುತಿಸುವುದೇ ನದಿ ಮೂಲ, ತಪ್ಪಲು ಮೂಲದಿಂದ ಎಂದು ನಿಖರ ಮಾಹಿತಿ ಒದಗಿಸುತ್ತಾರೆ.

ಈ ರೀತಿ ಅಲೆಮಾರಿಗಳಾಗಿ ವಲಸೆ ಬಂದವರಲ್ಲಿ ಅನೇಕ ಬುಡಕಟ್ಟು ಸಮುದಾಯಗಳು ಜಿಲ್ಲೆಯ ಬೇರೆ ಬೇರೆ ತಾಲೂಕುಗಳಲ್ಲಿ, ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಅಲ್ಲಲ್ಲಿ ಕಂಡು ಬರುತ್ತಾರೆ. ಕೆಲವರು ತಮ್ಮ ಮೂಲ ವೃತ್ತಿಯನ್ನೇ ಅವಲಂಬಿಸಿದ್ದಾರೆ, ಇನ್ನೂ ಕೆಲವರು ಕೃಷಿ ಮತ್ತು ಕೃಷಿ ಪೂರಕವಾದ ಉದ್ಯೋಗಗಳನ್ನು ಅವಲಂಬಿಸಿರುತ್ತಾರೆ.ಆಧುನಿಕತೆಯ ಆವಿಷ್ಕಾರಕ್ಕೆ ಒಳಪಟ್ಟ ಕೃಷಿಯು ತನ್ನ ಮೂಲಸ್ವರೂಪವನ್ನೇ ಕಳೆದುಕೊಂಡಿದೆ. ಯಾಂತ್ರೀಕೃತ ಬೇಸಾಯ ಪದ್ದತಿಯು ಮನುಷ್ಯನನ್ನು ನೆಲೆ ನಿಲ್ಲುವಂತೆ

ಮಾಡಿದೆ. ಇದಕ್ಕೆ ಪುಷ್ಠಿ ನೀಡುವಂತೆ ಕೆ.ಎಂ.ಮೇತ್ರಿ ಮತ್ತು ಡಾ.ಚಲುವರಾಜು ರವರು ಬುಡಕಟ್ಟು ಅಧ್ಯಯನ ಸಂಚಿಕೆಯಲ್ಲಿ ನೆಲೆನಿಂತ ಬುಡಕಟ್ಟುಗಳಿಗೆ ವಿವರಣೆ ನೀಡಿದ್ದಾರೆ.

'ಒಂದು ನಿರ್ದಿಷ್ಟವಾದ ಪರಿಸರದಲ್ಲಿ ಸಮುದಾಯಗಳ ನೆಲೆ ನಿಲ್ಲಬೇಕಾದರೆ ಅಲ್ಲಿಯ ಸಾಮಾಜಿಕ ಅಂಶಗಳು ಮತ್ತು ಭೌಗೋಳಿಕ ಅಂಶಗಳು ಬಹು ಮುಖ್ಯವಾದ ಕಾರಣಗಳು ಆಗುತ್ತವೆ. ಅದರಲ್ಲಿ ಭೂಮಿ, ನೀರು ಮತ್ತು ಹವಾಗುಣಗಳು ಪ್ರಮುಖ ಪಾತ್ರ ನಿರ್ವಹಿಸಿ ಮಾನವನ ಅಲೆಮಾರಿತನವನ್ನು ಅಂತ್ಯಗೊಳಿಸಿ ನೆಲೆ ನಿಲ್ಲುವಂತೆ ಮಾಡುತ್ತವೆ. ಇದರಿಂದ ಸಮುದಾಯಗಳು ಅಭಿವೃದ್ಧಿ ಹೊಂದಿ ಸಮಾಜ ಬೆಳವಣಿಗೆಗೆ ಪೂರಕವಾದ ಸದಾವಕಾಶವನ್ನು ಒದಗಿಸುತ್ತವೆ.'[6] ಈ ಜಿಲ್ಲೆಯ ಬೇಡರು ತಮ್ಮ ಮೂಲ ವೃತ್ತಿಯಾದ ಬೇಟೆ, ಪಶುಪಾಲನೆ ಜೊತೆಗೆ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದು ಸಾಮಾನ್ಯವಾಗಿದೆ. ಅದೇ ರೀತಿ ಮೇದ ಸಮುದಾಯವು ಸಹ ತಮ್ಮ ಮೂಲ ವೃತ್ತಿಯಾದ ಬಿದಿರಿನಿಂದ ಬುಟ್ಟಿ, ಚಾಪೆ, ಏಣಿ ಮುಂತಾದ ವಸ್ತುಗಳನ್ನು ತಯಾರಿಸುವುದರ ಜೊತೆಗೆ ಬೇರೆ ವ್ಯಾಪಾರ ಮತ್ತು ವ್ಯವಹಾರಗಳಲ್ಲಿ ತೊಡಗಿರುವುದು ಕಂಡು ಬರುತ್ತದೆ.

ಪ್ರಸ್ತುತ ಅಧ್ಯಯನಕ್ಕೆ ಜಿಲ್ಲೆಯಲ್ಲಿ ಐವತ್ತಕ್ಕೂ ಹೆಚ್ಚು ಕುಟುಂಬಗಳು ಇರುವ ಬುಡಕಟ್ಟು ಸಮುದಾಯಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ರೀತಿ ಆಯ್ಕೆ ಮಾಡಿಕೊಂಡ ಬುಡಕಟ್ಟು ಸಮುದಾಯಗಳನ್ನು ಈ ಕೆಳಗಿನಂತೆ ವರ್ಗೀಕರಿಸಿ ಅವುಗಳ ಸಾಮಾಜಿಕ ಜೀವನ, ಸಾಮಾಜಿಕ ರಚನೆ, ಆಚರಣೆಗಳು, ಸಂಪ್ರದಾಯಗಳು, ಸಮಸ್ಯೆಗಳು ಹಾಗೂ ಇನ್ನಿತರ ಅಂಶಗಳ ಕಡೆ ಬೆಳಕನ್ನು ಚೆಲ್ಲಲಾಗಿದೆ.

ಅರೆ ಅಲೆಮಾರಿ ಬುಡಕಟ್ಟುಗಳು

1. ಹೆಳವರು
2. ಸುಡುಗಾಡು ಸಿದ್ಧರು
3. ಗೊಂದಲಿಗರು
4. ದುರುಗ ಮುರುಗಿಯರು
5. ಬಹುರೂಪಿಗಳು.

ನೆಲೆನಿಂತ ಬುಡಕಟ್ಟುಗಳು

1. ಮೇದ ಬುಡಕಟ್ಟು
2. ಬೇಡ ಸಮುದಾಯ

ಈ ಮೇಲೆ ಹೆಸರಿಸಿದ ಬುಡಕಟ್ಟು ಸಮುದಾಯಗಳೆಲ್ಲವು (ಮೇದ ಮತ್ತು ಬೇಡ ಹೊರತುಪಡಿಸಿ) ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಇಲ್ಲದಿರಬಹುದು. ಆದರೆ ಈ ಎಲ್ಲ ಸಮುದಾಯಗಳಲ್ಲಿ ಬುಡಕಟ್ಟುಗಳಲ್ಲಿನ ಗುಣಲಕ್ಷಣಗಳು ಕಾಣಸಿಗುತ್ತವೆ. ಆ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನಕ್ಕೆ ಈ ಎಲ್ಲಾ ಸಮುದಾಯಗಳನ್ನು ಬುಡಕಟ್ಟುಗಳೆಂದು ಪರಿಗಣಿಸಿ, **"ಹಾವೇರಿ ಜಿಲ್ಲೆಯ ಬುಡಕಟ್ಟುಗಳ ಸಾಮಾಜಿಕ ಅಧ್ಯಯನ"** ಎಂಬ ಶೀರ್ಷಿಕೆಯ ಅಡಿಯಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿದೆ.

3.2. ಬುಡಕಟ್ಟುಗಳ ಸಾಮಾಜಿಕ ಜೀವನ ಮತ್ತು ಸಾಮಾಜಿಕ ವ್ಯವಸ್ಥೆ:

ಈ ನಿಬಂಧದ ಶೀರ್ಷಿಕೆಯಲ್ಲಿ ಬಂದಿರುವ 'ಸಾಮಾಜಿಕ ಅಧ್ಯಯನ' ಎಂಬ ವಿಶೇಷಣಕ್ಕೆ ಸ್ವಲ್ಪ ವಿವರಣೆ ಅತ್ಯಗತ್ಯ. ಒಂದು ಸಮುದಾಯದ ಆಚಾರ–ವಿಚಾರ ನಂಬಿಕೆ, ಪದ್ಧತಿ, ಅವರು ಬದುಕುವ ರೀತಿ–ನೀತಿ, ಉಡುಗೆ–ತೊಡುಗೆ, ಆಹಾರ ಪದ್ಧತಿ ಮುಂತಾದ ಅವರಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಂಡಾಗ ಅದನ್ನು ಆ ಸಮುದಾಯದ 'ಸಾಮಾಜಿಕ' ಅಧ್ಯಯನ ಎಂದೇ ಹೇಳುತ್ತೇವೆ. ಅತ್ಯಂತ ನವೀನ ವಿಜ್ಞಾನವೆನಿಸಿಕೊಂಡಿರುವ ಸಮಾಜಶಾಸ್ತ್ರವು ಸಮಾಜ ವಿಜ್ಞಾನಗಳ ಸಮೂಹದಲ್ಲಿ ವಿಶಿಷ್ಟ ಸ್ಥಾನ ಪಡೆದುಕೊಂಡಿದೆ. ಈ ಶಾಸ್ತ್ರ ಮಾನವ ಸಮಾಜ ಹಾಗು ಅದರ ಸಾಮಾಜಿಕ ಚಟುವಟಿಕೆಗಳ ಅಧ್ಯಯನ ಮಾಡುತ್ತದೆ. ಅದು ಮಾನವ ಸಮಾಜದ ವಿಶಿಷ್ಟತೆ, ಪ್ರಾಣಿ ಪ್ರಪಂಚದಿಂದ ಮಾನವ ಸಮಾಜವು ಭಿನ್ನವಾಗಿರುವ ಬಗೆ, ಅದರ ಉತ್ಪತ್ತಿ, ವಿಕಾಸ, ರಚನೆ, ಮತ್ತು ಕಾರ್ಯ ಮುಂತಾದ ವಿಷಯಗಳನ್ನು ವೈಜ್ಞಾನಿಕವಾಗಿ ಅಭ್ಯಸಿಸುತ್ತದೆ. ಮಾನವನ ಸಮೂಹ ಜೀವನದ ರೀತಿ–ನೀತಿಗಳನ್ನು ವಿಶ್ಲೇಷಿಸುವುದರೊಂದಿಗೆ ಸಾಮಾಜಿಕ ಬಂಧನದ ಸೂತ್ರಗಳನ್ನು ಅದು ಅಭ್ಯಸಿಸುವುದು. ಮಾನವ ಮತ್ತು ಆತನ ಸಮಾಜದ ನಡುವಿನ ಸಂಬಂಧದ ಮೇಲೆ ವಿಶೇಷ ಒತ್ತು ನೀಡುತ್ತದೆ. ಮಾನವನ ಸಾಮಾಜಿಕ ವರ್ತನೆ, ಅಂತಃಕ್ರಿಯೆಗಳ ಅಭ್ಯಾಸ, ಮಾನವನ ಸಂಬಂಧಗಳು ವಿಶಿಷ್ಟ ರೂಪಗಳು, ವಿವಿಧತೆ, ನಮೂನೆಗಳನ್ನು ಕುರಿತು ಅಭ್ಯಸಿಸುತ್ತದೆ. ಸಾಮಾಜಿಕ ಸಂಬಂಧಗಳು ನಿರ್ಮಿಸುವ ಚಿಕ್ಕ ಹಾಗೂ ಅತಿ ದೊಡ್ಡ ವ್ಯವಸ್ಥೆಗಳ ಲಕ್ಷಣಗಳನ್ನು ವಿವರಿಸುತ್ತದೆ. ಬದಲಾಗುತ್ತಿರುವ ಪರಿಸ್ಥಿತಿಗಳಿಗೆ ತಕ್ಕಂತೆ ಸಾಮಾಜಿಕ ಸಂಬಂಧಗಳು ಹೇಗೆ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸುತ್ತದೆ ಎಂಬುದನ್ನು ಸಹ ಸಮಾಜಶಾಸ್ತ್ರ ಒಳಗೊಂಡಿರುತ್ತದೆ. ಸಾಮಾಜಿಕ ಜೀವನದ ಸ್ಥಿರತೆ ಮತ್ತು ಪರಿವರ್ತನೆಯ ಅಂಶಗಳನ್ನು ಅಭ್ಯಸಿಸುವುದರ ಜೊತೆಗೆ ಮನುಷ್ಯನ ಜೀವನದ ಮೇಲೆ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ವೈಜ್ಞಾನಿಕ ಹಾಗೂ ತಾಂತ್ರಿಕ ಅಂಶಗಳು ಬೀರುವ ಪ್ರಭಾವವನ್ನು ಅರಿಯಲು ಪ್ರಯತ್ನಿಸುತ್ತದೆ. ಮಾನವ ಜೀವನದ ಯಜಮಾನಿಕೆಯನ್ನು ವಹಿಸಿರುವ ಸಂಸ್ಕೃತಿಯ ವೈಶಿಷ್ಟ್ಯತೆ ಮತ್ತು ಪ್ರಾಮುಖ್ಯತೆಯನ್ನು ಅಧ್ಯಯನ ಮಾಡುವುದು.

ಹೀಗೆ ಮಾನವ ಸಮಾಜದ ವಿದ್ಯಾಮಾನಗಳಿಗೆ ಹಿಡಿದ ಕೈಗನ್ನಡಿಯಂತೆ ಸಾಮಾಜಿಕ ಅಧ್ಯಯನದ ಜಾಡು ವಿಸ್ತರಿಸುತ್ತಾ ಹೋಗುತ್ತದೆ. ಮಾನವ ಬದುಕಿಗೆ ಆತುಕೊಂಡಿರುವ ಬದುಕಿನ ಎಲ್ಲಾ ಮಜಲುಗಳನ್ನು ಸಮಗ್ರವಾಗಿ ಒಳಗೊಂಡಿರುವ ವಿಸ್ತೃತ ಅಧ್ಯಯನವೇ ಸಾಮಾಜಿಕ ಅಧ್ಯಯನವೆನ್ನಬಹುದು. ಇದರಲ್ಲಿ ಸಾಮಾಜಿಕ ಜೀವನ ಅತ್ಯಂತ ಪ್ರಮುಖವಾದುದು. ಕಾರಣ ವ್ಯಕ್ತಿ ತನ್ನ ಹುಟ್ಟಿನಿಂದ ಸಾವಿನವರೆಗೆ ಸಮಾಜದೊಂದಿಗೆ ಪ್ರತಿನಿತ್ಯ ತನ್ನ ಸಂಬಂಧವನ್ನು ಗಟ್ಟಿಗೊಳಿಸಿಕೊಳ್ಳುತ್ತಲೇ ಇರುತ್ತಾನೆ.

ಮಾನವನು ಮೂಲತಃ ಸಮೂಹ ಜೀವಿ. ಆತನು ಯಾವಾಗಲೂ ಸಮೂಹ, ಸಂಘ, ಸಮುದಾಯ ಮತ್ತು ಸಮಾಜದಲ್ಲಿ ವಾಸಿಸುತ್ತಾನೆ. ಮಾನವ ಜೀವನ ಮತ್ತು ಸಮಾಜ ಪರಸ್ಪರ ಹಾಸುಹೊಕ್ಕಾಗಿವೆ. ಸಮಾಜದ ಹೊರತಾಗಿ ಮಾನವನೆಂದಿಗೂ ಮಾನವನಂತೆ ಮನುಷ್ಯ ಸಹಜ ಗುಣಗಳಿಂದ ಬದುಕಲಾರ. ವ್ಯಕ್ತಿ ಸಾಮಾಜೀಕರಣಗೊಳ್ಳಲು ಸಮುದಾಯ, ಸಮಾಜ ಅತ್ಯಂತ ಅವಶ್ಯಕವಾದುದು. ಸಮಾಜವು ಮಾನವರ ಅಂತರಂಗ-ಬಹಿರಂಗಗಳನ್ನು ಆವರಿಸಿಕೊಂಡಿದೆ. ಆದ್ದರಿಂದಲೇ ಮಹಾ ದಾರ್ಶನಿಕ ಅರಿಸ್ಟಾಟಲ್‌ನು 'ಮಾನವ ಸಮೂಹ ಜೀವಿಯಾಗಿರುವನು' ಎಂದು ತಿಳಿಸಿರುವುದು, ಸಾಂಘಿಕ ನಡಾವಳಿಗಳು ಮನುಷ್ಯನನ್ನು ಒಂದುಗೂಡಿಸಲು ಪ್ರಯತ್ನಿಸುತ್ತದೆ ಎಂಬುದು ತೆರೆದ ಸತ್ಯವಾಗಿದೆ.

ಜಾನ್‌ಲಾಕ್ ಎಂಬ ಚಿಂತನಾಕಾರನ ಪ್ರಕಾರ 'ನೈಸರ್ಗಿಕ ಸ್ಥಿತಿಯಲ್ಲಿಯೂ ಮಾನವನು ಸಮೂಹ ಪ್ರಿಯತೆಯ ಗುಣಗಳನ್ನು ಹೊಂದಿದ್ದ. ಆದರೆ ಆತನು ಯಾವುದೇ ಬಗೆಯ ನೀತಿ-ನಿಯಮಾವಳಿಗಳ ಕಟ್ಟು-ಪಾಡುಗಳಿಗೆ ಸಿಲುಕದೆ ಸ್ವತಂತ್ರ ಜೀವನವನ್ನು ನಡೆಸುತ್ತಿದ್ದ. ಅಂತಹ ಜೀವನವು ಶಾಂತಿ, ಸೌಹಾರ್ದತೆ, ಸಹಾಯ ಮತ್ತು ರಕ್ಷಣೆ (Peace, good will, mutual assistance and preservation) ಗಳಿಂದ ಕೂಡಿತ್ತು' ಎಂಬುದಾಗಿ ತಿಳಿಸುತ್ತ ಬುಡಕಟ್ಟು ವಾಸಿಗಳ ಬದುಕಿನ ಮಗ್ಗುಲನ್ನು ಪರಿಚಯಿಸುತ್ತಾರೆ.

ಸಾಮಾಜಿಕ ವ್ಯವಸ್ಥೆ:

ಮಾನವ ಸಮಾಜವು ಸಾಮಾಜಿಕ ಸಂಬಂಧಗಳ ಬಲೆ. ವ್ಯಕ್ತಿಗಳ ನಡುವೆ ಪರಸ್ಪರ ಸಂಬಂಧವೇರ್ಪಡುವ ಪ್ರಕ್ರಿಯೆಯು ವ್ಯವಸ್ಥೆಯೊಂದನ್ನು ಹೋಲುತ್ತಿದ್ದು ಅಂತಹ ವ್ಯವಸ್ಥೆಯನ್ನು ಸಾಮಾಜಿಕ ವ್ಯವಸ್ಥೆ ಎಂದು ಕರೆಯಬಹುದಾಗಿದೆ. ಇದೊಂದು ಸಮಾಜದ ಘಟಕಗಳಾದ ಅಥವಾ ಭಾಗಗಳಾದ ಸಾಮಾಜಿಕ ಸಂಬಂಧಗಳ ಕ್ರಮಬದ್ಧ ವ್ಯವಸ್ಥೆಯಾಗಿದೆ. ಹಾವೇರಿ ಜಿಲ್ಲೆಯ ಆಯ್ದ ಬುಡಕಟ್ಟುಸಗಳ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆಯು ಲೋಕರೂಢಿಗಳು, ಸಂಪ್ರದಾಯಗಳು, ಪರಸ್ಪರ ಸಹಕಾರ, ವಿವಿಧ ನಿಯಮಗಳು, ವರ್ಗಗಳು, ಉಡುಗೆ-ತೊಡುಗೆ, ಆಹಾರ, ವಸತಿ, ವೃತ್ತಿ, ಬೆಡಗುಗಳು, ವಿವಾಹ, ಕುಟುಂಬ, ನ್ಯಾಯಪದ್ದತಿ ಹಾಗೂ ಸಾಮಾಜಿಕ ನಿಯಂತ್ರಣವನ್ನೊಳಗೊಂಡ ಕ್ರಮಬದ್ಧವಾದ ವ್ಯವಸ್ಥೆಗಳಿದ್ದು, ಇವೆಲ್ಲವೂ ತನ್ನದೇ ಆದ ವಿಶಿಷ್ಟ ಕಾರ್ಯಗಳನ್ನು ನಿರ್ವಹಿಸುತ್ತವೆ. ಈ ಕಾರ್ಯ ನಿರ್ವಹಣೆಯಲ್ಲಿ ಕ್ರಮಬದ್ಧತೆ ಇರುತ್ತದೆ.

ರ್‍ಯಾಡ್‌ಕ್ಲಿಫ್ ಬ್ರೌನ್ ಎಂಬಾತನ ಅಭಿಪ್ರಾಯದಂತೆ 'ಸಾಮಾಜಿಕ ವ್ಯವಸ್ಥೆ'ಯ ಕಲ್ಪನೆಯನ್ನು ಇಂದಿನ ಆಧುನಿಕ ಅರ್ಥದಲ್ಲಿ ಮೊದಲ ಬಾರಿಗೆ ಬಳಸಿದವನು ಫ್ರಾನ್ಸಿನ ಚಿಂತನಕಾರ ಮಾಂಟೆಸ್ಕ್ಯೂ. ಹದಿನೆಂಟನೇ ಶತಮಾನದ ಮಧ್ಯಭಾಗದಲ್ಲಿ ಆತ ತನ್ನ ತತ್ವ

ನಿರೂಪಣೆಯಲ್ಲಿ 'ಸಾಮಾಜಿಕ ಜೀವನದ ಎಲ್ಲಾ ಲಕ್ಷಣಗಳೂ ಕೂಡ ಸುಸಂಗತವಾದ ಅಖಂಡ ವ್ಯವಸ್ಥೆಯೊಂದರಲ್ಲಿ ಒಗ್ಗೂಡಿವೆ'[1] ಎಂದಿದ್ದಾನೆ. (All the features of social life are united into a coherent whole-Montesquieu).

ಸಾಮಾಜಿಕ ವ್ಯವಸ್ಥೆಯ ಪರಿಕಲ್ಪನೆಯು 19ನೇ ಶತಮಾನದ ಸಾಮಾಜಿಕ ಚಿಂತನೆಯಲ್ಲಿ ಅಪ್ರಕಟವಾಗಿತ್ತು. ಆದರೆ ಇಂದಿನ 'ಕಾರ್ಯತ್ಮಕವಾದ' (functionalism) ದಲ್ಲಿ ಅದು ವ್ಯಕ್ತವಾಗಿ ಹಾಗೂ ಹೆಚ್ಚು ಸ್ಪಷ್ಟವಾಗಿ ಮೂಡಿಬಂದಿದೆ. ಸಾಮಾಜಿಕ ವ್ಯವಸ್ಥೆಯ ಅತ್ಯಾಧುನಿಕ ತತ್ವವನ್ನು ಸ್ಥಾಪಿಸಿದ ಕೀರ್ತಿ ಅಮೇರಿಕದ ಸಮಾಜಶಾಸ್ತ್ರಜ್ಞ ಟಾಲ್ಕಾಟ್ ಪಾರ್ಸನ್ಸ್ ಎಂಬಾತನಿಗೆ ಸಲ್ಲುವುದು. ತನ್ನ 'An outline of the social system' and The structure of social action' ಎಂಬ ಗ್ರಂಥಗಳಲ್ಲಿ ಆತನು ತನ್ನ ಕಲ್ಪನೆಯ 'ಸಾಮಾಜಿಕ ವ್ಯವಸ್ಥೆ'ಯನ್ನು ಬಹಳ ವಿಸ್ತಾರವಾಗಿ ವಿವರಿಸಿದ್ದಾನೆ.

ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆಯ ಕುರಿತು ಟಾಲ್ಕಾಟ್ ಪಾರ್ಸನ್ಸ್ ರವರು 'ಸಾಮಾಜಿಕ ವ್ಯವಸ್ಥೆಯು ಸದಸ್ಯರ ಅಂತರ ಕ್ರಿಯೆಗಳನ್ನೊಳಗೊಂಡಿದೆ. ಈ ಅಂತರಕ್ರಿಯೆಯಲ್ಲಿ ಭಾಗವಹಿಸುವ ಸದಸ್ಯರು ಪರಸ್ಪರ ಹಂಚಿಕೊಳ್ಳಲ್ಪಡುವ ರಚನಾತ್ಮಕವಾದ ಚಿಹ್ನೆ ಹಾಗೂ ಪರಸ್ಪರ ಅಪೇಕ್ಷಣೀಯ ಮಾಧ್ಯಮಗಳ ಮೂಲಕ ಸಂಧಿಸುತ್ತಾರೆ. ಸಾಮಾಜಿಕ ವ್ಯವಸ್ಥೆಯು ಒಂದು ನಿರ್ದಿಷ್ಟ ಭೌತಿಕ ಪರಿಸರದಲ್ಲಿ ಪರಸ್ಪರ ಅಂತರಕ್ರಿಯೆ ನಡೆಸುವ ಹಾಗೂ ಸಾಂಸ್ಕೃತಿಕ ಮಾಧ್ಯಮಗಳ ಮೂಲಕ ಸಂಪರ್ಕಿಸುವ ವ್ಯಕ್ತಿಗಳ ಸಮೂಹವನ್ನು ಹೊಂದಿರುತ್ತದೆ.'[2] ಸಾಮಾಜಿಕ ವ್ಯವಸ್ಥೆಯು ಪರಿಸರ, ಕಾಲ ಮತ್ತು ಸ್ಥಳಗಳನ್ನಾಧರಿಸಿರುವುದು. ಆದ್ದರಿಂದ ಅದು ಕಾಲದಿಂದ ಕಾಲಕ್ಕೆ, ಸಮೂಹದಿಂದ ಸಮೂಹಕ್ಕೆ ಭಿನ್ನವಾಗಿರುತ್ತದೆ. ಸಮಾಜದಲ್ಲಿನ ಸದಸ್ಯರುಗಳ ಅಂತರ ಸಂಬಂಧಗಳು ಮತ್ತು ಅಂತರಕ್ರಿಯೆಗಳು, ಸ್ವರೂಪ ಹಾಗೂ ವ್ಯಾಪ್ತಿಗಳು ಪ್ರಚಲಿತ ಸಂಸ್ಕೃತಿಯಿಂದ ನಿರ್ಧರಿಸಲ್ಪಡುತ್ತದೆ. ಮಾನವನ ಸಾಮಾಜಿಕ ಜೀವನದಲ್ಲಿ ಸಾಮಾಜಿಕರಣ ಮತ್ತು ಸಾಮಾಜಿಕ ನಿಯಂತ್ರಣ ಸಾಮಾಜಿಕ ವ್ಯವಸ್ಥೆಗೆ ಸಹಾಯಕವಾಗಿರುವ ಪ್ರಮುಖ ಅಂಶಗಳು. ಒಟ್ಟಿನಲ್ಲಿ 'ವ್ಯವಸ್ಥೆ' ಎಂದರೆ ಕ್ರಮಬದ್ಧತೆ ಎಂದರ್ಥ. ವ್ಯವಸ್ಥೆಯಲ್ಲಿರುವ ವಿವಿಧ ಭಾಗಗಳು ಒಂದಕ್ಕೊಂದು ಸಂಬಂಧಿಸಿರುತ್ತವೆ.

ಪ್ರಸ್ತುತ ಹಾವೇರಿ ಜಿಲ್ಲೆಯ ಬುಡಕಟ್ಟುಗಳ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಅವರ ವೇಷ-ಭೂಷಣ, ಆಹಾರ, ವಸತಿ, ವೃತ್ತಿ, ಬೆಡಗುಗಳು, ರಕ್ತ ಸಂಬಂಧ, ಕುಟುಂಬ, ನ್ಯಾಯ ಪದ್ಧತಿ ಮತ್ತು ವಿಧಿ-ನಿಷೇಧಗಳನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ಅಧ್ಯಯನ ಮಾಡಲಾಗಿದೆ. ಭೌಗೋಳಿಕ ಮತ್ತು ಆರ್ಥಿಕ ವ್ಯವಸ್ಥೆ ಮೇಲೆ ಈ ಬುಡಕಟ್ಟು ಜನರ ಸಂಸ್ಕೃತಿ ನಿಂತಿದೆ. ಆದರೂ ತಮ್ಮ ಮೂಲ ಉಡುಗೆ-ತೊಡುಗೆ ತೊಟ್ಟು, ಮಾತೃಭಾಷೆಯನ್ನು ಮತ್ತು ಕೆಲವರು ತೆಲುಗು ಭಾಷೆಯನ್ನು ಮಾತನಾಡುವ, ಸಾಕಷ್ಟು ಬೆಡಗುಗಳನ್ನು ಹೊಂದಿದ,

ರಕ್ತ ಸಂಬಂಧಕ್ಕೆ ಮಹತ್ವ ಕೊಟ್ಟು ಹತ್ತಿರದ ರಕ್ತ ಸಂಬಂಧಿಕರಲ್ಲೇ ವಿವಾಹ ಮಾಡಿಕೊಳ್ಳುವ, ಗುಡಿಸಲು ಟೆಂಟು, ಹಂಚಿನ ಮತ್ತು ಬಾಡಿಗೆ ಮನೆಗಳಲ್ಲಿ ವಾಸಿಸುವ, ಪಶು, ಕುರಿ, ಮೇಕೆ, ಕೋಳಿ ಸಾಕಾಣೆ ಹಾಗೂ ಕೂಲಿ ಮಾಡಿಕೊಂಡು ಬದುಕುವ, ಗುಡಿಕಟ್ಟೆ ಮತ್ತು ನ್ಯಾಯ ಪಂಚಾಯಿತಿಗಳಲ್ಲಿ ನ್ಯಾಯ ತೀರ್ಮಾನ ಮಾಡಿಕೊಳ್ಳುವ, ಬಡತನದ ಬೇಗೆಯಲ್ಲಿ ಬಳಲುತ್ತಿರುವ, ಪ್ರಾಚೀನ ಕಾಲದ ಬುಡಕಟ್ಟು ಸಂಸ್ಕೃತಿಯನ್ನು ಉಳಿಸಿಕೊಂಡಿರುವ, ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ ಮತ್ತು ನಗರೀಕರಣಕ್ಕೆ ಒಳಗಾಗದಂಥ ಸಾಮಾಜಿಕ ವ್ಯವಸ್ಥೆ ಮತ್ತು ಜೀವನ ವಿಧಾನ ಪ್ರಸ್ತುತ ಜಿಲ್ಲೆಯ ಬುಡಕಟ್ಟು ಜನರಲ್ಲಿ ಕಂಡುಬರುತ್ತದೆ. ಆದ್ದರಿಂದ ಹೊಸದಾಗಿ ಅಸ್ಥಿತ್ವಕ್ಕೆ ಬಂದಿರುವ ಹಾವೇರಿ ಜಿಲ್ಲೆಯ ಏಳೂ ತಾಲೂಕುಗಳಲ್ಲಿ ಹರಡಿರುವ ಅರೆ ಅಲೆಮಾರಿ ಮತ್ತು ನೆಲೆನಿಂತ ಬುಡಕಟ್ಟು ಜನರ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಈ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಲಾಗಿದೆ.

3.3. ಬುಡಕಟ್ಟುಗಳ ಆಚರಣೆ, ನಂಬಿಕೆ ಹಾಗೂ ಸಂಪ್ರದಾಯಗಳು:

ಹಿಂದು ಧರ್ಮದಲ್ಲಿ ಸಂಪ್ರದಾಯ, ಆಚರಣೆ, ನಂಬಿಕೆ ಮತ್ತು ಸಂಸ್ಕಾರಗಳಿಗೆ ಬಹಳ ಮಹತ್ವವಾದ ಸ್ಥಾನ ಕೊಡಲಾಗಿದೆ. ಮಾನವನ ಸಾಮಾಜಿಕ ಜೀವನದಲ್ಲಿ ಸುಸಂಸ್ಕೃತ ಪರಿಸರವನ್ನು ನಿರ್ಮಿಸುವಲ್ಲಿ ಸಂಸ್ಕಾರಗಳ ಪಾತ್ರ ಬಹುಮುಖ್ಯವಾಗಿದೆ. ಬಹು ಕಾಲದಿಂದಲೂ ಪುನರಾವರ್ತನೆಗೊಳ್ಳುತ್ತಾ ಆಚರಣೆಯಲ್ಲಿ ಬಂದಿರುವ ವಿಧಾನಗಳೇ ಸಂಪ್ರದಾಯಗಳೆನಿಕೊಳ್ಳುತ್ತವೆ. ಯೋಗ್ಯವಾದ ನಿಶ್ಚಿತ ವಿಧಿಯಿಂದ ಸುಂದರವಾಗಿ ಮಾಡುವಂತಹ ಕ್ರಿಯಾರೂಪದ ಧರ್ಮ ಕರ್ಮಕ್ಕೆ ಸಂಸ್ಕಾರ ಎಂದರ್ಥ. ಈ ಸಂಸ್ಕಾರಗಳು ಮತ್ತು ಸಂಪ್ರದಾಯಗಳು ಮಾನವನ ಸಾಮಾಜಿಕ ಜೀವನವನ್ನು ನಿಯಂತ್ರಿಸಿ ಸಾಮಾಜಿಕ ಸಾಮರಸ್ಯವು ನೆಲೆಸುವಲ್ಲಿ ಸಹಾಯ ಮಾಡುತ್ತವೆ. ಆದ್ದರಿಂದಲೇ ಸಂಸ್ಕಾರಗಳು ಮತ್ತು ಸಂಪ್ರದಾಯಗಳನ್ನು 'ಸಾಮಾಜಿಕ ಜಗತ್ತಿನ ದೊರೆ' ಗಳೆನ್ನುವುದುಂಟು. ಪ್ರತಿ ಸಮಾಜವು ತನ್ನದೇ ಆದ ಹಲವು ಸಂಸ್ಕಾರಗಳು, ನಂಬಿಕೆಗಳು, ಆಚರಣೆಗಳು ಮತ್ತು ಸಂಪ್ರದಾಯಗಳನ್ನು ಹೊಂದಿರುತ್ತವೆ. ಜನನ, ನಾಮಕರಣ, ಜವಳ ತೆಗೆಸುವುದು, ಋತುಮತಿ, ವಿವಾಹ, ಶವ–ಸಂಸ್ಕಾರ ಮೊದಲಾದವುಗಳಲ್ಲಿ ಪ್ರತಿ ಸಮಾಜವೂ ತನ್ನದೇ ಆದ ವಿಧಿ–ವಿಧಾನಗಳನ್ನು ಸಾಂಪ್ರದಾಯಿಕವಾಗಿ ನಿರೂಪಿಸುತ್ತದೆ. ಅವು ಸಾಮಾಜಿಕ ನಿಯಂತ್ರಣಕ್ಕೆ ಉತ್ತಮ ಮತ್ತು ಶಕ್ತಿದಾಯಕ ಅಂಶಗಳಾಗಿ ಸಂಸ್ಕೃತಿಯ ಪರಂಪರೆಯನ್ನು ಮುಂದುವರೆಯುವಂತೆ ಮಾಡುತ್ತವೆ. ಆದರೆ ಸಂಪ್ರದಾಯಗಳು ಮತ್ತು ಸಂಸ್ಕಾರಗಳು ಹೇಗೆ ಹುಟ್ಟಿಕೊಳ್ಳುತ್ತವೆ, ಬೆಳೆಯುತ್ತವೆ ಎಂದು ಸ್ಪಷ್ಟವಾಗಿ ಹೇಳುವುದು ಕಷ್ಟಸಾಧ್ಯ.

ಮ್ಯಾಕ್‌ಡೊಗಲ್ ಹೇಳುವಂತೆ 'ಎಷ್ಟೋ ಸಂಪ್ರದಾಯಗಳ ಮೂಲ ಧ್ಯೇಯೋದ್ದೇಶಗಳು ಇತಿಹಾಸ ಗರ್ಭದಲ್ಲಿ ಹುದುಗಿ ಹೋಗಿವೆ'. ಎಂದಿದ್ದಾರೆ. ಷೇಕ್ಸ್‌ಪಿಯರ್ ಈ

ಸಂಪ್ರದಾಯಗಳನ್ನು 'ದಬ್ಬಾಳಿಕೆ'ಯೆಂದು, ಬೇಕನ್ ನು 'ಮಾನವ ಜೀವನದ ನ್ಯಾಯಮೂರ್ತಿ'ಯೆಂದು ಹೇಳಿದ್ದಾರೆ. ಅದೇ ರೀತಿ ಲುಂಡ್‌ಬರ್ಗ್‌ರವರು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ವರ್ಗಾಯಿಸಲ್ಪಡುವಷ್ಟರ ಮಟ್ಟಿಗೆ ಸ್ಥಿರತೆಯನ್ನು ಹೊಂದಿದ್ದು, ಸಮಾಜದ ಔಪಚಾರಿಕ ಮಾನ್ಯತೆಯನ್ನು ಪಡೆದಿರುವ ಲೋಕರೂಢಿಗಳನ್ನೇ ಸಂಪ್ರದಾಯಗಳೆಂದು ಕರೆಯಬಹುದು ಎಂದಿದ್ದಾರೆ.

ಸಾಮಾನ್ಯವಾಗಿ ಸಂಸ್ಕಾರಗಳು ಮತ್ತು ಸಂಪ್ರದಾಯಗಳ ಮೂಲ ಸ್ವರೂಪವು ಅಸ್ಪಷ್ಟವೂ, ಅಗೋಚರವೂ, ಅಜ್ಞಾತವು ಆಗಿದ್ದೂ; ಅವು ಅಪ್ರತ್ಯಕ್ಷವಾಗಿ ಬೆಳೆದು ಬಂದಿರುತ್ತವೆ. ಆದರೆ ಯೋಜನಾಬದ್ಧವಾಗಿ ಸಾಮಾಜಿಕ ಜೀವನದಲ್ಲಿ ಒಡಮೂಡುವುದಿಲ್ಲ. ಜನಸಮೂಹದ ಬೇಡಿಕೆಗಳನ್ನು ಆಧರಿಸಿ ಇವು ಬೆಳೆಯುತ್ತವೆ. ಅರೆ-ಅಲೆಮಾರಿ ಮತ್ತು ನೆಲೆನಿಂತ ಬುಡಕಟ್ಟು ಸಮುದಾಯಗಳಲ್ಲಿ ಸಮುದಾಯದ ಜನರು ಸಂಸ್ಕಾರ ಮತ್ತು ಸಂಪ್ರದಾಯಗಳಿಗೆ ಹೆಚ್ಚು ಮಹತ್ವ ಕೊಟ್ಟಿದ್ದಾರೆ. ಅವರ ಸಾಮಾಜಿಕ ಬದುಕಿನಲ್ಲಿ ಜನನ, ನಾಮಕರಣ, ಜವಳ ತೆಗೆಸುವುದು. ಋತುಮತಿಶಾಸ್ತ್ರ, ವಿವಾಹ, ಸೀಮಂತ, ಹಬ್ಬಹರಿದಿನಗಳು, ಸಾವು ಮೊದಲಾದ ಸಂಸ್ಕಾರಗಳು ಮತ್ತು ಸಂಪ್ರದಾಯಗಳನ್ನು ಸಹ ಈ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ಹಾವೇರಿ ಜಿಲ್ಲೆಯ ಆಯ್ದ ಬುಡಕಟ್ಟುಗಳ ಹಿನ್ನೆಲೆ, ಸಾಮಾಜಿಕ ಜೀವನ ಮತ್ತು ಅವುಗಳ ಆಚರಣೆ ಸಂಪ್ರದಾಯಗಳನ್ನು ಸಂಕ್ಷಿಪ್ತವಾಗಿ ಈ ಕೆಳಗೆ ವಿವರಿಸಲಾಗಿದೆ.

3.4. ಮೇದ ಬುಡಕಟ್ಟಿನ ಸಾಮಾಜಿಕತೆ

ಕರ್ನಾಟಕದಾದ್ಯಂತ ಹಳ್ಳಿ ಹಾಗೂ ಪಟ್ಟಣಗಳಲ್ಲಿ ನೆಲೆಸಿರುವ 'ಮೇದ'ರನ್ನು ಸರ್ಕಾರ ಪರಿಶಿಷ್ಟ ಬುಡಕಟ್ಟು ಎಂದು ಗುರುತಿಸಿದೆ. ಇವರು ಹೆಚ್ಚಾಗಿ ಗುಲ್ಬರ್ಗಾ, ಧಾರವಾಡ, ಕೊಪ್ಪಳ, ಬಳ್ಳಾರಿ, ಹಾವೇರಿ, ಕೋಲಾರ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಮುಂತಾದ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಪ್ರಾಚೀನ ಕಾಲದಿಂದಲೂ ಬಿದರು ಮತ್ತು ಬೆತ್ತದ ಉಪಯೋಗಗಳು ಮಾನವ ಜೀವನದಲ್ಲಿ ತೊಟ್ಟಿಲಿಂದ ಹಿಡಿದು ಚಟ್ಟದ ವರೆಗೂ ಹಾಸು ಹೊಕ್ಕಾಗಿದೆ. ಮೊರ, ಬುಟ್ಟಿ, ಬೀಸಣಿಕೆ, ತೊಟ್ಟಿಲು ಇತ್ಯಾದಿ ಸಾಮಾಗ್ರಿಗಳನ್ನು ಬಿದಿರಿನಿಂದ ತಯಾರಿಸಿ ದಿನಬಳಕೆ ವಸ್ತುಗಳಾಗಿ ಉಪಯೋಗಿಸುತ್ತಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಈ ತಯಾರಿಕೆ ಒಂದು ಜನಾಂಗದ ಕುಲಕಸಬು ಎಂದು ನಂಬಿದ್ದಾರೆ. ಹನ್ನೆರಡನೇ ಶತಮಾನದಲ್ಲಿ ಬಸವ ಕಲ್ಯಾಣದಲ್ಲಿ ಶ್ರೀ ಬಸವೇಶ್ವರರ ಅನುಭವ ಮಂಟಪದಲ್ಲಿ ಶಿವಶರಣ ಮೇದಾರ ಕೇತೇಶ್ವರರು ಇದ್ದದ್ದು ತಿಳಿಯುತ್ತದೆ. ಬಸವಣ್ಣನವರೊಂದಿಗೆ ಸಾಮಾಜಿಕ ಸುಧಾರಣೆಯಲ್ಲಿ ಪಾಲ್ಗೊಂಡಿದ್ದ ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ, ಮೇದಾರ

ಕೇತಯ್ಯ ಮುಂತಾದವರು ಪ್ರಮುಖ ವ್ಯಕ್ತಿಗಳಾಗಿದ್ದಾರೆ. ಹೆಸರೇ ತಿಳಿಸುವಂತೆ ಇವರಲ್ಲಿ ಪ್ರತಿಯೊಬ್ಬರೂ ಒಂದೊಂದು ಜನಾಂಗವನ್ನು ಪ್ರತಿನಿಧಿಸುವ ಮುಖಂಡರು. ಪ್ರತಿಯೊಂದು ಜನಾಂಗವು ತಮ್ಮದೇ ಆದ ಉದ್ಯೋಗಕ್ಕೆ ಮೀಸಲು. ಈ ವೃತ್ತಿ ವಂಶಪಾರಂಪರ್ಯವಾಗಿ ಬಂದಿರುತ್ತದೆಯಲ್ಲದೆ, ಬಿದರಿನಿಂದ ನಿತ್ಯೋಪಯೋಗಿ ವಸ್ತುಗಳನ್ನು ತಯಾರಿಸುವುದು ಮೇದಾರ ಜನಾಂಗಕ್ಕೆಂದೇ ಮೀಸಲಾಗಿರುವ ಕುಲಕಸುಬು. ಇತಿಹಾಸದ ಪುಟಗಳನ್ನು ತೆರೆದು ನೋಡಿದಾಗ ಕಾಣಬರುವ ಮೇದಾರ ಕೇತಯ್ಯ ಒಬ್ಬ ಮುಖಂಡ. ಹಿರಿಯನಾದ ಮೇದಾರ ಕೇತಯ್ಯನನ್ನು ಈಗಲೂ ಈ ಸಮುದಾಯದವರ ಕುಲದೇವರಾಗಿ ಪೂಜಿಸುತ್ತಾರೆ. ಈ ಜನಾಂಗದವರು ಇಂದಿಗೂ ಶಿವಶರಣ ಮೇದಾರ ಕೇತೇಶ್ವರರ ಜಯಂತಿ ಆಚರಿಸುತ್ತಾರೆ.

ನೆಲೆಗಳು:

ಕರ್ನಾಟಕ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಕಂಡುಬರುವ ಮೇದ ಸಮುದಾಯವನ್ನೆಲ್ಲಾ ನನ್ನ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿಲ್ಲ. ಕಾರಣ ನನ್ನ ಅಧ್ಯಯನ ಕ್ಷೇತ್ರವು ಹಾವೇರಿ ಜಿಲ್ಲೆಗೆ ಸೀಮಿತವಾದ್ದರಿಂದ, ಇಲ್ಲಿರುವ ಮೇದಾರರನ್ನು ಮಾದರಿ ಸಮೀಕ್ಷೆ ಮೂಲಕ ಆಯ್ಕೆ ಮಾಡಿಕೊಳ್ಳಲಾಗಿದೆ. ಆರ್ಥಿಕವಾಗಿ ತುಂಬಾ ಹಿಂದುಳಿದ ಪ್ರದೇಶಗಳಲ್ಲಿ ವಾಸಿಸುವವರ ಮತ್ತು ಬಿದಿರಿನ ಕಸುಬನ್ನು ಮಾತ್ರ ಅವಲಂಬಿಸಿರುವ ಕುಟುಂಬಗಳ ಪೂರ್ಣ ಮಾಹಿತಿಯನ್ನು ಪಡೆಯಲಾಗಿದೆ.

ಪ್ರಾದೇಶಿಕವಾಗಿ ಮೇದ ಸಮಾಜದ ಆಚಾರ-ವಿಚಾರ, ನಡೆ-ನುಡಿ, ಕಸುಬುಗಳು ಹೆಚ್ಚು ಕಡಿಮೆ ಏಕರೀತಿಯಲ್ಲಿರುವುದು ಅನುಷಂಗಿಕ ಮೂಲಗಳಿಂದ ಗೊತ್ತಾಗುತ್ತದೆ. ಈ ಅಧ್ಯಯನಕ್ಕೆ ಜಿಲ್ಲೆಯ ಕೆಲವು ನಗರ ಮತ್ತು ಗ್ರಾಮಗಳಾದ ರಾಣೆಬೆನ್ನೂರು, ಸವಣೂರು, ರಟ್ಟೀಹಳ್ಳಿ, ಮಾಸೂರು, ಹಿರೇಕೆರೂರು, ಚಿಕ್ಕೇರೂರು, ಬ್ಯಾಡಗಿ, ಸಿಡೆನೂರು, ಹೊಸರಿತ್ತಿ, ಗುತ್ತಲ, ಅಕ್ಕಿಆಲೂರು, ಶಿಗ್ಗಾಂವ, ಬಂಕಾಪುರ ಇತ್ಯಾದಿಗಳನ್ನು ಒಳಪಡಿಸುವ ಮೂಲಕ ಅವರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ. ಈ ಪ್ರದೇಶಗಳಲ್ಲಿರುವ ಮೇದಾರರನ್ನು ನಮೂನೆ ಮೂಲಕ ಆಯ್ಕೆ ಮಾಡಿಕೊಂಡು ಕುಟುಂಬದ ಸಮಗ್ರವಾದ ವಿಷಯವನ್ನು ಸಂಗ್ರಹಿಸಲಾಗಿದೆ.

ಹಾವೇರಿ ಜಿಲ್ಲೆಯ ಮೇದ ಸಮುದಾಯದ ನೆಲೆಗಳು



ಸಮುದಾಯದ ಹಿನ್ನೆಲೆ:

ಈ ಬುಡಕಟ್ಟಿನವರನ್ನು ಮೇದ, ಮೇದಾರ, ಮ್ಯಾದರ, ಮೇದಾರಿ, ಗೌರಿಗ, ಬುರುಡ, ಬುಡ್ಡರು, ಎಂದು ಕರೆಯಲಾಗಿದೆ. ಮೇದ ಎಂಬ ಶಬ್ದಕ್ಕೆ ಕಿಟ್ಟಲ್ ನಿಘಂಟುವಿನಲ್ಲಿ ಮೇದರ–ಮೇದಾರ ಎಂದಿದೆ. ಇವರಲ್ಲಿ ಕನ್ನಡ ಮತ್ತು ತೆಲಗು ಮಾತನಾಡುವವರಿದ್ದಾರೆ. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿರುವ ಇವರಲ್ಲಿ ಉಪಪಂಗಡಗಳೂ ಸಾಕಷ್ಟಿವೆ.

1901ರ ಜನಗಣತಿಯ ಪ್ರಕಾರ ಇವರ ಜನಸಂಖ್ಯೆ ಕರ್ನಾಟಕದಲ್ಲಿ 5,774 ಆಗಿತ್ತು. ಇವರಲ್ಲಿ 2,887 ಪುರುಷರು ಹಾಗೂ ಅಷ್ಟೇ ಸಂಖ್ಯೆಯ ಸ್ತ್ರೀಯರಿದ್ದರೆಂದು ವರದಿ ಮಾಡಲಾಗಿದೆ. 1971ರಲ್ಲಿ ಕೊಡಗು ಜಿಲ್ಲೆಯಲ್ಲಿ ಕೇವಲ 325 ಜನರು ಮಾತ್ರ ಇದ್ದವರು, ಈಗ ಬೇರೆ ಕಡೆಗಳಿಂದ ಬಂದು ನೆಲಸಿದವರೂ ಸೇರಿದಂತೆ 1981ರ ಜನಗಣತಿಯಂತೆ 1,860




ಜನರು ಈ ಜಿಲ್ಲೆಯಲ್ಲಿ ವಾಸಿಸುತ್ತಿದ್ದಾರೆ. ಇವರಲ್ಲಿ ಶೇ.36 ಪಟ್ಟಣಗಳಲ್ಲಿ ವಾಸಮಾಡಿದರೆ ಶೇ.56 ಜನರು ಹಳ್ಳಿಗಳಲ್ಲಿ ನೆಲೆಸಿರುತ್ತಾರೆ. ಕರ್ನಾಟಕದ ಜನಗಣತಿ 2011ರ ಪ್ರಕಾರ ಮೇದ ಬುಡಕಟ್ಟಿನವರು ಒಟ್ಟಾಗಿ 37,371 ಜನರಿದ್ದಾರೆ. ಅವರಲ್ಲಿ 18,778 ಪುರುಷರು ಹಾಗೂ 18,593 ಮಹಿಳೆಯರಿದ್ದಾರೆ. ಹಾವೇರಿ ಜಿಲ್ಲೆಯಲ್ಲಿ ಸುಮಾರು 220 ಮನೆಗಳಿದ್ದು, 982 ಜನರಿದ್ದಾರೆಂಬುದು ಸಮೀಕ್ಷೆಯ ಮೂಲಕ ತಿಳಿದುಬರುತ್ತದೆ. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ಕೋಷ್ಟಕವನ್ನು ಗಮನಿಸಿ.

ಕೋಷ್ಟಕ–3

ಪ್ರಸ್ತುತ ಅಧ್ಯಯನಕ್ಕೆ ಸಮೀಕ್ಷೆಗೊಳಪಡಿಸಿದ ಹಾವೇರಿ ಜಿಲ್ಲೆಯ ಮೇದಾರ ಸಮುದಾಯದ ತಾಲೂಕುವಾರು, ಲಿಂಗಾವಾರು ಜನಸಂಖ್ಯೆ.

ಕ್ರ.ಸಂ.	ತಾಲೂಕು	ಗ್ರಾಮ/ನಗರ	ಒಟ್ಟು ಮನೆಗಳು	ಜನಸಂಖ್ಯೆ		
				ಗಂಡು	ಹೆಣ್ಣು	ಒಟ್ಟು
01	ರಾಣೇಬೆನ್ನೂರು	ರಾಣೇಬೆನ್ನೂರು	70	168	142	310
02	ಸವಣೂರು	ಸವಣೂರು	15	41	29	70
03	ಹಿರೇಕೆರೂರು	ಕಿರಗೇರಿ	10	22	20	42
04	ಹಿರೇಕೆರೂರು	ರಟ್ಟೀಹಳ್ಳಿ	04	10	08	18
05	ಹಿರೇಕೆರೂರು	ಮಾಸೂರು	04	09	07	16
06	ಹಿರೇಕೆರೂರು	ಹಿರೇಕೆರೂರು	30	73	62	135
07	ಹಿರೇಕೆರೂರು	ಚಿಕ್ಕೇರೂರು	01	03	02	05
08	ಬ್ಯಾಡಗಿ	ಬ್ಯಾಡಗಿ	06	14	12	26
09	ಬ್ಯಾಡಗಿ	ಸಿಡೆನೂರು	03	07	07	14
10	ಹಾವೇರಿ	ಹಾವೇರಿ	10	22	20	42
11	ಹಾವೇರಿ	ಚಿಕ್ಕಲಿಂಗದಳ್ಳಿ	01	02	03	05
12	ಹಾವೇರಿ	ಹೊಸರಿತ್ತಿ	01	02	02	04
13	ಹಾವೇರಿ	ಗುತ್ತಲ	01	03	02	05
14	ಹಾನಗಲ್	ಅಕ್ಕಿಆಲೂರು	15	32	31	63
15	ಹಾನಗಲ್	ಗುತ್ತಲ	01	03	02	05
16	ಶಿಗ್ಗಾಂವ	ಶಿಗ್ಗಾಂವ	10	26	22	48
17	ಶಿಗ್ಗಾಂವ	ಬಂಕಾಪುರ	12	28	25	53
18	ಶಿಗ್ಗಾಂವ	ಚಂದಾಪುರ	25	65	50	115
19	ಶಿಗ್ಗಾಂವ	ರಾಜೀವನಗರ	01	03	03	06
		ಒಟ್ಟು	**220**	**533**	**449**	**982**



ಭೂಮಿಯ ಮೇಲೆ ಮಾನವನ ವಿಕಾಸವಾದ ದಿನದಿಂದ ಇಂದಿನವರೆಗೂ ಅವನು ಸಾಗಿಬಂದ ದಾರಿಯನ್ನು ನೋಡಿದರೆ ಕಾಲಕಾಲಕ್ಕೆ ಬದಲಾವಣೆಯನ್ನು ಹೊಂದಿದ್ದಾನೆ. ಮೊದಲಿಗೆ ಮಾನವನು ಹೊಟ್ಟೆಪಾಡಿಗಾಗಿ ಬೇಟೆಯನ್ನು ಅವಲಂಬಿಸಿ ಜೀವನವನ್ನು ನಿರ್ವಹಿಸುತ್ತಿದ್ದ. ನಂತರದ ಹಂತದಲ್ಲಿ ಪಶುಪಾಲನೆ ಕೈಗೊಂಡು ಹೊಟ್ಟೆ ಹೊರೆಯಲು ಪ್ರಾರಂಭಿಸಿದ. ನಂತರ ಕೃಷಿಯನ್ನು ಅವಲಂಬಿಸಿಕೊಂಡು ಬದುಕಿನ ರೂಪರೇಷೆಗಳನ್ನು ರೂಢಿಸಿಕೊಂಡು ಸಾಗಿ ಬಂದುದು ಇತಿಹಾಸದಿಂದ ತಿಳಿದುಬರುತ್ತದೆ. ಇಂದು ವಿಜ್ಞಾನ ಮತ್ತು ತಂತ್ರಜ್ಞಾನಗಳು ಶರವೇಗದಲ್ಲಿ ಮುನ್ನುಗ್ಗುತ್ತಿವೆ. ಅದರ ಫಲವಾಗಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕವಾಗಿ ಮಹತ್ತರವಾದ ಬದಲಾವಣೆಗಳಾಗುತ್ತಿವೆ.

ಬ್ರಿಟಿಷ್ ಆಳ್ವಿಕೆಯ ಅವಧಿಯಲ್ಲಂತೂ ಪಶ್ಚಿಮ ಘಟ್ಟಗಳಲ್ಲಿ ಹುಲುಸಾಗಿ ಬೆಳೆದಿದ್ದ ಹೆಚ್ಚು ಬೆಲೆ ಬಾಳುವಂತಹ ಮರಗಳ ಮಾರಣ ಹೋಮವನ್ನು ಯಾರು ತಡೆಯಲು ಸಾಧ್ಯವೇ ಇರಲಿಲ್ಲ. ಹಾಗೊಮ್ಮೆ ತಡೆಯುವ ಪ್ರಯತ್ನ ಬುಡಕಟ್ಟು ವಾಸಿಗಳಿಂದ ನಡೆದಿದ್ದರೂ, ಅವರನ್ನು ಬಂದೂಕಿನ ತುದಿಯಿಂದ ಆತಂಕಕ್ಕೀಡು ಮಾಡುತ್ತಿದ್ದರು. ಇಲ್ಲವೇ ನಿರ್ದಾಕ್ಷಿಣ್ಯವಾಗಿ ಕೊಲ್ಲುತ್ತಿದ್ದರು ಅಥವಾ 'ಅಪರಾಧಿ ಬುಡಕಟ್ಟು'ಗಳೆಂದು ನಾಮಾಂಕಿತ ಮಾಡಿ, ಜೀವನ ಪರ್ಯಂತ ನರಳುವ ಹಾಗೆ ಮಾಡುತ್ತಿದ್ದರು. ಸ್ವಾತಂತ್ರ್ಯ ನಂತರದಲ್ಲಿ ಸರ್ಕಾರದ 'ಅಭಿವೃದ್ಧಿ' ಮಂತ್ರ ಜಪದಿಂದ ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಸಾಮಗ್ರಿಗಳು, ದೊಡ್ಡ ದೊಡ್ಡ ಮರಗಳು,



ಕಾಗದದ ಕಾರ್ಖಾನೆಗೆ ಬಿದಿರು, ವೈವಿಧ್ಯಮಯ ಗಣಿಗಾರಿಕೆ, ಬೃಹತ್ ತೋಟಗಳ ನಿರ್ಮಾಣ, ಕೃಷಿ ಯೋಗ್ಯ ಭೂಮಿಯನ್ನಾಗಿ ವಿಸ್ತರಿಸುವುದು, ಅಣೆಕಟ್ಟುಗಳ ನಿರ್ಮಾಣ, ರಾಷ್ಟ್ರೀಯ ಉದ್ಯಾನವನ, ಗೇಮ್ ಏರಿಯ (ವನ್ಯ ಜೀವಿ ತಾಣ) ರೆಸಾರ್ಟ್ ಇತ್ಯಾದಿ ಅನೇಕ ಹೆಸರುಗಳಿಂದ ಅರಣ್ಯ ಪ್ರದೇಶಗಳ ಆಕ್ರಮಣ ಮತ್ತು ನಾಶ ನಿರಂತರವಾಗಿ ಮುಂದುವರೆದವು. ಬಂಡವಾಳಶಾಹಿ ವರ್ಗ, ಅರಣ್ಯದ ಒಡೆತನ, ಅರಣ್ಯ ಉತ್ಪನ್ನಗಳನ್ನು ತಮ್ಮ ಹದ್ದುಬಸ್ತಿಗೆ ತಂದುಕೊಳ್ಳುವಲ್ಲಿ ಯಶಸ್ವಿಯಾದವು. ಗುತ್ತಿಗೆದಾರರು ಮತ್ತು ಸರ್ಕಾರದ ನಡುವೆ ಅನೇಕ ಒಳ ಒಪ್ಪಂದಗಳಿಂದಾಗಿ ಕಾಡಿನ ಮಕ್ಕಳ ಹೊಟ್ಟೆಯ ಮೇಲೆ ತಣ್ಣೀರು ಬಟ್ಟೆ ಹೊದಿಸುವ ಹುನ್ನಾರ ವ್ಯಾಪಕವಾಗತೊಡಗಿದವು. ಇಂತಹ ವ್ಯವಸ್ಥಿತ ಪ್ರಕ್ರಿಯೆಯಿಂದ ಅನೇಕ ಬುಡಕಟ್ಟುಗಳು ದಿಗ್ಮೂಢತೆಯಿಂದ ದಿಕ್ಕಾಪಾಲಾಗಿ ಓಡಿಹೋದವು. ಸುರಕ್ಷಿತವಿರಬಹುದೇನೋ ಎಂಬ ಭರವಸೆಯೊಂದಿಗೆ ಬೇರೆ ಪ್ರದೇಶಕ್ಕೆ ಸ್ಥಳಾಂತರಗೊಂಡರು. ಅಲ್ಲಿಯೂ ಇಂತಹದೇ ಅರಣ್ಯ ಕಾಯ್ದೆಗಳು ಬೆನ್ನುಹತ್ತುತ್ತವೆ ಎಂದು ಊಹಿಸಿರಲಿಲ್ಲ. ಬದುಕನ್ನೆಲ್ಲ ಕಳಚಿಕೊಂಡ ಅರಣ್ಯವಾಸಿ ಬುಡಕಟ್ಟುಗಳು ಹಲವು ಘಟ್ಟಗಳನ್ನು ದಾಟಿ ಕಾಡಿನ ಅಂಚಿಗೋ, ಹಳ್ಳಿಯ ಬದುಕಿಗೋ, ಪಟ್ಟಣದ ಅಂಚಿಗೋ ಆತುಕೊಳ್ಳುವ ಅನಿವಾರ್ಯತೆಯಿಂದ ಬದುಕು ಕಟ್ಟಿಕೊಳ್ಳಲು ಹಪಹಪಿಸುತ್ತಾನೆ. ಕೆಲವು ಸಮುದಾಯಗಳು ಕಾಡಿನಲ್ಲಿಯೇ ಉಳಿದು ಹಳ್ಳಿ-ಪಟ್ಟಣ ವಾಸಿಗಳಿಗಿಂತ ಭಿನ್ನ ಮತ್ತು ಪ್ರತ್ಯೇಕ ಜೀವನ ರೂಢಿಸಿಕೊಂಡು ಬದುಕುತ್ತಾ ಬಂದವು. ಇಂತಹ ಸಮುದಾಯಗಳು ಇತ್ತೀಚಿಗೆ ಕಾಡು-ನಾಡುಗಳ ಮಧ್ಯೆ ಹಾಗೂ ನಾಡುಗಳಲ್ಲಿ ವಾಸಿಸುತ್ತಿದ್ದರೂ ತಮ್ಮ ಮೂಲ ಸಂಸ್ಕೃತಿಯ ಮೌಲ್ಯಗಳನ್ನು ಜೀವಂತವಾಗಿ ಉಳಿಸಿಕೊಂಡಿರುವರು. ಇವರ ಮೇಲೆ ಪರಿವರ್ತಿತ ಸಮುದಾಯಗಳ ಸಾಂಸ್ಕೃತಿಕ ಪ್ರಭಾವವಾಗಿದ್ದರೂ ತಮ್ಮ ಮೂಲ ಸಂಸ್ಕೃತಿಯ ನೆಲೆಗಟ್ಟಿನ ಮೇಲೆಯೇ ಇವರು ಬದುಕುತ್ತಿದ್ದಾರೆ. ಇಂತಹ ಅನೇಕ ಸಮುದಾಯಗಳು ಜಗತ್ತಿನ ಎಲ್ಲಾ ದೇಶದಲ್ಲೂ ಕಂಡುಬರುತ್ತವೆ. ಭಾರತ ಬಹು ಸಂಸ್ಕೃತಿಯ, ಭಾಷೆಯ, ಧರ್ಮದ ನೆಲೆವೀಡಾಗಿದ್ದು, ದೇಶದಾದ್ಯಂತ ಸಾವಿರಾರು ಬುಡಕಟ್ಟುಗಳು ನೆಲೆಕಂಡುಕೊಂಡಿವೆ. ಈ ಬುಡಕಟ್ಟು ಸಮುದಾಯಗಳು ತಮ್ಮದೇ ಆದ ವಿಶಿಷ್ಠ ಬಗೆಯ ಭಾಷೆ ಜೀವನದ ಕ್ರಮವನ್ನು ರೂಢಿಸಿಕೊಂಡಿವೆ. ಎಲ್ಲಾ ಸಮುದಾಯಗಳ ಬದುಕು ಒಂದೇ ಎನಿಸಿದರೂ, ಆಂತರ್ಯದಲ್ಲಿ ಸಾಕಷ್ಟು ವಿಭಿನ್ನತೆ ಕಂಡುಬರುತ್ತದೆ.

ಈ ರೀತಿಯ ವಿಶೇಷ-ವಿಚಿತ್ರತೆಗಳಿಂದ ಕೂಡಿರುವ ಬುಡಕಟ್ಟುಗಳ ವಾಸ್ತವ ಸ್ಥಿತಿ-ಗತಿಗಳನ್ನು ಸಂಶೋಧನಾತ್ಮಕ ದೃಷ್ಟಿಯಿಂದ ಅಧ್ಯಯನಿಸುವ ಜವಾಬ್ದಾರಿಯನ್ನು ಕರ್ನಾಟಕದಲ್ಲಿ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಬುಡಕಟ್ಟು ಅಧ್ಯಯನ ವಿಭಾಗವು ನಿರ್ವಹಿಸುತ್ತಾ ಬಂದಿದೆ. ಕರ್ನಾಟಕದಲ್ಲಿ ಇದುವರೆಗೂ ಪೂರ್ಣ ಪ್ರಮಾಣದ ಬುಡಕಟ್ಟು ಸಮುದಾಯ, ಅಲಕ್ಷಿತ ಸಮುದಾಯ ಹಾಗೂ ತಳ ಸಮುದಾಯದ ಅಧ್ಯಯನ, ಅಂತರ್‌ಶಿಸ್ತೀಯ ಅಧ್ಯಯನವು

ನಡೆದಿರಲಿಲ್ಲ. ಆದರೆ ಬುಡಕಟ್ಟು ಅಧ್ಯಯನ ವಿಭಾಗವು ಈ ಎಲ್ಲಾ ಕೊರತೆಗಳನ್ನು ನೀಗಿಸುವಲ್ಲಿ ಮಹತ್ವದ ಸಂಶೋಧನಾ ಹೆಜ್ಜೆ ಗುರುತುಗಳನ್ನು ಮೂಡಿಸುತ್ತಿರುವುದು ಸ್ತುತ್ಯರ್ಹವಾದುದು.

'ಕರ್ನಾಟಕದಾದ್ಯಂತ ಪೇಟೆ ಹಾಗೂ ಹಳ್ಳಿಗಳಲ್ಲಿ ನೆಲೆಸಿರುವ ಮೇದರನ್ನು ಸರ್ಕಾರ ಪರಿಶಿಷ್ಟ ಬುಡಕಟ್ಟು ಎಂದು ಗುರುತಿಸಿದೆ. ಆದರೆ ಮೇದ ಬುಡಕಟ್ಟನ್ನು ಕುರಿತ ಸಮಗ್ರ ಅಧ್ಯಯನ ನಡೆದಿಲ್ಲ. ಈ ದೃಷ್ಟಿಯಿಂದ ಸಂಬಂಧಿಕರಿಂದ ಇವರು ನಿರ್ಲಕ್ಷಿಸಲ್ಪಟ್ಟ ವರ್ಗದವರಾಗಿದ್ದಾರೆ ಇದಕ್ಕೆ ಕಾರಣ ಇವರು ಇತರ ಬುಡಕಟ್ಟು ಸಮಾಜದವರು ಹೊಂದಿರುವಷ್ಟು ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಹೊಂದದೆ ಇರುವ, ನಗರ-ಸಂಸ್ಕೃತಿಯೊಡನೆ ಬೆರತು ತಮ್ಮ ಆಚಾರ-ವಿಚಾರಗಳನ್ನು ಮರೆತು ಬಿಟ್ಟಿರಬಹುದೆಂಬ ಸಂಶಯವೇ ಇರಬಹುದು. ಅಲೆಮಾರಿಗಳಾಗಿದ್ದ ಇವರು ಇತರ ಸಂಸ್ಕೃತಿಯ ಜೊತೆ ಬೆರೆತಾಗ ಸಂಸ್ಕೃತಿಯ ಕೊಳ್ಳು ಕೊಡುಗೆ ಅನಿವಾರ್ಯವಾಗಿರಬಹುದು. ಆದರೂ ಮೇದ ಸಮಾಜದಲ್ಲಿ ತಮ್ಮದೇ ಆದ ಸಾಕಷ್ಟು ಆಚರಣೆ-ಸಂಪ್ರದಾಯ, ನಂಬಿಕೆಗಳಿವೆ.'[9]

ಮೇದ ಬುಡಕಟ್ಟಿನ ಬಗ್ಗೆ ಸರ್ಕಾರಿ ವರದಿ, ಪರಿಚಯಾತ್ಮಕ ಲೇಖನಗಳ ಮೂಲಕ ಸ್ಥೂಲ ವಿವರಗಳು ದೊರೆಯುತ್ತವೆ. ಅಂತಹ ಲೇಖನಗಳೆಂದರೆ ಈ. ಥರ್‌ಸ್ಟನ್ ಅವರ The Caste and Tribes of Southern India, Vol-5 ಮತ್ತು ಅನಂತಕೃಷ್ಣ ಅಯ್ಯರ್ ಅವರ The Mysore Tribes and Castes. ಇದಲ್ಲದೆ ಕನ್ನಡ ಜಾನಪದ ವಿಶ್ವಕೋಶದಲ್ಲೂ ಸ್ಥೂಲ ಪರಿಚಯವಿದೆ. The Castes and Tribes of the Nizam's Dominions ನಲ್ಲಿ ಈ ಬುಡಕಟ್ಟನ್ನು ಮೇದಾರ್, ಬುರುಡ ಎಂದು ಹೆಸರಿಸಿ ಪರಿಚಯಿಸಲಾಗಿದೆ. K.S.Singh ಅವರ The Scheduled Tribes. Karnataka State Gazetteer part-1. The Scheduled Tribes-Bombay. The Ethnographical Survey of Mysore, ಮುಂತಾದ ವರದಿಗಳಲ್ಲಿ ಹಾಗೂ ಗೆಜೆಟಿಯರ್‌ಗಳಲ್ಲಿ 'ಮೇದ' ಮತ್ತು ಅದಕ್ಕೆ ಸಮಾನವಾದ ಇತರ ಹೆಸರುಗಳನ್ನು ನಮೂದಿಸಿ ಪರಿಚಯಿಸಲಾಗಿದೆ. ಮೇದ ಸಮುದಾಯದ ಸಾಂಸ್ಕೃತಿಕ ವೀರರೆನಿಸಿರುವ ಮೇದಾರ ಕೇತಯ್ಯನನ್ನು ಕುರಿತು ಶ್ರೀ ಚಂದ್ರಶೇಖರ ಸ್ವಾಮೀಜಿಯವರು ಶ್ರೀ ಕೇತೇಶ್ವರ ಚರಿತೆ ಎಂಬ ಕೃತಿಯನ್ನು ಬರೆದಿದ್ದಾರೆ. ಅದೇ ರೀತಿ ಪ್ರೊ.ಸಿ.ಎಂ. ಧರ್ಮಪ್ಪನವರು, ಚಿತ್ರದುರ್ಗ ಶ್ರೀ ಮುರುಘರಾಜೇಂದ್ರ ಬೃಹನ್ಮಠ ಪ್ರಕಾಶನದ 'ಶರಣ-ಶರಣೆಯರ ಜೀವನ ಚರಿತ್ರೆ' ಗ್ರಂಥದಲ್ಲಿ ಶರಣ ಮೇದಾರ ಕೇತಯ್ಯನವರ ಜೀವನ ಚರಿತ್ರೆಯನ್ನು ವಿವರಿಸಿದ್ದಾರೆ. ಮೇದ ಬುಡಕಟ್ಟನ್ನು ಕುರಿತು ಲೇಖನಗಳಲ್ಲದೆ ಸಮಗ್ರವಾದ ಕೃತಿಗಳು ಹೆಚ್ಚಾಗಿ ಲಭ್ಯವಿರುವುದಿಲ್ಲ. ಮಂಡ್ಯದ ಶ್ರೀ ಆನಂದ ಪರಾಂಡೆ ಎಂಬುವವರು ಮೇದ ವರ್ಗಕ್ಕಾಗಿ ಮೀಸಲಿರುವಂಥ 'ಕೇತೇಶ್ವರ ವಾಣಿ' ಎಂಬ ಕನ್ನಡ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತಿದ್ದಾರೆ. ಇದು ಈ ವರ್ಗದವರ ಹಲವು ಮಾಹಿತಿಗಳನ್ನು ನೀಡುತ್ತದೆ. ಇದೇ ರೀತಿಯಲ್ಲಿ ಕನ್ನಡ

ವಿಶ್ವವಿದ್ಯಾಲಯ ಪ್ರಸಾರಂಗವು ಪ್ರಕಟಿಸುವ 'ಬುಡಕಟ್ಟು ಅಧ್ಯಯನ' ಎಂಬ ಅರ್ಧವಾರ್ಷಿಕ ಸಂಚಿಕೆಯಲ್ಲಿ ಈ ಸಮುದಾಯಕ್ಕೆ ಸಂಬಂಧಿಸಿದ ಕೆಲವೊಂದು ಮಾಹಿತಿಗಳಿವೆ. 2011ರಲ್ಲಿ ಡಾ.ಕೆ. ಉಮೇಶ್ ರವರು 'ಕರ್ನಾಟಕದ ಮೇದ ಬುಡಕಟ್ಟಿನ ಸಮಾಜಶಾಸ್ತ್ರೀಯ ಅಧ್ಯಯನ' (ಚಿಕ್ಕಮಗಳೂರು ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಪಿಎಚ್.ಡಿ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ 'ಮೇದ' ಸಮಾಜದ ಬಹಳಷ್ಟು ಮಾಹಿತಿಗಳನ್ನು ಒಳಗೊಂಡ ಚಿಕ್ಕಮಗಳೂರು ಜಿಲ್ಲೆಯನ್ನು ಕೇಂದ್ರೀಕರಿಸಿದ ಮಹಾಪ್ರಬಂಧವಾಗಿದೆ.

ಮೇದರ ಪೌರಾಣಿಕ ಹಾಗೂ ಚಾರಿತ್ರಿಕ ಹಿನ್ನೆಲೆ:

ಈ ಮೇದ ಬುಡಕಟ್ಟಿನವರು ಆಂಧ್ರ, ತಮಿಳುನಾಡಿಗೆ ಸಮೀಪದ ಕರ್ನಾಟಕದ ಗಡಿ ಪ್ರದೇಶಗಳಿಂದ ಬಂದವರು. ಹಾಗಾಗಿ ಇವರು ತಮ್ಮ ಬುಡಕಟ್ಟಿನ ಹುಟ್ಟಿನ ಬಗ್ಗೆ ಹಲವು 'ಪೌರಾಣಿಕ' ಹಿನ್ನೆಲೆಗಳನ್ನು ಹೇಳುತ್ತಾರೆ. ಇದಕ್ಕೆ ಪೂರಕವಾಗಿ "ಮೇದ, ಮೇದರ್ಕಳ್, ಗೌರಿಗ, 'ಗೌರಿ ಮಕ್ಕಳು' ಎಂಬ ಹೆಸರು 'ಗಂಗೆ ಮಕ್ಕಳು' ಎಂಬ ಜಾತಿಯ ಹೆಸರಿಗೆ ಅನ್ವಯಿಸುವಂಥದ್ದು."[10]

ಪೌರಾಣಿಕ ಕಥೆಯ ಆಶಯದಂತೆ 'ಗೌರಿಕರ' ಹಿನ್ನೆಲೆ ಹೀಗಿದೆ. ಮಹಾಭಾರತದಲ್ಲಿ ಪ್ರಸಿದ್ಧನಾದ ವಿದುರನ ಮೂಲಕ್ಕೆ ಇವರು ಸೇರಿದವರು. ಈ ಕಥೆಯ ಮೂಲ ಬಿದಿರು ಮತ್ತು ವಿದುರ ಎಂಬ ಹೆಸರಿನ ಧ್ವನಿ ಸಾಮ್ಯವನ್ನು, ಹೋಲಿಕೆಯನ್ನು ತೋರಿಸುತ್ತದೆ ಮತ್ತು ಬಿದುರು ಅವರ ವೃತ್ತಿಯ ಮುಖ್ಯ ವಸ್ತುವಾಗಿಯೂ ಕಂಡು ಬರುತ್ತದೆ. 'ಗವರಿಗ' ಎನ್ನುವುದು ಮುಲತಃ 'ಕವರಿಗ' ಆಗಿದ್ದು ಅದಕ್ಕೆ ಬಿದಿರು ಸಿಗಿಯುವವನು ಎಂದರ್ಥ. ಕಾಲಕ್ರಮದಲ್ಲಿ ಈ ಪದ ತಮ್ಮನ್ನು ತಾವು ಗೌರಿ ಮಕ್ಕಳೆಂದು ಭಾವಿಸಲು ಕಾರಣವಾಗಿದೆ.

ಇವರಲ್ಲಿ ಪ್ರಚಲಿತವಿರುವ ಇನ್ನೊಂದು ಕಥೆಯಂತೆ ಪಾರ್ವತಿಗೆ ಮೊರಗಳನ್ನು ಮಾಡಲು ಸೃಷ್ಟಿಸಲ್ಪಟ್ಟ ವ್ಯಕ್ತಿಯ ಪರಂಪರೆಗೆ ಇವರು ಸೇರಿದವರು. ಈ ಮೂಲ ವ್ಯಕ್ತಿ ಶಿವನ ಆಸ್ಥಾನದಲ್ಲಿದ್ದ ಭಕ್ತಾಗೋಸರ, ಶಿವನ ವಾಹನವೂ ಆದ ನಂದಿದೇವ. ಈ ನಂದಿದೇವನು ಕಬ್ಬಿಣದ ಕಾಳುಗಳನ್ನು ತಿಂದು ಮೆಲುಕು ಹಾಕುತ್ತಾ ಇರುವಾಗ ಈ ನಂದಿಯ ಬಾಯಿಯಿಂದ ಹುಟ್ಟಿದವನು 'ಮೂಲ ಮೇದ', ಅನಂತರ ಶಿವನು ತನ್ನ ಮೈಮೇಲಿನ ಹಾವುಗಳನ್ನು ಬಿದಿರು ಬೆತ್ತಗಳನ್ನಾಗಿ ಸೃಷ್ಟಿಸಿದನು. ಆ ವ್ಯಕ್ತಿಯ ಕೌಶಲ್ಯಕ್ಕೆ ಸಂಪ್ರೀತನಾದ ಶಿವನು ಒಂದು ಬುಟ್ಟಿಯ ತುಂಬಾ ಇವನಿಗೆ ಬೆಲೆ ಬಾಳುವಂಥ ವಜ್ರ ವೈಡೂರ್ಯಗಳನ್ನು ಪ್ರತಿಫಲವಾಗಿ ನೀಡಿದನು. ಆದರೆ ಈ ಮೂರ್ಖ ವ್ಯಕ್ತಿಗೆ ವಜ್ರ ವೈಡೂರ್ಯಗಳ ಬೆಲೆಅರಿಯದೇ ಆ ಸಂಪತ್ತಿನ ಅದೃಷ್ಟದಿಂದ ದೂರವಾದನು. ಇದರಿಂದ ಬೇಸರಗೊಂಡ ದೇವತೆಗಳು ಇವನಿಗೆ ತನ್ನ ವೃತ್ತಿಯಲ್ಲಿ ಹಿಡಿಗೂಳು ಮಾತ್ರ ಸಿಗುವಂತೆ ವಿಧಿಸಿದರು.

ತಮ್ಮ ಮೂಲವನ್ನು ಕುರಿತಂತೆ ಇನ್ನೂ ಕೆಲವು ಪ್ರದೇಶದ ಮೇದರಲ್ಲಿ ಈ ರೀತಿಯ ನಂಬಿಕೆಗಳಿವೆ. ಈ ಸಮುದಾಯದ ಹಿರಿಯ ಮುಖಂಡರನ್ನು ಬೇಟಿ ಮಾಡಿದಾಗ ಅವರು ಈ ರೀತಿಯ ಅನಿಸಿಕೆಯನ್ನು ವ್ಯಕ್ತಪಡಿಸಿದರು.

ಹನ್ನೆರಡನೇ ಶತಮಾನದಲ್ಲಿ ಬಸವ ಕಲ್ಯಾಣದಲ್ಲಿ ಶ್ರೀ ಬಸವೇಶ್ವರರ ಅನುಭವ ಮಂಟಪದಲ್ಲಿ ಶಿವಶರಣ ಮೇದಾರ ಕೇತೇಶ್ವರರು ಇದ್ದುದು ತಿಳಿಯುತ್ತದೆ. ಇವರು ನಿತ್ಯ ಅಡವಿಯಿಂದ ಬಿದಿರು ತಂದು ಬುಟ್ಟಿ, ಮೊರ, ತಟ್ಟೆಗಳ ಕಾಯಕ ಮಾಡಿ ಅದರಿಂದ ಬಂದ ಉತ್ಪಾದನೆಯಲ್ಲಿ ಅಂದಿನ ಜೀವನಕ್ಕೆ ತನ್ನ ಕುಟುಂಬಕ್ಕೆ ಬೇಕಾದಷ್ಟು ಇಟ್ಟುಕೊಂಡು ಹೆಚ್ಚಿನದನ್ನು ಶ್ರೀ ಬಸವಣ್ಣನವರ ನಿತ್ಯ ಅನ್ನದಾಸೋಹಕ್ಕೆ ಸಮರ್ಪಣೆ ಮಾಡುತ್ತಿದ್ದರು. ಇವರ ಕಾಯಕದಿಂದ ಮೇದಾರ ಎಂದು ಬಂದಿದೆ. ಮೇದಾರ ಜನಾಂಗದ ಮೂಲ ಪುರುಷರೇ ಇವರಾಗಿದ್ದಾರೆ. ಅಲ್ಲಿಂದ ಇವರ ಜನಾಂಗದ ಸಂತತಿ ಬೆಳೆದು ಬಂದಿದೆ. ಈ ಸಮಾಜದವರು ಇಂದಿಗೂ ಶಿವಶರಣ ಮೇದಾರ ಕೇತೇಶ್ವರರ ಜಯಂತಿಯನ್ನು ಆಚರಿಸುತ್ತಿರುವುದು ಕಂಡುಬರುತ್ತದೆ.

ಕೇತಯ್ಯನ ವಿಚಾರವಾಗಿ ಶಿವಶರಣರ ಕಥಾರತ್ನಕೋಶ ಹಾಗೂ ಭೀಮ ಕವಿಯ ಬಸವಪುರಾಣ, ಶಂಕರಲಿಂಗ ರಗಳೆ, ಬಸವೇಶ್ವರ ಕಥಾಸಾಗರ ಮುಂತಾದ ಗ್ರಂಥಗಳಲ್ಲಿ ವಿವರಗಳು ಲಭ್ಯವಿದೆ. ಇಲ್ಲಿ ಈತನಿಗೆ ಕೇತ, ಕೇತಿದೇವ, ಕೇತಯ್ಯ, ಕೇತಿತಂದೆ, ಕೇತದೇವಯ್ಯ ಎಂಬ ಪರ್ಯಾಯ ಹೆಸರುಗಳಿಂದ ಕರೆಯುತ್ತಿದ್ದರು.

ಈತನ ಕಾಲ ಸುಮಾರು ಕ್ರಿ.ಶ. 1160 ಎಂದು ಹೇಳಲಾಗಿದೆ. ಈತನ ಜನ್ಮಸ್ಥಳ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಬೇಲೂರು. ಈತನು ತನ್ನ ಕಾಯಕವನ್ನು ವಚನ ರೂಪದಲ್ಲೆ ಹಾಡಿ ಕಾಯಕವೇ ಕೈಲಾಸವೆಂದು ತೋರಿಸಿದ ಮಹಾಪುರುಷ. ವಚನವೊಂದರಲ್ಲಿ

ಒಂದು ಬಿದಿರಿಂಗೆ ಕವೆ ಮೂರು, ಆ ಕವೆಯೊಳಗೆ
ಲಕ್ಷ ಬಿದಿರು
ಮೂರು ಕವೆಯ ಕೊಚ್ಚಿಸಿ ಬಿಲ್ಲ ಸಿಕ್ಕ ಬಿಡಿಸಿ
ಸೀಳಿದ ಬಿದಿರ ಹೊರೆಹೊರೆಯಲಿ ನೆಯಿದೆ
ತೊಟ್ಟಿಲ ಸಂದ ಕಾಣದಂತೆ ನಾಲ್ಕು ಕಾಲನಿಕ್ಕಿ
ಅಂದಸವಾದ ತೊಟ್ಟಿಲ ದಂಡೆಯನಿಕ್ಕಿ ಕಟ್ಟುವುದಕ್ಕೆ
ಶ್ರುತ ದೃಷ್ಟಿವೆಂಬೆರಡು ದಾರದಲ್ಲಿ ತೊಟ್ಟಿಲ ಕಟ್ಟಿ
ಗೌರವೇಶ್ವರ ಲಿಂಗಕ್ಕೆ
ಹುಟ್ಟುಗೆಟ್ಟು ಹೋಗೋ ಎಂದು ಜೋಗುಳವಾಡಿದೆ.

ಕೇತಯ್ಯನ ಶರಣ ಭಾವ ಇಲ್ಲಿ ಮಾರ್ಮಿಕವಾಗಿ ವ್ಯಕ್ತವಾಗಿದೆ. ತನ್ನ ವೃತ್ತಿಯ ಹಿನ್ನೆಲೆಯಲ್ಲಿ ಕಾಯಕದ ಪ್ರಾಮುಖ್ಯ ಹಾಗೂ ಭಕ್ತಿಯ ಪ್ರಾಮುಖ್ಯವನ್ನು ಕೇತಯ್ಯನು ಅಭಿವ್ಯಕ್ತಿಸಿದ್ದಾನೆ.

ಮೇದ ಸಂಗಡದ ಶರಣನೂ, ಧೀರನೂ, ಶಿವಭಕ್ತನೂ ಆದ ಮೇದರ ಕೇತಯ್ಯ ಬಸವಣ್ಣನವರ ಅನುಭವ ಮಂಟಪದಲ್ಲಿ ಅವಕಾಶ ಪಡೆದಿದ್ದ ವಚನಕಾರ. ಮಡಿವಾಳ ಮಾಚಯ್ಯ, ನಗೆಮಾರಿ ತಂದೆ ಶಿವಲೆಂಕ ಮಂಚಣ್ಣ, ತಳವಾರ ರಾಮಿದೇವ, ಕೀಲಾರ ಭೀಮಣ್ಣ, ಢಕ್ಕೆಯ ಬೊಮ್ಮಣ್ಣ, ಆಯ್ದಕ್ಕಿ ಮಾರಯ್ಯ, ಮೋಳಿಗೆಯ ಮಾರಯ್ಯ, ನುಲಿಯ ಚಂದಯ್ಯ, ಹೊಡೆಹುಲ್ಲು ಬಂಕಣ್ಣ, ತುರುಗಾಹಿ ರಾಮಣ್ಣ, ಗುಪ್ತ ಮಂಚಣ್ಣ, ಶಿವದಾಸಿಮಯ್ಯ, ಕಲುಕಂಣಿಯ ಕಾಯಮ್ಮ, ಕೊಟ್ಟಣದ ಸೋಮವ್ವೆ, ಕಾಮಾಟ ಭೀಮಣ್ಣ, ಕಿನ್ನರ ಬ್ರಹ್ಮಯ್ಯ, ಶಾರ್ದೂಲ ಸಂಗಯ್ಯ, ಬ್ರಹ್ಮರೂಪಿ ಚೌಡಯ್ಯ, ಮಾದಿಗರ ಹರಳಯ್ಯ, ಡೋಹಾರ ಕಕ್ಕಯ್ಯ ಇವರ ಸಮಕಾಲೀನನಾಗಿ ಹಲವರಿಗೆ ಮಾರ್ಗದರ್ಶನ ಮಾಡುತ್ತಾ, ಕಾಯಕವೇ ಕೈಲಾಸವೆಂದು ನಂಬಿ ಬಿದಿರು ಕಾರ್ಯದಲ್ಲಿ ನಿರತನಾಗಿ ವಚನಗಳನ್ನು ಬೋಧಿಸಿ ಹಲವು ಪವಾಡಗಳನ್ನು ಮೆರೆದವನು.

ಮೇದರ ಕೇತಯ್ಯನ ಬಾಲ್ಯ ಜೀವನದ ಬಗ್ಗೆ ತಿಳಿಯುವುದಿಲ್ಲ. ಈತನ ವಚನದ ಅಂಕಿತ ಗೌರೇಶ್ವರ. ಗರವೇ ಎಂದರೆ ಬುಟ್ಟಿ ಹೆಣೆಯುವವರೆಂದೇ ಅರ್ಥ. ಸಾಮಾನ್ಯ ವಚನಕಾರನಾದ ಈತ ಅತ್ಯಂತ ಸ್ಥಿತಪ್ರಜ್ಞನಂತೆ ಮಾತನಾಡುತ್ತಾನೆ. ಬಿದಿರನ್ನು ಹೆಣೆಯುವ ಕ್ರಿಯೆಯ ಪ್ರತಿಮೆಯ ಮೂಲಕ ತನ್ನ ಆಧ್ಯಾತ್ಮಿಕ ಅನುಭವವನ್ನು ಹೇಳಿಕೊಂಡಿದ್ದಾನೆ. ಶಿವಶರಣ ಮೇದಾರ ಕೇತಯ್ಯ ನಿತ್ಯವೂ ಸಾಯಂಕಾಲ ಅನುಭವ ಮಂಟಪಕ್ಕೆ ಹೋಗಿ ಅಲ್ಲಿ ನಡೆಯುವ ಶರಣರ ಚರ್ಚೆಯಲ್ಲಿ ಭಾಗವಹಿಸುತ್ತಿದ್ದನು. ಕೇತಯ್ಯ ನಿತ್ಯವೂ ತನ್ನ ಹೆಂಡತಿ ಸಾತೆವ್ವ ಹಾಗೂ ಪುತ್ರ ಲಿಂಗಯ್ಯನ ಸಹಿತ ಅರಣ್ಯಕ್ಕೆ ಬಿದಿರು ತರಲು ಹೋಗಿ ಬರುತ್ತಿದ್ದನು. ಅಲ್ಲಿ ಸಮೀಪದ ಹುತ್ತದ ಬುಡದಲ್ಲಿ ಬಿದಿರು ಮೆಳೆಯಿದ್ದಿತು. ಇದನ್ನು ಕೇತಯ್ಯನು ಗೌರವೇಶ್ವರ ವಾಸಸ್ಥಾನವೆಂದೇ ತಿಳಿದಿದ್ದನು. ಬಿದಿರಿನ ತುದಿಯಲ್ಲಿ ಒಂದು ಗಂಟೆ ಕಟ್ಟಿದ್ದು ಅದನ್ನು ಪಕ್ಷಿಗಳು ಬಾರಿಸುತ್ತಿದ್ದವು. ಈ ವಿಚಾರ ಕೇತಯ್ಯನ ಭಕ್ತಿಗೆ ಕಾರಣವಾಗಿತ್ತು.

ಒಂದು ಕಾರ್ಯಕ್ಕೆ ಹೋಗುವ ಸಂದರ್ಭದಲ್ಲಿ ಹುತ್ತದ ಗೌರವೇಶ್ವರನಿಗೆ ಸಮೀಪಿಸುತ್ತಿರುವಾಗ ಮಂತ್ರಿ ಮಂಚಣ್ಣ ಇವನ ಭಕ್ತಿಯನ್ನು ಟೀಕಿಸುತ್ತಾನೆ. ನಿಮ್ಮ ಗೌರವೇಶ್ವರನಿಗೆ ಗೊರಲಿಯ ಮನೆಯೇ ವಾಸಸ್ಥಾನವೇ ಎಂದು ವ್ಯಂಗ್ಯವಾಡುತ್ತಾನೆ. ಇದನ್ನು ಮೂಢನಂಬಿಕೆ ಎನ್ನುತ್ತಾನೆ. ಆದರೆ ಕೇತಯ್ಯ ಶಿವನ ಭಕ್ತಿಗೆ ತರ್ಕ ಮುಖ್ಯವಲ್ಲವೆಂದೇ ಹೇಳುತ್ತಾನೆ. ಪಕ್ಷಿಗಳು ಗೌರವೇಶ್ವರನಿಗೆ ಗಂಟೆ ಬಾರಿಸುವುದನ್ನು ತೋರಿಸುತ್ತಾನೆ. ಮಂಚಣ್ಣ ಪಕ್ಷಿಗಳಿಗೇನು ದೇವರ ಬಗ್ಗೆ ತಿಳಿಯುತ್ತದೆ. ಹಾರಿ ಬಂದು ಕುಳಿತಾಗ ಗಂಟೆ ಬಾರಿಸುವುದನ್ನು ಭಕ್ತಿ ಎಂದು ಹೇಳಲಾಗುವುದೇ ಎಂದು ಹಾಸ್ಯ ಮಾಡುತ್ತಾನೆ. ಈ ಮಾತಿನಿಂದ ಕೇತಯ್ಯನ ಮನಸ್ಸಿಗೆ ನೋವಾಗುತ್ತದೆ. ಮಂಚಣ್ಣನ ಟೀಕೆ ಮುಂದುವರೆಯುತ್ತಲೇ ಸಾಗುತ್ತದೆ.

ಒಮ್ಮೆ ಬಿಜ್ಜಳನ ಮಗ ಸಿಂಘಣ, ಮಂಚಣ್ಣನ ಮಗ ಮಹಾವೀರರು ಧನುರ್ವಿದ್ಯೆಯ ಪ್ರಯೋಗದಲ್ಲಿ ತೊಡಗಿರುತ್ತಾರೆ. ಈ ಕಡೆ ಮಂತ್ರಿ ಮಂಚಣ್ಣ ಗಂಟೆ ಬಾರಿಸುತ್ತಿರುವ ಪಕ್ಷಿಗೆ

ಬಾಣ ತೊಟ್ಟಿರುತ್ತಾನೆ. ಮಂತ್ರಿಯ ಬಾಣ ಹಕ್ಕಿಗೆ ತಾಗುವುದಕ್ಕೂ ಮಂತ್ರಿ ಮಗನ ತಲೆಯ ಮೇಲಿನ ಹಣ್ಣಿಗೆ ಗುರಿಯಿಟ್ಟು ಬಾಣ ತಲೆಯನ್ನೇ ಕತ್ತರಿಸುವುದಕ್ಕೂ ಸರಿಯಾಗುತ್ತದೆ. ಇದನ್ನು ದಿವ್ಯ ದೃಷ್ಟಿಯಿಂದ ಕೇತಯ್ಯ ತಿಳಿದರೂ, ಯಾರನ್ನೂ ರಕ್ಷಿಸಲಾಗುವುದಿಲ್ಲ. ಪಕ್ಷಿ ಕೆಳಗುರುಳಿದ ಕಾಲಕ್ಕೆ ಮಂತ್ರಿ ಮಗನ ತಲೆಯೂ ಉರುಳಿದಾಗ ಕೇತಯ್ಯ ಮಂತ್ರಿಗೆ ಆಪತ್ತೊದಗಿದೆ ನೀವು ಬೇಗ ಹೋಗಿರೆಂದು ಅಂಗಲಾಚುತ್ತಾನೆ. ಇದಕ್ಕೂ ಶಿವನ ಮರ್ಯಾದಿ ಉಳಿಸಲು ಈ ಆಟವೇ ಎಂದು ಮಂತ್ರಿ ನಸುನಗುತ್ತಾನೆ. ಇದನ್ನು ನೋಡಿ ಕೇತಯ್ಯ ಹಾಡುತ್ತಾ, ಕಾರಣ ಹರನ ನಟ ನಾಟಕದ ಲೀಲೆಯ

> ಹರನೇ ಬಲ್ಲವದಂತು ಶರಣರೇ ತಿಳಿಯುವರಲ್ಲವೆಂದೂ,
> ಮೂಲ ಹುಸಿಲಾಭದಿಟವೇ ನಿರೀಕ್ಷೆಣೆಯು ಇಲ್ಲದೆ
> ಪರೀಕ್ಷೆಣೆಯು ಉಂಟೆ ಈ ಅವಸರದಂಗವ ಗೌರವೇಶ್ವರ

ನೀ ಬಲ್ಲೆ ಎಂದು ಹಾಡುತ್ತಾ ಸತ್ತ ಹಕ್ಕಿಗೆ ಭಸ್ಮವನ್ನು ಹಚ್ಚಿದಾಗ ಆ ಹಕ್ಕಿ ಕಣ್ದೆರೆದು ಹಾರಿ ಹೋಗುತ್ತದೆ. ಮಂಚಣ್ಣನು ಏನೂ ಅರ್ಥವಾಗದೆ ಹೋಗುತ್ತಾನೆ.

ಮಂಚಣ್ಣನ ಮಗನ ಸಾವನ್ನು ತಿಳಿದು ಧಾವಿಸಿ ಬಂದು ರೋಧಿಸಿ ಪತ್ನಿ ಪ್ರಭಾವತಿದೇವಿ ಹೊರಳಾಡುತ್ತಾಳೆ. ಶರಣರನ್ನು ನಿಂದಿಸಿದ ಪತಿಯ ಅವಿವೇಕಕ್ಕೆ ಮರುಗುತ್ತಾಳೆ. ಇದಕ್ಕೆ ಅವಳಿಗೆ ನಿನ್ನ ಸತ್ಯನಿಷ್ಟ ಶರಣರು ಮಗನನ್ನು ಬದುಕಿಸುವರೆಂದು ವ್ಯಂಗ್ಯವಾಡುತ್ತಾನೆ. ನಂತರ ಶವ ಸಮೇತ ಅನುಭವ ಮಂಟಪಕ್ಕೆ ಬರುತ್ತಾಳೆ. ಮಗನ ಪ್ರಾಣ ಬೇಡಿದಾಗ, ಆಗ ಕೇತಯ್ಯನನ್ನು ಮಾರುಹೋಗುವಂತೆ ಬಸವಾದಿಗಳು ತಿಳಿಸುತ್ತಾರೆ. ಶರಣರೂ ಬಸವರೂ ಅವಳ ಹಿಂದೆ ಬರುತ್ತಾರೆ. ಮಂಚಣ್ಣನೂ ಬಂದು ದೂರದಲ್ಲಿ ನಿಲ್ಲುತ್ತಾನೆ. ಕೇತಯ್ಯನು ಮಡದಿಯನ್ನು ಕರೆಯಿಸಿಕೊಂಡು ಈ ಮಂತ್ರಿ ಮಗನ ಪ್ರಾಣವುಳಿಸಲು ನಿನ್ನ ಮಗನ ಪ್ರಾಣ ನೀಡಬೇಕಾಗುತ್ತದೆಂದನು.

ಕೇತಯ್ಯನ ಮಗ ಲಿಂಗಣ್ಣ ಶರಣರ ಉಳಿವಿಗಾಗಿ ಪ್ರಾಣ ಕೊಡಲು ಸಿದ್ಧನಾದನು. ಆದರೆ ಲಿಂಗಣ್ಣನನ್ನು ಬಲಿ ಪಡೆಯಲು ಪ್ರಭಾವತಿದೇವಿಯು ಸಮ್ಮತಿಸಲಿಲ್ಲ. ಆದರೆ ಕೇತಯ್ಯ ಶರಣರ ಸಂಗ ನಿನ್ನ ಮಗನಿಗೆ ದೊರೆಯಬೇಕೆಂದು ತಿಳಿಸಿದನು. ಲಿಂಗಣ್ಣ ಶರಣರು ಜಯ ಜಯಕಾರ ಮಾಡಿ ಗೌರವೇಶ್ವರನಿಗೆ ಪೊಡಮಡುವ ಕಾಲಕ್ಕೆ ಪ್ರಾಣ ಹಾರಿ ಹೋಗಿತ್ತು. ಮಂತ್ರಿ ಮಗ ಮಹಾವೀರನು ಚೈತನ್ಯವಂತನಾಗಿ ಎದ್ದು ನಿಂತನು. ಲಿಂಗಯ್ಯನು ಪ್ರಾಣ ಬಿಡುವ ಕಾಲಕ್ಕೆ ಜಂಗಮ ಪ್ರಾಣಿಯಾದ ಬಸವಣ್ಣನು ಪ್ರಾಣಬಿಟ್ಟಿತು. ಈ ರೀತಿಯಾದದ್ದು ತುಂಬಾ ದುಃಖಕ್ಕೆ ಕಾರಣವಾಯಿತು. ಪ್ರಭಾವತಿ ತಾನು ಶರಣ ದ್ರೋಹಿ ಎಂದು ಅಳತೊಡಗಿದಳು. ಶರಣರಿಗೆಲ್ಲಾ ಪುನಃ ಘೋರವಾದ ಲಿಂಗಣ್ಣ-ಬಸವಣ್ಣರ ಸಾವು ಸಹಿಸಲಸಾಧ್ಯವಾಯಿತು. ಆಗ ಮಡಿವಾಳಯ್ಯನು ಶಿವನನ್ನು ಕುರಿತು ಈ ಕ್ಷಣಕ್ಕೆ ಇವರಿಬ್ಬರ ಪ್ರಾಣ ಮರಳಿದರೆ ಸರಿ, ಇಲ್ಲದಿದ್ದರೆ ನನ್ನ ಶಿರವರಿದುಕೊಳ್ಳುತ್ತೇನೆಂದು ಖಡ್ಗವೆತ್ತಿದಾಗ ಅವರೀರ್ವರ ಪ್ರಾಣಗಳು

ಮರಳಿದವು. ಶರಣರು ಜಯಕಾರ ಮಾಡಿದರು. ಇದನ್ನು ಕಂಡ ಮಂಚಣ್ಣ ಆ ಜಾಗದಿಂದ ಮರೆಯಾದನು.

ಒಮ್ಮೆ ಮಂಚಣ್ಣ ತನ್ನ ಮಾತ್ಸರ್ಯ ಮುಂದುವರೆಸುವ ಸಲುವಾಗಿ ಕಾರಗೃಹದಲ್ಲಿದ್ದ ಒಬ್ಬ ಕಳ್ಳನಿಗೆ ತಲೆಬೋಳಿಸಿ ಕಾವಿತೊಡಸಿ ಶರಣರನ್ನಾಗಿ ಮಾಡಿ ಉರಿಲಿಂಗನೆಂದು ಹೆಸರಿಟ್ಟು ಕೇತಯ್ಯನ ಮನೆಗೆ ದಾಸೋಹಕ್ಕೆ ಕಳುಹಿಸಿದನು. ಆದರೆ ಆತ ಅಭಯಕೊಟ್ಟರೆ ಪ್ರಸಾದ ಸ್ವೀಕರಿಸಿ ಪುಣ್ಯವನ್ನು ಧಾರೆ ಎರೆಯಲು ಬೇಡುತ್ತಾನೆ. ಕೇತಯ್ಯ ಹಾಗೆಯೆ ಧಾರೆ ಎರೆದು ಶಿವಪೂಜೆ ಮಾಡಲು ಹೇಳುತ್ತಾನೆ. ಕಳ್ಳನಿಗೆ ತನ್ನ ಕುತ್ತಿಗೆಯಲ್ಲಿ ಕಟ್ಟಿಕೊಂಡಿರುವ ಕಲ್ಲನ್ನು ಕಂಡರೆ ಎಂದು ಭಯದಿಂದ ಬಿಚ್ಚಿ ನೋಡಿದಾಗ ಅಲ್ಲಿನ ಕಲ್ಲು ಲಿಂಗವಾಗಿರುತ್ತದೆ. ಇದನ್ನು ನೋಡಿದ ಕಳ್ಳ ತನ್ನ ವೃತ್ತಾಂತವನ್ನು ಹೇಳಿ ಶರಣ ಉರಿಲಿಂಗನೆಂದು ಹೆಸರು ಗಳಿಸುತ್ತಾನೆ.

ಒಂದು ಸಾರಿ ಶರಣ ಬಸವಣ್ಣನ ವೇಷದಲ್ಲಿ ಬಂದ ಶಿವನು ದಾಸೋಹಕ್ಕಾಗಿ ಮುತ್ತು, ರತ್ನ ಕೊಡುತ್ತಾನೆ. ಆದರೆ ಸಾತೆವ್ವ ಸ್ವೀಕರಿಸಲಿಚ್ಚಿಸಲಿಲ್ಲ. ಬಸವಣ್ಣನು ಆ ಸಂಪತ್ತನ್ನು ಅವರ ಮನೆಯಲ್ಲೆ ಸುರಿದು ಹೋಗುತ್ತಾನೆ. ಕೇತಯ್ಯ ಬಂದು ವಿಚಾರ ತಿಳಿದು ಬಸವಣ್ಣನ ಮನೆಗೆ ಹೋಗಿ ಹಣವನ್ನು ಚೆಲ್ಲುತ್ತಾನೆ. ಆಗ ಬಸವಣ್ಣ ನಾನು ಹಣ, ಸಂಪತ್ತು ತಂದು ಕೊಟ್ಟವನಲ್ಲ. ನನ್ನ ವೇಷದಲ್ಲಿ ಶಿವನೇ ಈ ಕಾರ್ಯವೆಸಗಿದ್ದಾನೆಂದು ತಿಳಿಸುತ್ತಾನೆ. ಕೇತಯ್ಯ ಕ್ಷಮೆಯಾಚಿಸಿ ದಾಸೋಹ ಮಾಡಿ ಪರಧನದ ಪಾಪವನ್ನು ಕಳೆದುಕೊಳ್ಳುತ್ತಾನೆ.

ಒಮ್ಮೆ ಕೇತಯ್ಯನು ಬಿದಿರು ಕಡಿಯುವ ಸಂದರ್ಭದಲ್ಲಿ ಇವನ ಪರೀಕ್ಷೆಯ ಮೂಲಕ ಕೀರ್ತಿಯನ್ನು ಹರಡಲು ಶಿವನು ಇಚ್ಛಿಸಿದನು. ಕೇತಯ್ಯ ಬಿದಿರು ಕಡಿಯುವಾಗ ಮುತ್ತು, ರತ್ನಗಳು ಸುರಿಯಲಾರಂಭಿಸಿತು. ಆತ ಇದೇನೋ ಹುಳ ಹತ್ತಿರ ಬೇಕೆಂದು ಬೇರೆ ಬಿದಿರಿಗೆ ಹೋದರೆ ಅಲ್ಲೂ ಹಾಗೇ ಆಯಿತು. ಮತ್ತೆ ಬಿದಿರಿನ ತುದಿಯನ್ನು ಹತ್ತಿ ಕಡಿಯುತ್ತಿರಲು ಭಯಂಕರ ಗಾಳಿ ಬೀಸತೊಡಗಿದ್ದು, ಬಿದಿರು ಮುರಿದು ಕೇತಯ್ಯ ಕೆಳಗೆ ಬೀಳಲು ಬಿದಿರು ಬೆನ್ನಿಗೆ ನಾಟಿ ಹೊರ ಕಾಣಿಸಿತು. ಆದರೆ ಕೇತಯ್ಯ ದಾಸೋಹಕ್ಕೆ ಅವಕಾಶಕೊಡೆಂದು ಶಿವನಲ್ಲಿ ಧ್ಯಾನಿಸತೊಡಗಿದನು. ಜಂಗಮ ದಾಸೋಹಕ್ಕೆ ಮೊದಲೇ ಪ್ರಾಣ ಒಯ್ದರೆ ಜಂಗಮನಾಣೆ ಎಂದು ನಾಟಿದ್ದ ಬಿದಿರು ಕತ್ತರಿಸಿ ಒಗೆದು ಮನೆಗೆ ಬಂದು ಅರ್ಚನೆ ಮಾಡಿ ದಾಸೋಹ ಮಾಡಿದನು.

ತಾನು ಲಿಂಗೈಕ್ಯವಾಗುವ ವಿಚಾರವನ್ನು ಕೇತಯ್ಯ ಎಲ್ಲರಿಗೂ ತಿಳಿಸಿದನು. ಪದ್ಮಾಸನ ಹಾಕಿ ಕೈಯಲ್ಲಿ ಲಿಂಗ ಹಿಡಿದು ಧ್ಯಾನ ಮಗ್ನನಾದಂತೆ ಆತನ ಪ್ರಾಣ ಲಿಂಗೈಕ್ಯವಾಯಿತು. ಎಲ್ಲಾ ಶರಣರು ಮನೆಗೆ ಬಂದರು. ಆದರೆ ಮಾಚಯ್ಯನು ಕೇತಯ್ಯ ಮಡಿದರೂ ಬಸವಣ್ಣ ಬದುಕಿದ್ದರೆ ನಾನಲ್ಲಿಗೆ ಬರುವುದಿಲ್ಲವೆಂದನು. ಈ ವಿಚಾರ ಹೇಳಿ ಬರುವಾಗ ಲಿಂಗ ಪ್ರಾಣಿಯಾದ ಬಸವಣ್ಣನ ಪ್ರಾಣವೂ ಹಾರಿತು. ಮಾಚಯ್ಯನವರಿಗೆ ಈ ವಿಷಯ ತಿಳಿದು, ಈ ದ್ರೋಹಕ್ಕೆ ಸಿಟ್ಟುಗೊಂಡು ಇವರೀರ್ವರ ಪ್ರಾಣ ಮರಳದಿದ್ದರೆ ಶರಣರು ಶಿವನನ್ನು

ದೂರವಿರಿಸಬೇಕೆಂದು ವೀರ ಘೋಷಣೆ ಮಾಡುತ್ತಿರುವಾಗ ಅವರ ಪ್ರಾಣಗಳು ಮರಳಿದವು. ಮತ್ತೆ ಕೇತಯ್ಯ, ಬಸವಣ್ಣರೀರ್ವರೂ ಬದುಕಿದರು. ಕೇತಯ್ಯನ ಮಹಿಮೆ ಜಗತ್ತಿಗೆಲ್ಲಾ ತಿಳಿಯತೊಡಗಿತು. ಮತ್ತೆ ಶರಣರು ಕೇತಯ್ಯನನ್ನು ದಾಸೋಹಕ್ಕೆ ಸಿದ್ಧ ಮಾಡಿದರು. ಹೀಗೆ ಕೇತಯ್ಯ ಹಲವಾರು ವರುಷ ದಾಸೋಹ ಹಾಗೂ ಬಿದಿರು ಕಾಯಕ ನಡೆಸಿ, ಶರಣ ಮಾರ್ಗದಂತೆ ನಡೆದು ಐಕ್ಯ ಸ್ಥಿತಿಗೇರಿ ಶಿವನಲ್ಲಿ ಬೆರೆತನು.

ತನ್ನ ಜೀವನದ ದಾಸೋಹಕ್ಕಾಗಿ ಕೇತಯ್ಯ ಹರಮತದ ಹಾಡುಗಳ ಮರದೊಳಗೆ ಹೆಣೆಹೆಣೆದು ಕರಡಿಗೆಯ ತುಂಬಿ ಕಲ್ಯಾಣಪೇಟೆಯಲ್ಲಿ ಶರಣರಿಗೆ ಮಾರುತ್ತಾನೆ. ಈ ಶರಣನ ಕರಸ್ಪರ್ಶಕ್ಕಾಗಿ ಕಾತರಿಸುತ್ತಿದ್ದವು ಎಂಬತೆ "ಅಡವಿಯೊಳ್ ಬಿದಿರು ಬಲು ಬೆಳೆದು ಕೇತಯ್ಯನಿಗೆ ಸಡಗರದಿ ತೂಗಿ ಕರೆವುದು!" ಸರಿ ಕೂಗಿ ಕರೆವ ಬಿದಿರು ತರುವುದು, ಬುಟ್ಟಿ ಹೆಣೆಯುವುದು, ಮಾರಿ ದಾಸೋಹ ನಡೆಸುವುದು. ಸತ್ಯಸತಿ ಸಾತೆವ್ವ ಪತಿಗೆ ತಕ್ಕ ಸತಿ, ಪತಿಗೆ ಕಾಯಕ ಮಾಡಿ ಬೇಸರವಿಲ್ಲ. ಸತಿಗೆ ದಾಸೋಹ ಮಾಡಿ ಬೇಸರವಿಲ್ಲ. ನೂರೊಂದು ಸಾವಿರದ ಭುವಿ ಜಂಗಮರು ಈ ದಾಸೋಹದಲ್ಲಿ ತೃಪ್ತಿಪಡುತ್ತಾರೆ. ಕೇತಯ್ಯನ ಕೀರ್ತಿ ಕಲ್ಯಾಣವನ್ನು ತುಂಬಿ ಹೊರಸೂಸಿ ಹರಿಯತೊಡಗುತ್ತದೆ."[11]

ತನ್ನ ಕಾಯಕದಲ್ಲಿಯೇ ಕೈಲಾಸವನ್ನು ಕಂಡ ಶಿವಯೋಗಿ, ಶಿವಯೋಗಿಗಿಂತಲೂ ಕಾಯಕವೇ ಮಿಗಿಲೆಂದು ಸಾರಿದವ. ಕಾಯಕ ದಾಸೋಹಕ್ಕೆ ಮಿಗಿಲಾದ ಸ್ಥಾನವನ್ನು ನೀಡಿದವ. ಈತನ ಕಾಯಕ ನಿಷ್ಠೆಯನ್ನು ಶಿವ ಮೆಚ್ಚಿಕೊಂಡು ಆತನನ್ನು ತಾನು ಸೋತು ಬದುಕಿಸಿದ. ಶಿವಗಿಂತಲೂ ಶಿವಶರಣರೇ ಮಿಗಿಲೆಂದು ಹೇಳುವುದು ಇಂತಹ ಉದಾಹರಣೆಗಳಿಂದಲೇ ಶಿವನಿಗಿಂತಲೂ ಶಿವಶರಣರು ಶ್ರೇಷ್ಠ ಎಂಬುದಕ್ಕೆ ಶರಣ ಮೇದರ ಕೇತಯ್ಯನ ಕಾಯಕ ನಿಷ್ಠ ಜೀವನವೇ ಸಾಕ್ಷಿ."[12]

ಬಹಿರಂಗದಲ್ಲಿ ಬಿದಿರಿನ ಕಾಯಕ, ಅಂತರಂಗದಲ್ಲಿ ಅರಿವಿನ ಕಾಯಕ, ಬಹಿರಂಗವನ್ನು ಅಂತರಂಗದಲ್ಲಿ ಬೆರಸಿ, ಅಂತರಂಗದ ಬೆಳಕಿನಿಂದ ಬಹಿರಂಗವನ್ನು ಬೆಳಸಿ ಬೆಳಕಿನ ಬದುಕನ್ನು ಬದುಕಿದವ ಮೇದಾರ ಕೇತಯ್ಯ. ಆ ಬೆಳಕಿನಲ್ಲಿಯೇ ಮಡದಿ ಸಾತೆವ್ವೆಯನ್ನು ಮುನ್ನಡೆಸಿಕೊಂಡು ಹೋದಂತೆ ಶರಣ ಸಂಸಾರಿಯಾತ. ಸಂಸಾಗ ಮಾಡಿ, ಸಂಸಾರದಿಂದ ಮೇಲೆದ್ದು ಬಂದ ಶಿವಶರಣ ಕೇತಯ್ಯ ಮಜ್ಜಿಗೆಯ ಮೇಲೆ ತೇಲುವ ಬೆಣ್ಣೆಯಾಗಿದ್ದಾನೆ.

ಹನ್ನೆರಡನೇ ಶತಮಾನದಲ್ಲಿ ಬಸವಾದಿ ಪ್ರಮಥರು ಸಾರಿದ ಕಾಯಕ ತತ್ವವನ್ನು ಎತ್ತಿ ಹಿಡಿದ ಶಿವಶರಣ ಶ್ರೇಷ್ಠರಲ್ಲಿ ಮೇದಾರ ಕೇತಯ್ಯನು ಒಬ್ಬನಾಗಿದ್ದಾನೆ. ಮೇದಾರ ಕೇತಯ್ಯ ಚಾರಿತ್ರಿಕ ಶಿವಶರಣನೆಂಬುದರಲ್ಲಿ ಸಂದೇಹವಿಲ್ಲ."[13]

ಈ ರೀತಿಯಾಗಿ ಅನೇಕ ವಿದ್ವಾಂಸರು ಮೇದಾರ ಕೇತಯ್ಯನನ್ನು ಕುರಿತು ಹೇಳಿದ್ದಾರೆ. ಆದರ್ಶ ಜೀವಿಯಾದ ಕೇತಯ್ಯ, ವ್ಯಕ್ತಿ ಮತ್ತು ಸಮಾಜದ ಉದ್ಧಾರ, ಕಾಯಕದಿಂದ ಮಾತ್ರ

ಸಾಧ್ಯವೆಂಬುದನ್ನು ಅರಿತು ಅದನ್ನು ನಿಷ್ಠೆಯಿಂದ ನಡೆಸಿದ ನಿಜ ಶರಣರಾಗಿದ್ದಾರೆ ಎಂದು ಶ್ರೀ ಶಿವಮೂರ್ತಿ ಮುರಘಶರಣರು, ಚಿತ್ರದುರ್ಗ ಇವರು ನುಡಿದಿದ್ದಾರೆ.

ಮತ್ತೊಬ್ಬ ಈ ಪಂಗಡದ ವೀರನಾಯಕನೆಂದರೆ ಮೇದಾರ **ಚೆನ್ನಯ್ಯ** ಹಾಗೂ ಇವನ ಮೊಮ್ಮಗ ಮೇದಾರ **ತೋಡಯ್ಯ,** ಮೇದಾರ ಚೆನ್ನಯ್ಯನು ಒಂದು ಮಡಿಕೆ ಅನ್ನದಿಂದ ಸಾವಿರಾರು ಜನರಿಗೆ ಊಟ ಹಾಕಿದ್ದನು. ಇವನ ಮೊಮ್ಮಗ ಮೇದಾರ ತೋಡಯ್ಯ ಬುಟ್ಟಿ ಹೆಣೆದು ನಂತರ ದಿನಕ್ಕೆ ಮೂರು ಬಾರಿ ಸ್ನಾನ ಮಾಡುತ್ತಿದ್ದನಂತೆ. ಒಮ್ಮೆ ಕುಷ್ಠರೋಗಿಯಾದ ಒಬ್ಬ ಬ್ರಾಹ್ಮಣನು ತನ್ನ ಕಳೆದು ಹೋದ ಕರುವನ್ನು ಹುಡುಕುತ್ತಾ ಬಂದು ತೋಡಯ್ಯ ಸ್ನಾನಮಾಡಿದ ನೀರು ತುಂಬಿದ ಗುಂಡಿಯಲ್ಲಿ ಬಿದ್ದುಬಿಟ್ಟನಂತೆ. ಆಗ ಅವನ ಕುಷ್ಠರೋಗ ವಾಸಿಯಾಯಿತಂತೆ. ಇದನ್ನರಿತ ಹಲವು ಚರ್ಮರೋಗದವರು ತೋಡಯ್ಯನು ಸ್ನಾನ ಮಾಡಿ ಹರಿದ ಗುಂಡಿಗೆ ಮುಳುಗಿ ತಮ್ಮ ರೋಗವನ್ನು ನಿವಾರಿಸಿಕೊಂಡರು.

ಗೌರಿಶಂಕರ ಪಂಗಡದ ಮೇದನೊಬ್ಬ ಕಾಡಿನಲ್ಲಿ ಬಿದಿರು ಕಡಿದು ಜೀವನ ಸಾಗಿಸುತ್ತಿದ್ದನು. ಮನೆಯಲ್ಲಿ ಹೆಂಡತಿ ಗರ್ಭಿಣಿಯಾಗಿದ್ದಾಗ, ಶಿವ-ಪಾರ್ವತಿಯರು ಈ ಮೇದನ ಬಗ್ಗೆ ಅನುಕಂಪ ತಾಳಿ ಹಣದ ಸಹಾಯ ಮಾಡಬೇಕೆಂದು ಬೊಂಬಿನಲ್ಲಿ ಹಣ ಸುರಿಸುತ್ತಾರೆ. ಅವನು ಅನ್ಯಾಯದ ಹಣವನ್ನು ಮುಟ್ಟದೆ ವಾಪಸ್ಸು ಬರುತ್ತಾನೆ. ಬಿದಿರು ಕಡಿಯುವಾಗ ವಜ್ರವನ್ನು ಸುರಿಸುತ್ತಾರೆ. ಆದರೆ ಅದನ್ನು ಮುಟ್ಟದೆ ಗೌರಿಶಂಕರ ಮೇದನು ಬಿಟ್ಟು ಹೋಗುತ್ತಾನೆ. ಪಾರ್ವತಿಯ ಮಾತು ಕೇಳಿ ತನಗೆ ಅಗೌರವವಾಯಿತೆಂದು ಕೋಪಗೊಂಡು ಶಿವನು ಇನ್ನು ಮುಂದೆ ಮೇದರು ಕಡಿಯುವ ಬಿದಿರಿನಲ್ಲಿ ಇರುವೆ ತುಂಬಿಕೊಳ್ಳಲಿ ಎಂದು ಶಾಪ ಕೊಡುತ್ತಾನೆ. ಮತ್ತೆ ಪಾರ್ವತಿ ಪ್ರಾರ್ಥಿಸಲು ಆ ಇರುವೆಗಳೇ ಬಿದಿರುಪ್ಪು ಆಗಲಿ ಎಂದು ಹೇಳುತ್ತಾನೆ. ಮುಂದೆ ಬಿದಿರಕ್ಕಿ ಮತ್ತು ಉಪ್ಪು ಇವರಿಗೆ ದೊರಕುವಂತಾಗುತ್ತದೆ.

ಹನುಮಯ್ಯ ಸ್ವಾಮೀಜಿ ಯವರು, ಕೇತೇಶ್ವರ ಸ್ವಾಮೀಜಿಯವರು ಚಿತ್ರದುರ್ಗ ಜಿಲ್ಲೆಯ ಸೊಲ್ಲಾಪುರ ಗ್ರಾಮದ ಮೇದರ ಕದರೆಪ್ಪ ಮತ್ತು ಮರಿಯಮ್ಮನವರ ಗರ್ಭದಲ್ಲಿ ಚೈತ್ರಶುದ್ಧ ಪಾಡ್ಯದಂದು ಜನಿಸಿದರು. ಇವರಿಗೆ ಹನುಮಂತಯ್ಯನೆಂದು ನಾಮಕರಣ ಮಾಡಿದರು. ಇವರು ಬಾಲ್ಯದಲ್ಲಿ ಹೆಚ್ಚಿನ ವಿದ್ಯೆಯನ್ನು ಕಲಿಯಲಿಲ್ಲ. ತಂದೆ-ತಾಯಿಯವರೊಂದಿಗೆ ಕುಲಕಸುಬನ್ನೇ ಮಾಡುತ್ತಾ, ದನ ಕಾಯುತ್ತಿದ್ದರು. ಹೀಗಿರಲು ಒಮ್ಮೆ ಇವರ ಕನಸಿನಲ್ಲಿ ಗುರುಗಳು ದರ್ಶನಕೊಟ್ಟು ಮೈಸೂರಿನ ಹತ್ತಿರವಿರುವ ದೇವನೂರು ಮಠಕ್ಕೆ ಬರುವಂತೆ ಅಪ್ಪಣೆ ಮಾಡಿದರು. ಹನುಮಂತಪ್ಪನವರು ಗುರುಗಳ ಅಪ್ಪಣೆಯಂತೆ ಮೈಸೂರಿನ ಮಲ್ಲೇಶ್ವರ ಮಠಕ್ಕೆ ಬಂದರು. ಅಲ್ಲಿ ಕೆಲವು ದಿನಗಳ ಕಾಲ ಮಲ್ಲೇಶ್ವರ ಮಹಾಸ್ವಾಮಿಗಳ ಸೇವೆಯನ್ನು ಮಾಡಿ, ಗುರುಗಳಿಂದ ಲಿಂಗ ದೀಕ್ಷೆಯನ್ನು ಪಡೆದರು. ಗುರುವಿನ ಅಪ್ಪಣೆಯಂತೆ ಮೇದರ ಸಮುದಾಯದವರನ್ನು ಸನ್ಮಾರ್ಗದಲ್ಲಿ ನಡೆಸಲು ಅವರಿಗೆ ಸಂಸ್ಕಾರಕೊಡುತ್ತಾ ಸಂಚಾರ

ಹೊರಟರು. ಅಲ್ಲಿಂದ ಶ್ರೀ ವಿರುಪಾಕ್ಷ ಒಡೆಯರ ಸನ್ನಿಧಾನದಲ್ಲಿ ಶ್ರೀಗಳವರಿಂದ ಬ್ರಹ್ಮೋಪದೇಶವನ್ನು ಪಡೆದು, ಗುರು ಕೇತೇಶ್ವರ ಸ್ವಾಮೀಜಿ ಎಂದು ನಾಮಾಂಕಿತಗೊಂಡರು.

ಗುರುವಿನಿಂದ ಮುದ್ರಿಕೆಯ ಪದಕ ಮತ್ತು ಬೆತ್ತದ ದಂಡವನ್ನು ಪಡೆದು ಮೇದರ ಕುಲಗುರುವಾಗಿ ಮೇದ ಸಮುದಾಯದ ಸಕಲ ಉದ್ಧಾರಕ್ಕಾಗಿ ದುಡಿಯಲು ಪಣತೊಟ್ಟು ಹೊರಟರು. ಈ ಸಂದರ್ಭದಲ್ಲಿ ಹುಬ್ಬಳ್ಳಿಯ ಮೂರು ಸಾವಿರ ಮಠದ ಸ್ವಾಮಿಗಳಾದ ಶ್ರೀ ಕೆಂಪಯ್ಯ ಸ್ವಾಮಿಗಳು ಇವರಿಗೆ ಹುಬ್ಬಳ್ಳಿಯಲ್ಲಿ ಮಠ ಕಟ್ಟಿಕೊಂಡು ಇರಲು ನಿವೇಶನ ವ್ಯವಸ್ಥೆ ಮಾಡಿದರು. 1932ರಲ್ಲಿ ಹುಬ್ಬಳ್ಳಿಯ ಮೇದರ ಓಣಿಯಲ್ಲಿ ಮೇದರ ಸಹಕಾರದಿಂದ ಒಂದು ಮಠವನ್ನು ಕಟ್ಟಿಸಿದರು. 1936ರಲ್ಲಿ ಸ್ವಾಮಿಜಿಯವರು ಮೇದರ ಹುಡುಗನಾದ ಎಂಟು ವರ್ಷದ ಶಾಂತಪ್ಪ ಎನ್ನುವ ಬಾಲಕನನ್ನು ಗುರುಗಳ ಸೇವೆಗಾಗಿ ಮಠದಲ್ಲಿ ಇಟ್ಟುಕೊಂಡರು.

ಅಲ್ಲಿಂದ ಪ್ರತಿವರ್ಷ ಶಿವರಾತ್ರಿ, ವಿಜಯದಶಮಿ ಹಾಗೂ ಬಸವಜಯಂತಿ ಮುಂತಾದ ಸಂದರ್ಭಗಳಲ್ಲಿ ಅನೇಕ ವಿಧವಾದ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡತೊಡಗಿದರು. 1970ರಲ್ಲಿ ಹುಬ್ಬಳ್ಳಿ ತಾಲೂಕಿನ ಒಂದು ಗ್ರಾಮದಲ್ಲಿ ಬ್ರಹ್ಮರಾಕ್ಷಸನ ಹಾವಳಿ ಹೆಚ್ಚಾಗಿರಲು ಗುರುಗಳು ಅಲ್ಲಿ ಅನುಷ್ಠಾನ ಮಾಡಿ ಜನರನ್ನು ರಾಕ್ಷಸನ ಕಾಟದಿಂದ ರಕ್ಷಿಸಿದರು. ಕೇತೇಶ್ವರ (ಹನಮಂತಯ್ಯ) ಈ ಸಮುದಾಯದ ಜನರಿಗೆ ಗುರುವಾಗಿ, ಭವರೋಗ ವೈದ್ಯರಾಗಿ ಇವರನ್ನು ರಕ್ಷಿಸಿ ಕಾಪಾಡತೊಡಗಿದರು. ಶ್ರೀಗಳವರು 1988 ಡಿಸೆಂಬರ್ ತಿಂಗಳಲ್ಲಿ ಲಿಂಗೈಕ್ಯರಾದರು. ಅಲ್ಲಿ ಗುರುಗಳ ಗದ್ದಿಗೆಯನ್ನು ನಿರ್ಮಿಸಲಾಗಿದೆ. 1999ರಲ್ಲಿ ಮಠದ ಶಂಕುಸ್ಥಾಪನೆ ಮಾಡಲಾಯಿತು. ಈಗಲೂ ಸಹ ಹುಬ್ಬಳ್ಳಿಯಲ್ಲಿರುವ ಕೇತೇಶ್ವರರ ಗದ್ದುಗೆಗೆ ಜನರು ಭಕ್ತಿಯಿಂದ ನಡೆದುಕೊಳ್ಳುತ್ತಾರೆ.

ಅಲ್ಲಿಯ ಮಠಕ್ಕೆ ಮೇದ ಸಮುದಾಯದವರು ಹೋಗಿ ಬರುತ್ತಾರೆ. ಚಿತ್ರದುರ್ಗದ ಬೃಹನ್ಮಠದ ವತಿಯಿಂದ ಶ್ರೀ ಮುರಘಶರಣರು ಐದು ಎಕರೆ ಭೂಮಿಯನ್ನು ದೇಣಿಗೆಯಾಗಿ ನೀಡಿರುವ ಪ್ರದೇಶದಲ್ಲಿ ಮೇದರ ಶ್ರೀ ಕೇತೇಶ್ವರ ಮಹಾಮಠ, ಮೇದರ ಗುರುಪೀಠವು ಚಿತ್ರದುರ್ಗದ ಸೀಬಾರದಲ್ಲಿ ಸ್ಥಾಪಿಸಲ್ಪಟ್ಟಿದೆ. ಪ್ರಸ್ತುತ ಶ್ರೀ ಬಸವಪ್ರಭು ಕೇತೇಶ್ವರ ಮಹಾಸ್ವಾಮಿಗಳು ಪೀಠಾರೋಹಣ ಮಾಡಿರುವರು.

ಮೇದ ಬುಡಕಟ್ಟಿನ ಸಾಮಾಜಿಕ ಜೀವನ:

ಮೇದರಲ್ಲಿ ಯಾವುದೇ ಸಾಮಾಜಿಕ ಶ್ರೇಣಿಗಳಿಲ್ಲ, ವೈವಾಹಿಕ ಸಂಬಂಧ ಬೆಳೆಸುವಾಗ ಎರಡೂ ಕುಟುಂಬಗಳ ಗುರುತಿರುವ ಸಂಬಂಧಗಳನ್ನು ಪರಿಗಣಿಸುತ್ತಾರೆ. ಸೋದರತ್ತೆ ಮತ್ತು ಸೋದರ ಮಾವನ ಮಗಳೊಂದಿಗೆ ವಿವಾಹಕ್ಕೆ ಅನುಮತಿ ಇದೆ. ಇವರು ಬಿದಿರಿನಿಂದ ಮಾಡುವ ಕರಕುಶಲತೆ ನಿಜಕ್ಕೂ ಆಶ್ಚರ್ಯ. ಬಿದಿರಿನಿಂದ ಚಾಪೆ ಬುಟ್ಟಿ, ಕಸದಪುಟ್ಟಿ, ಮೊರ, ನಿಚ್ಚಣಿಕೆ ಇತ್ಯಾದಿಗಳನ್ನು ತಯಾರಿಸುವರು. ಈ ಕಲೆಯನ್ನು ಸರ್ಕಾರ ಹಾಗೂ ಅಕಾಡೆಮಿಗಳಿಂದ ಗುರುತಿಸದೆ ಇರುವುದು ದುರದೃಷ್ಟಕರ. ಕೆಲವರು ಕೂಲಿ ಕಾರ್ಮಿಕರಾಗಿ

ದುಡಿಯುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಡೊಳ್ಳು ಬಡಿಯುತ್ತಾರೆ. ಹಬ್ಬಗಳಲ್ಲಿ ಸಂಗೀತ ಗೋಷ್ಠಿಗಳನ್ನು ನಡೆಸುತ್ತಾರೆ. ವಾದ-ವಿವಾದಗಳನ್ನು ಹಿರಿಯರ ಸಮ್ಮುಖದಲ್ಲಿ ತಾವೇ ಬಗೆಹರಿಸಿಕೊಳ್ಳುತ್ತಾರೆ. ಅರಣ್ಯದಲ್ಲಿ ಬಿದಿರು ಕಳಿಲು (ಬೊಡ್ಡೆಯಲ್ಲಿ ಮೊಳಕೆ) ಒಡೆಯುವ ಸಂದರ್ಭದಲ್ಲಿ ತಮ್ಮ ಕಾಯಕದ ಆಯುಧಗಳನ್ನು ಇಟ್ಟು ಪೂಜಿಸುತ್ತಾರೆ. ಪ್ರತಿವರ್ಷ ಸುನೇವು ತಿಂಗಳು ಅಂದರೆ ಡಿಸೆಂಬರ್-ಜನವರಿಯಲ್ಲಿ ಕುರಿ ಬಲಿಯೊಂದಿಗೆ ಪೂಜಿಸುವುದು ಇಂದಿಗೂ ರೂಢಿಯಲ್ಲಿದೆ. ಪ್ರತೀವರ್ಷ ಕುಲದೇವತೆ ಮರಿಯಮ್ಮದೇವಿ ಉತ್ಸವ ಮಾಡಿ ಅನ್ನದಾಸೋಹ ಮಾಡುವುದನ್ನು ಇಂದಿಗೂ ನಡೆಸಿಕೊಂಡು ಬಂದಿದ್ದಾರೆ.

ಜಿಲ್ಲೆಯ ರಾಣೇಬೆನ್ನೂರಿನಲ್ಲಿ ಮಾತ್ರ ಸುಂದರವಾದ ಮರಿಯಮ್ಮ ದೇವರ ಮೂರ್ತಿಯೊಂದಿಗೆ ದೇವಾಲಯ ನಿರ್ಮಿಸಿದ್ದಾರೆ. ಪೂಜೆ ಮಾಡಲು ದೀಕ್ಷೆ ಹೊಂದಿದ ಸ್ವಾಮಿಗಳನ್ನು ನೇಮಕ ಮಾಡಿಕೊಂಡಿರುವುದು ಜನಾಂಗದ ಸಂಘಟನೆಗೆ ಸಾಕ್ಷಿಯಾಗಿದೆ. ಹಿಂದುಗಳ ಸಂಪ್ರದಾಯದಂತೆ ಇವರು ಕೂಡ ವೇಷಭೂಷಣ ಧರಿಸುತ್ತಾರೆ. ಶವಸಂಸ್ಕಾರಗಳೂ ಸಹ ಹಿಂದೂ ಸಂಪ್ರದಾಯದಂತೆ ನಡೆಯುತ್ತವೆ. ಸಾಕ್ಷರತೆಯ ಹೆಸರಿನಲ್ಲಿ ಸರಕಾರ ಹಣ ವ್ಯಯ ಮಾಡಿದರೂ ನವ ಸಾಕ್ಷರತೆಯ ಯೋಜನೆಯ ಅರಿವು ಸಹ ಇವರಿಗೆ ಇಲ್ಲ. ಇವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಪರಿಸ್ಥಿತಿ ಸುಧಾರಣೆಯಾಗಬೇಕಾಗಿದೆ. ಅನೇಕ ಶತಮಾನಗಳು ಕಳೆದರೂ, ಆಧುನಿಕತೆಯ ಪರಿಣಾಮದಿಂದ ಕೆಲವು ಮಾರ್ಪಡುಗಳೊಂದಿಗೆ, ತಮ್ಮ ವಿಶಿಷ್ಟವಾದ ಸಾಂಸ್ಕೃತಿಕ ಮತ್ತು ಸಾಮಾಜಿಕ ಪರಂಪರೆಯನ್ನು ಇನ್ನೂ ಯಥಾಸ್ಥಿತಿಯಲ್ಲಿಯೇ ಮುಂದುವರೆಸಿಕೊಂಡು ಬಂದಿದ್ದಾರೆ.

ಆಹಾರ ಪದ್ಧತಿ:

ಮೇದ ಸಮಾಜದವರು ಮೂಲತಃ ಮಾಂಸಹಾರಿಗಳು. ಒಂದು ಕಾಲದಲ್ಲಿ ಬೇಟೆಯಾಡುತ್ತಿದ್ದ ಇವರು, ಈಗ ಬೇಟೆ ನಿಷಿದ್ದವಾದ್ದರಿಂದ ಅದನ್ನು ಹವ್ಯಾಸವಾಗಿ ಇಟ್ಟುಕೊಂಡಿಲ್ಲ. ಹಿಂದೆ ಬೇಟೆಯ ಬಲೆಗಳು, ದೊಡ್ಡ ಈಟಿ, ಮಚ್ಚು, ಹರಿತ ಕತ್ತಿಗಳನ್ನು ಬೇಟೆಯ ಕಾರಣಕ್ಕಾಗಿಯೇ ಹೊಂದಿದ್ದರು. ಸಾಮಾನ್ಯವಾಗಿ ಸುಲಭವಾಗಿ ಸಿಗಬಹುದಾದ ಮೊಲ, ಜಿಂಕೆ, ಪಾರಿವಾಳ, ನವಿಲು ಮೊದಲಾದವುಗಳನ್ನು ಬೇಟೆಯಾಡುತ್ತಿದ್ದರು. ಮಾಂಸಕ್ಕಾಗಿ ಕುರಿ, ಕೋಳಿ, ಆಡುಗಳನ್ನು ಸಾಕುವ ರೂಢಿ ಇದೆ ಹಾಗೂ ಬಲಿಯ ಸಂಪ್ರದಾಯವನ್ನು ಮುಂದುವರಿಸುತ್ತಿದ್ದಾರೆ.

ವಸತಿ ವ್ಯವಸ್ಥೆ:

ಮೂಲಭೂತವಾಗಿ ಮೇದರು ಬಿದಿರು ಹೆಚ್ಚಾಗಿ ಸಿಗುತ್ತಿದ್ದ ಕಾಡಿನೊಳಗೇ ಬಿಡಾರಗಳನ್ನು ಕಟ್ಟಿಕೊಂಡು ಕುಲಕಸುಬನ್ನು ಮಾಡುತ್ತಿದ್ದರು. ನಂತರ ವ್ಯಾಪಾರ ದೃಷ್ಟಿ ಹಾಗೂ ಬಿದಿರಿನ ಅಭಾವದಿಂದ ಒಂದು ಕಡೆಯಿಂದ ಮತ್ತೊಂದೆಡೆ ಸಂಚರಿಸುವ ಪ್ರವೃತ್ತಿಯಿಂದಾಗಿ ವಲಸಿಗರಾದರು. ಆಂಧ್ರ, ತಮಿಳುನಾಡುಗಳಿಂದ ಬಂದ 'ಮೇದರು' ಕರ್ನಾಟಕದ ಬಹುತೇಕ

ಸ್ಥಳಗಳಲ್ಲಿ ನೆಲೆಸಿದ್ದಾರೆ. 'ಕರ್ನಾಟಕ'ದ ಕನ್ನಡ ಮಾತನಾಡುವ ಮೇದರು 'ಮಹಾರಾಷ್ಟ್ರ'ದಲ್ಲಿ ಹೆಚ್ಚಾಗಿ ನೆಲೆಸಿದ್ದು, ಮೇದಾರಿಕೆಯನ್ನೇ ಮುಂದುವರೆಸಿದ್ದಾರೆ. ಕೆಲವು ಮೇದರು ಕಾಡಿನ ಕಾನೂನು ಹಾಗೂ ಅರಣ್ಯ ಇಲಾಖೆಯವರ ಕಿರುಕುಳದಿಂದ ಕಾಡಿನಿಂದ ಹೊರಬಂದು ಅರಣ್ಯ ತಪ್ಪಲು, ಇಲ್ಲವೇ ಅಂಚಿನ ಹಳ್ಳಿಗಳಲ್ಲಿ ವಾಸಿಸಬೇಕಾಯಿತು.


ವ್ಯಾಪಾರಕ್ಕೆ ಪಕ್ಕದ ಹಳ್ಳಿ ಮತ್ತು ಪಟ್ಟಣದ ಸಂತೆಗಳನ್ನು ಅವಲಂಬಿಸಿಕೊಂಡಿದ್ದ ಮೇದರು, ನಿಧಾನವಾಗಿ ಪಟ್ಟಣ ಹಾಗೂ ನಗರಗಳತ್ತ ಆಕರ್ಷಿತರಾದರು. ಆದರೆ ಕಾಡಿನ ಸಂಬಂಧ ಬಿಡಲಿಲ್ಲ. ಅನುಕೂಲಕರಕ್ಕಾಗಿ ಹಾತೊರೆಯುವ ಮಾನವನ ಮನಸ್ಸು, ಹಳ್ಳಿ, ಪಟ್ಟಣ, ನಗರಗಳ ಹೊರವಲಯದಲ್ಲಿ ತಮ್ಮದೇ ಆದ 'ಮೇದರ ಕೇರಿ', 'ಮೇದರ ಓಣಿ', 'ಮೇದರಟ್ಟಿ' ಕಟ್ಟಿಕೊಂಡು ಗುಂಪು ಮನೆಗಳಲ್ಲಿ ವಾಸಿಸುತ್ತಿರುವುದರಿಂದ ಇಂದಿಗೂ ಅಂತಹ ಮನೆಗಳಲ್ಲೆ ಮೇದರು ವಾಸಿಸುತ್ತಿದ್ದಾರೆ. ಹಾವೇರಿ ಜಿಲ್ಲೆಯ ಕೆಲವು ನಗರ ಮತ್ತು ಗ್ರಾಮಗಳಾದ ರಾಣೇಬೆನ್ನೂರು, ಸವಣೂರು, ರಟ್ಟೀಹಳ್ಳಿ, ಮಾಸೂರು, ಹಿರೇಕೆರೂರು, ಚಿಕ್ಕೇರೂರು, ಬ್ಯಾಡಗಿ, ಸಿಡೆನೂರು, ಹೊಸರಿತ್ತಿ, ಗುತ್ತಲ, ಅಕ್ಕಿಆಲೂರು, ಶಿಗ್ಗಾಂವ ಬಂಕಾಪುರ ಇತ್ಯಾದಿ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಮೇದರು 'ಗುಂಪು ಮನೆ'ಗಳಲ್ಲಿಯೇ ವಾಸಿಸುತ್ತಿದ್ದಾರೆ.

ಹಿಂದೆ ಮೇದರು ತಮ್ಮ ಮನೆಗಳನ್ನು ಬಿದಿರು ಮತ್ತು ಅದರ ಕಡ್ಡಿ, ಹುಲ್ಲು, ಅಂಚೆಹುಲ್ಲು, ಲಕ್ಕಿಬರಲುಗಳಿಂದ ನಿರ್ಮಿಸಿಕೊಳ್ಳುತ್ತಿದ್ದರು. ಹಾಗೂ ತಮ್ಮ ಕೇರಿ,ಓಣಿ,ಹಟ್ಟಿಗಳಲ್ಲಿ ಇತರರ ಪ್ರವೇಶ ಆಗದಂತೆ ಎಚ್ಚರಿಕೆ ವಹಿಸುತ್ತಿದ್ದರು. ಆದರೆ ಇಂದು ಆಧುನಿಕತೆಯ ಪ್ರಭಾವಕ್ಕೆ ಸಿಲುಕಿ ಈ ವ್ಯವಸ್ಥೆಯಲ್ಲಿ ಬದಲಾವಣೆಯಾಗಿದೆ. ಕೇವಲ ಮನೆ, ವಸತಿ ವಿನ್ಯಾಸಗಳನ್ನು ನೋಡಿಯೇ ಇವರು ಮೇದರು ಎಂದು ಗುರುತಿಸುವ ಕಾಲ ಇಂದು ಮಾಯವಾಗಿದೆ. ಈಗ ಇವರು ಬಿದಿರು ಮತ್ತು ಅಂಚೆಹುಲ್ಲಿನ ಬದಲಾಗಿ ಸಿಮೆಂಟು, ಇಟ್ಟಿಗೆ, ಕಬ್ಬಿಣ, ಮೊದಲಾದ ಹೊಸ ಮಾದರಿಯ ಹಾಗೂ ವಾಸ್ತುಶಾಸ್ತ್ರವು ಹೇಳಿದ ವಿನ್ಯಾಸಗಳಲ್ಲಿ ತಮ್ಮ ಮನೆಗಳನ್ನು ನಿರ್ಮಿಸಿಕೊಂಡು ಜೀವನ ನಡೆಸುತ್ತಿದ್ದಾರೆ. ಜೊತೆಗೆ ಇಂದು ಸರ್ಕಾರದಿಂದ ದೊರೆಯುವ ಆಶ್ರಯಮನೆ, ಜನತಾಮನೆ, ವಾಲ್ಮೀಕಿ ಮತ್ತು ಅಂಬೇಡ್ಕರ್ ಆವಾಸ್ ಯೋಜನೆಗಳಡಿಯಲ್ಲಿ ಕೆಲವರು ಮನೆಗಳನ್ನು ಪಡೆದಿದ್ದಾರೆ. ಹೆಚ್ಚಿನ ಮಾಹಿತಿಗೆ ಮುಂದಿನ ಕೋಷ್ಟಕ ಗಮನಿಸಿ.

ಕೋಷ್ಟಕ–4

ಹಾವೇರಿ ಜಿಲ್ಲೆಯ ಮೇದಾರರ ವಾಸದ ಮನೆಯ ಸ್ವರೂಪ:

	ಮನೆಯ ಸ್ವರೂಪ.	ಸಂಖ್ಯೆ
01	ಟೆಂಟು/ಗುಡಾರ	22
02	ಗುಡಿಸಲು	28
03	ತಗಡು/ಹೆಂಚಿನಮನೆ	15
04	ಮಾಳಿಗೆ/ಆರ್.ಸಿ.ಸಿ	17
05	ಆಶ್ರಯ ಮನೆ	18
06	ಬಾಡಿಗೆ ಮನೆ	120
	ಒಟ್ಟು	**220**



ಒಳಾಡಳಿತ ವ್ಯವಸ್ಥೆ ಮತ್ತು ನ್ಯಾಯ ಪದ್ಧತಿ:

ಮೇದರ ಒಳಾಡಳಿತ ವ್ಯವಸ್ಥೆಯಲ್ಲಿ, ಅದೇ ಸಮುದಾಯದ ಹಿರಿಯ ವ್ಯಕ್ತಿಯನ್ನು ಆಯ್ಕೆ ಮಾಡುತ್ತಾರೆ. ಈತನನ್ನು ಪಟೇಲ, ಹಿರಿಯ ಯಜಮಾನ ಎಂದು ಹೆಸರಿಸುತ್ತಾರೆ. ವಿವಾಹದ ಸಂದರ್ಭದಲ್ಲಿ ಬೇರೆ ಜಾತಿಯ ಸಂಬಂಧಗಳಾದಲ್ಲಿ, ಜಾತಿಯ ಒಳಜಗಳಗಳಲ್ಲಿ, ಸಾವಿನ ಸಂದರ್ಭಗಳಲ್ಲಿ ಜಾತಿಯ ಆಡಳಿತ ನಡೆಸುವವರು ಪಂಚಾಯತಿ ನಡೆಸಿ ತಾವೇ ನ್ಯಾಯ ತೀರ್ಮಾನ ಮಾಡುತ್ತಾರೆ. ಆಜ್ಞೆಯನ್ನು ಮೀರುವಂತಿಲ್ಲ. ಸಾಮಾನ್ಯವಾಗಿ ಜಾತಿ ಜಾತಿಯ ಅಂತಃಕಲಹದ ಕಾರಣದಿಂದ ಮೇದರಲ್ಲಿ ಕೋರ್ಟಿಗೆ ಹೋಗಿರುವ ಪ್ರಸಂಗಗಳು ಈವರೆವಿಗೂ ಆಗಿಲ್ಲವೆಂದು ಹೆಮ್ಮೆಯಿಂದ ಹೇಳುತ್ತಾರೆ. ನ್ಯಾಯ ತೀರ್ಮಾನ ಸಾಧ್ಯವಾಗದಿದ್ದರೆ ಜಿಲ್ಲಾ ಮಟ್ಟದ ಯಜಮಾನರಿಗೆ ಒಪ್ಪಿಸುತ್ತಾರೆ. ಇದಲ್ಲದೆ ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ

ಕಾರ್ಯಗಳೆಲ್ಲಾ ಜಾತಿಯ ಯಜಮಾನರ ಮುಂದಾಳತ್ವ ಮತ್ತು ಮಾರ್ಗದರ್ಶನದಲ್ಲಿ ನಡೆಯುತ್ತವೆ.

ಕುಲಬೆಡಗುಗಳು:

ಪ್ರದೇಶಾನುಸಾರವಾಗಿ, ಆಚರಣಾನುಸಾರವಾಗಿ ಮೇದರಲ್ಲಿ ಹಲವು ಕುಲ, ಗೋತ್ರ, ಬೆಡಗುಗಳನ್ನು ಕಾಣಬಹುದಾಗಿದೆ. ಕರ್ನಾಟಕದಲ್ಲಿ ಬೇರೆ ಬೇರೆ ಜಿಲ್ಲೆಗಳಲ್ಲಿ ಸುಮಾರು 18 ಬಗೆಯ ಬೇಡಗುಗಳನ್ನು ಗುರುತಿಸಿ ಧಾರವಾಡ ತಾಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಕಾರ್ಯಲಯಕ್ಕೆ ಡಾ. ಕೆ.ಎಂ. ಮೇತ್ರಿ, ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರು ತಮ್ಮ ಪತ್ರದಲ್ಲಿ 18-04-2008 ರಲ್ಲಿ ಈ ಎಲ್ಲಾ ಗೋತ್ರಗಳನ್ನು ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿ ಸೇರಿಸಲು ಮನವಿ ಮಾಡಿಕೊಂಡಿರುತ್ತಾರೆ. ಹಾವೇರಿ ಜಿಲ್ಲೆಯಲ್ಲಿ ಕಾಣಬರುವ ಬೆಡಗುಗಳೆಂದರೆ–

1. ಮಳೆಗಾಲರು,
2. ಗೌಡ್ರು,
3. ಆಲದರು,
4. ನಾಯಕರು,
5. ಮಾದೇಶ್ವರು,
6. ದಾಸಲರು,
7. ತೆವರೇರ,
8. ಕೋಳೇರ,
9. ಹೊಳೆಸೇರ,
10. ಡುಕರೇರ,
11. ಪರಸಾಳದವರು ಮುಂತಾದವರು.

ಹಿಂದೆ ಅವರು ವಾಸಿಸುತ್ತಿದ್ದ ಸ್ಥಳಗಳು, ಕಾಯಕದ ಕೆಲಸಗಳು, ಅವರ ಮನೆ ಇರುವಿಕೆಯ ಸ್ಥಳಗಳ ಮೇಲಿಂದ ಬೆಡಗುಗಳನ್ನು ಗುರುತಿಸಿಕೊಂಡಿದ್ದು ಗೊತ್ತಾಗುತ್ತದೆ. ಈ ಬೆಡಗುಗಳ ವ್ಯತ್ಯಾಸಗಳನ್ನು ಮೇದರು ಗಂಭೀರವಾಗಿ ವಿವಾಹದ ಸಂದರ್ಭಗಳಲ್ಲಿ ಪರಿಗಣಿಸುತ್ತಾರೆ.

ಮೇದ ಬುಡಕಟ್ಟಿನ ಆಚರಣೆಗಳು, ನಂಬಿಕೆಗಳು, ಮತ್ತು ಸಂಪ್ರದಾಯಗಳನ್ನು ಸಂಕ್ಷಿಪ್ತವಾಗಿ ವಿವರಿಸುವ ಪ್ರಯತ್ನವನ್ನು ಈ ಕೆಳಗಿನಂತೆ ಮಾಡಲಾಗಿದೆ.

ಜನನ:

ಮೇದರಲ್ಲಿ ಹಿಂದೆ ಮನೆಯಲ್ಲೇ ಪ್ರತ್ಯೇಕ ಕೋಣೆಯಲ್ಲಿ ಹೆರಿಗೆಯನ್ನು ತಮ್ಮ ಜಾತಿಯ ಅಜ್ಜಿಯರು ಮಾಡಿಸುತ್ತಿದ್ದರು. ಹೊಕ್ಕಳು ಬಳ್ಳಿಯನ್ನು ಮರದಡಿಗೆ ತೆಗೆದುಕೊಂಡು ಹೋಗಿ ಹೂಳುತ್ತಾರೆ. ಸಾಮಾನ್ಯವಾಗಿ ಹೆರಿಗೆಯ ನಂತರ ಒಂಬತ್ತನೇ ದಿನ ಮನೆಗೆ ಗೋಮೂತ್ರ ಹಾಕಿ ಶುದ್ಧಿಕರಿಸುತ್ತಾರೆ. ಹನ್ನೊಂದನೇ ದಿನ ಮನೆಯನ್ನು ಸಾರಿಸಿ, ಮಾವು, ಹಲಸಿನ ಸೊಪ್ಪುಗಳಿಂದ ಸಿಂಗರಿಸುತ್ತಾರೆ. ಬಾಣಂತಿಗೆ ಅಜ್ಜಿಯರು ಮತ್ತು ಮುತ್ತೈದೆಯರು ಮಡಿಕೆಯಲ್ಲಿ ನೀರು ತಂದು ಮೀಯಿಸುತ್ತಾರೆ. ಮೇದರು ಮಕ್ಕಳನ್ನು ಬಿದಿರಿನ ತೊಟ್ಟಿಲಿಗೆ ಹಾಕುವುದಿಲ್ಲ. ಬದಲಾಗಿ ಬಟ್ಟೆಯ ಜೋಳಿಗೆಯನ್ನು ಮಾಡಿ ಅದರ ಒಳಗೆ ಮಗುವನ್ನು ಮಲಗಿಸುತ್ತಾರೆ. ಮಗುವಿನ ಬಾಯಿಗೆ ತಂದೆ ಜೇನು ನೆಕ್ಕಿಸುತ್ತಾನೆ. ಈ ಸಂದರ್ಭದಲ್ಲಿ ಸೋಬಾನೆ ಹಾಡುತ್ತಾ ಬಂದವರಿಗೆಲ್ಲಾ ಸಿಹಿ ಹಂಚುತ್ತಾರೆ. ಮಗುವಿಗೆ ದೃಷ್ಟಿ ತಾಗದಿರಲೆಂದು ಮನೆ ಬಾಗಿಲಿಗೆ ಹಳೆಮೆಟ್ಟುಗಳನ್ನು ಇಲ್ಲವೆ ಅಂಕೋಲೆ ಗಿಡದ ಕೊನೆಗಳನ್ನು ಕಟ್ಟುತ್ತಾರೆ. ದೃಷ್ಟಿ ತಾಗದಿರಲೆಂದು ಮಗುವಿನ ಹಣೆಗೆ 'ಕಪ್ಪು ಬೊಟ್ಟು' ಇಡುತ್ತಾರೆ. ಮತ್ತು ಹನುಮಂತನ ತಾಯತ ಕಟ್ಟಿಸುತ್ತಾರೆ. ಗಂಡು ಮಗು ಜನಿಸಿದರೆ ಮೇದರಿಗೆ ತುಂಬಾ ಸಂತೋಷ. ಅಂತಹ ಸಂದರ್ಭಗಳಲ್ಲಿ ಜಾತಿ ಬಾಂಧವರಿಗೆ ಊಟ ಹಾಕಿಸಿ ಗೌರವಿಸುತ್ತಾರೆ.

ಋತುಮತಿ:

ಮೇದರಲ್ಲಿ ಋತುಮತಿಯಾದಾಗ ಸೋದರ ಮಾವನು ಬಂದು ಬಿದಿರಿನ ಗುಡಿಸಲು ಮಾಡುತ್ತಾನೆ. ನೆರೆದವಳು ಒಂಬತ್ತರಿಂದ ಹನ್ನೊಂದು ದಿನ ಮೈಲಿಗೆ ಗುಡಿಸಲಿನಲ್ಲೆ ಕಳೆಯಬೇಕು. ಇಲ್ಲವಾದಲ್ಲಿ ಭೂತಗಳ ಕಾಟವಿರುತ್ತದೆ ಎಂಬ ನಂಬಿಕೆ. ಹನ್ನರಡನೇ ದಿವಸ ಒಂಬತ್ತು ಜನ ಮುತ್ತೈದೆಯರು ಬಂದು ನೀರಿಗೆ ಬೇವಿನ ಸೊಪ್ಪು, ಹಲಸಿನ ಎಲೆ ಹಾಕಿ ಕಾಯಿಸುತ್ತಾರೆ. ಆ ನಂತರ ಮುತ್ತೈದೆಯರು ಎಳ್ಳೆಣ್ಣೆ ಹಚ್ಚಿ ಸ್ನಾನ ಮಾಡಿಸುತ್ತಾರೆ. ಈ ರೀತಿಯ ಸೊಪ್ಪಿನ ನೀರಿನ ಸ್ನಾನ ಮಾಡಿಸಿದರೆ ಹುಡುಗಿಗೆ ಶೀತ, ಕೆಮ್ಮು ಉಂಟಾಗುವುದಿಲ್ಲವೆಂಬ ನಂಬಿಕೆಯೂ ಇವರಲ್ಲಿದೆ. ನೆರೆದ ಐದು ಅಥವಾ ಏಳು ಜನ ಆರತಿ ಎತ್ತುವ ಸಂಪ್ರದಾಯವಿದೆ. ಮಾವನು ಮನೆಯ ಮುಂದೆ ಚಪ್ಪರ ಹಾಕುತ್ತಾನೆ. ಬಂದವರಿಗೆಲ್ಲಾ ಆ ದಿನ ಊಟ ಹಾಕುತ್ತಾರೆ. ಋತುಮತಿಯಾದ ಹುಡುಗಿ ಮಲಗಿದ ಗುಡಿಸಲನ್ನು ಸೂತಕ ಕಳೆದ ತಕ್ಷಣ ಸುಟ್ಟು ಹಾಕುತ್ತಾರೆ.

ಮದುವೆ:

ಹಾವೇರಿ ಜಿಲ್ಲೆಯಲ್ಲಿರುವ ಮೇದಾರ ಸಮುದಾಯದವರು ತಮ್ಮ ಮಕ್ಕಳ ವಿವಾಹವನ್ನು ಹಿಂದೂ ಸಂಪ್ರದಾಯದಂತೆ ನೆರವೇರಿಸುತ್ತಾರೆ. ತಮ್ಮ ತಮ್ಮ ಬೆಡಗಿನಲ್ಲಿ ವಿವಾಹ ಮಾಡುವುದಿಲ್ಲ. ಅಂದರೆ ಸಗೋತ್ರ ವಿವಾಹ ನಿಷಿದ್ಧವಾಗಿದೆ. ಇದನ್ನು ಸಾಮಾಜಿಕ ಮಾನವಶಾಸ್ತ್ರಜ್ಞರು 'ಅಗಮ್ಯಗಮನ ನಿಷೇಧ' (Inscest Taboo) ವಿವಾಹ ಎಂದು

ಕರೆಯುತ್ತಾರೆ. ವಿವಾಹವನ್ನು ನಿಶ್ಚಯಿಸಲು ಯಜಮಾನರು ಮುಖ್ಯ ಪಾತ್ರವಹಿಸುತ್ತಾರೆ. ಕುಲದೇವರ ಅಪ್ಪಣೆ ಪಡೆದು ಹೆಣ್ಣಿರುವ ಮನೆಗೆ ಮುಖಂಡನೊಡನೆ ಹೋಗುತ್ತಾನೆ. ಅಲ್ಲಿ ಐದು ಅಥವಾ ಒಂಬತ್ತು ವೀಳ್ಯ, ಅಡಿಕೆಗಳನ್ನು ಬದಲಾಯಿಸಿಕೊಂಡು ಒಪ್ಪಿಗೆ ಮಾಡಿಕೊಳ್ಳುತ್ತಾರೆ. ಮೇದ ರಲ್ಲಿ ವಧುದಕ್ಷಿಣೆ ಕೊಡುವ ಪದ್ಧತಿಯಿದೆ. ಹಿಂದೆ ಒಂದು ಕಾಲು ರೂಪಾಯಿಗಳಾಗಿದ್ದ ಈ ತೆರ ಈಗ 250 ರೂ ಗಳಷ್ಟು ಮಾತ್ರ ಹೆಚ್ಚಾಗಿದೆ. ಆದರೆ ಇತರ ಜಾತಿಯವರನ್ನು ಅನುಸರಿಸುವ ಮೇದರು ವರದಕ್ಷಿಣೆ ತೆಗೆದುಕೊಳ್ಳುವುದನ್ನು ಅಭ್ಯಾಸ ಮಾಡಿಕೊಂಡಿದ್ದಾರೆ. ಅವರ ಅಂತಸ್ತು ಸ್ಥಾನಮಾನಗಳಿಗೆ ಅನುಗುಣವಾಗಿ ವರದಕ್ಷಿಣೆ ನಿಗದಿಯಾಗುತ್ತದೆ.

ಮೇದರ ಸಂಪ್ರದಾಯದಂತೆ ಮದುವೆಯ ಹಿಂದಿನ ದಿನ ಚಪ್ಪರ ಹಾಕುತ್ತಾರೆ. ಅದಕ್ಕೆ ಮೊದಲು 'ಸ್ಥಂಭ ಪೂಜೆ' ಮಾಡುತ್ತಾರೆ. ಹನ್ನೆರಡು ಕಂಬದ ಚಪ್ಪರ ಇವರಿಗೆ ಶುಭದಾಯಕ. ಮದುವೆ ಕಾರ್ಯ ಹೆಚ್ಚಾಗಿ ಹೆಣ್ಣಿನ ಮನೆಯಲ್ಲಿಯೇ ನಡೆಯುತ್ತದೆ. ಈ ಸಮಯದಲ್ಲಿ ಎಣ್ಣೆ ಶಾಸ್ತ್ರ, ಸುರಿಗೆ ನೀರು, ಕಂಕಣ ಶಾಸ್ತ್ರ, ಗಂಗೆ ಪೂಜೆ, ಹಿರಿಯರ ಪೂಜೆ ಇತ್ಯಾದಿ ಸಂಪ್ರದಾಯಗಳನ್ನು ಅನುಸರಿಸುತ್ತಿರುವುದನ್ನು ಕಾಣುತ್ತೇವೆ. ಇವರಲ್ಲಿ ಬಾಲ್ಯವಿವಾಹ, ಬಹುಪತ್ನಿತ್ವ ಹಾಗೂ ವಿಧವಾ ವಿವಾಹಕ್ಕೂ ಅವಕಾಶವಿದೆ. ಆದರೆ ಬಹುಪತ್ನಿತ್ವ ಕಡಿಮೆ. ಆದರೂ ಮೊದಲ ಹೆಂಡತಿ ರೋಗಿಷ್ಟೆಯಾದರೆ, ಬಂಜೆಯಾದರೆ, ಜಾತಿ ಮುಖಂಡನ ಗಮನಕ್ಕೆ ತಂದು ಮರು ವಿವಾಹವಾಗಬಹುದು. ಮೇದರನ್ನು ಈಗಲೂ ಬಡತನ ಕಾಡುತ್ತಿರುವುದರಿಂದ ಬುಹುಪತ್ನಿತ್ವ ತುಂಬಾ ಅಪರೂಪ. ಆದರೆ ಇಲ್ಲವೆ ಇಲ್ಲ ಎಂದು ಹೇಳಲಾಗುವುದಿಲ್ಲ.

ಸೀಮಂತ:

ಸಾಮಾನ್ಯವಾಗಿ ಬಸುರಿಯಾದ ಏಳು ಅಥವಾ ಒಂಬತ್ತನೇ ತಿಂಗಳಲ್ಲಿ ಸೀಮಂತದ ಆಚರಣೆ ಮಾಡುತ್ತಾರೆ. ಹುಡುಗಿ ಮೊದಲನೇ ಸಾರಿ ಬಸುರಿಯಾದಗ ತಾಯಿ ಮನೆಯಿಂದ ಹಣ್ಣು ಹೂವುಗಳನ್ನು ಅವಳಿಗೆ ಕಳುಹಿಸಿಕೊಡುತ್ತಾರೆ. ಗಂಡನ ಮನೆಯಲ್ಲಿ ಸೀಮಂತದ ಆಚರಣೆ ನಡೆಸುತ್ತಾರೆ. ಸೀಮಂತದ ದಿನ ಮನೆಯಲ್ಲಿ ಬಳೆ ತೊಡಿಸುವ ಶಾಸ್ತ್ರವಿರುತ್ತದೆ. ಬಸುರಿಗೆ ಮಾತ್ರವಲ್ಲದೆ ಮನೆಯಲ್ಲಿರುವ ಮುತ್ತೈದೆಯರು, ಹುಡುಗಿಯ ತಾಯಿ ಹಾಗೂ ಬಂಧುಗಳಿಗೆ ಬಳೆ ತೊಡಿಸುತ್ತಾರೆ. ಸೀಮಂತದ ದಿವಸ ಹತ್ತು ತಟ್ಟೆಗಳಲ್ಲಿ ಹಣ್ಣು, ಹೂವು, ವಿವಿಧ ತಿಂಡಿಗಳನ್ನು ತಯಾರುಮಾಡಿಕೊಳ್ಳುತ್ತಾರೆ. ಒಂದು ತಟ್ಟೆಯಲ್ಲಿ ಹೂವು, ಗಂಧದ ಎಣ್ಣೆ, ವೀಳೆದೆಲೆ, ಅಡಿಕೆ, ಅರಿಶಿನ, ಕುಂಕುಮ ಇಡುತ್ತಾರೆ. ಉಳಿದ ಎರಡು ತಟ್ಟೆಗಳಲ್ಲಿ ಐದು ಬಗೆಯ ಹಣ್ಣುಗಳನ್ನು ತರುತ್ತಾರೆ. ಉಳಿದ ತಟ್ಟೆಗಳಲ್ಲಿ ಸಿಹಿ ಹಾಗೂ ಖಾರದ ತಿಂಡಿಗಳನ್ನು ಸಿದ್ಧಪಡಿಸುತ್ತಾರೆ. ಹಿಂದೆ ಸೀಮಂತಕ್ಕಾಗಿ ಲಾಡು, ಹೋಳಿಗೆ, ಕಜ್ಜಾಯ, ಎಳ್ಳುಂಡೆ, ಕರ್ಜಿಕಾಯಿ, ಕಡ್ಲೆಉಂಡೆ, ಚಕ್ಕಲಿ, ಅವಲಕ್ಕಿ, ವಡೆ ಮರಿಉಂಡೆಗಳನ್ನು ಮಾಡುತ್ತಿದ್ದರು. ಈಗ

ಹೆಚ್ಚಾಗಿ ಅಂಗಡಿಯಿಂದ ತರುತ್ತಾರೆ. ಸೀಮಂತವಾದ ನಂತರ ತಾಯಿ, ತಂದೆಯರ ಜೊತೆ ಹೆರಿಗೆಗಾಗಿ ತಾಯಿಯ ಮನೆಗೆ ಕಳಿಸಿಕೊಡುತ್ತಾರೆ.

ಕುಲದೇವತೆ:

ಹಾವೇರಿ ಜಿಲ್ಲೆಯ ಮೇದ ಸಮುದಾಯವು ಶ್ರೀ ಮರಿಯಮ್ಮ ದೇವಿಯನ್ನು ಕುಲದೇವತೆಯಾಗಿ ಸ್ವೀಕರಿಸಿದೆ. ಮಲಯದಿಂದ (ಬೆಟ್ಟ) ಬಿದಿರು ತಂದು ಜೀವನಕ್ಕೆ ದಾರಿ ಮಾಡಿಕೊಟ್ಟ ಮಲಯಕ್ಕೆ ಭೂ ತಾಯಿ ಆರಾಧನೆ ಮಾಡಿಕೊಂಡು ಈವರೆಗೂ ಬಂದಿದ್ದಾರೆ. ಅರಣ್ಯದಿಂದ ಬಿದಿರು ಕಳಿಲು (ಬೊಡ್ಡೆಯಲ್ಲಿನ ಮೊಳಕೆ) ಒಡೆಯುವ ಸಂದರ್ಭದಲ್ಲಿ ತಮ್ಮ ಕಾಯಕದ ಆಯುಧಗಳನ್ನು ಇಟ್ಟು ಪೂಜಿಸುತ್ತಾರೆ.

ಹಬ್ಬಗಳು:

ಹಿಂದೂ ಧರ್ಮಕ್ಕೆ ಸಂಬಂಧಿಸಿದ ಎಲ್ಲಾ ಹಬ್ಬಗಳನ್ನು ಮೇದರು ಆಚರಿಸುವುದಾಗಿ ಹೇಳಿದರೂ ಅವರ ಆಚರಣೆಯಲ್ಲಿ ಸಾಕಷ್ಟು ಭಿನ್ನತೆಗಳಿವೆ. ದೀಪಾವಳಿ, ಯುಗಾದಿ, ಶಿವರಾತ್ರಿ, ಗಣಪತಿ ಹಬ್ಬ, ಮಾರನವಮಿ, ನವರಾತ್ರಿ ಹಬ್ಬಗಳಲ್ಲದೆ ತಮ್ಮ ವೃತ್ತಿಗೆ ಸಂಬಂಧಿಸಿದ ಕತ್ತಿ ಹಬ್ಬ (ಹಾವೇರಿಯಲ್ಲಿ ಮರಿಯಮ್ಮ ಉತ್ಸವ) ವನ್ನು ಆಚರಿಸುತ್ತಾರೆ. ದೀಪಾವಳಿಯನ್ನು ವಿಶೇಷವಾಗಿ ಆಚರಿಸುತ್ತಾರೆ. ಮನೆಯ ಹೆಣ್ಣು ಮಕ್ಕಳನ್ನು ಕರೆಸಿಕೊಂಡು ಅವರಿಗೆ ಉಡುಗೊರೆಗಳನ್ನು ಕೊಡುತ್ತಾರೆ. ಅಳಿಯನಿಗೆ ಹೊಸ ಬಟ್ಟೆಯನ್ನು ಕೊಡುತ್ತಾರೆ. ಈ ಹಬ್ಬದ ದಿನ ಸಿಹಿ ಅಡಿಗೆಯನ್ನು ಮಾಡುತ್ತಾರೆ. ಸಾಯಂಕಾಲ ಎಲ್ಲರೂ ತಮ್ಮ ಕುಲದೇವತೆಯ ಗುಡಿಯಲ್ಲಿ ಪೂಜೆ ಮಾಡಿಸುತ್ತಾರೆ. ಮಹಾನವಮಿಯ ದಿನ 'ಬಲಿ' ಕೊಡುವ ಕಾರ್ಯಕ್ರಮಗಳಿರುತ್ತವೆ. ನವರಾತ್ರಿಯ ದಿನ ಮನೆಯಲ್ಲಿನ ಆಯುಧಗಳನ್ನು ಇಟ್ಟು ಪೂಜಿಸಿ ಬಲಿಕೊಡುವ ಸಂಪ್ರದಾಯವೂ ಇದೆ.

ಸಾವಿನ ಆಚರಣೆಗಳು:

ಸಾವಿನ ಆಚರಣೆಗಳು ಉಳಿದ ಸಮುದಾಯಗಳಲ್ಲಿ ಕಂಡುಬರುವ ವಿಧಿ ವಿಧಾನಗಳಂತೆ ಮೇದರಲ್ಲಿಯೂ ಕಂಡುಬರುತ್ತಿವೆ. ಇವರಲ್ಲಿ ಗಂಡಸು ಸತ್ತಾಗ, ಹೆಂಡತಿಯನ್ನು ಗಂಡನ ಹೆಣದ ಪಕ್ಕದಲ್ಲಿ ಕೂರಿಸುತ್ತಾರೆ. ಗಂಡಸು ಸಾಯುವ ಸ್ಥಿತಿಯಲ್ಲಿರುವಾಗಲೇ ಮನೆಯ ಹೊರಗೆ ಹಾಕುತ್ತಾರೆ. ಕಾರಣ ಮನೆಯ ಒಳಗೆ ಸತ್ತರೆ ಮನೆ ಬಿಡಬೇಕಾಗುತ್ತದೆ ಎಂಬ ಭಯ ಇವರಿಗಿರುವುದರಿಂದ. ಈ ಭಯದ ಪರಿಣಾಮವೆಂದರೆ ಆತ ಸಾಯಲು ಇನ್ನೂ ಬಹಳ ಕಾಲ ಬೇಕಾಗಿದ್ದರೂ ಇವರು ಸಾಯುವ ಸ್ಥಿತಿಯಲ್ಲಿರುವವನನ್ನು ಶವವೆಂದೇ ಭಾವಿಸುತ್ತಾರೆ. ಈ ಕೆಟ್ಟ ಆಚರಣೆ ಇತ್ತೀಚಿಗೆ ರೂಢಿಗೆ ಬಂದಿದೆ ಎಂದು ಬೇಸರ ವ್ಯಕ್ತಪಡಿಸುತ್ತಾರೆ. ಹೆಣದ ಹತ್ತಿರ

ಕುಳಿತ ಹೆಂಡತಿ, ವೀಳೆಯನ್ನು ಗಂಡನ ಮನೆಯ ಸಂಬಂಧಿಗಳಿಗೆ ಕೊಟ್ಟು ಋಣ ತೀರಿತೆಂದು ಹೇಳುತ್ತಾಳೆ. ಹೆಣವನ್ನು ಹೊತ್ತೊಯ್ಯುವಾಗ ಕೆಂಡ ಇರುವ ಮಡಿಕೆಯನ್ನು ಇವರು ಹಿಡಿಯುವುದಿಲ್ಲ. ಬದಲಾಗಿ ಸ್ಮಶಾನದ ಹತ್ತಿರದವರೆಗೆ ಹಾಲು-ಮೊಸರು ಇರುವ ಕುಡಿಕೆ ಹಿಡಿಯುತ್ತಾರೆ. ಸ್ಮಶಾನ ಹತ್ತಿರ ಬಂದ ತಕ್ಷಣ ಆ ಮಡಿಕೆಯನ್ನು ಒಡೆದು ಹಾಕುತ್ತಾರೆ. ಹೆಣವನ್ನು ಹೂತು ಪಕ್ಕದಲ್ಲಿ ಅವರಿಗೆ ಬೇಕಾದ ಸರಾಯಿ, ಬೀಡಿ, ವೀಳ್ಯಗಳನ್ನು ಇಡುತ್ತಾರೆ. ಹೊಸ ಮಡಿಕೆಯಲ್ಲಿ ನೀರು ತೆಗೆದುಕೊಂಡು ಹೋಗಿ ಅದನ್ನು ತೂತು ಮಾಡಿ ಆ ನೀರಿನಿಂದ ಹೂತಿರುವ ಜಾಗವನ್ನು ಸುತ್ತುತ್ತಾರೆ. ನಂತರ ಬಾಯಿ ಬಡಿದುಕೊಂಡು ಬರುತ್ತಾರೆ. ಹೆಣ ಹೊತ್ತವರಿಗೆ ಹುಳಿ ನೀರಿನಿಂದ ಶುದ್ಧಗೊಳಿಸುತ್ತಾರೆ. ನಂತರ ಸ್ನಾನ ಮಾಡಿ ದೇವಸ್ಥಾನವನ್ನು ಮೊದಲು ಪ್ರವೇಶಿಸಿ ಅಲ್ಲಿ ಪೂಜೆ ಮಾಡಿಕೊಂಡು ಮನೆಗೆ ಬರುತ್ತಾರೆ. ಇಲ್ಲಿಯೂ ದೇವರ ಫೋಟಕ್ಕೆ ದೀಪ ಹಚ್ಚುತ್ತಾರೆ. ಇಲ್ಲಿಗೆ ಹೆಣ ಹೊತ್ತ ಸೂತಕ ಕಳೆಯುತ್ತದೆ.

ಸತ್ತ ಮೂರನೆಯ ದಿನ ಹಾಲು, ತುಪ್ಪ, ಹಾಗೂ ಸಿಹಿ ಪದಾರ್ಥಗಳನ್ನು ಕೊಂಡು ತಂದು ಸಮಾಧಿಯ ಹತ್ತಿರ ಇಟ್ಟು ಬರುತ್ತಾರೆ. ಅದನ್ನು ಕಾಗೆಗಳು ಇತರ ಪ್ರಾಣಿಗಳು ತಿನ್ನುತ್ತವೆ. ಮತ್ತೆ ಹನ್ನಂದನೇ ದಿನ ಮಾಡಿದ ಅಡಿಗೆಗಳನ್ನು ಸಮಾಧಿಯ ಹತ್ತಿರ ಎಡೆ ಇಟ್ಟು ಬರುತ್ತಾರೆ. ನಂತರ ಅದನ್ನು ತೆಗೆದುಕೊಂಡು ಬಂದು ಎಲ್ಲರೂ ಪ್ರಸಾದವಾಗಿ ತಿನ್ನುತ್ತಾರೆ. ಸಮಾಧಿಯ ಹತ್ತಿರವಿಟ್ಟ ಪದಾರ್ಥಗಳನ್ನು ಆ ಸಂದರ್ಭದಲ್ಲಿ ಕಾಗೆಗಳು ಬಂದು ಮುಟ್ಟಿದರೆ ಮಾತ್ರ ಇದು ಎಡೆಯಾದಂತೆ. ಆ ರೀತಿ ಮುಟ್ಟಿದ 'ಎಡೆ' ಪ್ರಸಾದವಾಗಿ ಇಷ್ಟವೆನಿಸುತ್ತದೆ. ಮತ್ತು ಹಿರಿಯರ ಆತ್ಮ ತೃಪ್ತವಾಗುತ್ತದೆಂದು ಇವರು ನಂಬುತ್ತಾರೆ. ಪ್ರತೀ ವರ್ಷ ಹಬ್ಬದಲ್ಲಿ ಹಿರಿಯರ ಪೂಜೆ ಮಾಡುತ್ತಾರೆ. ಸತ್ತವರಿಗೆ ಸರಿಯಾಗಿ ಕ್ರಿಯೆ ಮಾಡದಿದ್ದರೆ ಅವರ ಆತ್ಮ ಅಳುತ್ತಿರುತ್ತದೆ. ಅಂಥ ಸಂದರ್ಭದಲ್ಲಿ ಕುಟುಂಬಕ್ಕೆ ಒಳ್ಳೆಯದಾಗುವುದಿಲ್ಲ ಎಂಬ ನಂಬಿಕೆ ಮೇದರರದು. ತೊನ್ನು, ಕುಷ್ಟ ರೋಗದವರು ಸತ್ತರೆ ಸುಟ್ಟು ಹಾಕುವ ಸಂಪ್ರದಾಯವಿದೆ.

ಮೇದ ಬುಡಕಟ್ಟಿನ ಪ್ರಸ್ತುತ ಸಾಮಾಜಿಕ ಸ್ಥಿತಿಗತಿಗಳು:

ಮೇದರ ಇಂದಿನ ಸಾಮಾಜಿಕ, ರಾಜಕೀಯ, ಧಾರ್ಮಿಕ ವಿಚಾರಗಳನ್ನು ತಿಳಿಸುವ ಸಲುವಾಗಿ ಇದೇ ಸಮುದಾಯದ ಮುಂದಾಳುವಾದ ಶ್ರೀ ಆನಂದಪಾರಾಂಡೆ ಹಾಗೂ ಶ್ರೀ ನಂದೀಶ ಪರಾಂಡೆಯವರು ಮಂಡ್ಯದಲ್ಲಿ 'ಕೇತೇಶ್ವರ ವಾಣಿ' ಎಂಬ ಪತ್ರಿಕೆಯನ್ನು ಪ್ರಕಟಿಸುತ್ತಿದ್ದಾರೆ. ಈ ಪತ್ರಿಕೆಯು 'ಮೇದ' ಬುಡಕಟ್ಟಿನ ಸಮಗ್ರ ಅಭಿವೃದ್ಧಿಗೆ ಸಾಕಷ್ಟು ಒತ್ತು ಕೊಟ್ಟು ಪತ್ರಿಕೆಯ ಮೂಲ ಕಾಳಜಿಯನ್ನು ವ್ಯಕ್ತಪಡಿಸುತ್ತದೆ. ಜೊತೆಗೆ ರಾಜ್ಯದ ಅನೇಕ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಮೇದರಿಗೊಂದು 'ಮೇದಾರ ಔದ್ಯೋಗಿಕ ವ್ಯಾಪಾರಿ ಸಹಕಾರಿ ಸಂಘ' ಅನಿವಾರ್ಯವಾಗಿದೆ.

ಹಾವೇರಿ ಜಿಲ್ಲೆಯ ರಾಣೇಬೆನ್ನೂರಿನಲ್ಲಿ 'ಶ್ರೀ ಮರಿಯಮ್ಮ ದೇವಿ ಕೈಗಾರಿಕಾ ಸಂಘ' (ರಿ) ಸ್ಥಾಪಿಸಿಕೊಂಡಿರುವುದು ಈ ಜನಾಂಗದ ಸಂಘಟನೆಯನ್ನು ತೋರಿಸುತ್ತದೆ. ಸರಕಾರದಿಂದ ಸೌಲಭ್ಯ ಪಡೆದುಕೊಳ್ಳಲು ಸಂಘ ಹೆಚ್ಚು ಲಾಭದಾಯಕವೂ, ಸಮಾಜಕ್ಕೆ ಪ್ರೋತ್ಸಾಹಕವೂ ಆಗಿದೆ. ಅಂದ ಮಾತ್ರಕ್ಕೆ ಮೇದರ ಅಭಿವೃದ್ಧಿ ಇಷ್ಟರಿಂದಲೇ ಆಗುತ್ತದೆಂದು ಭಾವಿಸಬೇಕಾಗಿಲ್ಲ. ಇದು ಅವರ ಸ್ಪರ್ಧಾತ್ಮಕ ಯುಗದಲ್ಲಿ ಬದುಕಲು ನಡೆಸುವ ಹೋರಾಟದ ಪ್ರತೀಕ. ಇದರ ಮೂಲಕ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಬಿದಿರು ಕೊಳ್ಳಲು ಮನವಿ ಮಾಡಿಕೊಳ್ಳುತ್ತಾರೆ. ಅಧಿಕಾರಿಗಳು ಒಬ್ಬರಿಗೆ ಮೂರು ತಿಂಗಳಷ್ಟು ಆಗುವ ಬಿದಿರನ್ನು ಸರಕಾರಿ ದರದಲ್ಲಿ ನೀಡುತ್ತಾರೆ. ಇದು ಆ ಜನರ ಉದ್ಯೋಗಕ್ಕೆ ಸಾಲದಾಗಿದೆ ಮತ್ತು ರಿಯಾಯಿತಿ ದರದಲ್ಲಿ ಬಿದಿರು ನೀಡದಿರುವುದೂ ಸಹ ಅವರ ಜೀವನ ದುಸ್ತರವಾಗಲಿಕ್ಕೆ ಕಾರಣವಾಗಿದೆ. ಒಬ್ಬರು ಪ್ರತೀ ದಿನ ಒಂದು ಬುಟ್ಟಿಯನ್ನು ಒಂದು 'ಗಳ' ದಲ್ಲಿ ತಯಾರಿಸುವರು. ಬಿದಿರು ಗಳದ ಬೆಲೆ ವಜಾ ಮಾಡಿ ಮಾರಾಟ ಮಾಡಿದ ಬುಟ್ಟಿಯ ಲಾಭದಲ್ಲಿ ಕೇವಲ 25ರೂಪಾಯಿಗಳು ಮಾತ್ರ ಉಳಿಯುತ್ತದೆ ಎಂಬ ವಿಷಯ ಸಂದರ್ಶನದ ಮೂಲಕ ತಿಳಿಯಿತು. ಇದರಿಂದ ಇವರ ಆರ್ಥಿಕ ಸಾಮಾಜಿಕ ಜೀವನ ತುಂಬಾ ಶೋಚನೀಯವಾಗಿರುವುದು ಕಂಡುಬರುತ್ತದೆ.

ಆರ್ಥಿಕ ಸ್ಥಿತಿಗತಿಗಳು:

ನನ್ನ ಕ್ಷೇತ್ರಕಾರ್ಯದಲ್ಲಿ ಮೇದ ಬುಡಕಟ್ಟಿನವರಿಗೆ ಲಭಿಸಿರುವ ಸರ್ಕಾರಿ ಸೌಲಭ್ಯಗಳನ್ನು ವಿಚಾರಿಸಿದಾಗ ಅವರ ಬದುಕು ಹಸನಾಗಲು ಯಾವುದೇ ಪರಿಣಾಮಕಾರಿ ಯೋಜನೆಗಳು ಲಭ್ಯವಾಗದಿರುವುದು ಕಂಡುಬಂತು. ಭೂ ಮಂಜೂರಾತಿ ಪ್ರಕ್ರಿಯೆ ನಿಷ್ಕ್ರೀಯವಾದಂತಾಗಿದೆ. ದರಖಾಸ್ತು ಮೂಲಕ ಜಮೀನನ್ನು ವಿತರಿಸುವ ಯೋಜನೆಯೂ ಇಲ್ಲವಾಗಿ ಅಂಗೈ ಅಗಲ ಜಾಗ ಸಿಗದಂತಾಗಿದೆ. ಕಳೆದ ದಶಕದಿಂದ ಭೂಮಿಗಾಗಿ ಹೋರಾಡುತ್ತಿದ್ದರೂ ಪ್ರಯೋಜನವಾಗಿಲ್ಲವೆಂದು ಮೇದರು ತಿಳಿಸುತ್ತಾರೆ. ಈಗಾಗಲೇ ಇರುವ ಜಮೀನಿಗೆ ನೀರಾವರಿ ಸೌಲಭ್ಯ ಪಡೆಯುವ ಉದ್ದೇಶವಿದ್ದರೂ ಕನಿಷ್ಟ ಒಂದು ಹೆಕ್ಟೇರ್ ಖಾತೆ ಜಮೀನು ಇರಬೇಕು. ಬಹುತೇಕ ಮೇದರ ಜಮೀನು 0–2 ಎಕರೆಯೊಳಗೆ ಇದ. ಆದಗೆ 'ಗೊಂಚಲು ಗ್ರಾಮ ಯೋಜನೆ'ಯಲ್ಲಾದರೂ ಸೌಲಭ್ಯ ಪಡೆಯಬಹುದೆಂದರೂ ಮೇದರ ಜಮೀನು ಒಂದೇ ಕಡೆ ಇರದೆ ಚದುರಿದವುಗಳು. ಕೆಲವು ಜಂಟಿಖಾತೆಯಿಂದಾಗಿ ಈ ಸೌಲಭ್ಯ ಪಡೆದರೂ, ದೂರದಲ್ಲಿರುವ ಕಡಿಮೆ ಜಮೀನಿನ ಹಿಡುವಳಿದಾರರು ಈ ಸೌಲಭ್ಯದಿಂದ ವಂಚಿತರಾಗಿ ಭೂಮಿಯಿಂದ ಉಪಯುಕ್ತ ಬೆಳೆಗಳನ್ನು ಬೆಳೆಯಲಾಗದೆ ಆರ್ಥಿಕ ಸಂಕಷ್ಟದಲ್ಲಿದ್ದಾರೆ.

ಕೋಷ್ಟಕ–5

ಹಾವೇರಿ ಜಿಲ್ಲೆಯ ಮೇದಾರರ ತಾಲೂಕು ಮತ್ತು ಗ್ರಾಮವಾರು ಭೂಹಿಡುವಳಿ

ಕ್ರ.ಸಂ	ತಾಲೂಕು	ಗ್ರಾಮ/ನಗರ	ಒಟ್ಟು ಮನೆಗಳು	ಹೊಂದಿರುವ ಕೃಷಿ ಭೂಮಿ (ಎಕರೆಗಳಲ್ಲಿ)			ಭೂರಹಿತರ ಮನೆಗಳು
				ಒಣ	ನೀರಾವರಿ	ಒಟ್ಟು	
1.	ರಾಣೇಬೆನ್ನೂರು	ರಾಣೇಬೆನ್ನೂರು	70	06	–	06	67
2.	ಸವಣೂರು	ಸವಣೂರು	15	–	–	–	15
3.	ಹಿರೇಕೆರೂರು	ಕಿರಗೇರಿ	10	–	–	–	10
4.	ಹಿರೇಕೆರೂರು	ರಟ್ಟೀಹಳ್ಳಿ	04	–	–	–	04
5.	ಹಿರೇಕೆರೂರು	ಮಾಸೂರು	04	–	–	–	04
6.	ಹಿರೇಕೆರೂರು	ಹಿರೇಕೆರೂರು	30	02	–	02	28
7.	ಹಿರೇಕೆರೂರು	ಚಿಕ್ಕೇರೂರು	01	–	–	–	01
8.	ಬ್ಯಾಡಗಿ	ಬ್ಯಾಡಗಿ	06	–	–	–	06
9.	ಬ್ಯಾಡಗಿ	ಸಿಡೆನೂರು	03	–	–	02	02
10.	ಹಾವೇರಿ	ಹಾವೇರಿ	10	–	–	–	10
11.	ಹಾವೇರಿ	ಚಿಕ್ಕಲಿಂಗದಳ್ಳಿ	01	02	–	02	–
12.	ಹಾವೇರಿ	ಹೊಸರಿತ್ತಿ	01	–	–	–	01
13.	ಹಾವೇರಿ	ಗುತ್ತಲ	01	–	–	–	01
14.	ಹಾನಗಲ್	ಅಕ್ಕಿಆಲೂರು	15	–	–	–	15
15.	ಹಾನಗಲ್	ಗುತ್ತಲ	01	–	–	–	01
16.	ಶಿಗ್ಗಾಂವ	ಶಿಗ್ಗಾಂವ	10	–	–	–	10
17.	ಶಿಗ್ಗಾಂವ	ಬಂಕಾಪುರ	12	–	–	–	12
18.	ಶಿಗ್ಗಾಂವ	ಚಂದಾಪುರ	25	40	08	48	–
19.	ಶಿಗ್ಗಾಂವ	ರಾಜೀವನಗರ	01	–	–	–	01
	ಒಟ್ಟು		**220**	**52**	**08**	**60**	**188**


ಮೇದರರ ಮೂಲ ಕಸುಬು ಬಿದಿರು ಮತ್ತು ಬೊಂಬುಗಳಿಂದ ಸಾಮಾಗ್ರಿ ಮತ್ತು ಉಪಕರಣಗಳನ್ನು ಸಿದ್ಧಪಡಿಸುವುದು. ಇದು ಅವರ ಕುಲಕಸುಬು. ಆದರೆ ಈ ಪರಂಪರಾಗತ ಕಸುಬನ್ನಷ್ಟೇ ಇವರು ಉಳಿಸಿಕೊಂಡರೆ ಈಗ ಜೀವನ ನಿರ್ವಹಣೆ ಸಾಧ್ಯವಿಲ್ಲವೆನ್ನುತ್ತಾರೆ. ಹಾಗಾಗಿ ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ಸಾಕಷ್ಟು ಹೋರಾಟ ನಡೆಸುತ್ತಾರೆ. ಆದರೆ ಈವರೆಗೊ

ಪ್ರಕೃತಿಯೇ ಇವರನ್ನು ಸಾಕಿ ಸಲಹಿರುವುದರಿಂದ ಕುಲಕಸುಬಿನಿಂದ ಇವರು ಹಿಂದೆ ಸರಿಯುವುದಿಲ್ಲವೆಂದು ಹೇಳುತ್ತಾರೆ. ಬದುಕು ಸಾಗಬೇಕಾದರೆ ಉದ್ಯೋಗವಂತೂ ಬೇಕೇಬೇಕು. ಆದರೆ ಮೂಲ ಕಸುಬು ಇಂದು ಲಾಭದಾಯಕವಲ್ಲವೆಂಬ ಕೊರಗು ಇವರಿಗಿದೆ. ಜೊತೆಗೆ ಮಕ್ಕಳನ್ನು ಈ ವೃತ್ತಿಯಲ್ಲಿ ಬಳಸಿಕೊಂಡಿದ್ದರಿಂದ, ಅವರ ಮಕ್ಕಳ ಶಿಕ್ಷಣದ ಬಗ್ಗೆ ಗಮನ ಹರಿಸಿಲ್ಲದಿರುವುದು ಗೊತ್ತಾಗುತ್ತದೆ. ಸರಕಾರಿ ಕೆಲಸಗಳಲ್ಲಿ ಇವರು ಕಂಡುಬರುವುದು ಅತಿ ಕಡಿಮೆ. ಶೈಕ್ಷಣಿಕವಾಗಿ ಅತೀ ಹಿಂದುಳಿದ ಇವರಿಗೆ ಸರಕಾರಿ ಕೆಲಸಗಳು ಸಿಗುವುದು ಅತೀ ಕಷ್ಟ. ಅಲ್ಪ ಸ್ವಲ್ಪ ವಿದ್ಯಾಭ್ಯಾಸ ಪಡೆದವರು ಸಣ್ಣ ಪುಟ್ಟ ನೌಕರಿಗಳನ್ನು ಗಿಟ್ಟಿಸಿಕೊಂಡಿದ್ದಾರೆ.

ಕೋಷ್ಟಕ–6

ಕೆಲಸಗಳಲ್ಲಿ ತೊಡಗಿಕೊಂಡಿರುವ ಹಾವೇರಿ ಜಿಲ್ಲೆಯ ಮೇದಾರರ ಪ್ರಮಾಣ:

ಕ್ರ.ಸಂ.	ಕೆಲಸದ ವಿವರಗಳು	ಪುರುಷ	ಸ್ತ್ರೀ	ಒಟ್ಟು
01	ಬಿದಿರಿನ ಕೆಲಸ	487	133	620
02	ಕೃಷಿ	43	39	82
03	ಕೂಲಿ	38	30	68
04	ಸಣ್ಣ ವ್ಯಾಪಾರ	50	04	54
05	ಸರ್ಕಾರಿ/ಖಾಸಗಿ ನೌಕರಿ	08	00	08
06	ಇತರೆ ಕೆಲಸ (ಗಾರೆ ಕೆಲಸ, ಹಮಾಲಿ) ರಪೇರಿ, ವರ್ಕ್ಸ್, ರದ್ದಿ ಸಂಗ್ರಹ, ಗ್ಯಾರೇಜ್ ಇತ್ಯಾದಿ)	97	53	150
	ಒಟ್ಟು	**533**	**449**	**982**




ಶೈಕ್ಷಣಿಕ ಸ್ಥಿತಿಗತಿಗಳು:

'ಮೇದ' ಬುಡಕಟ್ಟಿನ ಹಲವಾರು ಸಮಸ್ಯೆಗಳಲ್ಲಿ ಶೈಕ್ಷಣಿಕ ಸಮಸ್ಯೆಯು ಪ್ರಮುಖವಾಗಿದೆ. ಅವರ ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ಸಮೀಕ್ಷೆ ಮಾಡಿದಾಗ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ನೆಲೆಸಿರುವ ಮೇದ ಜನರು ಮಾತ್ರ ತಮ್ಮ ಮಕ್ಕಳನ್ನು ಇತ್ತೀಚೆಗೆ ಸ್ಕೂಲಿಗೆ ಕಳಿಸುತ್ತಿರುವುದು ಕಂಡು ಬರುತ್ತದೆ. ಏಳನೇ ತರಗತಿಯವರೆಗೆ ಶೇಕಡ 10.07ರಷ್ಟು ಮಕ್ಕಳು ಇದ್ದರೆ, ಎಸ್.ಎಸ್.ಎಲ್.ಸಿ. ವರೆಗೆ ಶೇ.6.24ರಷ್ಟು ಪ್ರಮಾಣದಲ್ಲಿದ್ದಾರೆ. ಪಿ.ಯು.ಸಿ. ವರೆಗೆ ಶೇ.0.96 ರಷ್ಟು, ಉನ್ನತ ಶಿಕ್ಷಣ ಪಡೆದವರು ಶೇ.1.56 ರ ಪ್ರಮಾಣದಲ್ಲಿದ್ದಾರೆ. ಹೆಚ್ಚಿನ ಮಾಹಿತಿಗೆ ಕೆಳಗಿನ ಕೋಷ್ಟಕ 7 ನ್ನು ನೋಡಿರಿ. ಸಮಾಜ ಇತ್ತೀಚೆಗೆ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಒತ್ತು ಕೊಡುತ್ತಿರುವುದು ಕಾಣುತ್ತದೆ. ಆದರೂ ಶೇಕಡ *80ಕ್ಕೂ* ಹೆಚ್ಚು ಜನರು ಅನಕ್ಷರಸ್ಥರಿರುವುದು ಸಮೀಕ್ಷೆಯ ಮೂಲಕ ಕಂಡುಬರುತ್ತದೆ. ಕೇಂದ್ರ ಸರಕಾರ ಇತ್ತೀಚೆಗೆ ಮೇದಾರ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿದ್ದೂ ಈ ಸಮಾಜದ ಸರ್ವತೋಮುಖ ಏಳಿಗೆಗೆ ಸಹಾಯಕವಾಗಿದೆ.

ಕೋಷ್ಟಕ–7

ಹಾವೇರಿ ಜಿಲ್ಲೆಯ ಮೇದಾರರ ಶೈಕ್ಷಣಿಕ ಸ್ಥಾನಮಾನ:

ಕ್ರ.ಸಂ	ವಿವರಗಳು	ಪುರುಷ	ಸ್ತ್ರೀ	ಒಟ್ಟು	ಶೇಕಡ
01	ಒಟ್ಟು ಜನಸಂಖ್ಯೆ	**533**	**449**	**982**	**100%**
02	ಸಾಕ್ಷರತೆಗೆ ಅನರ್ಹರು (4 ವರ್ಷದ ಒಳಗಿನವರು)	77	71	148	15.07%
03	ಸಾಕ್ಷರತೆಗೆ ಅರ್ಹರು (4 ವರ್ಷದ ಮೇಲ್ಪಟ್ಟವರು)	456	378	834	84.93%
04	ಪ್ರಾಥಮಿಕ /ಮಾಧ್ಯಮಿಕ ಶಿಕ್ಷಣ	44	40	84	10.07%
05	ಪ್ರೌಢಶಿಕ್ಷಣ	34	18	52	6.24%
06	ಪದವಿಪೂರ್ವ/ಡಿಪ್ಲಮೊ/ಐ.ಟಿ.ಐ)	08	00	08	0.96%
07	ಉನ್ನತ ಶಿಕ್ಷಣ	13	00	13	1.56%
08	ಅನಕ್ಷರಸ್ಥರು	357	320	677	81.18%



ಬುಡಕಟ್ಟುಗಳ ಏಳ್ಗೆಗಾಗಿ ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು ಕೈಗೊಂಡಿರುವ ಕಾರ್ಯಕ್ರಮಗಳು ಹಾಗೂ ನೀತಿಗಳಿಂದಾಗಿ, ದೇಶದ ಎಲ್ಲ ಬುಡಕಟ್ಟುಗಳ ಸರ್ವತೋಮುಖ ಅಭಿವೃದ್ಧಿ ಆಗುತ್ತದೆಂಬ ನಂಬಿಕೆ ಹುಟ್ಟಿಸುತ್ತದೆ. ವಾಸ್ತವದಲ್ಲಿ ಯೋಜನೆಗಳಿಗಿಂತ ಯೋಚನೆಗಳು ಉನ್ನತವಾಗಿದೆ ಎಂದು ಕಲ್ಪಿಸಿ, ಯೋಜನೆಗಳ ಸಂಖ್ಯೆ ಮತ್ತು ಇದಕ್ಕೆ ಮೀಸಲಿಡುವ ಹಣ ಮಾತ್ರ ಬೃಹದಾಕಾರವಾಗಿ ಆಗುತ್ತಿವೆಯೇ ಹೊರತು ಬುಡಕಟ್ಟುಗಳ ಅಗತ್ಯಕ್ಕನುಗುಣವಾಗಿ ಯೋಜಿತವಾಗುತ್ತಿಲ್ಲದಿರುವುದರಿಂದ ಯೋಜನೆಗಳು ಫಲಕಾರಿಯಾಗುತ್ತಿಲ್ಲ. ಈ ನೀತಿ ಮೇದ ಬುಡಕಟ್ಟುವಿಗೂ ಅನ್ವಯಿಸುತ್ತದೆ. ಜೀವನಕ್ಕೆ ಮೂಲಾಧಾರವಾಗಿರುವ 'ಮೇದಾರಿಕೆ ವೃತ್ತಿ'ಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡದಿರುವುದು ಈ ಸಮುದಾಯ ಇಂದಿಗೂ ಅನೇಕ ಸಮಸ್ಯೆ ಸವಾಲುಗಳನ್ನು ಎದುರಿಸುತ್ತಿದೆ. ಬಿದಿರಿನಿಂದ ಪರ್ಯಾಯ, ಆಕರ್ಷಕ ಸರಕುಗಳ ಉತ್ಪಾದನೆಗೆ ಬೇರು ಮಟ್ಟದ ಚಿಂತನೆಗಳಾಗದೇ ಇರುವುದು, ಸೂಕ್ತ ಮಾರುಕಟ್ಟೆಗಳಿಲ್ಲದೆ ಸೊರಗುತ್ತಿರುವ ಈ ವೃತ್ತಿಗೆ ಜನಾಕರ್ಷಣೆಯಾಗುವಂತೆ ಮಾರುಕಟ್ಟೆ ಒದಗಿಸಿ, ಈ ವೃತ್ತಿಯ ಸಾಂಪ್ರದಾಯಿಕ ಜ್ಞಾನ ಪರಂಪರೆಯನ್ನು ಉಳಿಸಿಕೊಳ್ಳುವ ಕಾಳಜಿ ಯಾರಿಗೂ ಇದ್ದಂತಿಲ್ಲ. ಈ ವೃತ್ತಿಯ ಜೊತೆಗೆ ಪರ್ಯಾಯ ವೃತ್ತಿಯನ್ನಾಗಿ ಕೃಷಿಯನ್ನೇ ಮೊದಲ ಆಯ್ಕೆ ಮಾಡಿಕೊಳ್ಳುವ, ಕಷ್ಟಸಹಿಷ್ಣತೆಯುಳ್ಳ ಮೇದರಿಗೆ ಸರ್ಕಾರದಿಂದ ದೊರೆಯುವ ಭೂಮಿ ಮರೀಚಿಕೆಯಾಗಿದೆ. ರಾಜಕೀಯ, ಶಿಕ್ಷಣ, ಇತರೆ ಉದ್ಯೋಗಗಳಲ್ಲಿ ಸ್ಪರ್ಧಾತ್ಮಕತೆಯ ಕೊರತೆಯಿಂದಾಗಿ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಮೇದರು ಹಿಂದುಳಿದಿರುವುದು ಸಮೀಕ್ಷೆಯಿಂದ ತಿಳಿದುಬಂದಿದೆ.



ಸುಧಾರಿಸಲು ಕೈಗೊಳ್ಳಬೇಕಾದ ಕ್ರಮಗಳು:

1. ಕಡ್ಡಾಯವಾಗಿ ಮಕ್ಕಳು ಶಾಲೆಗೆ ಹೋಗುವಂತೆ ಪಾಲಕರನ್ನು ಪ್ರೇರೇಪಿಸುವುದು.
2. ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೂ ಹಾಸ್ಟಲ್, ಧನಸಹಾಯ, ಪ್ರತಿಯೊಂದು ಸೌಲಭ್ಯವನ್ನು ನೀಡಬೇಕಾಗಿದೆ.
3. ಇವರು ವಾಸಿಸುವ ಸ್ಥಳಗಳು ಕತ್ತಲಿನಿಂದ ಕೂಡಿರುತ್ತವೆ. ದೀಪ ವ್ಯವಸ್ಥೆ ಇರುವುದಿಲ್ಲ. ಭಾಗ್ಯ ಜ್ಯೋತಿ ದೀಪದ ವ್ಯವಸ್ಥೆ ಕಲ್ಪಿಸಬೇಕಾಗಿದೆ.
4. ವಸತಿ, ನೀರು, ಶೌಚಾಲಯ, ಸಮುದಾಯ ಭವನ, ಅಂಗನವಾಡಿ ಕೇಂದ್ರ, ಸಂಚಾರಿ ಶಾಲೆ, ಸಂಚಾರಿ ಗ್ರಂಥಾಲಯ ಇತ್ಯಾದಿ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕಾಗಿದೆ.
5. ಸ್ವ ಉದ್ಯೋಗ ಕೈಗೊಳ್ಳಲು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾಲದ ಸೌಲಭ್ಯವನ್ನು ಕಲ್ಪಿಸುವುದು ಸೂಕ್ತ.
6. ಮಹಿಳೆಯರ ಸಬಲೀಕರಣಕ್ಕಾಗಿ ಇತ್ತೀಚೆಗೆ ಸ್ವ-ಸಹಾಯ ಗುಂಪುಗಳು ತುಂಬಾ ನೆರವಾಗುತ್ತಿವೆ. ಈ ನಿಟ್ಟಿನಲ್ಲಿ ಇವರಿಗೆ ಎಲ್ಲಾ ರೀತಿಯ ಸೌಲಭ್ಯವನ್ನು ನೀಡಬೇಕಾಗಿದೆ.
7. ನಿರ್ಲಕ್ಷಿತ ವೃದ್ಧರು, ಅಂಗವಿಕಲರು ಹಾಗೂ ವಿಧವೆಯರಿಗೆ ಮಾಸಿಕ ವೇತನ ಕಲ್ಪಿಸಬೇಕಾಗಿದೆ.
8. ಮೂರು ತಿಂಗಳ ಖೋಟಾದಲ್ಲಿ ಬಿದಿರು ಸಂಖ್ಯೆಯ ಖೋಟಾವನ್ನು ಹೆಚ್ಚಿಸುವುದು.
9. ಬಿದಿರಿನ ಕೈಗಾರಿಕೆ ವಸ್ತುಗಳನ್ನು ಸರಕಾರವೇ ಕೊಳ್ಳುವಂತೆ ವ್ಯವಸ್ಥೆ ಮಾಡುವುದು.
10. ಬಡತನ ರೇಖೆಗಿಂತ ಕೆಳಗಿದ್ದವರಿಗೆ 'ಶಾದಿಭಾಗ್ಯ' ಯೋಜನೆ ಇವರಿಗೂ ಲಭಿಸುವಂತಾಗಬೇಕು.

3.5. ಬೇಡ ಸಮುದಾಯದ ಸಾಮಾಜಿಕತೆ

ಪ್ರಸ್ತುತ ಜಾಗತೀಕರಣ ಸಂದರ್ಭದಲ್ಲಿ ಬುಡಕಟ್ಟು ಸಮುದಾಯಗಳನ್ನು ಆಧುನಿಕ ಜಗತ್ತಿಗೆ ಪರಿಚಯ ಮಾಡಿಕೊಡಬೇಕಾದ ಅವಶ್ಯಕೆ ತುಂಬಾ ಇದೆ. ಕನ್ನಡ ನಾಡಿನ ಪರಿಸರದಲ್ಲಿ ಅನೇಕ ರೀತಿಯ ಜಾತಿ, ಜನಾಂಗ, ಪಂಗಡಗಳಿಗೆ ಸೇರಲ್ಪಟ್ಟಿರುವ ಆದಿವಾಸಿ ಅರಣ್ಯವಾಸಿ ಪಂಗಡಗಳು ಇವೆ. ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ಪಟ್ಟಿಯ ಪ್ರಕಾರ ಐವತ್ತು ಬುಡಕಟ್ಟುಗಳು ಕಂಡುಬರುತ್ತವೆ. ಅದರಲ್ಲಿ ವಿಶೇಷವಾಗಿ ಕೊರಗ ಮತ್ತು ಜೇನು ಕುರುಬ ಬುಡಕಟ್ಟುಗಳು ಆದಿಮ ವರ್ಗಕ್ಕೆ ಸೇರಿಸಲ್ಪಟ್ಟಿದೆ. ಉಳಿದ ನಲವತ್ತೆಂಟು ಬುಡಕಟ್ಟುಗಳನ್ನು ಪರಿಶಿಷ್ಟ ವರ್ಗದ ಸಾಮಾನ್ಯ ಗುಂಪಿಗೆ ಸೇರಿಸಲಾಗಿದೆ.

ಕರ್ನಾಟಕದಲ್ಲಿ ಕಂಡು ಬರುವ ಬುಡಕಟ್ಟುಗಳಲ್ಲಿ ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಅಲ್ಪ ಸಂಖ್ಯಾತವಾದ ಬುಡಕಟ್ಟುಗಳು ಹೇರಳವಾಗಿಯೂ ಉತ್ತರ ಕರ್ನಾಟಕದ ಬಯಲು ಸೀಮೆಯ ಗುಡ್ಡಗಾಡು ಪ್ರದೇಶಗಳಲ್ಲಿ ಬಹು ಸಂಖ್ಯಾತವಾದ ಅಲ್ಪ ಬುಡಕಟ್ಟುಗಳು ಕಾಣಸಿಗುವವು. ಜೊತೆಗೆ ಅರೆ ಅಲೆಮಾರಿತನವನ್ನೇ ಮೈಗೂಡಿಸಿಕೊಂಡಿರುವಂತಹ ಸಮುದಾಯಗಳು ಸಹ ಅಲ್ಲಲ್ಲಿ ಕಂಡುಬರುತ್ತವೆ. ಈ ವಿಧದ ಪರಿಶಿಷ್ಟ ಪಂಗಡಗಳಲ್ಲಿ ಹಲವು ರೀತಿಯ ಸಮಸ್ಯೆಗಳು, ಕಷ್ಟ ಕಾರ್ಪಣ್ಯಗಳು ಇವರ ಬದುಕಿನಲ್ಲಿ ಕಂಡುಬರುವುದು ನಿಜದ ಸಂಗತಿಯಾಗಿದೆ. ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಶೈಕ್ಷಣಿಕ ಸಮಸ್ಯೆಗಳ ಜೊತೆಗೆ ಇವತ್ತಿನ ಸಮಯದಲ್ಲಿ ಇಂತಹ ಸಮುದಾಯಗಳು, ಅನ್ನದ ಹುಡುಕಾಟ, ಭೂಮಿಯೊಂದಿಗೆ ಸಂಬಂಧ ಹಾಗೂ ಭಾರತದಂತಹ ಸಂಕೀರ್ಣ ಸಾಮಾಜಿಕ ಒತ್ತಡಗಳಲ್ಲಿ ಸ್ವಾವಲಂಬಿಯಾಗಲು ತಮ್ಮ ಸಂಘ ಜೀವನದೊಂದಿಗೆ ಸವಾಲುಗಳನ್ನು ಎದುರಿಸಲು ಅನೇಕ ಬುಡಕಟ್ಟು ಸಮುದಾಯಗಳು ಪರದಾಡುತ್ತಿರುವುದು ಗೋಚರವಾಗುತ್ತವೆ. ಅಂತಹ ಪರಿಶಿಷ್ಟ ಪಂಗಡಗಳಲ್ಲಿ ಒಂದಾದ ಜನಸಂಖ್ಯೆ ದೃಷ್ಟಿಯಿಂದ ಬಹುಸಂಖ್ಯಾತವಾಗಿರುವ ಸಮುದಾಯವೇ ಬೇಡ/ವಾಲ್ಮೀಕಿ ಬುಡಕಟ್ಟು. ಹಾವೇರಿ ಜಿಲ್ಲೆಯು ಹಲವು ಶತಮಾನಗಳಿಂದ ಚಾರಿತ್ರಿಕ ಹಿನ್ನೆಲೆ ಹೊಂದುವುದರ ಜೊತೆಗೆ ಇವತ್ತಿನ ಸಂದರ್ಭದಲ್ಲಿ ಸಾಮಾಜಿಕ ಏಣಿಶ್ರೇಣಿ ವ್ಯವಸ್ಥೆಯಲ್ಲಿ ಕೆಳಸ್ತರದ ಬೇಡ ಬುಡಕಟ್ಟಿನ ಸಾಮಾಜಿಕ ಜೀವನ ಕುರಿತು ಕ್ಷೇತ್ರಕಾರ್ಯ ಹಾಗೂ ಅಧ್ಯಯನಗಳ ಹಿನ್ನೆಲೆಯಲ್ಲಿ ಇವರ ಜೀವನದ ವಿವಿಧ ಆಯಾಮಗಳನ್ನು ವಿವರಿಸುವ ಪ್ರಯತ್ನ ಮಾಡಲಾಗಿದೆ.

ಜನಸಂಖ್ಯೆ:

ಬೇಡ/ನಾಯಕ ಸಮುದಾಯದ ಜನಸಂಖ್ಯೆಯನ್ನು ನಿಖರವಾಗಿ ತಿಳಿಯುವುದು ಸ್ವಲ್ಪ ತೊಡಕಿನದ್ದಾಗಿದೆ ಮತ್ತು ಸವಾಲಾಗಿದೆ. ಪ್ರಾಯಶಃ ಎಲ್ಲ ಜಾತಿಗಳ ಸಮಸ್ಯೆಯೂ ಇದೇ ಆಗಿದೆ. ರಾಜ್ಯದಲ್ಲಿ ನಾಯಕರ ಜನಸಂಖ್ಯೆ ಸುಮಾರು ಅರವತ್ತೈದರಿಂದ ಎಪ್ಪತ್ತು ಲಕ್ಷ ಎಂದು ಹೇಳಲಾಗುತ್ತಿದೆ. ಸಮಾಜದ ಏಕತೆ ಮತ್ತು ಪ್ರಗತಿಯ ದೃಷ್ಟಿಯಿಂದ ಜನಸಂಖ್ಯೆಯ ಸ್ಪಷ್ಟ ಚಿತ್ರಣ

ಅವಶ್ಯಕ. ಸರಕಾರಕ್ಕೆ ಬೇಡಿಕೆ ಸಲ್ಲಿಸಲು, ಯೋಜನೆಗಳನ್ನು ರೂಪಿಸಲು, ಚುನಾವಣೆಯಲ್ಲಿ ಸ್ಪರ್ಧಿಸಲು ಹಾಗೂ ಇನ್ನಿತರ ಕಾರಣಗಳಿಗಾಗಿ ಜನಸಂಖ್ಯೆ ಮಾಹಿತಿ ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಸರ್.ಎಂ.ವಿಶ್ವೇಶ್ವರಯ್ಯನವರು ಎಲ್ಲಾ ಇಲಾಖೆಗಳಿಂದ, ಪ್ರತಿಯೊಂದು ವಿಷಯದಲ್ಲಿ ಅಂಕಿ ಅಂಶ ಸಂಗ್ರಹಿಸಿ ತಿಳಿಸಲು ಒತ್ತಾಯಿಸುತ್ತಿದ್ದರು. 1930 ರಲ್ಲಿ ಮಾತ್ರ ಪ್ರಪ್ರಥಮವಾಗಿ ಜಾತಿಗಣತಿ ನಡೆದಿದೆ. ಆಗಿನ ಬೇರೆ ಬೇರೆ ರಾಜ್ಯಗಳಲ್ಲಿ ಸೇರಿದ ಕನ್ನಡ ಪ್ರದೇಶಗಳ ನಾಯಕರ ಜನಸಂಖ್ಯೆ ಆಧರಿಸಿ, ಈಗಿನ ಸಂಖ್ಯೆ ಹೆಚ್ಚಾದ ಜನಸಂಖ್ಯಾ ಪ್ರಮಾಣ ಬೇರೆ ಬೇರೆ ಪುಸ್ತಕಗಳಲ್ಲಿ ಮತ್ತು ನಿಯತಕಾಲಿಕೆಗಳಲ್ಲಿ ದೊರೆಯುತ್ತದೆ. ಇತ್ತೀಚೆಗೆ ಸರಕಾರವೇ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದವರ ಜಾತಿವಾರು ಜನಗಣತಿ ಮಾಡಲು ನಿರ್ಧರಿಸಿದ್ದು ಸ್ವಾಗತಾರ್ಹ. ಪ್ರಸ್ತುತ ಕರ್ನಾಟಕ ಸರ್ಕಾರವು ಜಾತಿವಾರು ಗಣತಿ ಕಾರ್ಯವನ್ನು ನಡೆಸಲು ಕೈಗೆತ್ತಿಕೊಂಡಿರುವುದು ಉತ್ತಮವಾದ ಬೆಳವಣಿಗೆಯಾಗಿದೆ.

2011ರ ಜನಗಣತಿಯಲ್ಲಿ ಕರ್ನಾಟಕದ ಪರಿಶಿಷ್ಟ ಪಂಗಡಗಳ ಜನಸಂಖ್ಯೆ 42,48,987 ಎಂದು ದಾಖಲಾಗಿರುವುದು ವಾಸ್ತವಿಕವಾಗಿಲ್ಲ. ಪರಿಶಿಷ್ಟ ಪಂಗಡದಲ್ಲಿಯ ಐವತ್ತು ಜಾತಿಗಳು ಸೇರಿ ಈ ಜನಸಂಖ್ಯೆ ರೂಪಿತವಾಗಿದೆ. ಇದೇ ಆಧಾರದಿಂದ ಯೋಜನೆಯಲ್ಲಿ ಹಣ ಮಂಜೂರಾಗುವುದರಿಂದ ಪರಿಶಿಷ್ಟ ಪಂಗಡಗಳಿಗೆ ಬಹಳ ಅನ್ಯಾಯವಾಗುತ್ತದೆ. ನಾಯಕರಲ್ಲೇ ಕೆಲವು ಪರ್ಯಾಯ ಜಾತಿವಾಚಕಗಳು ಇನ್ನೂ ಪರಿಶಿಷ್ಟ ಪಂಗಡಕ್ಕೆ ಸೇರಿಲ್ಲ. ಕೇಂದ್ರ ಸರ್ಕಾರದಲ್ಲಿ ಮತ್ತು ಬೇರೆ ಕೆಲವು ರಾಜ್ಯಗಳಲ್ಲಿ ಪರಿಶಿಷ್ಟ ಪಂಗಡಕ್ಕೆ ಮೀಸಲಾತಿ 7.5% ಇದೆ. ಇದನ್ನು ಸಾರ್ವತ್ರಿಕಗೊಳಿಸಲು ತೀವ್ರತರ-ಹೋರಾಟ ನಡೆಸಬೇಕಾಗಿದೆ. ಸದ್ಯದ ಶೇ.3ರ ಪ್ರಮಾಣ ಯಾತಕ್ಕೂ ಸಾಲದು. ಇದು ಪರಮ ಅನ್ಯಾಯ, ಇತ್ತೀಚೆಗೆ ಇತರ ಗುಂಪು (ಕೆಟೆಗರಿ) ಗಳಿಂದ ಕೆಲವು ಜಾತಿಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿದ್ದರೂ (ಉದಾಹರಣೆ ಮೇದ) ಅಲ್ಲಿ ಅವರ ಪ್ರಮಾಣದ ಮೀಸಲಾತಿ ಕಡಿಮೆಗೊಳಿಸಿ ಪರಿಶಿಷ್ಟ ಪಂಗಡಕ್ಕೆ ಸೇರಿಸಿಲ್ಲ. ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡಗಳ ಜನಸಂಖ್ಯೆಯ ಸಮಗ್ರ ಮಾಹಿತಿ ಆಧರಿಸುವುದಾದರೆ, ಶೇ.10ರ ಮೀಸಲಾತಿ ಯೋಗ್ಯವಾದುದಾಗಿದೆ.

ಹಾವೇರಿ ಜಿಲ್ಲೆಯ ಒಟ್ಟು ಜನಸಂಖ್ಯೆ 15,97668 ಇದ್ದು, ಇದರಲ್ಲಿ ಪುರುಷರು 81,9128 ಹಾಗೂ ಮಹಿಳೆಯರು 77,8540 ಇರುತ್ತಾರೆ. ಜನಗಣತಿಯ ಪ್ರಕಾರ ಪರಿಶಿಷ್ಟ ಜಾತಿಯ ಜನಸಂಖ್ಯಾ ಪ್ರಮಾಣವು ಶೇ.13.77 ಇದ್ದರೆ ಪರಿಷ್ಟ ಪಂಗಡದ ಜನಸಂಖ್ಯೆಯು ಶೇ.8.85ರಷ್ಟು ಇರುವುದು ಕಂಡುಬರುತ್ತದೆ. ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಸಂಖ್ಯೆಯು ಶೇ.22.62ರಷ್ಟು ಇದೆ. ಹಾವೇರಿ ಜಿಲ್ಲೆಯಲ್ಲಿನ ತಾಲೂಕುವಾರು ಪರಿಶಿಷ್ಟ ಪಂಗಡದ ಜನಸಂಖ್ಯೆಯಲ್ಲಿ ನಗರ ಪ್ರದೇಶಗಳಿಗಿಂತ ಗ್ರಾಮೀಣ ಭಾಗಗಳಲ್ಲಿ ಈ ಜನರು ಹೆಚ್ಚು ಸಂಖ್ಯೆಯಲ್ಲಿ ನೆಲೆಸಿರುವುದು ಕಂಡುಬರುತ್ತದೆ. ಸವಣೂರು ಹಾಗೂ ರಾಣೇಬೆನ್ನೂರು ನಗರ ಪ್ರದೇಶಗಳನ್ನು ಹೊರತುಪಡಿಸಿದರೆ ಉಳಿದ ಕಡೆ

ಲಿಂಗಾನುಪಾತ ಹೆಚ್ಚಿದೆ. ಅಂದರೆ ಪುರುಷರ ಸಂಖ್ಯೆಗಿಂತ ಮಹಿಳೆಯರ ಸಂಖ್ಯೆ ಹೆಚ್ಚಿರುವುದು ಮುಂದಿನ ಕೋಷ್ಟಕದ ಮೂಲಕ ಕಂಡುಬರುತ್ತದೆ.

ಕೋಷ್ಟಕ–8

2011ರ ಜನಗಣತಿ ಪ್ರಕಾರ ಹಾವೇರಿ ಜಿಲ್ಲೆಯಲ್ಲಿನ ತಾಲೂಕುವಾರು ಪರಿಶಿಷ್ಟ ಪಂಗಡದ ಜನಸಂಖ್ಯೆ:

ಕ್ರ.ಸಂ.	ತಾಲೂಕುಗಳು	ಒಟ್ಟು ಜನಸಂಖ್ಯೆ	ಪ್ರತಿಶತ	ಗ್ರಾಮೀಣ			ನಗರ		
				ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು
1	ರಾಣೇಬೆನ್ನೂರು	27898	8.32	22477	11439	11038	5421	2735	2686
2	ಹಾವೇರಿ	24952	8.90	21637	11133	10504	3315	1654	1661
3	ಶಿಗ್ಗಾಂವ	11168	5.94	10561	5463	5098	607	293	314
4	ಸವಣೂರ	12490	7.73	11980	6218	5762	510	273	237
5	ಹಾನಗಲ್	20983	8.06	20609	10442	10167	374	173	201
6	ಬ್ಯಾಡಗಿ	19145	13.58	15767	8135	7632	3378	1641	1737
7	ಹಿರೇಕೆರೂರು	24744	10.71	23218	11750	11468	1526	760	766
8	ಒಟ್ಟು	**141380**	**8.85**	**126249**	**64580**	**61669**	**15131**	**7529**	**7602**

Source-Haveri District Population Data-2011 Census.

ಬೇಡ ಬುಡಕಟ್ಟಿನ ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ಹಿನ್ನೆಲೆ:

ಭಾರತವು ಹಲವಾರು ಬುಡಕಟ್ಟಿನ ಜನಾಂಗಗಳಿಗೆ ಒಂದು ನೈಸರ್ಗಿಕ ತವರುಮನೆ. ಒಂದೊಂದು ಸಮುದಾಯದವರಿಗೂ ಅವರದೇ ಆದ ಐತಿಹಾಸಿಕ, ಸಾಮಾಜಿಕ, ಹಿನ್ನೆಲೆಗಳನ್ನು ಕಾಣುತ್ತೇವೆ. ಅಂತಹ, ಜಾತಿ, ಜನಾಂಗಗಳಲ್ಲಿ 'ನಾಯಕ ಜನಾಂಗದ ಚರಿತ್ರೆ' ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹದು.'[15] ಮಿನಿ ಭಾರತದಂತಿರುವ ಕರ್ನಾಟಕದಲ್ಲಿಯೂ ಹಲವಾರು ಬುಡಕಟ್ಟಿನ ಜನರು ನೂರಾರು ವರ್ಷಗಳಿಂದ ವಾಸಿಸುತ್ತಿದ್ದಾರೆ. ಭೂ ವಿಜ್ಞಾನಿಗಳು ಜಗತ್ತಿನಲ್ಲಿಯೇ ಅತ್ಯಂತ ಪುರಾತನ ಎನಿಸಿದ ಭೂಮಿ ಎಂದರೆ ಕರ್ನಾಟಕ'[16] ಇಂತಹ ಭೂ ಪ್ರದೇಶದಲ್ಲಿ ಬುಡಕಟ್ಟಿನ ಜನರು ವಾಸಿಸುತ್ತಿರುವುದು ಸಹಜವಾಗಿದೆ.

ಕರ್ನಾಟಕ ರಾಜ್ಯದಲ್ಲಿ ಹಲವಾರು ಬುಡಕಟ್ಟಿನ ಸಮುದಾಯದವರು ವಾಸಿಸುತ್ತಿದ್ದಾರೆ. ಗೊಂಡರು, ಕೊರಗರು, ಸೋಲಿಗರು, ಗೌಡಾಲು, ಕುಡಿಯರು, ಮಲೆ ಕುಡಿಯರು, ಎರವರು, ಜೇನುಕುರುಬರು, ಕಾಡು ಕುರುಬರು, ಬೇಡರು, ಮೇದರು, ಹಕ್ಕಿ ಪಿಕ್ಕಿಯರು, ರಾಜಗೊಂಡರು, ಚಂಚು, ಚೆಂಚರು, ಮುಂತಾದ ಬುಡಕಟ್ಟಿನ ಜನರು ಜೀವನ ಸಾಗಿಸುತ್ತಿದ್ದಾರೆ.

ಕರ್ನಾಟಕದ ಹಲವಾರು ಬುಡಕಟ್ಟಿನ ಜನರಲ್ಲಿ ಬೇಡರು ಪ್ರಮುಖರಾಗಿದ್ದಾರೆ. ಇವರು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ವಾಸವಾಗಿದ್ದರೂ ಗುಲಬರ್ಗಾ, ಧಾರವಾಡ, ಬಳ್ಳಾರಿ, ವಿಜಾಪುರ, ಬೆಳಗಾಂವ, ಚಿತ್ರದುರ್ಗ, ಕೋಲಾರ ಜಿಲ್ಲೆಗಳಲ್ಲಿ ಹೆಚ್ಚಾಗಿ ವಾಸವಾಗಿದ್ದಾರೆಂದು ಸಂಶೋಧಕರಾದ ಸೂರ್ಯನಾಥ.ಯು.ಕಾಮತರು ತಮ್ಮ ಮಹಾಪ್ರಭಂಧದಲ್ಲಿ ಪ್ರತಿಪಾದಿಸಿದ್ದಾರೆ.'[17] ರಾಯಚೂರು ಜಿಲ್ಲೆಯಲ್ಲಿ ಬೇಡರು ನೆಲೆಸಿದ್ದಾರೆ. ಹಾವೇರಿ ಜಿಲ್ಲೆಯ ಬುಡಕಟ್ಟುಗಳ ಸಾಮಾಜಿಕ ಅಧ್ಯಯನ, ಈ ಜಿಲ್ಲೆಯಲ್ಲಿಯೂ ಅವರು ಇದ್ದಾರೆಂದು ತೋರಿಸುತ್ತದೆ. ರಾಜ್ಯದಲ್ಲಿ ಅಲ್ಲದೆ, ಇತರ ರಾಜ್ಯಗಳಾದ, ಆಂಧ್ರ ಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ, ಗುಜರಾತ್, ತಮಿಳುನಾಡು. ಇತ್ಯಾದಿ ರಾಜ್ಯಗಳಲ್ಲಿ ಬೇಡರು ವಾಸವಾಗಿದ್ದಾರೆಂದು ತಿಳಿದು ಬರುತ್ತದೆ. ಕರ್ನಾಟಕ ರಾಜ್ಯದಲ್ಲಿ ಇವರ ಜನಸಂಖ್ಯೆ ಸುಮಾರು 65-70 ಲಕ್ಷ ಇರುತ್ತದೆ.

ಹಾವೇರಿ ಜಿಲ್ಲೆಯ ಬೇಡ ಸಮುದಾಯ:

ಬೇಡ ಬುಡಕಟ್ಟಿನಲ್ಲಿ ಎರಡು ಪಂಗಡಗಳು ಬರುತ್ತವೆ. ಒಂದು ಮ್ಯಾಸ ಬೇಡರು, ಇನ್ನೊಂದು ಊರುಬೇಡರು. ಊರ ಹೊರಗಿನ ಹಟ್ಟಿ ಬೇಡರನ್ನು ಮ್ಯಾಸ ಬೇಡರೆಂದು, ಊರೊಳಗೆ ಬಂದು ನೆಲಸಿದವರನ್ನು ಊರು ಬೇಡರೆಂದು ಕರೆದಿದ್ದಾರೆ. ಆದರೆ ಇಂದು ಮ್ಯಾಸ ನಾಯಕರೂ ಸಹ ನಾಗರಿಕತೆಯಲ್ಲಿ ಸೇರಿಹೋಗಿದ್ದು ಇಂದು ಎರಡೂ ಪಂಗಡಗಳೂ ಊರೊಳಗೆ ವಾಸಿಸುತ್ತಿವೆ. ಇನ್ನು ಕೆಲವು ಜಿಲ್ಲೆಗಳಲ್ಲಿ ಮ್ಯಾಸರ ಹಟ್ಟಿಗಳು ಪ್ರತ್ಯೇಕವಿದ್ದು ತಮ್ಮತನವನ್ನು ಇನ್ನೂ ಉಳಿಸಿಕೊಂಡಿವೆ. ಆದರೆ ಹಾವೇರಿ ಜಿಲ್ಲೆಯಲ್ಲಿ ಮ್ಯಾಸರ ಹಟ್ಟಿಗಳಾಗಲಿ ಅಥವಾ ಮ್ಯಾಸ ನಾಯಕರಾಗಲೀ ಎರಡೂ ಇಲ್ಲ. ಇಲ್ಲಿ ಕೇವಲ ಊರು ನಾಯಕರು ಮಾತ್ರ ಕಂಡುಬರುತ್ತಾರೆ. ಅವರೂ ಕೂಡ ಇಲ್ಲಿಯ ಮೂಲದವರಲ್ಲ. ಅವರ ಮೂಲ ಬಿಜಾಪುರ, ಮುದ್ದೇಬಿಹಾಳ, ಗೋಕಾಕ್ ಇನ್ನಿತರ ಭಾಗಗಳಿಂದ ವಲಸೆ ಬಂದವರು ಎಂಬ ಮಾಹಿತಿಯನ್ನು ಕ್ಷೇತ್ರಕಾರ್ಯಕ್ಕೆ ಹೋದಾಗ ಅಲ್ಲಿನ ಹಿರಿಯ ವಕ್ತೃಗಳು ನೀಡಿರುತ್ತಾರೆ. ಜೊತೆಗೆ ಆ ಸಮುದಾಯದ ಸಾಮಾಜಿಕ ಬದುಕನ್ನು ಸೂಕ್ಷ್ಮವಾಗಿ ಗ್ರಹಿಸಿದಾಗ ಇದು ಸತ್ಯವಾಗಿ ಕಂಡು ಬರುತ್ತದೆ.

ಬೇಡರ ಪರ್ಯಾಯ ಪದಗಳು:

ಆಂಧ್ರ ಪ್ರದೇಶ- ನಯಕ್ಡಾ, ನಾಯಕ ನಾಯ್ಕರ, ವಾಲ್ಮೀಕಿ, ವೇಡನ್, ವೆತ್ತಲೆ ನಾಯಕರ ಮುಂತಾದವು.

ಸಿಲೋನ್- ಮೇಟನ್, ವೇಡುವಾಸ, ವೆದ್ದಾನ್, ವೇಟೆಕಾರನ್.

ಉತ್ತರ ಪ್ರದೇಶ- ಚಾಟ್

ಪಂಜಾಬ್- ಭಿಲ್, ಬಾಲಮಿಕಿ, ವಾಲ್ಮಿಕಿ ನಾಯಕಮಾಂಗ್

ಬಂಗಾಲ, ಬಿಹಾರ- ಸೇನ್

ಕೇರಳ, ಮಲೇಶಿಯ- ನಾಯರ್

ಕಾಶ್ಮೀರ- ಖೋಗ್ರಾ

ಮಹಾರಾಷ್ಟ್ರ- ರಾಮೋಶಿ, ರಾಣವಾಸಿ

ಆಂಧ್ರ ಪ್ರದೇಶ- ಭೋವಿ, ಬೋಯಿ, ನಾಯನಿ, ದೊರೆಬೆಡ್ಡಲು, ಬೋಯಾಸು.

ಕರ್ನಾಟಕ ಮತ್ತು ಕೇರಳ ಪ್ರದೇಶಗಳಲ್ಲಿ ಬೇಡ, ಬ್ಯಾಡ, ಬ್ಯಾಡರು, ಬೇಡರು, ತಳವಾರ, ನಾಯಕ, ಕಿರಾತಕ, ಬಾರಿಕ, ಕನ್ನಯ್ಯ, ರಾವೋಶಿ, ಬೈಡರ್ ಎಂಬ ವಿಭಿನ್ನ ಹೆಸರು ಬೇಡರಿಗೆ ಇರುತ್ತದೆ. ರಾಜಸ್ತಾನದಲ್ಲಿ ಇವರು ಮಾಡುತ್ತಿರುವ ಕಸುಬನ್ನೇ ಆಧಾರವಾಗಿಟ್ಟುಕೊಂಡು ವಾಲಮೀಕಿ, ವಾಲ್ಮೀಕಿ, ಭಿಲ್ ಮುಂತಾದ ಹೆಸರುಗಳಿಂದ ಪ್ರಸಿದ್ಧಿಯನ್ನು ಹೊಂದಿರುತ್ತಾರೆ.'[18] ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರಿನಿಂದ ಕರೆಸಿಕೊಳ್ಳುತ್ತಾ ಬಂದಿರುವ ಈ ಜನಾಂಗವು ಮೂಲದಲ್ಲಿ 'ಬೇಡರು,' 'ನಾಯಕರು' ಎಂದೇ ಪ್ರಖ್ಯಾತಿ ಪಡೆದವರಾಗಿದ್ದೂ, ಕಾಲ ಉರುಳಿದಂತೆ ಈ ಜನಾಂಗದವರನ್ನು ಮೇಲ್ವರ್ಗದ ಜನರ ತುಳಿತಕ್ಕೆ ಒಳಪಡಿಸುತ್ತಾ ಬಂದಿದ್ದರೂ ವಂಶಪಾರಂಪರ್ಯದಿಂದ ಬೆಳೆದು ಬಂದಿರುವ ಕೆಚ್ಚೆದೆಯ ಇವರ ಮನೋದಾರ್ಢ್ಯದಿಂದ ಧೈರ್ಯ ಶೌರ್ಯಾದಿ ಗುಣಗಳಿಂದ ಜ್ಞಾನ ಸಂಪತ್ತಿನಿಂದ ಆಡಳಿತ ದರ್ಪತೆಯಿಂದ ಪ್ರತಿ ಕಾಲ ಕಾಲಕ್ಕೂ ಕೀರ್ತಿಗಳಿಸುತ್ತಾ ಇತಿಹಾಸದಲ್ಲಿ ಮಿಂಚಿದ್ದಾರೆ ಹಾಗೂ ಮಿಂಚುತ್ತಿದ್ದಾರೆ.'[19] ಕಲಿಯುಗದ ಆರಂಭಕ್ಕೆ ದಕ್ಷಿಣ ದೇಶದಲ್ಲಿ ಬೇಡರ ವಿನಃ ಬೇರೆ ಯಾವ ಜನಾಂಗವು ಇರಲಿಲ್ಲ. ಅನಂತರ ಉದಯಿಸಿದ ಮನೆತನಗಳಿಗೆಲ್ಲ ಬೇಡರೇ ಮೂಲರೆಂದು ಪ್ರತಿಪಾದಿಸುವ ಅನೇಕ ಊಹೆಯ ವಾದಗಳು ಈ ಸಮುದಾಯದವರ ಇರುವಿಕೆಯ ಮಹತ್ವವನ್ನು ಸ್ಪಷ್ಟವಾಗಿ ಹೇಳುತ್ತಿವೆ.

ಬೇಡರ ಮೂಲ:

'ಬೇಡ' ಎನ್ನುವ ಶಬ್ದ 'ವ್ಯಾಧ' ಎನ್ನುವ ಸಂಸ್ಕೃತ ಶಬ್ದದಿಂದ ಬಂದಿರುವುದು ಮತ್ತು ಇದರರ್ಥ 'ಬೇಟೆ'ಯಾಡುವುದೆಂದು ಯಜುರ್ವೇದದಲ್ಲಿ ಪ್ರಸ್ತಾಪಿಸಲಾಗಿದೆ. ಕೆ.ಅಭಿಶೇಖರ ಬೇಡರು 'ವಾಲ್ಮಿಕಿ' ಅಥವಾ ನಾಯಕ ರೆಂದು ಸಹ ಹೇಳುತ್ತಾರೆ.'[20] ಸಾಮಾನ್ಯವಾಗಿ ಎಲ್ಲಾ ಬುಡಕಟ್ಟುಗಳಲ್ಲಿಯೂ ಪ್ರಪಂಚದ ಹುಟ್ಟನ್ನು ಕುರಿತು ಸ್ವಾರಸ್ಯಕರ ಕಥೆಗಳಿದ್ದು, ಆ ಪ್ರಪಂಚದ ಹುಟ್ಟಿನ ಆರಂಭಕ್ಕೆ ತಮ್ಮ ಬುಡಕಟ್ಟಿನ ಮೂಲ ಪುರುಷನೇ ಇದ್ದ ಎಂದು ಹೇಳಿಕೊಳ್ಳುತ್ತವೆ. ಅಂತೆಯೇ ಮ್ಯಾಸಬೇಡ ಬುಡಕಟ್ಟಿನ ಮೂಲಪುರುಷನ ಹುಟ್ಟು ಬ್ರಹ್ಮ, ವಿಷ್ಣು, ಮಹೇಶ್ವರರಿಂದಲೇ ಆಯಿತು. ಈ ತ್ರಿಮೂರ್ತಿಗಳು ಪ್ರಪಂಚದ ಮೇಲೆ ಬರುತ್ತಿದ್ದರು. ಆಗ ಭೂಮಿಯ ಮೇಲೆ ಬರಿಯ ಅರಣ್ಯ ಇದ್ದಿತು. ನರಮನುಷ್ಯರ ಸುಳಿವು ಇರಲಿಲ್ಲ. ತ್ರಿಮೂರ್ತಿಗಳು ಪ್ರಪಂಚದ ಮೇಲೆ ಬರುತ್ತಾ ಮೊಳಕಾಲ್ಮೂರು ಬಳಿಯ ಬೊಮ್ಮಗೊಂಡನ ಕೆರೆಯ ಬಳಿ ಕಮರದ ಕಾನಿನಲ್ಲಿ ಒಂದು ಸರೋವರದ ಮುಂದೆ ಇಳಿದರು. ಆಗ ಬೆಳಗಾಗುತ್ತಲಿತ್ತು. ಮೂರು ಜನರೂ ಮುಖ ಮಾರ್ಜನೆ ಮಾಡಿ ಬ್ರಹ್ಮ,,ವಿಷ್ಣು, ಇಬ್ಬರೂ ಹಣೆಗೆ

ನಾಮ ಇಟ್ಟುಕೊಂಡರು. ಹಾಗೆ ನಾಮಪಿಡುವಾಗ ಅದರ ಶುದ್ಧಿಗೆ ಗೋವಿನ ಮೂತ್ರ ಬೇಕಾಯಿತು. ಆಗ ಬ್ರಹ್ಮ ಒಂದು ಒಂಟಿ ಕೊಂಬಿನ ಬಸವನನ್ನು ಸೃಷ್ಟಿಸಿದ. ಗೋವಿನ ಮೂತ್ರದ ಒಂದು ಹನಿಯನ್ನು ತೆಗೆದು ಬ್ರಹ್ಮ ವಿಷ್ಣು ನಾಮವನ್ನು ಮಹೇಶ್ವರನು ವಿಭೂತಿಯನ್ನು ಧರಿಸಿಕೊಂಡರು. ಮಹೇಶ್ವರನು ವಿಭೂತಿ ಧರಿಸುವಾಗ ವಿಭೂತಿಯ ಒಂದು ಧೂಳು ಬ್ರಹ್ಮನು ಸೃಷ್ಟಿಸಿದ ಒಂಟಿ ಕೊಂಬಿನ ಬಸವನ ಕಾಲ ಗೊರಸಿನಲ್ಲಿ ಬಿದ್ದು ಅಲ್ಲಿ ಸಿಕ್ಕಿಹಾಕಿಕೊಂಡಿತು. ತ್ರಿಮೂರ್ತಿಗಳು ಆ ಸರೋವರವನ್ನು ಬಿಟ್ಟು ಹೋಗುವಾಗ ಅವನು ಸೃಷ್ಟಿಸಿದ ಒಂಟಿ ಕೊಂಬಿನ ಬಸವನನ್ನು ನೋಡಿಕೊಳ್ಳುವರ್‍ಯಾರು ಎಂಬ ಯೋಚನೆ ಬರಲು, ಬ್ರಹ್ಮನು ಆ ಎರಡು ಜೀವರಾಶಿಗಳನ್ನು ಸಲಹುವವನು ಅವುಗಳಿಂದಲೇ ಹುಟ್ಟುವನು. ಚಿಂತೆ ಮಾಡಬೇಕಿಲ್ಲ ಎಂದ. ಪ್ರತೀ ದಿನವು ಒಂಟಿ ಕೊಂಬಿನ ಬಸವ ಕಾಡಿನಲ್ಲಿ ಮೇಯ್ದು ಸರೋವರದಲ್ಲಿ ನೀರು ಕುಡಿದು ಕೊಂಡಿದ್ದವು. ಹೀಗಿರಲು ಬಸವನ ಕಾಲಿನ ಗೊರಸಿನಲ್ಲಿ ಸಿಕ್ಕಿ ಹಾಕಿಕೊಂಡಿದ್ದ ವಿಭೂತಿಯ ಧೂಳು ಒಂಬತ್ತು ತಿಂಗಳು, ಒಂಬತ್ತು ದಿನ, ಒಂಬತ್ತು ಘಳಿಗೆಯಲ್ಲಿ ಬೆಳೆದು ಗರ್ಭ ಒಡೆದು ಗಂಡು ಶಿಶುವಿನ ಜನನವಾಯಿತು. ಅದು ಕೊಳದ ತಡಿಯಲ್ಲಿ ಅಳುತ್ತಿರಲು ಆ ದಿನವೇ ವಾಯುಮಾರ್ಗದಲ್ಲಿ ಹೋಗುತ್ತಿದ್ದ ಶಿವ ಪಾರ್ವತಿಯರಿಗೆ ಕೇಳಿಸಿತು. ಪಾರ್ವತಿಯು ಬಂದು ಶಿಶುವಿನ ಹೊಕ್ಕಳ್ಬಳ್ಳಿ ಕೊಯ್ದು ಹಣೆಗೆ ಸುಟಿಗೆ ಹಾಕಿ ಮಗುವನ್ನು ಕೊಳದ ತಡಿಯಲ್ಲಿ ಮಲಗಿಸಿ ಅದಕ್ಕೆ ಚೆಟ್ಲು ಗೊಟ್ಲು ಮಲ್ಲನಾಯಕ ಎಂದು ಹೆಸರಿಟ್ಟಳು. ಆ ಮಗುವು ಗಿಡಮರಗಳ ಮಧ್ಯದ ಕಾಡಿನಲ್ಲಿ ಹುಟ್ಟಿದುದರಿಂದ ಅದಕ್ಕೆ ಚೆಟ್ಲು ಗೊಟ್ಲು ಮಲ್ಲನಾಯಕ ಎಂದು ಹೆಸರಾಯಿತು. ಮಲ್ಲನಾಯಕನು ಲಗ್ನವಾಗಿ 'ಚೆಂಚು ಲಕ್ಷ್ಮಿ' ಎಂಬ ಒಂದು ಹೆಣ್ಣು ಮಗುವನ್ನು ಪಡೆದನು. ದೇವತೆಯಾದ ನರಸಿಂಹನು ಈಕೆಯನ್ನು ವಿವಾಹವಾಗಿ ಸ್ವಲ್ಪಕಾಲ ಆಕೆಯೊಂದಿಗೆ ಸಂಸಾರಮಾಡಿ ದೇವಲೋಕಕ್ಕೆ ಹೋದನು. ಇವರಿಬ್ಬರಿಗೆ ಹುಟ್ಟಿದ ಮೂರು ಮಕ್ಕಳೇ ಪದ್ದನಾಯಕ, ಕೋರಿಮರ ಮಂಚನಾಯಕ ಹಾಗೂ ಕೋರಿ ಪಾಪನಾಯಕ ಇವರುಗಳೇ ಬೇಡ ನಾಯಕರ ಮೂಲ ಪುರುಷರು ಎಂದು ಭಾವಿಸಲಾಗಿದೆ.'[21]

ಮೇಲಿನ ವಿವರಣೆ ಪುರಾಣವಾದರೆ, ಹಲವಾರು ಸಂಶೋಧಕರು ಬೇಡರ ಮೂಲದ ವಿಭಿನ್ನ ಅಭಿಪ್ರಾಯಗಳನ್ನು ಇಟ್ಟಿದ್ದಾರೆ. ಭ.ಶಂಕರ ನಾರಾಯಣನವರ ಪ್ರಕಾರ "ಬೇಡರು ಊರ ಹೊರಗೆ ತಾತ್ಕಾಲಿಕವಾಗಿ ತಾವೇ ಕಟ್ಟಿಕೊಂಡ ಗುಡಿಸಲುಗಳಲ್ಲಿ ವಾಸವಾಗಿದ್ದಾರೆ. ಕಳ್ಳತನದ ವಸ್ತುಗಳನ್ನು ತೆಗೆದುಕೊಳ್ಳುತ್ತಾರೆ ಮತ್ತು ಈ ವ್ಯಾಪಾರ ವರ್ಷವಿಡೀ ಅವರು ಮಾಡುತ್ತಾರೆ" ಎಂದಿದ್ದಾರೆ.'[22]

ಎಂ.ಬಿ.ಕೃಷ್ಣರಾವ್ ಮತ್ತು ಗ.ಸ. ಹಾಲಪ್ಪ ಇವರ ಪ್ರಕಾರ 'ಬೇಡರು' ಅನಾದಿ ಕಾಲದಿಂದಲೂ ತಮ್ಮ ಧೈರ್ಯ ಶೌರ್ಯಕ್ಕೆ ಮತ್ತು ಸ್ವಾಮಿ ನಿಷ್ಠೆಗೆ ಹೆಸರಾದವರು.'[23] E.Thurston ರ ಪ್ರಕಾರ 'ಬೇಡರು ಅಥವಾ ಬೇಟೆಗಾರರು ಟಿಪ್ಪುವಿನ ಕಾಲದಲ್ಲಿ

ನೆಲೆಸಿದ್ದರು, ಅವನ ಸೈನ್ಯದಲ್ಲಿ ಸೈನಿಕರಾಗಿದ್ದರು ಮತ್ತು ಮೈಸೂರು ಕಾಡಿನಲ್ಲಿ ಹುಲಿಗಳನ್ನು ಯಶಸ್ವಿಯಾಗಿ ಬೇಟೆಯಾಡುತ್ತಿದ್ದರು. ಎಂಬ ಅಭಿಪ್ರಾಯ ಪಟ್ಟಿದ್ದಾರೆ.'[24] ಮುಂದುವರೆದು, ಸೂರ್ಯನಾಥ ಯು. ಕಾಮತ್, ಅವರು 'ಬೇಡ ಜನಾಂಗದವರ ಮೂಲ ಪುರುಷ ವಾಲ್ಮೀಕಿ ಮತ್ತು ಹಲವಾರು ಬೇಡರು ವಿಜಯನಗರ ದೊರೆಗಳಲ್ಲಿ ಮತ್ತು ಹೈದರಾಲಿ ಹಾಗೂ ಟಿಪ್ಪು ಸುಲ್ತಾನನ ಸೇನೆಗಳಲ್ಲಿ ಸೈನಿಕರಾಗಿ ಸೇವೆ ಸಲ್ಲಿಸುತ್ತಿದ್ದರೆಂದು ಹೇಳಿದ್ದಾರೆ.'[25]

ಬೇಡ ಸಮುದಾಯದ ಚಾರಿತ್ರಿಕ ಬೆಳವಣಿಗೆ:

ಪ್ರಾಚೀನ ಕಾಲದಲ್ಲಿ ಬೇಡರು ಅರಣ್ಯವಾಸಿಗಳು. ಇವರು ತಮ್ಮ ಜೀವನಕ್ಕಾಗಿ ಬೇಟೆಯಾಡಿ ಬದುಕುವುದೇ ರೂಢಿಯಾಗಿತ್ತು. ಬೇಟೆ ವೃತ್ತಿಗನುಗುಣವಾಗಿ ಬೇಡ ಎಂಬ ಪದವು ರೂಢಿಗೆ ಬಂದಿದೆ. ಜನಸಾಮಾನ್ಯರ ಆಡುವ ಭಾಷೆಯ ರೂಢಿಯಲ್ಲಿ ಈ ಪದವು ಬೇಟ್>ಬೇಡ ಎಂದು ರೂಪಾಂತರವಾಗಿದೆ. ಬೇಟೆಯ ಮೂಲಕವೇ ಗುರುತಿಸಿಕೊಂಡವರನ್ನು ಬೇಡರು ಎಂದು ಕರೆಯಲಾಗಿದೆ. ವೃತ್ತಿಯ ಆಧಾರದ ಮೇಲೆ ಜಾತಿಯ ಹೆಸರನ್ನು ಸಂಬೋಧಿಸುವುದು ಸಾಮಾನ್ಯವಾಗಿದೆ. ಉದಾಹರಣೆಗೆ ಕುಂಬಾರ ವೃತ್ತಿ ಮಾಡುವವರಿಗೆ ಕುಂಬಾರರೆಂದು, ಕಂಬಾರಿಕೆ ಮಾಡುವವರಿಗೆ ಕಂಬಾರರೆಂದು ಕರೆಯಲಾಗಿದೆ.

ಬೇಡರು ಮೂಲತಃ ದ್ರಾವಿಡ ಮೂಲದವರು. ಇವರಿಗೆ ಪುಳಿದ, ಭಿಲ್ಲ, ಕಿರಾತ, ವ್ಯಾಧ, ಶಬರ, ನಿಷಾದ ಮುಂತಾದ ಹೆಸರುಗಳಿದ್ದವು. ಅಂತೆಯೇ ದ್ರಾವಿಡ ಭಾಷೆಗಳಲ್ಲಿ ಬೇಡನ್, ವೇದನ್, ವೆಟ್ಟುವನ್ ಎಂದೆಲ್ಲಾ ಹೆಸರುಗಳಿದ್ದವು. ಅಲ್ಲದೆ ಅವರು ಆಡುತ್ತಿದ್ದ ಬೇಟೆಗನುಸಾರವಾಗಿ ಅವರಿಗೆ ಎಯನರ್, ಪುಲಿಂದರ್, ಕುಳಿಂದರ್, ಕೋವರ್ ಎಂಬ ಹೆಸರುಗಳು ದೊರಕುತ್ತವೆ. ರಾಷ್ಟ್ರಕೂಟರ ಕಾಲದ ದ್ವಿತೀಯ ಭಾಷೆಯಾಗಿದ್ದ ಅಪಭ್ರಂಶ ಭಾಷೆಯಲ್ಲಿ ನಾಹಲ, ನಾಹಿಲ, ವಾಹ, ಸಮರ, ಸಿಮಿರ, ಚಿಲಾಡ, ಬಿಲ್ಲ ಮುಂತಾದ ಅನೇಕ ಹೆಸರುಗಳು ದೊರಕುತ್ತವೆ. ಬೇಡ ನಾಯಕರು ಬುಡಕಟ್ಟು ಸಮುದಾಯದವರಾಗಿದ್ದು, ಕಾಡಿನ ಸಂಸ್ಕೃತಿಯಿಂದ ನಾಡಿನ ಸಂಸ್ಕೃತಿಯನ್ನು ರೂಢಿಸಿಕೊಳ್ಳುತ್ತಿರುವರು. ಯೋಧ ಸಮುದಾಯವೆಂದು ಗುರುತಿಸಿಕೊಂಡ, ಇವರು ದೈಹಿಕ ಸದೃಢತೆಗೆ ಮತ್ತು ಧೈರ್ಯ ಸಾಹಸಗಳಿಗೆ ಹೆಸರಾಗಿದ್ದಾರೆ.

"ನಾಯಕ ಸಮುದಾಯದಲ್ಲಿ ಅನೇಕರು ವೀರ ಸಾಹಸಿಗಳಾಗಿ ಬಾಳಿ ಬದುಕಿ ಪಾಳೆಯಗಾರರಾಗಿ, ರಾಜರೆನಿಸಿಕೊಂಡು, ಗಂಡುಗಲಿಗಳಾಗಿ ತಮ್ಮ ಪ್ರಭುತ್ವ ಸಾಧಿಸಿ ರಾಷ್ಟ್ರಪ್ರೇಮಕ್ಕೆ, ಸಾಹಸಕ್ಕೆ, ಧೈರ್ಯಕ್ಕೆ, ಶೌರ್ಯ, ಪರಾಕ್ರಮಗಳಿಗೆ ಹೆಸರಾಗಿ, ಸಾಹಿತ್ಯ ಸಂಸ್ಕೃತಿ, ಕಲೆಗಳ ಪ್ರೋತ್ಸಾಹಕರಾಗಿ ಹೋಗಿದ್ದಾರೆ."[26] ಆದ್ದರಿಂದ ಬೇಡರನ್ನು ಯಾರಿಗೂ ಅಂಜದ, ಅಳುಕದ, ಅಳಲಾರದ ವ್ಯಕ್ತಿ ಎನ್ನುವ ಅರ್ಥವನ್ನು ಕಾಣುತ್ತೇವೆ.

ಆದಿ ಮೂಲವಾದ ಭಗವಂತನು ಬೇಡರ ಚಂಚುಲಕ್ಷ್ಮಿಯನ್ನು ಮದುವೆಯಾಗುವುದರ ಮೂಲಕ ಬೇಡರ ವಂಶವನ್ನು ಬೆಳೆಯಿಸಿದನೆಂಬ ಐತಿಹ್ಯವನ್ನು ಕಾಣಬಹುದು. ಏಕಾಂಗಿತನದಲ್ಲಿ ಅಲೆಯುತ್ತಿದ್ದ ಬೇಡ ಸಮುದಾಯದ ರೋಮಾಂಚನ ಹೆಜ್ಜೆಗಳು ಎಲ್ಲಿಂದ ಆರಂಭವಾದವು, ಹೇಗೆ ಆರಂಭವಾದವು ಎನ್ನುವುದರ ಬಗ್ಗೆ ಹಲವಾರು ವಿದ್ವಾಂಸರಲ್ಲಿ ವಾದ ವಿವಾದಗಳಿವೆ.

ಹಲವರ ಅನಿಸಿಕೆಯಲ್ಲಿ ಬೇಡ ಸಮುದಾಯದ ಮೂಲ ವಾಲ್ಮೀಕಿ ಎಂದು ಹೇಳುತ್ತಾರೆ. ಈತ ಕಿರಾತರ ಯಜಮಾನನಾದ ಕಾಮಕೇತು, ಲಕ್ಷ, ಮೀನು, ಮಲ್ಲರೆಂಬ ಇನ್ನಿತರ ಏಳು ಜನ ಮಕ್ಕಳ ನೇತೃತ್ವದಲ್ಲಿ ಏಳು ಪಡೆಗಳನ್ನು ರಚಿಸಿ ದರೋಡೆ ನಡೆಸುತ್ತಿದ್ದನು. ಮುಂದೆ ಕಾಡಿನಲ್ಲಿ ಕಾಲಾನಂತರ ಚದುರಿ ಹೋದ ಈ ಪಡೆಗಳು ಬೇಡ ಜನಾಂಗದ ವಂಶ ವಿಕಾಸಕ್ಕೆ ನಾಂದಿ ಹಾಡಿದವು ಎಂದು ಹೇಳಲಾಗಿದೆ. ಬೇಡರು ಕಣ್ವ ಋಷಿಯ ವಂಶಜರೆಂಬ ನಂಬಿಕೆಯಿದೆ. ಅದಕ್ಕಾಗಿಯೇ ಅವರು 'ಕಾಣ್ಯಮ್' ಕುಲದವರೆಂದು ತಮ್ಮನ್ನು ಕರೆದುಕೊಳ್ಳುತ್ತಾರೆ."[27]

"ಬೇಡ ಎನ್ನುವ ಪದವು ಸೃಷ್ಟಿಕರ್ತ ಬ್ರಹ್ಮನು ಊರಿನೊಳಕ್ಕೆ ಪ್ರವೇಶಿಸುತ್ತಿದ್ದ. ಅಪರಿಚಿತವಾದ ಒಂದು ಜಾತಿಯನ್ನು ತಡೆದು ಊರಿನೊಳಕ್ಕೆ ಹೋಗುವುದು 'ಬೇಡ'ವೆಂದದ್ದರಿಂದ ಆ ಜಾತಿಗೆ ಅದೇ ಹೆಸರೇ ಬಂದು ಅಂದಿನಿಂದ ಬೇಡ ಎಂಬ ಪದ ಬಂದಿತೆಂದು ಹೇಳಲಾಗಿದೆ."[28]

ವಿಜಯನಗರ ಕಾಲದ ಶಾಸನಗಳಲ್ಲಿ ನಾಯಕ, ನಾಯಕತನ, ಅಮರನಾಯಕ, ಮಹಾನಾಯಕಾಚಾರ್ಯಗಳ ಉಲ್ಲೇಖಗಳಿವೆ. ಕ್ರಿ.ಶ. ಏಳನೇ ಶತಮಾನದ (ಬೇಡ ರಾಜರ ಉಲ್ಲೇಖ) ಗದ್ದೆಮನೆ ಶಾಸನವನ್ನು ಹೊರತುಪಡಿಸಿದರೆ, ಕ್ರಿ.ಶ. ಒಂಬತ್ತನೇ ಶತಮಾನದಲ್ಲಿ 'ನಾಯಕ' ಪದ ಬಳಕೆಯಾಗಿರುವುದು ಗಮನಾರ್ಹ. ನಂತರ ಕುಮ್ಮಟದುರ್ಗವೇ ನಾಯಕರು ಪ್ರಭುತ್ವ ನಡೆಸಿದ ಮೊದಲ ಸಂಸ್ಥಾನ. ಮಹಾನಾಯಕಚಾರ್ಯ ಮುಮ್ಮಡಿ ಸಿಂಗೆಯ ನಾಯಕ, ಕಂಪಿಲರಾಯ (ಬಂಡೇರಾಯ) ಮತ್ತು ಕುಮಾರ ರಾಮನ ಆಳ್ವಿಕೆಯ ಪ್ರಭಾವವೇ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಅಡಿಗಲ್ಲಾಯಿತು. ಕಂಪ್ಲಿ ಕುಮಾರರಾಮ (ರೇವಂತ) ನು ತನ್ನ ಪ್ರವಾಸದ ವೇಳೆಯಲ್ಲಿ ಹಾವೇರಿ ಜಿಲ್ಲೆಯಲ್ಲಿ ಹಾದು ಹೋಗಿರುವುದು ಕೆಲವು ಸಾಹಿತ್ಯಗಳಲ್ಲಿ ಉಲ್ಲೇಖವಾಗಿರುವುದು ಕಂಡು ಬರುತ್ತದೆ.

ಬ್ರಿಟಿಷರು ಮತ್ತು ಬೇಡರು:

ದಕ್ಷಿಣ ಭಾರತದಲ್ಲಿ ಬ್ರಿಟೀಷರು ಅನೇಕ ಪ್ರತಿಭಟನೆ ಹೋರಾಟಗಳನ್ನು ಎದುರಿಸಿ ಅಧಿಕಾರವನ್ನು ಹಿಡಿದುಕೊಳ್ಳಬೇಕಾಯಿತು. ಹೈದಾರಾಬಾದಿನ ನಿಜಾಮ, ಮರಾಠರು ಮತ್ತು ಬ್ರಿಟಿಷರ ದೋಸ್ತಿಯಿಂದ ಸುಮಾರು 235 ವರ್ಷಗಳ ಕಾಲ ಅಧಿಕಾರದ ಗದ್ದುಗೆಯಲ್ಲಿ ರಾಜಮರ್ಯಾದೆಯನ್ನು ಅನುಭವಿಸಿದ್ದ ಬೇಡರು ಬ್ರಿಟೀಷರ ಪ್ರವೇಶದಿಂದಾಗಿ ಅವರ ಬದುಕು

ಚಿಂತಾಜನಕವಾಯಿತು. ಅವರು ಪಾಳೆಯಗಾರರನ್ನು ಸಂಬಳ ಪಡೆಯುವ ಅಧಿಕಾರಿಗಳ ಸ್ಥಾನಕ್ಕೆ ತಂದು ನಿಲ್ಲಿಸಿದರು. ಈ ಸಂದರ್ಭದಲ್ಲಿ ಕೆಲವು ಪಾಳೆಯಗಾರರು ನಮ್ಮ ಸಂಸ್ಥಾನಗಳು ಮರಳಿ ಸಿಗಬಹುದೆಂಬ ಆಸೆಯಿಂದ ಬ್ರಿಟಿಷರ ಪರ ನಿಂತರು. ಆದರೆ ಅವರಿಗೆ ಯಾವ ಲಾಭವೂ ಆಗಲಿಲ್ಲ. ಅನೇಕ ಬೇಡರು ಬ್ರಿಟೀಷರ ವಿರುದ್ಧ ಹೋರಾಟಕ್ಕಿಳಿದರು. ಅವರಲ್ಲಿ ಪ್ರಮುಖರಾದವರೆಂದರೆ ಸಂಗೊಳ್ಳಿ ರಾಯಣ್ಣ, ತರೀಕೆರೆ ಸರ್ಜಾ ರಂಗಪ್ಪ ನಾಯಕ, ಸರ್ಜಾ ಹನುಮಪ್ಪನಾಯಕರು ಬ್ರಿಟೀಷರ ವಿರುದ್ಧ ಹೋರಾಡಿದರು. ಈ ಹೋರಾಟದಲ್ಲಿ ಸರ್ಜಾರಂಗಪ್ಪ ನಾಯಕನು ವೀರಮರಣ ಹೊಂದಿದನು. ಸರ್ಜಾ ಹನುಮಪ್ಪ ನಾಯಕನೂ ಶೂರ–ಸ್ವಾಭಿಮಾನಿಯಾಗಿದ್ದನು. ಬ್ರಿಟಿಷರಿಂದ ಆತನನ್ನು ಹಿಡಿಯಲಾಗಲಿಲ್ಲ. ಕೊನೆಗೆ ಕುತಂತ್ರದಿಂದ ಅವನ ಸೂಳೆಯ ಸಹಾಯದಿಂದ ಸೆರೆಹಿಡಿದು ಗಲ್ಲಿಗೇರಿಸಲಾಯಿತು.

ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬೇಡರ ಪಾತ್ರ ಮಹತ್ವದ್ದು. ಬ್ರಿಟಿಷರ ನಿಶ್ಯಸ್ತ್ರೀಕರಣ ಶಾಸನ ನಮ್ಮ ಬದುಕಿಗೆ ಮಾರಕ ಎಂದು, ನಮ್ಮ ಮೂಲವೃತ್ತಿ, ಬೇಟೆ, ಬೇಟೆಯಾಡಲು ಯುದ್ಧದಲ್ಲಿ ಹೋರಾಡಲು ಬೇಕಾಗುವ ಅಸ್ತ್ರಗಳು ನಮ್ಮ ಜನ್ಮಸಿದ್ಧ ಆಸ್ತಿ. ಅವುಗಳನ್ನು ನಿಮಗೆ ಒಪ್ಪಿಸಲು ಸಾಧ್ಯವೇ ಇಲ್ಲ ಎಂಬುದು ಬೇಡರ ಕೂಗಾಗಿತ್ತು. ಬೇಡರ ಶೌರ್ಯದ ಅರಿವು ಇದ್ದ ಬ್ರಿಟಿಷರಿಗೆ, ಬೇಡರಿಂದ ಅಸ್ತ್ರಗಳನ್ನು ಕಿತ್ತುಕೊಂಡರೆ ಅವರನ್ನು ಹೆದರಿಸುವುದು ಸುಲಭ, ಅವರು ನಮ್ಮ ಅಧೀನರಾಗುವರು ಎಂಬುದು ಬ್ರಿಟಿಷರ ತಂತ್ರವಾಗಿತ್ತು. ಈ ಶಾಸನವನ್ನು ವಿರೋಧಿಸಿ ಹಲಗಲಿ ಬೇಡರು ತೋರಿದ ಸಾಹಸ ಮೈನವಿರೇಳಿಸುತ್ತದೆ. 'ನಮ್ಮ ಜೀವ ಕೊಟ್ಟೇವು ಹೊರತು ನಮ್ಮ ಅಸ್ತ್ರಗಳನ್ನು ನಿಮಗೆ ಒಪ್ಪಿಸಲಾರೆವು' ಎಂಬುದು ಬೇಡರ ಸ್ಪಷ್ಟ ಮಾತಾಗಿತ್ತು. ನೇರವಾಗಿ ಹಲಗಲಿ ಬೇಡರನ್ನು ಸೋಲಿಸಲಾಗದೇ ಬ್ರಿಟೀಷರು ಬೇಡರ ಗುಡಿಸಲುಗಳಿಗೆ ಬೆಂಕಿ ಇಟ್ಟರು. 'ಶಸ್ತ್ರಗಳನ್ನು ಒಪ್ಪಿಸುವುದಕ್ಕಿಂತ ಸಾವೇ ಮೇಲು' ಎಂದು ಬೇಡರು ತಮ್ಮ ಗುಡಿಸಲು ಒಳಗಿನಿಂದಲೇ ಬಿಲ್ಲುಗಳಿಂದ ಹೋರಾಡಿದರು. ಅನೇಕರು ಜೀವಂತವಾಗಿ ಬೆಂದು ಹೋದರು ಅನೇಕರನ್ನು ಸೆರೆಹಿಡಿದು ಗಲ್ಲಿಗೇರಿಸಿದರು.

ಸುರಪುರದ ವೀರ ವೆಂಕಟಪ್ಪ ನಾಯಕನು ಬ್ರಿಟಿಷರ ವಿರುದ್ಧ ಹೋರಾಡಿದ ಕಲಿ. ಸುರಪುರದಲ್ಲಿ ಬ್ರಿಟಿಷ್ ರಾಜಕೀಯ ಸಲಹೆಗಾರರನ್ನು ನೇಮಿಸಿಕೊಳ್ಳಬೇಕು ಹಾಗೂ ಅವನ ಖರ್ಚು ವೆಚ್ಚಗಳನ್ನು ಭರಿಸಬೇಕೆಂಬ ಡಾಲ್‌ಹೌಸಿಯ ಸಲಹೆಯನ್ನು ತಿರಸ್ಕರಿಸಿ ಬ್ರಿಟಿಷರ ವಿರುದ್ಧ ಹೋರಾಡಲು ಸಿದ್ಧನಾದನು. ಕುತಂತ್ರದಿಂದ ಬ್ರಿಟಿಷರು ಯಾವುದೇ ಸಮಯದಲ್ಲಿ ದಾಳಿ ಮಾಡಬಹುದೆಂದು ಅರಿತಿದ್ದು ವೆಂಕಟಪ್ಪ ನಾಯಕನು ಸಾಕಷ್ಟು ಸೈನ್ಯವನ್ನು ಸಂಘಟಿಸಿದನು. ನೇರವಾಗಿ ನಾಯಕನನ್ನು ಗೆಲ್ಲುವುದು ಅಸಾಧ್ಯವೆಂದು ಭಾವಿಸಿದ ಬ್ರಿಟಿಷರು ನಿಜಾಮನನ್ನು ತಮ್ಮ ಕಡೆ ಸೇರಿಸಿಕೊಂಡರು ಮತ್ತು ವಾಗಿನಗೇರಿ ಭೀಮರಾಯ ಎಂಬ ಮಂತ್ರಿಯನ್ನು ತಂತ್ರಗಾರಿಕೆಯಿಂದ ತಮ್ಮ ಕಡೆ ಮಾಡಿಕೊಂಡು ಸುರಪುರ ಕೋಟೆಯನ್ನು

ಭೇದಿಸಿ ವೆಂಕಟಪ್ಪನಾಯಕನನ್ನು ಸೆರೆಹಿಡಿದರು. ವೈರಿಗಳ ಸೆರೆಯಾಳಾಗಿರುವುದಕ್ಕಿಂತ ಸಾವೇ ಮೇಲೆಂದು ನಾಯಕ ಗುಂಡಿಟ್ಟುಕೊಂದು ಆತ್ಮಹತ್ಯೆ ಮಾಡಿಕೊಂಡನು. ಸಿಂಧೂರ ಲಕ್ಷ್ಮಣನೂ ಸಹ ಬ್ರಿಟೀಷರಿಗೆ ಸಿಂಹ ಸ್ವಪ್ನವಾಗಿ ಶ್ರೀಮಂತರು ಬ್ರಿಟೀಷರ ಕಡುವೈರಿಯಾಗಿ ಬಡವರ, ದೀನದಲಿತರ ಪ್ರಿಯ ಮಗನಾಗಿ ಹೋರಾಡಿದ ಇತಿಹಾಸ ಇಂದಿಗೂ ಜನಪದರ ನಾಲಿಗೆಯ ಮೇಲಿದೆ. ಎಷ್ಟೋ ಜನ ಬೇಡ ಶೂರರು ಬ್ರಿಟಿಷರ ವಿರುದ್ಧ ಹೊರಾಡಿ ವೀರಮರಣ ಹೊಂದಿರುವುದು ಚರಿತ್ರೆಯಿಂದ ಹೊರಗುಳಿದಿದೆ. ಅಂತಹ ಬೇಡ ನಾಯಕರ, ಶೂರರ ಇತಿಹಾಸ ಸಂಗ್ರಹ ಕೆಲಸ ಅತ್ಯಗತ್ಯವಾಗಿ ಆಗಬೇಕಿದೆ. ಆದರೆ ಇದು ನನ್ನ ಅಧ್ಯಯನ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ಸ್ಪಷ್ಟಪಡಿಸುತ್ತೇವೆ.

ಸ್ವಾತಂತ್ರ್ಯ ನಂತರದ ಬೇಡ ಬುಡಕಟ್ಟಿನ ಬೆಳವಣಿಗೆ:

ತಮ್ಮದೇ ಆದ ಭವ್ಯ ಇತಿಹಾಸವನ್ನು ಹೊಂದಿರುವ ಬೇಡರು, ಸ್ವಾತಂತ್ರ್ಯ ಬಂದ ನಂತರ ಆದಿವಾಸಿಗಳಿಂದ ಡಿ-ನೋಟಿಫೈಡ್, ಬುಡಕಟ್ಟಿನವರಾದರು. ಈ ಪರಿವರ್ತನೆ ಬಾಂಬೆ ಸ್ಟೇಟ್‌ನಲ್ಲಿ ಆಯಿತು. 1956ರಲ್ಲಿ ರಾಜ್ಯ ಪುನರ್ ರಚನಾ ಆಯೋಗದ ಪ್ರಕಾರ, ಭಾಷಾವಾರು ರಾಜ್ಯಗಳು ಉಗಮವಾದವು. ಮೈಸೂರು ರಾಜ್ಯವು ಹುಟ್ಟಿತು. ಆ ನಂತರ ಮೈಸೂರು ರಾಜ್ಯ 1973ರಲ್ಲಿ 'ಕರ್ನಾಟಕ ರಾಜ್ಯ' ಆಯಿತು. ಕರ್ನಾಟಕದ ಬೇಡ ಬುಡಕಟ್ಟಿನ ಜನರು 1991ರ ವರೆಗೆ 'ಆ'ಗುಂಪಿಗೆ ಸೇರಿದವರಾಗಿದ್ದರು. ನಂತರ ಇವರನ್ನು ಎಸ್.ಟಿ. ಗೆ ಸೇರಿಸಲಾಯಿತು. 1975ರ ಐತಿಹಾಸಿಕ ಹಾವನೂರು ವರದಿಯ ಪ್ರಕಾರ,[29] ಹಲವಾರು ಜಿಲ್ಲೆಗಳಲ್ಲಿರುವ ಬೇಡರನ್ನು ಈ ಕೆಳಗಿನ ರೀತಿಯಲ್ಲಿ ಪಟ್ಟಿ ಮಾಡಲಾಯಿತು. (ಬೇಡ ಅಥವಾ ಅದರ ಪರ್ಯಾಯ ಪದಗಳನ್ನು ಒಂದೇ ಒಂದು ಜಾತಿಯಲ್ಲಿ ಅಂದರೆ ಬೇಡ ಜಾತಿಯಲ್ಲಿ ಸೇರಿಸಲಾಗಿದೆ)

1. ಮೈಸೂರು ಪ್ರದೇಶ-ವಾಲ್ಮೀಕಿ
2. ಸಕೊಡಗು ಪ್ರದೇಶ-ಬೇಡರು
3. ಮಂಗಳೂರು ಪ್ರದೇಶ-ಬೇಡರು, ಬೊಯ, ವೇದನ
4. ಬೆಳಗಾಂವ ಪ್ರದೇಶ-ಬೇಡ, ಬೇರಡ, ತಳವಾರ, ವಾಲ್ಮೀಕಿ. ನಾಯಕ ಮಕ್ಕಳು, ನಾಯಕವಾಡಿ, ರಾಮೋಶಿ,
5. ಗುಲಬರ್ಗ ಪ್ರದೇಶ-ಬೇಡರ, ಬೆಂಡರ್.

ಕರ್ನಾಟಕ ಸರ್ಕಾರ, ಎರಡನೇ ಹಿಂದುಳಿದ ವರ್ಗಗಳ ಆಯೋಗದ ವರದಿ, ಸಂಪುಟ 3 ರ ಪ್ರಕಾರ ಬೇಡ ಸಮುದಾಯದವರ ಉಪಜಾತಿಗಳನ್ನು ಈ ಕೆಳಗೆ ನೀಡಿದಂತೆ ಪಟ್ಟಿ ಮಾಡಲಾಗಿದೆ.

1.ಬೇಡ

2.ಬೇಡರ/ಬೇಡರು/ವೇದನ

3.ಬ್ಯೇಡ/ಬ್ಯಾಡ

4.ಬೇರಡ/ಬೇರಡಾ

5.ಬೋಯ

6.ಮೈಸೂರು ನಾಯಕ

7.ನಾಯಕ–ಮಕ್ಕಳು/ನಾಯಕ/ನೈಯಿಕ.

8.ವಾಲ್ಮೀಕಿ/ವಾಲ್ಮೀಕಿಮಕ್ಕಳು

9.ಪಾಳೇಗಾರ್/ಪಾಳೆಗಾರ

10.ತಳವಾರ್/ತಳವರ್/ತಳವಾರ್.

11.ಊರು– ನಾಯಕ

12.ಹರಣ–ಸಿಕಾರಿ/ಚಿಗರಿಬೇಟೆಗಾರ.'[30]

ಎಂ.ವಿ.ಚಿತ್ರಲಿಂಗಯ್ಯ'[31] ನವರು ಬೇಡ ಸಮುದಾಯದಲ್ಲಿನ ಉಪ ಪಂಗಡಗಳನ್ನು ಈ ಕೆಳಗಿನಂತೆ ಗುರುತಿಸಿದ್ದಾರೆ.

1. ವಾಲ್ಮೀಕಿ
2. ತಳವಾರ
3. ನಾಯಕ–ಮಕ್ಕಳು
4. ಪರಿವಾರ
5. ನಾಯಕವಾಡಿ
6. ಬೇರಡ
7. ವೇದಬ್
8. ಬೋಯ
9. ರಾಮೋಶಿ

ಜಿಲ್ಲೆಯ ಬೇಡರ ಇತಿಹಾಸ (ಮಾಹಿತಿದಾರರು ಹೇಳಿದಂತೆ):

ಹಾವೇರಿ ಜಿಲ್ಲೆಯಲ್ಲಿನ ಬೇಡ ವಕ್ತೃಗಳು ತಮ್ಮದೆ ಆದ ಇತಿಹಾಸವನ್ನು ನನ್ನ ಮುಂದೆ ವಿಸ್ತಾರವಾಗಿ ಹೇಳಿರುತ್ತಾರೆ. ಜಿಲ್ಲೆಯಲ್ಲಿ ಮೂಲತಃ ಬೇಡರು ಹಿಂದೆ ವಾಸಿಸುತ್ತಿರಲಿಲ್ಲ. ಇಂದು ಜಿಲ್ಲೆಯಲ್ಲಿ ವಾಸವಾಗಿರುವ ಬೇಡ ಕುಟುಂಬಗಳು ಬೇರೆ ಬೇರೆ ಜಿಲ್ಲೆಗಳಿಂದ ವಲಸೆ ಬಂದಿರುತ್ತಾರೆ.

'ಬೇಡ ಸಮುದಾಯವನ್ನು ರಾಜ್ಯ ಮಟ್ಟದಲ್ಲಿ ಒಂದೆಡೆ ಸೇರಿಸಲು ರಾಜನಳ್ಳಿಯ ಶ್ರೀ ವಾಲ್ಮೀಕಿ ಗುರುಪೀಠ ಬಹುವಾಗಿ ಪ್ರಯತ್ನಿಸುತ್ತಿದೆ; ಈ ಸಂಸ್ಥೆ 1998ರಲ್ಲಿ ಸ್ಥಾಪಿಸಲಾಗಿದೆ. ಶೌರ್ಯ ಸಾಹಸ, ತ್ಯಾಗ ಮೊದಲಾದವುಗಳಿಂದ ಮೆರೆದು ಇತಿಹಾಸ ನಿರ್ಮಿಸಿದ ಬೇಡ ಸಮುದಾಯದವರ ಸ್ಥಿತಿ ಇಂದು ಶೋಚನೀಯವಾಗಿದೆ. ಸರ್ವ ರಂಗಗಳಲ್ಲೂ ಹಿನ್ನೆಡೆ ಕಂಡ ಈ ಸಮಾಜ ಸರಕಾರದಿಂದ ಇದುವರೆಗೂ ತಿರಸ್ಕಾರ ಮತ್ತು ಕೀಳರಿಮೆಗೆ ಒಳಗಾಗಿದೆ. ಈ ಜನಾಂಗದವರಲ್ಲಿ ಪ್ರತಿಭೆ, ಪಾಂಡಿತ್ಯ, ಮತ್ತು ಕುಶಲತೆಗೆ ಯಾವುದೂ ಕಡಿಮೆಯಿಲ್ಲ. ಆದರೆ, ಸರಿಯಾದ ಪ್ರೋತ್ಸಾಹ, ಪ್ರೇರಣೆ ಮತ್ತು ಮಾರ್ಗದರ್ಶನ ಇಲ್ಲದಕ್ಕೆ ಈ ಶೋಷಿತ ಸಮಾಜಕ್ಕೆ ಗ್ರಹಣ ಹಿಡಿದಿದೆ. ಇಂತಹ ವಿಷಮ ಪರಿಸ್ಥಿತಿಯಿಂದ ಜನಾಂಗದವರನ್ನು ಮೇಲೆತ್ತಲು ಶ್ರೀ ವಾಲ್ಮೀಕಿ ಗುರುಪೀಠ ಪ್ರಯತ್ನಿಸುತ್ತಿದೆ. ಈ ಗುರುಪೀಠವು ವಾಲ್ಮೀಕಿ ಕಿರಣ' ಎಂಬ ವಾರ ಪತ್ರಿಕೆಯನ್ನು ಪ್ರಕಟಿಸುತ್ತಿದೆ. ಈ ಗುರುಪೀಠದ ಅಧ್ಯಕ್ಷರಾದ ಶ್ರೀ ಪುಣ್ಯಾನಂದ ಪುರಿ ಮಹಾಸ್ವಾಮಿಗಳವರು ಹೆಚ್ಚಿನ ಕಾರ್ಯ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ವಾಲ್ಮೀಕಿ ಕಿರಣದಲ್ಲಿ ಪ್ರಕಟಗೊಂಡ ಹಲವಾರು ಸಂಶೋಧನ ಲೇಖನಗಳು ಸಮುದಾಯದವರ ಹಿಂದಿನ ಭವ್ಯ ಪರಂಪರೆಯನ್ನು ವಿವರವಾಗಿ ಓದುಗರಿಗೆ ನೀಡುತ್ತವೆ. ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಪ್ರಗತಿಯನ್ನು ನಾವು ಈ ಗುರು ಪೀಠದಿಂದ ಬಯಸುತ್ತೇವೆ. ಸಂಶೋಧಕರಿಗೆ ನೆರವಾಗಲು ಗುರುಪೀಠವು ಹಣವನ್ನು ನೀಡುವುದು ಅವಶ್ಯಕವಾಗಿದೆ. ಸರಕಾರವೂ ಸಹ ಈ ಗುರುಪೀಠಕ್ಕೆ ಮಲತಾಯಿ ಧೋರಣೆ ತೋರದೆ, ಆರ್ಥಿಕ ನೆರವು ನೀಡಿ ತನ್ಮೂಲಕ ಈ ಸಮುದಾಯವನ್ನು ಮೇಲೆತ್ತುವುದು ಒಂದು ಸಾಮಾಜಿಕ ನ್ಯಾಯವು ಆಗಿದೆ.

ಇದುವರೆಗಿನ ಅಧ್ಯಯನಗಳು:

ಬೇಡ ಬುಡಕಟ್ಟಿನ ಬಗ್ಗೆ ಅನೇಕ ವಿದ್ವಾಂಸರು ಅಧ್ಯಯನ ಮಾಡಿದ್ದಾರೆ. ಅವರಲ್ಲಿ ಪ್ರಮುಖರೆಂದರೆ ವೆರಿಯರ್ ಎಲ್ವಿನ್ ರ ಆದಿಯಾಗಿ ಜಿ.ಹೆಚ್.ಹಟ್ಟನ್, ಜಿ.ಪಿ.ಮಿಲ್ಸ್, ಸ್ಮಿತ್, ಹೈಮರ್, ಡಾರ್ಫ ಇಂಥವರೆಲ್ಲ ಉತ್ತರ ಭಾರತದ ಬುಡಕಟ್ಟುಗಳನ್ನು ಅಧ್ಯಯನ ಮಾಡಿ ಗ್ರಂಥಗಳನ್ನು ಹೊರತಂದ ಮೇಲೆ ಅದರ ಮಹತ್ವ ಏನು ಎಂದು ತಿಳಿಯಿತು. ಹಾಗೆಯೇ ದಕ್ಷಿಣ ಭಾರತದ ಬುಡಕಟ್ಟುಗಳ ಬಗೆಗೆ ಮಾಡಿದ ವಿದ್ವಾಂಸರು ಎಡ್ಗರ್ ಥರ್‌ಸ್ಟನ್ ಮತ್ತು ಕೆ.ರಂಗಾಚಾರಿ, ಎಲ್.ಕೆ.ಅನಂತಕೃಷ್ಣ ಅಯ್ಯರ್ ಮತ್ತು ಎಲ್.ವಿ.ನಂಜುಂಡಯ್ಯ ಮುಂತಾದವರು. ಈ ಮಾನವಶಾಸ್ತ್ರಜ್ಞ ರ ಹಿನ್ನೆಲೆಯಲ್ಲಿ ನಾವು ಬೇಡರ ಬಗ್ಗೆ ಅಧ್ಯಯನ ಕೈಗೊಂಡಾಗ ಅನೇಕ ಪ್ರಮುಖ ಅಂಶಗಳು ಕಂಡುಬರುತ್ತವೆ. ಈ ಮೇಲಿನ ವಿದ್ವಾಂಸರು ಸೂಚಿಸಿರುವಂತೆ ಈ ಬುಡಕಟ್ಟಿನಲ್ಲಿ ವಿಭಿನ್ನ ರೀತಿಯ ವೈಶಿಷ್ಟ್ಯಗಳನ್ನು ನಾವು ಕಾಣುತ್ತೇವೆ. ಈಗಲೂ ಇವರು ಉಳಿಸಿಕೊಂಡು ಬಂದಿರುವ ಸಂಪ್ರದಾಯ, ಆಚರಣೆಗಳು ನಂಬಿಕೆಗಳು ಹಾಗೂ ಇನ್ನಿತರ ಜೀವನ ಕ್ರಮಗಳು ಅವರ ಮೂಲ ಪರಿಸರದ ಬಗ್ಗೆ ಸಾಕಷ್ಟು ಮಾಹಿತಿಯನ್ನು ಒದಗಿಸುತ್ತವೆ.

ಈ ಸಮುದಾಯಕ್ಕೆ ಸಂಬಂಧಿಸಿದಂತೆ ಕರ್ನಾಟಕದವರೇ ಆದ ಡಾ.ಕೃಷ್ಣಮೂರ್ತಿ ಹನೂರು, ಪ್ರೊ.ಲಕ್ಷ್ಮಣ ತೆಲಗಾವಿ, ಡಾ.ಮೀರಾಸಾಬಿಹಳ್ಳಿ ಶಿವಣ್ಣ, ಡಾ.ತಾರಿಹಾಳ ಹನುಮಂತಪ್ಪ, ಡಾ.ಕೆ.ಎಂ.ಮೈತ್ರಿ, ಡಾ.ಕರಿಶೆಟ್ಟಿ ರುದ್ರಪ್ಪ, ಡಾ.ವಿರುಪಾಕ್ಷಿ ಪೂಜಾರಹಳ್ಳಿ, ಡಾ.ಮಂಜುನಾಥ ಬೇವಿನಕಟ್ಟಿ ಇತ್ಯಾದಿಯಾಗಿ ಅನೇಕ ಜನ ವಿದ್ವಾಂಸರು ಅಧ್ಯಯನ ಮಾಡಿದ್ದಾರೆ. ಈ ಎಲ್ಲಾ ವಿದ್ವಾಂಸರ ಅಭಿಪ್ರಾಯದಂತೆ ಬೇಡ ಬುಡಕಟ್ಟಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ವೈಶಿಷ್ಟ್ಯಗಳು ವಿಭಿನ್ನವಾಗಿರುವುದು ಕಂಡು ಬರುತ್ತದೆ.

ಬೇಡರ ಕುರಿತಾದ ಪ್ರಮುಖ ಕೃತಿಗಳೆಂದರೆ–

ಎಡ್ಗರ್ ಥರ್‌ಸ್ಟನ್ ಮತ್ತು ಕೆ.ರಂಗಾಚಾರಿ-"Caste and Tribes of Southern India.

ಎಲ್.ಕೆ.ಅನಂತ ಕೃಷ್ಣ ಅಯ್ಯರ್ ಮತ್ತು ಹೆಚ್.ವಿ.ನಂಜುಂಡಯ್ಯ– The Mysore Castes and Tribes.

ದಿವಂಗತ. ಎಂ.ರಂಗಪ್ಪ ರವರ–'ಸುಂಕೆಮಲೆ ಪರಮಾರ್ಥ'

ಎಂ.ಜಿ.ಈಶ್ವರಪ್ಪ ರವರ–'ಮ್ಯಾಸಬೇಡರು'

ಆರ್.ರಾಜಣ್ಣ. ಚಳ್ಳಕೆರೆ–'ನಾಯಕ ಜನಾಂಗದ ಇತಿಹಾಸ'

ಡಾ.ವಿರುಪಾಕ್ಷಿ ಪೂಜಾರಹಳ್ಳಿ–ಬೇಟೆ ಮತ್ತು ಬೇಡರು

ಡಾ.ವಿರುಪಾಕ್ಷಿ ಪೂಜಾರಹಳ್ಳಿ–ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ.

ಡಾ.ಮಂಜುನಾಥ ಬೇವಿನಕಟ್ಟಿ–ವ್ಯಾಧ ಚರಿತೆ (ಬೇಡಕುಲಮೂಲದ ಕಥನಗಳು)

ಡಾ.ಮಂಜುನಾಥ ಬೇವಿನಕಟ್ಟಿ ಮತ್ತು ಡಾ.ತಾರಿಹಳ್ಳಿ ಹನುಮಂತಪ್ಪ–ವಾಲ್ಮೀಕಿ ಸಂಪದ.

ಎಂ.ಎಸ್.ಪ್ರಭಾಕರ್–ಚಂದ್ರವಳ್ಳಿ.

ಎಂ.ವಿ.ಚಿತ್ರಲಿಂಗಯ್ಯ–ವಾಲ್ಮೀಕಿ ಸಂದೇಶ (ಮಾಸಪತ್ರಿಕೆ).

ಡಾ.ಕೆ.ಎಂ.ಮೈತ್ರಿ–ಬುಡಕಟ್ಟು ಕುಲಕಸಬುಗಳು.

ಡಾ.ಕೃಷ್ಣಮೂರ್ತಿ ಹನೂರು–ಮ್ಯಾಸಬೇಡರ ಸಂಸ್ಕೃತಿ.

ಎಚ್.ಜೆ.ಲಕ್ಕಪ್ಪಗೌಡ–ಕರ್ನಾಟಕ ಬುಡಕಟ್ಟುಗಳು ಸಂಪುಟ–1 ಮತ್ತು 2.

ಲಕ್ಷಣ ತೆಲಗಾವಿ–ಜನಪದ ವೀರ ಸಾಹಿತ್ಯ:ವಾಲ್ಮೀಕಿ ಸಾಹಿತ್ಯ ಸಂಪದ.

ಡಾ.ಚಲುವರಾಜು–ಜುಂಜಪ್ಪನ ಕಾವ್ಯ.

ಡಿ.ಬಿ.ಡಂಗ–ಜನಾಂಗ ಪರಿಚಯ.

ಚಿತ್ರದುರ್ಗ, ರಾಯಚೂರು, ಗುಲ್ಬರ್ಗ, ಬೀದರ್ ಜಿಲ್ಲೆಯ ಗೆಜೇಟಿಯರ್‌ಗಳು ಇತ್ಯಾದಿಯಾಗಿ ಅನೇಕ ವಿದ್ವಾಂಸರುಗಳು ಅಧ್ಯಯನ, ಸಂಶೋಧನೆ ಮತ್ತು ಕ್ಷೇತ್ರಕಾರ್ಯ ನಡೆಸಿದ್ದಾರೆ. ಇವರೆಲ್ಲರ ಅಭಿಪ್ರಾಯದಂತೆ ನಾನೂ ಕೂಡ ಅವರ ಕೃತಿಗಳನ್ನು ಸಂಕ್ಷಿಪ್ತವಾಗಿ ಗಮನಿಸಿದಾಗ ಕಂಡುಬಂದ ಸಂಗತಿ ಎಂದರೆ ಬೇಡ/ನಾಯಕ ಬುಡಕಟ್ಟಿನ ವೈಶಿಷ್ಟ್ಯಗಳು ವಿಭಿನ್ನವಾಗಿರುವುದು ಕಂಡುಬರುತ್ತದೆ.

ಬೇಡ ಸಮುದಾಯದ ಗುಣಲಕ್ಷಣಗಳು:

ಪ್ರತಿಯೊಂದು ಸಮುದಾಯದ ಜನರು ತಮ್ಮದೇ ಆದ ವ್ಯಕ್ತಿತ್ವವನ್ನು ಹೊಂದಿರುವುದು ಸಹಜ. ಆದರೆ ಬೇಡರ ವ್ಯಕ್ತಿತ್ವದ ವಿಶೇಷತೆಗಳೆಂದರೆ ಪೂರ್ವಿಕರ ಸ್ಮರಣೆ, ಗತಕಾಲದ ವಿಜೃಂಭಣೆ, ಅತಿಯಾದ ಆತ್ಮವಿಶ್ವಾಸ, ಕೆಚ್ಚೆದೆಯ ಧೈರ್ಯ, ಸ್ವಾಭಿಮಾನ ಇತ್ಯಾದಿಗಳಿಗೆ ಬೇಡ ನಾಯಕರು ಹೆಸರುವಾಸಿಯಾಗಿದ್ದಾರೆ. ಇದಲ್ಲದೆ ಸ್ವಾಮಿನಿಷ್ಠೆ, ನಂಬಿಕೆ, ವಿಶ್ವಾಸ ಗುಣಗಳನ್ನು ಉಳಿಸಿಕೊಂಡಿದ್ದಾರೆ. ಮೇಲ್ನೋಟಕ್ಕೆ ಒರಟು ಸ್ವಾಭಾವದವರು ಎಂದೆನಿಸಿದರೂ ಸರಳತೆ, ಸಜ್ಜನಿಕೆ ಇವರಲ್ಲಿ ಅಂತರ್ಗತವಾಗಿವೆ. ಒಳ್ಳೆಯವರಿಗೆ ಒಳ್ಳೆಯವರು ಕೆಟ್ಟವರ ಪಾಲಿಗೆ ಕೆಟ್ಟವರೆಂದು ತಮಗೆ ತಾವೇ ಗುಣಗಾನ ಮಾಡಿಕೊಳ್ಳುವುದು ಇವರ ಸಾಮಾನ್ಯ ಸಂಗತಿ. ಶಿಷ್ಟ ರಕ್ಷಣೆ-ದುಷ್ಟ ಸಂಹಾರವೆಂಬ ದೈವೀ ತತ್ವವನ್ನು ಪ್ರತಿಪಾದಿಸುವುದೇ ಅಲ್ಲ, ಕಾರ್ಯಗತವಾಗಿ ನಿರೂಪಿಸುತ್ತಾರೆ. ನಾವು ಯಾರಿಗೂ ಹೆದರುವುದಿಲ್ಲವೆಂದು ಹೇಳುತ್ತಲೇ ಸತ್ಯ, ನ್ಯಾಯ, ನಿಷ್ಠೆಗಳಿಗೆ ತಲೆಬಾಗುತ್ತಾರೆ. ನಂಬಿಕೆಗಾಗಿ ತಲೆಯನ್ನು ಬೇಕಾದರೂ ಕೊಡುತ್ತಾರೆ. ನಂಬಿಕೆ ಕೆಡಿಸಿಕೊಂಡವರ ತಲೆಯನ್ನು ಹಿಡಿದು ತರುತ್ತಾರೆ ಎಂಬ ಮಾತು ಬೇಡರ ಖಚಿತತೆಯನ್ನು ಕುರಿತು ಹೇಳುವುದಾಗಿದೆ. ಹೊಗಳಿಕೆಗೆ ಹಿಗ್ಗಿ ಹೋಗುವುದು ಒಳ್ಳೆಯ ಮಾತುಗಳಿಗೆ ಬಹುಬೇಗ ಮರುಳಾಗುವುದು ಬೇಡರ ದೌರ್ಬಲ್ಯ. ಅತಿವಿನಯ ಸಮಯ ಸಾಧಕತನವನ್ನು ಇವರಲ್ಲಿ ಹುಡುಕಿದರೂ ಸಿಗುವುದಿಲ್ಲ. ತಮ್ಮದು ಪಾಳೆಗಾರರ ವಂಶವೆಂದು ಮೆರೆದು ಪ್ರತಿಪಾದಿಸುತ್ತಾರೆ. ಅದಕ್ಕೂ ಹಿಂದೆ ಕಳ್ಳರಾಗಿದ್ದರೆಂಬುದನ್ನು ಖಂಡಿಸುತ್ತಾರೆ. ಒಮ್ಮೊಮ್ಮೆ ಕೊಟ್ಟರೆ ವರ ಇಟ್ಟರೆ ಶಾಪವೆಂಬ ಅತೀರೇಕಕ್ಕೂ ಹೋಗುವವರಿದ್ದಾರೆ. ಇವೆಲ್ಲವನ್ನೂ ಮೀರಿದ ಸಹನಾಶೀಲರು, ಮೇಧಾವಿಗಳು, ಜ್ಞಾನಿಗಳು, ವಿದ್ಯಾವಂತರು, ಬುದ್ಧಿಜೀವಿಗಳು ಬೇಡರಲ್ಲಿ ಕಂಡುಬರುತ್ತಾರೆ. ಇಂಥವರಿಗೆ ಸಮುದಾಯದಲ್ಲಿ ಗೌರವಾದಾರಗಳು ಲಭಿಸುತ್ತವೆ. ಇಂಥವರನ್ನು ಸಮುದಾಯವು ತಮ್ಮ ಸಾಂಸ್ಕೃತಿಕ ನಾಯಕರನ್ನಾಗಿ ಸ್ವೀಕರಿಸಿ ಮಾನ್ಯ ಮಾಡುತ್ತದೆ.

ಬೇಡ ಸಮುದಾಯದ ಸಾಮಾಜಿಕ ಜೀವನ:

ಸಾಮಾಜಿಕ ಹಿನ್ನೆಲೆ:

ಒಂದು ಸಮುದಾಯದ ಆಚಾರ-ವಿಚಾರ ನಂಬಿಕೆ, ಪದ್ಧತಿ, ಅವರು ಬದುಕುವ ರೀತಿ-ನೀತಿ, ಉಡುಗೆ-ತೊಡುಗೆ, ಆಹಾರ ಪದ್ಧತಿ ಮುಂತಾದ ಅವರಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಂಡಾಗ ಅದನ್ನು ಆ ಸಮುದಾಯದ 'ಸಾಮಾಜಿಕ' ಅಧ್ಯಯನ ಎಂದೇ ಹೇಳುತ್ತೇವೆ. ಮೂಲತಃ ಬೇಡರು ಆದಿಯಿಂದಲೂ 'ಬೇಟೆಯಾಡಿಕೊಂಡು, ಗೆಡ್ಡೆ-ಗೆಣಸುಗಳನ್ನು ಸಂಗ್ರಹಿಸಿ ತಮ್ಮ ಹಸಿವನ್ನು ನೀಗಿಸಿಕೊಳ್ಳುತ್ತಿದ್ದರು. ನಿಸರ್ಗದ ಸಸ್ಯ ಸಮೂಹ ಹಾಗೂ ಪ್ರಾಣಿ ವಲಯದಲ್ಲಿ ತಮಗೆ ಆಹಾರವಾಗಿ ಒಗ್ಗುವಂಥದ್ದನ್ನು ಕಂಡುಕೊಂಡು ಬಳಕೆಯ ವಿಧಾನಗಳನ್ನು ರೂಪಿಸಿ ಅನಾನುಕೂಲವೆನಿಸುವ ಸಸ್ಯವರ್ಗ ಹಾಗೂ

ಅಪಾಯವೆನಿಸುವ ಪ್ರಾಣಿ ವರ್ಗವನ್ನು ನಿಯಂತ್ರಿಸಲಾಯಿತು. ಅವಶ್ಯವೆನಿಸುವ ಜೀವ ಜಗತ್ತನ್ನು ಬಳಕೆಗೆ ತಕ್ಕಂತೆ ಬೆಳೆಸತೊಡಗಿದರು. ಇದರಿಂದ ಕೃಷಿ, ಪಶುಪಾಲನೆ, ಹೈನುಗಾರಿಕೆ ಮತ್ತಿತರ ವೃತ್ತಿಗಳು ರೂಪಗೊಂಡವು. ಇವುಗಳ ಕಾರಣಕ್ಕಾಗಿ ಅಲೆಮಾರಿತನವನ್ನು ಅಂತ್ಯಗೊಳಿಸಿ ಒಂದೆಡೆ ನೆಲೆಯೂರುವುದನ್ನು ಕಲಿಯಬೇಕಾಯಿತು. ಹೀಗೆ ಕಾಡಿನಲ್ಲಿ ಅಲೆಯುತ್ತಿದ್ದ ಮನುಷ್ಯ ನಾಡನ್ನು ರೂಪಿಸಿಕೊಂಡು ನೆಲೆಸತೊಡಗಿದ. ಬೆಳವಣಿಗೆಯೇ, ಪ್ರಕೃತಿಯಿಂದ ಸಂಸ್ಕೃತಿಯನ್ನು ರಚಿಸಿಕೊಂಡ ಪ್ರಕ್ರಿಯೆಯಾಗಿದೆ. ಹೀಗೆ ಒಟ್ಟಾರೆ ಮಾನವ ಸಮಾಜ ಹಾಗೂ ಸಂಸ್ಕೃತಿಗಳು ವಿಕಾಸಗೊಂಡತೆ ಬೇಡ ಸಮುದಾಯವೂ ಕೂಡ ನಾಡುಗಳಲ್ಲಿ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಂಡಿತು. ಆ ಹಿನ್ನೆಲೆಯಲ್ಲಿಯೇ ಈ ಸಮುದಾಯವನ್ನು ನೆಲೆನಿಂತ ಬುಡಕಟ್ಟು ಎಂದು ಹೆಸರಿಸಲಾಗಿದೆ.

ಬೆಡಗುಗಳು:

'ಬೇಡರಲ್ಲಿ ಅನೇಕ ಉಪ ಪಂಗಡಗಳಿವೆ. ಮುಖ್ಯವಾದವುಗಳು,

1. ಊರ ನಾಯಕರು (ಚಿನ್ನ ಬೊಯಿ)
2. ಮ್ಯಾಸಬೇಡರು (ಪದ್ದ ಬೋಯಿ)
3. ಗುಡ್ಲ ಬೇಡ (ಗುಡಿಸಲು ಬೇಡ)
4. ಮತ್ಯಮ್ಮ ಅಥವಾ ಉರಸಿ ಬೇಡ ಮತ್ತು ಸಾದರ ಬೇಡ
5. ಹಾಲು ಬೇಡ ಮತ್ತು
6. ಮೊಂಡಬೇಡ ಎಂಬ ಪ್ರಮುಖ ಉಪಪಂಗಡಗಳನ್ನು ಕಾಣಬಹುದು.'[32]

ಒಂದೇ ಕುಲಕ್ಕೆ ಅಥವಾ ಪಂಗಡಕ್ಕೆ ಸೇರಿದ್ದ ಉಪಪಂಗಡಗಳ ನಡುವೆ ವೈವಾಹಿಕ ಸಂಬಂಧಕ್ಕೆ ಅವಕಾಶವಿಲ್ಲ. ಅಲ್ಲದೆ ಉಪಪಂಗಡಗಳಲ್ಲೇ ಅನೇಕ ಬೆಡಗುಗಳಿವೆ. ಸ್ವ-ಬೆಡಗಿನಲ್ಲಿ ವೈವಾಹಿಕ ಸಂಬಂಧವಿಲ್ಲ. ಒಂದೇ ಬೆಡಗಿನವರು ಅಣ್ಣ ತಮ್ಮಂದಿರಾಗುವರು. ಮ್ಯಾಸಬೇಡರಲ್ಲಿ ಮಂದಲರು ಮತ್ತು ಮಲ್ಲನಾಯಕರು ಎಂದು ಎರಡು ಪ್ರಮುಖ ವಿಭಾಗಗಳಿವೆ. ಇವು ತಮ್ಮನ್ನು ಚಂದ್ರವಂಶ ಮತ್ತು ಸೂರ್ಯವಂಶಗಳಲ್ಲಿಯೂ ಸಂಬಂಧ ಬೆಳೆಸಿಕೊಂಡ ಬೆಡಗುಗಳು ಇವೆ. ಇತ್ತೀಚೆಗೆ ಊರುನಾಯಕ ಮತ್ತು ಮ್ಯಾಸನಾಯಕ ಎಂದು ಕರೆಯಲ್ಪಡುವ ನಾಯಕ/ಬೇಡ ಜನಾಂಗದಲ್ಲಿ ವೈವಾಹಿಕ ಸಂಬಂಧ, ಕೊಡುಕೊಳ್ಳುವಿಕೆ, ಅನ್ಯೋನ್ಯತೆ, ಸಮ ಮನಸ್ಕ ಜೀವನ ನಡೆಯುತ್ತಿರುವುದು ಆರೋಗ್ಯಕಾರಿ ಬೆಳವಣಿಗೆಯಾಗಿದೆ. ಹಾವೇರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಹೆಚ್ಚಾಗಿ ಊರುಬೇಡರು ಮಾತ್ರ ಕಂಡುಬರುತ್ತಿದ್ದಾರೆ. ಊರುಗಳಲ್ಲಿ ವಾಸಿಸುವುದರಿಂದಲೇ ಇವರಿಗೆ ಊರು ನಾಯಕರು ಎಂದು ಹೆಸರು ಬಂದಿರಬೇಕು. ಮೊದಲು ಇವರು ಪಶುಪಾಲನೆ, ಬೇಟೆಗಾರಿಕೆ, ಪಾಳೇಗಾರಿಕೆಗಳನ್ನು ನಿರ್ವಹಿಸುತ್ತಿದ್ದರು. ಆದರೆ ಇಂದು ನಾಗರೀಕತೆಯ ಬದುಕಿಗೆ ಹತ್ತಿರವಾದ್ದರಿಂದ ಅವುಗಳು ಕಡಿಮೆಯಾಗಿ, ಬೇರೆ ಬೇರೆ ಉದ್ಯೋಗಗಳನ್ನು ಕೈಗೊಂಡು ಬದುಕುತ್ತಿದ್ದಾರೆ

ಬೇಡರ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ:

ಮಾನವ ಸಮಾಜವು ಸಾಮಾಜಿಕ ಸಂಬಂಧಗಳ ಬಲೆಯಾಗಿದೆ. ಸಮಾಜದಲ್ಲಿ ಜೀವಿಸುವಂತಹ ಪ್ರತಿಯೊಂದು ಸಮುದಾಯಗಳು ಪಾರಂಪರಿಕವಾಗಿ ಅನುಸರಿಸಿಕೊಂಡು ಬಂದಂತಹ ಸಂಸ್ಕೃತಿ ಮತ್ತು ಸಾಮಾಜಿಕ ಅಂಶಗಳು ಪ್ರೇರಣಾದಾಯಕವಾಗಿರುತ್ತವೆ. ಅದರಂತೆ ಬೇಡ ಬುಡಕಟ್ಟು ಸಮುದಾಯವು ಸಹ ಭೌತಿಕ ಮತ್ತು ಅಭೌತಿಕ ಕ್ರಮದ ಅನುಸಾರವಾಗಿ ಹಲವು ರೀತಿಯ ಲೋಕಾರೂಢಿಗಳು, ಸಂಪ್ರದಾಯಗಳು, ಆಹಾರ ಪದ್ಧತಿ ಮತ್ತು ಉಡುಗೆ-ತೊಡುಗೆ, ವೃತ್ತಿ, ವಿವಾಹ, ಇತರೆ ಎಲ್ಲಾ ಸಾಮಾಜಿಕ ಜೀವನದಲ್ಲಿ ಹಲವಾರು ಉಪ ವ್ಯವಸ್ಥೆಗಳನ್ನು ಒಳಗೊಂಡು, ಇವೆಲ್ಲವುಗಳಿಗೂ ತನ್ನದೇ ಆದ ಸಮುದಾಯದ ನೀತಿ-ನಿರ್ಧಾರ ಆಚರಣಾ ಕ್ರಮಗಳೊಂದಿಗೆ ಕಾರ್ಯಗಳನ್ನು ನಿರ್ವಹಿಸುತ್ತದೆ ಹಾಗೂ ಇದರಲ್ಲಿ ಕ್ರಮಬದ್ಧತೆಯು ಇರುತ್ತದೆ. ಈ ತರಹದ ಆಚರಣೆಗಳಲ್ಲಿ ಒಂದು ಪ್ರದೇಶದಿಂದ ಬೇರೊಂದು ಪ್ರದೇಶಗಳಿಗೆ ಹೋಲಿಕೆ ಮಾಡಿದಾಗ ವಿಭಿನ್ನತೆ ಕಂಡು ಬರುವುದು ಆಶ್ಚರ್ಯವೇನಲ್ಲ. ಆದರೆ ಬಯಲುಸೀಮೆಯ ಭಾಗದಲ್ಲಿ ಬಿರುಬಿಸಿಲಿನ ತಾಪಮಾನದ ತಾಪತ್ರಯದೊಳಗಡೆ ಬೇಡರ ಸಾಮಾಜಿಕ ಜೀವನವು ಪುರೋಹಿತಶಾಹಿ ಮೌಲ್ಯಗಳಿಂದ, ಮತೀಯ ಸಂಸ್ಕೃತಿಯಿಂದ ಮತ್ತು ಕೈಗಾರಿಕಾ ಸಂಸ್ಕೃತಿಯಿಂದ ರೂಪುಗೊಂಡದ್ದಲ್ಲ. ಕೇವಲ ತಮ್ಮ ದೈಹಿಕ ದುಡಿಮೆ ಅಥವಾ ಶ್ರಮಿಕ ಸಂಸ್ಕೃತಿಯಿಂದ ಬಂದಂತವರು ಇವರು. ದಿನನಿತ್ಯದ ಜೀವನದ ಹೊಟ್ಟೆಪಾಡಿಗಾಗಿ ದುಡಿದವರು ಅಷ್ಟೇ. ಅತಿ ದೊಡ್ಡ ಭೂಮಾಲಿಕರಂತೂ ಅಲ್ಲ.

ಆಹಾರ ಪದ್ಧತಿ:

ಆಹಾರ ಮನುಷ್ಯನ ಜೀವನಾಧಾರ. ಇದರ ಪ್ರಾಮುಖ್ಯತೆ ಕುರಿತು ಬಯಲು ಸೀಮೆ ಜನರಲ್ಲಿ ಒಂದು ಗಾದೆ ಬಹಳ ಪ್ರಚಲಿತದಲ್ಲಿದೆ. "ಜೋಳದ ರೊಟ್ಟಿಯಂತಹ ಊಟವಿಲ್ಲ. ಜೀತಪದ್ಧತಿಯಿಂದ ಮುಕ್ತಿಯಿಲ್ಲ." ಈ ಬಯಲು ಸೀಮೆಯಲ್ಲಿ ಜೋಳವನ್ನು ಹೆಚ್ಚಾಗಿ ಬೆಳೆಯುತ್ತಿರುವುದರಿಂದ ಜೋಳದ ರೊಟ್ಟಿಯು ದಿನನಿತ್ಯದ ಪ್ರಮುಖ ಆಹಾರವಾಗಿದೆ. ಅರಣ್ಯವಾಸಿ ಸಮುದಾಯದ ಬೇಡರು ಮೂಲತಃ ಮಾಂಸಹಾರಿಗಳಾದರೂ ಸಸ್ಯ ಆಹಾರಕ್ಕೆ ಅಷ್ಟೆ ಮಹತ್ವಕೊಟ್ಟಿರುವುದು ಇವತ್ತಿನ ಬದಲಾದ ಸಾಮಾಜಿಕ ಜೀವನದಲ್ಲಿ ಕಂಡುಬರುತ್ತದೆ. ಈ ಬದಲಾವಣೆಗೆ ಮುಖ್ಯ ಕಾರಣ, ಬೇಟೆ ತರಲು ಅರಣ್ಯಗಳೇ ಇಲ್ಲದಂತೆ ಆಗಿವೆ. ಜೊತೆಗೆ ಬೇಟೆಗೆ ಶಿಕ್ಷೆ ವಿಧಿಸುವ ಕಾನೂನು ಜಾರಿಗೆ ತಂದಿದೆ. ತಮ್ಮ ಹಸಿವನ್ನು ನೀಗಿಸಿಕೊಳ್ಳಲು ಈ ಸಮುದಾಯದ ಜನರು ಬೇರೆ ವೃತ್ತಿಗಳನ್ನು ಕೈಗೊಳ್ಳಲು ನಗರ ಪ್ರದೇಶಗಳಿಗೆ ವಲಸೆ ಹೋಗುವುದು ಕಂಡುಬರುತ್ತದೆ.

ವಸತಿ ವ್ಯವಸ್ಥೆ:

ಡಾ.ಕೃಷ್ಣಮೂರ್ತಿ ಹನೂರರವರು ಉಲ್ಲೇಖಿಸಿರುವಂತೆ ಬೇಡರಲ್ಲಿ 2 ಮುಖ್ಯ ಪಂಗಡಗಳಿವೆ. 1. ಊರನಾಯಕ 2. ಮ್ಯಾಸನಾಯಕರು. ನಂತರ ಅವರೇ ಹೇಳಿರುವಂತೆ

ಊರನಾಯಕರು ಈಗಾಗಲೇ ಗ್ರಾಮಾಂತರ ಪ್ರದೇಶ, ನಗರ ಪಟ್ಟಣಗಳನ್ನು ಸೇರಿ ತಕ್ಕಷ್ಟು ವಿದ್ಯೆ, ಉದ್ಯೋಗ ಮುಂತಾದವುಗಳನ್ನು ಗಳಿಸಿ ನಾಗರೀಕರಾಗಿದ್ದಾರೆ. ಮ್ಯಾಸ ಬೇಡರು ಇನ್ನೂ ಸ್ವಲ್ಪ ಮಟ್ಟಿಗೆ ಪ್ರತ್ಯೇಕವಾಗಿಯೇ ಉಳಿದಿದ್ದಾರೆ. ಅಂದರೆ ಊರಾಚೆ ಹಟ್ಟಿಗಳನ್ನು ಕಟ್ಟಿಕೊಂಡು ವಾಸಿಸುತ್ತಿರುವುದನ್ನು ಕಾಣಬಹುದು. ಹಿಂದೆ ಬೇಡರು ತಮ್ಮ ಮನೆಗಳನ್ನು ಅಂಚೆಹುಲ್ಲು, ಲಕ್ಕಿಬರಲುಗಳಿಂದ ನಿರ್ಮಿಸಿಕೊಳ್ಳುತ್ತಿದ್ದರು. ಹಾಗೂ ತಮ್ಮ ಹಟ್ಟಿಗಳಲ್ಲಿ ಇತರರ ಪ್ರವೇಶ ಆಗದಂತೆ ಎಚ್ಚರಿಕೆ ವಹಿಸುತ್ತಿದ್ದರು. ಆದರೆ ಇಂದು ಆಧುನಿಕತೆಯ ಪ್ರಭಾವಕ್ಕೆ ಸಿಲುಕಿ ಈ ವ್ಯವಸ್ಥೆಯಲ್ಲಿ ಬದಲಾವಣೆಯಾಗಿದೆ. ಕೇವಲ ಮನೆ, ವಸತಿ ವಿನ್ಯಾಸಗಳನ್ನು ನೋಡಿಯೇ ಇವರು ಬೇಡರು ಎಂದು ಗುರುತಿಸುವ ಕಾಲ ಇಂದು ಮಾಯವಾಗಿದೆ. ಈಗ ಇವರು ಅಂಚೆಹುಲ್ಲಿನ ಬದಲಾಗಿ ಸಿಮೆಂಟು, ಇಟ್ಟಿಗೆ, ಕಬ್ಬಿಣ, ಮೊದಲಾದ ಹೊಸ ಮಾದರಿಯ ಹಾಗೂ ವಾಸ್ತುಶಾಸ್ತ್ರವು ಹೇಳಿದ ವಿನ್ಯಾಸಗಳಲ್ಲಿ ತಮ್ಮ ಮನೆಗಳನ್ನು ನಿರ್ಮಿಸಿಕೊಂಡು ಜೀವನ ನಡೆಸುತ್ತಿದ್ದಾರೆ. ಜೊತೆಗೆ ಇಂದು ಸರ್ಕಾರದಿಂದ ದೊರೆಯುವ ಆಶ್ರಯ ಮನೆಗಳು ನಿರ್ಗತಿಕ ಹಾಗೂ ಬಿ.ಪಿ.ಎಲ್.ಕಾರ್ಡುದಾರರ ಕುಟುಂಬಗಳಿಗೆ ಲಬಿಸದೆ, ಇದೇ ಸಮುದಾಯದ ರಾಜಕೀಯ ಮುಖಂಡರುಗಳ ಹಿಂಬಾಲಕರಿಗೆ ಮತ್ತು ಸ್ಥಳೀಯ ರಾಜಕಾರಣ ಮಾಡುವಂತಹ ವ್ಯಕ್ತಿಗಳಿಗೆ ಹಾಗೂ ಆ ಕುಟುಂಬದ ಎಲ್ಲಾ ಸದಸ್ಯರಿಗೆ ತಲಾ ಒಂದೊಂದರಂತೆ ಆಶ್ರಯಮನೆ, ಜನತಾಮನೆ, ವಾಲ್ಮೀಕಿ ಮತ್ತು ಅಂಬೇಡ್ಕರ್ ಆವಾಸ್ ಯೋಜನೆಗಳಡಿಯಲ್ಲಿ ಸೌಲಭ್ಯವನ್ನು ತಮ್ಮದಾಗಿಸಿಕೊಂಡಿದ್ದಾರೆ. ನಿರ್ಗತಿಕರಿಗೆ ಆಶ್ರಯ ಮನೆಗಳನ್ನು ಕಲ್ಪಿಸಿಕೊಡುತ್ತೇವೆಂದು, ವಿಧವಾವೇತನ, ವೃಧ್ಯಾಪ್ಯ ವೇತನ ಇನ್ನಿತರ ಸರ್ಕಾರಿ ಸವಲತ್ತುಗಳನ್ನು ಒದಗಿಸಿಕೊಡುತ್ತೇವೆಂದು ರಾಜಕಾರಣಿಗಳ ರೀತಿ ಆಶ್ವಾಸನೆ ನೀಡಿ ಇವರಿಂದ ಹಣವನ್ನು ಪಡೆದು ಕಾರ್ಯಗತಗೊಳಿಸದೆ ಮೋಜಿನ ಜೀವನ ಸಾಗಿಸುತ್ತಿದ್ದಾರೆ. ಇಂತಹ ಹಲವಾರು ಸಮಸ್ಯೆಗಳಿಂದ ನರಳಾಡುತ್ತಿರುವ ನಿರ್ಗತಿಕ ಬೇಡ ಸಮುದಾಯಗಳತ್ತ ಗಮನಹರಿಸದೆ ಇರುವುದು ದುರದೃಷ್ಟಕರ. ಈ ನಿಟ್ಟಿನಲ್ಲಿ ಈ ಅಧ್ಯಯನವು ಸಫಲವಾಗುವ ದಿಕ್ಕಿನಲ್ಲಿ ಕಾರ್ಯೋನ್ಮುಖವಾಗಿದೆ.

ಕುಟುಂಬ ವ್ಯವಸ್ಥೆ:

ಬುಡಕಟ್ಟು ಜನರು ಹೆಚ್ಚಾಗಿ ಅವಿಭಕ್ತ ಕುಟುಂಬಕ್ಕೆ ಆದ್ಯತೆ ನೀಡಿದಂತೆ, ಬೇಡರು ಸಹ ಹಿಂದೆ ಅವಿಭಕ್ತ ಕುಟುಂಬ ವ್ಯವಸ್ಥೆಗೆ ಆದ್ಯತೆ ನೀಡುತ್ತಿದ್ದರು. ಪ್ರಸ್ತುತ ಸಮಾಜದಲ್ಲಿ ಈ ವ್ಯವಸ್ಥೆ ಕಣ್ಮರೆಯಾಗಿದೆ. ಈಗ ಎಲ್ಲರೂ ಒಟ್ಟಿಗೆ ವಾಸವಾಗಿರುವುದನ್ನು ಇಷ್ಟ ಪಡದೆ ಸ್ವತಂತ್ರ ಜೀವನ ನಡೆಸುವಲ್ಲಿ ಮುಂದಾಗಿದ್ದಾರೆ. ಕೆಲವರು, ತಂದೆ-ತಾಯಿಗಳು ಇರುವವರೆಗೆ ಮಾತ್ರ ಒಟ್ಟಿಗೆ ಇರಲು ಬಯಸುತ್ತಾರೆ.

ಲಿಂಗ ಪ್ರಧಾನ ಕುಟುಂಬ ವ್ಯವಸ್ಥೆಯನ್ನು ಒಮ್ಮೆ ಗಮನಿಸಿದಾಗ ಸಮಾಜವು ಪುರುಷ ಪ್ರಧಾನವಾದ ಸಮಾಜವಾಗಿದೆ. ಅದೇ ರೀತಿ ಕುಟುಂಬಗಳಲ್ಲಿ ಪುರುಷ ಪಿತೃ

ಪ್ರಧಾನವಾಗಿದ್ದಾನೆ. ಆದರೆ ಮನುಷ್ಯ ನಾಗರೀಕತೆ ಕಡೆಗೆ ಸಾಗಿದಂತೆಲ್ಲಾ ಈ ವ್ಯವಸ್ಥೆಯಲ್ಲಿ ಸ್ವಲ್ಪ ಬದಲಾವಣೆ ಆಗಿರುವುದನ್ನು ಕಾಣಬಹುದು. ಹೇಗೆಂದರೆ, ಇಂದು ಸಮುದಾಯದ ಜನರು ಹಲವಾರು ದುಶ್ಚಟಗಳಿಗೆ ಬಲಿಯಾಗಿ ತನ್ನ ಕುಟುಂಬವನ್ನು ಸರಿಯಾಗಿ ಪೋಷಿಸುವ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದ್ದಾರೆ. ಅಂತಹ ಕುಟುಂಬಗಳನ್ನು ಮಾತ್ರ ಸ್ತ್ರೀ ಅಥವಾ ತಾಯಿ ಪೋಷಿಸಿಕೊಂಡು ಹೋಗುತ್ತಿರುವುದನ್ನು ನೋಡಬಹುದು.

ಒಳಾಡಳಿತ ವ್ಯವಸ್ಥೆ:

ಭಾರತೀಯ ಸಮಾಜ ವ್ಯವಸ್ಥೆಯಲ್ಲಿ ಕಂಡುಬರುವ ಜಾತಿ ಪಂಚಾಯ್ತಿಗಳಿಗಿಂತ ಭಿನ್ನವಾಗಿರುವ ಈ ನ್ಯಾಯವ್ಯವಸ್ಥೆ ಕೇವಲ ಧರ್ಮದ ರಕ್ಷಕ ವ್ಯವಸ್ಥೆಯಾಗಿ ಕೆಲಸ ಮಾಡದೆ ಸಾಮಾಜಿಕ ನ್ಯಾಯಕ್ಕಾಗಿಯೂ ಕಾರ್ಯನಿರ್ವಹಿಸಿರುವುದು ಕಂಡುಬರುತ್ತದೆ. ಬೇಡರಲ್ಲಿ ತಮ್ಮ ಸಮುದಾಯಕ್ಕೆ ಮಾತ್ರ ಮೀಸಲಾದ ಪಂಚಾಯ್ತಿ ವ್ಯವಸ್ಥೆ ಇದೆ. ಹಟ್ಟಿ ಪಂಚಾಯ್ತಿ, ಕಟ್ಟೆಮನೆ ಪಂಚಾಯ್ತಿ, ಗುರುಮನೆ, ಸಮುದಾಯದ ಒಳಗಡೆ ಬರುವಂತಹ ಯಾವುದೇ ವ್ಯಾಜ್ಯ ಸಮಸ್ಯೆಗಳನ್ನು ಅವರೇ ತೀರ್ಮಾನಿಸಿಕೊಳ್ಳುತ್ತಿದ್ದರು. ಈಗಲೂ ನಿದರ್ಶನವಾಗಿರುವಂತೆ ಚಿತ್ರದುರ್ಗ ಜಿಲ್ಲೆಯಲ್ಲಿ ಕಟ್ಟೆ ಮನೆಗಳಿವೆ (ಮ್ಯಾಸಬೇಡರಲ್ಲಿ ಮಾತ್ರ). ಸಮಸ್ಯೆ ಮೊದಲು ಹಟ್ಟಿ ಪಂಚಾಯ್ತಿಗೆ ಬರಬೇಕು. ಅಲ್ಲಿ ಸಮಸ್ಯೆ ಬಗೆಹರಿಯಲಿಲ್ಲ ಅಥವಾ ಅವರು ನೀಡಿದ ತೀರ್ಮಾನ ಒಪ್ಪಿತವಾಗದಿದ್ದರೆ ಕಟ್ಟೆ ಮನೆಗೆ, ಮುಂದಕ್ಕೆ ಗುರುಮನೆ/ದೇವರ ಕಟ್ಟೆಗೆ ಹೋಗಬೇಕು. ಆದರೆ ಈ ರೀತಿಯ ನ್ಯಾಯ ತೀರ್ಮಾನಗಳು ಕೆಲವು ಕಡೆ ಮಾತ್ರ ಕಂಡುಬರುತ್ತಿವೆ. ಅದರಲ್ಲೂ ಮ್ಯಾಸಬೇಡರಲ್ಲಿ. ಹಾವೇರಿ ಜಿಲ್ಲೆಯಲ್ಲಿ ನಡೆಸಿದ ಸಮೀಕ್ಷೆಯ ಪ್ರಾಕಾರ ಇಲ್ಲಿರುವ ಊರುಬೇಡರಲ್ಲಿ ಈ ರೀತಿಯ ನ್ಯಾಯ ಪಂಚಾಯ್ತಿ ವ್ಯವಸ್ಥೆಯಿಲ್ಲ.

ಉಡುಗೆ ತೊಡುಗೆ:

ಬೇಡ ಬುಡಕಟ್ಟಿನವರಲ್ಲಿ ಅದರಲ್ಲೂ ಮ್ಯಾಸಬೇಡರಲ್ಲಿ ಕಂಡುಬರುವಂತೆ ಇವರ ಉಡುಗೆ-ತೊಡುಗೆಗಳು ವಿಶಿಷ್ಟವಾದವು. ಇವರಲ್ಲಿ ಗಂಡಸರು ಒಂದು ಚಲ್ಲಾಣ, ಹೆಗಲ ಮೇಲೆ ಕರಿಯ ಕಂಬಳಿ ತಲೆಗೆ ರುಮಾಲು ಉಡುಗೆ ನೋಡಿ ಇವರು ಬೇಡರು ಎಂದು ಗುರುತಿಸುವ ಕಾಲ ಒಂದಿತ್ತು. ಇನ್ನು ಹೆಂಗಸರು ಕುಪ್ಪಸವನ್ನು ತೊಡುವುದಿಲ್ಲ. ಉಟ್ಟ ಸೀರೆಯ ಸೆರಗನ್ನೇ ಎದೆ ಮುಚ್ಚಿಕೊಳ್ಳಲು ಬಳಸುತ್ತಾರೆ. ಕೆಲವು ಕಡೆ ಗಂಡಸರು ಕಚ್ಚೆಪಂಚೆ ಹಾಕುತ್ತಾರೆ. ತೋಳಂಗಿ ತೊಡುತ್ತಾರೆ. ತಲೆಗೊಂದು ಟವೆಲ್ಲು ಸುತ್ತಿರುತ್ತಾರೆ. ಇವು ಈ ಬುಡಕಟ್ಟಿನವರ ಉಡುಗೆಗಳಾಗಿವೆ. ಆದರೆ ಇಂದು ಅನೇಕ ಕಡೆ ನಾಗರಿಕತೆ ಮತ್ತು ಆಧುನಿಕತೆಯ ಪ್ರಭಾವಗಳಿಂದ ಈ ಜನರ ಉಡುಗೆಗಳು ಬದಲಾಗಿವೆ.

ಇನ್ನು ತೊಡುಗೆಗಳೆಂದರೆ ಕೈಗಡಗ, ತೋಳ್ಬಂದಿ, ಮಣಿ ಸರಗಳು, ಮುತ್ತಿನ ಸರಗಳು, ಓಲೆಗಳು, ಮೂಗುತಿಗಳು, ಮೇಸರಿಗಳು ಇತ್ಯಾದಿ ಆಭರಣಗಳನ್ನು ತೊಡುಗೆಯಾಗಿ ಬಳಸುತ್ತಾರೆ. ಆದರೆ ಇಂದು ಆಧುನಿಕ ಜಗತ್ತಿನಲ್ಲಿ ಎಲ್ಲಾ ಕಡೆಯೂ ಇತ್ತೀಚಿನ ತೊಡುಗೆಗಳು

ಬದಲಾಗುತ್ತಿರುವುದನ್ನು ಕಾಣುತ್ತೇವೆ. ಅನುಕೂಲಸ್ಥರು ಬೆಳ್ಳಿ-ಬಂಗಾರ ಆಭರಣಗಳನ್ನು ಸಹ ಹಾಕುತ್ತಾರೆ.

ಉದ್ಯೋಗ:

ಬುಡಕಟ್ಟು ಸಮುದಾಯದ ಜನರು ತಮ್ಮ ಉಪಜೀವನಕ್ಕಾಗಿ ಉದ್ಯೋಗ ಅನ್ನುವುದಕ್ಕಿಂತ ಅನ್ನದ ಹುಡುಕಾಟಕ್ಕಾಗಿ ಹಲವಾರು ಪರ್ಯಾಯ ಮಾರ್ಗಗಳನ್ನು ಕಂಡುಕೊಂಡರು. "ಉದರ ನಿಮಿತ್ತಂ ಬುಹುಕೃತ ವೇಷಂ" ಎನ್ನುವಂತೆ ಅರಣ್ಯದಲ್ಲಿ ಕಾಡುಪ್ರಾಣಿ-ಪಕ್ಷಿಗಳನ್ನು, ಕೊಂದು ತಿನ್ನುವ ಬೇಟೆ ಹಂತವನ್ನು ದಾಟಿ, ಪಶುಪಾಲನೆ, ಮತ್ತು ಕೃಷಿ ಹಂತದಲ್ಲಿರುವಂತಹ ಅನೇಕ ಪ್ರಕಾರದ ಗಿರಿಜನ ವರ್ಗಗಳಲ್ಲಿ ಬೇಡ ಬುಡಕಟ್ಟು ಒಂದು. ಆದರೆ ಇವತ್ತಿನ ಜಾಗತೀಕರಣದ ಸಮಯದಲ್ಲಿ ಜೀವನ ಮುಂದುವರಿಕೆಗಾಗಿ ಹಲವು ರೀತಿಯ ವೃತ್ತಿಗಳಲ್ಲಿ ಮಹಿಳೆ-ಮಕ್ಕಳು ಮತ್ತು ಪುರುಷರು ತೊಡಗಿಸಿಕೊಂಡಿರುವುದನ್ನು ನೋಡುತ್ತೇವೆ. ಬಹುಮುಖ್ಯವಾಗಿ ಕೃಷಿಕರಿಗಿಂತಲೂ ಕೃಷಿಕೂಲಿಕಾರ್ಮಿಕರಾಗಿ ಗ್ರಾಮ-ನಗರ ಪ್ರದೇಶಗಳಲ್ಲಿ ದಿನ ನಿತ್ಯ ಕೆಲಸ ಮಾಡುವರು. ಅದಕ್ಕೆ ತಕ್ಕ ಪ್ರತಿಫಲವು ಲಭಿಸದೆ ಮತ್ತು ವೃತ್ತಿ ದೊರೆಯದಂತಹ ಜನರು ಕೃಷಿಯೇತರ ಚಟುವಟಿಕೆಗಳಾದ ಮನೆ ಪಾತ್ರೆ ತೊಳೆಯಲು, ಕಟ್ಟಡ ನಿರ್ಮಾಣಕಾರ್ಯದಲ್ಲಿ ಸೀಮೆಂಟ್, ಗಾರೆ ಬೆರೆಸುವಂತಹ ಕೆಲಸಗಳಲ್ಲಿ ದೈಹಿಕ ಶ್ರಮವನ್ನೇ ಬಂಡವಾಳ ಮಾಡಿ ದುಡಿಯುವರು. ಹಾವೇರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಈ ಸಮುದಾಯದ ಜನರು ಹೆಚ್ಚಾಗಿ ಕೃಷಿಯನ್ನೇ ಅವಲಂಬಿಸಿರುವುದು ಸಮೀಕ್ಷೆಯ ಮೂಲಕ ತಿಳಿದು ಬರುತ್ತದೆ. ಅಲ್ಲದೆ, ಇವರು ಉತ್ತಮ ಶಿಕ್ಷಣ ಪಡೆದ ಪರಿಣಾಮದಿಂದ ಖಾಸಗಿ ಮತ್ತು ಸರ್ಕಾರಿ ಉದ್ಯೋಗಗಳನ್ನು ಪಡೆದುಕೊಂಡ ಉದಾಹರಣೆಗಳು ಕಂಡುಬಂದಿವೆ.

ಭಾಷೆ:

ಸಾಮಾನ್ಯವಾಗಿ ಆದಿವಾಸಿ ಸಮುದಾಯಗಳಲ್ಲಿ ತಮ್ಮದೇ ಆದ ಪ್ರತ್ಯೇಕ ಭಾಷೆಯನ್ನು ಹೊಂದಿರುತ್ತಾರೆ. ಅದು ಅವರ ಪ್ರಮುಖ ಗುಣಲಕ್ಷಣವೂ ಹೌದು. ಅದೇ ರೀತಿ ಬೇಡ ಬುಡಕಟ್ಟು ಸಮುದಾಯದಲ್ಲಿ ಅದರಲ್ಲೂ ವಿಶೇಷವಾಗಿ ಚಿತ್ರದುರ್ಗ, ದಾವಣಗೆರೆ, ತುಮಕೂರು ಜಿಲ್ಲೆಗಳ ಸುತ್ತಲಿನ ಮ್ಯಾಸಬೇಡ ಸಮುದಾಯದಲ್ಲಿ 'ಕಂದೆಲಗು' ಎಂಬ ಪ್ರತ್ಯೇಕ ಭಾಷೆ ಪ್ರಚಲಿತವಾಗಿದೆ. ತೆಲುಗು ಹಾಗೂ ಕನ್ನಡ ಮಿಶ್ರಿತವಾದ ಈ ಭಾಷೆ ಮುಖ್ಯವಾಗಿ ತೆಲುಗು. ಈ ತೆಲುಗಿಗೆ ಕನ್ನಡ ಮಿಶ್ರಣಗೊಂಡು 'ಕಂದೆಲಗು' ಆಗಿ ಮಾರ್ಪಾಟಾಗಿರುವುದನ್ನು ಅಧ್ಯಯನಕಾರರು ಗುರುತಿಸಿದ್ದಾರೆ. ಹಾವೇರಿ ಭಾಗದಲ್ಲಿರುವ ಈ ಸಮುದಾಯದವರು ಕನ್ನಡ ಭಾಷೆಯನ್ನೇ ಮಾತನಾಡುತ್ತಿರುವುದು ಗೋಚರಿಸುತ್ತದೆ. ಇದರಿಂದ ಅವರು ಉತ್ತಮ ಶಿಕ್ಷಣವನ್ನು ಪಡೆಯಲು ಅನುಕೂಲವಾಗಿದೆ ಎನ್ನುತ್ತಾರೆ ಇಲ್ಲಿನ ಮುಖಂಡರುಗಳು.

ರಾಜಕೀಯ ಕ್ಷೇತ್ರದಲ್ಲಿ ಬೇಡರು:

ಕರ್ನಾಟಕ ರಾಜ್ಯದಲ್ಲಿ ಅಪಾರ ಜನಸಂಖ್ಯೆಯನ್ನು ಹೊಂದಿದ್ದರೂ ರಾಜಕೀಯ ಸ್ಥಾನಮಾನ ಮಾತ್ರ ಅಷ್ಟಕ್ಕಷ್ಟೆ. ಅಂದರೆ ಅವರ ಸಂಖ್ಯೆಗೆ ಅನುಗುಣವಾಗಿ ರಾಜಕೀಯ ಪ್ರಾತಿನಿಧ್ಯ ಕಡಿಮೆ. ರಾಜಕೀಯ ಅಧಿಕಾರವಿಲ್ಲದೆ ಪ್ರಗತಿ ಸಾಧ್ಯವಿಲ್ಲವೆಂದು ಹೇಳಲಾಗುತ್ತದೆ. ಪಕ್ಷ ಯಾವುದೇ ಇರಲಿ ಎಲ್ಲ ಹಂತಗಳಲ್ಲೂ ರಾಜಕೀಯ ಪ್ರವೇಶ ಮಾಡಬೇಕು. ಜನಹಿತಕ್ಕಾಗಿ ಹೋರಾಟ ಗುರಿಯಾಗಿರಬೇಕು. ರಾಜಕಾರಣ ಸಮಾಜ ಸೇವೆಯ ಒಂದು ಪ್ರಮುಖ ಅಂಗವಾಗಿದೆ. ಚುನಾವಣಾ ಆಯೋಗ ಪರಿಶಿಷ್ಟ ಪಂಗಡದವರಿಗೆ ಇತ್ತೀಚೆಗೆ ಹದಿನೈದು ವಿಧಾನಸಭಾ ಎರಡು ಲೋಕಸಭಾ ಕ್ಷೇತ್ರಗಳನ್ನು ಮೀಸಲಿರಿಸಲು ಉದ್ದೇಶಿಸಿರುವುದು ಸ್ವಲ್ಪ ಸಮಾಧಾನದ ಸಂಗತಿ. ಈ ಮೀಸಲಾತಿಯ ಪ್ರಮಾಣದಲ್ಲಿ ಹೆಚ್ಚಿನ ಅನುಕೂಲವನ್ನು ಪಡೆದ ಸಮುದಾಯವೆಂದರೆ ಬೇಡ ಸಮುದಾಯ. ಡಾ.ಬಿ.ಎಂ.ಪುಟ್ಟಯ್ಯನವರು ತಮ್ಮ ಕೃತಿ ಸಂಶೋಧನೆಯ ತಾತ್ವಿಕ ಆಯಾಮಗಳು ಇದರಲ್ಲಿ ತಿಳಿಸಿರುವಂತೆ, ಕರ್ನಾಟಕದಲ್ಲಿರುವ ಒಟ್ಟು ಐವತ್ತು ಪರಿಶಿಷ್ಟ ಬುಡಕಟ್ಟು ಸಮುದಾಯಗಳಲ್ಲಿ ಕೇವಲ ಎರಡು ಬುಡಕಟ್ಟುಗಳು ಮಾತ್ರ ಮೀಸಲಾತಿಯನ್ನು ಪಡೆದುಕೊಂಡಿವೆ. ಉಳಿದ ನಲವತ್ತೆಂಟು ಸಮುದಾಯಗಳು ಇದರಿಂದ ವಂಚಿತವಾಗಿವೆ ಎಂದಿದ್ದಾರೆ.

ಹಾವೇರಿ ಜಿಲ್ಲೆಯ ಅಭಿವೃದ್ಧಿಯಲ್ಲಿ ಮತ್ತು ನಿರ್ಮಾಣದಲ್ಲಿ ಅನೇಕ ಶಾಸಕರು, ಸಂಸದರು, ಮಂತ್ರಿಗಳು ಮೊದಲಾದ ರಾಜಕಾರಣಿಗಳ ಪಾತ್ರ ಮತ್ತು ಕೊಡುಗೆ ಬ್ರಿಟಿಷ್ ಕಾಲದಿಂದ ಸ್ವಾತಂತ್ರಪೂರ್ವದಲ್ಲಿ ಹಾಗೂ ನಂತರ ಇಲ್ಲಿಯವರಿಗೆ ಶ್ಲಾಘನೀಯವಾಗಿದೆ. ಇವರಲ್ಲಿ ಬೇಡ ಸಮುದಾಯದವರಲ್ಲದೇ ಇತರೆ ಸಮುದಾಯದವರು ಸಹ ಇದ್ದಾರೆ ಎನ್ನುವುದನ್ನು ಮರೆಯುವಂತಿಲ್ಲ. ಬೇಡ ಬುಡಕಟ್ಟಿಗೆ ಸೇರಿದವರಲ್ಲಿ ಪ್ರಮುಖರೆಂದರೆ ಎಲ್.ಜಿ.ಹಾವನೂರ, ಸೋಮಲಿಂಗಪ್ಪ ನಲವಾಗಿಲ, ಸುರಪುರದ ರಾಜ ಪಿಡ್ಡನಾಯಕ, ಬ್ಯಾರಿಸ್ಟರ್ ರಾಜಾ ವೆಂಕಟಪ್ಪ ನಾಯಕ, ಬಿಳಿಚೋಡು ಭಿಮಪ್ಪ ನಾಯಕರು, ಹಲಗಲಿ ಬೇಡರು ಇನ್ನೂ ಮುಂತಾದವರು. ಇವರು ರಾಷ್ಟ್ರಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ ಮತ್ತು ಪ್ರಾದೇಶಿಕವಾಗಿ ದೇಶದ ಸ್ವಾತಂತ್ರ್ಯಕ್ಕಾಗಿ ಮತ್ತು ಕರ್ನಾಟಕದ ಏಕೀಕರಣದಲ್ಲಿಯೂ ಸಾಧನೆಗೈದಿದ್ದಾರೆ. ಡಿ.ಎಂ.ಸಾಲಿ, ಮಂಜುನಾಥ ಓಲೇಕಾರ, ಹೋ.ಚಿ.ಬೋರಯ್ಯ, ಕೆ.ಜಿ.ತಿಪ್ಪೇಸ್ವಾಮಿ, ಅಲ್ಲೀಪುರದ ಹುನುಮಂತಪ್ಪ, ತೆಕ್ಕಲಕೋಟೆ ಸಿದ್ದಪ್ಪ, ಎನ್.ಟಿ.ಬೊಮ್ಮಣ್ಣ, ತಳವಾರ ಸಣ್ಣ ವೆಂಕಟಪ್ಪ, ಹೊಸಪೇಟೆಯ ಗುಜ್ಜಲ ಹನುಮಂತಪ್ಪ, ಬಿ.ಶ್ರೀರಾಮುಲು, ವಿ.ಎಸ್.ಉಗ್ರಪ್ಪ, ಜಾರಕಿಹೊಳೆ ಮನೆತನ ಇನ್ನೂ ಅನೇಕರು ಪ್ರಸ್ತುತ ಕರ್ನಾಟಕದ ರಾಜಕೀಯ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಿರುವುದನ್ನು ನೋಡಬಹುದು.

ಸಾಮಾಜಿಕ ಹರಿಕಾರ ಎಲ್.ಜಿ. ಹಾವನೂರ:

ಹಾವೇರಿ ಜಿಲ್ಲೆಯ ಹೆಮ್ಮೆಯ ಹಾಗೂ ಅಭಿಮಾನಿ ಪುತ್ರ ಶ್ರೀಯುತ ಲಕ್ಷ್ಮಣ ಜಿ. ಹಾವನೂರುರವರು ವಿಶೇಷ ಪ್ರತಿಭೆ, ತಜ್ಞತೆಯನ್ನು ಮೆರೆದು ಮರೆಯಲಾರದಂತೆ ಚಿರಸ್ಥಾಯಿಯಾಗಿ ನಿಂತವರು. ಇವರು ಜಿಲ್ಲೆಯ ಅಗಡಿ ಗ್ರಾಮದಲ್ಲಿ 1925ರಲ್ಲಿ ಜನಿಸಿದರು. ಅವರದು ಸ್ವಾತಂತ್ರ್ಯ ಹೋರಾಟಗಾರರ ಕುಟುಂಬ. ರಾಣೇಬೆನ್ನೂರಿನ 'ಮುನ್ಸಿಪಲ್ ಹೈಸ್ಕೂಲಿನಲ್ಲಿ' ಮೆಟ್ರಿಕ್ಯುಲೇಶನ್ ಪರೀಕ್ಷೆಯನ್ನು ಪಾಸು ಮಾಡಿದ ಹಾವನೂರರವರು ಮುಂಬೈನ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸನಲ್ಲಿ ಡ್ರಾಯಿಂಗ್ ಮತ್ತು ಪೇಯಿಂಟಿಂಗ್ ತರಬೇತಿಯನ್ನು ಯಶಸ್ವಿಯಾಗಿ ಮುಗಿಸಿದರು.

1924ರಲ್ಲಿ ಗಾಂಧಿಜಿಯವರ ನಾಯಕತ್ವದಲ್ಲಿ ನಡೆದ ಭಾರತದ ಸ್ವಾತಂತ್ರ್ಯ ಆಂದೋಲನಕ್ಕೆ ಧುಮುಕಿ ಬ್ರಿಟಿಷರ ವಿರುದ್ಧ ಬಂಡೆದ್ದು 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. 1947-48ರಲ್ಲಿ ಮುಂಬೈ ವಿಶ್ವವಿದ್ಯಾಲಯದಲ್ಲಿ ಅಧಿಕಾರಿ ಸೈನಿಕ ತರಬೇತಿಯನ್ನು ಪಡೆದುಕೊಂಡರು.

ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ಪೂರೈಸಿ, ಬೆಳಗಾವಿಯ ಆರ್.ಎಲ್.ಕಾನೂನು ಮಹಾವಿದ್ಯಾಲಯದಲ್ಲಿ ಅಧ್ಯಯನವನ್ನು ಮುಂದುವರೆಸಿ 1950ರಲ್ಲಿ ಎಲ್.ಎಲ್.ಬಿ. ಪದವಿಯನ್ನು ಪಡೆದರು. ಹಿಂದುಳಿದ ಪಂಗಡದಿಂದ ಬಂದ ಹಾವನೂರ ರವರು ಕಾನೂನು ಪದವಿಯನ್ನು ಪಾಸುಮಾಡಿದ ವಿಷಯ ಅಂದಿನ ಸಮಾಜದಲ್ಲಿ ಅತಿ ಹೆಮ್ಮೆಯ ವಿಚಾರವಾಯಿತು. 1953ರಲ್ಲಿ ಮುಂಬೈ ಹೈಕೋರ್ಟನಲ್ಲಿ ವಕೀಲಿ ವೃತ್ತಿಯನ್ನು ಆರಂಭಿಸಿದ ಹಾವನೂರ ರವರು ಹಿಂದುಳಿದ ವಾಲ್ಮೀಕಿ/ಬೇಡ ಪಂಗಡದಿಂದ ಬಂದ ಪ್ರಪ್ರಥಮ ಕಾನೂನು ಪದವಿಧರರೆಂಬ ಕೀರ್ತಿಗೆ ಪಾತ್ರರಾದರು.

ಖ್ಯಾತ ನ್ಯಾಯವಾದಿ ಎಂದು ದೇಶಕ್ಕೆ ಹೆಸರಾದ ಲಕ್ಷ್ಮಣ ಜಿ.ಹಾವನೂರರು ಕರ್ನಾಟಕ ವಾಲ್ಮೀಕಿ ಸಮಾಜದ ರಾಜಕಾರಣಿಗಳಲ್ಲೇ ಮೊಟ್ಟ ಮೊದಲ ಕ್ಯಾಬಿನೆಟ್ ಮಂತ್ರಿ. ದೇವರಾಜ ಅರಸು ಸರಕಾರದಲ್ಲಿ ಕಾನೂನು ಮಂತ್ರಿಯಾಗಿದ್ದ ಇವರು ಆಫ್ರಿಕಾ ದೇಶದ ಸಂವಿಧಾನದ ಸಮಿತಿಯ ಸದಸ್ಯರು ಆಗಿದ್ದರು. ಕರ್ನಾಟಕದಲ್ಲಿ ಅರಸು ಅವರ ಜೊತೆಗೆ ರಾಜ್ಯದಲ್ಲೇ ಮೊದಲ ಬಾರಿಗೆ ಹಿಂದುಳಿದ ವರ್ಗಗಳನ್ನು ಸಂಘಟಿಸುವ ಮೂಲಕ ಅವರುಗಳಲ್ಲಿ ಸಾಮಾಜಿಕ ಮತ್ತು ರಾಜಕೀಯ ಅರಿವನ್ನು ಮೂಡಿಸಲು ಕಾರಣರಾದವರು. ಹಾವನೂರರ ಜ್ಞಾನವನ್ನು ಮತ್ತು ಕಾನೂನನ್ನು ಅರ್ಥೈಸಿಕೊಂಡ ವಿಧಾನವನ್ನು ಮನಗಂಡು ಅರಸರು ಇವರನ್ನು ಹಿಂದುಳಿದ ಸಮುದಾಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಹತ್ವದ ಜವಬ್ದಾರಿಯನ್ನು ಹೆಗಲಿಗೆ ಹಾಕಿದರು. ಅವರ ಜೊತೆಯಲ್ಲಿ ಒಂದು ನಿಯೋಗವನ್ನು ರಚಿಸಿ ಹಾವನೂರರ ಅಧ್ಯಕ್ಷತೆಯಲ್ಲಿ, ವೈ.ರಾಮಚಂದ್ರ, ಕೆ.ಆರ್.ಶ್ರೀನಿವಾಸಲು ನಾಯ್ಡು,

ಕೆ.ಎಸ್.ನಾಗಣ್ಣ. ಎ.ಮಸಣಶೆಟ್ಟಿ. ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್ ಮತ್ತು ಪಿ.ಟಿ.ಹಬೀಬ್ ಇವರುಗಳನ್ನು ಸದಸ್ಯರನ್ನಾಗಿ ಆಯೋಗಕ್ಕೆ ನೇಮಿಸಲಾಯಿತು. ಮುಖ್ಯವಾಗಿ ಹಾವನೂರು ಆಯೋಗವು ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ವರದಿ ತಯಾರಿಸಿದೆ.

1. ಹಿಂದುಳಿದ ವರ್ಗಗಳ ಆಯೋಗವು ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ಯಾವ ಆಧಾರದ ಮೇಲೆ ನಿರ್ಧರಿಸಬೇಕು ಎಂಬುದರ ಬಗ್ಗೆ ಸಲಹೆ ಕೊಡುವುದು.
2. ಹಿಂದುಳಿದ ವರ್ಗಗಳ ಪಟ್ಟಿ ತಯಾರಿಸುವುದು.
3. ಇವುಗಳ ಉನ್ನತಿಗಾಗಿ ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಶಿಫಾರಸ್ಸು ಮಾಡುವುದು.
4. ಹಿಂದುಳಿದ ವರ್ಗಗಳಿಗೆ ಕಲ್ಪಿಸಬೇಕಾದ ಮೀಸಲಾತಿ ಬಗ್ಗೆ ಸಲಹೆ ನೀಡುವುದು.

ಈ ಆಯೋಗವು 193 ಗ್ರಾಮಗಳಲ್ಲಿ 185 ನಗರ ಪ್ರದೇಶಗಳಲ್ಲಿ ಸಮೀಕ್ಷೆಯನ್ನು ಕೈಗೊಂಡಿತು. ಹಾವನೂರರು ಸಾಮಾಜಿಕ ಹಿಂದುಳಿದಿರುವಿಕೆಯನ್ನು ಗುರುತಿಸಲು ಈ ಕೆಳಕಂಡ ಮಾನ ದಂಡಗಳನ್ನು ಬಳಸಿದ್ದಾರೆ.

1. ಗ್ರಾಮೀಣ ಪ್ರದೇಶಗಳಲ್ಲಿ ಪ್ರತ್ಯೇಕ ಸ್ಥಳಗಳಲ್ಲಿ ವಾಸಿಸುವುದು.
2. ಬಡತನದಿಂದಾಗಿ ಜಮೀನು, ಮನೆ, ಮತ್ತಿತರ ಯಾವುದೇ ಆಸ್ತಿಯನ್ನು ಹೊಂದಲು ಅಸಮರ್ಥರಾಗಿರುವುದು.
3. ಸಾಮಾಜಿಕವಾಗಿ ನಿಕೃಷ್ಟವಾದ, ಆರ್ಥಿಕವಾಗಿ ಲಾಭಾದಾಯಕವಲ್ಲದ ವೃತ್ತಿಗಳಲ್ಲಿ ನಿರತರಾಗಿರುವುದು.
4. ಮೇಲ್ಜಾತಿಯವರಿಂದ ಹೀನಾಯವಾಗಿ ನಡೆಸಿಕೊಳ್ಳಲ್ಪಟ್ಟವರು.
5. ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕ ಸ್ಥಳಗಳಿಗೆ ಪ್ರವೇಶ ಸಿಗದಂತವರು.
6. ಉತ್ತಮ ಜಾತಿಯವರೊಡನೆ ಸಹಭೋಜನ, ವಿವಾಹ ಹಾಗೂ ಇತರ ಸಹಜೀವನಕ್ಕೆ ಸಾಮಾಜಿಕ ನಿಷೇಧಕ್ಕೆ ಒಳಪಟ್ಟವರು.
7. ಶಿಕ್ಷಣಕ್ಕೆ ಉತ್ತೇಜನ ಇಲ್ಲದ ಕಾರಣಕ್ಕಾಗಿ ಅನಕ್ಷರಸ್ಥರಾಗಿರುವವರು.

ಈ ಮೇಲಿನ ಮಾನದಂಡಗಳನ್ನು ಗಮದಲ್ಲಿಟ್ಟುಕೊಂಡು ಹಿಂದುಳಿದ ವರ್ಗಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಿತು. ಅವುಗಳೆಂದರೆ

ಅ. ಹಿಂದುಳಿದ ಸಮುದಾಯಗಳು.

ಆ. ಹಿಂದುಳಿದ ಜಾತಿಗಳು.

ಇ. ಹಿಂದುಳಿದ ಬುಡಕಟ್ಟುಗಳು.

ಈ ರೀತಿಯಾಗಿ ಸಮಾಜದ ಕೆಳವರ್ಗಗಳಿಗೆ ಅವಿಶ್ರಾಂತವಾಗಿ ದುಡಿದ **ಹಾವನೂರರು** ಬೇಡ ಸಮುದಾಯದ ಗಣ್ಯರಲ್ಲಿ ಪ್ರಮುಖರಾಗಿದ್ದಾರೆ.

ಬೇಡ ಸಮುದಾಯದ ಸಾಂಸ್ಕೃತಿಕ ವೈಶಿಷ್ಟ್ಯಗಳು:

ಪ್ರತ್ಯೇಕ ಸಂಸ್ಕೃತಿಯನ್ನು ಹೊಂದಿರುವುದು ಬುಡಕಟ್ಟು ಸಮುದಾಯಗಳ ಪ್ರಧಾನ ಲಕ್ಷಣ. ಸಮುದಾಯ ಒಂದರ ಉಗಮದಿಂದ ಆರಂಭಗೊಂಡ ಸಂಸ್ಕೃತಿ ನಿರಂತರವಾಗಿ ತನ್ನ ವಿಶಿಷ್ಟತೆಗಳೊಂದಿಗೆ ಮುಂದುವರೆಯುತ್ತದೆ. ಬುಡಕಟ್ಟುಗಳ ಇಂಥ ಸಂಗತಿಗಳು ಪುರಾಣ-ಆಚರಣೆ-ನಂಬಿಕೆ-ಸಂಪ್ರದಾಯಗಳ ಮೂಲಕ ಉಳಿದು ಬೆಳೆದಿರುತ್ತವೆ. ಈ ಹಿನ್ನೆಲೆಯೊಳಗೆ ಬೇಡರ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಗಮನಿಸಬಹುದಾಗಿದೆ.

ಜನನ:

ಬೇಡರ ಸಮುದಾಯಗಳಲ್ಲಿ ಜನನ ಸಂಬಂಧೀ ಆಚರಣೆಗಳು ಹಲವು ಸಾಮಾನ್ಯ ಸಂಗತಿಗಳಾದರೂ ಕೆಲವು ವೈಶಿಷ್ಟ್ಯಪೂರ್ಣವಾಗಿವೆ. ಅಂಥವುಗಳಲ್ಲಿ ಜನನದ ಬಗ್ಗೆ ಇಟ್ಟುಕೊಂಡ ಮೈಲಿಗೆ ಭಾವ. ದುರುಗಮುರುಗಿ, ಸುಡಗಾಡು ಸಿದ್ಧರಂತೆ ಬಾಣಂತಿಯನ್ನು ಪ್ರತ್ಯೇಕ ಗುಡಿಸಲಲ್ಲಿ ಇಡುವುದಿಲ್ಲ. ಆದರೂ ಹೆರಿಗೆಯಾದ ದಿನದಿಂದ ಮೂರು, ಐದು, ಏಳು, ಒಂಬತ್ತು, ಹನ್ನೊಂದು ದಿನಗಳಲ್ಲಿ 'ಮುಟ್ಟು ಹೊರಡಿಸುವ' ಆಚರಣೆ ಮಾಡುತ್ತಾರೆ. ಬೇವಿನಸೊಪ್ಪು, ಗೋವು ಗಂಜಳದ ಮೂಲಕ ಬಾಣಂತಿಯನ್ನು ಶುದ್ಧೀಕರಿಸುತ್ತಾರೆ. ಈ ಸಮಯದಲ್ಲಿ ಮಗುವನ್ನು ಮೊರದಲ್ಲಿಟ್ಟು ಪೋಷಿಸುತ್ತಾರೆ. ಹಾಗೆಯೇ ಅನೇಕ ರೀತಿಯ ಭವಿಷ್ಯದ ಭಯಂಕರ ಕಾಯಿಲೆಗಳ ನಿಷೇಧಕ್ಕೆ ಕೆಲವೊಂದು ಪೂರ್ವಯೋಜಿತ ಮದ್ದುಗಳನ್ನು ಮಗುವಿಗೆ ಕುಡಿಸುತ್ತಾರೆ. ಈ ವ್ಯವಸ್ಥೆ ತೀರಾ ಹಿಂದಿನ ಕಾಲದ್ದಾಗಿದ್ದು, ಈ ಪದ್ಧತಿ ಅನುಸರಿಸುವುದು ತುಂಬಾ ಕಷ್ಟ. ಮಗುವನ್ನು ಮೊರದಲ್ಲಿ ಇಟ್ಟು ಸಾಕುವ ಪದ್ಧತಿ ನಿಂತಿದೆ. ಆದರೆ ಈಗ ಶಾಸ್ತ್ರಕ್ಕೆ ಮೊರದಲ್ಲಿ ಸ್ವಲ್ಪಹೊತ್ತು ಹಾಕಿ ತೆಗೆಯುತ್ತಾರೆ. ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಆಸ್ಪತ್ರೆಗಳಲ್ಲಿ ಹೆರಿಗೆ ನಡೆಯುತ್ತಿರುವುದರಿಂದ, ಅದೇ ಸಂದರ್ಭದಲ್ಲಿ ವೈದ್ಯರು ತಾಯಿ, ಮಗುವಿಗೆ ವಿವಿಧ ರೀತಿಯ ಚುಚ್ಚುಮದ್ದು ಅಥವಾ ಲಸಿಕೆಗಳನ್ನು ನೀಡುವುದು ಕಂಡುಬರುತ್ತದೆ.

ನಾಮಕರಣ:

ಮಗುವಿನ ಜನನದ ನಂತರ ನಡೆಯುವ ಪ್ರಮುಖ ಸಂಪ್ರದಾಯವೆಂದರೆ ನಾಮಕರಣ. ಮಗುವಿನ ಸೊದರತ್ತೆ ಹುರುಳಿ, ಗುಗ್ಗರಿ ಗಂಟು ಹೊತ್ತು ಹೆಸರನ್ನು ಕರೆಯುತ್ತಾಳೆ. ಗುಗ್ಗರಿ ಗಂಟು ಹೊತ್ತು ಮೂರು ಬಾರಿ ಮನೆಯ ಹೊಸ್ತಿಲನ್ನು ದಾಟಿ ಹೆಸರು ಹೇಳುವ ಕ್ರಮ ಅತ್ಯಂತ ಗಮನಾರ್ಹವಾದುದಾಗಿದೆ. ಈ ಆಚರಣೆ ಕೆಲವು ಕಡೆ ಮಾತ್ರ ಇದೆ. ನಾಮಕರಣ ಸಮಯದಲ್ಲಿ ಬೇಡರು ಹೆಚ್ಚಾಗಿ ಬಿದಿರಿನ ತೊಟ್ಟಿಲುಗಳನ್ನು ಬಳಸುತ್ತಿದ್ದರು. ಈಗ ಅದರ ಬದಲಾಗಿ ಕಟ್ಟಿಗೆ, ಕಬ್ಬಿಣ(ರೆಡಿಮೇಡ್)ತೊಟ್ಟಿಲನ್ನು ಬಳಸುತ್ತಾರೆ. ಇನ್ನು ಆರ್ಥಿಕವಾಗಿ

ಹಿಂದುಳಿದ ಮನೆಗಳಲ್ಲಿ ಒಂದು ಕಂಬದಿಂದ ಮತ್ತೊಂದು ಕಂಬಕ್ಕೆ ಹಗ್ಗ ಕಟ್ಟಿ ಛಾವಣಿಯಿಂದ ಹಳೇ ಸೀರೆ ಇಳಿಬಿಡುವುದರ ಮೂಲಕ ಜೋಕಾಲಿ ಅಥವಾ ತೂಗನ್ನು ನಿರ್ಮಿಸುವರು.

ಋತುಮತಿ ಆಚರಣೆ:

ಬೇಡರಲ್ಲಿ ಹೆಣ್ಣು ಋತುಮತಿಯಾದರೆ ಅವಳ ಸೋದರ ಮಾವ ಬೇವಿನ ಸೊಪ್ಪಿನಿಂದ ಗುಡಿಸಲು ಹಾಕಿಕೊಡುತ್ತಾನೆ. ಐದು ದಿನಗಳ ನಂತರ ಅವಳಿಗೆ ಶಾಸ್ತ್ರ ಮಾಡಿಸಿ ಮನೆ ಒಳಗೆ ಕರೆದುಕೊಳ್ಳುವ ಪದ್ಧತಿ ಇತ್ತು. ಹಾಗೂ ಮಣ್ಣಿನ ಪಾತ್ರೆಯಲ್ಲಿ ಆಹಾರ ನೀಡುತ್ತಿದ್ದರು. ಆದರೆ ಇಂದು ಈ ರೀತಿ ಈ ಭಾಗದಲ್ಲಿ ಹೆಚ್ಚಾಗಿ ಒಂಟಿಯಾಗಿ ಐದು ದಿನ ಹೊರಗಿಡುವ ಪದ್ಧತಿಯಿಲ್ಲ. ಸೋದರ ಮಾವ ಬೇವಿನ ಕಡ್ಡಿಯಿಂದ ನಾಲಿಗೆ ಸುಟ್ಟು, ಒಳಗೆ ಕರೆದುಕೊಳ್ಳವ ಪದ್ಧತಿ, ನಂತರ ತಂಗಟೆ ಗಿಡದ ಪೂಜೆ ಮಾಡಿಸುತ್ತಾರೆ.

ಮದುವೆ ಸಂಪ್ರದಾಯಗಳು:

ಮದುವೆಗೆ ಸಂಬಂಧಿಸಿದ ಬಹುತೇಕ ಆಚರಣೆಗಳು ಹಿಂದುಗಳ ರೀತಿಯಲ್ಲಿಯೇ ಇವೆ. ಒಂದೇ ಬೆಡಗಿಗೆ ಸೇರಿದ ಗಂಡು–ಹೆಣ್ಣುಗಳಲ್ಲಿನ ಮದುವೆಯನ್ನು ನಿಷೇಧಿಸಲಾಗಿದೆ. ಅಂದರೆ ಅವರು ಸಹೋದರ–ಸಹೋದರಿಯರಿದ್ದಂತೆ. ವಯಸ್ಕ ಮದುವೆಗೆ ಹೆಚ್ಚಿನ ಪ್ರಾತಿನಿಧ್ಯವಿದೆ. ಅನಕ್ಷರಸ್ಥ ಮತ್ತು ಹಿಂದುಳಿದ ವರ್ಗದ ಜನರಲ್ಲಿ ಮಾತ್ರ ಅಲ್ಪ ಪ್ರಮಾಣದಲ್ಲಿ ಬಾಲ್ಯ ವಿವಾಹಗಳು ನಡೆಯುತ್ತವೆ ಎನ್ನುತ್ತಾರೆ ಮಾಹಿತಿದಾರರು. ವಿಶೇಷ ಸಂದರ್ಭಗಳಲ್ಲಿ ಅಂದರೆ ಮಕ್ಕಳಾಗದಿದ್ದರೆ ಅಥವಾ ಯಾವುದಾದರೂ ಕಾಯಿಲೆಯಿಂದ ನರಳುತ್ತಿದ್ದರೆ ಮಾತ್ರ ಮತ್ತೊಂದು ವಿವಾಹಕ್ಕೆ ಅವಕಾಶವಿದೆ. ತುಂಬಾ ಹಿಂದೆ ಬೇಡರಲ್ಲಿ ತೆರ ಅಥವಾ ಕನ್ಯಾಶುಲ್ಕ ಕೊಡುವ ಪದ್ಧತಿ ಇತ್ತು. ಧಾನ್ಯ ರೂಪದಲ್ಲಿ ಇದನ್ನು ವೀಳೆಶಾಸ್ತ್ರ, ನಿಶ್ಚಿತಾರ್ಥ ಎಂದು ನಿಶ್ಚಯ ಮಾಡಲಾಗುತ್ತಿತ್ತು. ಊರು ಬೇಡರಲ್ಲಿ ಹೆಣ್ಣಿನ ಕಡೆಯವರು ಗಂಡಿನ ಮನೆಗೆ ಬಂದು ಮದುವೆ ಮಾಡಿಕೊಳ್ಳುವಂತೆ ಕೇಳುವುದು ಈಗಿರುವ ಕ್ರಮ. ಹಾಗೆಯೇ ಹೆಣ್ಣಿನ ಕಡೆಯವರು ವರದಕ್ಷಿಣೆ ಕೊಡಬೇಕಾದುದು ಒಂದು ದೊಡ್ಡ ಸಾಮಾಜಿಕ ಸಮಸ್ಯೆಯಾಗಿದೆ. ಮದುವೆಗಳು ಹೆಚ್ಚಾಗಿ ಹೆಣ್ಣಿನ ಮನೆಯ ಮುಂದೆ ಹಾಗೂ ಕುಲದೈವವಾದ ಆಂಜನೇಯ ಮತ್ತು ಹುಲಿಗೆಮ್ಮನ ದೇವಸ್ಥಾನದಲ್ಲಿಯೂ ನಡೆಯುತ್ತವೆ. ವದು ವರರ ನಡುವೆ ಬಟ್ಟೆ(ಪಂಚೆ) ಅಡ್ಡಲಾಗಿ ಇಡಲಾಗುತ್ತದೆ. ಮದುವೆ ಮುಹೂರ್ತಕ್ಕೆ ವೀರಶೈವ ಧರ್ಮಗುರುಗಳನ್ನು ಆಮಂತ್ರಿಸುತ್ತಿದ್ದರು. ಆದರೆ ಈಗ ಕೆಲವು ಮುಂದುವರೆದ ಕುಟುಂಬಗಳು, ಅವರ ಪೀಠದವರೇ ಆದ ರಾಜನಹಳ್ಳಿ ಶ್ರೀ ಪುಣ್ಯಾನಂದ ಪುರಿ ಮಹಾಸ್ವಾಮಿಗಳನ್ನು ಆಹ್ವಾನಿಸುವ ವಾಡಿಕೆಯನ್ನು ಬೆಳೆಸಿಕೊಂಡಿದ್ದಾರೆ.

ದೇವದಾಸಿ ಪದ್ಧತಿ:

ಈ ಪದ್ಧತಿಯು ನಾಯಕ ಜನಾಂಗದಲ್ಲಿ ಬಹುದಿನಗಳಿಂದ ಆಚರಣೆಯಲ್ಲಿ ಬಂದಿದೆ. ಲೇಸಿ, ದೇವದಾಸಿ ಎಂಬ ಪದಗಳಿಂದಲೂ ಈ ಪದ್ಧತಿಯನ್ನು ಕರೆಯುತ್ತಾರೆ. ಯಾವುದೋ ಒಂದು ಕುಟುಂಬದಲ್ಲಿ ಗಂಡು ಸಂತಾನವಿಲ್ಲದಂತಹ ಸಂದರ್ಭದಲ್ಲಿ ಕುಲದೇವತೆಯ

ಹೆಸರಿನಿಂದ ದೇವದಾಸಿ ಬಿಡುವ ಪದ್ಧತಿ ರೂಢಿಗೆ ಬಂದಿತೆಂದು ಹೇಳುತ್ತಾರೆ. ಈ ಪದ್ಧತಿಯು ದೇಶಕ್ಕೆ ಸ್ವಾತಂತ್ರ್ಯ ಬಂದು ಸುಮಾರು 10-15 ವರ್ಷದವರೆಗೂ ಆಚರಣೆಯಲ್ಲಿತ್ತು ಎಂದು ರಾಣೇಬೆನ್ನೂರಿನ ಹಿರಿಯ ವಕೀಲರಾದ ಎಂ.ಎಂ.ಕರೂರು (80ವರ್ಷ) ರವರು ತಿಳಿಸುತ್ತಾರೆ. ಗಂಗಾಮತ, ವಾಲ್ಮೀಕಿ ಮತ್ತು ಹರಿಜನರಲ್ಲಿ ಈ ಪದ್ಧತಿ ಹೆಚ್ಚಿತ್ತು ಎಂದು ಹೇಳಿದರು. ಆದರೆ ಇಂದು ಅದು ತುಂಬಾ ಕಡಿಮೆಯಾಗಿದೆ ಎಂದರು.

ರಕ್ತ ಸಂಬಂಧದ ಅತಿಯಾದ ಅವಲಂಬನೆ:

ಬುಡಕಟ್ಟುಗಳ ಜೀವಾಳವೇ ರಕ್ತ ಸಂಬಂಧ. ಇದರ ಹೊರತಾಗಿ ಇವರಿಗೆ ಬೇರೆ ಯಾವುದೇ ಮನುಷ್ಯ ಸಂಬಂಧಗಳಿರುವುದಿಲ್ಲ. ಇವರ ವಿವಾಹಗಳು ರಕ್ತ ಸಂಬಂಧದಲ್ಲಿ ಮಾತ್ರ ನಡೆಯಬೇಕು. ಒಳ ಬೆಡಗು ಗಳಲ್ಲಿಯೂ ಮದುವೆ ಸಂಬಂಧಗಳು ನಿಷಿದ್ಧ. ಒಂದು ಊರಿಂದ ಮತ್ತೊಂದು ಊರಿಗೆ ಹೆಣ್ಣು ತರುವುದು ಹಾಗೂ ಕೊಡುವುದು ಕೆಲವಡೆ ನಿಷೇಧ.. ಹೆಣ್ಣು ತರುವುದು ಮತ್ತು ಕೊಡುವುದರಲ್ಲಿ ಸೋದರತ್ತೆ ಹಾಗೂ ಸೋದರ ಮಾವಂದಿರಿಗೆ ವಿಶೇಷ ಹಕ್ಕು ಬಾಧ್ಯತೆಗಳಿರುವುದು ಇಲ್ಲಿಯ ವಿಶೇಷ. ಇವರು ಬೇರೆ ಜಾತಿ-ಸಮುದಾಯಗಳೊಡನೆ ಸಂಬಂಧ ಬೆಳೆಸುವ ಅನಿವಾರ್ಯತೆ ಬಂದಾಗ ಮಾವ, ಅಣ್ಣ, ಅಕ್ಕ ಅನ್ನುವ ಸ್ವರೂಪದಲ್ಲಿ ಅವರನ್ನು ಭಾವಿಸುವುದು ಕಂಡುಬರುತ್ತದೆ.

ಧಾರ್ಮಿಕ ವಿಧಿ ವಿಧಾನಗಳು ಮತ್ತು ನಂಬಿಕೆಗಳು:

ಶಕ್ತಿ ದೇವತೆಗಳಾದ ದುರ್ಗಮ್ಮ, ಹಳದಮ್ಮ, ಹುಲಿಗೆಮ್ಮ, ಯಲ್ಲಮ್ಮ ಮತ್ತು ಆಯಾ ಗ್ರಾಮದ ಗ್ರಾಮದೇವತೆಗಳಾದ ಕರಿಯಮ್ಮ, ದ್ಯಾಮವ್ವ, ಚೌಡಮ್ಮ ಮುಂತಾದ ಸ್ತ್ರೀ ಶಕ್ತಿ ದೇವತೆಗಳನ್ನು ಪೂಜಿಸುತ್ತಾರೆ. ಇವುಗಳಲ್ಲದೆ, ಸೋಮಲಿಂಗೇಶ್ವರ (ಮೈಲಾರ) ಹನುಮಂತ ದೇವರು, ಲಕ್ಷ್ಮಿ ರಂಗನಾಥ ಸ್ವಾಮಿ, ಅಹೋಭಲ ನರಸಿಂಹಸ್ವಾಮಿ ಮೊದಲಾದ ಪುರುಷ ದೇವರುಗಳನ್ನು ಆರಾಧಿಸುತ್ತಾರೆ. ಮ್ಯಾಸನಾಯಕರಿಗೆ ಪೆಟ್ಟಿಗೆ ದೇವರುಗಳು ಆಚರಣೆಯ ಪ್ರಮುಖ ದೇವತೆಗಳಾಗಿವೆ. ಸಾಮಾನ್ಯವಾಗಿ ಬುಡಕಟ್ಟುಗಳಲ್ಲಿ ಸಮುದಾಯಕ್ಕೆ ದುಡಿದ ವೀರರು/ಹಿರಿಯರನ್ನೇ ದೇವರೆಂದು ಪರಿಭಾವಿಸುವ ಕ್ರಮವಿದೆ. ಮತ್ತು ವೀರರು ಬಳಸಿದ ವಸ್ತುಗಳನ್ನೇ ದೇವರ ಮೂರ್ತಿಗಳೆಂದು ತಿಳಿಯುವುದು/ಭಾವಿಸುವುದು ವಿಶೇಷ. ಹಿರಿಯರನ್ನು ಪೂಜಿಸುವಾಗ ಅವರ ಭಾವ ಚಿತ್ರವನ್ನು ಇಂದಿಗೂ ಬಳಸುವುದಿಲ್ಲ. ಬದಲಾಗಿ ಅವರ ಹೆಸರಿನಲ್ಲಿ ಒಂದು ಕಲ್ಲೋ ಅಥವಾ ಮರವೋ ಪೂಜೆಗೊಳ್ಳುತ್ತದೆ. ಹಿರಿಯರ ಪ್ರತಿನಿಧಿ ಎಂಬಂತೆ ಪ್ರತಿಯೊಬ್ಬರ ದೇವರ ಮನೆಯಲ್ಲಿ ಒಂದು ಹಿತ್ತಾಳೆ/ತಾಮ್ರದ ಗೋಪಾಳ, ಬೆತ್ತ, ಶಂಖ, ಜಾಗಟೆ ಮುಂತಾದವುಗಳು ಪೂಜಿಸಲ್ಪಡುತ್ತವೆ. ಬಡವರ ಮನೆಯಲ್ಲಿ ಹಿತ್ತಾಳೆ/ತಾಮ್ರದ ಗೋಪಾಳ ಇಲ್ಲದಿದ್ದರೂ ಬಿದಿರಿನ ಗೋಪಾಳವಾದರೂ ಇರುತ್ತದೆ.

ಲೌಕಿಕ, ಅಲೌಕಿಕ ಸ್ಥಿತಿಗತಿಗಳನ್ನು ವಿಶ್ವಾಸರ್ಹವಾಗಿ ಪರಿಗಣಿಸುವುದು ಹಾಗೂ ನೈಜತೆಯನ್ನು ನಿಸ್ಸಂಶಯವಾಗಿ ಒಪ್ಪುವುದನ್ನು ನಂಬಿಕೆ ಎನ್ನುತ್ತೇವೆ. ಮಾನವ ಹಲವಾರು

ವಲಯಗಳಲ್ಲಿ ತನ್ನದೇ ಆದ ನಿಲುವುಗಳನ್ನು ಹೊಂದಿರುತ್ತಾನೆ. ಪರಿಸರ, ಸಮಾಜ ಮುಂತಾದ ವಲಯಗಳಲ್ಲಿ ತನ್ನನ್ನು ಗುರುತಿಸಿಕೊಳ್ಳುವಾಗ ಕಾರ್ಯ,ಕಾರಣಗಳೇ ಒಳಿತು ಕೆಡುಕುಗಳ ಮೂಲವೆಂದು ನಂಬುತ್ತಾನೆ. ನಂಬಿಕೆಯ ಹಿಂದೆ ಪಾವಿತ್ರ್ಯತೆಯ ಗುಣ ಇರುತ್ತದೆ ಎಂಬುದನ್ನು ಗಮನಿಸಬಹುದು. ಸಮುದಾಯದ ಒಳಗೇ ಒಬ್ಬರ ಎಂಜಲನ್ನು ಇನ್ನೊಬ್ಬರು ತಿನ್ನುವಂತಿಲ್ಲ. 'ಎಂಜಲು ಏಳು ಮನೆ ಕೆಡಿಸಿತು, ಎಂಬ ನಂಬಿಕೆಯಿದೆ. ಪೂಜಾರಿಗಳು ಕಿಲಾರಿಗಳು ಮತ್ತು ಸಾಂಸ್ಕೃತಿಕ ನಾಯಕರುಗಳಿಗೆ ಊಟಕ್ಕೆ ಪ್ರತ್ಯೇಕ ತಟ್ಟೆ ಇರಬೇಕು. ಸಾರ್ವಜನಿಕ ಬಸ್ಸುಗಳಲ್ಲಿ ಪ್ರಯಾಣಿಸಿದರೆ ಮಲೀನರಾಗುತ್ತೇವೆ ಎಂಬ ನಂಬಿಕೆ. ಆದರೆ ಈಗ ಈ ನೀತಿ ಸ್ವಲ್ಪ ಸಡಿಲಗೊಂಡಿದೆ. ಪ್ರಾಣಿ-ಪಕ್ಷಿಗಳಿಗೆ ಸಂಬಂಧಿಸಿದ ನಂಬಿಕೆಗಳನ್ನು ಇವರಲ್ಲಿ ಕಾಣಬಹುದು. ಅವುಗಳೆಂದರೆ-ಕೋತಿಯನ್ನು ಕೊಂದರೆ ಮಂಗನಂಥ ಮಕ್ಕಳಾಗುತ್ತವೆ, ಕಾಗೆ ಮುಟ್ಟಿದರೆ ಅಕಾಲ ಮರಣ ಸಂಭವಿಸುತ್ತದೆ, ಅಳಿಲು ಹದ್ದುಗಳನ್ನು ಬೇಟೆಯಾಡಿದರೆ ವೃದ್ಧಿಯಾಗುವುದಿಲ್ಲ, ಗಂಡು ನಾಯಿ ನಾರಾಯಣನ ಸ್ವರೂಪ ಇತ್ಯಾದಿಗಳು.

ಪ್ರಸ್ತುತ ಸಂದರ್ಭದಲ್ಲಿ ಬೇಡ ಸಮುದಾಯದಲ್ಲಿನ ಕೆಲವು ನಂಬಿಕೆಗಳನ್ನು ವೈಚಾರಿಕವಾಗಿ ಪರಿಶೀಲಿಸಿದಾಗ ಅವುಗಳು ತಮ್ಮ ಮಹತ್ವವನ್ನು ಕಳೆದುಕೊಳ್ಳುತ್ತವೆ. ಉದಾಹರಣೆಗೆ 1. ಎಮ್ಮೆ ನೀರಿಗೆ ಬಿಟ್ರೆ ಕೇಡು, ಕಾಡು ಮನುಷ್ಯನ್ನ ಊರಿಗೆ ಬಿಟ್ರೆ ಕೇಡು ಎಂಬ ಗಾದೆಯ ನಂಬಿಕೆಯನ್ನು ಕಾಡೆಲ್ಲ ನಾಡಾಗುತ್ತಿರುವ ಸಂದರ್ಭದಲ್ಲಿ ಸಂಪೂರ್ಣವಾಗಿ ಒಪ್ಪಲಾಗುವುದಿಲ್ಲ. 2. 'ಬೇಡರಿಗೆ ಬೇಟೆ ಬಿಟ್ರೆ ಬೇರೇನು ವೃದ್ಧಿಸಲ್ಲ'-ಎಂಬ ನಂಬಿಕೆಗೆ ಬೇಟೆಯನ್ನು ನಿಷೇಧಿಸಿರುವ ಈ ಸಂದರ್ಭದಲ್ಲಿ ಮಹತ್ವ ಕೊಡಲಾಗುವುದಿಲ್ಲ.

ಹಬ್ಬಗಳು:

ಬುಡಕಟ್ಟುಗಳ ಸಾಮಾಜಿಕ ಜೀವನದಲ್ಲಿ ಹಬ್ಬ-ಹರಿದಿನಗಳು ಅತಿ ಮುಖ್ಯ ಪಾತ್ರವಹಿಸುತ್ತವೆ. ಆಯಾ ಋತುಮಾನಗಳಿಗೆ ಅನುಸಾರವಾಗಿ ಮನರಂಜನೆ ಮತ್ತು ಸುಖ ಸಂತೋಷಗಳಿಗಾಗಿ ಹಬ್ಬಗಳನ್ನು ಆಚರಿಸುವ ಪದ್ಧತಿ ಬೇಡ ಸಮುದಾಯದಲ್ಲಿ ಕಂಡುಬರುತ್ತದೆ. ಮನುಷ್ಯ ಸಾಂಪ್ರದಾಯಿಕ ಬಯಕೆಯನ್ನು ತೀರಿಸಿಕೊಳ್ಳಲು, ಧರ್ಮದ ಕೆಲವು ನಿಯಮ ಮತ್ತು ಆಚರಣೆಗಳನ್ನು ಪಾಲಿಸಲು ನಿರ್ಧಿಷ್ಟ ಅವಧಿಗೊಮ್ಮೆ ಮನೆಯವರ ಜೊತೆಗೂಡಿ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಸಂತೋಷವಾಗಿ ಆಚರಿಸುವ ಪದ್ಧತಿಗೆ 'ಹಬ್ಬ' ಎಂದು ಕರೆಯುತ್ತಾರೆ.

ಈ ಹಬ್ಬಗಳು ಜನರಲ್ಲಿ ಏಕತೆಯನ್ನು ಮೂಡಿಸುತ್ತವೆ. ಹಬ್ಬದ ದಿವಸದಂದು ಜನರು ತಮ್ಮ ಎಲ್ಲ ಕಷ್ಟ ನಷ್ಟಗಳನ್ನು ಮರೆತು ಸಂತೋಷದಿಂದ ಆಚರಿಸುತ್ತಾರೆ. ಯಾವುದೇ ಹಬ್ಬವಿರಲಿ, ಮೂಲ ಉದ್ದೇಶ ತಾವು ನಂಬಿರುವ ದೇವರು-ದೇವತೆ, ಆರಾಧನೆಗಾಗಿ ಅಂದು ಮನೆ-ಮನೆಗಳಲ್ಲಿ ದೇವರ ಪೂಜೆ, ಆರಾಧನೆ ನಡೆಯುವಂತೆ ಆಯಾ ದೇವರುಗಳಿಗಾಗಿ ಮೀಸಲಾದ ಗುಡಿ-ಗೋಪುರಗಳಲ್ಲಿ ವಿಶೇಷ ಪೂಜಾ ಕಾರ್ಯಗಳು ನಡೆಯುತ್ತವೆ.

ಪ್ರತಿಯೊಂದು ಹಬ್ಬಗಳಲ್ಲಿ ನಿಷ್ಠೆ ತರಲು ಪುರಾಣ, ಕಥೆಗಳಲ್ಲಿ ಅವುಗಳ ಮಹತ್ವ, ಅಸ್ತಿತ್ವಗಳನ್ನು ಸೇರಿಸಿ, ಯಾವ ಯಾವ ಹಬ್ಬಗಳನ್ನು ಹೇಗೆ ಆಚರಿಸಿ ಯಾವ ರೀತಿಯ ಶುಭ ಪುಣ್ಯ ಫಲಗಳನ್ನು ಪಡೆದುಕೊಳ್ಳಬಹುದು ಎಂಬುದನ್ನು ಅಲ್ಲಿ ಪ್ರಸ್ತಾಪ ಮಾಡಿರುವುದರಿಂದ ಈ ಬೇಡ ಬುಡಕಟ್ಟು ಸಮುದಾಯ ತಮ್ಮದೇ ಆದ ಹಲವು ವೈಶಿಷ್ಟ್ಯಪೂರ್ಣ ಹಬ್ಬಗಳ ಆಚರಣೆಯಲ್ಲಿ ಅಪಾರ ಶ್ರದ್ಧೆ ತೋರಿಸುತ್ತಾರೆ.

ಸಾಮಾನ್ಯವಾಗಿ ಬುಡಕಟ್ಟು ಜನರು ಆಚರಿಸುವ ಹಬ್ಬ-ಹರಿದಿನಗಳ ಮೂಲಕ ಅವರ ಸಂಪ್ರದಾಯ, ನಂಬಿಕೆ, ಆಚಾರ-ವಿಚಾರ, ಉಡುಗೆ-ತೊಡುಗೆ ಮತ್ತು ಸಂಸ್ಕೃತಿಯನ್ನು ಸ್ಪಷ್ಟವಾಗಿ ಗುರುತಿಸಬಹುದು. ಅದೇ ರೀತಿ ಬೇಡ ಸಮುದಾಯವು ಋತುಮಾನಕ್ಕನುಗುಣವಾಗಿ ಗುಗ್ಗರಿಹಬ್ಬ (ಕಾಳೆಹಬ್ಬ), ಶಿವರಾತ್ರಿ, ಯುಗಾದಿ, ನಾಗರ ಪಂಚಮಿ, ಹಿರಿಯರ ಹಬ್ಬ, ಮಹಾನವಮಿ, ದೀಪಾವಳಿ ಹಾಗೂ ಇನ್ನಿತರ ಆಯಾ ಗ್ರಾಮದೇವತೆಗಳ ಹಬ್ಬಗಳನ್ನು ವೈಶಿಷ್ಟ್ಯಪೂರ್ಣವಾಗಿ ಆಚರಿಸುತ್ತಾರೆ. ಹಬ್ಬಗಳು ಸಾಮಾನ್ಯವಾಗಿ ಸಂತೋಷ, ಸಡಗರ, ಶುಚಿತ್ವ ಮತ್ತು ದೈವ ಶ್ರದ್ಧೆಯ ಸಾಂಕೇತಿಕವಾಗಿ ಪ್ರಾದೇಶಿಕ ವೈವಿಧ್ಯತೆಗಳೊಡನೆ ಆಚರಿಸಲ್ಪಡುವುದರ ಜೊತೆಗೆ, ಆ ದಿನ ಹೊಸದಾದ ಇಲ್ಲವೇ ಸಾಂಪ್ರದಾಯಿಕ ಉಡುಗೆ-ತೊಡುಗೆಗಳನ್ನು ಧರಿಸುತ್ತಾರೆ. ದೇವರು, ಧರ್ಮ ಮತ್ತು ಹಬ್ಬಗಳ ವಿಷಯವಾಗಿ ಬೇಡ ಸಮುದಾಯದಲ್ಲಿ ಏಕತೆ, ಐಕ್ಯತೆ, ಒಗ್ಗಟ್ಟು ಮತ್ತು ಹೊಂದಾಣಿಕೆಗಳು ಕಂಡುಬರುತ್ತವೆ. ಹಾವೇರಿ ಜಿಲ್ಲೆಯ ಬಹುತೇಕ ಪ್ರದೇಶಗಳಲ್ಲಿ ನೆಲೆಸಿರುವ ಊರು ಬೇಡರು ಹಿಂದೂ ಸಂಪ್ರದಾಯದಂತೆ ಹಬ್ಬ-ಹರಿದಿನಗಳನ್ನು ಆಚರಿಸುವುದು ಕಂಡುಬರುತ್ತದೆ. ಇಲ್ಲಿ ಹಿರಿಯರ ಹಬ್ಬಕ್ಕೆ ಹೆಚ್ಚು ಪ್ರಾಶಸ್ತ್ಯವಿದೆ. ಈ ಹಬ್ಬವನ್ನು ಮಹಾನವಮಿಯಂದು ಆಚರಿಸುತ್ತಾರೆ. ಕೆಲವೊಂದು ಊರುಗಳಲ್ಲಿ ಯುಗಾದಿ, ದಸರಾ, ದೀಪಾವಳಿ ಮತ್ತು ಗಂಡು ಮಕ್ಕಳ ಮದುವೆ ಸಂದರ್ಭದಲ್ಲಿ ಹಿರಿಯರ ಹಬ್ಬವನ್ನು ಮಾಡುತ್ತಾರೆ.

ಸಾವಿನ ಆಚರಣೆಗಳು:

ಬೇಡರಲ್ಲಿ ಸಾವಿನ ಸಂದರ್ಭಕ್ಕೆ ನಡೆಯುವ ಆಚರಣೆಗಳಲ್ಲಿ ಬುಡಕಟ್ಟು ಲಕ್ಷಣಗಳ ಹಿನ್ನೆಲೆಯಲ್ಲಿ ಗಮನಿಸುವುದಾದರೆ ಕೆಲವು ಲಕ್ಷಣಗಳು ಮ್ಯಾಸ ಬ್ಯಾಡರಲ್ಲಿ ಮಾತ್ರ ಕಂಡು ಬರುತ್ತಲಿರುವುದನ್ನು ನೋಡಬಹುದು. ಆದರೆ ಊರುಬೇಡರಲ್ಲಿ ಸಾಕಷ್ಟು ಪರಿವರ್ತನೆಗಳಾಗಿ ಉಳಿದ ಸಮುದಾಯದವರಲ್ಲಿ ಕಂಡುಬರುವ ವಿಧಿ-ವಿಧಾನಗಳೇ ಇವರಲ್ಲಿಯೂ ಇರುವುದನ್ನು ಗಮನಿಸಬಹುದು. ಈ ಸಮುದಾಯದಲ್ಲಿ ಕಂಡು ಬರುವ ಪ್ರಮುಖ ಆಚರಣೆಗಳೆಂದರೆ ಸಾವಿನಂಚಿನಲ್ಲಿರುವ ವ್ಯಕ್ತಿಯನ್ನು ಗುಡಿಸಲಿನಿಂದ ಹೊರಗೆ ಮಲಗಿಸುತ್ತಾರೆ. ಜೀವ ಹೋದ ತಕ್ಷಣ ಶವ-ಯಾತ್ರೆಗೆ ಸಿದ್ಧತೆ ಮಾಡುತ್ತಾರೆ. ಕುಳ್ಳು ತಂದು ಮನೆ ಮುಂದೆ ಬೆಂಕಿ ಹಾಕುತ್ತಾರೆ. ಸತ್ತ ಸುದ್ದಿಯನ್ನು ಹರಿಜನರ ಮೂಲಕ ಬಂಧು-ಬಳಗಕ್ಕೆ ತಿಳಿಸುತ್ತಾರೆ. ಸಂಬಂಧಿಕರೆಲ್ಲ ಸೇರಿದ

ನಂತರ ಹೊಸ ಬಟ್ಟೆ ಹಾಕಿ, ಪೂಜೆ ಮಾಡಿ ಸ್ಮಶಾನಕ್ಕೆ ಹೊತ್ತುಕೊಂಡು ಹೋಗುತ್ತಾರೆ. ಇವರಲ್ಲಿ ಅಂಗಾತ, ಬೋರಲಾಗಿ ಹೂಳುವ ಕ್ರಮವಿದೆ. ಗುಂಡಿಯ ಸುತ್ತ ನಾಲ್ಕು ಕಡೆ ದೀಪ ಇಡುವ ಪದ್ಧತಿ ಇದೆ. ಶವಯಾತ್ರೆಯಲ್ಲಿ ಎಲ್ಲಾ ಜಾತಿ ಜನಾಂಗದವರು ಭಾಗವಹಿಸುವುದಿದೆ. ಸತ್ತ ವ್ಯಕ್ತಿಯು ಕಾಗೆಯ ರೂಪದಲ್ಲಿ ಮೂರನೇ ದಿನ ತನ್ನ ಸಮಾಧಿ ಸ್ಥಳದಲ್ಲಿ ಕುಟುಂಬದವರು ಹಾಕಿದ ಕೂಳನ್ನು ತಿನ್ನುತ್ತಾನೆ ಎಂಬ ನಂಬಿಕೆಯ ಹಿನ್ನೆಲೆಯಲ್ಲಿ 'ಕೂಳು ಹಾಕುವ' ಸಂಪ್ರದಾಯ ಸಾಮಾನ್ಯವಾಗಿ ಕಂಡುಬರುತ್ತದೆ. ಮೂರನೇ ದಿನ ಮಾಂಸದ ಅಡಿಗೆ ಊಟವಿರುತ್ತದೆ. ಅಂದೇ ತಿಂದು ಮುಗಿಸಬೇಕಾಗಿತ್ತು. ಉಳಿದ ಅನ್ನವನ್ನು ಮನೆಯಲ್ಲಿ ಗುಂಡಿತೋಡಿ ಹಾಕಿ ಮುಚ್ಚಬೇಕಾಗಿತ್ತು ಆದರೆ ಅದು ಈಗಿಲ್ಲ.

ಬೇಡರ ಸಮುದಾಯಗಳಲ್ಲಿ'ದಿವಸ' (ತಿಥಿ) ಮಾಡುವಾಗ ಅದರ ಕಾರ್ಯವನ್ನು ಗುಡ್ಡೆ ಪೂಜಾರಿಗಳೇ ನೆರವೇರಿಸಬೇಕು. ಇದು ಗುಂಪಿನ ಐಕ್ಯತೆಯ ಭಾವವನ್ನು ಸೂಚಿಸುತ್ತದೆ. ದೆವ್ವ, ಪಿಶಾಚಿ, ಪೀಡೆಗಳ ಬಗ್ಗೆ ನಂಬಿಕೆಯಿದೆ. ಒಟ್ಟಾರೆ ಹೇಳುವುದಾದರೆ, ಮೊದಲಿದ್ದ ಬೇಡರ ಸಾಮಾಜಿಕ ಪರಿಸ್ಥಿತಿಗೂ ಸಮಕಾಲೀನ ಸ್ಥಿತಿಗತಿಗೆ ಹೋಲಿಸಿದರೆ ಸಾಕಷ್ಟು ಪರಿವರ್ತನೆಗಳಾಗಿರುವುದು ಕಂಡುಬರುತ್ತದೆ.

ಒಟ್ಟಿನಲ್ಲಿ ಬುಡಕಟ್ಟು ಸಂಸ್ಕೃತಿಯಲ್ಲೇ ಈ ಬೇಡ ಬುಡಕಟ್ಟಿನ ಸಂಸ್ಕೃತಿ ಅನನ್ಯತೆಯಿಂದ ಕೂಡಿದುದು. ಇವರ ಸಾಮಾಜಿಕ ಜೀವನ ಮತ್ತು ಸಮಾಜ ವ್ಯವಸ್ಥೆ, ಆಚರಿಸುವ ಹಬ್ಬಗಳು, ಸಂಪ್ರದಾಯದ ಆಚರಣೆಗಳು, ವೃತ್ತಿ, ಉಪವೃತ್ತಿ ಕಲೆ ಹಾಗೂ ಬೇಟೆಗಾರಿಕೆ, ಮದುವೆ ಸಂಪ್ರದಾಯ ಇತ್ಯಾದಿ ಆಚರಣೆಗಳು ಬಹು ವಿಶಿಷ್ಟವಾಗಿವೆ. ಇದೊಂದು ಅಧ್ಯಯನ ಶೀಲ ಬುಡಕಟ್ಟು ಎಂಬುದರಲ್ಲಿ ಸಂಶಯವೇ ಇಲ್ಲ. ಇನ್ನೂ ಸಾಕಷ್ಟು ವಿಧಾನದಲ್ಲಿ ಈ ಸಮುದಾಯವನ್ನು ಅಧ್ಯಯನ ಮಾಡುವ ಅಗತ್ಯವೂ ಇದೆ.

ಬೇಡ ಸಮುದಾಯದ ಪ್ರಚಲಿತ ಸಾಮಾಜಿಕ ಸ್ಥಿತಿಗತಿಗಳು:

ಪ್ರಸ್ತುತ ಸಮಾಜದಲ್ಲಿ ಬೇಡ ಸಮುದಾಯವು ಅಸ್ಪೃಶ್ಯತೆಯ ಸೋಂಕಿನಿಂದ ಸ್ವಲ್ಪಮಟ್ಟಿಗೆ ದೂರವಿದ್ದರೂ ಈ ವರ್ಗವೇನು ಶೋಷಣೆಯಿಂದ ಮುಕ್ತವಾಗಿಲ್ಲ. ಆದರೂ ಇಂಥ ಪರಿಸ್ಥಿತಿಯನ್ನು ಮರೆತು, ಬಹುಸಂಖ್ಯಾತ ಸಮುದಾಯಗಳಲ್ಲಿ ಶೂದ್ರ ಭಾವನೆಗಳು ಮಾಯವಾಗಿ ದಬ್ಬಾಳಿಕೆಯ ಕೃತ್ಯಗಳು ಕೆಲವು ಕಡೆ ಕಂಡುಬರುತ್ತಿರುವುದು ಆತಂಕಕಾರಿ ವಿಷಯವಾಗಿದೆ. ಇಂದಿನ ದಿನಮಾನಗಳಲ್ಲಿ ಬೇಡ ಸಮುದಾಯದ ಸ್ಥಿತಿ-ಗತಿ, ಸ್ಥಾನಮಾನ, ಬದುಕಿನ ರೀತಿ-ನೀತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಈ ಸಮುದಾಯದ ಜೀವನ ಸ್ಥಿತಿ ತೃಪ್ತಿಕರವಾಗಿಲ್ಲ. ಸುಮಾರು ವರ್ಷಗಳಿಂದ ಈ ಸಮುದಾಯದ ಪರಂಪರೆ ಅಸ್ತಿತ್ವದಲ್ಲಿದ್ದರೂ ಹಲವಾರು ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿದೆ. ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಸ್ವಲ್ಪ ಹಿಂದುಳಿದಿದೆ. ಆದರೆ ಈ ಕ್ಷೇತ್ರದ ಇತರೆ ಅರೆ-ಅಲೆಮಾರಿ ಬುಡಕಟ್ಟು

ಸಮುದಾಯಗಳ ಸ್ಥಿತಿಗತಿಗಳನ್ನು ಹೋಲಿಸಿದರೆ ಇವರ ಸ್ಥಿತಿ ಸ್ವಲ್ಪ ಸುಧಾರಿಸಿದೆ ಎನ್ನಬಹುದು. ಇವತ್ತಿನ ಸಂದರ್ಭದಲ್ಲಿ ಇವರ ಸಮಸ್ಯೆಗಳು ಸಮಸ್ಯೆಗಳಾಗಿಯೇ ಉಳಿದಿವೆ. ಯಾವುದೇ ಸಭೆ–ಸಮಾರಂಭಗಳಲ್ಲಿಯೂ ಕೇವಲ ಹೊಗಳಿಕೆಯ ಮಾತುಗಳೇ–ಹೊರತು ಸಮಸ್ಯೆಗಳಿಗೆ ಪರಿಹಾರವಿಲ್ಲ.

ಪ್ರಸ್ತುತ ಸಂದರ್ಭದಲ್ಲಿ ಬಡತನ, ಹಸಿವು, ನಿರುದ್ಯೋಗ, ಸಮಸ್ಯೆಯು ಹೆಚ್ಚಾಗಿದೆ. ಈ ಪರಿಸ್ಥಿತಿಗೆ ಬಹುಮುಖ್ಯವಾದ ಕಾರಣ ಇವರ ಆರ್ಥಿಕತೆ, ಆದ್ದರಿಂದ ಇಂತಹ ಪರಿಸ್ಥಿತಿಯಲ್ಲಿ ರಾಜಕೀಯ ಮುಖಂಡರು, ಬುದ್ದಿ ಜೀವಿಗಳು, ಪತ್ರಕರ್ತರು, ಸಮಾಜ ಸೇವಕರು, ಸಂಶೋಧಕರು, ನ್ಯಾಯವಾದಿಗಳು, ಸಂಘ ಸಂಸ್ಥೆಗಳು ಹೋರಾಟಕ್ಕಿಳಿದು ಸರ್ಕಾರಕ್ಕೆ ಬೇಡಿಕೆ ಇಟ್ಟರೆ ಮಾತ್ರ ಸಾಧ್ಯವಾಗುತ್ತದೆ ಮತ್ತು ಅನುಕೂಲವಾಗುತ್ತದೆ. ಆದರೆ ಈ ಸಮಾಜ ಪ್ರಗತಿದಾಯಕವಾಗಿ, ಸಂಘಟನಾತ್ಮಕ ರೀತಿಯಲ್ಲಿ ಒಗ್ಗಟ್ಟಿನಿಂದ ಇನ್ನೂ ಮುನ್ನೆಡೆಯುತ್ತಿಲ್ಲ. ಎಂದೋ ಸಾಧಿಸಬೇಕಾದ ಸಮಾಜದ ಸರಿಯಾದ ಸಂಘಟನೆ ಇಂದಿಗೂ ಏಕೆ ಸಾಧ್ಯವಾಗಿಲ್ಲ? ರಾಜ್ಯ, ಸಾಮ್ರಾಜ್ಯಗಳನ್ನು ಕಟ್ಟಿ ಆಳಿದ ಜಾತಿ ಇನ್ನೂ ಮುಂದುವರಿದ ಜಾತಿಗಳಂತೆ ಅಭಿವೃದ್ಧಿಯನ್ನು ಏಕೆ ಸಾಧಿಸಿಲ್ಲ? ಎಂದು ಪ್ರಶ್ನಿಸಿಕೊಂಡರೆ ಸಿಗುವ ಉತ್ತರ ಪ್ರಾಯಶಃ ಅದು ಉತ್ತಮ ನಾಯಕತ್ವದ ಕೊರತೆ ಎಂದೇ ಹೇಳಬಹುದು. ಸಮಾಜದ ಅಭಿವೃದ್ಧಿಗೆ ಶ್ರಮಿಸತಕ್ಕವರು ಯಾರೂ ಇಲ್ಲವೆಂದಲ್ಲ, ಆದರ್ಶ ಸಮಾಜವನ್ನು ನಿರ್ಮಾಣ ಮಾಡಿ, ನಾಡಿಗೆ ಮಾದರಿಯಾಗಿರುವ ನಾಯಕರು ಇದ್ದಾಗ್ಯೂ ಅಂಥ ಜನರನ್ನು ಕಡೆಗಣಿಸಲಾಗಿದೆ. ಅಂಥ ಸಮಾಜ ಸೇವಕರನ್ನು ದೂರ ಸರಿಸಿ ಆಧುನಿಕ ರಾಜಕೀಯ ನಾಯಕರು ಮುಂದಿದ್ದಾರೆ. ಆದರೆ ನಾಯಕತ್ವದ ಸ್ಥಾನವನ್ನರಿಯದೇ ಅದೊಂದು ರಾಜಕೀಯ ಗೊಂದಲವನ್ನಾಗಿ ಮಾಡಿದ್ದಾರೆ.

ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರಭಲ ರಾಜಕೀಯ ಪ್ರವೇಶ ಮಾಡಿದರೆ ಆ ಸಮಾಜವು ಗೊಂದಲದ ಗೂಡಾಗುವುದು. ಸ್ವಾರ್ಥ, ವೈಯಕ್ತಿಕ ಪ್ರತಿಷ್ಠೆಗಳು ಮುಂದಾಗುವುದು. ರಾಗ ದ್ವೇಷಗಳು ಉಂಟಾಗಿ ಬೆಳೆಯುತ್ತಾ ಬಂದು, ಬಗೆಹರೆಯದ ಸಮಸ್ಯೆಗಳಾಗಿ ಸಮಾಜವನ್ನು ಒಡೆದು ಹಾಕುತ್ತವೆ. ಹಾಗೆಂದರೆ ರಾಜಕೀಯ ಬೇಡವೆಂದೆಲ್ಲಾ, ಸಮಾಜ ಸಂಘಟನೆಗೆ ರಾಜಕೀಯ ಅಧಿಕಾರದ ಬೆಂಬಲ ಬೇಕೇ ಬೇಕು. ಆದರೆ ಸಮಾಜ ಸಂಘಟನೆಯಲ್ಲಿ ರಾಜಕೀಯ ಸೇರಬಾರದು. ಇಂದು ಸಮಾಜದಲ್ಲಿ ಆಗಿರುವುದೇನೆಂದರೆ, ಸಮಾಜ ಸಂಘಟನೆ ಪ್ರಬಲ ರಾಜಕೀಯ ಬೆರೆಸಿ ವೈಯಕ್ತಿಕ ಪ್ರತಿಷ್ಠೆ ಮುಂದೆ ಮಾಡಲಾಗುತ್ತಿದೆ. ಇದರಿಂದ ಸಮಾಜದ ಪರಿವರ್ತನೆಯಾಗದೇ ಸಮಾಜ ಸಂಘಟನೆಯಲ್ಲಿ ಪ್ರಭಲ ನಾಯಕರು ಇಲ್ಲವಾಗಿದ್ದಾರೆ.

ಇಂದು ಈ ಸಮುದಾಯವು ನಾಗರಿಕ ಕುಟುಂಬಗಳೊಂದಿಗೆ ನೆಲೆ ನಿಂತುಕೊಂಡು ತನ್ನ ಬದುಕನ್ನು ರೂಪಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಆದರೆ ಇದು ಸಾಧ್ಯವಾಗುತ್ತಿಲ್ಲ. ಯಾಕೆಂದರೆ ಈ ಸಮುದಾಯದ ಪೂರ್ವಜರು ಅಲೆಮಾರಿ ಅರಣ್ಯವಾಸಿಗಳಾಗಿದ್ದರಿಂದ ಅಂದಿನ ಆಸ್ತಿಪಾಸ್ತಿಗಳು, ನಿವೇಶನ, ವಸತಿ, ಭೂಮಿಯನ್ನು ಹೊಂದಿರುವುದು ಕಡಿಮೆ, ಇದರಿಂದಾಗಿ ವರ್ತಮಾನದಲ್ಲಿ ಈ ಸಮುದಾಯವು ಮೂಲಭೂತ ಸೌಲಭ್ಯಗಳಿಂದ ದೊಡ್ಡ ಸಮಸ್ಯೆಯನ್ನು ಎದುರಿಸುತ್ತಿದೆ. ಸರ್ಕಾರದಿಂದ ಬರುವ ಸೌಲಭ್ಯಗಳಂತೂ ತೀರ ಕಡಿಮೆ. ಅಲ್ಪ ಸ್ವಲ್ಪ ಬಂದರೂ ಸಹ ಮಧ್ಯವರ್ತಿಗಳ ಪಾಲಾಗುತ್ತಿವೆ. ನಾನು ಗಮನಿಸಿದ ಹಾಗೆ ಸುಮಾರು ಹಳ್ಳಿಗಳು ಈ ಪರಿಸ್ಥಿತಿಯನ್ನೇ ಎದುರಿಸುತ್ತಿವೆ. ಕೆಲವರಿಗೆ ಇನ್ನೂ ಸರಿಯಾಗಿ ವಾಸಮಾಡಲಿಕ್ಕೆ ಮನೆಗಳೇ ಇಲ್ಲ. ಹುಲ್ಲಿನ ಗುಡಿಸಲಿನಲ್ಲಿ ವಾಸಿಸುತ್ತಿದ್ದಾರೆ. ಕೆಲವರು ಮಾತ್ರ ಆಶ್ರಯ, ಜನತಾ, ಅಂಬೇಡ್ಕರ ಹಾಗೂ ರಾಜೀವಗಾಂಧಿ ಆವಾಸ ಯೋಜನೆಗಳಡಿಯಲ್ಲಿ ಮನೆಗಳನ್ನು ಪಡೆದುಕೊಂಡಿರುವುದು ಕ್ಷೇತ್ರಕಾರ್ಯದ ಮೂಲಕ ತಿಳಿದುಬರುತ್ತದೆ.

ಸಮಾಜದಲ್ಲಿ ಸಮಾನತೆ ಹಾಗೂ ಆರ್ಥಿಕ ಸಮತೋಲನ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಶೋಷಿತ ವರ್ಗಕ್ಕೆ ಸಂವಿಧಾನ ದತ್ತವಾದ ಮೀಸಲಾತಿ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆ. ಇಂತಹ ವಿಶೇಷ ಸೌಲತ್ತುಗಳು, ಕಳೆದ ಎರಡು ದಶಕಗಳಿಂದ ಬೇಡ ಸಮುದಾಯಕ್ಕೆ ಸಿಗುತ್ತಿದ್ದು ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕವಾಗಿ ತೀವ್ರತರ ಬದಲಾವಣೆಗಳಿಗೆ ಕಾರಣವಾಗಿದೆ. ಆದರೆ ಈ ರೀತಿಯ ಉತ್ತಮ ಬೆಳವಣಿಗೆಯನ್ನು ಸಹಿಸದ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಅವರ ಹೊಟ್ಟೆ ಮೇಲೆ ಕಲ್ಲಾಕುವ ಹುನ್ನಾರಗಳು ಆಗಿಂದಾಗೆ ನಡೆಯುತ್ತಲೇ ಇರುವುದನ್ನು ಕಾಣಬಹುದು.

ಆರ್ಥಿಕ ಸ್ಥಿತಿಗತಿಗಳು:

ಬೇಡ ಸಮುದಾಯದ ಶೇಕಡ ಎಪ್ಪತ್ತೈದರಿಂದ ಎಂಬತ್ತರಷ್ಟು ಜನರಿಗೆ ಅಲ್ಪ ಸ್ವಲ್ಪ ಜಮೀನು ಮತ್ತು ಆಸ್ತಿ ಇರುವುದು ಸಮೀಕ್ಷೆಯ ಮೂಲಕ ತಿಳಿದುಬರುತ್ತದೆ. ಆದರೆ ಕುಟುಂಬ ನಿರ್ವಹಣೆಗೆ ಮತ್ತು ಹೆಚ್ಚಿನ ಅಭಿವೃದ್ಧಿಗೆ ಸಾಕಾಗುವಷ್ಟು ಆಸ್ತಿ ಇದ್ದವರು ಹಾವೇರಿ ಜಿಲ್ಲೆಯ ಅರೆ ಮಲೆನಾಡು ಪ್ರದೇಶಗಳಲ್ಲಿ ಮಾತ್ರ ಸ್ವಲ್ಪ ಪ್ರಮಾಣದಲ್ಲಿ ಕಂಡುಬರುತ್ತಾರೆ. ಬಯಲು ಸೀಮೆಯಲ್ಲಿನ ಭೂಮಿ ಮಳೆ ಆಶ್ರಿತವಾದ್ದರಿಂದ ಹೆಚ್ಚಿನ ಉತ್ಪನ್ನ ನಿರೀಕ್ಷಿಸುವಂತಿಲ್ಲ. ಇತ್ತೀಚಿನ ವರ್ಷಗಳಲ್ಲಿ ಕೆಲವರು ಸರ್ಕಾರಿ ಮತ್ತು ಖಾಸಗಿ ಸೇವೆಗಳಲ್ಲಿ ಕೆಲಸಕ್ಕೆ ಸೇರಿ ಸುಧಾರಿಸುತ್ತಿದ್ದಾರೆ. ಮಿಕ್ಕವರು ಕೂಲಿ, ಗಾರೆಕೆಲಸ, ಗ್ಯಾರೇಜ್, ಹಮಾಲಿ, ಕಾರ್ಮಿಕ ಕೆಲಸ ಇನ್ನಿತರ ಸಣ್ಣಪುಟ್ಟ ವ್ಯಾಪಾರಗಳಲ್ಲಿ ತೊಡಗಿದ್ದಾರೆ. ಮುಸಲ್ಮಾನರಂತೆ ಕೈಗಾರಿಕೆ, ವ್ಯಾಪಾರ, ತಾಂತ್ರಿಕ ಕೆಲಸಗಳಿಂದ ವಾಲ್ಮೀಕಿಗಳು ಸಹ ಸ್ವಾವಲಂಬಿಗಳಾಗುವುದನ್ನು ಕಲಿಸಬೇಕಾಗಿದೆ.

ಪಾರಂಪರಿಕವಾಗಿ ಬೇಡರು ಬೇಟೆಯಾಡುತ್ತಿದ್ದರು. ಬಿಲ್ಲು ಮತ್ತು ಭರ್ಜಿಗಳನ್ನು ಬಳಸುವುದರಲ್ಲಿ ಪ್ರವೀಣರಾಗಿದ್ದರು. ಈಗ ಕಾಡುಗಳು ನಾಶವಾಗಿರುವುದರಿಂದ ತಮ್ಮ ವೃತ್ತಿಯನ್ನು ಬದಲಾಯಿಸಿಕೊಂಡಿದ್ದಾರೆ. ಆದರೂ ಯುಗಾದಿ ಹಬ್ಬದ ಸಂದರ್ಭದಲ್ಲಿ ಈಗಲೂ ಸಾಂಪ್ರದಾಯಿಕವಾಗಿ ಬೇಟೆಯಾಡುತ್ತಾರೆ. ಬೇರೆ ದಿವಸಗಳಲ್ಲಿ ಮೇಲೆ ತಿಳಿಸಿದ ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡಿರುತ್ತಾರೆ. ಇವರಲ್ಲಿನ ಆಲಸ್ಯ, ದುಂದುವೆಚ್ಚ, ದುಶ್ಚಟಗಳಿಂದಲೂ ಇವರ ಆರ್ಥಿಕ ಸ್ಥಿತಿ ತುಂಬಾ ಹದಗೆಟ್ಟಿದೆ. ಇವರಲ್ಲಿ ಉಳಿತಾಯ ಮನೋಭಾವನೆ ಬಹಳ ಕಡಿಮೆ. ಸರಕಾರದಿಂದ ದೊರೆಯುವ ಆರ್ಥಿಕ ಸವಲತ್ತು, ತರಬೇತಿಗಳ ಬಗ್ಗೆ ಮಾಹಿತಿ ಅಷ್ಟಾಗಿ ಇವರ ಗಮನಕ್ಕೆ ಬಂದಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಇವರ ಆರ್ಥಿಕ ಸ್ಥಿತಿ ಜಡತ್ವದಿಂದ ಕೂಡಿದೆ ಎಂದು ಹೇಳಬಹುದು. ಈ ಪರಿಸ್ಥಿತಿಯಿಂದ ಹೊರಬರಲು ಅವರ ಆಸಕ್ತಿ, ಅಭಿರುಚಿಗಳಿಗೆ ಅನುಗುಣವಾಗಿ ಶಿಕ್ಷಣ ಮತ್ತು ವಿಶೇಷ ತರಬೇತಿಗಳನ್ನು ನೀಡಬೇಕಾಗಿದೆ.

ಶೈಕ್ಷಣಿಕ ಸ್ಥಿತಿಗತಿ:

ಪ್ರಸ್ತುತ ಅಧ್ಯಯನದಲ್ಲಿ ಹಾವೇರಿ ಜಿಲ್ಲೆಯಲ್ಲಿರುವ ಬೇಡ ಸಮುದಾಯವನ್ನು ಸಮೀಕ್ಷೆಗೆ ಒಳಪಡಿಸಿದಾಗ ತಿಳಿದು ಬಂದ ಮಾಹಿತಿ ಪ್ರಕಾರ ಈ ಸಮುದಾಯದಲ್ಲಿ ಸಾಕ್ಷರತೆಯ ಪ್ರಮಾಣ ಸಾಕಷ್ಟು ಸುಧಾರಿಸಿದೆ ಎಂದು ಹೇಳಬಹುದು ಅದರಲ್ಲೂ ಹದಿನಾಲ್ಕು ವರ್ಷದೊಳಗಿನ ಶೇಕಡ ಎಂಬತ್ತಕ್ಕೂ ಹೆಚ್ಚು ಪ್ರಮಾಣದಲ್ಲಿ ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳಿಸುತ್ತಿರುವುದನ್ನು ಗಮನಿಸಿದರೆ ಉತ್ತಮ ಬೆಳವಣಿಗೆಯಾಗಿದೆ. ಆದರೆ ಈ ಸಮುದಾಯದ ಯೌವನಾವಸ್ಥೆ ಮತ್ತು ವೃಧ್ಯಾಪದಲ್ಲಿರುವವರಲ್ಲಿ ಸಾಕ್ಷರತೆಯ ಪ್ರಮಾಣ ತುಂಬಾ ಕಡಿಮೆ ಇದೆ. ಅದಕ್ಕೆ ಪ್ರಮುಖ ಕಾರಣಗಳೆಂದರೆ

1. ಅವರಲ್ಲಿರುವ ಬಡತನ.
2. ಶಿಕ್ಷಣ ಕೇವಲ ಮೇಲ್ವರ್ಗದವರಿಗೆ ಮಾತ್ರ ನಮ್ಮಂತವರಿಗೆ ಅಸಾಧ್ಯ ಎಂಬ ಪೂರ್ವಗ್ರಹ.
3. ನಿಶ್ಚಿತ ಆದಾಯ ಮೂಲವಿಲ್ಲದೆ ನೆಲೆ ನಿಲ್ಲಲಾಗದೆ ಅನಿವಾರ್ಯವಾಗಿದೆ.
4. ಶಿಕ್ಷಣ ಪಡೆದರೂ ಉದ್ಯೋಗವಿಲ್ಲ ಎಂಬ ಕೊರಗು.
5. ಸರ್ಕಾರದ ಪ್ರೋತ್ಸಾಹ ಕಡಿಮೆಯಾಗುತ್ತಿರುವುದು. ಇನ್ನೂ ಮುಂತಾದ ಕಾರಣಗಳು.

ಈ ಕಾಲದಲ್ಲಿ ಎಸ್.ಎಸ್.ಎಲ್.ಸಿ ವರೆಗಾದರೂ ಎಲ್ಲಾ ಮಕ್ಕಳಿಗೆ ಸಾಮಾನ್ಯ ಶಿಕ್ಷಣ ಬೇಕು. ಆದರೆ ನೌಕರಿ ನಿರೀಕ್ಷಿಸದೆ ಸ್ವಂತ ಉದ್ಯೋಗದ ಗುರಿ ಇರಬೇಕು. ಬೇರೆ ಸಮುದಾಯದವರು ತಮ್ಮದೇ ಆದ ಶಿಕ್ಷಣ ಸಂಸ್ಥೆಗಳಲ್ಲಿ ತಮ್ಮವರಿಗೆ ಹೆಚ್ಚು ಪ್ರಾಧಾನ್ಯತೆ ಕೊಡುತ್ತಾರೆ. ಈ ವಿಷಯದಲ್ಲಿ ಬೇಡ ಸಮಾಜ ಸ್ವಲ್ಪ ಹಿಂದಿದೆ. ಆದಾಗ್ಯೂ, ಇದೇ

ಸಮುದಾಯಕ್ಕೆ ಸೇರಿದ ಎಚ್.ಡಿ. ಬಡಕರಿಯಪ್ಪನವರ ಮತ್ತು ಕೆಂಬಾವಿ ಬಸಪ್ಪರವರುಗಳು ಕ್ರಮವಾಗಿ ರಾಣೇಬೆನ್ನೂರಿನಲ್ಲಿ ವ್ಹಿ.ಎಂ.ವ್ಹಿ.ಎಸ್(ರಿ) ಹೆಣ್ಣುಮಕ್ಕಳ ಪ್ರೌಢಶಾಲೆ ಮತ್ತು ಹಿರೇಕೆರೂರು ತಾಲೂಕಿನ ಭೋಗಾವಿಯಲ್ಲಿ ಕೆಂಬಾವಿ ಪ್ರೌಢಶಾಲೆಯನ್ನು ಸ್ಥಾಪಿಸಿರುವುದನ್ನು ಸ್ಮರಿಸಬಹುದು. ಇವೆರಡೂ ಅನುದಾನಿತ ಸಂಸ್ಥೆಗಳಾಗಿವೆ. ಇವುಗಳಲ್ಲದೆ ಹಾವೇರಿ ಜಿಲ್ಲೆಯಲ್ಲಿ ಎಸ್‌ಟಿ ಮ್ಯಾನೇಜ್‌ಮೆಂಟ್ ಹೆಸರಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಜಿಲ್ಲೆಯ ಡಿ.ಡಿ.ಪಿ.ಐ ಕಚೇರಿಯಿಂದ ಸಿಕ್ಕ ಮಾಹಿತಿ ಪ್ರಕಾರ ರಾಣೇಬೆನ್ನೂರು ತಾಲೂಕಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ಒಟ್ಟು 13, ಹಾನಗಲ್ ತಾಲೂಕಿನಲ್ಲಿ 04, ಶಿಗ್ಗಾಂವ ತಾಲೂಕಿನಲ್ಲಿ 02, ಹಿರೇಕೆರೂರು ತಾಲೂಕಿನಲ್ಲಿ 08, ಹಾವೇರಿ ತಾಲೂಕಿನಲ್ಲಿ 06 ಸವಣೂರು ತಾಲೂಕಿನಲ್ಲಿ 02, ಮತ್ತು ಬ್ಯಾಡಗಿಯಲ್ಲಿ 01 ಇರುತ್ತವೆ. ಹಾವೇರಿ ಜಿಲ್ಲೆಯ ರಾಣೇಬೆನ್ನೂರು ತಾಲೂಕಿನ ಕರೂರಿನಲ್ಲಿ ಮಾತ್ರ ಇದೇ ಸಮುದಾಯಕ್ಕೆ ಸೇರಿದ ಖ್ಯಾತ ವಕೀಲರಾದ ಎಂ.ಎಂ.ಕರೂರ ರವರು ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿರುವುದನ್ನು ಸ್ಮರಿಸಬಹುದು. ವೈಜ್ಞಾನಿಕ, ತಾಂತ್ರಿಕ ಶಿಕ್ಷಣ, ವೃತ್ತಿ ಶಿಕ್ಷಣಗಳಿಗೆ ಇನ್ನೂ ಹೆಚ್ಚಿನ ಗಮನ ಕೊಡಬೇಕಾಗಿರುವುದು ಇಂದಿನ ಸ್ಪರ್ಧಾಯುಗದಲ್ಲಿ ಅಗತ್ಯವಾಗಿದೆ.

ಈ ಮೇಲಿನ ಸಮಸ್ಯೆಗಳಿಗೆ ಪರಿಹಾರಗಳು:

1. ಬೇಡರು ವಾಸಿಸುವ ಪ್ರದೇಶಗಳನ್ನು ಮತ್ತು ಹಟ್ಟಿಗಳನ್ನು ಸರ್ಕಾರ ಕಡ್ಡಾಯವಾಗಿ ಗ್ರಾಮಗಳನ್ನಾಗಿ ಪರಿವರ್ತಿಸಬೇಕು. ಜೊತೆಗೆ ನಾಗರೀಕ ಸೌಲಭ್ಯಗಳನ್ನು ಕಲ್ಪಿಸಿ ಕೊಡಬೇಕು.
2. ಪ್ರತಿ ಹಳ್ಳಿಯಲ್ಲೂ ಕನಿಷ್ಠ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳನ್ನಾದರೂ ಸ್ಥಾಪಿಸಿ, ಶಿಕ್ಷಣಕ್ಕೆ ಪ್ರೇರೇಪಿಸಬೇಕು.
3. ಹಳೆ ಸಂಪ್ರದಾಯ ಮತ್ತು ಆಚಾರ ವಿಚಾರಗಳಾದ ಬಾಲ್ಯವಿವಾಹ ಪದ್ಧತಿ, ಬಾಲ ಕಾರ್ಮಿಕ ಪದ್ದತಿ, ಅಸ್ಪೃಶ್ಯತೆ ಆಚರಣೆ, ದೇವದಾಸಿ ಪದ್ದತಿ, ಲಿಂಗ ತಾರತಮ್ಯ ಮುಂತಾದ ಸಮಸ್ಯೆಗಳಿಗೆ ಸರ್ಕಾರ ಪರಿಹಾರ ಒದಗಿಸಬೇಕಾಗಿದೆ. ಇದರಿಂದ ಜೀವನ ಮಟ್ಟವನ್ನು ಸುಧಾರಿಸಲು ಸಾಧ್ಯವಾಗುತ್ತದೆ.

3.6. ಹೆಳವ ಸಮುದಾಯದ ಸಾಮಾಜಿಕತೆ:

ಅಲೆಮಾರಿ, ಅರೆ ಅಲೆಮಾರಿ, ಕುಲಗುಂಪು, ಬುಡಕಟ್ಟು ಕೃಷಿ ಸಮುದಾಯ, ವೃತ್ತಿ ಗುಂಪುಗಳು ಮುಂತಾದವುಗಳಾಗಿ ಕಂಡುಬರುವ ಕರ್ನಾಟಕದ ಜನಪದ ವೃಂದಗಳಲ್ಲಿ ಹೆಳವರದೂ ಒಂದು ವಿಶಿಷ್ಟ ಸಮೂಹ. ಇವರು ಮೂಲತಃ ಅರೆ ಅಲೆಮಾರಿ, ಸಮುದಾಯದವರಾಗಿದ್ದು, ಮೊದ ಮೊದಲು ಬೇಕೆಂದಾಗ ಮಡಿಚಿ, ಕಟ್ಟಿ, ಎತ್ತಿಕೊಂಡು ಹೋಗಬಹುದಾದ ಹೆಣೆದ ಕಡ್ಡಿ ಚಾಪೆ, ಈಚಲು ಚಾಪೆಯ ಗುಡಿಸಲು, ಕಾಲಾ ನಂತರ ಬಟ್ಟೆಯ ಡೇರೆಗಳನ್ನು ಈಗ ಪ್ಲಾಸ್ಟಿಕ್ ತಾಟ್‌ಪಲ್‌ಗಳನ್ನು ತಮ್ಮ ತಾತ್ಪೂರ್ತಿಕ ವಾಸ ಸ್ಥಳಗಳನ್ನಾಗಿ ಮಾಡಿಕೊಳ್ಳುತ್ತಿದ್ದರು. ಕಾಲ ಬದಲಾದಂತೆ ಇವರು ನಾಲ್ಕಾರು ಗುಡಿಸಲು ಕಟ್ಟಿಕೊಂಡು ವಾಸಮಾಡುತ್ತಾ ಹಟ್ಟಿಗಳ ಹುಟ್ಟಿಗೆ ಕಾರಣರಾದರು. ವೃತ್ತಿಗಾಗಿ ಆಗಾಗ ತಮ್ಮ ನಿಗದಿತ ಒಕ್ಕಲು ಮನೆಗಳಿಗೆ ಹೋಗುವುದು ಮತ್ತೆ ಮರಳಿ ಹಟ್ಟಿಗಳಿಗೆ ಬರುವುದು. ಹೀಗೆ ಅಲೆಮಾರಿಯಿಂದ ಅರೆಅಲೆಮಾರಿಯಾಗಿ ಮತ್ತೆ ಕೆಲವೆಡೆ ಕೆಲಕಾಲ ಸ್ಥಿರವಾಗಿ ಬೇರೂರುತ್ತಾ ಅಲ್ಲಿಂದಲೂ ತಮ್ಮ ಗುಡಿಚಾಪೆ ಕೀಳುತ್ತಾ ಮುಂದುವರೆದ ಹೆಳವರು ಹಾಗೂ ಹೀಗೂ ವಿವಿಧ ಜನಪದ ಗುಂಪುಗಳ ಜೊತೆಗೆ ಸಹಬಾಳ್ವೆ ನಡೆಸುತ್ತಾ ಬದುಕುತ್ತ ಬಂದರು.

ಇಂದಿನ ಜಾಗತೀಕರಣದ ಯುಗದಲ್ಲಿಯೂ ಭಾರತದಲ್ಲಿ ಶ್ರಮಿಕರ ಗುಂಪಿಗೆ ಆರ್ಥಿಕ ಸ್ವಾವಲಂಬನೆ ಇಲ್ಲ. ಜೊತೆಗೆ ಅನೇಕ ಕೆಳಜಾತಿಗಳು ಇಂದಿಗೂ ತಮ್ಮ ಪಾರಂಪರಿಕ ವೃತ್ತಿಗಳಲ್ಲಿಯೇ ಬದುಕುವ ಅನಿವಾರ್ಯತೆಯನ್ನು ಅನುಭವಿಸುತ್ತಿವೆ. ಈ ಪಾರಂಪರಿಕ ವೃತ್ತಿಗಳನ್ನು ಹೆಚ್ಚಾಗಿ ಅವಲಂಬಿಸಿರುವವರು ಕೆಳ ಜಾತಿಗಳು, ಅದರಲ್ಲೂ ಅಲೆಮಾರಿಗಳು ಮತ್ತು ಅರೆ ಅಲೆಮಾರಿಗಳು, ಇಂತಹ ಸಮುದಾಯಗಳಲ್ಲಿ ಹೆಳವ ಸಮುದಾಯವು ಒಂದು. ಪ್ರಸ್ತುತ ಅಧ್ಯಯನವು ಹೆಳವರ ಸಾಮಾಜಿಕತೆಯನ್ನು ವಿವರಿಸುವುದಾಗಿದೆ.

ಸ್ಥಿರವಾಗಿ ನಿಲ್ಲಲು ಕೃಷಿಕ ಸಮುದಾಯವನ್ನು ಹೊಂದಿಕೊಂಡೇ ಜೀವನ ನಡೆಸುತ್ತಾ ಬಂದ ಹೆಳವರು ಬೇರೆ ಬೇರೆ ಸಮುದಾಯಗಳ ಕುಲಕೊಂಡಾಡಿ, ತನ್ಮೂಲಕ ಆಯಾ ಪ್ರದೇಶದ ಪ್ರಭಾವಶಾಲಿ ಮನೆತನಗಳ ವಂಶಾವಳಿಗಳನ್ನು ತಮ್ಮ ಮೌಖಿಕ ಪರಂಪರೆಯ ಮೂಲಕ, ಕಾಲಾಂತರದಲ್ಲಿ ಚಪ್ಪೋಡುಗಳಲ್ಲಿ (ಕಡತ, ಯಾದಿ, ರೇಕಾರ್ಡ) ದಾಖಲೆಗೊಳಿಸಿ ಕಾಪಾಡಿಕೊಂಡು ಬಂದ ಹಿರಿಮೆ ಹೆಳವರದ್ದಾಗಿದೆ. ಕುಲಕೊಂಡಾಡುವುದೇ ತಮ್ಮ ವೃತ್ತಿಯನ್ನಾಗಿ ಸ್ವೀಕರಿಸಿದ ಹೆಳವರು ತಮ್ಮ ಉಪ ಜೀವನಕ್ಕೆ ಈ ವೃತ್ತಿಯನ್ನೇ ಅವಲಂಬಿಸಿದ್ದು ಕಂಡು ಬರುತ್ತದೆ. ನಾಗರೀಕತೆಯ ಮತ್ತು ಆಧುನಿಕತೆಯ ಪ್ರಭಾವದ ಸಂಧರ್ಭದಲ್ಲಿಯೂ ಈ ಸಮಾಜ ತಮ್ಮ ಕುಲಕೊಂಡಾಡುವ ವೃತ್ತಿಯನ್ನು ಬಿಟ್ಟು ಕೊಟ್ಟವರಲ್ಲ.

ನೆಲೆಗಳು

ಕರ್ನಾಟಕದಲ್ಲಿ ವಾಸಿಸುತ್ತಿರುವ ಹೆಳವರು ಮೂಲತಃ ಆಂದ್ರಪ್ರದೇಶದ ಪಿಚ್ಚ ಗುಂಟಲ ಜಾತಿಗೆ ಸೇರಿದವರು. ಇವರು ಹನ್ನೊಂದು ಹನ್ನೆರಡನೆಯ ಶತಮಾನದಲ್ಲಿ ಆಂದ್ರದಿಂದ ಕನ್ನಡ ನಾಡಿಗೆ ವಲಸೆ ಬಂದಿರುತ್ತಾರೆ. ಗಡಿ ಪ್ರದೇಶಗಳಲ್ಲಿ ಇಂದಿಗೂ ಹೆಳವರು ತೆಲುಗು ಭಾಷೆ ಮಾತನಾಡುತ್ತಾರೆ. ಕನ್ನಡ ಭಾಷೆಯನ್ನಂತೂ ನಿರರ್ಗಳವಾಗಿ ಮಾತನಾಡುತ್ತಾರೆ.

ಕರ್ನಾಟಕದ ಬೀದರ, ಗುಲ್ಬರ್ಗಾ, ಬೆಳಗಾವಿ, ಕಾರವಾರ, ಬಳ್ಳಾರಿ, ಧಾರವಾಡ, ಹಾವೇರಿ, ಚಿತ್ರದುರ್ಗ, ಮೈಸೂರು, ಬೆಂಗಳೂರು, ಶಿವಮೊಗ್ಗ, ರಾಯಚೂರು ಮುಂತಾದ ಜಿಲ್ಲೆಗಳಲ್ಲಿ ಸುಮಾರು 82,000ಕ್ಕೂ ಹೆಚ್ಚು ಇರುವ ಈ ಸಮುದಾಯ ಆಂದ್ರಪ್ರದೇಶದಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಸಿಗುತ್ತಾರೆ. ತೆಲುಗಿನಲ್ಲಿ 'ಪಿಚ್ಚಕ ಗಂಟಲುವಾಳ್ಳು', 'ಮಲ್ಲ ಬತ್ಲು' ಎಂದು ಕರೆಯಲ್ಪಡುವ ಈ ಜನಾಂಗದ ಮೂಲ ಆಂದ್ರಪ್ರದೇಶದ ಪಿಚ್ಚಲಗುಂಟ ಜಾತಿಯವರಾ–ಗಿದ್ದರು. ಎರಡೂ ರಾಜ್ಯಗಳಲ್ಲಿ ಈಗಲೂ ಪ್ರಚಲಿತದಲ್ಲಿದ್ದಾರೆ. ಇವರ ಸಂಖ್ಯೆ ಕರ್ನಾಟಕದಲ್ಲಿ ಸುಮಾರು 82,000. ಇದಿಷ್ಟೇ ಜನರಿಗೆ 180ಕ್ಕೂ ಹೆಚ್ಚು ಬೆಡಗುಗಳು ಅಥವಾ ಕುಲಗಳು ಇವೆ. ಅಂದರೆ ಪ್ರತಿ 455 ಜನರಿಗೆ ಒಂದು ಕುಲ!

ಅರೆ ಅಲೆಮಾರಿ ಸಮುದಾಯಕ್ಕೆ ಸೇರಿರುವ ಹೆಳವರು ಅಲ್ಪಸ್ವಲ್ಪ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದರೂ ವೃತ್ತಿ ಭಿಕ್ಷಾಟನೆ. ಇವರು ಅಂಗವಿಕಲರಲ್ಲ. ಆದರೂ ಅಂಗವೈಕಲ್ಯತೆಗೆ ಸಮಾನವಾದ ಪದದಿಂದ ಸಂಭೋಧಿಸಲಾಗುತ್ತದೆ. ಅವರೇ ಹೆಳವರು. ಹಲವಾರು ವರ್ಷಗಳಿಂದ ರಾಜ್ಯದಲ್ಲಿ ವಾಸ ಮಾಡುತ್ತಿರುವ ಇವರು ಕೆಲವರು ಮೂಲ ಸೌಕರ್ಯಗಳಿಂದ ವಂಚಿತರಾಗಿದ್ದಾರೆ. ಇವರಿಗೆ ವಾಸಿಸಲು ಸೂರಿಲ್ಲದೆ, ಬಯಲಲ್ಲಿ ಟೆಂಟ್ ಅಥವಾ ಡೇರೆಗಳನ್ನು ಹಾಕಿಕೊಂಡು ಕಾಲ ನೂಕಬೇಕಾದ ಪರಿಸ್ಥಿತಿ ಇನ್ನೂ ಕೆಲವರು ಸರ್ಕಾರಿ ಸೌಲತ್ತುಗಳನ್ನು ಪಡೆಯುವುದರ ಮೂಲಕ ಉತ್ತಮ ಸ್ಥಿತಿಯಲ್ಲಿರುವುದು ಅಧ್ಯಯನದ ಮೂಲಕ ತಿಳಿದು ಬಂದಿದೆ. ಈ ಸಮುದಾಯಕ್ಕೆ ಸೇರಿದ ಕೆಲವರು ಉತ್ತಮ ಹುದ್ದೆಗಳಲ್ಲಿ ಅಂದರೆ ಡಾಕ್ಟರ್, ಕೆ.ಇ.ಬಿ. ಇಂಜಿನಿಯರ್, ಅಸಿಸ್ಟೆಂಟ್ ರಿಜಿಸ್ಟ್ರಾರ್, ನ್ಯಾಯವಾದಿಗಳು, ಶಿಕ್ಷಕರು ಇನ್ನಿತರ ನೌಕರಿಗಳಲ್ಲಿರುವುದು ಕ್ಷೇತ್ರ ಕಾರ್ಯಕ್ಕೆ ಹೋದಾಗ ಮುಖಂಡರುಗಳ ಮೂಲಕ ತಿಳಿದು ಬಂತು. ಆದರೆ ಇಂತಹವರ ಸಂಖ್ಯೆ ತುಂಬಾ ಕಡಿಮೆ. ಜೊತೆಗೆ ಸಾಮಾಜಿಕವಾಗಿ ತೀರ ಹಿಂದುಳಿದಿರುವ ಈ ಸಮುದಾಯಕ್ಕೆ ರಾಜಕೀಯ ಪ್ರಾತಿನಿಧ್ಯವೂ ಮರೀಚಿಕೆಯಾಗಿದೆ.

ಹಾವೇರಿ ಜಿಲ್ಲೆಯಲ್ಲಿನ ಬೇರೆ ಬೇರೆ ತಾಲೂಕುಗಳಲ್ಲಿ ಬರುವ ರಾಣೇಬೆನ್ನೂರು ನಗರ, ಕಾಗಿನೆಲೆ, ಹೊಸರಿತ್ತಿ, ನೆಗಳೂರು, ಸೋಮಸಾಗರ, ನರೇಗಲ್, ಮಾಸನಕಟ್ಟಿ, ಮುಗುಳಿಕಟ್ಟಿ, ತೊರೂರು, ತೊಂಡೂರು, ಹೊಸಳ್ಳಿಗಳಲ್ಲಿ ಸುಮಾರು 173 ಕುಟುಂಬಗಳಿದ್ದು ಒಟ್ಟು 1379 ಮಂದಿ ಇರುವುದು ಸಮೀಕ್ಷೆಯ ಮೂಲಕ ತಿಳಿದು ಬರುತ್ತದೆ. (ಕೋಷ್ಟಕ 9ನ್ನು ಗಮನಿಸಬಹುದು) ಇವರಲ್ಲಿ ಇನ್ನೂ ಕೆಲವು ಕುಟುಂಬಗಳು ಭಿಕ್ಷಾಟನೆಯನ್ನು ಒಕ್ಕಲಿಗರ

ಅಥವಾ ಕೃಷಿಕರ ಮನೆಯಲ್ಲಿ ಭಿಕ್ಷೆ ಎತ್ತುವ ಕಾಯಕವನ್ನು ಇಂದಿಗೂ ಮುಂದುವರೆಸಿಕೊಂಡು ಬಂದಿವೆ. ಎತ್ತಿನ ಬಂಡಿ ಮೇಲೆ ಸವಾರಿ ಮಾಡುತ್ತಾ ಇಡೀ ಕುಟುಂಬದೊಂದಿಗೆ ಊರಿಂದ ಊರಿಗೆ ಅಲೆಯುತ್ತಾ ಬಂದಿದ್ದಾ ಈ ಸಮುದಾಯವನ್ನು ಅಲೆಮಾರಿಗಳೆಂದು ಪರಿಗಣಿಸಲಾಗಿದೆ. ಇವರನ್ನು ಬುಡಕಟ್ಟು ವರ್ಗದವರೆಂದು ಹೇಳಲಾಗುತ್ತಿದ್ದರೂ ಕಾಡುಮೇಡುಗಳಲ್ಲಿ ಜೀವಿಸುವುದಿಲ್ಲ. ಜನವಸತಿ ಪ್ರದೇಶಗಳಲ್ಲಿ ಜನರೊಂದಿಗೆ ಬೆರೆತು ಜೀವನ ಸಾಗಿಸುತ್ತಿದ್ದಾರೆ. ಜೊತೆಗೆ ಒಂದೇ ಊರಿನಲ್ಲಿ ನೆಲೆ ನಿಂತಿದ್ದಾರೆ. ಆ ಊರಿನಿಂದಲೇ ತಮ್ಮ ಭಿಕ್ಷಾಟನೆ ಕಾಯಕವನ್ನು ನಡೆಸುತ್ತಿದ್ದಾರೆ.


ಹಾವೇರಿ ಜಿಲ್ಲೆಯ ಹೆಳವ ಸಮುದಾಯದ ನೆಲೆಗಳು



ಕೋಷ್ಟಕ–9

ಹಾವೇರಿ ಜಿಲ್ಲೆಯ ಹೆಳವ ಸಮುದಾಯದ ತಾಲೂಕುವಾರು ಲಿಂಗಾವಾರು ಜನಸಂಖ್ಯೆ

ಕ್ರಸಂ	ತಾಲುಕು	ಗ್ರಾಮ/ನಗರ	ಒಟ್ಟು ಮನೆಗಳು	ಜನಸಂಖ್ಯೆ		
				ಗಂಡು	ಹೆಣ್ಣು	ಒಟ್ಟು
I	II	III	IV	V	VI	VII
01	ರಾಣೇಬೆನ್ನೂರು	ರಾಣೇಬೆನ್ನೂರು	65	280	240	520
02	ಬ್ಯಾಡಗಿ	ಕಾಗಿನೆಲೆ	04	10	08	18
03	ಹಾವೇರಿ	ಹೊಸರಿತ್ತಿ	02	07	05	12
04	ಹಾವೇರಿ	ನೆಗಲೂರು	02	04	02	06
05	ಹಾನಗಲ್	ನರೇಗಲ್	01	02	02	04
06	ಹಾನಗಲ್	ಮಾಸನಕಟ್ಟೆ	08	22	20	42
07	ಹಾನಗಲ್	ಸೋಮಸಾಗರ	68	360	320	680
08	ಶಿಗ್ಗಾಂವ	ಮುಗಳೀಕಟ್ಟೆ	08	26	20	46
09	ಶಿಗ್ಗಾಂವ	ತೊರೂರು	12	23	20	43
10	ಸವಣೂರು	ತೊಂಡೂರು ಹೊಸಳ್ಳಿ	03	06	02	08
		ಒಟ್ಟು	173	740	639	1379



ಹೆಳವ ಸಮುದಾಯದ ಹಿನ್ನೆಲೆ:

ಕರ್ನಾಟಕದಲ್ಲಿ ಈಗಾಗಲೇ ಬುಡಕಟ್ಟುಗಳೆಂದು ಘೋಷಿಸಿರುವ ಬುಡಕಟ್ಟುಗಳ ಸಾಮಾನ್ಯವಾದ ಎಲ್ಲಾ ಲಕ್ಷಣಗಳು ಇವರಲ್ಲಿರುವುದು ಕಂಡು ಬರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಹೆಳವ ಎಂದರೆ ಸ್ವಾಧೀನ ಕಳೆದುಕೊಂಡ ಕಾಲನ್ನು ಹೊಂದಿರುವವ ಎಂದರ್ಥ. ಈ ಸಮುದಾಯಕ್ಕೆ ಹೆಳವ ಎಂಬ ಹೆಸರು ಬಂದಿದ್ದಕ್ಕೆ ಹಲವಾರು ಐತಿಹ್ಯಗಳಿವೆ. ಪುರಾಣಗಳಲ್ಲಿ ಉಲ್ಲೇಖವಾಗಿರುವಂತೆ ವ್ಯವಸಾಯ ಮಾಡುವ ಒಂದು ಕುಟುಂಬದಲ್ಲಿ ಆರು ಮಂದಿ ಗಂಡು ಮಕ್ಕಳಿರುತ್ತಾರೆ. ಅದರಲ್ಲಿ ಒಬ್ಬನಿಗೆ ಕಾಲು ಊನವಾಗಿರುತ್ತದೆ. ಆದರೆ, ಉಳಿದ ಐವರಿಗೆ ಈತನನ್ನು ಕಂಡರೆ ಆಗಿ ಬರುತ್ತಿರಲಿಲ್ಲ. ಏಕೆಂದರೆ ನಾವೆಲ್ಲಾ ದುಡಿದು ತಂದಿದ್ದನ್ನು ಈತ ತಿನ್ನುತ್ತಾನೆ ಎಂಬ ಅಲಕ್ಷ್ಯ ಅವರಿಗಿತ್ತು. ಆದರೆ, ತಾಯಿಗೆ ಮಾತ್ರ ಈ ಊನ ಮಗನನ್ನು ಕಂಡರೆ ಎಲ್ಲಿಲ್ಲದ ಅಕ್ಕರೆ. ಇದರಿಂದ ಆಕ್ರೋಶಗೊಂಡ ಐವರು ಅಣ್ಣತಮ್ಮಂದಿರು ಕುಂಟ ಸೋದರನನ್ನು ಹತ್ಯೆ ಮಾಡಲು ಮುಂದಾಗುತ್ತಾರೆ. ಆದರೆ, ಮನೆಯಲ್ಲಿ ಸಾಕಿದ್ದ ಬಸವ (ಎತ್ತು) ಪ್ರತಿ ಸಂದರ್ಭದಲ್ಲೂ ಕುಂಟನ ನೆರವಿಗೆ ಬರುತ್ತದೆ.

ಕಡೆಗೊಂದು ದಿನ ಆಸ್ತಿ ಪಾಲು ಮಾಡುವ ಸಂದರ್ಭದಲ್ಲಿ ಮನೆಯ ಹಿರಿಯರೆಲ್ಲ ಮಕ್ಕಳನ್ನು ಕೂರಿಸಿ ಐವರು ಮಕ್ಕಳಿಗೆ ಆಸ್ತಿ ಪಾಲು ಮಾಡುತ್ತಾರೆ. ಕುಂಟನಿಗೆ ಸ್ವಂತಕ್ಕೆ ದುಡಿದು ತಿನ್ನುವ ಶಕ್ತಿ ಇಲ್ಲ ಎಂಬ ಕಾರಣಕ್ಕೆ ಆತನ ಮುದ್ದಿನ ಎತ್ತು ಮತ್ತು ಗಂಟೆಯನ್ನು ನೀಡುತ್ತಾರೆ. ಈತ ಪ್ರತಿ ವರ್ಷ ಸುಗ್ಗಿ ಕಾಲದಲ್ಲಿ ಎತ್ತಿನ ಮೇಲೆ ಸವಾರಿ ಮಾಡಿ ಗಂಟೆಯನ್ನು ಬಾರಿಸುತ್ತಾ ಐವರು ಸೋದರರ ಮನೆಗೆ ಹೋಗಿ ತನ್ನ ಪಾಲಿನ ಕಾಳು ಕಡ್ಡಿಯನ್ನು ಭಿಕ್ಷಾ ರೂಪದಲ್ಲಿ ತಂದು ತಿನ್ನಬೇಕೆಂಬ ಷರತ್ತು ವಿಧಿಸುತ್ತಾರೆ. ಕಾಲಕ್ರಮೇಣ ಈ ಕುಂಟನ ವಂಶವೃಕ್ಷ ಬೆಳೆಯಿತಾದರೂ ಕುಟುಂಬದಲ್ಲಿ ಯಾರು ಊನಗೊಂಡವರಿರಲಿಲ್ಲ. ಆದರೆ ಅಪ್ಪ ಮಾಡಿದ ಭಿಕ್ಷಾಟನೆಯನ್ನು ಮಕ್ಕಳು, ಅವರ ಮಕ್ಕಳು ಮುಂದುವರೆಸುತ್ತಾ ಬಂದರು. ಇದು ಮುಂದೊಂದು ದಿನ ದೊಡ್ಡ ಸಂಸಾರವಾಗಿ ರೂಪುಗೊಂಡಿದೆ. ಇದೇ ಕಾರಣಕ್ಕಾಗಿ ಈ ಕುಟುಂಬ ಅಥವಾ ವಂಶವನ್ನು 'ಹೆಳವ' ಎಂದು ಕರೆಯಲಾಯಿತು ಎಂಬ ಪ್ರತೀತಿ ಪುರಾಣಗಳಲ್ಲಿ ದಾಖಲಾಗಿದೆ.

ಹೆಳವ ಸಮುದಾಯದಲ್ಲಿ ಮೂರು ಪ್ರಮುಖ ಪಂಗಡಗಳಿವೆ. ಅವುಗಳೆಂದರೆ ಎತ್ತಿನ ಹೆಳವರು, ಗಂಟೆ ಹೆಳವರು ಮತ್ತು ಚಾಪೆ ಹೆಳವರು, ಎತ್ತಿನ ಮತ್ತು ಗಂಟೆ ಹೆಳವರ ಮಧ್ಯೆ ವೈವಾಹಿಕ ಸಂಬಂಧಗಳು ಇವೆಯಾದರೂ ಈ ಪಂಗಡಗಳು ಚಾಪೆ ಹೆಳವರ ಜೊತೆ ಯಾವುದೇ ಸಂಬಂಧ ಇಟ್ಟುಕೊಳ್ಳುವುದಿಲ್ಲ. ನಾಡಿನ ಬೇರೆ, ಬೇರೆ ದಿಕ್ಕುಗಳಲ್ಲಿ ಹರಿದು ಹಂಚಿಹೋದ ಈ ಜನಾಂಗ ಎಲ್ಲೋ ಒಂದು ಕಡೆ ಬೆಟ್ಟಿಯಾದಾಗ ವರ-ಕನ್ಯೆಯ ವಿಷಯ

ಮಾತನಾಡುತ್ತಾರೆ. ಸರಿ ಹೊಂದಿದರೆ ನವೆಂಬರ್ ತಿಂಗಳಲ್ಲಿ ಇಂಥ ಕಡೆ ಮದುವೆ ಮಾಡೋಣ ಎಂದು ನಿರ್ಧರಿಸುತ್ತಾರೆ. ವರದಕ್ಷಿಣೆ ಮಾತು ಇವರ ಹತ್ತಿರ ಸುಳಿಯುವುದೇ ಇಲ್ಲ.

ಇವರನ್ನು 'ಕುಲಕೊಂಡಾಡುವರೂ' ಎಂದೂ ಕರೆಯಲಾಗುತ್ತದೆ. ಏಕೆಂದರೆ, ಕೈಲೊಂದು ದಪ್ಪನೆಯ ಪುಸ್ತಕ, ಆ ಪುಸ್ತಕದಲ್ಲಿ ಭಿಕ್ಷಾಟನೆಗೆ ಹೋಗುವ ಒಕ್ಕಲುಗಳ ವಂಶಾವಳಿಯನ್ನು ನಮೂದಿಸಿರುತ್ತಾರೆ. ಅದನ್ನೇ ಭಿಕ್ಷಾಟನೆ ಸಂದರ್ಭದಲ್ಲಿ ಹೇಳಿ ಭಿಕ್ಷೆ ನೀಡುವಂತೆ ಮನವೊಲಿಸುತ್ತಾರೆ. ಈ ಪುಸ್ತಕಕ್ಕೆ 'ಚಿಪ್ಪೋಡು' ಎನ್ನಲಾಗುತ್ತದೆ. ಅನಾದಿ ಕಾಲದಿಂದಲೂ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿಯುತ್ತಾ ಬಂದಿರುವ ಹೆಳವರ ಪರಿಸ್ಥಿತಿಯಲ್ಲಿ ಪ್ರಸ್ತುತ ಯಾವುದೇ ಬದಲಾವಣೆ ಕಾಣಲು ಸಾಧ್ಯವಾಗಿಲ್ಲ. ಕೃಷಿಯನ್ನು ಅವಲಂಬಿಸಿದ ಒಕ್ಕಲಿಗರಲ್ಲಿ ಬಹುತೇಕ ಮಂದಿ ವೃತ್ತಿಯನ್ನು ಬಿಟ್ಟು ನಗರ ಪ್ರದೇಶಗಳಿಗೆ ವಲಸೆ ಹೋಗಿದ್ದಾರೆ. ಇಲ್ಲವೆ ಪರ್ಯಾಯ ಉದ್ಯೋಗ ಮಾಡುತ್ತಿದ್ದಾರೆ. ಹೀಗಾಗಿ ಈ ಒಕ್ಕಲುಗಳನ್ನು ನಂಬಿದ್ದ ಹೆಳವರಿಗೆ ಭಿಕ್ಷೆ ಇಲ್ಲದಂತಾಗಿದೆ. ಹೀಗಾಗಿ ಭಿಕ್ಷಾಟನೆಯನ್ನು ಕೈ ಬಿಟ್ಟಿರುವ ಬಹುತೇಕ ಕುಟುಂಬಗಳು ಕೂಲಿನಾಲಿ ಬದುಕು ಸವೆಸುವಂತಹ ದುಸ್ಥಿತಿ ಬಂದೊದಗಿದೆ. ಆದರೆ, ಉತ್ತರ ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಬೆರಳೆಣಿಕೆಯಷ್ಟು ಕುಟುಂಬಗಳು ಮೂಲ ವೃತ್ತಿಯನ್ನು ಬಿಡದೇ ಮುಂದುವರೆಸಿಕೊಂಡು ಬಂದಿದೆ. ಇನ್ನೂ ಕೆಲವರು ಅಲ್ಪಸ್ವಲ್ಪ ಕೃಷಿ ಭೂಮಿ ಹೊಂದಿ ಕೃಷಿಯತ್ತ ವಾಲಿದ್ದರೆ, ಮತ್ತೆ ಕೆಲವರು ಶಿಕ್ಷಣ ಪಡೆದು ಉನ್ನತ ಹುದ್ದೆಗಳಲ್ಲಿರುವುದು ಕಂಡು ಬರುತ್ತದೆ. ಆದರೆ ಸಾಮಾಜಿಕವಾಗಿ ತೀರ ಹಿಂದುಳಿದಿರುವ ಇವರಿಗೆ ರಾಜಕೀಯ ಪ್ರಾತಿನಿಧ್ಯ ಎಂಬುದು ಮರೀಚಿಕೆಯಾಗಿದೆ.

ಯಾರು ಈ ಹೆಳವರು?

ಬಿಳಿ ದೋತರ, ಬಿಳಿ ಅಂಗಿ, ತಲೆಗೆ ಪೇಟ, ಇಲ್ಲವೆ ಟವಲ್‌ನಿಂದ ಮಾಡಿದ ಮುಂಡಾಸು, ಕೆಂಪು ಶಾಲಿನಲ್ಲಿ ವಂಶಾವಳಿಯ ಕಡತಗಳನ್ನಿಟ್ಟುಕೊಂಡು ಯಜಮಾನರ ಮನೆಯ ಬಾಗಿಲಲ್ಲಿ ನಿಂತು ಏನ್ರೀ ಸಾವುಕಾರ...ನಾವು ಬಂದ್ ಹೋಗಿ ಬಾಳ್ ದಿನ ಆತ...ಎಂದು ಮನೆಯ ಆಗು ಹೋಗುಗಳ ಬಗ್ಗೆ ವಿಚಾರಿಸುತ್ತಲೇ ವಂಶಾವಳಿಯ ಕಡತ ಬಿಚ್ಚಿ ಮಾಹಿತಿ ಹೇಳಿ,

ಕುಲವಂದು ಕುಲವಯ್ಯ
ನಿನ್ನ ಕುಲವನ್ನು ಹೊಗಳೇನು
ನಮ್ಮ ಹಾಲು, ಅನ್ನ ಇಟ್ಟಮನಿ
ಹಾಲು ಸಾಗರವಾಗಲಿ, ಬೆಣ್ಣೆ ಬೆಟ್ಟವಾಗಲಿ
ಗಂಡು ಮಕ್ಕಳು ಘನವಂತರಾಗಲಿ

ಹೀಗೆ ತಮ್ಮದೇ ಆದ ವಿಶಿಷ್ಟ ದಾಟಿಯಲ್ಲಿ; ಕುಲವನ್ನು ಕೀರ್ತಿಸುತ್ತಾ ವಂಶಾವಳಿಯನ್ನು ದಾಖಲಿಸುತ್ತಾ ಕುಲವನ್ನು ಹೊಗಳುವ ವೃತ್ತಿಯಿಂದಲೇ ಜೀವನ ನಡೆಸುವ ಹೆಳವರು ಇಲ್ಲವೇ

'ಹೆಳವ' ಜನಾಂಗ ವಿಶಿಷ್ಟವಾದದ್ದು. ಈ ಬಗೆಯಾಗಿ 'ಕುಲಕೊಂಡಾಡುವ' 'ಸತ್ತು ಕೆಟ್ಟೋರನ್ನು ಹೊಗಳುವ', 'ವಂಶದ ವೃತ್ತಾಂತ ಹೇಳುವ', 'ಹರಕೆ ನುಡಿಯುವ' ಜನ ಯಾರು? ಗಂಟೆಯ ಕಿಣಿ ಕಿಣಿ ನಾದಕ್ಕೆ ದನಿಗೂಡಿಸಿ ಹಾಡಿ ತಮ್ಮ ಕುಲಗಳ ಮನಸ್ಸನ್ನು ಸೂರೆಗೊಂಡು 'ಪಾಲು' ಕೇಳುವ ಹಕ್ಕು ಪಡೆದ ಈ ವಿಚಿತ್ರ ಜನ ಯಾರು? ಎಲ್ಲಿಂದ ಬಂದರು? ಏಕೆ ಬಂದರು? ಇವರು ನಿಜವಾಗಿಯೂ ಹೆಳವರೇ? ಇಲ್ಲದಿದ್ದರೆ 'ಹೆಳವ' ಎಂದೇಕೆ ಕರೆದುಕೊಳ್ಳುತ್ತಾರೆ?

'ಹೆಳವ' ಎಂಬ ಪದದ ಬಗ್ಗೆ ಬರೆಯುತ್ತಾ E. Thurston ಅವರು ತಮ್ಮ ಗ್ರಂಥದಲ್ಲಿ "The Caste and Tribes of Southern India" ಗ್ರಂಥದಲ್ಲಿ ಹೀಗೆ ಹೇಳುತ್ತಾರೆ. 'Helava, which means a lame fellow is the term applied to a class of beggars are supposed to beg only from Okkaligas. They are found distributed all over the (Mysore) state.'[33]ಇವರ ಅಭಿಪ್ರಾಯದಂತೆ ಹೆಳವರ ವೃತ್ತಿ ಏನೆಂಬುದು ತಿಳಿಯುತ್ತದೆ.

ಹೆಳವರ ಪೌರಾಣಿಕ ಮತ್ತು ಐತಿಹಾಸಿಕ ಹಿನ್ನೆಲೆ:

ಶಿವನೊಡ್ಡೋಲಗದಲ್ಲಿ ಮೂವತ್ಮೂರು ಕೋಟಿ ದೇವಾದಿದೇವತೆಗಳೆಲ್ಲರೂ ಸಭೆ ಸೇರಿದ್ದರು. ಸಕಲ ವೈಭವದಿಂದ ಕೂಡಿದ ಈ ಸಭೆಯಲ್ಲಿ 'ಶೃಂಗಿ' ಹಾಗೂ 'ಭಂಗಿ'ಯರು ಅಷ್ಟೇ ಪ್ರಮುಖರು, ಶೃಂಗಿಯು ಶಿವ-ಪಾರ್ವತಿಯರನ್ನು ಸಮಾನವಾಗಿ ಭಕ್ತಿ ಗೌರವದಿಂದ ಕೈ ಮುಗಿಯುತ್ತಿದ್ದ, ಆದರೆ ಭೃಂಗೇಶ್ವರನ ಭಕ್ತಿ ಶಿವನೊಬ್ಬನಿಗೆ ಮೀಸಲು. ಈ ಸೋಜಿಗದ ಸಂಗತಿಯನ್ನರಿತ ಪಾರ್ವತಿಯು ಭೃಂಗಿಯನ್ನುದ್ದೇಶಿಸಿ, ಶಿವನೊಬ್ಬನಿಗೆ ನಮಸ್ಕಾರ ಮಾಡುವಿರಿ. ನನಗೇಕೆ ನಮಸ್ಕರಿಸುವುದಿಲ್ಲ ಎಂದು ಪ್ರಶ್ನಿಸಿದಳು. ತಾಯಿ, ನನ್ನ ಪರಮದೈವ ಶಿವನೊಬ್ಬನೇ, ಆದ್ದರಿಂದ ನನ್ನ ಭಕ್ತಿ – ಗೌರವ ಶಿವನಿಗೆ ಮೀಸಲಿಟ್ಟಿರುವೆ ಎಂದನು. ಅವನ ಮರುತ್ತರ ಕೇಳಿ ಪಾರ್ವತಿಯ ಕುಪಿತಳಾಗಿ ಎಲೇ ಭೃಂಗೇಶ್ವರ ನಿನ್ನ ಕೈಕಾಲು ಊನವಾಗಲಿ ಎಂದು ಶಾಪ ಕೊಟ್ಟಳು. ಭೃಂಗಿಯ ದೇಹದಲ್ಲಿರುವ ರಕ್ತ ಮಾಂಸಗಳೆಲ್ಲವನ್ನೂ ದೃಷ್ಟಿ ಮಾತ್ರದಿಂದಲೇ ಹೀರಿಕೊಂಡಳು. ಭೃಂಗೇಶ್ವರನ ಎಲುಬಿನ ಹಂದರವು ಆಕಾಶಕ್ಕೆ ಹಾರಿತು. ಇದನ್ನು ಗಮನಿಸಿದ ಶಿವನು ಎಂಥ ಅಸಹ್ಯ ಕೆಲಸ ಮಾಡಿರುವಿ ಎಂದು ಕೋಪದಿಂದ ಗದರಿಸಿದನು. ಶಿವ-ಪಾರ್ವತಿಯರಲ್ಲಿ ವಾಗ್ವಾದ ನಡೆಯಿತು. ಭೃಂಗೇಶ್ವರ ನನ್ನ ಮಗ, ಅವನ ಭಕ್ತಿ ಗೌರವಕ್ಕೆ ಮೆಚ್ಚಿರುವೆನೆಂದು ಹೇಳಿ, ಭೃಂಗೇಶ್ವರನ ಎಲುಬಿನ ಹಂದರಕ್ಕೆ ಶಿವನು ತ್ರಿಶೂಲ ಆಧಾರವಾಗಿಟ್ಟನು. ಕೊನೆಗೆ ಪಾರ್ವತಿಯು ಸೋತನೆಂದು ಶಿವನಿಗೆ ಶರಣಾದಳು.

ಭೃಂಗೇಶ್ವರನ ಎಲುಬಿನ ಹಂದರಕ್ಕೆ ಪಾರ್ವತಿಯು ಮತ್ತೆ ರಕ್ತ ಮಾಂಸವನ್ನು ಧಾರೆಯೆರೆದಳು. ಭೃಂಗೇಶ್ವರನಿಗೆ ನಂದಿ ಮತ್ತು ಲಿಂಗ ಮುದ್ರೆಯನ್ನು ಕೊಟ್ಟು ಸೂರ್ಯ ಚಂದ್ರ

ಇರುವರೆಗೆ ನಿನ್ನ ಕೀರ್ತಿ ಚಿರಾಯುವಾಗಲಿ, ಜಾತಿ, ಮತ, ಭೇದವನ್ನು ಅರಿತು ಕುಲಗೋತ್ರಗಳ ಆಗು ಹೋಗುಗಳನ್ನು ಹೇಳುತ್ತಾ ಅವರಿಂದ ದವಸ ಧಾನ್ಯಗಳನ್ನು ಪಡೆದು ಜೀವನ ಸಾಗಿಸು ಎಂದು ಆಶೀರ್ವದಿಸಿ ಮಾಯವಾದರು.

ಮುಂದೆ ಈ ಭೃಂಗೇಶ್ವರನಿಂದ ಹೆಳವ ಪರಂಪರೆ ಬೆಳೆಯಿತು. ಕಾರಣ ಭೃಂಗೇಶ್ವರ ಹೆಳವರ ಮೂಲ ಪುರುಷನೆಂದು ಐತಿಹ್ಯ ಇದೆ. ಈ ಕಥೆಗಳಿಂದ ಹೆಳವರ ಮೂಲ ಪುರುಷ ಕುಂಟನಿದ್ದನೆಂದು ತಿಳಿದು ಬರುತ್ತದೆ. (ಡಾ. ಹೆಚ್.ಕೆ. ಪವಾರ್. ಹೆಳವರ ಸಂಸ್ಕೃತಿ, ಉಪಸಂಸ್ಕೃತಿ ಅಧ್ಯಯನ ಮಾಲೆ. ಕನ್ನಡ ಸಾಹಿತ್ಯ ಅಕಾಡೆಮಿ ಬೆಂಗಳೂರು)

ಸಮುದಾಯದ ಕುರಿತು ವಿದ್ವಾಂಸರ ಅಭಿಪ್ರಾಯಗಳು:

1930ರಲ್ಲಿ ಮೈಸೂರಿನ ಆದಿವಾಸಿಗಳ ಮತ್ತು ಜಾತಿ ಸಮುದಾಯಗಳ ಅಧ್ಯಯನ ಮಾಡಿದ ಎಚ್.ವಿ. ನಂಜುಡಯ್ಯ ಮತ್ತು ಅನಂತಕೃಷ್ಣ ಅಯ್ಯರ್ ಅವರು ಈ ಕೆಳಗಿನಂತೆ ಅಭಿಪ್ರಾಯಪಡುತ್ತಾರೆ. 'ಹೆಳವ ಎಂದರೆ ಕಾಲಿಲ್ಲದವನು ಎಂದರ್ಥ. ಹೆಳವರೆಂದರೆ ಒಂದು ಭಿಕ್ಷುಕ ಜನವರ್ಗ. ಇವರು ಒಕ್ಕಲಿಗರ ಮನೆಯಲ್ಲಿ ಮಾತ್ರ ಭಿಕ್ಷೆ ಬೇಡುತ್ತಾರೆ. ಇವರು ರಾಜ್ಯದ ಎಲ್ಲಾ ಕಡೆ ವಾಸಿಸುತ್ತಿದ್ದಾರೆ.'[34]

ನಿಂಗಣ್ಣ ಸಣ್ಣಕ್ಕಿಯವರು ಹೆಳವರನ್ನು ಕುರಿತು ಈ ರೀತಿ ಅಭಿಪ್ರಾಯಪಡುತ್ತಾರೆ. 'ಹೆಳವರಿಗೆ ಹೇಳುವವರು ಎಂಬುದು ಜಾನಪದರ ನಾಲಿಗೆಯ ಮೇಲಿರುವ ಅರ್ಥ ಜೀವಂತವಾಗಿದೆ. ಏನನ್ನು ಹೇಳುವವರು? ಜನಾಂಗಗಳ ಕಥೆಗಳನ್ನು ಹೇಳುವವರು, ತಿಳಿಸುವವರು ಎಂಬುದು ಜನಮನಗಳಲ್ಲಿ ಗೊತ್ತಿರದ ವಿಷಯವಾಗಿದೆ.'[35] ಎನ್ನುತ್ತಾರೆ. ಪಿ.ಕೆ. ರಾಜಶೇಖರ್ ಅವರ ವಿವರಣೆ ಈ ರೀತಿ ಇದೆ. 'ಗಂಟೆ ಬಾರಿಸಿಕೊಂಡು ಕಿಣಿ ಕಿಣಿ ನಾದ ಮಾಡುತ್ತಾ ಕೊರಳಿನಲ್ಲೊಂದು ಭಾರಿ ಜೋಳಿಗೆಯನ್ನು ಹೊತ್ತು ದವಸ ಧಾನ್ಯಗಳ ಹೊರೆಯನ್ನು ಬಸವನ ಹೆಗಲಲ್ಲಿ ಹಾಕಿ ಮನೆ ಮನೆಯ ಮುಂದೆ ನಿಂತು ಕುಲ ಪುರಾಣಗಳನ್ನು ಹೇಳುವವರು ಹೆಳವರು.'[36] ಕೆ.ಎಸ್. ಸಿಂಗ್‌ರವರು ತಮ್ಮ "Indias Communities' ಗ್ರಂಥದಲ್ಲಿ ಹೀಗೆ ವಿವರಿಸುತ್ತಾರೆ. 'ಹೆಳವ ಎಂಬ ಕರ್ನಾಟಕದ ಈ ಸಮುದಾಯವನ್ನು ಆಂದ್ರ ಪ್ರದೇಶದಲ್ಲಿ 'ಪಿಚ್ಚಗುಂಟ್ಲ' ಎಂದು ಕರೆದರೆ, ಮಹಾರಾಷ್ಟ್ರದಲ್ಲಿ 'ಹೆಳ್ವಿ' ಎಂದು ಕರೆಯಲಾಗುತ್ತದೆ. ಹೆಳವ ಎಂದರೆ ಕುಂಟ ವ್ಯಕ್ತಿ ಎಂದು ಅರ್ಥ.'[37]

1993ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಪ್ರಕಟವಾದ 'ಹೆಳವರ ಸಂಸ್ಕೃತಿ' ಎಂಬ ಪುಸ್ತಕದಲ್ಲಿ ಹರಿಲಾಲ್ ಕೆ. ಪವಾರ್ ಅವರು 'ಕರ್ನಾಟಕದ ಜನಪದ ವೃಂದಗಳಲ್ಲಿ ಹೆಳವರದೂ ಒಂದು ವಿಶಿಷ್ಟ ಸಮೂಹ. ಸ್ಥಿರ ವಸತಿ ಕಲ್ಪನೆಯ ಕೃಷಿಕ ಗುಂಪನ್ನು ಹೊಂದಿಕೊಂಡೇ, ಜೀವನ ನಡೆಸುತ್ತಾ ಬಂದ ಹೆಳವರದು ಒಂದು ವಿಶಿಷ್ಟ ಸಮೂಹ. ಸ್ಥಿರ ವಸತಿ ಕಲ್ಪನೆಯ ಕೃಷಿಕ ಗುಂಪನ್ನು ಹೊಂದಿಕೊಂಡೇ, ಜೀವನ ನಡೆಸುತ್ತಾ ಬಂದ ಹೆಳವರು

ವಿವಿಧ ಪ್ರದೇಶದ ಪ್ರಭಾವಶಾಲಿ ಮನೆತನಗಳ ವಂಶಾವಳಿಗಳನ್ನು ತಮ್ಮ ಮೌಖಿಕ ಪರಂಪರೆಯ ಮೂಲಕ, ಕಾಲಾನಂತರ ಚಿಪ್ಪೋಡುಗಳಲ್ಲಿ ದಾಖಲೆಗೊಳಿಸಿ ಕಾಪಾಡಿಕೊಂಡು ಬಂದ ಹಿರಿಮೆ ಇವರದಾಗಿದೆ. ಕುಲಕೊಂಡಾಡುವುದನ್ನೆ ತಮ್ಮ ಮುಖ್ಯ ವೃತ್ತಿಯನ್ನಾಗಿ ಸ್ವೀಕರಿಸಿದ ಹೆಳವರು, ತಮ್ಮ ಉಪಜೀವನಕ್ಕೆ ಈ ವೃತ್ತಿಯನ್ನೇ ಹೆಚ್ಚಾಗಿ ಅವಲಂಬಿಸಿದ್ದು ಕಂಡು ಬರುತ್ತದೆ.'[38] ಎಂದು ವಿವರಿಸುತ್ತಾರೆ.

'ಮೈಸೂರು ಸಂಸ್ಥಾನ ಮಹಾರಾಜರ ಕಾಲದಲ್ಲಿ ಪ್ರತಿನಿತ್ಯ ಅರಮನೆ ಎದುರು ಪ್ರಾತಃ ಕಾಲದಲ್ಲಿ ಎತ್ತಿನ ಮೇಲೆ ಕುಳಿತು 'ಹೆಳವ' ಹೊಗಳುತ್ತಿದ್ದ ಪರಿಪಾಠವಿತ್ತು. ಇದಕ್ಕೆ ಸಾಕ್ಷಿ ಎಂಬಂತೆ ಅರಮನೆಯ ಒಳಭಾಗದಲ್ಲಿ ಇರುವ ತೈಲವರ್ಣದ ಚಿತ್ರಗಳಲ್ಲಿ ಪ್ರಪ್ರಥಮ ಇರುವುದು ಎತ್ತಿನ ಮೇಲೆ ಕುಳಿತ ಹೆಳವನದು' ಎಂದು ಧಾರವಾಡ ಜಿಲ್ಲಾ ಹೆಳವ ಜನಾಂಗ ಸಂಘ (ರಿ) ರಾಣೇಬೆನ್ನೂರು ಇದರ ಅಧ್ಯಕ್ಷರು ಮತ್ತು ರಾಜ್ಯ ಹಾಗೂ ರಾಷ್ಟ್ರಪ್ರಶಸ್ತಿ ಪುರಸ್ಕೃತರಾದ ಎಂ.ಬಿ. ಹುಲಗಣ್ಣನವರ ಇವರು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ. ಡಾ. ಶಂ. ಭಾ. ಜೋಶಿಯವರು ಹೇಳುತ್ತಾರೆ. ನಮ್ಮ ನಾಡಿನ ಇತಿಹಾಸ, ಪರಂಪರೆ, ಕಥೆ, ಬಿರುದಾವಳಿ, ಚರಿತ್ರೆ ಹೇಳುವವರೆಲ್ಲ ಹೆಳವರು. ಹೆಳವನೆಂದರೆ ಕಾಲಿಲ್ಲದವನು ಎಂದು ತಿಳಿಯಕೂಡದು. ಒಬ್ಬ ಕಾಲಿಲ್ಲದವನಾದರೆ ಜಾತಿಯೇ ಕಾಲಿಲ್ಲದ್ದು ಇರುವುದೇ? ಡಾ. ಮಾಸ್ತಿಯವರ ಅಭಿಪ್ರಾಯದಲ್ಲಿ ಹೆಳವರು ಹೆಳವರಲ್ಲ; ಹೇಳುವವರು ಎಂದು ಸ್ಪಷ್ಟವಾಗಿ ಹೇಳುತ್ತಾರೆ. ವಂಶದ ವೃತ್ತಾಂತ ಹೇಳಲು ಈ ಕಡೆಯವರು ತೆಲುಗುನಾಡಿನಿಂದ ಕರೆಯಿಸಿಕೊಂಡಿರಬೇಕು ಎನ್ನುತ್ತಾರೆ.

ಹೆಳವರ ಸಾಮಾಜಿಕತೆ:

ಸಾಮಾಜಿಕ ರಚನೆ:

ಹೆಳವ ಸಮುದಾಯದಲ್ಲಿ ಅಲೆಮಾರಿ ಸಮಾಜದ ಲಕ್ಷಣಗಳೆಲ್ಲವೂ ಅಂತರ್ಗತವಾಗಿವೆ. ಆದರೆ ಹೆಳವರು ಸಂಪೂರ್ಣವಾಗಿ ಅಲೆಮಾರಿಗಳಾಗಿ ಉಳಿದುಕೊಂಡಿಲ್ಲ. ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣದ ಪರಿಣಾಮದಿಂದ ದೇಶದಲ್ಲಿ ಸಾಕಷ್ಟು ಪರಿವರ್ತನೆಗಳಾಗಿವೆ. ಜೊತೆಗೆ ಬುಡಕಟ್ಟು ಸಮುದಾಯಗಳಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕ ಪ್ರಭಾವಗಳು ಬೀರಿ ಅನೇಕ ಬದಲಾವಣೆಗಳನ್ನು ತಂದುಕೊಂಡಿವೆ. ಇದರಲ್ಲಿ ಹೆಳವ ಸಮುದಾಯವು ಹೊರತಾಗಿಲ್ಲ. 'ನಿಶ್ಚಿತ ಆರ್ಥಿಕ ಮೂಲಗಳಿಲ್ಲದಿದ್ದರೂ ಚಾರಿತ್ರಿಕವಾಗಿ ಊಳಿಗಮಾನ್ಯ ವ್ಯವಸ್ಥೆಯನ್ನೆ ಅವಲಂಬಿಸಿ ಬದುಕಿನ ಕಾರಣಕ್ಕಾಗಿ ಈ ಸಮಾಜದಲ್ಲಿ ಊಳಿಗಮಾನ್ಯ ಮೌಲ್ಯಗಳು ಸಹಜವಾಗಿಯೇ ಮೇಳೈಸಿವೆ. ಕಾರಣ ಇದು ಪುರುಷ ಪ್ರಧಾನ ಸಮಾಜ. ಪುರುಷ ಕುಟುಂಬದ ಒಟ್ಟಾರೆ ನಿರ್ಣಯಗಳ ಕೇಂದ್ರ ಬಿಂದು. ಜಾತಿಯ ನಿಯಮಗಳೂ ಕಟ್ಟುನಿಟ್ಟಾಗಿವೆ. ಇಂದಿಗೂ ಕುಲ ಪಂಚಾಯ್ತಿಯ ನ್ಯಾಯ ನಿರ್ಣಯಗಳ ಸಂದರ್ಭದಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಸ್ವಗೋತ್ರ ವಿವಾಹ ಮತ್ತು

ವಿಧಿ ನಿಷೇಧಗಳು ಕಟ್ಟು ನಿಟ್ಟಾಗಿ ಪಾಲಿಸಿಕೊಂಡು ಬರುತ್ತಿರುವುದರಿಂದಾಗಿ ಹೆಳವ ಸಮಾಜವು ತನ್ನ ಚಹರೆಗಳನ್ನು ಇನ್ನೂ ಉಳಿಸಿಕೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ.'[39]

ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ವಲಯಗಳಲ್ಲಿ ಅರ್ಹ ಸೌಲಭ್ಯಗಳನ್ನು ಪಡೆಯುವಾಗ ಈ ಸಮುದಾಯಗಳು ತಲ್ಲಣಗೊಳ್ಳುತ್ತವೆ. ಜಾತಿ ಪ್ರಮಾಣಪತ್ರ ಪಡೆಯುವ ಪ್ರಾಥಮಿಕ ಹಂತದಿಂದಲೂ ಇವರು ಹೋರಾಟ ನಡೆಸಬೇಕಾಗಿದೆ. ಅಲೆಮಾರಿ ಹೆಳವರು ಇಂದು ಅವರಿರುವ ಸ್ಥಿತಿಯಲ್ಲಿ ಆಧುನಿಕ ಜಗತ್ತಿನ ಯಾವ ಸವಲತ್ತುಗಳನ್ನೂ ಪಡೆದುಕೊಳ್ಳುವ ಸ್ಥಿತಿಯಲ್ಲಿಲ್ಲ. ಒಂದು ಅರ್ಥದಲ್ಲಿ ಅಲೆಮಾರಿ ಹೆಳವರು ತಮ್ಮ ಪಾರಂಪರಿಕ ವೃತ್ತಿಗೆ ತೀವ್ರವಾಗಿ ನಿಷ್ಠರಾಗಿದ್ದಾರೆ. ಪಾರಂಪರಿಕ ಕಸುಬನ್ನು ಅತ್ಯಂತ ಭಾವುಕವಾಗಿ ವರ್ತಮಾನದಲ್ಲಿ ಮುಂದುವರೆಸುತ್ತಿರುವ ಕುರಿತು ಅವರು ಮಾತನಾಡುತ್ತಾರೆ. ಈ ಸಮುದಾಯವು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಯಾವತ್ತೂ ಹಿನ್ನಡೆಯನ್ನು ಅನುಭವಿಸುತ್ತಲೇ ಇರುತ್ತದೆ. ವರ್ತಮಾನವನ್ನು ಚರಿತ್ರೆಯ ನೆನಪುಗಳಿಂದ ಎದುರಿಸುವುದು ಸಾಧ್ಯವಿಲ್ಲ. ಹೆಳವರು ಆರ್ಥಿಕವಾಗಿ ಹಿನ್ನೆಡೆ ಅನುಭವಿಸುವುದರ ಜೊತೆಗೆ ಸಾಮಾಜಿಕ ಮತ್ತು ಶೈಕ್ಷಣಿಕ ರಂಗಗಳಲ್ಲಿಯೂ ಶೋಚನೀಯವಾಗಿ ಹಿಂದುಳಿದಿದ್ದಾರೆ.

ಪಂಗಡಗಳು:

ಹೆಳವರಲ್ಲಿನ ಅಲೆಮಾರಿತನದಿಂದ ಮತ್ತು ಭಿನ್ನ ಸಾಮಾಜಿಕಾರ್ಥಿಕ ಪ್ರಭಾವಗಳಿಂದ ಮತ್ತು ಹಲವು ಸಂದರ್ಭಗಳ ಅನಿವಾರ್ಯತೆಯ ಕಾರಣಗಳಿಗಾಗಿ ಇವರಲ್ಲಿ ಅನೇಕ ಪಂಗಡಗಳು ರೂಪುಗೊಂಡಿರುವುದನ್ನು ಕಾಣಬಹುದಾಗಿದೆ. ಆ ಪಂಗಡಗಳ ಕುರಿತಾಗಿ ಬೇರೆ ಬೇರೆ ವಿದ್ವಾಂಸರು ಬೇರೆ ಬೇರೆ ರೀತಿಯಲ್ಲಿ ಗುರುತಿಸಿರುವುದನ್ನು ಕಾಣಬಹುದು. ಹೆಚ್.ವಿ. ನಂಜುಂಡಯ್ಯ ಮತ್ತು ಅನಂತಕೃಷ್ಣ ಅಯ್ಯರ್ ರವರು ಹೆಳವರಲ್ಲಿ ಎರಡು ಪಂಗಡಗಳನ್ನು ಗುರುತಿಸದ್ದಾರೆ. ಅವುಗಳೆಂದರೆ ಗಂಟೆ ಹೆಳವರು ಮತ್ತು ಬಸವನ ಹೆಳವರು ಅಥವಾ ಎತ್ತಿನ ಹೆಳವರು. ಆರ್. ಗುಪ್ತಾ ಅವರು ಮೂರು ಪಂಗಡಗಳನ್ನು ಗುರುತಿಸಿದ್ದಾರೆ. 1. ಶಾಂತಿ ಹೆಳವರು, 2. ಪಂಗಿ ಹೆಳವರು, 3. ಎತ್ತಿನ ಹೆಳವರು. ಕೆ.ಎಸ್. ಸಿಂಗ್ ರವರು ಸಹ ಹೆಳವರ ಮೂರು ಪಂಗಡಗಳನ್ನು ಗುರುತಿಸುತ್ತಾರೆ. 1. ಗಂಟೆ ಹೆಳವ, 2. ಪಂಗಿ ಹೆಳವ, 3. ಎತ್ತಿನ ಹೆಳವ. ನಿಂಗಣ್ಣ ಸಣ್ಣಕ್ಕಿಯವರು ಹೆಳವರ ಉಪ ಪಂಗಡಗಳನ್ನು ಹೀಗೆ ಗುರುತಿಸುತ್ತಾರೆ. 1. ಎತ್ತಿನ ಹೆಳವ ಅಥವಾ ವಸನ ಹೆಳವ (ಉತ್ತರ ಕರ್ನಾಟಕ), 2. ಗಂಟೆ ಹೆಳವ (ದಕ್ಷಿಣ ಕರ್ನಾಟಕ). ಹರಿಲಾಲ್ ಪವಾರ್ ಅವರು ವಿಸ್ತೃತ ಕ್ಷೇತ್ರ ಕಾರ್ಯದ ಮೂಲಕ ಹೆಳವರಲ್ಲಿನ ಅನೇಕ ಉಪ ಪಂಗಡಗಳನ್ನು ಹೀಗೆ ಗುರುತಿಸುತ್ತಾರೆ. 1. ಎತ್ತಿನ ಹೆಳವರು 2. ಗಂಟೆ ಹೆಳವರು 3. ಚಾಪೆ ಹೆಳವರು ಇದಲ್ಲದೆ ಕಂಬಿ ಹೆಳವರು, ಮಂಡಲ ಹೆಳವರು, ದೂದಿ ಹೆಳವರು, ಕೂಕಣಿ ಹೆಳವರು, ಊರ ಹೆಳವರು, ಅಡವಿ ಹೆಳವರು, ಪುಂಗಿ ಹೆಳವರು, ಸಾದು ಹೆಳವರು ಇತ್ಯಾದಿಗಳು.

ಈ ಮೇಲಿನ ಉಲ್ಲೇಖಗಳಿಂದ ತಿಳಿದು ಬರುವ ಸಂಗತಿ ಎಂದರೆ ಎತ್ತಿನ ಹೆಳವ, ಗಂಟೆ ಹೆಳವ, ಮತ್ತು ಚಾಪೆ ಹೆಳವರನ್ನು ಬಹುತೇಕ ಎಲ್ಲಾ ವಿದ್ವಾಂಸರುಗಳು ಮುಖ್ಯವಾಗಿ ಗುರುತಿಸುತ್ತಾರೆ. ಹೆಳವ ವೃಂದದ ಪಂಗಡಗಳು ಬೇರೆ ಬೇರೆ ಆಗಿರಬಹುದು. ಆದರೆ ಮೂಲತಃ ಇವೆಲ್ಲ ಪಂಗಡಗಳು ಒಂದೇ ಮೂಲದಿಂದ ಬಂದವರು ಎಂಬುದು ಸ್ಪಷ್ಟವಾಗುತ್ತದೆ. ಎಲ್ಲರ ಕಸುಬು ಒಂದೇ ಆಗಿತ್ತು. ಒಕ್ಕಲು ಮನೆಗಳ ಕುಲ ಕೊಂಡಾಡುವುದು. ಇದು ಹೆಳವರಿಗೆ ವಂಶಪಾರಂಪರ್ಯವಾಗಿ ಬೆಳೆದು ಬಂದ ಕುಲವೃತ್ತಿ. ಕಾಲ ಬದಲಾದಂತೆ ಇವರು ತಮ್ಮ ಉಪಜೀವನಕ್ಕಾಗಿ ಹತ್ತಿರ ಉಪಕಸುಬುಗಳನ್ನು ಮಾಡುತ್ತಾ ವಿಭಿನ್ನ ಪ್ರದೇಶಗಳಲ್ಲಿ ಬೇರೆ ಬೇರೆ ಪಂಗಡಗಳಾಗಿಯೇ ಕಾಣಿಸಿಕೊಂಡಿದ್ದಾರೆ.

ಉಡುಗೆ–ತೊಡುಗೆಗಳು:

ಕುಲ ಕೊಂಡಾಡಲು ಒಕ್ಕಲು ಮನೆಗಳಿಗೆ ಹೋಗುವಾಗ ತಮ್ಮ ಒಕ್ಕಲಿನವರು ಕೊಟ್ಟಿರುವ ಉಡುಪುಗಳಲ್ಲಿ ಹೋಗುತ್ತಾರೆ. ಅಂಗಿ, ಧೋತರ, ಕೋಟು, ತಲೆಗೆ ರುಮಾಲು ಸುತ್ತಿರುತ್ತಾರೆ. ಹಣೆಯಲ್ಲಿ ವಿಭೂತಿ ಧರಿಸಿ, ಹೆಗಲ ಮೇಲೆ ಗುಲಾಬಿ ಬಣ್ಣದ ಶಾಲು ಹಾಕಿ ಅದರೊಳಗೆ ಕಡತ ಇಟ್ಟುಕೊಂಡಿರುತ್ತಾರೆ. ತಾವು ಕುಳಿತುಕೊಳ್ಳುವ ಎತ್ತಿನ ಬೆನ್ನ ಮೇಲೆ ಎರಡು ಬದಿಗೆ ಇಳಿಬಿಟ್ಟಿರುವ ಚೀಲಗಳು ಮತ್ತಷ್ಟು ಮೆರಗು ಕೊಡುತ್ತಿರುತ್ತವೆ. ಈ ಉಡುಗೆಯಲ್ಲಿ ಹೊರಟರೆ ಜನಸಾಮನ್ಯರಿಗಿಂತ ಪ್ರತ್ಯೇಕವಾಗಿಯೇ ಎದ್ದು ಕಾಣುತ್ತಾರೆ.

ಹಟ್ಟಿಯ ರಚನೆ ಮತ್ತು ವಸತಿ:

ಸಾಮಾನ್ಯವಾಗಿ ಹೆಳವರು ವಾಸಿಸುವ ಸ್ಥಳಗಳಿಗೆ ಹಟ್ಟಿ, ಹುಂಡಿ, ಪಾಳ್ಯಗಳೆಂದು ಕರೆಯುತ್ತಾರೆ. ಆದರೆ ಈ ಹೆಸರುಗಳು ದಕ್ಷಿಣ ಕರ್ನಾಟಕದ ಹೆಳವರಿಗೆ ಮಾತ್ರ ಅನ್ವಯಿಸುತ್ತದೆ. ಏಕೆಂದರೆ ಉತ್ತರ ಕರ್ನಾಟಕದ ಹೆಳವರು ಹಳ್ಳಿ, ನಗರಗಳಲ್ಲಿ ವಾಸಿಸುವುದರಿಂದ ಆಯಾ ಹಳ್ಳಿ ನಗರಗಳ ಹೆಸರುಗಳೇ ಇವರ ವಸತಿಗಳಿಗೆ ಅನ್ವಯಿಸುತ್ತೆ. ಒಕ್ಕಲು ಮನೆಗಳಿಗೆ ಹೋಗುವಾಗ ಎಂಟು–ಹತ್ತು ಚಕ್ಕಡಿಗಳ ಗುಂಪನ್ನು ಕಟ್ಟಿಕೊಂಡು ತಮ್ಮ ನಿಗಧಿತ ಊರುಗಳ ಅಂಚಿನಲ್ಲಿ ಬಿಡಾರವನ್ನು ಹೂಡುತ್ತಾರೆ. ಆಯಾ ಊರುಗಳಲ್ಲಿ ನಾಲ್ಕೈದು ದಿನಗಳವರೆಗೆ ಇದ್ದು, ತಮ್ಮ ಕುಲ ವೃತ್ತಿ ಮಾಡಿ ಅಲ್ಲಿಂದ ಮತ್ತೊಂದು ಊರಿಗೆ ಪ್ರಯಾಣ ಬೆಳೆಸುತ್ತಾರೆ.


ಹೆಳವ ಸಮುದಾಯದ ಜನರು ಹಾವೇರಿ ಜಿಲ್ಲೆಯ ಬೇರೆ ಬೇರೆ ತಾಲೂಕುಗಳ ಹಳ್ಳಿಗಳಲ್ಲಿ ಒಟ್ಟು 173 ಕುಟುಂಬಗಳು ನೆಲೆಸಿರುವುದನ್ನು ಕ್ಷೇತ್ರಕಾರ್ಯದ ಮೂಲಕ ಕಂಡುಕೊಳ್ಳಲಾಗಿದೆ. ಅವರು ನೆಲೆಸಿರುವ ಹಳ್ಳಿಗಳಲ್ಲಿ ವಾಸದ ಮನೆಗಳನ್ನು ನೋಡಿದಾಗ ಬಹುತೇಕ ಕುಟುಂಬಗಳು ಗುಡಾರ/ಟೆಂಟುಗಳಲ್ಲಿ ವಾಸಿಸುತ್ತಿದ್ದಾರೆ. ಸುಮಾರು 26 ಕುಟುಂಬಗಳು ಗುಡಿಸಲುಗಳಲ್ಲಿ, 09 ಮನೆಗಳು ಹೆಂಚಿನ ಸ್ವರೂಪದಲ್ಲಿ, 05 ಕುಟುಂಬಗಳು ಆರ್.ಸಿ.ಸಿ ಮನೆಗಳಲ್ಲಿ ವಾಸಿಸುತ್ತಿದ್ದರೆ, ಇನ್ನುಳಿದ 43 ಕುಟುಂಬಗಳು ಬಾಡಿಗೆ ಮನೆಗಳಲ್ಲಿ ನೆಲೆಸಿರುವುದು ಕಂಡುಬಂತು. ಸರ್ಕಾರದ ಆಶ್ರಯ ಯೋಜನೆಯ ಅಡಿಯಲ್ಲಿ ಕೇವಲ

ಹನ್ನೊಂದು ಕುಟುಂಬಗಳು ಮಾತ್ರ ಮನೆಗಳನ್ನು ಪಡೆದಿರುವುದು ಅಧ್ಯಯನದ ಮೂಲಕ ತಿಳಿದು ಬಂದಿದೆ. ಕೆಳಗಿನ ಕೋಷ್ಟಕ ಗಮನಿಸಿರಿ

ಕೋಷ್ಟಕ–10

ಹೆಳವ ಸಮುದಾಯದ ವಾಸದ ಮನೆಯ ಸ್ವರೂಪ:

ಕ್ರಸಂ.	ಮನೆಯ ಸ್ವರೂಪ.	ಸಂಖ್ಯೆ
01	ಟೆಂಟು/ಗುಡಾರ	79
02	ಗುಡಿಸಲು	26
03	ತಗಡು/ಹೆಂಚಿನಮನೆ	09
04	ಮಾಳಿಗೆ/ಆರ್.ಸಿ.ಸಿ	05
05	ಆಶ್ರಯ ಮನೆ	11
06	ಬಾಡಿಗೆ ಮನೆ	43
	ಒಟ್ಟು	**173**



ಕುಲ ವೃತ್ತಿ:

ಹೆಳವರ ಪ್ರಮುಖ ವೃತ್ತಿ ಒಕ್ಕಲು ಮನೆಗಳ ಕುಲಕೊಂಡಾಡುವುದು. ವರ್ಷಕ್ಕೊಮ್ಮೆಯಾದರೂ ತಮ್ಮ ಹಕ್ಕಿನ ಒಕ್ಕಲು ಮನೆಗಳಿಗೆ ಹೋಗಿ ಅವರ ಗತವೈಭವ, ಆಗು ಹೋಗು ಮೊದಲಾದವುಗಳನ್ನು ಮನ ಸೆಳೆಯುವಂತೆ ಹೇಳಿ ಅವರಿಂದ ಪ್ರತಿಯಾಗಿ ಸಂಭಾವನೆ ಪಡೆಯುತ್ತಾರೆ. ಒಬ್ಬೊಬ್ಬ ಹೆಳವನು ಕೆಲವು ಹಳ್ಳಿಗಳನ್ನು ಇಲ್ಲವೆ ಒಕ್ಕಲು ಮನೆಗಳನ್ನು ಹಂಚಿಕೊಂಡು ಅವುಗಳ ಮೇಲೆ ವಂಶಪಾರಂಪರ್ಯವಾಗಿ ತಮ್ಮ ದಾಯಾದಿ ಸಂಬಂಧ ಇಟ್ಟುಕೊಂಡು ಬಂದಿರುತ್ತಾರೆ. ಇದು ಸನಾತನ ಸಂಪ್ರದಾಯದ ಹಳ್ಳಿಗಳಲ್ಲಿ ಇಂದಿಗೂ ರೂಢಿಯಲ್ಲಿದೆ.

ಆಯಾ ಒಕ್ಕಲು ಮನೆಗಳಿಗೆ ಸಂಬಂಧಪಟ್ಟಂತೆ ಒಂದಲ್ಲ ಒಂದು ಚಮತ್ಕಾರಿಕ ಘಟನೆಯ ಸುರಳಿಯನ್ನ ಬಿಚ್ಚಿ, ಒಕ್ಕಲಿನ ವಂಶ ಪರಂಪರೆಯ ಬೆಟ್ಟವನ್ನು ಹತ್ತುತ್ತಾರೆ. ಈ ಘಟನೆ ನಿಜವಿದ್ದರೂ ಹೆಳವರು ತಮ್ಮ ಕಲ್ಪನೆಗಳನ್ನು ಸೇರಿಸಿ ಕೇಳುಗರಲ್ಲಿ ವಿಸ್ಮಯ ಉಂಟು

ಮಾಡುತ್ತಾರೆ. ಒಕ್ಕಲು ಮನೆಯವರ ವಂಶವೃಕ್ಷ ಹೇಳುವುದು, ಸತ್ತು ಹೋದ ಪೂರ್ವಜರನ್ನು ಹೊಗಳುವುದು, ಮನೆ ದೇವರುಗಳ ಮೇಲೆ ಹರಕೆ ನುಡಿಯುವುದು, ಹೀಗೆ ಈ ಪದ್ಧತಿಗಳು ಮೊದಲಿನಿಂದಲೂ ಹೆಳವರು ಉಳಿಸಿಕೊಂಡು ಬಂದಿರುತ್ತಾರೆ.

ಚಪ್ಪೋಡುಗಳು:

ತಮ್ಮ ಹತ್ತಿರ ಇರುವ ಚಪ್ಪೋಡುಗಳಿಗೆ ಕಡತ, ರೆಕಾರ್ಡ್, ಅಕೌಂಟ್, ಯಾದಿ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಹೆಳವರ ಬಳಿಯಿರುವ ಕಡತಗಳು ನಾಲ್ಕಾರು ತಲೆ ಮಾರುಗಳಿಂದ ಸಾಗಿ ಬಂದವುಗಳು. ಕಡತಗಳ ಆಧಾರದಿಂದಲೇ ಒಕ್ಕಲು ಮನೆಗಳ ವಂಶವೃಕ್ಷ ಹೇಳುತ್ತಾರೆ. ಕಡತಗಳಲ್ಲಿ ಬರೆದುಕೊಂಡಿರುವ ದಾಖಲೆಗಳು ಒಕ್ಕಲು ಮನೆಗಳಿಗೆ ಮಾತ್ರ ಸೀಮಿತವಾಗಿರದೆ ನಾಡಿನ ಐತಿಹಾಸಿಕ ಘಟನೆ, ಆರ್ಥಿಕ, ಸಾಮಾಜಿಕ, ಹಾಗೂ ಜನಸಮೂಹಗಳ ಹೊಲ–ಮನೆಗಳಿಗೆ ಸಂಬಂಧಪಟ್ಟ ನ್ಯಾಯವನ್ನು ಬಗೆಹರಿಸುವಲ್ಲಿ ಮಹತ್ತರ ಮಾಹಿತಿಗಳನ್ನು ಒದಗಿಸಿಕೊಡುತ್ತವೆ.

ಕಲೆ:

ವೃತ್ತಿ ಗಾಯಕರಲ್ಲಿ ಬರುವ ಹೆಳವರು ತಮ್ಮದೇ ಆದ ಶೈಲಿಯಲ್ಲಿ ಹಾಡುತ್ತಾರೆ. ಮತ್ತು ಅಗಾಧವಾದ ಸ್ಮರಣೆಯುಳ್ಳವರು. ನಿರಕ್ಷರಿಗಳಾದರೂ ಸ್ಮರಣಿಶಕ್ತಿಯಿಂದ ನೆನಪಿಟ್ಟು ಹೇಳುತ್ತಾರೆ. ತಾವು ವಾಸಿಸುವ ಸ್ಥಳಗಳಲ್ಲಿ ಆದ, ಸಾಮಾಜಿಕ ನಾಟಕಗಳನ್ನು ಆಡುತ್ತಾರೆ. ಹಾವೇರಿ ಜಿಲ್ಲಾ ಹಾನಗಲ್ ತಾಲೂಕು ಸೋಮಸಾಗರದಲ್ಲಿ ಶ್ರೀ ಗುಡ್ಡಪ್ಪ ಫಕ್ಕೀರಪ್ಪ ಮಾಸನಕಟ್ಟಿ ಎಂಬುವವರು ಪ್ರಸಿದ್ಧ ನಾಟಕ ಮಾಸ್ತರರು, ಈಗ ಎಪ್ಪತ್ತರ ಸಮೀಪವಿರುವ ಇವರು ಪೌರಾಣಿಕ, ಸಾಮಾಜಿಕ ಐವತ್ತಕ್ಕೂ ಹೆಚ್ಚು ನಾಟಕಗಳನ್ನು ಕಲಿಸಿ ನಾಟಕ ಆಡಿಸಿದ್ದಾರೆ. ಹಲವಾರು ಗ್ರಾಮಗಳಲ್ಲಿ ನಾಟಕ ಕಲಿಸಿದ್ದಾರೆ. ಒಳ್ಳೇ ಗಾಯಕರಾಗಿದ್ದಾರೆ. ಭಜನೆ ಹಾಡು ಹಾಡುವದರಲ್ಲಿ ಎತ್ತಿದ ಕೈ. ಇತ್ತೀಚೆಗೆ ರಾಣೆಬೆನ್ನೂರಿನ ಜಯಶ್ರೀ ಹುಲಗಣ್ಣನವರ ಬಿ.ಎ. ಓದುವ ವಿದ್ಯಾರ್ಥಿನಿ. ಇವಳಿಗೆ ಸಂಗೀತ ಕಲೆ ಕರಗತವಾಗಿದೆ. ಎರಡು ಸಂಗೀತ ಪರೀಕ್ಷೆ ಮುಗಿಸಿದ್ದಾಳೆ. ಅನೇಕ ಸಂಗೀತ ಕಚೇರಿಗಳಲ್ಲಿ ಭಾಗಿಯಾಗಿ ಶುಶ್ರಾವ್ಯವಾಗಿ ಹಾಡುತ್ತಾಳೆ. ಸಂಗೀತ ಅಭ್ಯಾಸವೂ ನಡೆದಿದೆ. ಇದು ಹಮ್ಮೆಯ ವಿಷಯ.

ಬೆಡಗುಗಳು:

ಬೆಡಗುಗಳಿಗೆ ಗೋತ್ರ, (ಬಳಿ)ಗಳೆಂದು ಕರೆಯುತ್ತಾರೆ. ಬೆಡಗುಗಳ ಮೂಲಕವೇ ತಮ್ಮನ್ನು ತಾವು ಗುರುತಿಸಿಕೊಳ್ಳುತ್ತಾರೆ. ಮದುವೆ ಮುಂತಾದ ಪ್ರಮುಖ ಕಾರ್ಯಗಳು ಬೆಡಗುಗಳ ಆಧಾರದ ಮೇಲೆ ನಡೆಯುತ್ತವೆ. ಸಾಮಾನ್ಯವಾಗಿ ಇವರಲ್ಲಿ ಪ್ರಚಲಿತವಿರುವ ಬೆಡಗುಗಳಿಗೆ ಒಂದೊಂದು ಪ್ರಾಣಿ, ಪಶು, ಗಿಡಮರ, ಹೂಬಳ್ಳಿ, ದೇವರು ಮುಂತಾದವುಗಳ ಹೆಸರುಗಳಿರುವುದು ತಿಳಿದು ಬರುತ್ತದೆ. ಇವುಗಳಲ್ಲಿ ಒಂದರ ಜೊತೆಗೆ ವಿಶೇಷ ಸಂಬಂಧವನ್ನು ಇಟ್ಟುಕೊಂಡು ತಾವು ಆ ಕುಲಕ್ಕೆ ಸೇರಿದವರೆಂದು, ತಮ್ಮ ಮೂಲವನ್ನು ಅದರಿಂದಲೇ

ಗುರುತಿಸಿಕೊಳ್ಳುತ್ತಾರೆ. ಉದಾ: ಅಡಕಿಲವರು, ಅರಳಿಲವರು, ಆನೆಲವರು, ಎಮ್ಮೆಲವರು, ಎಕ್ಕೆಲವರು, ಜ್ಯೋತಿಲವರು ಹೀಗೆ ಸುಮಾರು 122 ಬೆಡಗುಗಳ ಹೆಸರುಗಳು ಹೆಳವರಲ್ಲಿ ಕಂಡು ಬರುತ್ತವೆ.

ಪ್ರಸ್ತುತ ಅಧ್ಯಯನಕ್ಕೊಳಪಟ್ಟ ಕ್ಷೇತ್ರದಲ್ಲಿ ಕಂಡು ಬರುವ ಮುಖ್ಯ ಬೆಡಗುಗಳೆಂದರೆ ಬ್ರಹ್ಮಲಿಂಗದವರು, ಹೂವಿನವರು, ಕುಂಚೇಲರು, ಹೊನ್ನುಂಗರದವರು, ಸೋಮದೇವರನವರು, ಭಂಡಾರದವರು, ಹೊನ್ನವೀರ ಗಂಟೆಯವರು. ಇವರ ಕುಲದೇವರೆಂದರೆ ಸವದತ್ತಿ ಯಲ್ಲಮ್ಮ ಮತ್ತು ದೇವರಗುಡ್ಡ ಮಾಲತೇಶ.

ಹೆಳವರ ಆಚರಣೆ ಮತ್ತು ನಂಬಿಕೆಗಳು:

ಜನನ:

ಹೆಳವ ಸಮುದಾಯದಲ್ಲಿ ಚೊಚ್ಚಲು ಹೆರಿಗೆ ತವರು ಮನೆಯಲ್ಲಿಯೇ ಮಾಡುತ್ತಾರೆ. ಅದಕ್ಕೂ ಪೂರ್ವದಲ್ಲಿ ಗಂಡನ ಮನೆಯಲ್ಲಿ ಮುತ್ತೈದೆಯರೆಲ್ಲರೂ ಸೇರಿ 'ಸೀಮಂತ' ಕಾರ್ಯಾವನ್ನು ನೆರವೇರಿಸುತ್ತಾರೆ. ಈ ಸಂದರ್ಭದಲ್ಲಿ ಮುತ್ತೈದೆ ಹೆಣ್ಣು ಮಕ್ಕಳು ವಿವಿಧ ಬಗೆಯ ಬಯಕೆಯ ಹಾಡುಗಳನ್ನು ಹೇಳಿ ಬಸುರಿಯ ಉಡಿಯಲ್ಲಿ ಹಣ್ಣು ಕಾಯಿಗಳನ್ನು ಹಾಕಿ ಆರತಿ ಬೆಳಗುತ್ತಾರೆ. ಈ ಸಮುದಾಯದಲ್ಲಿ ಹೆರಿಗೆಯನ್ನು ಸಾಮಾನ್ಯವಾಗಿ ಸೂಲಗಿತ್ತಿಯವರ ಮೂಲಕ ಮಾಡಿಸುತ್ತಾರೆ. ಹೆರಿಗೆ ಆಗಿ ಐದು ದಿನಗಳ ನಂತರ 'ಐದೇಶಿ' ಕಾರ್ಯ ಮಾಡುತ್ತಾರೆ. ಅಲ್ಲಿಯವರೆಗೂ ಬಾಣಂತಿಯನ್ನು ನೋಡಿಕೊಳ್ಳಲು ಒಬ್ಬಳನ್ನು ಇಡುತ್ತಾರೆ. ಆಕೆ ತಾಯಿ–ಮಗುವಿಗೆ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಡಬೇಕು.

ನಾಮಕರಣ;

ಮಗು ಹುಟ್ಟಿದ ಹದಿನೈದನೆಯ ದಿನ ನಾಮಕರಣ ಮಾಡುವ ಸಂಪ್ರದಾಯ ಹೆಳವರಲ್ಲಿ ರೂಢಿಯಲ್ಲಿದೆ. ಪುರೋಹಿತರು ನೀಡಿದ 'ಜನ್ಮ ಕುಂಡಲಿ' ಯಂತೆ ಮಗುವಿಗೆ ಹೆಸರನ್ನಿಡುತ್ತಾರೆ. ಅದನ್ನು 'ಜನ್ಮನಾಮ' ಎಂದು ಕರೆಯುತ್ತಾರೆ. ಜೊತೆಗೆ ಅವರಲ್ಲಿ ತಮ್ಮ ಪೂರ್ವಿಕರ ಹೆಸರನ್ನು ಇಡುವ ಸಂಪ್ರದಾಯವು ಇದೆ. ಈ ಸಂದರ್ಭದಲ್ಲಿ ಮಗುವಿನ ಕಣ್ಣಿಗೆ ಕಾಡಿಗೆ ಹಚ್ಚಿ, ಕಾಲಲ್ಲಿ ಬೆಳ್ಳಿಯ ಕಡಗ, ಕೈಯಲ್ಲಿ ಕರಿಮಣಿಯ ಸರ, ಹೊಸ ಬಟ್ಟೆ ತೊಡಿಸುತ್ತಾರೆ. ಸೋದರತ್ತೆಯ ಮೂಲಕವೇ ಮಗುವಿಗೆ ಹೆಸರಿಡುತ್ತಾರೆ. ಸೋದರತ್ತೆಗೆ ಇಂತಹ ಹೆಸರಿಡಬೇಕೆಂದು ಮೊದಲೇ ಸೂಕ್ಷ್ಮವಾಗಿ ಹೇಳಿರುತ್ತಾರೆ. ಹೆಸರಿಡುವ ಸಂದರ್ಭದಲ್ಲಿ ಮುತ್ತೈದೆಯರು ತೊಟ್ಟಿಲು ತೂಗುತ್ತಾ ಜೋಗುಳ ಹಾಡುವುದುಂಟು. ನಂತರ ನಾಮಕರಣಕ್ಕೆ ಬಂದವರು ಮಗುವಿಗೆ ಕಾಣಿಕೆಯಾಗೆ ತಂದ ವಸ್ತ್ರಾಭರಣಗಳನ್ನು ಮಗುವಿನ ತಾಯಿಯ ಉಡಿಯಲ್ಲಿ ಹಾಕುತ್ತಾರೆ.

ಋತುಮತಿ ಶಾಸ್ತ್ರ:

ಹೆಣ್ಣು ಋತುಮತಿಯಾದಾಗ ಅವಳನ್ನು ಮನೆಯ ಹೊರಗಡೆ ಪ್ರತ್ಯೇಕ ಗುಡಿಸಲು/ಟೆಂಟುಗಳಲ್ಲಿ ಬಿಡುವುದು ಬಹುತೇಕ ಬುಡಕಟ್ಟು ಸಮುದಾಯಗಳಲ್ಲಿ ಕಂಡು ಬರುವ ಪದ್ಧತಿ. ಇದೇ ರೀತಿ ಅರೆ-ಅಲೆಮಾರಿ ಬುಡಕಟ್ಟುಗಳಲ್ಲಿ ಒಂದಾದ ಹೆಳವ ಸಮುದಾಯದಲ್ಲಿಯೂ ಮೈನೆರೆದ ಹೆಣ್ಣನ್ನು ಮೂರು ದಿನಗಳವರೆಗೆ ಪ್ರತ್ಯೇಕ ಚಪ್ಪರದಲ್ಲಿ ಇಡುತ್ತಾರೆ. ಈ ಸಂದರ್ಭದಲ್ಲಿ ಕೆಲವು ಕಟ್ಟುಪಾಡುಗಳನ್ನು ಕಡ್ಡಾಯವಾಗಿ ಅನುಸರಿಸುವುದು ಇವರಲ್ಲಿರುವ ನಿಯಮ. ಪ್ರತಿದಿನ ಸಂಜೆ ಋತುವಾದವಳ ಕುರಿತಾಗಿ ಮಹಿಳೆಯರು ಸೋಬಾನೆ ಹಾಡುಗಳನ್ನು ಹೇಳುತ್ತಾರೆ. ನಾಲ್ಕನೇ ದಿವಸ ಅವಳನ್ನು ಮನೆಯೊಳಗೆ ಕರೆದುಕೊಳ್ಳುವ ಮುನ್ನ ಅವಳಿಗೆ ಅರಿಷಿನ ಹಚ್ಚಿ ನೀರೆರೆಯುತ್ತಾರೆ. ನಂತರ ಹೊಸಬಟ್ಟೆ ತೊಡಿಸಿ ಒಡವೆಗಳಿಂದ ಅಲಂಕರಿಸುತ್ತಾರೆ. ಹೆಣ್ಣು ಮಕ್ಕಳು ಹಸಿರು ಬಳೆ ತೊಡಿಸಿ ಹೂ ಮುಡಿಸುತ್ತಾರೆ.

ಮದುವೆ:

ಈ ಜನರಲ್ಲಿ ಮದುವೆ ಎಂದ ಕೂಡಲೇ ಎಲ್ಲಿಲ್ಲದ ಸಂಭ್ರಮ. ಇವರು ಮದುವೆ ಸಂದರ್ಭದಲ್ಲಿ ಸಾಕಷ್ಟು ಹೆಂಡ ಕುಡಿದು ತಮ್ಮ ಸಂತೋಷ ಹಂಚಿಕೊಳ್ಳುತ್ತಾರೆ. ಈ ಸಮಯದಲ್ಲಿ ಹೆಳವ ಪುರುಷರು ಕುಡಿಯುವುದು ಸಾಮಾನ್ಯ. ಆದರೆ ಕೆಲವೆಡೆ ವಯಸ್ಸಾದ ಮಹಿಳೆಯರು ಕೂಡ ಹೆಂಡದ ರುಚಿ ನೋಡುವುದು, ಮತ್ತಿನಲ್ಲಿ ಕುಣಿದಾಡುವುದು ಉಂಟು. ಸಾಮಾನ್ಯವಾಗಿ ಗಂಡಿನವರ ಮನೆಯ ಮುಂದೆ ಹಿಂದೂ ಪದ್ಧತಿಯಂತೆ ಮದುವೆ ನಡೆಯುವುದರಿಂದ ಪೂರ್ಣ ವೆಚ್ಚವನ್ನು ಗಂಡಿನವರೇ ವಹಿಸಿಕೊಳ್ಳುತ್ತಾರೆ. ಇವರ ಮದುವೆ ಕಾರ್ಯ ಮೂರು ದಿನಗಳವರೆಗೆ ನಡೆಯುತ್ತದೆ.

ಈ ಸಮುದಾಯದ ಮದುವೆಯ ವಿಶೇಷವೆಂದರೆ ನವೆಂಬರ್ ತಿಂಗಳಲ್ಲೇ ತಾಳಿ ಕಟ್ಟಬೇಕೆನ್ನುವುದು. ಅವರಿಗೆ ಇಂಥದ್ದೇ ಊರು ಎಂಬಂತಿಲ್ಲ. ಊರೂರು ಸುತ್ತುವುದು ಇವರ ಪ್ರತಿ ದಿನದ ಕೆಲಸ. ಮದುವೆ, ಮುಂಜಿ ಇನ್ನಿತರೆ ಸಮಾರಂಭಗಳಿಗೆ ಕಲ್ಯಾಣ ಮಂಟಪ ಹುಡುಕುವ ಗೋಜಿಲ್ಲ. ಮೊದಲೇ ನಿಗದಿಪಡಿಸಿದ ಬಯಲು ಜಾಗದಲ್ಲಿ ಬಂಧು ಮಿತ್ರರು ಸೇರಿ ಮದುವೆ ಮಾಡುತ್ತಾರೆ. ನಾಡಿನ ಬೇರೆ ಬೇರೆ ದಿಕ್ಕುಗಳಲ್ಲಿ ಹರಿದು ಹಂಚಿಹೋದ ಈ ಜನ ಎಲ್ಲೋ ಒಂದು ಕಡೆ ಭೇಟ್ಟಿಯಾದಾಗ ವರ ಕನ್ಯೆಯ ವಿಷಯ ಮಾತನಾಡುತ್ತಾರೆ. ಸರಿ ಹೊಂದಿದರೆ ನವೆಂಬರ್ ತಿಂಗಳಲ್ಲಿ ಇಂಥ ಕಡೆ ಮದುವೆ ಮಾಡೋಣ ಎಂದು ನಿರ್ಧರಿಸುತ್ತಾರೆ. ವರದಕ್ಷಿಣೆ ಮಾತು ಇವರ ಹತ್ತಿರ ಸುಳಿಯುವುದೇ ಇಲ್ಲ.

ಧರ್ಮ-ದೇವರು:

ಹೆಳವ ಸಮುದಾಯದವರು ವಿಶೇಷವಾಗಿ ಹೆಣ್ಣು ದೇವರುಗಳನ್ನು ಆರಾಧಿಸುತ್ತಾರೆ. ಕೆಂಚಮ್ಮ, ಚೌಡಮ್ಮ, ದುರ್ಗಮ್ಮ, ಕಾಳಮ್ಮ, ಗಾಳೆಮ್ಮ, ರೇಣುಕಾ ಮಲ್ಲಮ್ಮ ದೈವಗಳಿಗೆ ಭಯ ಹಾಗೂ ಭಕ್ತಿಯಿಂದ ನಡೆದುಕೊಳ್ಳುತ್ತಾರೆ.ದೈವಗಳನ್ನು ತೃಪ್ತಿಪಡಿಸಲು ಬಲಿಯಿಂದ ಮಾತ್ರ ಸಾದ್ಯವೆಂದು ಆಗಾಗ ಕುರಿ, ಕೋಳಿ ಬಲಿಕೊಟ್ಟು ರಕ್ತ ಸಿಂಪಡಿಸಿ ಮಜಾಮಾಡುವರಲ್ಲದೆ, ಮಾಂಸದ ಅಡುಗೆಯ ನೈವೇದ್ಯ ಸಹ ಮಾಡುತ್ತಾರೆ.

ಇವುಗಳಲ್ಲದೆ ಮೈಲಾರಲಿಂಗ, ದೇವರ ಗುಡ್ಡದ ಮಾಲತೇಶ, ಧರ್ಮಸ್ಥಳ ಮಂಜುನಾಥ, ಶ್ರೀಶೈಲ ಮಲ್ಲಿಕಾರ್ಜುನ ದೈವಗಳನ್ನೂ ಕೂಡ ಆರಾಧಿಸುವ ಪರಿಪಾಠ ಇದೆ.ಇತ್ತೀಚೆಗೆ ಯುವಕರು ಬಲಿಗೆ ವಿರೋಧಿಸಿದರೂ ಹಿರಿಯರು ತಡೆಹಾಕುತ್ತಾರೆ. ಹೀಗಾಗಿ ಹಳೆ ಸಂಪ್ರದಾಯಕ್ಕೆ ಕುಲ ಜೋತು ಬಿದ್ದಿದೆ.

ದೇವದಾಸಿ ಪದ್ಧತಿ:

ದಕ್ಷಿಣ ಭಾರತದಲ್ಲಿ ದೇವದಾಸಿ ಪದ್ಧತಿ ಆಚರಣೆಯಲ್ಲಿತ್ತು. ಆನೇಕ ದೇವಾಲಯಗಳಲ್ಲಿ ದೇವರ ಸೇವೆಗಾಗಿ ದೇವದಾಸಿಯರಿದ್ದರು. ತಮ್ಮ ಕುಲ ಹೆಣ್ಣುದೇವರ ಹೆಸರಿನಲ್ಲಿ ದೇವದಾಸಿ ಬಿಡುತ್ತಿದ್ದರು ಎಂದು ತಿಳಿದು ಬರುತ್ತದೆ. ಊರುಗಳಲ್ಲಿ ಕೆಲವು ಕುಟುಂಬಗಳು ದೇವದಾಸಿ ಪದ್ಧತಿ ಅನುಸರಿಸುತ್ತಿದ್ದುದರಿಂದ ಆ ಕುಟುಂಬಗಳಿಗೆ ದೇವದಾಸಿ ಮನೆತನಗಳೆಂದು ಕರೆಯಲಾಗುತ್ತಿತ್ತು. ಈ ಪರಂಪರೆ ಉತ್ತರ ಕರ್ನಾಟಕದ ಹಾವೇರಿ ಸಹಿತ ಎಲ್ಲಾ ಜಿಲ್ಲೆಗಳಲ್ಲಿ ಕಂಡುಬರುತ್ತಿತ್ತು. ಕಾಲಬದಲಾದಂತೆ ಈಗ ಈ ವ್ಯವಸ್ಥೆ ಕಾಣಬರುತ್ತಿಲ್ಲ. ಕಡಿಮೆ ಆಗಿದೆ. ಈ ಪದ್ಧತಿಗೆ ಈಗ ಯಾರೂ ಸಮ್ಮತಿಸುವುದಿಲ್ಲ.

ಮರಣ-ಸಂಸ್ಕಾರ:

ಹೆಳವರಲ್ಲಿ ಮದುವೆ ಆಗಿ ಸತ್ತವರನ್ನು ಸುಡುತ್ತಾರೆ. ಮದುವೆ ಆಗದೇ ಸತ್ತವರನ್ನು ಹುಗಿಯುತ್ತಾರೆ. ಸಾಧು-ಸತ್ಪುರುಷರು ಇದ್ದರೆ ಆ ಶವವನ್ನು ಹುಗಿಯುತ್ತಾರೆ. ಸತ್ತ ಕೂಡಲೇ ಶವದ ಸ್ನಾನ ಮಾಡಿಸಿ, ಗಂಡಸಾದರೆ ಹಣೆಗೆ ವಿಭೂತಿ, ಹೆಂಗಸಾಗಿದ್ದರೆ ಕುಂಕುಮ ಹಚ್ಚುತ್ತಾರೆ. ಶವಕ್ಕೆ ಹೊಸ ಬಟ್ಟೆಯನ್ನು ಉಡಿಸಿ ಮನೆಯ ಹೊರಗೆ ಗೋಡೆಗೆ ಆಧಾರವಾಗಿ ಶವವನ್ನು ಕೂಡಿಸುವರು.

ಬಿದಿರಿನ ಚಟ್ಟವನ್ನು ಕಟ್ಟಿ ಅದರ ಮೇಲೆ ಶವವನ್ನು ಸ್ಮಶಾನಕ್ಕೆ ಒಯ್ಯುವರು. ಗಂಡಸರು ಸತ್ತಿದ್ದರೆ ಅವರ ಬಾಯಲ್ಲಿ ಹೊನ್ನಾವರಿ ತಪ್ಪಲು ಹಾಕುತ್ತಾರೆ. ಹೆಂಗಸರಿದ್ದರೆ ಅವರ ಬಾಯಲ್ಲಿ ಬಂಗಾರ ಇಲ್ಲವೆ ಪತ್ರೆಯನ್ನು ಹಾಕುತ್ತಾರೆ. ಹುಗಿಯುವುದಿದ್ದರೆ ಶವವನ್ನು ಕುಣಿಯಲ್ಲಿಟ್ಟು ಬಳಿಕ ಕುಟುಂಬದ ಯಜಮಾನ ಮೊದಲು ಹಿಡಿ ಮಣ್ಣು ಹಾಕುತ್ತಾನೆ. ಆ ಮೇಲೆ ಉಳಿದವರು ಹಾಕುತ್ತಾರೆ.

ಹೆಳವರು ಮೊದಲಿನಿಂದಲೂ ಗೌಡರ, ಪಟೇಲರ, ಇನಾಮದಾರರ, ರೆಡ್ಡಿಗಳ ಹೀಗೆ ಕರ್ನಾಟಕದ ಹಲವಾರು ಕೃಷಿಕ ಗುಂಪು ಮತ್ತು ಬುಡಕಟ್ಟುಗಳ ಮನೆತನದ ಮಹತ್ತರ ಮಾಹಿತಿಗಳನ್ನು ಇವತ್ತಿಗೂ ತಮ್ಮ ಕಡತಗಳಲ್ಲಿ ಜೋಪಾನವಾಗಿಟ್ಟುಕೊಂಡು ಬಂದಿರುತ್ತಾರೆ. ಒಂದು ಕಾಲದಲ್ಲಿ ಹೆಳವರು ಇದ್ದ ಮನೆತನದ ಹಿರಿಯ ಸಂಪ್ರದಾಯದ ಮನೆತನವೆಂದೂ, ಹೆಳವರಿಲ್ಲದ ಮನೆತನ ಗೌರವಸ್ಥರ ಮನೆತನವಲ್ಲವೆಂದೂ ನಂಬಿಕೆ ಇತ್ತು, ಆದರೆ ಇಂದು ಆಧುನಿಕತೆಯ ಪ್ರಭಾವದಿಂದಾಗಿ ಹೆಳವರ ಜೀವನ ಮತ್ತು ದಿನ ನಿತ್ಯದ ಆಗು ಹೋಗುಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ.

ಹೆಳವರ ಪ್ರಸ್ತುತ ಸಾಮಾಜಿಕ ಸ್ಥಿತಿಗತಿಗಳು:

ಹೆಳವರು ಪೂರ್ಣ ಅಲೆಮಾರಿಗಳೇನಲ್ಲ. ಈ ಸಮುದಾಯದ ಕೆಲವು ಗುಂಪುಗಳು ಮಾತ್ರ ಇಂದು ಅಲೆಮಾರಿಗಳಾಗಿ ಬದುಕುತ್ತಿವೆ. ಅವುಗಳೆಂದರೆ ಎತ್ತಿನ ಹೆಳವ ಮತ್ತು ಗಂಟೆ ಹೆಳವ ಪಂಗಡದ ಗುಂಪುಗಳು. ತಮ್ಮ ಒಕ್ಕಲು ಮನೆಗಳಿಗೆ ಹೋಗಿ ತಮ್ಮ ಪಾರಂಪರಿಕ ವೃತ್ತಿಯಾನುಸಾರ ವಂಶಾವಳಿಯನ್ನು ಇವರು ಹೇಳುತ್ತಾರೆ. ಆದರೆ ಒಟ್ಟಾರೆಯಾಗಿ ಇವರ ಸಂಖ್ಯೆ ಬಹಳ ಕಡಿಮೆ. ಇಂದಿಗೂ ಹೆಳವರ ಅನೇಕ ಉಪ ಪಂಗಡಗಳು ಲಾಭದಾಯಕವಲ್ಲದ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿದ್ದಾರೆ.

ಕೆಳ ಜಾತಿಯ ಸಮುದಾಯಗಳಲ್ಲಿ ಅಲ್ಪ ಪ್ರಮಾಣದ ಜನರು ಮಾತ್ರ ಉತ್ತಮ ಸ್ಥಿತಿಯಲ್ಲಿದ್ದಾರೆ. ಈ ಸ್ಥಿತಿಯಲ್ಲಿರುವವರು ಶಿಕ್ಷಣ ಪಡೆದು ಸರಕಾರಿ ಹುದ್ದೆಯಲ್ಲಿದ್ದು, ಸಾಮಾಜಿಕವಾಗಿ ಆರ್ಥಿಕವಾಗಿ ಮುಂದುವರೆದಿದ್ದಾರೆ. ಹೆಳವ ಸಮುದಾಯದಲ್ಲೂ ಕೆಲವರು ಆರ್ಥಿಕವಾಗಿ ಉನ್ನತಿಯನ್ನು ಸಾಧಿಸಿ ಸಾಮಾಜಿಕ ಸ್ಥಾನಮಾನಗಳನ್ನು ಪಡೆದಿದ್ದಾರೆ. ಆದರೆ ಇವರ ಪ್ರಮಾಣ ಕಡಿಮೆ. ಹಾವೇರಿ ಜಿಲ್ಲೆಯ ಮಲೆನಾಡಿನ ಭಾಗದ ಹೆಳವರಲ್ಲಿ ಕೆಲವರು ಮಾತ್ರ ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದಾರೆ. ಆದರೆ ಬಹುಸಂಖ್ಯಾತ ಹೆಳವರು ಸಾಮಾಜಿಕವಾಗಿ ಬಹಳ ಹಿಂದುಳಿದಿದ್ದಾರೆ. ಜಾಗತೀಕರಣದ ಈ ಸಂದರ್ಭದಲ್ಲಿಯೂ ದೇಶದ ಶೋಷಿತರ ಸ್ಥಿತಿ ಯಾವ ವಿಧದಲ್ಲಿಯೂ ಉತ್ತಮಗೊಳ್ಳಲಿಲ್ಲ. ಇಂದಿಗೂ ಸಹ ಹೆಳವರು ತಮ್ಮ ಪಾರಂಪರಿಕ ವೃತ್ತಿಯನ್ನು ಬಿಟ್ಟುಕೊಡದೇ ಊರೂರು ತಿರುಗುತ್ತ ವಂಶಾವಳಿ ಹೇಳುವುದನ್ನು ಮುಂದುವರೆಸಿರುವುದು ಒಂದು ಬಗೆಯ ದುರಂತವೆಂದೇ ಭಾವಿಸಬೇಕಾಗುತ್ತದೆ. ಇದರಿಂದಾಗಿ ಹೆಳವರಂತಹ ಸಮುದಾಯಗಳು ಇಂದಿಗೂ ಆಧುನಿಕತೆ ಮತ್ತು ವರ್ತಮಾನದ ಅನೇಕ ಲಾಭಗಳಿಂದ ದೂರವೇ ಉಳಿದಿವೆ.

ಹೆಳವರ ಆರ್ಥಿಕ ಬದುಕು:

ಹೆಳವರಿಗೆ ಪರಂಪರೆಯಿಂದ ಬಂದ ಕಸಬು ವಂಶಾವಳಿ ಹೇಳುವುದು. ಇವರು ಸಾಂಪ್ರದಾಯಿಕ ವಂಶಾವಳಿಶಾಸ್ತ್ರಜ್ಞರು. ಇವರ ಪಾರಂಪರಿಕ ಆರ್ಥಿಕ ಮೂಲವು ಇದೇ ಆಗಿದೆ.


ಒಂದು ಬಗೆಯಲ್ಲಿ ಕೃಷಿಕರನ್ನು, ಅದರಲ್ಲೂ ಆಳುವ ವರ್ಗದ ಆರ್ಥಿಕ ಚಟುವಟಿಕೆಗಳನ್ನು ಆಶ್ರಯಿಸಿಯೇ ಬದುಕುವ ಅವಲಂಬಿತ ಸಮುದಾಯವಿದು. ಅಲೆಮಾರಿ ಹೆಳವರು ಇವತ್ತು ಅವರಿರುವ ಸ್ಥಿತಿಯಲ್ಲಿ ಆಧುನಿಕ ಜಗತ್ತಿನ ಯಾವ ಸವಲತ್ತುಗಳನ್ನು ಪಡೆದುಕೊಳ್ಳುವ, ಸ್ಥಿತಿಯಲ್ಲಿಲ್ಲ. ಒಂದು ಅರ್ಥದಲ್ಲಿ ಅಲೆಮಾರಿ ಹೆಳವರು ತಮ್ಮ ಪಾರಂಪರಿಕ ವೃತ್ತಿಗೆ ತುಂಬಾ ನಿಷ್ಠರಾಗಿದ್ದಾರೆ. ಇನ್ನೂ ಕೆಲವರು ಸಾಮಾಜಿಕ ಸ್ಥಾನ ಮಾನಗಳನ್ನು ಉನ್ನತೀಕರಿಸಿಕೊಳ್ಳಲು ಬೇರೆ ವೃತ್ತಿಗಳನ್ನು ಅವಲಂಬಿಸಿರುವುದು ನನ್ನ ಕ್ಷೇತ್ರ ಕಾರ್ಯದ ಸಂದರ್ಭಗಳಲ್ಲಿ ಕಂಡು ಬಂದಿದೆ. ಉದಾ: ಕೃಷಿ, ವ್ಯಾಪಾರ, ಸರ್ಕಾರಿ/ಖಾಸಗಿ ಉದ್ಯೋಗದಲ್ಲಿರುವವರು.

ನನ್ನ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ 173 ಕುಟುಂಬಗಳನ್ನು ಶೇಕಡ ಹತ್ತರ ಪ್ರಮಾಣದಲ್ಲಿ ಸಂಪರ್ಕಿಸಿ ಮಾಹಿತಿ ಕಲೆಹಾಕಿದಾಗ ಒಟ್ಟು 1379 ಮಂದಿ (ಸ್ತ್ರೀ ಮತ್ತು ಪುರುಷರು ಸೇರಿ) ಇರುವುದು ಕಂಡುಬಂತು. ಇವರಲ್ಲಿ 505 ಜನ ಹೆಳವರು ತಮ್ಮ ಪಾರಂಪರಿಕ ವೃತ್ತಿಯಾದ ಭಿಕ್ಷಾಟನೆಯನ್ನು ಅವಲಂಬಿಸಿರುತ್ತಾರೆ. ಕೇವಲ 55 ಮಂದಿ ಮಾತ್ರ ಕೃಷಿಯನ್ನು ಅವಲಂಬಿಸಿರುವುದನ್ನು ಗಮನಿಸಿದರೆ ಭೂರಹಿತರೇ ಅಧಿಕ ಸಂಖ್ಯೆಯಲ್ಲಿರುವುದು ಗೊತ್ತಾಗುತ್ತದೆ. 162 ಮಂದಿ ಕೂಲಿ ಕೆಲಸ ಮಾಡುತ್ತಿದ್ದರೆ, 31 ಮಂದಿ ಸಣ್ಣ ವ್ಯಾಪಾರದಲ್ಲಿ ತೊಡಗಿದ್ದಾರೆ. ಸಾಕ್ಷರತೆಯ ಪ್ರಮಾಣ ಕಡಿಮೆ ಇದ್ದಿದ್ದರ ಪರಿಣಾಮ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಿದೆ. ಅಂದರೆ ಕೇವಲ 85 ಮಂದಿ ಮಾತ್ರ ಸರ್ಕಾರಿ/ಖಾಸಗಿ ನೌಕರಿಯಲ್ಲಿದ್ದಾರೆ. ಇನ್ನುಳಿದ 541 ಸ್ತ್ರೀ– ಪುರುಷರು ತಮ್ಮ ಜೀವನೋಪಾಯಕ್ಕಾಗಿ ಗಾರೆ ಕೆಲಸ, ಹಮಾಲಿ, ರಿಪೇರಿ, ವರ್ಕ್ಸ್, ರದ್ದಿ ಸಂಗ್ರಹ, ಗ್ಯಾರೇಜ್ ಇತ್ಯಾದಿ ಕೆಲಸಗಳಲ್ಲಿ ನಿರತರಾಗಿರುವುದು ಅಧ್ಯಯನದ ಮೂಲಕ ಕಂಡುಬಂದಿದೆ.

ಕೋಷ್ಟಕ–11

ಕೆಲಸಗಳಲ್ಲಿ ತೊಡಗಿಕೊಂಡಿರುವ ಹಾವೇರಿ ಜಿಲ್ಲೆಯ ಹೆಳವರ ಪ್ರಮಾಣ:

ಕ್ರ.ಸಂ.	ಕೆಲಸದ ವಿವರಗಳು	ಪುರುಷ	ಸ್ತ್ರೀ	ಒಟ್ಟು
01	ಭಿಕ್ಷಾಟನೆ	257	248	505
02	ಕೃಷಿ	31	24	55
03	ಕೂಲಿ	89	73	162
04	ಸಣ್ಣ ವ್ಯಾಪಾರ	23	08	31
05	ಸರ್ಕಾರಿ/ಖಾಸಗಿ ನೌಕರಿ	64	21	85
06	ಇತರೆ ಕೆಲಸ (ಗಾರೆ ಕೆಲಸ, ಹಮಾಲಿ) ರಪೇರಿ, ವರ್ಕ್ಸ್, ರದ್ದಿ ಸಂಗ್ರಹ, ಗ್ಯಾರೇಜ್ ಇತ್ಯಾದಿ)	276	265	541
	ಒಟ್ಟು	**740**	**639**	**1379**




ಹಾವೇರಿ ಜಿಲ್ಲೆ ಹಾನಗಲ್ ತಾಲೂಕು ಸೋಮಸಾಗರದಲ್ಲಿ ಕೆಲವರಿಗೆ ಒಂದು ಎಕರೆ ಎರಡು ಎಕರೆ ಜಮೀನು ಇವೆ. ಹಳೆ ಧಾರವಾಡ ಜಿಲ್ಲೆ ಇದ್ದಾಗ ಎಂ. ಬಿ. ಹುಲಗಣ್ಣನವರ ಪ್ರಯತ್ನದ ಫಲವಾಗಿ ಗಂಗಾಕಲ್ಯಾಣ ಯೋಜನೆಯ ಅಡಿಯಲ್ಲಿ ಚಿಕ್ಕ ಚಿಕ್ಕ ರೈತರನ್ನು ಒಂದೇ ಹತ್ತಿರ ಕೂಡುವ ಜಮೀನುಗಳಿಗೆ ಏಳು ಕೊಳವೆ ಭಾವಿ ಹಾಕಿಸಿರುವುದು ಸ್ತುತ್ಯರ್ಹವಾಗಿದೆ.ಜಿಲ್ಲಾ ಪಂಚಾಯತ್ ಹಾವೇರಿ ಜಿಲ್ಲೆ ಆದ ನಂತರ ಮತ್ತೆ ಎರಡು ಕೊಳವೆ ಭಾವಿಗಳು ಮಂಜೂರಾಗಿ ಕೊರೆಯಲ್ಪಟ್ಟಿವೆ. ಇದು ಸಾಧನೆಯ ಮಾರ್ಗವೆಂದೇ ಹೇಳಬೇಕಾಗಿದೆ.

ಈ ಕೆಳಗಿನ ಕೋಷ್ಟಕ 12ನ್ನು ನೋಡಿದರೆ ಹಾವೇರಿ ಜಿಲ್ಲೆಯಲ್ಲಿನ ಒಟ್ಟು 173 ಮನೆಗಳಲ್ಲಿ 120 ಮನೆಗಳು ಭೂರಹಿತವುಗಳಾಗಿವೆ. ಇನ್ನುಳಿದ 44 ಮನೆಗಳು ಒಣ ಭೂಮಿಯನ್ನು ಹೊಂದಿದ್ದರೆ 25 ಮನೆಗಳು ಮಾತ್ರ ನಿರಾವರಿ ಭೂಮಿಯನ್ನು ಹೊಂದಿರುವುದು ಕ್ಷೇತ್ರಾಧ್ಯಯನದ ಮೂಲಕ ಗೊತ್ತಾಗಿದೆ. ಅರೆ ಮಲೆನಾಡು ಭಾಗವಾದ ರಾಣೇಬೆನ್ನೂರು ಮತ್ತು ಹಾನಗಲ್ ತಾಲೂಕುಗಳಲ್ಲಿ ನೆಲೆಸಿರುವ ಹೆಳವರಲ್ಲಿ ಮಾತ್ರ ಅಲ್ಪ ಪ್ರಮಾಣದ ನಿರಾವರಿ ಜಮೀನು ಇರುವುದು ಕಂಡು ಬಂದಿದೆ. ಬೆಲೆ ಏರಿಕೆಯ ದುಬಾರಿ ಜೀವನದಲ್ಲಿ ಬಡವರು ಕಾಫಿ ಎಸ್ಟೇಟ್ ಕಾರ್ಯಕ್ಕೆ ಹೋಗುತ್ತಾರೆ. ಕೆಲವರು ವರ್ಷಗಟ್ಟಲೆ ಅಲ್ಲಿಯೇ ಬಿಡಾರ ಹಾಕಿ ಕೆಲಸಮಾಡುತ್ತಾರೆ. ನಿವೇಶನ ಇದ್ದವರಿಗೆ ಮಾತ್ರ ಕೆಲವು ಗ್ರಾಮಗಳಲ್ಲಿ ರಾಜೀವಗಾಂಧಿ ವಸತಿ ನಿಗಮದಿಂದ ಮನೆಗಳಾಗಿವೆ. ರಾಜಕೀಯ ವ್ಯಕ್ತಿಗಳು ಮನಸಾವಹಿಸಿ ಈ ಜನಾಂಗದವರಿಗೆ ಸರಕಾರದಿಂದ ದೊರೆಯುವ ಸೌಲಭ್ಯ ಕೊಡಿಸಿಲ್ಲ. ಈ ವಿಷಯ ಸಮುದಾಯದವರಿಂದ ತಿಳಿದಾಗ ಖೇದವಾಯಿತು.

ಕೋಷ್ಟಕ–12

ಹಾವೇರಿ ಜಿಲ್ಲೆಯ ಹೆಳವ ಸಮುದಾಯದ ತಾಲೂಕು ಮತ್ತು ಗ್ರಾಮವಾರು ಭೂಹಿಡುವಳಿ:

ಕ್ರ.ಸಂ	ತಾಲೂಕು	ಗ್ರಾಮ/ನಗರ	ಒಟ್ಟು ಮನೆಗಳು	ಹೊಂದಿರುವ ಕೃಷಿ ಭೂಮಿ (ಎಕರೆಗಳಲ್ಲಿ)			ಭೂರಹಿತ ಮನೆಗಳು
				ಒಣ	ನೀರಾವರಿ	ಒಟ್ಟು	
01	ರಾಣೇಬೆನ್ನೂರು	ರಾಣೇಬೆನ್ನೂರು	65	19	14	33	45
02	ಬ್ಯಾಡಿಗಿ	ಕಾಗಿನೆಲೆ	04	02	–	02	03
03	ಹಾವೇರಿ	ಹೊಸರಿತ್ತಿ	02	–	–	–	02
04	ಹಾವೇರಿ	ನೆಗಲೂರು	02	–	–	–	02
05	ಹಾನಗಲ್	ನರೇಗಲ್	01	–	–	–	01
06	ಹಾನಗಲ್	ಮಾಸನಕಟ್ಟೆ	08	02	02	04	04
07	ಹಾನಗಲ್	ಸೋಮಸಾಗರ	68	17	09	26	42
08	ಶಿಗ್ಗಾಂವ	ಮುಗಳೀಕಟ್ಟೆ	08	–	–	–	08
09	ಶಿಗ್ಗಾಂವ	ತೊರೂರು	12	04	–	04	10
10	ಸವಣೂರು	ತೊಂಡೂರು ಹೊಸಳ್ಳಿ	03	–	–	–	03
	ಒಟ್ಟು		173	44	25	69	120



ಹೆಳವರ ಶೈಕ್ಷಣಿಕ ಸ್ಥಿತಿಗತಿ:


2011ರ ಜನಗಣತಿಯ ಪ್ರಕಾರ ರಾಜ್ಯದ ಒಟ್ಟಾರೆ ಸಾಕ್ಷರತೆಯ ಪ್ರಮಾಣ ಶೇ. 67.66 ಇದ್ದರೆ, ಹೆಳವರ ಸಾಕ್ಷರತೆ ಪ್ರಮಾಣ ಶೇ. 15 ಇದೆ. ಅದರಲ್ಲೂ ಹೆಳವ ಮಹಿಳೆಯರ ಸಾಕ್ಷರತೆಯ ಪ್ರಮಾಣ ಶೇ. 10 ಮಾತ್ರ ಇರುವುದು ಕಂಡು ಬರುತ್ತದೆ. ಇದಕ್ಕೆ ಕಾರಣ ಈ ಸಮುದಾಯದ ಆರ್ಥಿಕ ದುಸ್ಥಿತಿ ಎಂಬುದು ಸ್ಪಷ್ಟವಾಗುತ್ತದೆ. ಸದರಿ ಸಮುದಾಯದ ಶೇ. 65 ರಷ್ಟು ಜನ ಎರಡು ಹೊತ್ತಿನ ಊಟಕ್ಕೆ ಪರದಾಡುವಾಗ ಶಿಕ್ಷಣ ಪಡೆಯುವುದಾದರೂ ಹೇಗೆ? ಸಮುದಾಯಗಳು ಆರ್ಥಿಕವಾಗಿ ಮುಂದುವರೆಯದೆ, ಆಧುನಿಕ ಯುಗದಲ್ಲಿ ಪೈಪೋಟಿ ನಡೆಸುವುದಾದರೂ ಹೇಗೆ? ಈ ಸಮುದಾಯದ ಸಾಕ್ಷರತೆಯ ಪ್ರಮಾಣವು ಅತ್ಯಂತ ಹೀನಾಯ ಸ್ಥಿತಿಯಲ್ಲಿರುವುದು ಕಂಡು ಬರುತ್ತದೆ. ಇದಕ್ಕೆ ಪ್ರಮುಖ ಕಾರಣ ಅವರಲ್ಲಿನ ಆರ್ಥಿಕ ಹಿಂದುಳಿದಿರುವಿಕೆ. ಈ ಸಮುದಾಯವನ್ನು ವ್ಯವಸ್ಥಿತವಾಗಿ ಆರ್ಥಿಕವಾಗಿ ಮುನ್ನಡೆಸದಿದ್ದಲ್ಲಿ ಇವರನ್ನು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಸಬಲೀಕರಣಗೊಳಿಸಲು ಸಾಧ್ಯವಿಲ್ಲ. ಅದರಲ್ಲೂ ಶೈಕ್ಷಣಿಕವಾಗಿ ಸಬಲಗೊಳ್ಳದ ಯಾವ ಸಮುದಾಯವು ವರ್ತಮಾನವನ್ನು ಎದುರಿಸಿ ನಿಲ್ಲಲು ಸಾಧ್ಯವಿಲ್ಲ. ಈ ಕಾರಣದಿಂದ ಹೆಳವ ಸಮುದಾಯವನ್ನು ಆರ್ಥಿಕವಾಗಿ ಸಬಲಗೊಳಿಸಿದರೆ ಅದು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಸಬಲಗೊಳ್ಳಲು ಸಾಧ್ಯವಾಗುತ್ತದೆ.

ಹಾವೇರಿ ಜಿಲ್ಲೆಯಲ್ಲಿ ಈ ಸಮುದಾಯ ಸುಮಾರು 1379 ಜನಸಂಖ್ಯೆ ಹೊಂದಿದೆ. ಈವರೆಗೆ ಜನಸಂಖ್ಯೆಯ ಶೇಕಡಾ 11.05ರಷ್ಟು ಮಾತ್ರ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಮುಗಿಸಿದ್ದಾರೆ. ಮುಂದೆ ಶೇಕಡಾ 8.01ರಷ್ಟು ಎಸ್.ಎಸ್.ಎಲ್.ಸಿ. ಮುಗಿಸಿದ್ದಾರೆ. ಸ್ತ್ರೀ–ಪುರುಷರಿಬ್ಬರೂ ಸೇರಿ ಒಟ್ಟು 138 ಜನರು ಮಾತ್ರ ಪದವಿ ಪೂರ್ವ/ಡಿಪ್ಲಮೊ/ಐ.ಟಿ.ಐಗಳನ್ನು ಪಡೆದಿದ್ದಾರೆ. ಸಾಕ್ಷರತೆಗೆ ಅರ್ಹರಾದ (ನಾಲ್ಕು ವರ್ಷದ ಮೆಲ್ಪಟ್ಟವರು) ಒಟ್ಟು 1198 ಹೆಳವರಲ್ಲಿ 882 ಮಂದಿ ಹೆಳವರು ಅನಕ್ಷರಸ್ಥರಾಗಿದ್ದಾರೆ. ಅಂದರೆ ಶೇಕಡ 73.62 ರಷ್ಟು ಪ್ರಮಾಣದಲ್ಲಿದ್ದಾರೆ. (ಕೋಷ್ಟಕ 13 ನೋಡಿ) ಶೈಕ್ಷಣಿಕವಾಗಿ ತುಂಬಾ ಹಿಂದುಳಿದಿರುವುದರಿಂದ, ಮುಂದುವರೆಯಬೇಕಾಗಿರುವುದು ಅತ್ಯಗತ್ಯವಾಗಿದೆ.

ಕೋಷ್ಟಕ–13

ಹಾವೇರಿ ಜಿಲ್ಲೆಯ ಹೆಳವ ಸಮುದಾಯದವರ ಶೈಕ್ಷಣಿಕ ಸ್ಥಾನಮಾನ:

ಕ್ರ.ಸಂ	ವಿವರಗಳು	ಪುರುಷ	ಸ್ತ್ರೀ	ಒಟ್ಟು	ಶೇಕಡ
01	ಒಟ್ಟು ಜನಸಂಖ್ಯೆ	**740**	**639**	**1379**	**100%**
02	ಸಾಕ್ಷರತೆಗೆ ಅನರ್ಹರು (4ವರ್ಷದ ಒಳಗಿನವರು)	94	87	181	13.13%
03	ಸಾಕ್ಷರತೆಗೆ ಅರ್ಹರು (4 ವರ್ಷದ ಮೇಲ್ಪಟ್ಟವರು)	646	552	1198	86.87%
04	ಪ್ರಾಥಮಿಕ /ಮಾಧ್ಯಮಿಕ ಶಿಕ್ಷಣ	138	47	138	11.51%
05	ಪ್ರೌಢಶಿಕ್ಷಣ	74	22	96	8.01%
06	ಪದವಿಪೂರ್ವ/ಡಿಪ್ಲಮೊ/ಐ.ಟಿ.ಐ)	22	16	38	3.17%
07	ಪದವಿ	27	17	44	3.67%
08	ಅನಕ್ಷರಸ್ಥರು	432	450	882	73.62%



ಸಮಾಜದಲ್ಲಿ ತೀರಾ ಹಿಂದುಳಿದಿರುವ ಹೆಳವರು ಬುಡಕಟ್ಟು ವರ್ಗಕ್ಕೆ ಸೇರಿದವರಾಗಿದ್ದಾರೆ. ಆದರೆ, ಇವರನ್ನು ಇತರೆ ಹಿಂದುಳಿದ ವರ್ಗಕ್ಕೆ ಸೇರಿಸಿರುವುದರಿಂದ ಸೂಕ್ತ ರೀತಿಯಲ್ಲಿ ಸರ್ಕಾರದ ಯಾವುದೇ ಮೀಸಲಾತಿ ಸೌಲಭ್ಯಗಳು ಸಿಗದಂತಾಗಿವೆ. ಈ ಹಿನ್ನೆಲೆಯಲ್ಲಿ ಹೆಳವರು ಸೇರಿದಂತೆ ಎಲ್ಲಾ ಬುಡಕಟ್ಟು ಸಮುದಾಯಗಳಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಾದರಿಯಲ್ಲಿ ಪ್ರತ್ಯೇಕ ವರ್ಗವನ್ನು ರೂಪಿಸಿ ಪ್ರತ್ಯೇಕ ಮೀಸಲಾತಿ

ನೀಡಬೇಕು. ಈ ಮೂಲಕ ಇವರಿಗೆ ಸಂವಿಧಾನ ಬದ್ಧವಾದ ಸೌಲಭ್ಯಗಳನ್ನು ಕಲ್ಪಿಸಿ ಅವರ ಶ್ರೇಯೋಭಿವೃದ್ಧಿಗೆ ನಾಂದಿ ಹಾಡಬೇಕಿದೆ. ಈ ಸಮುದಾಯದ ಮಕ್ಕಳ ಶಿಕ್ಷಣಕ್ಕಾಗಿ ವಸತಿ ಶಾಲೆ ಅಥವಾ ಆಶ್ರಮ ಶಾಲೆಗಳನ್ನು ಪ್ರಾರಂಭಿಸಬೇಕು. ಈ ವರ್ಗದ ಜನರಿಗೆ ನಿಶ್ಚಿತ ಆದಾಯ ತರುವ ಆರ್ಥಿಕ ಮೂಲಗಳ ಅಗತ್ಯವಿದೆ. ಸರಕಾರವು ಈ ಕುರಿತು ಗಂಭೀರವಾಗಿ ಯೋಚಿಸಬೇಕಿದೆ. ಒಟ್ಟಿನಲ್ಲಿ ಈ ಸಮುದಾಯದ ಜನರ ಮನಃ ಪರಿವರ್ತನೆ ಮಾಡುವುದರ ಜೊತೆಗೆ ಅವರಿಗೆ ಬೇಕಾದ ಅಗತ್ಯಗಳನ್ನು ಗುರುತಿಸಿ, ಆ ನಿಟ್ಟಿನಲ್ಲಿ ಸರಕಾರ ವಿಶೇಷ ಯೋಜನೆಗಳನ್ನು ರೂಪಿಸಬೇಕಾಗಿದೆ.

ಈ ಸಮುದಾಯಕ್ಕೆ ಸೇರಿದ ಕೆಲವರು ಮಾತ್ರ ಉತ್ತಮ ಶಿಕ್ಷಣ ಪಡೆದು ಉತ್ತಮ ಸ್ಥಿತಿಯಲ್ಲಿದ್ದಾರೆ ಎಂಬುದು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಕಂಡು ಬರುತ್ತದೆ. ಹಾನಗಲ್ ತಾಲೂಕು ಸೋಮಸಾಗರದಲ್ಲಿ ಆರು ಜನ ಶಿಕ್ಷಕರಿದ್ದಾರೆ. ಒಬ್ಬರು ಹೈಕೋರ್ಟ ಲಾಯರಾಗಿದ್ದಾರೆ. ಒಬ್ಬರು ಡಿಪ್ಲೋಮಾ ಇಂಜನೀಯರಾಗಿದ್ದಾರೆ. ಹತ್ತು ಜನ ಬೆಂಗಳೂರಿನ ಗಾರ್ಮೆಂಟ್ಸ್‌ಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ರಾಣೇಬೆನ್ನೂರಿನ ಶ್ರೀ ಎಂ.ಬಿ. ಹುಲಗಣ್ಣನವರ ಇವರು ಎಂ.ಎ. ಬಿ.ಇಡಿ., ಪದವಿಧರರು. ಮುಖ್ಯೋಪಾಧ್ಯಾಯರಾಗಿ ನಿವೃತ್ತಿ ಹೊಂದಿದ್ದಾರೆ. ರಾಜ್ಯಪ್ರಶಸ್ತಿ, ರಾಷ್ಟ್ರಪ್ರಶಸ್ತಿ, ಎನ್.ಸಿ.ಇ.ಆರ್.ಟಿ. ಪ್ರಶಸ್ತಿ ಮತ್ತು ಬಸವ ಸಮಿತಿ ಪುರಸ್ಕೃತರು, ಸುಮಾರು 40 ಪುಸ್ತಕ ರಚನೆ ಮಾಡಿ ಪ್ರಕಟಿಸಿದ್ದಾರೆ. ಒಳ್ಳೆ ಸಾಹಿತಿಗಳು, ಅನೇಕ ಸಂಘ ಸಂಸ್ಥೆಗಳಲ್ಲಿ ಪದಾಧಿಕಾರಿಗಳಾಗಿರುತ್ತಾರೆ. ಈಗ 75 ವರ್ಷವಾದರೂ ಚೈತನ್ಯದ ಚಿಲುಮೆ ಆಗಿದ್ದಾರೆ. ತಮ್ಮ ಸಮುದಾಯದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎಂದು ಬೇರೆ ಬೇರೆ ಸಮಾಜದ ಹಾಗೂ ಸರ್ಕಾರದ ನೆರವಿನಿಂದ ದಾವಣಗೆರೆಯಲ್ಲಿ ಒಂದು ವಿದ್ಯಾರ್ಥಿನಿಲಯವನ್ನು ಟ್ರಷ್ಟ ಮಾಡಿಕೊಂಡು ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸಮುದಾಯದವರಲ್ಲಿ ಕಂಡುಬಂದ ವಾಸ್ತವಿಕ ಸಂಗತಿಗಳು:

1. ಹೆಳವರು ವಾಸಿಸುವ ಮನೆಯ ಸ್ವರೂಪದಿಂದ ಅವರ ಸ್ಥಿತಿ ಹೇಗಿರುತ್ತದೆ ಎಂದು ತಿಳಿಯುತ್ತದೆ.
2. ಆಹಾರ ಪದ್ಧತಿ ಸಾಮಾನ್ಯವಾಗಿದ್ದರೂ ಎಲ್ಲರೂ ಮಾಂಸಹಾರಿಗಳಾಗಿದ್ದಾರೆ. ಮಧ್ಯಪಾನ ಮಾಡುತ್ತಾರೆ.
3. ವಾಸಿಸುವ ಮನೆಗಳಿಗೆ ಶೌಚಾಲಯ ವ್ಯವಸ್ಥೆ ಇಲ್ಲ.
4. ಮೂಲ ಒಕ್ಕಲುಮನೆ ಕಸಬು ಬಿಡುವುದಾದಲ್ಲಿ ಆರ್ಥಿಕ ಬೆಳವಣಿಗೆ ಹೇಗೆ ಎಂದು ಚಿಂತಿಸುತ್ತಾರೆ.
5. ಮಕ್ಕಳು ಹೆಚ್ಚಿನ ಶಿಕ್ಷಣ ಹೊಂದಲು ಬಯಸುತ್ತಾರೆ. ಸರಿಯಾದ ಸೌಲಭ್ಯಗಳು ದೊರೆಯದಿದ್ದರಿಂದ ವಂಚಿತರಾಗಿದ್ದಾರೆ.

6. ರಾಜಕೀಯ ನಾಯಕತ್ವದ ಬಗ್ಗೆ ಹೆಚ್ಚು ಆಸಕ್ತಿ ಇಲ್ಲ.
7. ಹೆಳವರು ಸಾಂಸ್ಕೃತಿಕವಾಗಿ ಹಲವಾರು ಬದಲಾವಣೆಗಳನ್ನು ಜೀವನದಲ್ಲಿ ಮಾಡಿಕೊಂಡಿರುತ್ತಾರೆ.
8. ಸಮಾಜದ ಮುಖ್ಯವಾಹಿನಿಯಿಂದ ಬಹಳಷ್ಟು ದೂರವಿರುವ ಇವರು ಹಲವಾರು ಸರ್ಕಾರಿ ಯೋಜನೆಗಳಿಂದ ವಂಚಿತರಾಗಿದ್ದಾರೆ.
9. ಹೈನುಗಾರಿಕೆ, ಕುರಿಸಾಕಣಿಕೆಗೆ ಒತ್ತು ನೀಡಿ ಉಚಿತವಾಗಿ ಧನಸಹಾಯ ಮಾಡಬೇಕು.

ಸುಧಾರಣೆಗೆ ಕೈಗೊಳ್ಳಬೇಕಾದ ಪ್ರಮುಖ ಕ್ರಮಗಳು:

- ಹೆಳವರು ಒಂದೆಡೆ ನೆಲೆಸುವಂತೆ ನಿವೇಶನ ನೀಡಿ ಮನೆ ನಿರ್ಮಿಸಿಕೊಡಬೇಕು.
- ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಿ ಈ ಸಮುದಾಯದವರಿಗೆ ವಸತಿ ಶಾಲೆ ನಿರ್ಮಿಸಬೇಕು.
- ಕುಲಕೊಂಡಾಡುವ ಹಿರಿಯ ಜೀವಿಗಳಿಗೆ ಮಾಸಾಶನ ನೀಡಬೇಕು. ಈ ಸಂಸ್ಕೃತಿ ಉಳಿಯುವಂತೆ ನೋಡಿಕೊಳ್ಳಬೇಕು.
- ಹೆಚ್ಚು ಜನ ವಾಸಮಾಡವಲ್ಲಿ ಈ ಸಮುದಾಯದವರಿಗೆ ಸಣ್ಣ ಸಣ್ಣ ಕೈಗಾರಿಕೆಗನ್ನು ಸ್ಥಾಪಿಸಿ ಕೆಲಸ ಮಾಡಲು ಪ್ರೋತ್ಸಾಹಿಸಬೇಕು.
- ವಂಶಾವಳಿ ಹೇಳುವ ಹೆಳವರ ದಾಖಲೆಗಳನ್ನು ಸರ್ಕಾರ ಜೋಪಾನ ಮಾಡುವ ಜವಾಬ್ದಾರಿ ಹೊರಬೇಕು.
- ಒಟ್ಟಾರೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹೆಳವ ಸಮುದಾಯದವರಿಗೆ ವಿಶೇಷ ಪ್ಯಾಕೇಜ್ ಬಿಡುಗಡೆ ಮಾಡಿ ಅಭಿವೃದ್ಧಿ ಕೈಗೊಳ್ಳಲು ಸರ್ಕಾರ ಮುಂದಾಗಬೇಕು.

3.7. ಸುಡಗಾಡು ಸಿದ್ಧ ಸಮುದಾಯದ ಸಾಮಾಜಿಕತೆ:

ಕರ್ನಾಟಕದಲ್ಲಿ ವಾಸಿಸುತ್ತಿರುವ ಹಲವಾರು ಅಲೆಮಾರಿ ಬುಡಕಟ್ಟು ಸಮುದಾಯಗಳಲ್ಲಿ ಸುಡಗಾಡು ಸಿದ್ಧರು ಒಬ್ಬರು. ಕರ್ನಾಟಕದಲ್ಲಿ ಇವರನ್ನು ಸಿದ್ಧರು, ಸುಡಗಾಡು ಸಿದ್ಧರು, ಮಸಣದ ಸಿದ್ಧರು ಎಂದೇ ಗುರುತಿಸುತ್ತಾರೆ. ಬಾಳ ಸಂತೋಷಿಗರು, ಮಸಣದ ಜೋಗಿಗಳು, ಬೈರಾಗಿಗಳು, ವೇಷಗಾರರು ಮತ್ತು ಸುಡಗಾಡು ಸಿದ್ಧರು ಆಂದ್ರ ಮೂಲದವರಾಗಿದ್ದು, ಒಂದೇ ಬಗೆಯ ಭಿಕ್ಷಾ ವೃತ್ತಿಯನ್ನು ಅವಲಂಬಿಸಿದವರಾಗಿದ್ದಾರೆ. ಅವರ ಆಚಾರ, ವಿಚಾರ, ಸಂಸ್ಕೃತಿ, ಸಂಪ್ರದಾಯ ಮೊದಲಾದವುಗಳು ಹೆಚ್ಚಿನ ಸಾಮ್ಯತೆಯನ್ನು ಪಡೆಯುತ್ತವೆ. ತಮ್ಮ ಹೊಟ್ಟೆಪಾಡಿಗಾಗಿ ಬೇರೆ ಬೇರೆ ಬಗೆಯ ಪ್ರದರ್ಶನಗಳನ್ನು ನೀಡುವ ಈ ಜನರಲ್ಲಿ ಒಂದು ರೀತಿಯ ಆಂತರಿಕ ಮತ್ತು ಭಾವನಾತ್ಮಕ ಸಂಬಂಧವನ್ನು ಕಾಣಬಹುದು.

ನಮ್ಮ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಕಂಡುಬರುವ ಸುಡುಗಾಡು ಸಿದ್ಧರನ್ನು ನನ್ನ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿಲ್ಲ. ಕಾರಣ ನನ್ನ ಸಂಶೋಧನಾ ವ್ಯಾಪ್ತಿಯು ಹಾವೇರಿ ಜಿಲ್ಲೆಗೆ ಸೀಮಿತವಾದ್ದರಿಂದ, ಈ ಜಿಲ್ಲೆಯಲ್ಲಿರುವ ಸುಡಗಾಡು ಸಿದ್ಧರನ್ನು ಮಾದರಿ ಸಮೀಕ್ಷೆ ಮೂಲಕ ಆಯ್ಕೆ ಮಾಡಿಕೊಳ್ಳಲಾಗಿದೆ. ಬಡತನ ರೇಖೆಗಿಂತ ಕಡಿಮೆ ಇರುವ ಪ್ರದೇಶಗಳಲ್ಲಿ ಇವರ ಕುಟುಂಬಗಳ ಪೂರ್ಣ ಮಾಹಿತಿಯನ್ನು ಪಡೆಯಲಾಗಿದೆ

ಕರ್ನಾಟಕದಲ್ಲಿ ತೀರ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಸುಡಗಾಡು ಸಿದ್ಧರು ಸಾಮಾನ್ಯವಾಗಿ ಇಂದಿಗೂ ತಮ್ಮದೇ ಆದ ಪ್ರತ್ಯೇಕ ಸ್ಥಳಗಳಲ್ಲಿ ಜೋಪಡಿಗಳಲ್ಲಿ ವಾಸಿಸುತ್ತಾರೆ. ವರ್ಷ ಪೂರ್ತಿ ಭಿಕ್ಷಾಟನೆಯಲ್ಲಿಯೇ ಕಾಲ ಕಳೆಯುವ ಇವರು ಬೀಡು ಬಿಟ್ಟ ಸ್ಥಳದಲ್ಲಿಯೇ ತಮ್ಮ ಪ್ರತ್ಯೇಕತೆಯನ್ನು ಕಾಯ್ದುಕೊಳ್ಳುತ್ತಾರೆ. ಹೀಗೆ ಬೀಡು ಬಿಟ್ಟ ಇವರು ಸದಾ ಸಂಚಾರಿಗಳಾಗಿದ್ದು, ಎಲ್ಲಿಯೂ ಶಾಶ್ವತವಾಗಿ ನೆಲೆಯೂರುವುದಿಲ್ಲ. ಆದರೆ ಅವರಿಗೆ ಪ್ರಾದೇಶಿಕವಾಗಿ ಅವರದೇ ಆದ ಪ್ರತ್ಯೇಕ ಸ್ಥಳಗಳಿದ್ದು, ವರ್ಷಕ್ಕೊಮ್ಮೆ ಸಂಚಾರ ಮುಗಿಸಿಕೊಂಡು ಸ್ವಸ್ಥಾನಕ್ಕೆ ಬಂದು ದೈವದವರಿಗೆ ಬಾಯಿ ತೊಳೆಸಿ ಹೋಗಬೇಕೆಂಬ ನಿಯಮವಿದೆ. ಅಲ್ಲದೆ ಮದುವೆ, ಮುಂಜಿ, ಜಾತ್ರೆ, ಮರಣ ಮುಂತಾದ ಶುಭ ಕಾರ್ಯಗಳೆಲ್ಲ ಮೂಲ ಸ್ಥಳದಲ್ಲಿಯೇ ನೆಡೆಯಬೇಕೆಂಬ ಸಾಮಾಜಿಕ ಕಟ್ಟುಪಾಡುಗಳಿವೆ.

ಸುಡುಗಾಡು ಸಿದ್ಧರ ಜೀವನ ತುಂಬಾ ಚಿಂತಾಜನಕವಾಗಿದೆ. ಬಿಕ್ಷಾಟನೆಯಿಂದಲೇ ಉಪಜೀವನ ನಡೆಸುತ್ತಿರುವ ಇವರು, ಭಿಕ್ಷೆ ಸಿಗದಿದ್ದಲ್ಲಿ ಉಪವಾಸ ಬೀಳುತ್ತಾರೆ. ಮಳೆಗಾಲದಲ್ಲಂತೂ ಅವರ ಪರಿಸ್ಥಿತಿ ಹೇಳತೀರದಷ್ಟು ದಯನೀಯವಾಗಿದೆ. ಈ ಸಮುದಾಯ ಇಂದು ಯಾವ ಅಭಿವೃದ್ಧಿಯನ್ನು ಕಾಣದೆ ನಾಗರೀಕ ಸಮಾಜದಿಂದ ಅವಮಾನಕ್ಕೆ ಗುರಿಯಾಗಿದೆ. ತಲೆ ಮೇಲೆ ಸೂರಿಲ್ಲದೆ, ನೆಲೆ, ನೆಲ ಇಲ್ಲದೆ, ವಿದ್ಯೆ ಇಲ್ಲದೆ, ಭಿಕ್ಷಾಟನೆಯಲ್ಲಿಯೇ ಬದುಕುತ್ತಿದ್ದಾರೆ. ಸರ್ಕಾರ ಇವರನ್ನು ಪರಿಶಿಷ್ಟ ಜಾತಿಗೆ ಸೇರಿಸಿದರೂ ಸರ್ಕಾರದ

ಯೋಜನೆಗಳು ಸಿಕ್ಕಿಲ್ಲ. ಬಯಲಲ್ಲಿ ವಾಸಮಾಡುವ ನಮ್ಮನ್ನು ಕೆಲವು ಬಾರಿ ಕಳ್ಳರೆಂದು ಭಾವಿಸುತ್ತಾರೆ. ನಮ್ಮ ಗೋಳು ಕೇಳುವವರಿಲ್ಲ ಎಂದು ಸಮಾಜದ ಮುಖಂಡ ರಾಮಣ್ಣ ಬಾಡಗಿ ನೊಂದು ನುಡಿಯುತ್ತಾರೆ.

ಆಧುನಿಕ ಜಗತ್ತಿನಲ್ಲಿ ಅಲೆಮಾರಿಗಳು ನೆಲ ಮತ್ತು ನೆಲೆ ಎರಡೂ ಇಲ್ಲದವರು. ಹೀಗಾಗಿ ಇವರು ಸಮಾಜದ ಮುಖ್ಯ ಸ್ಥಾನದಲ್ಲಿ ನಿಲ್ಲಲು ಆಗಿಲ್ಲ, ಜೊತೆಗೆ ಮುಖ್ಯವಾಹಿನಿಯಲ್ಲಿ ಪಾಲುದಾರರಾಗಲೂ ಆಗುತ್ತಿಲ್ಲ. ಸುಡಗಾಡು ಸಿದ್ಧರ ಇಂದಿನ ಸ್ಥಿತಿಗತಿಗಳನ್ನು ಗಮನಿಸಿದರೆ ಅವರು ಉತ್ಪಾದನಾ ವ್ಯವಸ್ಥೆಯಲ್ಲಿ ಎಂದೂ ತೊಡಗಿಸಿಕೊಂಡವರಲ್ಲ. ಬೇರೆಯವರ ಉತ್ಪಾದನೆಯಲ್ಲಿ ಕೈ ಚಾಚಿ ಬದುಕುವ ಪರಂಪರೆಯಲ್ಲಿಯೇ ಬಂದಿದ್ದಾರೆ. ಕರ್ನಾಟಕದಲ್ಲಿ ಈ ಸಮುದಾಯವನ್ನು ಸಿದ್ಧ, ಕಾಡು ಸಿದ್ಧ, ಸುಡುಗಾಡು ಸಿದ್ಧ, ಮಸಣ ಸಿದ್ಧ ಮುಂತಾದ ಹೆಸರುಗಳಿಂದ ಗುರುತಿಸಲ್ಪಟ್ಟರೆ, ಆಂದ್ರಪ್ರದೇಶದಲ್ಲಿ 'ಕಾಟಿಪಾಪ' ಎಂದು ಗುರುತಿಸಲ್ಪಡುತ್ತಾರೆ. ಮಹಾರಾಷ್ಟ್ರದಲ್ಲಿ ಮಸಣ ಜೋಗಿ ಎಂದು ಕರೆಯುತ್ತಾರೆ. ಮೂಲತ: ಕುರುಬ ಜನಾಂಗದವರು ಎಂದು ಕರೆಯುವ ಇವರು ಕಾಡಿನಲ್ಲಿಯೇ ಉಳಿದು ಬೆಳೆದು ಸುಡುಗಾಡು ಕಾಯಕವನ್ನೇ ಮಾಡುತ್ತಾ ಹೊಟ್ಟೆಪಾಡಿಗಾಗಿ ಭಿಕ್ಷೆ ಬೇಡುತ್ತಾ ಬಂದವರಾಗಿದ್ದಾರೆ.

ಒಟ್ಟಿನಲ್ಲಿ ಕರ್ನಾಟಕದ ಸುಡಗಾಡು ಸಿದ್ಧರನ್ನು ಕುರಿತು ಈವರೆಗೆ ನಡೆದಿರುವ ಸಂಶೋದನಾ ಕಾರ್ಯ ಅವರ ಸಾಹಿತ್ಯ, ಸಂಸ್ಕೃತಿ ಮತ್ತು ಕಲೆಗಳ ದೃಷ್ಟಿಯಿಂದ ಸಮಗ್ರ ಹಾಗೂ ಸಮರ್ಪಕವಾಗಿಲ್ಲವೆಂದು ಹೇಳಬಹುದು. ಪ್ರಸ್ತುತ ಅಧ್ಯಯನವು ಈ ಕೊರತೆಯನ್ನು ನೀಗಿಸುವಲ್ಲಿ ಒಂದು ನಿಟ್ಟಿನ ಪ್ರಯತ್ನವಷ್ಟೇ ಎನ್ನಬಹುದು. ಇಂದು ಸುಡುಗಾಡು ಸಿದ್ಧರು ತಮ್ಮ ಅಸ್ಥಿತ್ವ ಉಳಿಸಿಕೊಳ್ಳಬೇಕಾದರೆ, ಸಂಘಟಿತರಾಗಬೇಕು, ಸಮುದಾಯದ ರಕ್ಷಣೆಗಾಗಿ ಸ್ವ ಉದ್ಯೋಗ ಸೃಷ್ಟಿ ಮಾಡಿಕೊಳ್ಳಬೇಕು. ಬಿಕ್ಷಾಟನೆಯನ್ನೇ ಉದ್ಯೋಗವೆಂದು ತಿಳಿದುಕೊಳ್ಳಬಾರದು. ಅಲೆಮಾರಿತನಕ್ಕೆ ಅಂತ್ಯವಾಡಿ ಕಡ್ಡಾಯವಾಗಿ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು. ಈ ಸವಲತ್ತುಗಳನ್ನು ನೀಡಲು ಸರ್ಕಾರ ಮತ್ತು ಸ್ಥಳೀಯ ಸಂಘ ಸಂಸ್ಥೆಗಳು ನೆರವಾಗಬೇಕು.

ಸುಡುಗಾಡು ಸಿದ್ಧರು ಆಧುನಿಕ ಸಮಾಜದಲ್ಲಿ ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಯಾವ ಸ್ಥಿತಿಯಲ್ಲಿದ್ದಾರೆ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಈ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಯಿತು.

ನೆಲೆಗಳು:

ಅಲೆಮಾರಿಗಳಾದ ಸುಡಗಾಡು ಸಿದ್ಧರ ಜನಸಂಖ್ಯೆ ಬಗೆಗೆ ನಮಗೆ ನಿಖರವಾಗಿ ತಿಳಿದು ಬರುವುದಿಲ್ಲ. ಕರ್ನಾಟಕದ ಎಲ್ಲಾ ಪ್ರದೇಶಗಳಲ್ಲಿ ಇವರು ಕಂಡುಬರುತ್ತಾರೆ. ಆದರೆ ಹಿಂದುಳಿದ

ವರ್ಗಗಳ ಆಯೋಗದ ವರದಿಯಲ್ಲಿ ಶ್ರೀ. ಎಲ್.ಜಿ. ಹಾವನೂರು ರವರು 1971ರ ಜನಗಣತಿಯನ್ನು ಆಧಾರವಾಗಿಟ್ಟುಕೊಂಡು ಕರ್ನಾಟಕದಲ್ಲಿ ಇವರ ಜನಸಂಖ್ಯೆ ಕೇವಲ 3123 ಎಂದು ಅಂದಾಜು ಮಾಡಿದ್ದಾರೆ. ಈ ವರದಿಯಲ್ಲಿ ಬೀದರ್, ಗುಲಬರ್ಗಾ, ರಾಯಚೂರು, ವಿಜಯಪುರ, ದಕ್ಷಿಣ ಕನ್ನಡ, ಕೊಡಗು, ಬಳ್ಳಾರಿ ಜಿಲ್ಲೆಗಳಲ್ಲಿರುವ ಸುಡಗಾಡು ಸಿದ್ಧರ ಜನಸಂಖ್ಯೆಯನ್ನು ನಮೂದಿಸಿಲ್ಲ. ಆದರೆ ಈ ಜಿಲ್ಲೆಗಳಲ್ಲೂ ಇವರ ಜನಸಂಖ್ಯೆ ಹೆಚ್ಚಿದೆ.

ಅಲೆಮಾರಿ ಸಮುದಾಯಕ್ಕೆ ಸೇರಿರುವ ಸುಡುಗಾಡು ಸಿದ್ಧರನ್ನು ಆಂಧ್ರಪ್ರದೇಶದಲ್ಲಿ ಕಾಟಿಪಾಪ, ಮಹಾರಾಷ್ಟದಲ್ಲಿ ಮಸಣಜೋಗಿ ಎಂದು ಕರೆಯುತ್ತಾರೆ. ಹಲವಾರು ವರ್ಷಗಳಿಂದ ರಾಜ್ಯದಲ್ಲಿ ವಾಸ ಮಾಡುತ್ತಿರುವ ಇವರು ಅನೇಕ ಮೂಲ ಸೌಕರ್ಯಗಳಿಂದ ವಂಚಿತರಾಗಿದ್ದಾರೆ. ರಾಜ್ಯದ ಧಾರವಾಡ, ದಾವಣಗೆರೆ, ಬಾಗಲಕೋಟೆ, ವಿಜಾಪುರ, ಬೆಂಗಳೂರು, ಉತ್ತರ ಕನ್ನಡ, ಹಾವೇರಿ, ಬಳ್ಳಾರಿ, ಉಡುಪಿ ಮತ್ತಿತರ 20 ಜಿಲ್ಲೆಗಳಲ್ಲಿ ಸುಮಾರು 1,20,381 ಸಿದ್ಧರು ವಾಸಮಾಡುತ್ತಿದ್ದಾರೆ. 18 ವರ್ಷ ಮೇಲ್ಪಟ್ಟವರು ಸುಮಾರು 75,473 ಮಂದಿ ಇದ್ದಾರೆ. 18 ವರ್ಷ ಕೆಳಗಿನ 43,606 ಜನರಲ್ಲಿ 36,819 ಮಂದಿ ಶಿಕ್ಷಣ ಪಡೆದಿದ್ದಾರೆ. 858 ಮಂದಿ ಸರ್ಕಾರಿ ನೌಕರರು ಆಗಿದ್ದಾರೆ. ಪರಿಶಿಷ್ಟ ಜಾತಿಗೆ ಸೇರಿದರೂ ಇನ್ನೂ ಬಹಳಷ್ಟು ಜನರು ವಾಸಿಸಲು ಸೂರಿಲ್ಲದೆ, ಬಯಲಲ್ಲಿ ಕಾಲ ನೂಕಬೇಕಾದ ಪರಿಸ್ಥಿತಿ ಇದೆ.

"ಹಾವೇರಿ ಜಿಲ್ಲೆಯಲ್ಲಿ ಬರುವ ಹಾನಗಲ್ಲ ತಾಲೂಕಿನಲ್ಲಿ ದ್ಯಾಮನಕೊಪ್ಪ, ಹಿರೇಕೆರೂರು ತಾಲೂಕಿನಲ್ಲಿ ಜಾವಳ್ಳಿ, ಶಿಗ್ಗಾಂವ ತಾಲೂಕಿನಲ್ಲಿ ರಾಜೀವ್ ನಗರ, ರಾಣೇಬೆನ್ನೂರು ನಗರ ಮುಂತಾದ ಕಡೆಗಳಲ್ಲಿ ಸುಮಾರು 1000ಕ್ಕೂ ಅಧಿಕ ಮಂದಿ ಸುಡಗಾಡು ಸಿದ್ಧರು ಇಪ್ಪತ್ತು ವರ್ಷಗಳಿಂದ ಬಯಲಲ್ಲಿ ವಾಸವಾಗಿದ್ದಾರೆ. ರಾಜೀವ್ ಗಾಂಧಿ, ಇಂಧಿರಾ ಗಾಂಧಿ ಆಶ್ರಯ ಮನೆ ಯೋಜನೆಗಳು, ಇವರ ಪಾಲಿಗೆ ಗಗನ ಕುಸುಮ. ಹಾವೇರಿಯಲ್ಲಿ 30ಕ್ಕೂ ಅಧಿಕ ಕುಟುಂಬಗಳು ಮತ್ತು ರಾಣೇಬೆನ್ನೂರಿನಲ್ಲಿ 35ಕ್ಕೂ ಹೆಚ್ಚು ಕುಟುಂಬಗಳು ಖಾಲಿ ನಿವೇಶನಗಳಲ್ಲಿ ಟೆಂಟ್ ಕಟ್ಟಿಕೊಂಡು ಜೀವಿಸುತ್ತಿದ್ದಾರೆ. ಮಾಲಿಕರು ಜಾಗ ಖಾಲಿ ಮಾಡಿಸಿದರೆ ಮತ್ತೊಂದು ನೆಲೆ ಹುಡುಕಿಕೊಂಡು ಹೋಗುತ್ತಾರೆ."[40]

ಜಿಲ್ಲೆಯ ಸುಡುಗಾಡು ಸಿದ್ದರ ಸಮುದಾಯದ ತಾಲೂಕುವಾರು, ಲಿಂಗಾವಾರು ಜನಸಂಖ್ಯೆಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ. ಅದರಂತೆ ಹಾವೇರಿ ಜಿಲ್ಲೆಯಲ್ಲಿ ಒಟ್ಟು 368 ಮನೆಗಳಿದ್ದು ಅದರಲ್ಲಿ 1477 ಮಂದಿ ಸುಡಗಾಡು ಸಿದ್ದರು ವಾಸಿಸುತ್ತಿದ್ದಾರೆ. ಇವರಲ್ಲಿ ಸ್ತ್ರೀಯರು 697 ಇದ್ದರೆ ಪುರುಷರು 780 ಇರುವುದು ಕಂಡುಬಂತು. ಹಾನಗಲ್ ತಾಲೂಕಿನ ದ್ಯಾಮನಕೊಪ್ಪದಲ್ಲಿ ಅತೀ ಹೆಚ್ಚು ಜನರು ನೆಲೆಸಿರುತ್ತಾರೆ.

ಕೋಷ್ಟಕ-14

ಪ್ರಸ್ತುತ ಅಧ್ಯಯನಕ್ಕೆ ಸಮೀಕ್ಷೆಗೊಳಪಡಿಸಿದ ಹಾವೇರಿ ಜಿಲ್ಲೆಯ ಸುಡಗಾಡು ಸಿದ್ಧ ಸಮುದಾಯದ ತಾಲುಕುವಾರು, ಲಿಂಗಾವಾರು ಜನಸಂಖ್ಯೆ:

ಕ್ರಸಂ	ತಾಲೂಕು	ಗ್ರಾಮ/ನಗರ	ಒಟ್ಟು ಮನೆಗಳು	ಜನಸಂಖ್ಯೆ		
				ಗಂಡು	ಹೆಣ್ಣು	ಒಟ್ಟು
01	ರಾಣೇಬೆನ್ನೂರು	ತುಮ್ಮಿನಕಟ್ಟೆ	35	75	65	140
02	ಹಿರೇಕೆರೂರು	ಜಾವಳ್ಳಿ	103	232	180	412
03	ಹಾನಗಲ್	ದ್ಯಾಮಾನಕೊಪ್ಪ	210	428	412	840
04	ಶಿಗ್ಗಾಂವ	ರಾಜೀವನಗರ	20	45	40	85
		ಒಟ್ಟು	**368**	**780**	**697**	**1477**

ಹಾವೇರಿ ಜಿಲ್ಲೆಯ ಸುಡಗಾಡುಸಿದ್ದರ ಸಮುದಾಯದ ನೆಲೆಗಳು



ಸುಡುಗಾಡು ಸಿದ್ಧರ ಲಕ್ಷಣಗಳು

ಸಿದ್ಧರ ಪೂರ್ವಿಕರು ಭೂತ ಭವಿಷ್ಯಗಳನ್ನು ತಿಳಿದವರೂ ಕಾಲಜ್ಞಾನವನ್ನು ಬಲ್ಲವರು, ಸತ್ತವರನ್ನು ಕೂಡ ತಮ್ಮ ಮಂತ್ರ ಶಕ್ತಿಯಿಂದ ಬದುಕಿಸಬಲ್ಲವರಾಗಿದ್ದರು. ನೂರಾರು ಮಂತ್ರ ವಿದ್ಯೆಗಳನ್ನು ಕಲಿತುಕೊಂಡವರು. ದೆವ್ವ, ಭೂತಗಳನ್ನು ಬಿಡಿಸಬಲ್ಲವರಾಗಿದ್ದು ಸ್ಮಶಾನದಲ್ಲಿದ್ದುಕೊಂಡು ನಾವು ಹರಿಶ್ಚಂದ್ರನ ಪರಂಪರೆಯವರೆಂದು ಹೇಳಿಕೊಳ್ಳುತ್ತಾರೆ. ಸುಡಗಾಡು ಸಿದ್ಧರ ಸಮುದಾಯದಲ್ಲಿ ಹುಟ್ಟು-ಸಾವುಗಳ ಕುರಿತು ಅನೇಕ ಆಚರಣೆ ನಂಬಿಕೆಗಳಿವೆ. ಸಿದ್ಧರ ವೃತ್ತಿ ಬೆಳಗಿನ ಜಾವದಲ್ಲಿ ಊರ ಪ್ರದಕ್ಷಿಣೆ ಮಾಡುವುದು. ಉಂಬಳಿಯಾಗಿರುವ ಹಳ್ಳಿಯಲ್ಲಿ ಅವರು ಸ್ಮಶಾನಕ್ಕೆ ಹೋಗಿ ಬಂದು ಶಂಖ ಊದಿ ಹರಕೆ ಮಾಡಿ ಊರ ಸುತ್ತಲೂ ಸಂಚರಿಸುತ್ತಾರೆ. ಬೆಳಗಿನ ನಾಲ್ಕು ಘಂಟೆಗೆ ಎದ್ದು ಊರ ಪಣ ಕಟ್ಟುವುದು ಇವರ ವಿಶೇಷ ಕೆಲಸ. ಆ ಮೂಲಕ ರೈತರಿಗೆ ಮುಂದಿನ ಮಳೆ-ಬೆಳೆ ವಿಚಾರ ಕುರಿತು ಭವಿಷ್ಯ ಹೇಳುವರು. ಮಲಗಿದ್ದ ಜನರನ್ನು ಎಚ್ಚರಿಸುತ್ತಾರೆ. ಹೀಗೆ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ವಾಸವಾಗಿರುವ ಇವರು ಭಿಕ್ಷಾಟನೆಯಿಂದಲೇ ಜೀವನ ಸಾಗಿಸುವುದು. ಇವರ ದೈನಂದಿನ ವೇಷಭೂಷಣಗಳಲ್ಲಿ ಯಾವ ಬಗೆಯ ವಿಶೇಷತೆ ಇಲ್ಲ. ಆದರೆ ಗಂಡಸರು ಭಿಕ್ಷಾಟನೆಗೆ ಹೋಗುವ ಸಂದರ್ಭದಲ್ಲಿ ಅವರ ವೇಷಭೂಷಣ ವಿಶಿಷ್ಟವಾದದ್ದು. ಇದು ಅವರ ಪರಂಪರೆಯ ಪ್ರತೀಕವೂ ಆಗಿದೆ. ಕಾವಿ ಕಪನಿ ಹಾಕಿಕೊಂಡು ರುದ್ರಾಕ್ಷಿ ಮಾಲೆ ಧರಿಸಿಕೊಂಡು, ಕಿವಿಗೆ ಕರ್ಣಕುಂಡಲ, ಹಣೆಗೆ ವಿಭೂತಿ, ಕೈ ಬೆರಳಿಗೆ ಬೆಳ್ಳಿ/ತಾಮ್ರದ ಉಂಗುರಗಳು, ರಟ್ಟೆಗೆ ಯಕ್ಷಿಣಿ, ಕೊರಳಲ್ಲಿ ಕೆಂಪು ಮಣಿಸರ, ಆಂಜನೇಯ ಸ್ವಾಮಿ ಪದಕಕ್ಕೆ ಹುಲಿಉಗುರು ಪೋಣಿಸಿಕೊಂಡು ಕೊರಳಲ್ಲಿ ಹಾಕಿ ಕೊಳ್ಳುತ್ತಾರೆ. ಕೊರಳಿನಿಂದ ಕೆಳಗೆ ಜೋತುಬಿದ್ದ ಘಂಟೆ, ಎಡಗೈಯಲ್ಲಿ ಕೋಲು ಬಲಗೈಯಲ್ಲಿ ಶಂಖ ಬಗಲಲ್ಲಿ ಜೋಳಿಗೆ, ತಲೆಗೆ ಪೇಟ, ಕೈಗೆಲ್ಲ ಬೂದಿ ಬಳಿದುಕೊಂಡು ಬಿಕ್ಷಾಟನೆಗೆ ಹೋಗುವರು. ಇವರಲ್ಲಿ ತಮ್ಮದೆ ಆದ ವಿಶಿಷ್ಟ ಸಾಹಿತ್ಯವಿದೆ. ನೀತಿ ವಿಡಂಬನೆಗಳಿವೆ. ಪ್ರದರ್ಶನ ಕಲೆಗಳಿವೆ. ಹೀಗೆ ಬುಡಕಟ್ಟಿನ ಜನರು ಮೂಲ ಸಂಸ್ಕೃತಿಯಲ್ಲಿ ತಮ್ಮನ್ನು ಗುರುತಿಸಿಕೊಂಡು, ಇಂದು ಮೊದಲಿನಂತೆ ಸಂಚಾರಿಗಳಾಗದೆ ಅಲ್ಪ ಸ್ವಲ್ಪ ಜಮೀನು, ಮನೆ ಮಾಡಿಕೊಂಡು ಬದುಕು ಸಾಗಿಸುತ್ತಿದ್ದಾರೆ. ಆಧುನಿಕ ಸಮಾಜದಿಂದ ಇವರು ಸಾಕಷ್ಟು ಪ್ರಭಾವಿತರಾಗಿದ್ದಾರೆ.

ಸುಡುಗಾಡು ಸಿದ್ಧರ ಪೌರಾಣಿಕ ಮತ್ತು ಐತಿಹಾಸಿಕ ಹಿನ್ನೆಲೆ:

ಪ್ರತಿಯೊಂದು ಸಮುದಾಯದ ಮೂಲ ಇಲ್ಲವೆ ವಂಶೋತ್ಪತ್ತಿಯ ಬಗೆಗೆ ಸಾಮಾನ್ಯವಾಗಿ ಅವರಲ್ಲಿ ಪ್ರಚಲಿತವಿರುವ ಜನಪದ ಕತೆಗಳು, ಐತಿಹ್ಯಗಳು ಮತ್ತು ಪೌರಾಣಿಕಾಂಶಗಳನ್ನು ಪರಿಶೀಲಿಸಬೇಕಾಗುತ್ತದೆ. ಇವುಗಳಿಂದ ಸತ್ಯಾಸತ್ಯತೆಗಳನ್ನು ನಿರ್ಧರಿಸುವುದು ಕಷ್ಟವಾದರೂ ನಿರ್ದಿಷ್ಟ ದಾಖಲೆಗಳಿಲ್ಲದಿರುವಾಗ ಅವುಗಳನ್ನೇ ಆಧಾರವಾಗಿಟ್ಟುಕೊಂಡು ಪರಾಮರ್ಶಿಸಿದರೆ ಕೆಲವು ಸತ್ಯ ಸಂಗತಿಗಳನ್ನು ಕಂಡುಕೊಳ್ಳಬಹುದು.

ಸುಡುಗಾಡು ಸಿದ್ಧರು ತಮ್ಮ ಸಮುದಾಯದ ಮೂಲವನ್ನು ವಿವಿಧ ರೀತಿಯಲ್ಲಿ ಗುರುತಿಸುತ್ತಾರೆ. ಈ ಹಿನ್ನೆಲೆಯಲ್ಲಿ ಸುಡಗಾಡು ಸಿದ್ಧರ ಮೂಲದ ಬಗೆಗಿನ ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಬಹುದು.

"ಈಶ್ವರ ತಪಸ್ಸು ಮಾಡುವಾಗ ಅವನ ಸೇವೆಗಾಗಿ ಪಾರ್ವತಿ ಈ ನವಕೋಟಿ ಸಿದ್ಧರನ್ನು ಸೃಷ್ಟಿಸಿದಳೆಂದೂ ಆ ಕಾರ್ಯ ಮುಗಿದ ನಂತರ ವಿಭೂತಿ, ಕಾವಿ, ಕಮಂಡಲ, ರುದ್ರಾಕ್ಷಿ, ಶಿವಗಂಟೆಯನ್ನು ಕೊಟ್ಟು ಭೂ ಲೋಕಕ್ಕೆ ಕಳುಹಿಸಿದಳೆಂದೂ ಹೇಳುತ್ತಾರೆ (ನೆಲ್ಲಿಸರ ಬಸವಾರಾಜ: 1984:1)."[41]

ಒಂದು ಸಲ ಬಡತನಕ್ಕೆ ಒಳಗಾಗಿರುವ ದಂಪತಿಗಳಿಬ್ಬರು ಮಗನ ಮರಣ ಸಂಸ್ಕಾರವನ್ನು ಮಾಡಲು ತುಂಬಾ ತೊಂದರೆಯಲ್ಲಿದ್ದರು. ಅದನ್ನು ಗಮನಿಸಿದ ಶಿವ ಪಾರ್ವತಿಯರು ಅಲ್ಲಿಗೆ ಬಂದು ಅವರ ಕಷ್ಟವನ್ನು ಕಂಡು ಮರುಗಿ ಸತ್ತ ಮಗನನ್ನು ಮತ್ತೆ ಬದುಕಿಸಿಕೊಟ್ಟು ಅವನನ್ನು ಮಸಣದ ಒಡೆಯನನ್ನಾಗಿ ನಿಯಮಿಸಿದರು. ಅಂದಿನಿಂದ ಶವಸಂಸ್ಕಾರಕ್ಕೆ ಬರುವ ಮೃತ ದೇಹದ ಮೇಲಿನ ಬಟ್ಟೆ ಬರೆ ಹಾಗೂ ತೆರಿಗೆಯನ್ನು ಪಡೆಯುವ ಹಕ್ಕನ್ನು ಅವನಿಗೆ ನೀಡಲಾಯಿತು. ಶಿವಪಾರ್ವತಿಯಿಂದ ನಿಯಮಿತವಾದ ಸಂತತಿಯೇ ಸುಡಗಾಡು ಸಿದ್ಧರೆಂದು ಹೇಳಲಾಗುತ್ತಿದೆ.

ಸಿದ್ಧರ ಪೂರ್ವಿಕರು ಭೂತ, ಭವಿಷ್ಯಗಳನ್ನು ತಿಳಿದಿದ್ದಂತಹವರು. ಕಾಲಜ್ಞಾನವನ್ನು ಬಲ್ಲವರು. ಸತ್ತವರನ್ನು ಕೂಡ ತಮ್ಮ ಮಂತ್ರ ಶಕ್ತಿಯಿಂದ ಬದುಕಿಸಬಲ್ಲಂತವರಾಗಿದ್ದರು. ನೂರಾರು ವಿದ್ಯೆಗಳನ್ನು ಕರಗತ ಮಾಡಿಕೊಂಡಿದ್ದರು. ದೆವ್ವ, ಭೂತ, ಪೀಡೆ, ಪಿಶಾಚಿಗಳನ್ನು ಬಿಡಿಸಬಲ್ಲವರಾಗಿದ್ದು ಸದಾ ಊರ ಹೊರ ವಲಯದಲ್ಲಿ ಸ್ಮಶಾನದಲ್ಲಿದ್ದೂ ಕೆಲವರು ಅವರ ಕಾವಲುಗಾರರೂ ಆಗಿದ್ದೂ, ತಾವು ಹರಿಶ್ಚಂದ್ರನ ಪರಂಪರೆಯವರೆಂದೂ ಹೇಳುತ್ತಾರೆ (ನಲ್ಲಿಸರ: 1984:34)."[42]

ಕುರುಬ ಸಂತತಿಯ ಇನ್ನೊಂದು ರೂಪವೇ ಸುಡಗಾಡು ಸಿದ್ಧರೆಂಬುದಕ್ಕೆ ಅವರಲ್ಲಿ ಪ್ರಚಲಿತವಿರುವ ಒಂದು ಜನಪದ ಪುರಾಣ ಕಥೆಯ ನಿರೂಪಣೆಯಾಗಿದೆ: ಒಂದು ದಿನ ಸಿದ್ಧನೆಂಬ ಕುರುಬನು ವಿಧಿವಶನಾಗಿ ಮರಣ ಹೊಂದಲು, ಅವನ ಶವವನ್ನು ಸಂಸ್ಕಾರ ಮಾಡಲು ಸ್ಮಶಾನಕ್ಕೆ ಒಯ್ಯುತ್ತಾರೆ. ಅಲ್ಲಿ ಹೆಂಡತಿ ಮಾಳಮ್ಮನು ಗಂಡನಿಗಾಗಿ ಗೋಳಿಡುತ್ತಿರುವುದನ್ನು ಕಂಡ ಶಿವಭಕ್ತನೊಬ್ಬನು ಅವಳಿಗೆ ಸಮಾಧಾನ ಹೇಳುತ್ತಾನೆ. 'ನೋಡು ತಾಯಿ, ನೀನು ಈಗಲೇ ಹೋಗಿ ಭಕ್ತಿ ಭಂಢಾರಿ ಬಸವಣ್ಣನನ್ನು ಕಂಡು ನಿನ್ನ ದು:ಖವನ್ನು ಹೇಳಿಕೋ ಕರುಣಾಮಹಿ ಅಣ್ಣನವರು ಖಂಡಿತವಾಗಿಯೂ ನಿನ್ನ ದು:ಖ ನಿವಾರಣೆ ಮಾಡುವರು. ಶಿವಭಕ್ತನ ಹೇಳಿಕೆಯ ಮೇರೆಗೆ ಮಾಳಮ್ಮ ನೇರವಾಗಿ ಬಸವಣ್ಣನವರಲ್ಲಿಗೆ ಬಂದು ತನ್ನ ದು:ಖವನ್ನು ನಿವೇದಿಸಿಕೊಳ್ಳುತ್ತಾಳೆ. ಬಸವಣ್ಣ ಅವಳ ಗೋಳನ್ನು ಕೇಳಿ

ನೆರದವರೊಂದಿಗೆ ಸುಡುಗಾಡಿಗೆ ಬಂದು ತನ್ನ ಆತ್ಮಜ್ಯೋತಿಯಿಂದ ಮತ್ತು ಮಂತ್ರವಾಣಿಯ ಮಹಿಮೆಯಿಂದ ಸತ್ತು ಸ್ಮಶಾನದಲ್ಲಿ ಸಂಸ್ಕಾರಕ್ಕಾಗಿ ಬಿದ್ದಿದ್ದ ಸಿದ್ಧನನ್ನು ಬದುಕಿಸುತ್ತಾನೆ. ದಂಪತಿಗಳೀರ್ವರೂ ಅಣ್ಣನ ಚರಣ ಕಮಲಗಳಿಗೆರಗಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿ ಆ ಮಹಾಮಹಿಮನ ಲೀಲೆಗಳನ್ನು ಗುಣಗಾನ ಮಾಡುತ್ತಾರೆ. ಹೀಗೆ ಮತ್ತೆ ಜೀವದಾನವನ್ನು ಪಡೆದು ಸಿದ್ಧನು ಬಸವಣ್ಣನವರ ಉಪದೇಶದಂತೆ ಶಿವದೀಕ್ಷೆಯನ್ನು ಪಡೆದು, ವಿಭೂತಿ, ರುದ್ರಾಕ್ಷಿಗಳನ್ನು ಧರಿಸಿ ಶಿವನಾಮಗಳನ್ನು ಜಪಿಸುತ್ತಾ, ಬಸವಣ್ಣನನ್ನು ಗುಣಗಾನ ಮಾಡುತ್ತಾ ಸ್ಮಶಾನದ ಹೆಣಗಳ ಮೇಲಿನ ಬಟ್ಟೆ ಬರೆಗಳನ್ನು ತೊಡುತ್ತಾ, ಶವಗಳಿಗೆ ತರುವ ನೈವೇದ್ಯ ಇತ್ಯಾದಿಗಳನ್ನೇ ಸೇವಿಸುತ್ತಾ, ಸುಡುಗಾಡಿನಲ್ಲೇ ವಾಸಮಾಡತೊಡುಗುತ್ತಾನೆ. ಸುಡುಗಾಡಿನ ಸಿದ್ಧನ ಸಂತತಿಯಿಂದ ಬೆಳೆದವರೆ ಮುಂದೆ ಸುಡುಗಾಡು ಸಿದ್ಧರಾದರೆಂದು ಹೇಳುತ್ತಾರೆ.

ರಾಮಾಯಣ, ಮಹಾಭಾರತ, ಪುರಾಣ ಹಾಗೂ ಕಾವ್ಯಗಳಲ್ಲಿ ಸಿದ್ಧರು, ಕಿನ್ನರ ಸಿದ್ಧಪುರುಷರು, ಪಂಚಮರಲ್ಲಿ ಒಬ್ಬರು ಸಿದ್ಧರು, ಮಹಾಪುರುಷರು, ಮಹಾಮುನಿಗಳು, ಋಷಿಗಳು, ಯೋಗಿಗಳು ಎಂಬಿತ್ಯಾದಿಯಾಗಿ ಅಲ್ಲಲ್ಲಿ ಉಲ್ಲೇಖಗೊಂಡಿರುವುದನ್ನು ಕಾಣುತ್ತೇವೆ. ಜೈನ, ಬೌದ್ಧ ಧರ್ಮಸಾರದಲ್ಲಿ ಪಂಚಮ ಸಿದ್ಧರೆಂದು ಉಲ್ಲೇಖ ದೊರಕುತ್ತದೆ. ಅಲ್ಲದೆ ಅವರ ಬಸದಿಗಳ ಬಳಿಯಲ್ಲಿ ಕೆಲವಡೆ ಇಂದಿಗೂ ಸಿದ್ಧಬಸದಿಯನ್ನು ಕಾಣಬಹುದು.

ಇನ್ನೊಂದು ಕಥೆಯ ಪ್ರಕಾರ, 'ಪದ್ಮಣ್ಣನೆಂಬ ತುಂಟ ಬಸವಣ್ಣನ ಸತ್ವ ಪರೀಕ್ಷಿಸಲು ನಿಶ್ಚಯಿಸಿದ. ಬಸವಣ್ಣ ಮನೆಗೆ ಬಂದಾಗ 'ನಾನು ಸತ್ತು ಹೋಗಿದ್ದೇನೆಂದು ಬಸವಣ್ಣನಿಗೆ ಹೇಳು' ಎಂದು ತನ್ನ ಹೆಂಡತಿಗೆ ಹೇಳಿ ಮಲಗಿಬಿಟ್ಟ. ಜ್ಞಾನಿಯಾದ ಬಸವ ಎಲ್ಲಾ ಅರಿತಿದ್ದು ಪದ್ಮಣ್ಣ ಹೊದ್ದ ಮುಸುಕು ತೆಗೆಯುವಂತೆ ಆಕೆಗೆ ಸೂಚಿಸಿದ. ನಿಜಕ್ಕೂ ಪದ್ಮಣ್ಣ ಸತ್ತೇ ಹೋಗಿದ್ದ! ಗಾಬರಿಗೊಂಡ ಮಡದಿ ಬಸವಣ್ಣನ ಕಾಲಿಗೆ ಬಿದ್ದು ಬೇಡಿದಾಗ ಸ್ಮಶಾನದಲ್ಲಿ ಪದ್ಮಣ್ಣನನ್ನು ಬದುಕಿಸಿದ, ಬಸವೇಶ್ವರನು 'ಇನ್ನು ಮೇಲೆ ಸ್ಮಶಾನದಲ್ಲೇ ಇದ್ದು ಕಾವಲು ಮಾಡು' ಎಂದು ಆದೇಶಿಸಿದ. ಹೀಗೆ ಸ್ಮಶಾನದ ಕಾವಲುಗಾರನಾದ ಪದ್ಮಣ್ಣ ಕಾಲಾಂತರದಲ್ಲಿ, ಸಿದ್ಧಣ್ಣನಾಗಿ ಅವನ ಸಂತತಿ ಸುಡಗಾಡು ಸಿದ್ಧರಾಗಿ ಮುಂದುವರಿಯಿತು (ಕರಿಶೆಟ್ಟಿ: 1989:1)."[43]

ಸುಡುಗಾಡು ಸಿದ್ಧರ ಸಾಮಾಜಿಕ ವ್ಯವಸ್ಥೆ:

ವಿಶಿಷ್ಟ ಸಂಸ್ಕೃತಿ ಪರಂಪರೆಯನ್ನುಳ್ಳ ಸುಡುಗಾಡು ಸಿದ್ಧರು ಶತಮಾನಗಳು ಕಳೆದರೂ ಇನ್ನೂ ಯಥಾಸ್ಥಿತಿಯಲ್ಲಿಯೇ ಉಳಿದಿದ್ದಾರೆ. ಈ ಬುಡಕಟ್ಟಿನ ಜನರ ಆಚಾರ, ವಿಚಾರ, ಪರಂಪರೆ, ಸಂಪ್ರದಾಯ, ಮದುವೆ, ಮುಂಜೆ ಹಾಗೂ ಜನರ ರೀತಿ–ನೀತಿಗಳು ಬಹುವಿಶಿಷ್ಟವಾಗಿವೆ. ಶತಮಾನಗಳಿಂದ ಕರ್ನಾಟಕದಲ್ಲಿ ಬಂದು ನೆಲೆಸಿದ್ದರೂ ಅವರ ಮನೆಮಾತು ತೆಲುಗು ಇನ್ನೂ ಅವರಲ್ಲಿ ಉಳಿದುಕೊಂಡಿದೆ. ಮೌಖಿಕ ಪರಂಪರೆಯಲ್ಲಿ ಉಳಿದುಕೊಂಡು ಬಂದಿರುವ ಈ ಜನರ ಸಾಹಿತ್ಯ, ಕಲೆ, ಸಂಸ್ಕೃತಿ ಹಾಗೂ ಜೀವನ ವಿಧಾನಗಳ

ಬಗೆಗೆ ಅಲ್ಪಸ್ವಲ್ಪ ಅಧ್ಯಯನಗಳಾಗಿವೆಯೇ ವಿನ: ಸಮಗ್ರವಾದ ಅಧ್ಯಯನಗಳು ನಡೆದಿಲ್ಲವೆನ್ನಬಹುದು.ಈ ಸಮುದಾಯದಲ್ಲಿ ಹುಟ್ಟಿನಿಂದ ಸಾವಿನವರೆಗೂ ಸಂಸ್ಕಾರಗಳು ಇತರ ಬುಡಕಟ್ಟುಗಳಿಗಿಂತ ಭಿನ್ನವಾಗಿಲ್ಲವಾದರೂ, ನಗರೀಕರಣದ ಪ್ರಭಾವದಿಂದ ಹೊಸ ರೂಪ ಪಡೆದಿವೆ ಎಂಬುದನ್ನು ಇಲ್ಲಿ ಗಮನಿಸಬೇಕಾಗುತ್ತದೆ.

ಉಡುಗೆ ತೊಡುಗೆಗಳು:

ಸುಡುಗಾಡು ಸಿದ್ಧರ ದಿನ ನಿತ್ಯ ಹಾಕಿಕೊಳ್ಳುವ ಉಡುಗೆ-ತೊಡುಗೆಗಳಲ್ಲಿ ಅಷ್ಟೇನು ವಿಶೇಷಗಳಿಲ್ಲ. ಆದರೆ ಭಿಕ್ಷಾಟನೆಗೆ ಹೋದಾಗ ಮಾತ್ರ ವಿಶೇಷವಾದ ವೇಷ ಭೂಷಣಗಳನ್ನು ಧರಿಸುತ್ತಾರೆ. ಹೆಂಗಸರ ವೇಷಭೂಷಣಗಳಲ್ಲಿ ಯಾವ ವಿಶೇಷತೆಯೂ ಇಲ್ಲ. ಬಿಕ್ಷಾಟನೆಗೆ ತೆರಳುವ ಇವರು, ವಿಶೇಷ ವೇಷ ಭೂಷಣಗಳಿಂದ ಆಕರ್ಷಕವಾಗಿ ಕಾಣುತ್ತಾರೆ. ಕಾವಿಯ ನಿಲುವಂಗಿ, ಕೊರಳಿಗೆ ಗಂಟೆ, ರುದ್ರಾಕ್ಷಿ ಮಾಲೆ, ವಿವಿಧ ಬಣ್ಣಗಳ ಮಣಿಸರ, ಹೆಗಲಿಗೆ ಬಿದುರು, ಕೋಲಿಗೆ ಇಳಿಬಿಟ್ಟ ಜೋಳಿಗೆ, ಮೈಗೆ ಬೂದಿ ಬಳಿದುಕೊಂಡು ಗ್ರಾಮಗಳನ್ನು ಸುತ್ತುವುದು ಈ ಸಮುದಾಯದ ಪದ್ದತಿ. ಕೈಯಲ್ಲಿ ಕಮಂಡಲ ಹಿಡಿದುಕೊಳ್ಳುತ್ತಾರೆ. ಭಿಕ್ಷಾಟನೆಗಾಗಿ ಹೋಗುವ ಹೆಂಗಸರ ಕೈಯಲ್ಲಿ ಗಂಗಿ-ಗೌರಮ್ಮರ ಗೊಂಬೆಗಳನ್ನು ಮಾತ್ರ ಹಿಡಿದುಕೊಂಡು, ಬಗಲಿಗೆ ಜೋಳಿಗಿ, ಮೈ, ಕೈ ಹಾಗೂ ಹಣೆಗೆ ಭಸ್ಮ ಧಾರಣೆ ಮಾಡಿಕೊಂಡು ಸಂಚರಿಸುತ್ತಾರೆ.

ಆಹಾರ ಪದ್ಧತಿ:

ಸುಡುಗಾಡು ಸಿದ್ಧರು ಮೂಲತ: ಮಾಂಸಹಾರಿಗಳು. ಅದರೊಂದಿಗೆ ಸೇಂದಿ, ಸರಾಯಿ ಕುಡಿಯುವುದು ಸಹ ಸಾಮಾನ್ಯವಾಗಿರುತ್ತದೆ. ಮನೆಯ ಹೆಂಗಸರು ಹೊರಗೆ ಮೂರು ಕಲ್ಲುಗಳನ್ನು ಇಟ್ಟು ಮಾಂಸವನ್ನು ಬೇಯಿಸುತ್ತಾರೆ. ಹಿಂದೆ ಕೈ ರೊಟ್ಟಿಯನ್ನು ಮಾಡಿ ಬೆಂಕಿ ಕೆಂಡದ ಮೇಲೆ ಹಾಕಿ ಸುಡುತ್ತಿದ್ದರು. ಈಗ ಸಾಮಾನ್ಯವಾಗಿ ಅವರು ಆಯಾ ಪ್ರಾದೇಶಿಕ ಆಹಾರವನ್ನೇ ಸೇವಿಸುತ್ತಾರೆ. ಅವರಿಗೆ ಸ್ವತಂತ್ರವಾದ ಜಮೀನು ಇಲ್ಲವೆ, ಆಸ್ತಿ ಪಾಸ್ತಿಗಳಿಲ್ಲ. ಇವರು ಸಂಚಾರಿಗಳಾಗಿರುವುದರಿಂದ ಊರಿಂದೂರಿಗೆ ಸಂಚರಿಸುತ್ತಾ ಡೇರೆಗಳನ್ನು ಹಾಕಿಕೊಂಡು ಅಲ್ಪಸ್ವಲ್ಪ ಉಂಬಳಿ ಮಾಡಿಕೊಂಡು ರಾತ್ರಿಯೆಲ್ಲ ಊರ ಪ್ರದಕ್ಷಿಣೆ ಮಾಡುವುದರ ಮೂಲಕ ಊರನ್ನು ರಕ್ಷಿಸುವ ಹೊಣೆಗಾರಿಕೆಯನ್ನು ಹೊತ್ತುಕೊಳ್ಳುತ್ತಾರೆ. ಇದರಿಂದ ಊರಿನ ಜನರು ಭಿಕ್ಷಾಟನೆಗೆ ಹೋದಾಗ ಆಹಾರ ನೀಡಿ ಸಹಕರಿಸುತ್ತಾರೆ.

ಕೌಟುಂಬಿಕ ವ್ಯವಸ್ಥೆ:

ಸುಡುಗಾಡು ಸಿದ್ಧರಲ್ಲಿ ಅವಿಭಕ್ತ ಕುಟುಂಬ ಪದ್ಧತಿ ಜಾರಿಯಲ್ಲಿದೆ. ತಂದೆಯೇ ಸಾಮಾನ್ಯವಾಗಿ ಕುಟುಂಬದ ಯಜಮಾನನಾಗಿರುತ್ತಾನೆ. ಆತನೇ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಾನೆ. ಆತ ಜೀವಂತವಾಗಿರುವವರೆಗೆ ಕುಟುಂಬದ ಯಾವ ಸದಸ್ಯರೂ ಬೇರೆಯಾಗಲಾರರು. ಕುಟುಂಬದ ಸದಸ್ಯರ ಸಂಖ್ಯೆ ಹೆಚ್ಚಾದಾಗ ಮಾತ್ರ ವಾಸಕ್ಕೆ ಬೇರೆ

ಗುಡಿಸಲು ಹಾಕಿಕೊಳ್ಳುತ್ತಾರೆ. ಆದರೆ ಭಿಕ್ಷಾಟನೆಯಿಂದ ತಂದ ದವಸ ಧಾನ್ಯಗಳನ್ನು ತಂದೆಯ ಗುಡಿಸಲಿನಲ್ಲಿಯೇ ಇಡುವುದು ಒಂದು ಪದ್ಧತಿಯಿದೆ. ಒಟ್ಟಿನಲ್ಲಿ ತಂದೆಯ ಅಧೀನದಲ್ಲಿಯೇ ಮಕ್ಕಳು ನಡೆದುಕೊಳ್ಳಬೇಕೆಂಬ ನಿಯಮವಿದೆ. ಬೇರೆಯವರ ಮಾತು ಕೇಳಿ ಬೇರೆಯಾಗಲು ಬಯಸಿದಲ್ಲಿ ತಂದೆ–ತಾಯಿಗಳು ಅಂಥ ಮಕ್ಕಳನ್ನು ಡೇರೆಯಿಂದ ಹೊರ ಹಾಕುತ್ತಾರೆ. ಆಸ್ತಿಯಲ್ಲಿ ಯಾವ ಬಗೆಯ ಪಾಲನ್ನೂ ಕೊಡದೆ ಉಟ್ಟ ಬಟ್ಟೆಯಲ್ಲಿಯೇ ಅವರನ್ನು ಹೊರಹಾಕಲಾಗುತ್ತದೆ.

ಮನೆಯ ರಚನೆ:

ಸುಡುಗಾಡು ಸಿದ್ಧರು ತಮ್ಮ ವಾಸಕ್ಕಾಗಿ ತಾತ್ಕಾಲಿಕವಾದ ಗುಡಿಸಲುಗಳನ್ನು ಹಾಕಿಕೊಳ್ಳುತ್ತಾರೆ. ಈ ಗುಡಿಸಲುಗಳು ಅವರವರ ಯೋಗ್ಯತಾನುಸಾರ ಸ್ವಲ್ಪ ಹೆಚ್ಚು ಕಡಿಮೆ ವ್ಯತ್ಯಾಸಗೊಂಡಿರುತ್ತವೆ. ಸಾಮಾನ್ಯವಾಗಿ ಗುಡಿಸಲುಗಳ ನಿರ್ಮಾಣಕ್ಕಾಗಿ ಚಾಪೆ, ಹುಲ್ಲು, ಕವದಿ ಇತ್ಯಾದಿ ಹಗುರವಾದ ಸಾಮಗ್ರಿಗಳನ್ನು ಬಳಸುತ್ತಾರೆ. ಮಳೆಗಾಲದಲ್ಲಿ ನೀರು ಗುಡಿಸಲಿನ ಒಳಕ್ಕೆ ಬರದಂತೆ ಸುತ್ತಲು ಮಣ್ಣಿನ ದಿನ್ನೆ ಮಾಡಿಕೊಂಡಿರುತ್ತಾರೆ.

ಸುಡುಗಾಡು ಸಿದ್ಧರು ಈಗೀಗ ತಮ್ಮ ಅಲೆಮಾರಿ ಬದುಕನ್ನು ನಿಲ್ಲಿಸಿ ಒಂದಿಷ್ಟು ಹೊಲ ಮನೆ, ಆಸ್ತಿ ಪಾಸ್ತಿಗಳನ್ನು ಮಾಡಿಕೊಂಡು ಒಂದೇ ಕಡೆಗೆ ಅಲ್ಲಲ್ಲಿ ಸ್ಥಿರವಾಗಿ ನೆಲೆ ನಿಂತಿರುವುದನ್ನು ಕಾಣುತ್ತೇವೆ. ಕಲ್ಲು, ಮಣ್ಣಿನ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ವಾಸದ ಮನೆಯಲ್ಲಿಯೇ ದನಕರುಗಳಿಗೆ ಕೊಟ್ಟಿಗೆ, ಕೋಳಿಗೂಡು, ಕುದುರೆಲಾಯ, ಕುರಿ ಮೊದಲಾದ ಸಾಕು ಪ್ರಾಣಿಗಳಿಗೂ ಇರಲು ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಕೆಲವು ಸಿದ್ಧರಿಗೆ ಸರ್ಕಾರ ಆಶ್ರಯ ಮನೆಗಳನ್ನು ನೀಡಿದೆ. ಆರ್.ಸಿ.ಸಿ ಮನೆಗಳು ಅಪರೂಪ. ಬಾಡಿಗೆ ಮನೆಗಳೇ ಹೆಚ್ಚಿವೆ. (ಕೆಳಗಿನ ಕೋಷ್ಟಕ ನೋಡಿರಿ)

ಕೋಷ್ಟಕ–15

ಹಾವೇರಿ ಜಿಲ್ಲೆಯ ಸುಡಗಾಡು ಸಿದ್ಧರ ವಾಸದ ಮನೆಯ ಸ್ವರೂಪ:

ಕ್ರ.ಸಂ.	ಮನೆಯ ಸ್ವರೂಪ.	ಸಂಖ್ಯೆ
01	ಟೆಂಟು/ಗುಡಾರ	74
02	ಗುಡಿಸಲು	41
03	ತಗಡು/ಹೆಂಚಿನಮನೆ	19
04	ಮಾಳಿಗೆ/ಆರ್.ಸಿ.ಸಿ	05
05	ಆಶ್ರಯ ಮನೆ	83
06	ಬಾಡಿಗೆ ಮನೆ	147
	ಒಟ್ಟು	**368**

ಒಳಾಡಳಿತ ವ್ಯವಸ್ಥೆ:

ಬೇರೆ ಬುಡಕಟ್ಟಿನ ಜನರಂತೆ, ಸುಡುಗಾಡು ಸಿದ್ಧರು ಸಹ ತಮ್ಮದೇ ಆದ ಒಳಾಡಳಿತ ವ್ಯವಸ್ಥೆಯನ್ನು ಹೊಂದಿರುತ್ತಾರೆ. ತಮ್ಮ ಸಮುದಾಯದ ಎಲ್ಲ ವ್ಯವಹಾರಗಳು ಹಟ್ಟಿಯ ಮುಖಂಡನ ಮೂಲಕ ನಡೆಯುತ್ತವೆ. ತಮ್ಮದೇ ಆದ ಜಾತಿ ಪಂಚಾಯತಿ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾರೆ. ಇದರಲ್ಲಿ ಸಮುದಾಯದ ಯಜಮಾನ, ಪಟೇಲ, ಬುದ್ಧಿವಂತ ಭಂಡಾರಿ ಮೊದಲಾದವರಿರುತ್ತಾರೆ. ಸಮುದಾಯದಲ್ಲಿ ನಡೆಯುವ ಪ್ರತಿಯೊಂದು ಘಟನೆಗಳು ನಾಯಕರ ಗಮನಕ್ಕೆ ತರಬೇಕೆಂಬ ನಿಯಮವಿದೆ. ಪಂಚಾಯತಿ ಕೊಡುವ ನ್ಯಾಯ ನಿರ್ಣಯಕ್ಕೆ ಎಲ್ಲರೂ ಬದ್ಧರಾಗಿರಬೇಕು. ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳೆಲ್ಲ ಇವರ ನಾಯಕತ್ವ ಮತ್ತು ಮಾರ್ಗದರ್ಶನದಲ್ಲಿ ನಡೆಯುತ್ತವೆ.

ನ್ಯಾಯ ಪದ್ಧತಿ:

ಸುಡುಗಾಡು ಸಿದ್ಧರು ಸಾಮಾನ್ಯವಾಗಿ ತಮ್ಮ ಸಣ್ಣಪುಟ್ಟ ವ್ಯಜ್ಯಗಳನ್ನು ತಮ್ಮ ಹಟ್ಟಿಯಲ್ಲಿಯೇ ಬಗೆಹರಿಸಿಕೊಳ್ಳುವರು. ಕೆಲವು ಜಟಿಲ ಮತ್ತು ಸಮಸ್ಯಾತ್ಮಕವಾಗಿರುವ ನ್ಯಾಯಗಳನ್ನು ಬಗೆಹರಿಸಿಕೊಳ್ಳಲು ಕಟ್ಟೆ ಮನೆಗಳನ್ನು ಆಶ್ರಯಿಸುತ್ತಾರೆ. ಯಾವುದೇ ಕಾರಣಕ್ಕೂ ಇವರು ಕಟ್ಟೆ ಮನೆಗಳನ್ನು ಬಿಟ್ಟು ಕೋರ್ಟು, ಕಛೇರಿಗಳಿಗೆ ಹೋಗುವುದಿಲ್ಲ. ಇಲ್ಲಿನ ತೀರ್ಮಾನವೇ ಅವರಿಗೆ ಹೈಕೋರ್ಟು, ಸುಪ್ರೀಂಕೋರ್ಟು ತೀರ್ಪಿದ್ದಂತೆ ಒಂದು ವೇಳೆ ನ್ಯಾಯ ಕೇಳಲು ಹೊರಗೆ ಹೋದರೆ ಅಂಥವರನ್ನು ಕುಲದಿಂದ ಬಹಿಷ್ಕರಿಸುತ್ತಾರೆ.

ಸುಡುಗಾಡು ಸಿದ್ಧರ ಭಾಷೆ:

ಸಾಮಾನ್ಯವಾಗಿ ಬುಡಕಟ್ಟಿನ ಭಾಷೆಗಳು ಲಿಪಿ ರಹಿತ ಗುಂಪಿಗೆ ಸೇರುತ್ತವೆ. ಅಂಥವುಗಳಲ್ಲಿ ಸುಡುಗಾಡು ಸಿದ್ಧರ ಭಾಷೆಯು ಒಂದು. ಇವರ ಆಡುಮಾತುಗಳು ಸಹ ಬೇರೆ ಬುಡಕಟ್ಟುಗಳ ಭಾಷೆಯ ಲಕ್ಷಣಗಳನ್ನೇ ಹೋಲುತ್ತವೆ. ಜೊತೆಗೆ ಇತರ ಭಾಷೆಗಳ ಪ್ರಭಾವಕ್ಕೆ ಒಳಗಾಗಿರುವುದನ್ನು ಕಾಣಬಹುದು. ಅದರಲ್ಲೂ ತೆಲುಗು ಭಾಷೆಯ ಪ್ರಭಾವ ಅಧಿಕ ಪ್ರಮಾಣದಲ್ಲಿರುವುದು ಕಂಡುಬರುತ್ತದೆ. ಇವರು ತೆಲುಗರೇ ಎನ್ನುವಷ್ಟು ಮಟ್ಟಿಗೆ ಪ್ರಭಾವ ಬೀರಿದೆ. ಕರ್ನಾಟಕದಲ್ಲಿನ ಸಿದ್ಧರು ತೆಲುಗು ಮಿಶ್ರಿತ ಭಾಷೆಯನ್ನು ಬಳಸುತ್ತಿದ್ದೂ ಹೊರಗೆ ಇತರಡೆಗೆ ಕನ್ನಡವನ್ನು ಸಂವಹನ ಭಾಷೆಯನ್ನಾಗಿ ಬಳಸುತ್ತಾರೆ.

ಸ್ತ್ರೀಯರ ಸ್ಥಾನಮಾನಗಳು:

ಸುಡುಗಾಡು ಸಿದ್ಧರಲ್ಲಿ ಸ್ತ್ರೀಯರಿಗೆ ತೀರ ಕೆಳಸ್ಥಾನವನ್ನು ಕೊಡಲಾಗಿದೆ. ಸ್ತ್ರೀಯರನ್ನು ಅಷ್ಟೊಂದು ಗೌರವಯುತವಾಗಿ ನಡೆಸಿಕೊಳ್ಳುವುದಿಲ್ಲ. ಯಾವುದೇ ಸಂದರ್ಭಗಳಲ್ಲಿಯೂ ಹೆಣ್ಣಿಗೆ ಹೆಚ್ಚಿನ ಅವಕಾಶಗಳು ಇರುವುದಿಲ್ಲ. ಹೆಣ್ಣು ಬಹಿರಂಗವಾಗಿ ಮಾತನಾಡುವುದನ್ನು ಸಹಿಸುವುದಿಲ್ಲ. ಅವಳು ಬಹಳ ಸೌಜನ್ಯದಿಂದ ಮತ್ತು ಮರ್ಯಾದೆಯಿಂದ ಹಿರಿ-ಕಿರಿಯರ ಹತ್ತಿರ ನಡೆದುಕೊಳ್ಳಬೇಕು. ಹಾಗೇನಾದರೂ ಹೆಣ್ಣು ಒರಟಾಗಿ ವರ್ತಿಸಿದಲ್ಲಿ ಅವಳನ್ನು ತವರಿಗೆ

ಕಳಿಸಿಬಿಡುತ್ತಾರೆ. ಕೆಲವೊಮ್ಮೆ ದಂಡ ಹಾಕುವುದನ್ನು ಕಾಣುತ್ತೇವೆ. ನ್ಯಾಯ ಪಂಚಾಯತಿಯಲ್ಲಿ ಅವಳಿಗೆ ಬರಲು ಅವಕಾಶವಿಲ್ಲ. ಬಂದರೂ, ದೂರದಲ್ಲೇ ನಿಂತು ತನ್ನ ಅಭಿಪ್ರಾಯವನ್ನು ತಿಳಿಸಬಹುದು.

ಸುಡುಗಾಡು ಸಿದ್ಧರ ಆಚರಣೆ ಮತ್ತು ನಂಬಿಕೆಗಳು:

ವಿಶಿಷ್ಟ ಸಂಸ್ಕೃತಿ ಪರಂಪರೆಯನ್ನುಳ್ಳ ಸುಡುಗಾಡು ಸಿದ್ಧರು ಶತಮಾನಗಳು ಕಳೆದರೂ ಇನ್ನೂ ಯಥಾಸ್ಥಿತಿಯಲ್ಲಿಯೇ ಉಳಿದಿದ್ದಾರೆ. ಈ ಬುಡಕಟ್ಟಿನ ಜನರ ಆಚಾರ, ವಿಚಾರ, ಪರಂಪರೆ, ಸಂಪ್ರದಾಯ, ಮದುವೆ, ಮುಂಜೆ ಹಾಗೂ ಜನರ ರೀತಿ–ನೀತಿಗಳು ಬಹು ವಿಶಿಷ್ಟವಾಗಿವೆ. ಶತಮಾನಗಳಿಂದ ಕರ್ನಾಟಕದಲ್ಲಿ ಬಂದು ನೆಲೆಸಿದ್ದರೂ ಅವರ ಮನೆಮಾತು ತೆಲುಗು ಇನ್ನೂ ಅವರಲ್ಲಿ ಉಳಿದುಕೂಂಡಿದೆ. ಮೌಖಿಕ ಪರಂಪರೆಯಲ್ಲಿ ಉಳಿದುಕೊಂಡು ಬಂದಿರುವ ಈ ಜನರ ಸಾಹಿತ್ಯ, ಕಲೆ, ಸಂಸ್ಕೃತಿ, ಹಾಗೂ ಜೀವನ ವಿಧಾನಗಳ ಬಗೆಗೆ ಅಲ್ಪ ಸ್ವಲ್ಪ ಅಧ್ಯಯನಗಳಾಗಿವೆಯೇ ವಿನಃ ಸಮಗ್ರವಾದ ಅಧ್ಯಯನಗಳು ನಡೆದಿಲ್ಲವೆನ್ನಬಹುದು. ಈ ಸಮುದಾಯದಲ್ಲಿ ಹುಟ್ಟಿನಿಂದ ಸಾವಿನವರೆಗೂ ಸಂಸ್ಕಾರಗಳು ಇತರ ಬುಡಕಟ್ಟುಗಳಂತೆ ಭಿನ್ನವಾಗಿಲ್ಲವಾದರೂ, ನಗರೀಕರಣದ ಪ್ರಭಾವದಿಂದ ಹೊಸ ರೂಪ ಪಡೆದಿವೆ ಎಂಬುದನ್ನು ಇಲ್ಲಿ ಗಮನಿಸಬೇಕಾಗುತ್ತದೆ.

ಜನನ:

ಸುಡುಗಾಡು ಸಿದ್ಧರಲ್ಲಿ ಜನನಕ್ಕೆ ಸಂಬಂಧಿಸಿದಂತೆ ಹೆಣ್ಣು ಇಲ್ಲವೆ ಗಂಡು ಮಗುವಿನ ನಡುವೆ ಯಾವುದೇ ರೀತಿಯ ತಾರತಮ್ಯಗಳಿಲ್ಲ. ಮಗು ಹುಟ್ಟಿದ 3 ದಿವಸಕ್ಕೆ 'ಶೆಟವಿ' ಪೂಜೆಯನ್ನು ನೆರವೇರಿಸುವುದರ ಮೂಲಕ ಮಗುವಿಗೆ ನಾಮಕರಣ ಮಾಡುತ್ತಾರೆ. ಹಟ್ಟಿಯ ಜನರೆಲ್ಲ ಸೇರಿ ಅಂದು ಮಾಂಸದ ಊಟ ಮಾಡುತ್ತಾರೆ. ಕುಡಿಯಲು ಸೇಂದಿ, ಸರಾಯಿಯನ್ನು ಹಟ್ಟಿಯ ಜನರಿಗೆ ಕೊಡುತ್ತಾರೆ. ಹುಟ್ಟಿದ ಮಗುವಿಗೆ ಉಸಿರಾಟದ ತೊಂದರೆಯಾಗದಿರಲೆಂದು ಶೀತ ಬಾರದಿರಲೆಂದು ಸೂಜಿ ಕಾಯಿಸಿ ಮಗುವಿನ ಎದೆಗುಂಡಿಗೆ, ಹೊಕ್ಕಳು, ಎಡ ಬಲದ ಪಕ್ಕೆಗೆ ಬರೆ ಹಾಕುತ್ತಿದ್ದರು. ಹೆರಿಗೆ ಎಷ್ಟೇ ಕಷ್ಟವಾದರೂ ಆಸ್ಪತ್ರೆಗೆ ಹೋಗುತ್ತಿರಲಿಲ್ಲ. ಹೆರಿಗೆ ಸಮಯದಲ್ಲಿ ಮೀಸಲು ನೀರು ತಂದು ಗರ್ಭಿಣಿಗೆ ಕುಡಿಸುತ್ತಿದ್ದರು. ಇದಕ್ಕೆ ಧರ್ಮದ ನೀರು ಎಂದು ಕರೆಯುತ್ತಾರೆ.

ಮಗು ಹುಟ್ಟಿದ ಐದನೇ ದಿನಕ್ಕೆ 'ಐದೆಶಿ' ಮಾಡುತ್ತಾರೆ. ಅಂದು ಹೆರಿಗೆ ಮಾಡಿಸಿದವಳು ಜೋಳಕ್ಕೆ ಕಾಡಿಗೆ, ಕುಂಕುಮ ಹಚ್ಚಿ ಅದರ ಮೇಲೆ ಬೇವಿನ ತಪ್ಪಲು ಇಡುತ್ತಾರೆ. ಪೂಜೆಗೆ ಒಂಬತ್ತು ಕಡೆ ಕೋಳಿ ಮಾಂಸ ಸಹಿತ ಎಡೆ ಮುದ್ದೆ ಹಾಗೂ ಬಳ್ಳೊಳ್ಳಿಯನ್ನು ಇಡುತ್ತಾರೆ. ಹೀಗೆ 'ಶೆಟವಿ ಪೂಜೆ' ಮಾಡಿದ ಮೇಲೆ ರಾತ್ರಿ 'ಈರಲ ಪೂಜೆ' ಮಾಡುತ್ತಾರೆ.

ಜವಳ ತೆಗೆಸುವುದು:

ಕರ್ನಾಟಕದ ಸುಡುಗಾಡು ಸಿದ್ಧರು ಹೆಚ್ಚಾಗಿ ಚಂದ್ರಗಿರಿಯಲ್ಲಿರುವ ನಿಜಲಿಂಗಪ್ಪನಿಗೆ ತಮ್ಮ ಮಕ್ಕಳ ತಲೆಯ ಕೂದಲುಗಳನ್ನು ಮೀಸಲು ಅರ್ಪಿಸುತ್ತಾರೆ. ಮಗು ಹುಟ್ಟಿದ ಒಂದು ವರ್ಷ ಎರಡು ತಿಂಗಳಿಗೆ ಈ ಜವಳ ತೆಗೆಸುವ ಕಾರ್ಯ ನಡೆಯುತ್ತದೆ. ಕೆಲವಡೆ ಮಗುವಿನ ಜವಳವನ್ನು ದ್ಯಾಮವ್ವ, ದುರ್ಗಮ್ಮ, ಮರಿಯಮ್ಮ, ಮೊದಲಾದ ದೇವತೆಗಳಿಗೆ ಮೀಸಲು ಬಿಡುತ್ತಾರೆ. ಅಲ್ಲಿ ತೆಗೆಸುತ್ತಾರೆ.

ಋತುಮತಿ:

ಹೆಣ್ಣು ಋತುಮತಿಯಾದ ಸಮಯದಲ್ಲಿ ಇತರರಂತೆ ಸುಡುಗಾಡು ಸಿದ್ಧರೂ ಐದು ಅಥವಾ ಹದಿನಾರು ದಿವಸ ಕೂಡಿಸುತ್ತಾರೆ. ಋತುಮತಿಯಾದ ಹೆಣ್ಣಿನ ಮಾವನಾದವನು ಅವಳಿಗಾಗಿ ಬೇವಿನ ಸೊಪ್ಪಿನಿಂದ ಮನೆಯ ಹೊರಗೆ ಗುಡಿಸಲು ಹಾಕಿಕೊಡುತ್ತಾನೆ. ಐದರಿಂದ ಹದಿನಾರು ದಿನಗಳವರೆಗೆ ಅವಳು ಆ ಗುಡಿಸಲಿನಲ್ಲಿಯೇ ಇರಬೇಕು. ಈ ಸಮಯದಲ್ಲಿ ಸೋದರತ್ತೆಯಾದವಳು ಅವಳಿಗೆ ಸ್ನಾನ ಮಾಡಿಸಬೇಕು ಮತ್ತು ಹೊಸ ಬಟ್ಟೆ ಹಾಕಿ ಮನೆಗೆ ಕರೆದುಕೊಳ್ಳುತ್ತಾರೆ. ಮಾವನಾದವನು, ಗುಡಿಸಲಿನ ಮುಂದೆ ಒಂದು ಕೋಳಿ ಬಲಿ ಕೊಟ್ಟು ದೈವಕ್ಕೆ ಊಟ ಹಾಕಿಸಬೇಕು.

ಮದುವೆ:

ಸುಡುಗಾಡು ಸಿದ್ಧರಲ್ಲಿ ಸಗೋತ್ರ ವಿವಾಹ ನಿಷಿದ್ಧವಾಗಿದೆ. ಅಕ್ಕನ ಮಗಳನ್ನು ತಂದು ಕೊಳ್ಳುತ್ತಾರೆ. ಆದರೆ ತಂಗಿ ಮಗಳನ್ನು ತಂದುಕೊಳ್ಳುವುದಿಲ್ಲ. ಹೆಣ್ಣಿಗೆ ತೆರ ಕೊಟ್ಟು ಮದುವೆ ಮಾಡಿಕೊಳ್ಳುವ ಪದ್ಧತಿ ಇತ್ತು. ವರದಕ್ಷಿಣೆ ಪಿಡುಗು ಇವರಲ್ಲಿಲ್ಲ. ಇವರಲ್ಲಿ ಹಿಂದೆ ಹೆಣ್ಣು ಮಕ್ಕಳಿಗೆ ತಾಳಿ ಬದಲು ರುದ್ರಾಕ್ಷಿ ಕಟ್ಟುತ್ತಿದ್ದರೆ, ಇಂದು ತಾಳಿ ಕಟ್ಟುತ್ತಾರೆ. ಹಟ್ಟಿಯ ಹಿರಿಯರ ಮೂಲಕವೇ ಸಾಲಾವಳಿ ನೋಡುತ್ತಾರೆ. ಇದರಲ್ಲಿ ಕನ್ಯಾ ಪರೀಕ್ಷೆಗಿಂತ ವರ ಪರೀಕ್ಷೆ ಬಹು ಮುಖ್ಯವಾಗಿದೆ. ಹಿಂದೆ ಮದುವೆ ಸಮಾರಂಭ ಐದು ದಿನಗಳವರೆಗೆ ನಡೆಯುತ್ತಿತ್ತು, ಆದರೆ ಈಗ ಇತರರಂತೆ ಇವರೂ ಒಂದೇ ದಿನದಲ್ಲಿ ನೆರವೇರಿಸುತ್ತಾರೆ. ಮದುವೆ ಕಾರ್ಯ ಹೆಣ್ಣಿನ ಮನೆಯಲ್ಲಿಯೇ ನಡೆಯುತ್ತದೆ. ಮದುವೆ ಶಾಸ್ತ್ರವು ಬ್ರಾಹ್ಮಣ ಪುರೋಹಿತರಿಂದ ನಡೆಯುತ್ತದೆ.

ಮದುವೆ ಮುಗಿಯುವವರೆಗೆ ಸೇಂದಿ, ಸಾರಾಯಿ, ಮಾಂಸದ ಊಟ ಮೊದಲಾದ ಖರ್ಚನ್ನು ಗಂಡಿನವರೇ ನೋಡಿಕೊಳ್ಳಬೇಕು. ಇವರಲ್ಲಿ ಕೂಡಾವಳಿ ಮದುವೆ, ಬಾಲ್ಯ ವಿವಾಹ ಮೊದಲಾದ ವಿವಾಹ ಪದ್ಧತಿಗಳು ಆಚರಣೆಯಲ್ಲಿವೆ. ಇತರರಲ್ಲಿರುವಂತೆ, ಸಿದ್ಧರಲ್ಲಿಯೂ ವಿವಾಹ ವಿಚ್ಛೇದನ ಸಾಂಪ್ರದಾಯಿಕವಾಗಿದೆ. ಸುಡುಗಾಡು ಸಿದ್ಧರು ಇತರರಂತೆ ಹೆಣ್ಣು ಮೊದಲ ಸಲ ಗರ್ಭಿಣಿಯಾದಾಗ ಸಾಮಾನ್ಯವಾಗಿ ಐದು ಇಲ್ಲವೇ ಏಳು ತಿಂಗಳಲ್ಲಿ ಸೀಮಂತ ಕಾರ್ಯವನ್ನು ಗಂಡನ ಮನೆಯಲ್ಲಿ ನೆರವೇರಿಸುತ್ತಾರೆ.

ಪೂಜಾ ಪದ್ಧತಿ:

ಇವರು ಮೂಲತ: ಶೈವರಾದರೂ ವಿಷ್ಣು ಪೂಜಕರು, 'ವೀರಭದ್ರ' ಅವರ ವಿಶೇಷ ದೇವರು. 'ಗಂಗಮ್ಮ', ಸ್ತ್ರೀಯರಿಂದ ಪೂಜಿಸಲ್ಪಡುವ ದೇವತೆಯಾಗಿದ್ದು, ಅವಳಿಗೆ ಕುರಿ ಬಲಿಯನ್ನು ಅರ್ಪಿಸುತ್ತಾರೆ. ಸೋಮವಾರ ದಿನ ಸಿದ್ಧರ ಸ್ತ್ರೀಯರು ಇಡೀ ದಿನ ಉಪವಾಸ ವ್ರತವನ್ನು ಕೈಗೊಂಡು ಶಿವಲಿಂಗವನ್ನು ಪೂಜಿಸುತ್ತಾರೆ. ಇವರು ಶಕ್ತಿ ದೇವತೆಗಳಾದ ದುರ್ಗಮ್ಮ, ಮರಿಯಮ್ಮ, ಎಲ್ಲಮ್ಮ ಮುಂತಾದ ದೇವರುಗಳನ್ನು ಪೂಜಿಸುವುದರ ಜೊತೆಗೆ ತಿರುಪತಿ ತಿಮ್ಮಪ್ಪ, ಅಂತರಗಟ್ಟೆಮ್ಮ, ಮಂಜುನಾಥಸ್ವಾಮಿ, ರೇವಣಸಿದ್ಧಸ್ವಾಮಿಗೂ ಮತ್ತು ತಮ್ಮ ಸುತ್ತಲಿನ ಚೌಡಿ ಭೂತಗಳಿಗೂ ನಡೆದುಕೊಳ್ಳುತ್ತಾರೆ.

ಸುಡುಗಾಡು ಸಿದ್ಧರು ವರ್ಷಕ್ಕೊಮ್ಮೆ ದಸರಾ ಹಬ್ಬದಲ್ಲಿ ಹಿರೇರ ಹಬ್ಬವನ್ನು ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಘಟಸ್ಥಾಪನೆ ಮಾಡಿ ಪೂರ್ವಿಕರ ಮೂರ್ತಿಗಳನ್ನು ಬೆಳ್ಳಿಯಿಂದ ಮಾಡಿಸಿ, ಮನೆ ದೇವರುಗಳ ಜೊತೆಗೆ ಪೂಜಿಸುತ್ತಾರೆ. ಭಾದ್ರಪದ ಇಲ್ಲವೆ ಕಾರ್ತಿಕ ಮಾಸಗಳಲ್ಲಿ ವರ್ಷಕ್ಕೊಮ್ಮೆ ಸತ್ತವರ ದಿನಗಳನ್ನೂ ಆಚರಿಸುತ್ತಾರೆ.

ಶವ ಸಂಸ್ಕಾರ:

ಸುಡುಗಾಡು ಸಿದ್ಧರಲ್ಲಿ ಹೂಳುವ ಮತ್ತು ಸುಡುವ ಎರಡೂ ಪದ್ಧತಿಗಳಿವೆ. ಗರ್ಭಿಣಿ, ಬಾಣಂತಿ, ತೊನ್ನು ಇದ್ದವರನ್ನು ಮತ್ತು ಅನುಮಾನಸ್ಪದವಾದ ಸಾವುಗಳು ಸಂಭವಿಸಿದಲ್ಲಿ ಶವಗಳನ್ನು ಸಾಮಾನ್ಯವಾಗಿ ಸುಡುತ್ತಾರೆ. ಉಳಿದಂತೆ ಎಲ್ಲ ಹೆಣಗಳನ್ನು ಹೂಳುತ್ತಾರೆ. ಶವ ಸಂಸ್ಕಾರಕ್ಕೆ ಹೋದ ಜನರು ಸಮೀಪದ ಹಳ್ಳಕ್ಕೆ ಹೋಗಿ ಸ್ನಾನ ಮಾಡಿ ವಾಪಾಸು ಬರುವಾಗ ದಾರಿಯಲ್ಲಿ ದೇವರ ದರ್ಶನ ಮಾಡಿಕೊಂಡು ನೇರವಾಗಿ ಹೆಂಡದ ಅಂಗಡಿಗೆ ಹೋಗಿ ಸಾಕಷ್ಟು ಕುಡಿದು ಸತ್ತವರ ಮನೆಗೆ ಬಂದು ದೀಪ ನೋಡಿ ತಮ್ಮ ತಮ್ಮ ಮನೆಗಳಿಗೆ ತೆರಳುತ್ತಾರೆ. ಹಟ್ಟಿಯ ಜನ ಸತ್ತವರ ಮನೆಗೆ ಮೂರು ದಿನಗಳವರೆಗೆ ಊಟ ತಂದು ಕೊಡುತ್ತಾರೆ.

ಸುಡಗಾಡು ಸಿದ್ಧರ ಇಂದಿನ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳು:

ಸುಡಗಾಡು ಸಿದ್ಧರ ಇಂದಿನ ಆರ್ಥಿಕ-ಸಾಮಾಜಿಕ ಸ್ಥಿತಿಗತಿಗಳು ಅಷ್ಟೇನು ಪರಿಣಾಮಕಾರಿಯಾಗಿ ಬದಲಾವಣೆಗೊಂಡಿಲ್ಲ. ಅವರು ಬಹುತೇಕವಾಗಿ ಹಿಂದಿನಂತೆಯೇ ಬದುಕುತ್ತಿದ್ದಾರೆ. ಅಲ್ಲಲ್ಲಿ ಕೆಲವರು ಮಾತ್ರ ರೈತಾಪಿಗಳಾಗಿ, ಕೂಲಿಕಾರರಾಗಿ, ಶಾಶ್ವತವಾಗಿ ನೆಲೆಯೂರಿ ಕಲ್ಲಿನ ಮನೆಗಳನ್ನು ಕಟ್ಟಿಕೊಂಡಿರುವುದು ಕಂಡುಬರುತ್ತದೆ. ಕಷ್ಟಪಟ್ಟು ದುಡಿದು ತಿನ್ನಬೇಕು ಎನ್ನುವ ಪ್ರವೃತ್ತಿ ಇವರಲ್ಲಿ ಕಂಡುಬರದು. ಭಿಕ್ಷೆಯಿಂದಲೇ ತಮ್ಮ ಬದುಕು ಸಾಗಬೇಕೆನ್ನುತ್ತಾರೆ. ಹೀಗಾಗಿ ತುಂಬಾ ಶೋಚನೀಯವಾದ ಬದುಕು ಅವರದಾಗಿದೆ. ಸದಾ ಹೆಂಡ, ಸರಾಯಿ ಕುಡಿಯುವುದು ಹಿಂದಿನಂತೆ ಈಗಲೂ ಮುಂದುವರೆದಿದೆ. ಹುಟ್ಟು, ಮದುವೆ ಹಾಗೂ ಸಾವು ಮೊದಲಾದ ಸಂಸ್ಕಾರ ಕಾರ್ಯಗಳಲ್ಲಿ ಸಾಮಾನ್ಯವಾಗಿ ಯಾವ

ಬದಲಾವಣೆಗಳು ಕಂಡು ಬರುವುದಿಲ್ಲ. ಅಂದರೆ ತಮ್ಮ ಪಾರಂಪರಿಕ ಆಚರಣೆಗಳನ್ನು ಹಾಗೇ ಮುಂದುವರಿಸಿಕೊಂಡು ಬಂದಿದ್ದಾರೆ ಎನ್ನಬಹುದು.

ಪರಿವರ್ತನೆಯ ಪ್ರಭಾವಗಳು:

ಬುಡಕಟ್ಟಿನ ಸುಡುಗಾಡು ಸಿದ್ಧರು ಇಂದು ಮೊದಲಿನಂತೆ ಸಂಚಾರಿಗಳಾಗಿರದೆ ಅಲ್ಪ ಸ್ವಲ್ಪ ಹೊಲ-ಮನೆಗಳನ್ನು ಕಟ್ಟಿಕೊಂಡು ಅಲ್ಲಲ್ಲಿ ಶಾಶ್ವತವಾಗಿ ನೆಲೆಯೂರಿದ್ದಾರೆ. ಊರಿನ ಪಕ್ಕದಲ್ಲಿಯೇ ತಮ್ಮ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇದರಿಂದ ಸುತ್ತಲಿನ ಸಮಾಜದ ಪ್ರಭಾವ ಸಾಕಷ್ಟು ಬೀರಿದೆ ಎನ್ನಬಹುದು. ಆಧುನಿಕತೆಯ ಗಾಳಿಯೂ ಇವರ ಮೇಲೆ ಬೀರಿದೆ. ಬೇರೆ ಸಮುದಾಯದಂತೆ ಈ ಸಮುದಾಯವು ಪರಿವರ್ತನೆಗೊಳ್ಳುತ್ತಿದೆ. ಅವರ ಸಾಮಾಜಿಕ ಸ್ಥಾನಮಾನಗಳು ಬದಲಾಗುತ್ತಿವೆ.

ಕುಲ ಪಂಚಾಯಿತಿಯ ವ್ಯವಸ್ಥೆ ಇರುವುದರಿಂದ ಇವರಲ್ಲಿ ಯಾವುದೇ ಬಗೆಯ ಅಹಿತಕರ ಇಲ್ಲವೇ ಅನೈತಿಕ ಸಂಬಂಧಗಳಿಗೆ ಆಸ್ಪದವಿಲ್ಲ. ಹಿಂದೆ ಅಂತರ್ಜಾತಿ ವಿವಾಹಗಳಿಗೆ ಅವಕಾಶವಿರಲಿಲ್ಲ. ಆದರೆ ಈಗೀಗ ಆಧುನಿಕತೆಯ ಪ್ರಭಾವದಿಂದ ಅಂತರ್ಜಾತಿ ವಿವಾಹಗಳಿಗೆ ಅವಕಾಶವನ್ನು ಕಲ್ಪಿಸಿಕೊಡಲಾಗಿದೆ. ಹಿಂದೆ 5 ದಿನಗಳವರೆಗೆ ನೆಡೆಯುತ್ತಿದ್ದ ಮದುವೆ ಸಂಪ್ರದಾಯಗಳು, ಇಂದು ಒಂದೇ ದಿನದಲ್ಲಿ ಮುಗಿಯುತ್ತವೆ. ಇಂದು ಇವರಲ್ಲಿಯೂ ವರದಕ್ಷಿಣೆ ಎಂಬ ಅನಿಷ್ಟ ಪದ್ಧತಿ ಬೆಳಕಿಗೆ ಬಂದಿದೆ. ಹೀಗೆ, ಸುಡುಗಾಡು ಸಿದ್ಧರು ಸಮಕಾಲೀನ ಸಮಾಜದಿಂದ ಸಾಕಷ್ಟು ಪ್ರಭಾವಿತರಾಗಿದ್ದಾರೆ.

ಆಧುನಿಕತೆಯ ಪ್ರಭಾವಕ್ಕೊಳಗಾಗಿರುವ ಸಿದ್ಧರ ಜೀವನ ವಿಧಾನ, ಪರಿಸರ ಇತ್ಯಾದಿಗಳಲ್ಲಿ ಅನೇಕ ಮಾರ್ಪಾಡುಗಳಾಗಿರುವುದು ಕಂಡುಬರುತ್ತದೆ. ಅವರಲ್ಲಿ ಶೈಕ್ಷಣಿಕ ಪ್ರಸಾರ ಅಷ್ಟೊಂದು ಹೆಚ್ಚಿಲ್ಲದಿದ್ದರೂ, ಅಲ್ಲಲ್ಲಿ ಕ್ರಮೇಣವಾಗಿ ಈ ಜನ ಶಿಕ್ಷಣವನ್ನು ಪಡೆಯುತ್ತಿರುವುದು ಕಂಡುಬರುತ್ತದೆ. ಸರಕಾರದಿಂದ ಎಸ್.ಸಿ. ಎಸ್.ಟಿ ಗಳಿಗೆ ದೊರಕುವ ಅನೇಕ ಸೌಕರ್ಯಗಳನ್ನು ಪಡೆದುಕೊಂಡು ಸಿದ್ಧರು ತಮ್ಮ ಜೀವನ ವಿಧಾನವನ್ನೇ ಬದಲಾಯಿಸಿಕೊಂಡಿದ್ದಾರೆ. ದೇವರು ಧರ್ಮದ ವಿಷಯದಲ್ಲಿಯೂ ಈಗ ಅವರಲ್ಲಿ ಸಾಕಷ್ಟು ಪರಿವರ್ತನೆಯಾಗಿದೆ. ಈ ಜನರಲ್ಲಿ ಕೆಲವು ಪದವೀಧರರಿದ್ದರೂ ಇದುವರೆಗೆ KAS, IAS, IPS ಆದವರು ಕಂಡುಬರುವುದಿಲ್ಲ. ಇಂಜಿನೀಯರ್, ಡಾಕ್ಟರ್, ಪೋಲಿಸ್ ಅಧಿಕಾರಿಗಳು ಹಾಗೂ ಶಿಕ್ಷಕರು ಅಲ್ಪ ಸ್ವಲ್ಪ ಜನ ದೊರಕುತ್ತಾರೆ. ರಾಜಕೀಯ ಕ್ಷೇತ್ರವಂತೂ ಅವರ ಪಾಲಿಗೆ ತುಂಬಾ ಬರಡಾಗಿದೆ. ಇದುವರೆಗೆ ಒಬ್ಬರೂ ಎಂ.ಎಲ್.ಎ. ಎಂ,ಎಲ್,ಸಿ, ಇಲ್ಲವೇ ಮಂತ್ರಿಗಳಾಗಿಲ್ಲವೆಂಬುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅನೇಕ ವಕ್ತೃಗಳಿಂದ ತಿಳಿದುಬರುತ್ತದೆ. ತಾವು ರಾಜಕೀಯವಾಗಿ ನಿರ್ಲಕ್ಷಿತರಾದ ಜನರೆಂಬುದು ಅವರ ಕೊರಗಾಗಿದೆ. ಸಿದ್ಧರು ತಮ್ಮ ಯಾವುದೇ ಕಾಯಿಲೆಗಳಿಗೆ, ಹಿಂದೆ ತಾವೇ ನಾಟಿ ಔಷಧಿಗಳನ್ನು ಬಳಸುತ್ತಿದ್ದರು.

ಆದರೆ ಈಗ ಅವರು ಇತರರಂತೆ ಅವುಗಳಿಗಾಗಿ ಆಸ್ಪತ್ರೆಗಳಿಗೆ ಹೋಗಿ ಚಿಕಿತ್ಸೆ ಪಡೆಯುತ್ತಾರೆ. ಹೀಗೆ ಸಿದ್ಧರು ಇಂದು ಸಾಮಾಜಿಕ ಪರಿವರ್ತನೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಕೋಷ್ಟಕ–16 ರಲ್ಲಿನ ಮಾಹಿತಿಯಂತೆ ಸಾಕ್ಷರತೆಗೆ ಅರ್ಹರಾದವರಲ್ಲಿ ಅರ್ಧಕ್ಕಿಂತಲೂ ಅಧಿಕ ಮಂದಿ ಅಂದರೆ ಶೇ.53.44ರಷ್ಟು ಜನರು ಅನಕ್ಷರಸ್ಥರಾಗಿದ್ದಾರೆ. ಶೇಕಡ 25.19ರ ಪ್ರಮಾಣದಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಪಡೆದವರಿದ್ದರೆ, ಪ್ರೌಢ ಶಿಕ್ಷಣ ಪಡೆದವರು ಶೇಕಡ 13.55ರಷ್ಟಿದ್ದಾರೆ. ಪದವಿಪೂರ್ವ/ಡಿಪ್ಲಮೊ/ಐ.ಟಿ.ಐ ಪಡೆದವರ ಸಂಖ್ಯೆ 85 ಮಂದಿ ಇದ್ದರೆ ಉನ್ನತ ಶಿಕ್ಷಣ ಪಡೆದವರು ಕೇವಲ 17ಮಂದಿ ಮಾತ್ರ ಅಂದರೆ ಕ್ರಮವಾಗಿ ಶೇ. 6.5 ಮತ್ತು ಶೇ. 1.30 ರಷ್ಟು ಪ್ರಮಾಣದಲ್ಲಿದ್ದಾರೆ.

ಕೋಷ್ಟಕ–16

ಹಾವೇರಿ ಜಿಲ್ಲೆಯ ಸುಡಗಾಡು ಸಿದ್ಧರ ಶೈಕ್ಷಣಿಕ ಸ್ಥಾನಮಾನ:

ಕ್ರ.ಸಂ	ವಿವರಗಳು	ಪುರುಷ	ಸ್ತ್ರೀ	ಒಟ್ಟು	ಶೇಕಡ
01	ಒಟ್ಟು ಜನಸಂಖ್ಯೆ	**780**	**697**	**1477**	**100**
02	ಸಾಕ್ಷರತೆಗೆ ಅನರ್ಹರು (4 ವರ್ಷದ ಒಳಗಿನವರು)	94	77	171	11.57
03	ಸಾಕ್ಷರತೆಗೆ ಅರ್ಹರು (4 ವರ್ಷದ ಮೇಲ್ಪಟ್ಟವರು)	686	620	1306	88.43
04	ಪ್ರಾಥಮಿಕ /ಮಾಧ್ಯಮಿಕ ಶಿಕ್ಷಣ	170	159	329	25.19
05	ಪ್ರೌಢಶಿಕ್ಷಣ	114	63	177	13.55
06	ಪದವಿಪೂರ್ವ/ಡಿಪ್ಲಮೊ/ಐ.ಟಿ.ಐ)	47	38	85	6.50
07	ಉನ್ನತ ಶಿಕ್ಷಣ	12	05	17	1.30
08	ಅನಕ್ಷರಸ್ಥರು	343	355	698	53.44

ಹಾವೇರಿ ಜಿಲ್ಲೆಯಲ್ಲಿ ನೆಲೆಸಿರುವ ಸುಡುಗಾಡು ಸಿದ್ದರು ತಮ್ಮ ಜೀವನ ನಿರ್ವಹಣೆಗಾಗಿ ಬೇರೆ ಬೇರೆ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಬೇರೆ ಬೇರೆ ವಕ್ತೃಗಳನ್ನು ಭೇಟಿ ಮಾಡಿದಾಗ ಅವರು ನೀಡಿದ ಮಾಹಿತಿಯಂತೆ ಹಾನಗಲ್ ತಾಲೂಕಿನ ದ್ಯಾಮನಕೊಪ್ಪ ಮತ್ತು ಹಿರೇಕೆರೂರಿನ ಜಾವಳ್ಳಿ ಗ್ರಾಮದಲ್ಲಿ ಸುಡುಗಾಡುಸಿದ್ದರು ಕೃಷಿಯನ್ನು ಹೆಚ್ಚಾಗಿ ಅವಲಂಬಿಸಿದ್ದಾರೆ. ಈ ಪ್ರದೇಶಗಳು ಅರೆ–ಮಲೆನಾಡುಗಳಾಗಿದ್ದರಿಂದ ಕೃಷಿಗೆ ಪೂರಕವಾದ ವಾತವರಣವಿರುವುದು ಕಂಡುಬಂತು. ಕೂಲಿ ಕೆಲಸ ಮಾಡುವವರ ಸಂಖ್ಯೆಯು ಗಣನೀಯವಾಗಿದೆ. ಸರ್ಕಾರಿ ಹಾಗೂ ಖಾಸಗಿ ನೌಕರಿಯಲ್ಲಿರುವವರು ಇದ್ದಾರೆ. ಈ ಸಮುದಾಯಕ್ಕೆ ಸೇರಿದ ಒಬ್ಬ ಡಾಕ್ಟರ್ ಸಹ ಇರುವುದು ಕಂಡುಬಂತು. ಡಾಕ್ಟರ್ ತಂದೆಯು ಸಹ ಬಿ.ಇ.ಓ ಆಫೀಸ್ ನಲ್ಲಿ ಗೆಜೆಟೆಡ್ ಮ್ಯಾನೇಜರ್

ಆಗಿರುತ್ತಾರೆ. ಆದರೆ ಈ ಮನೆಯವರಿಂದ ಸಮುದಾಯದ ಇತರ ಜನರಿಗೆ ಯಾವ ಅನುಕೂಲವೂ ಆಗಿಲ್ಲ ಎಂಬ ಕೊರಗು ಆ ಸಮುದಾಯದ ಬಹಳಷ್ಟು ಜನರಿಂದ ವ್ಯಕ್ತವಾಯಿತು. ಯಾವುದೇ ನೌಕರಿ ಇಲ್ಲದವರು ಸಣ್ಣವ್ಯಾಪಾರ, ರಿಪೇರಿ ಕೆಲಸ, ಹಮಾಲಿ ಇನ್ನಿತರ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಕೆಳಗಿನ ಕೋಷ್ಟಕ ಗಮನಿಸಿರಿ.

ಕೋಷ್ಟಕ–17

ಕೆಲಸಗಳಲ್ಲಿ ತೊಡಗಿಕೊಂಡಿರುವ ಹಾವೇರಿ ಜಿಲ್ಲೆಯ ಸುಡಗಾಡು ಸಿದ್ಧರ ಪ್ರಮಾಣ:

ಕ್ರ.ಸಂ.	ಕೆಲಸದ ವಿವರಗಳು	ಪುರುಷ	ಸ್ತ್ರೀ	ಒಟ್ಟು
01	ಭಿಕ್ಷಾಟನೆ	14	07	21
02	ಕೃಷಿ	370	318	688
03	ಕೂಲಿ	137	124	261
04	ಸಣ್ಣ ವ್ಯಾಪಾರ	27	13	40
05	ಸರ್ಕಾರಿ/ಖಾಸಗಿ ನೌಕರಿ	51	37	88
06	ಇತರೆ ಕೆಲಸ (ಗಾರೆ ಕೆಲಸ, ಹಮಾಲಿ) ರಪೇರಿ, ವರ್ಕ್ಸ್, ರದ್ದಿ ಸಂಗ್ರಹ, ಗ್ಯಾರೇಜ್ ಇತ್ಯಾದಿ)	181	198	379
	ಒಟ್ಟು	**780**	**697**	**1477**

ಸಮುದಾಯ ಕುರಿತಂತೆ ಕೊನೆಯ ಮಾತು:

ಜಾದು ಮಾಡುವ ವಿದ್ಯೆಯಲ್ಲಿ ತುಂಬಾ ಪರಿಣಿತಿ ಹೊಂದಿರುವ ಸುಡಗಾಡು ಸಿದ್ಧರು ಶಾಶ್ವತ ನೆಲೆಯಿಲ್ಲದೇ ಹೊಟ್ಟೆಪಾಡಿಗಾಗಿ ಇಂದಿಗೂ ಅರೆ ಅಲೆಮಾರಿ ಜೀವನ ನಡೆಸುತ್ತಿದ್ದಾರೆ. ಹೆಚ್ಚಾಗಿ ಬಳ್ಳಾರಿ ಜಿಲ್ಲೆಯಲ್ಲಿ ಕಂಡುಬರುವ ಇವರನ್ನು ಕಾಡುಪಾಪರು ಎಂದು ಕರೆಯುವುದು ವಾಡಿಕೆ. ಈ ಸಮುದಾಯ ಇಂದಿಗೂ ಅಸಂಘಟಿತವಾಗಿದೆ. ಜನಪ್ರತಿನಿಧಿಗಳು ಈ ಸಮುದಾಯದ ಬಗ್ಗೆ ಗಮನ ಹರಿಸಿ ಶಾಶ್ವತ ನೆಲೆಗಾಗಿ ನಿವೇಶನ, ಮನೆ ಮತ್ತು ಸ್ವಾವಲಂಬಿ ಜೀವನಕ್ಕೆ ಎತ್ತು ಬಂಡಿಗಳನ್ನು ನೀಡಿ ಸಹಾಯ ಮಾಡಿದರೆ ಒಳಿತು. ಜೊತೆಗೆ ಈ ಜನಾಂಗದವರು ಜಾದು ಹಾಗೂ ಜಾನಪದ ಸಂಸ್ಕೃತಿಗಳ ಕಲೆಗಳಲ್ಲಿ ತೊಡಗಿ ಜೀವನ ನಡೆಸುತ್ತಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಇವರಿಗೆ ಪ್ರೋತ್ಸಾಹ ಧನವನ್ನು ನೀಡಿದರೆ ಸಾಕಷ್ಟು ಅನುಕೂಲವಾಗುತ್ತದೆ.

ಹಾವೇರಿ, ಗದಗ, ದಾವಣಗೆರೆ ಹೀಗೆ ಹಲವಾರು ಜಿಲ್ಲೆಗಳಲ್ಲಿ ಮೂರು ತಿಂಗಳು ಮಾತ್ರ ತಮ್ಮ ಕಾಯಕವನ್ನು ಮಾಡುತ್ತಾರೆ. ಉಳಿದ ದಿನಗಳಲ್ಲಿ ಕೂಲಿ ಕೆಲಸ ಮಾಡಿ ಜೀವನವನ್ನು ಸಾಗಿಸುತ್ತಾರೆ. ಅಲ್ಲದೇ ಇವರು ತಮ್ಮ ಮನೆತನದಲ್ಲಿ ಒಬ್ಬರು ಮಾತ್ರ ಈ ಕಾಯಕವನ್ನು

ಮಾಡುತ್ತಾರೆ. ಜೊತೆಗೆ ತಮ್ಮ ಮಕ್ಕಳನ್ನು ಕರೆದುಕೊಂಡು ಹೋಗುತ್ತಾರೆ. ಇದರಿಂದ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಒಟ್ಟಿನಲ್ಲಿ ಸುಡುಗಾಡು ಸಿದ್ಧರು, ಸಮಾಜದ ಮುಖ್ಯವಾಹಿನಿಗೆ ಸೇರಲು ತವಕಿಸುತ್ತಿದ್ದಾರೆ. ಇವರ ಬಗ್ಗೆ ಸರ್ಕಾರ, ಜನಪ್ರತಿನಿಧಿಗಳು ಕಾಳಜಿವಹಿಸಬೇಕಾಗಿದೆ. ಆಗ ಮಾತ್ರ ಈ ಸುಡುಗಾಡು ಸಿದ್ಧರು ಅರೆ-ಅಲೆಮಾರಿ ಜೀವನದಿಂದ ಮುಕ್ತಿ ಹೊಂದಿ ಸಾಮಾನ್ಯರಂತೆ ಬದುಕಲು ಸಾದ್ಯವಾಗುತ್ತದೆ.

ಸಮುದಾಯದ ಒಳಿತಿಗೆ ಸರಕಾರ ಒದಗಿಸಬೇಕಾದ ಸವಲತ್ತುಗಳು.

1. ಈ ಸಮುದಾಯದವರಿಗೆ ನೆಲೆಯಿಲ್ಲ. ಅವರು ವಾಸವಾಗಿರುವ ಸ್ಥಳದಲ್ಲಿ ಸ್ಥಳೀಯ ಸಂಸ್ಥೆಗಳು ನಿವೇಶನ ನೀಡಿ ಮನೆ ಕಟ್ಟಿಸಿ ಕೊಡುವುದು.
2. ಇವರ ಮೂಲ ವೃತ್ತಿ ಇಂದು ನಡೆಯದಾಗಿದೆ. ಇವರಿಗೆ ಉದ್ಯೋಗದಲ್ಲಿ ತೊಡಗಲು ಸರಕಾರ ಕನಿಷ್ಟ ಎರಡು ಎಕರೆ ಜಮೀನು ನೀಡಿ ಕೃಷಿಕರನ್ನಾಗಿ ಮಾಡಬೇಕಿದೆ ಮತ್ತು ಜಮೀನಿಗೆ ಕೊಳವೆ ಭಾವಿ ಹಾಕಿಸಿ ಕೊಡಬೇಕು.
3. ಹೈನುಗಾರಿಕೆ ಉದ್ಯೋಗಕ್ಕೆ ಆರ್ಥಿಕ ನೆರವು ನೀಡಿ, ಪ್ರೇರೇಪಿಸುವುದು.
4. ಇವರ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಸೇರಿಸುವುದು. ಮತ್ತು ಸರಕಾರಿ ಹಾಸ್ಟೆಲ್‌ಗೆ ಸೇರಿಸುವುದು.
5. ಈ ಸಮುದಾಯದವರ ಹೆಣ್ಣು ಮಕ್ಕಳ ವಿವಾಹ ಕಾಲಕ್ಕೆ ಸರಕಾರ ಧನ ಸಹಾಯ ಮಾಡುವುದು. ಭಾಗ್ಯಲಕ್ಷ್ಮಿ ಯೋಜನೆಯ ರೀತಿ.

3.8. ಗೊಂದಲಿಗ ಸಮುದಾಯದ ಸಾಮಾಜಿಕತೆ:

ಕರ್ನಾಟಕದಲ್ಲಿ ಅರೆಅಲೆಮಾರಿ ಸಮುದಾಯವಾಗಿರುವ ಗೊಂದಲಿಗರ ಮೂಲ ನೆಲೆಯನ್ನು ಗುರುತಿಸುವಲ್ಲಿ ಅನೇಕ ಗೊಂದಲಗಳಿವೆ. ಗೊಂದಲಿಗರನ್ನು ಕೆಲವರು ಅವರು ಕನ್ನಡದ ನೆಲದವರೇ ಎಂಬ ಹೇಳಿಕೆಗಳುಂಟು. ಅರೆಅಲೆಮಾರಿಗಳಾದ ಇವರು, ಕರ್ನಾಟಕ ಮಹಾರಾಷ್ಟ್ರವಲ್ಲದೇ ಆಂದ್ರಪ್ರದೇಶ ಗುಜರಾತ್ ಮತ್ತು ಮದ್ಯ ಪ್ರದೇಶಗಳಲ್ಲಿಯೂ ಕಂಡು ಬರುತ್ತಾರೆ. ಗೊಂದಲಿಗರಲ್ಲಿ ಹಲವು ಉಪ ಪಂಗಡಗಳಿವೆ. ಗೊಂದಲಿ ವೃತ್ತಿ ಗಾಯಕರು (ಕಥೆಗಾರರು ಮತ್ತು ಬೀದಿ ಗಾಯಕರು) ಭೂತೆಯರು (ಎಣ್ಣೆ ಜೋಗಿಗಳು) ಸಿಂಗದವರು, ಬುಡ ಬುಡಕೆಯವರು, ವಾಸುದೇವರು, ಜ್ಯೋತಿಷಿಗಳು ಇತ್ಯಾದಿಗಳು. 'ಗೊಂದಲ' ವನ್ನು ಒಂದೊಂದು ಕಡೆಯಲ್ಲಿ ಒಂದೊಂದು ಕಾಲದಲ್ಲಿ ಒಂದೊಂದು ಹೆಸರಿನಿಂದ ಕರೆದಿದ್ದಾರೆ. ಗೊಂದಣ, ಗೊಂದಳ, ಗೊಂಡ್ಲಿ, ಗೊಂಡಗೀ, ಗುಂಡಲೀ, ಗೊಂದೋಳು, ಗೌಂಡಳೀ, ಗೌಂಡ್ಲಿ, ದುಂಡಲೀ, ಗೋಂದಳ್ ಎಂಬ ಸಮಾನಾರ್ಥಕ ಹೆಸರುಗಳಿಂದ ಕರೆದಿದ್ದಾರೆ. ಗೊಂದಲ ಈ ಶಬ್ದಕ್ಕೆ ಹಲವು ಅರ್ಥಗಳಿವೆ. ಗುಂಪು ಭಜನೆಗುಂಪು, ದೈವಾವೇಶದಿಂದ ಕುಣಿಯುವ ಸಾಮೂಹಿಕ ಪ್ರಾರ್ಥನೆ ಇತ್ಯಾದಿ.

ಗೊಂದಲಿಗರು ಪ್ರಾಚೀನ ಕಾಲದಿಂದಲೂ ಅಲೆಮಾರಿಗಳಾಗಿದ್ದು ಇಂದು ಅರೆಅಲೆಮಾರಿಗಳಾಗಿ ಕರ್ನಾಟಕದ ಹಲವು ಪ್ರದೇಶಗಳಲ್ಲಿ ಕಂಡುಬರುತ್ತಾರೆ. ಬೆರಳೆಣಿಕೆಯಷ್ಟು ಜನರು ಅಲ್ಲಲ್ಲಿ ತಮ್ಮ ಅಸ್ತಿತ್ವ ಕಂಡುಕೊಂಡಿದ್ದರೂ ಅಲೆಮಾರಿತನದಿಂದ ಅವರು ಇನ್ನೂ ಬಿಡುಗಡೆ ಹೊಂದಿಲ್ಲವೆಂದು ಹೇಳಬೇಕಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಹನ್ನೊಂದು ಜಿಲ್ಲೆಗಳಲ್ಲಿ ಸುಮಾರು 7000 ಕುಟುಂಬಗಳಿದ್ದು, ಅತಿ ಹೆಚ್ಚು ಕುಟುಂಬಗಳನ್ನು ಹೊಂದಿದ ಜಿಲ್ಲೆಯೆಂದರೆ ಬಾಗಲಕೋಟೆ. ಹಾವೇರಿ ಜಿಲ್ಲೆಯಲ್ಲಿಯೂ ಸುಮಾರು 204ಕ್ಕೂ ಹೆಚ್ಚು ಮನೆಗಳಿರುವುದು ಕಂಡು ಬರುತ್ತದೆ. ದಕ್ಷಿಣ ಕರ್ನಾಟಕದ ಒಟ್ಟು ಹದಿಮೂರು ಜಿಲ್ಲೆಗಳಲ್ಲಿ ಸುಮಾರು 3000ಕ್ಕೂ ಹೆಚ್ಚು ಕುಟುಂಬಗಳಿರುವ ಬಗ್ಗೆ ತಿಳಿಯುತ್ತದೆ. ಈ ಸಮುದಾಯದ ಜನಸಂಖ್ಯೆ ಕರ್ನಾಟಕದಲ್ಲಿ ಸುಮಾರು ಒಂದು ಲಕ್ಷದವರೆಗೆ ಇರಬಹುದೆಂಬ ಅಂದಾಜಿದೆ (ಹಾವೇರಿ ಜಿಲ್ಲೆಯ ಗೊಂದಲಿಗರ ಲಿಂಗಾವಾರು ಜನಸಂಖ್ಯೆಯನ್ನು ಕೊಷ್ಟಕ 18 ರಲ್ಲಿ ನೋಡಬಹುದು).

ಕೋಷ್ಟಕ–18

ಪ್ರಸ್ತುತ ಅಧ್ಯಯನಕ್ಕೆ ಸಮೀಕ್ಷೆಗೊಳಪಡಿಸಿದ ಹಾವೇರಿ ಜಿಲ್ಲೆಯ ಗೊಂದಲಿಗ ಸಮುದಾಯದ ತಾಲೂಕುವಾರು ಲಿಂಗಾವಾರು ಜನಸಂಖ್ಯೆ.

ಕ್ರ.ಸಂ.	ತಾಲೂಕು	ಗ್ರಾಮ/ನಗರ	ಒಟ್ಟು ಮನೆಗಳು	ಜನಸಂಖ್ಯೆ		
				ಗಂಡು	ಹೆಣ್ಣು	ಒಟ್ಟು
I	II	III	IV	V	VI	VII
01	ರಾಣೇಬೆನ್ನೂರು	ರಾಣೇಬೆನ್ನೂರು	30	72	70	142
02	ಹಿರೇಕೆರೂರು	ಹಿರೇಕೆರೂರು	04	12	08	20
03	ಹಿರೇಕೆರೂರು	ರಟ್ಟಿಹಳ್ಳಿ	01	03	02	05
04	ಹಿರೇಕೆರೂರು	ಹಂಸಬಾವಿ	08	20	18	38
05	ಹಿರೇಕೆರೂರು	ಚಿಕ್ಕೇರೂರು	05	15	07	22
06	ಹಿರೇಕೆರೂರು	ಮಾಸೂರು	01	03	02	05
07	ಬ್ಯಾಡಗಿ	ಬ್ಯಾಡಗಿ	04	10	08	18
08	ಬ್ಯಾಡಗಿ	ಕಾಗಿನೆಲೆ	10	25	21	46
09	ಹಾನಗಲ್	ತಿಳುವಳ್ಳಿ	20	46	30	76
10	ಹಾನಗಲ್	ಚಿಕ್ಕಾಂಶಿ ಹೊಸೂರು	24	54	30	84
11	ಹಾನಗಲ್	ಹಾನಗಲ್	48	101	105	206
12	ಹಾನಗಲ್	ಅಕ್ಕಿ ಅಲೂರು	02	05	04	09
13	ಹಾನಗಲ್	ಬೊಮ್ಮನಹಳ್ಳಿ	05	13	09	22
14	ಹಾನಗಲ್	ಬೆಳಗಾಲಪೇಟೆ	08	19	15	34
15	ಶಿಗ್ಗಾಂವ	ಶಿಗ್ಗಾಂವ	08	18	16	34
16	ಶಿಗ್ಗಾಂವ	ತಡಸ	04	10	08	18
17	ಹಾವೇರಿ	ಹಾವೇರಿ	10	22	20	42
18	ಹಾವೇರಿ	ಗುತ್ತಲ	10	27	19	46
19	ಹಾವೇರಿ	ಕಳ್ಳಿಹಾಲ	02	06	04	10
		ಒಟ್ಟು	**204**	**471**	**406**	**877**

ನೆಲೆಗಳು:

ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಕಂಡು ಬರುವ ಗೊಂದಲಿಗರನ್ನು ಈ ಅದ್ಯಯನಕ್ಕೆ ಅಳವಡಿಸಿಕೊಂಡಿಲ್ಲ. ಕಾರಣ ನನ್ನ ಸಂಶೋದನ ಕ್ಷೇತ್ರ ಹಾವೇರಿ ಜಿಲ್ಲೆಗೆ ಸೀಮಿತವಾಗಿದ್ದರಿಂದ ಈ ಜಿಲ್ಲೆಯಲ್ಲಿರುವ ಗೊಂದಲಿಗರ ಸ್ಯಾಂಪಲ್ ಸರ್ವೆ ಮಾಡುವ ಮೂಲಕ ಸಮೀಕ್ಷೆಗೆ ಅಳವಡಿಸಿಕೊಳ್ಳಲಾಗಿದೆ.

ಪ್ರಾದೇಶಿಕವಾಗಿ ಗೊಂದಲಿಗರ ಆಚಾರ, ವಿಚಾರ, ನಡೆ ನುಡಿ, ವೃತ್ತಿಗಳು, ಭಿನ್ನವಾಗಿರುವುದು, ಅನೇಕ ಸಾಹಿತ್ಯಗಳ ಮೂಲಕ ತಿಳಿಯುತ್ತದೆ. ಈ ಅದ್ಯಯನಕ್ಕೆ ಹಾವೇರಿ ಜಿಲ್ಲೆಯ ವಿವಿಧ ತಾಲೂಕುಗಳ ಹಳ್ಳಿಗಳನ್ನು ಒಳಪಡಿಸುವ ಮೂಲಕ ಅವರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ. ಹಾವೇರಿ ಜಿಲ್ಲೆಯ ರಾಣೆಬೆನ್ನೂರು ನಗರ, ಹಿರೇಕೆರೂರು, ಮಾಸೂರು, ಶಿಗ್ಗಾವ, ಗುತ್ತಲ, ಬ್ಯಾಡಗಿ, ಕಾಗಿನೆಲೆ, ತಿಳವಳ್ಳಿ, ಹಾನಗಲ್, ಚಿಕ್ಕಾಂಶಿ ಹೊಸೂರು ಮುಂತಾದ ಪ್ರದೇಶಗಳಲ್ಲಿರುವ ಗೊಂದಲಿಗರನ್ನು ಈ ಅಧ್ಯಯನಕ್ಕಾಗಿ ಅಳವಡಿಸಿಕೊಳ್ಳಲಾಗಿದೆ. ಈ ಪ್ರದೇಶಗಳಲ್ಲಿರುವ ಈ ಜನರನ್ನು ಸ್ಯಾಂಪಲ್ ಮೂಲಕ ಆಯ್ಕೆ ಮಾಡಿಕೊಂಡು ಕುಟುಂಬದ ಹಲವು ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

ಹಾವೇರಿ ಜಿಲ್ಲೆಯ ಗೊಂದಲಿಗ ಸಮುದಾಯದ ನೆಲೆಗಳು



ಗೊಂದಲಿಗರ ಲಕ್ಷಣಗಳು:

ಕರ್ನಾಟಕದಲ್ಲಿ ಈಗಾಗಲೇ ಬುಡಕಟ್ಟುಗಳೆಂದು ಕರೆಯುವ ಬುಡಕಟ್ಟು ಸಮುದಾಯಗಳ ಸಾಮಾನ್ಯವಾದ ಎಲ್ಲಾ ಲಕ್ಷಣಗಳು ಗೊಂದಲಿಗರಲ್ಲಿರುವುದು ಕಂಡುಬರುತ್ತದೆ. ಗೊಂದಲಿಗರಲ್ಲಿ ಕೆಲವರು ಒಂದು ಕಡೆ ನೆಲೆ ಕಂಡುಕೊಳ್ಳಲು ಪ್ರಯತ್ನಿಸಿದವರೆಲ್ಲಾ ಒಂದು ಊರಿನ ಒಂದೇ ಸ್ಥಳದಲ್ಲಿ ತಮ್ಮ ಮನೆ ಅಥವಾ ಗುಡಿಸಲುಗಳನ್ನು ಕಟ್ಟಿಕೊಳ್ಳುತ್ತಾ ಬಂದಿದ್ದಾರೆ. ಇತರೆ ಸಂಸ್ಕೃತಿಯವರಿಂದ ದೂರವಿರಲು ಇವರು ಪ್ರಯತ್ನಿಸುತ್ತಿರುವುದು ಕಂಡುಬರುತ್ತದೆ. ಗೊಂದಲಿಗರು ತಮ್ಮದೆ ಆದ ವಿಶಿಷ್ಟವಾದ 'ಖಿವಾರಿ' ಎಂಬ ಬಾಷೆಯನ್ನು ಮಾತನಾಡುತ್ತಾರೆ. ಸೋದರ ಸಂಬಂಧಿ ವಿವಾಹಗಳು ಇವರಲ್ಲಿ ನಿಷಿದ್ಧ. ಹೆಣ್ಣಿಗೆ ಇವರು ಕಡ್ಡಾಯವಾಗಿ 'ತೆರ' ಕೊಡಬೇಕಂಬ ನಿಯಮವಿದೆ. ಇವರ ಮದುವೆ ಆಚರಣೆಗಳು ಆದಿಮ ಆಚರಣೆಗಳೇ ಆಗಿವೆ. ವಿಧವಾ ವಿವಾಹ ಇವರ ಆಚರಣೆಯಲ್ಲಿದೆ. ಗೊಂದಲಿಗರು ಮಾಂಸಹಾರಿಗಳು. ಬೇಟೆಯಾಡಿ ಆಹಾರ ಸಂಗ್ರಹಿಸುತ್ತಿದ್ದರು. ಆದರೆ ಇಂದು ಬೇಟೆಯಾಡುವುದನ್ನು ನಿಷೇಧಿಸಿರುವುದರಿಂದ, ಅದನ್ನು ಕೈ ಬಿಟ್ಟಿರುತ್ತಾರೆ. ವಿಶೇಷ ಸಂದರ್ಭಗಳ ಆಚರಣೆಗಳಲ್ಲಿ ಪ್ರಾಣಿ ಬಲಿ ಕೊಡುವ



ಸಂಪ್ರದಾಯವಿದೆ. ಗೊಂದಲಿಗರಲ್ಲಿರುವ ನ್ಯಾಯ ಪದ್ದತಿ ಇತರೆ ಬುಡಕಟ್ಟುಗಳಿಗಿಂತ ತೀಕ್ಷ್ಣವಾಗಿರುವುದು ಕಂಡು ಬರುತ್ತದೆ. ತಮ್ಮಲ್ಲಿರುವ ತಂಟೆ ತಕಾರಾರುಗಳನ್ನು ತಾವೇ ಬಗೆಹರಿಸಿಕೊಳ್ಳುತ್ತಾರೆ.

ಗೊಂದಲಿಗರ ಪೌರಾಣಿಕ ಮತ್ತು ಐತಿಹಾಸಿಕ ಹಿನ್ನೆಲೆ:

ಸಮುದಾಯದ ಸೃಷ್ಟಿ ಹೇಗಾಯಿತು? ವಿಶ್ವದ ಸೃಷ್ಟಿ ಹೇಗಾಯಿತು? ಯಾರಿಂದಾಯಿತು? ಎಂದು ತಿಳಿಸುವ ಪುರಾಣಗಳು ಜಗತ್ತಿನ ಅನೇಕ ಸಮುದಾಯಗಳಲ್ಲಿವೆ. ಸಮುದಾಯಗಳ ಪ್ರಕಾರ ವಿಶ್ವದ ಸೃಷ್ಟಿ ಒಂದೇ ರೀತಿಯಲ್ಲಿರುವುದಿಲ್ಲ. ಸಮುದಾಯದಿಂದ ಸಮುದಾಯಕ್ಕೆ ಅದು ಭಿನ್ನವಾಗಿರುತ್ತದೆ. ಪ್ರತಿಯೊಂದು ಸಮುದಾಯ ತನ್ನ ಸಮುದಾಯದ ಮೂಲ ಪುರುಷನ ಸೃಷ್ಟಿ, ಆರಾಧಿಸುವ ದೈವ, ಆಚರಿಸುವ ಧರ್ಮ, ನಂಬಿದ ತತ್ವ, ಎಲ್ಲಕ್ಕೂ ಸಮರ್ಥನೆ ಮಾಡಿಕೊಳ್ಳಲು ಮತ್ತು ನಂಬಿಕೆ ಹುಟ್ಟಿಸಲು ಅನೇಕ ಪುರಾಣಗಳನ್ನು ಸೃಷ್ಟಿಸಿದೆ.

ಗೊಂದಲಿಗರ ಸಮುದಾಯದಲ್ಲಿ ಗೊಂದಲದ ಸೃಷ್ಟಿ ಕುರಿತಾದ ಪುರಾಣ ಕಥೆಯಿದೆ. 'ರೇಣುಕಾ ಮಹಾತ್ಮೆಯಲ್ಲಿರುವ' ಗೊಂದಲದ ಕಥೆ ಹೀಗಿದೆ. 'ಸವದತ್ತಿಯ ಎಲ್ಲಮ್ಮ (ರೇಣುಕಾ ದೇವಿ) ದೇವಿಯ ಮಗನಾದ ಪರುಶುರಾಮನು ಆ ಪರಿಸರದಲ್ಲಿದ್ದು ಬೆಟ್ಟಾಸುರ ಎಂಬ ರಾಕ್ಷಸನನ್ನು ಸಂಹರಿಸಿ ಅವನ ತಲೆಯನ್ನು ಕತ್ತರಿಸಿದ. ಆಗ ಆ ದೈತ್ಯನ ಶಿರದ ಬ್ರಹ್ಮರಂಧ್ರದಿಂದ ತಂತುವೊಂದು ಹೊರಬರುತ್ತದೆ. ಆ ದೈತ್ಯನ ದೇಹವನ್ನೇ ಚೌಡಕಿಯನ್ನು ಮಾಡಿ ಆ ತಂತುವನ್ನು ಮಿಡಿದಾಗ ಅದರಿಂದ 'ತಿಂತ್ರಣ ತಿಂತ್ರಣ' ಎಂಬ ನಾದ ಹೊರಡುತ್ತದೆ. ಪರಶುರಾಮ ಆ ತೃಣ ತೃಣ ನಾದ ಮಾಡುತ್ತಾ ಉಧೋ ಉಧೋ ಎಂಬ ನಾದಘೋಷ ಮಾಡುತ್ತಾ ಆನಂದಮಯವಾಗಿ ಗೊಂದಲ ರೂಪದಿಂದ ಸ್ತುತಿಸಿದ ವಾಕ್ಯವೇ ಗೋಂಧಳವು. ಇಲ್ಲಿಂದಲೇ ಗೊಂದಲ, ಗೊಂದಲಿಗರು ಹುಟ್ಟಿದರೆಂದು ಸಮರ್ಥ ರಾಮದಾಸರ ಶಿಷ್ಯರಾದ ದಿನಕರ ಸ್ವಾಮಿಯು 'ಸ್ವಾನುಭವ ದಿನಕರ' ಎಂಬ ಮರಾಠಿ ಪುಸ್ತಕದಲ್ಲಿದೆ. 'ಜಮದಗ್ನಿ ಋಷಿ ಅವನ ಪತ್ನಿ ರೇಣುಕಾದೇವಿ ನಮ್ಮ ಜಾತಿಯನ್ನು ಸೃಷ್ಟಿಸಿದರೆಂದು ಹೇಳಿಕೊಳ್ಳುತ್ತಾರೆ.

ಬುಡಬುಡಕೆ ವಾದ್ಯವು ಶಿವನ ಕೈಯಲ್ಲಿರುತ್ತದೆ. ಈ ವಾದ್ಯ ಸೃಷ್ಟಿಯಾಗಲು ಶ್ರೀ ಕೃಷ್ಣನೇ ಕಾರಣ. ಒಂದು ಕಾಲದಲ್ಲಿ ತಾರಕಾಸುರ, ಮಕಾಸುರ ಮತ್ತು ಯುದ್ಧ ಮಾರಿ ಎಂಬ ರಾಕ್ಷಸರು ದೇವ ದೇವತೆಗಳಿಗೆ, ಋಷಿಗಳಿಗೆ, ಮಾನವರಿಗೆ ಅನೇಕ ತೊಂದರೆಗಳನ್ನು ಕೊಡುತ್ತಿದ್ದರು. ಆ ಮೂರು ಜನ ರಾಕ್ಷಸರನ್ನು ಕೊಲ್ಲುವ ಸಲುವಾಗಿ ಶ್ರೀ ಕೃಷ್ಣ ಪರಮಾತ್ಮನೇ ನೀನೇ ಒಂದು ಉಪಾಯ ಹೂಡಬೇಕೆಂದು ದೇವತೆಗಳು ಕೇಳಿಕೊಳ್ಳುತ್ತಾರೆ. ಆಗ ಕೃಷ್ಣನು ಆ ರಾಕ್ಷಸರನ್ನು ಸಂಹರಿಸುವುದಕ್ಕಾಗಿ ಮೊದಲು ಶಿವನ ಕೈಯಲ್ಲಿರುವ ಢಮರುಗವನ್ನು ಸಣ್ಣ ವಾದ್ಯವಾಗಿ ರಮ್ಯವಾದ ನಿನಾದವು ಹೊರಡುವಂತೆ ಮಾಡಬೇಕಾಗಿತ್ತಂತೆ. ಆ ರಮ್ಯ ನಿನಾದ ಬುಡು ಬುಡು ಬುಡು ಎಂಬುದಾಗಿ ಶಬ್ಧ ಬಂದುದರಿಂದ ಈ ವಾದ್ಯಕ್ಕೆ 'ಬುಡುಬುಡಕೆ' ಎಂಬ ಹೆಸರು

ಬಂದಿತೆಂದು ಹೇಳುತ್ತಾರೆ. ಈ ನಾದದಿಂದಲೇ ನಾವು ಮನುಷ್ಯ ಜೀವನದಲ್ಲಿಯ ಆಗು ಹೋಗುಗಳನ್ನು ಅರಿತುಕೊಂಡು ಭವಿಷ್ಯ ಹೇಳುತ್ತೇವೆಂದು ಕಥೆ ಹೇಳುತ್ತಾರೆ. (ಡಾ.ನಿಂಗಣ್ಣ ಸಣ್ಣಕ್ಕಿ, ಗೊಂದಲಿಗರ ಸಂಸ್ಕೃತಿ).

ಗೊಂದಲಿಗರ ಸೃಷ್ಟಿ ಪುರಾಣ ಕುರಿತಾದ ದಂತ ಕಥೆಗಳು ಅನೇಕ ಇವೆ. ಅವುಗಳಲ್ಲಿ ಇದು ಒಂದು. 'ಒಮ್ಮೆ ಶಿವಪಾರ್ವತಿಯರು ತಮ್ಮ ಭಕ್ತರಿಗೆ ವರಗಳನ್ನು ನೀಡುತ್ತಾ ಇದ್ದರಂತೆ. ಬಂದ ಬಡವರಿಗೆ ಅವರು ಬೇಡಿದ್ದನ್ನು ದಾನ ಮಾಡಿದರು. ಕೊನೆಗೆ ಇವರ ಕೈಯಲಿದ್ದುದೆಲ್ಲಾ ಮುಗಿದಾಗ ಬುಡಬುಡಕೆಯ ಜನಾಂಗದವರು ಬಂದು ಬೇಡತೊಡಗಿದರು. ಆಗ ಪಾರ್ವತಿ ಅವರನ್ನು ಬರಿಗೈಯಲ್ಲಿ ಕಳಿಸಲು ಇಚ್ಚಿಸದೇ ಶಿವನ ಕೈಯಲ್ಲಿದ್ದ ಢಮರುವನ್ನೆ ಅವರಿಗೆ ದಾನ ಮಾಡಿಸಿದಳಂತೆ ಇದನ್ನೇ ತಮ್ಮ ಉಪಜೀವನದ ಆಧಾರವಾಗಿಟ್ಟುಕೊಂಡು ಇವರು ಬದುಕುತ್ತಿದ್ದಾರೆ ಎಂದು ಕಥೆ ಹೇಳುತ್ತಾರೆ.'[44]

ಮಹಾರಾಷ್ಟ್ರದಲ್ಲಿ ಸುಮಾರು ಮುನ್ನೂರು ವರ್ಷಗಳ ಹಿಂದೆ ಶಿವಾಜಿಯ ಕಾಲದಲ್ಲಿ, ವಿಜಾಪುರ ಮೊಘಲರ ರಾಜ್ಯವಾಗಿತ್ತು. ಎರಡೂ ಕಡೆಗಳಲ್ಲಿ ಆಗಾಗ ಸಣ್ಣಪುಟ್ಟ ಕಲಹಗಳು ನಡೆಯುತ್ತಿದ್ದವು ಮತ್ತು ಹೊಂಚುಗಳು ನೆಡೆಯುತ್ತಿದ್ದರಿಂದ ಗೂಢಚಾರರ ಸಂಚಾರ ಇರುತ್ತಿತ್ತು. ಆ ಗೂಢಚಾರಿಗಳೇ ಗೊಂದಲಿಗರಾಗಿದ್ದರು. ಇವರು ಭಿಕ್ಷುಕರ ವೇಷಧರಿಸಿ ಮೊಘಲರ ರಾಜ್ಯಕ್ಕೆ ಬರುತ್ತಾರೆ. ಮಹಾರಾಷ್ಟ್ರದಲ್ಲಿ ಗೂಢಚಾರಿ ವೃತ್ತಿ ಮಾಡುತ್ತಿದ್ದ ಗೊಂದಲಿಗರಿಗಾಗಿ ಶಿವಾಜಿ ಮಹಾರಾಜ ಭೂಮಿಯನ್ನು ದತ್ತಿ ಬಿಟ್ಟಿದ್ದ. ಆದರೆ ಅವರಿಗೆ ಈ ದತ್ತಿ ಭೂಮಿಯನ್ನು ಅನುಭವಿಸಲಿಕ್ಕೆ ಆಗಲಿಲ್ಲ. ಕೆಲ ಗೊಂದಲಿಗರು ವಿಜಾಪುರದಲ್ಲಿ ತಮ್ಮ ವೇಷವನ್ನೇ ಜೀವನಧಾರವನ್ನಾಗಿ ಮಾಡಿಕೊಳ್ಳುವುದು ಅನಿವಾರ್ಯವಾಯಿತು. ಗೊಂದಲ ನೆಪದಲ್ಲಿ ಇವರು ಮುಸಲ್ಮಾನರ ರಾಜ್ಯದಲ್ಲಿ ಸಂಗ್ರಹಿಸುತ್ತಿದ್ದ ಸುದ್ದಿಯನ್ನು ಮರಾಠಿಯಲ್ಲಿ ಕಥೆಯಾಗಿ ಹಾಡುತ್ತಿದ್ದರು. ಬಿಕ್ಷಾಟನೆ ನೆಪದಲ್ಲಿ ಗೊಂದಲಿಗರು ಮನೆಯ ಮುಂದೆ ನಿಂತು ಹಾಡ ತೊಡಗಿದರೆ ಆ ಸುದ್ದಿ ಮನೆಯೊಳಗಿದ್ದವರಿಗೆಲ್ಲ ಗುಪ್ತವಾದ ಸುದ್ಧಿಗಳು ತಿಳಿಯುತ್ತಿದ್ದವು. ಮರಾಠಿಗರಾದ ಲಮಾಣಿಗಳು ಮತ್ತು ಅವರಂತೆಯೇ ಇರುವ ಅಲೆಮಾರಿ ಮರಾಠಿಗಳಾದ 'ಮಾವಳೆ' ಮಂದಿ ಇರುವಲ್ಲೆಲ್ಲ ಹೋಗಿ ಗೊಂದಲ ಹಾಕಿ ಆ ಮೂಲಕ ಮುಸಲ್ಮಾನರ ಮಸಲತ್ತುಗಳನ್ನು ತಿಳಿಸಿ ಒಗ್ಗಟ್ಟನ್ನು ಸಾಧಿಸಲು ಸಲಹೆ ನೀಡುತ್ತಿದ್ದರು. ಅವರೆಲ್ಲ ಅಂಬಾಭವಾನಿಯ ಭಕ್ತರೇ ಆಗಿದ್ದುದರಿಂದ ಆ ದೇವತೆಯ ಹೆಸರಿನಲ್ಲಿ ಹಾಡುತ್ತಿದ್ದ ಕಥೆಗಳು ಇವರ ಸಲಹೆಗಳನ್ನು ಸುದ್ದಿಗಳನ್ನು ಯಶಸ್ವಿಗೊಳಿಸುತ್ತಿದ್ದವು. ಗೂಢಚರ್ಯ ಕೆಲಸ ಮುಗಿದ ಮೇಲೆ ಈ ಗೊಂದಲಿಗರು ತಮ್ಮ ಮೂಲಸ್ಥಳಗಳಿಗೆ ಹೋಗಲು ಆಸೆಪಡಲಿಲ್ಲ. ಇಲ್ಲಿಯೇ ಭಿಕ್ಷಾಟನೆ ಮಾಡುತ್ತಾ ಕನ್ನಡದ ನೆಲದಲ್ಲಿಯೇ ಉಳಿದುಕೊಂಡರು.'[45]

ಗೊಂದಲಿಗರು ಎಂಬ ಹೆಸರು ಬರುವುದಕ್ಕಿಂತ ಮೊದಲು ಇವರು 'ಮಾವಳೆ ಜನಾಂಗ' ಎಂಬ ಹೆಸರಿನ ಕಾಡು ಕುರುಬರಾಗಿದ್ದರಂತೆ. ದೇವಿಯ ಹೆಸರಿನಲ್ಲಿ ತಿಳಿದಂತೆ ಹಾಡುವುದು, ಕುಣಿಯುವುದು ಮಾಡುತ್ತಿದ್ದರು. ಮುಸಲ್ಮಾನರ ಕುತಂತ್ರಗಳಿಂದ ಬೇಸತ್ತಿದ್ದ, ಶಿವಾಜಿ ಮಹಾರಾಜ ಇವರನ್ನು ಕರೆದು ದೇವಿಯ ಹೆಸರಿನಲ್ಲಿ ಮುಸಲ್ಮಾನರ ಮನೆಗಳಿಗೆ ಹೋಗಿ ಗೊಂದಲ ಮಾಡಿ ಪ್ರಸಾದ ಕೊಡುವ, ಭಂಡಾರ ಹಚ್ಚುವ ನೆಪದಿಂದ, ಅವರ ಮನೆಯೊಳಗೆ ಪ್ರವೇಶಿಸಿ ಅವರ ರಹಸ್ಯಗಳನ್ನು ತಿಳಿದು ವರದಿ ಮಾಡಬೇಕೆಂದು ಅಪ್ಪಣೆ ಮಾಡಿದ. ದೇವಿಯ ಹೆಸರನ್ನು ಕೇಳಿದರೆ ತೆಪ್ಪಗೆ ನಿಲ್ಲುವಂತೆ ಮಾಡಿ, ಮನೆಯೊಳಗೆ ಪ್ರವೇಶಿಸಿ ಮುಸಲ್ಮಾನರ ಮನೆಯಲ್ಲಿ ಅಡಗಿಸಿಟ್ಟ ಮತ್ತು ಶೇಖರಿಸಿಡುತ್ತಿದ್ದ ಶಸ್ತ್ರಾಸ್ತ್ರಗಳನ್ನು ಅಲ್ಲಲ್ಲಿ ಅಡಗಿದ್ದ ಗುಪ್ತ ಯೋಧರನ್ನು ಕಂಡುಹಿಡಿದು ಶಿವಾಜಿಗೆ ತಿಳಿಸುತ್ತಿದ್ದರು. ಇವರ ಯಶಸ್ವೀ ಗೂಢಚರ್ಯದಿಂದ ಸಂತೃಪ್ತನಾದ ಶಿವಾಜಿ ಮಹಾರಾಜ ನೆರೆ ರಾಜ್ಯವಾದ ವಿಜಯಪುರ ಸಂಸ್ಥಾನಕ್ಕೂ ಗೊಂದಲಿಗರನ್ನು ಗೂಢಚಾರರನ್ನಾಗಿ ನೇಮಿಸುತ್ತಾನೆ.

ಗೊಂದಲಿಗರ ಸಾಮಾಜಿಕಾರ್ಥಿಕ ಬದುಕು:

ಗೊಂದಲಿಗರು ನೂರಾರು ವರ್ಷಗಳಿಂದ ತಮ್ಮಲ್ಲಿಯ ಕಲೆಯನ್ನೇ ವೃತ್ತಿಯಾಗಿಸಿಕೊಂಡು ಅದನ್ನು ನಾಗರೀಕ ಸಮುದಾಯದ ಮುಂದೆ ಪ್ರದರ್ಶಿಸಿ ಅವರನ್ನು ರಂಜಿಸಿ ನಂತರ ಜನರಿಂದ ಬಿಕ್ಷೆ ಬೇಡುತ್ತ ಊರಿಂದ ಊರಿಗೆ ಸಂಚರಿಸುವ ಅಲೆಮಾರಿ ಜನಾಂಗ. ಹಲವಾರು ವರ್ಷಗಳಿಂದ ಸ್ಮಶಾನ, ಶಾಲೆ ಬಯಲು, ಊರ ಹೊರಗಿನ ಬಯಲುಪ್ರದೇಶ ಮತ್ತು ಹಾಳು ಬಿದ್ದ ದೇವಸ್ಥಾನಗಳಲ್ಲಿ ಟೆಂಟ್ ಹಾಕಿಕೊಂಡು ಕಾಲ ನೂಕುತ್ತಾ ಬಂದಿರುವರು. ರಾಜ ಮಹಾರಾಜರ ಕಾಲದಲ್ಲಿ ಇವರಲ್ಲಿರುವ ಕಲೆಯನ್ನು ಬೇಹುಗಾರಿಕಾ ವೃತ್ತಿಗೆ ಬಳಸಿಕೊಂಡು ಅವರ ಶ್ರದ್ಧೆ, ನಿಷ್ಠೆ, ಧೈರ್ಯ ಸಾಹಸ ಮೆಚ್ಚಿಕೊಂಡಿದ್ದರು. ಈಗ ಕಾಲ ಮುಗಿದಿದೆ. ಈ ಸಮುದಾಯ ಯಾವ ಅಭಿವೃದ್ಧಿಯನ್ನೂ ಹೊಂದದೆ ನಾಗರಿಕ ಸಮಾಜದಿಂದ ಅವಮಾನಕ್ಕೆ ಗುರಿಯಾಗಿದೆ. ತುತ್ತು ಕೂಳಿಗಾಗಿ ಪರದಾಡುತ್ತಿದೆ. ತಲೆ ಮೇಲೆ ಸೂರಿಲ್ಲದೆ, ನೆಲೆ, ನೆಲ ಇಲ್ಲದೆ, ವಿದ್ಯೆ ಇಲ್ಲದೆ, ಕಥೆಗಾರ, ಬೀದಿ ಹಾಡುಗಾರ, ಬುಡಬುಡಕೆ, ಗಿಳಿಶಾಸ್ತ್ರ, ಅರೆ ಪಂಚಾಂಗ ಮುಂತಾದ ವೃತ್ತಿಗಳ ಮೂಲಕ ಬಿಕ್ಷಾಟನೆಯಲ್ಲಿಯೇ ಬದುಕುತ್ತಿದ್ದಾರೆ. ಸರ್ಕಾರ ಇವರನ್ನು ಹಿಂದುಳಿದ ವರ್ಗದಲ್ಲಿ ಸೇರಿಸಿದೆ. ಈ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಶಿಫಾರಸ್ಸನ್ನು ಕರ್ನಾಟಕ ಸರ್ಕಾರ ಮಾಡಬೇಕಿದೆ.

ಅಧುನಿಕ ಜಗತ್ತಿನಲ್ಲಿ ಅಲೆಮಾರಿಗಳು ನೆಲ ಮತ್ತು ನೆಲೆ ಎರಡು ಇಲ್ಲದವರು. ಹೀಗಾಗಿ ಇವರು ಸಮಾಜದ ಮುಖ್ಯಸ್ಥಾನದಲ್ಲಿ ನಿಲ್ಲಲು ಆಗಿಲ್ಲ, ಜೊತೆಗೆ ಮುಖ್ಯವಾಹಿನಿಯಲ್ಲಿ ಪಾಲುದಾರರಾಗಲೂ ಆಗುತ್ತಿಲ್ಲ. ಗೊಂದಲಿಗರ ಇಂದಿನ ಸ್ಥಿತಿಗತಿಗಳನ್ನು ಗಮನಿಸಿದರೆ ಅವರು ಉತ್ಪಾದನಾ ವ್ಯವಸ್ಥೆಯಲ್ಲಿ ಎಂದೂ ತೊಡಗಿಸಿಕೊಂಡವರಲ್ಲ. ಬೇರೆಯವರ ಉತ್ಪಾದನೆಯಲ್ಲಿ ಕೈ ಚಾಚಿ ಬದುಕುವ ಪರಂಪರೆಯಲ್ಲಿಯೇ ಬಂದಿದ್ದಾರೆ. ಇವರು ಆರಿಸಿಕೊಂಡಿರುವ ವೃತ್ತಿಗಳಾದ

ಶಾಸ್ತ್ರ-ಶಕುನ ಹೇಳುವುದು, ಮಾಟ-ಮಂತ್ರ ಮಾಡುವುದು, ಕೌದಿ ಹೊಲೆಯುವುದು, ಹಾಡು ಹೇಳುವುದು, ಕಲಾ ಸೇವೆ ಮಾಡುವುದು, ವಾದ್ಯ ನುಡಿಸುವುದು, ತಲೆ ಮೇಲೆ ಪಾತ್ರೆ ಹೊತ್ತು ಕೊಂಡು ಮಾರುವುದು ಮತ್ತು ವೇಷ ಹಾಕುವುದು ಇವು ಸಮಾಜಕ್ಕೆ ಅನಿವಾರ್ಯವಾಗಿ ಬೇಕಾದ ವೃತ್ತಿಗಳಲ್ಲ.

ಗೊಂದಲಿಗರ ಎಲ್ಲಾ ಉಪ-ಪಂಗಡಗಳು ಒಂದಲ್ಲ ಒಂದು ರೀತಿಯಿಂದ ಬಿಕ್ಷಾಟನೆ ಮಾಡುವವರೇ ಆಗಿದ್ದಾರೆ ಮತ್ತು ಅದನ್ನೇ ತಮ್ಮ ಉತ್ಪಾದನೆಯೆಂದು ತಿಳಿದಿದ್ದಾರೆ. ಈ ಕಾರಣದಿಂದಲೇ ಅವರು ಅಲೆಮಾರಿಗಳ ಸ್ಥಿತಿಯಲ್ಲಿ ಉಳಿಯುವಂತಾಗಿದೆ. ಇಂದು ಗೊಂದಲಿಗರು ತಮ್ಮ ಅಸ್ತಿತ್ವ ಉಳಿಸಿಕೊಳ್ಳಬೇಕೆಂದರೆ, ಸಂಘಟಕರಾಗಬೇಕು, ಸಮುದಾಯದ ರಕ್ಷಣೆಗಾಗಿ ಸ್ವ ಉದ್ಯೋಗ ಸೃಷ್ಟಿ ಮಾಡಿಕೊಳ್ಳಬೇಕು. ಬಿಕ್ಷಾಟನೆಯನ್ನು ಉದ್ಯೋಗವೆಂದು ತಿಳಿದುಕೊಳ್ಳಬಾರದು. ಅಲೆಮಾರಿತನಕ್ಕೆ ಅಂತ್ಯವಾಡಿ ಕಡ್ಡಾಯವಾಗಿ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು. ಈ ಎಲ್ಲಾ ಸೌಲಭ್ಯಗಳನ್ನು ಪಡೆದುಕೊಳ್ಳಲು ಸರ್ಕಾರ ಮತ್ತು ಸ್ಥಳೀಯ ಸಂಘ ಸಂಸ್ಥೆಗಳ ನೆರವು ಅವರಿಗೆ ಅವಶ್ಯವಾಗಿ ನೀಡಬೇಕಿದೆ. ಗೊಂದಲಿಗರು ಅಧುನಿಕ ಸಮಾಜದಲ್ಲಿ ಶೈಕ್ಷಣಿಕವಾಗಿ, ಆರ್ಥಿಕವಾಗಿ, ಮತ್ತು ಸಾಮಾಜಿಕವಾಗಿ ಯಾವ ಸ್ಥಿತಿಯಲ್ಲಿದ್ದಾರೆ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಈ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಯಿತು.

ಗೊಂದಲಿಗರ ಸಾಮಾಜಿಕತೆ:

ಸಾಮಾಜಿಕ ರಚನೆ:

ಒಂದು ಸಮುದಾಯದ ಆಚಾರ-ವಿಚಾರ, ನಂಬಿಕೆ, ಪದ್ಧತಿ, ಅವರು ಬದುಕುವ ರೀತಿ-ನೀತಿ, ಉಡುಗೆ-ತೊಡುಗೆ, ಆಹಾರ ಪದ್ದತಿ, ಮುಂತಾದ ಅವರಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಂಡಾಗ ಅದನ್ನು ಆ ಸಮುದಾಯದ ಸಾಮಾಜಿಕ-ಸಾಂಸ್ಕೃತಿಕ ಅಧ್ಯಯನ ಎಂದೇ ಹೇಳುತ್ತೇವೆ. ಅಲೆಮಾರಿಗಳಾದ ಗೊಂದಲಿಗ ಸಮುದಾಯವು ತಮ್ಮದೇ ಆದ ಸಾಮಾಜಿಕತೆ ಹಾಗೂ ಸಂಸ್ಕೃತಿಯನ್ನು ಅನುಸರಿಸಿಕೊಂಡು ಬಂದಿದೆ. ಈ ಸಮುದಾಯದಲ್ಲಿ ಹುಟ್ಟಿನಿಂದ ಸಾಯುವವರೆಗಿನ ಸಂಸ್ಕಾರಗಳು ಇತರ ಬುಡಕಟ್ಟುಗಳಂತೆ ಬಿನ್ನವಾಗಿಲ್ಲವಾದರೂ, ನಗರೀಕರಣದ ಪ್ರಭಾವದಿಂದ ಹೊಸ ರೂಪ ಪಡೆದಿವೆ ಎಂಬುದನ್ನು ಇಲ್ಲಿ ಗಮನಿಸಬೇಕಾಗುತ್ತದೆ.

ಉಡುಗೆ ತೊಡುಗೆಗಳು:

ವಯಸ್ಸಾದ ಗಂಡಸರು ಧೋತರ ಉಟ್ಟು ತಲೆಗೆ ರುಮಾಲು ಧರಿಸುವರು. ಕಲಾವಿದರು ತಲೆಗೆ ರುಮಾಲು, ಕೋಟು ಧರಿಸಿ ಹೆಗಲ ಮೇಲೆ ಜರಿ ಪಟ್ಟಿ ಇರುವ ಶಲ್ಯ ಹಾಕುವರು. ಬುಡಬುಡಕೆ ವೃತ್ತಿಯವರು ಸಾಮಾನ್ಯವಾಗಿ ಎಲ್ಲರೂ ಕೋಟು ಧರಿಸುತ್ತಾರೆ. ಯುವಕರು ಆಧುನಿಕ ಉಡುಪುಗಳನ್ನು ಧರಿಸುತ್ತಿದ್ದಾರೆ. ಹೆಂಗಸರು ಸೀರೆ ರವಿಕೆ ತೊಡುವರು.

ಇನ್ನುಳಿದಂತೆ ಹಣೆಗೆ ಕುಂಕುಮ ಮತ್ತು ಭಂಡಾರ, ಕಿವಿಗೆ ಹೂ ಬೆಂಡಾಲೆ, ಬುಗುಡಿ, ಮುಗನತ್ತು, ಕೈಗೆ ತೋಳಬಂದಿ, ಸರ ಧರಿಸುವುದುಂಟು. ತುರುಬ ಕಟ್ಟಿಕೊಳ್ಳುತ್ತಾರೆ. ಮೈನೆರೆದ ಹೆಣ್ಣು ಕಡ್ಡಾಯವಾಗಿ ಸೀರೆ ಜಂಪರ ತೊಡಬೇಕೆಂಬ ನಿಯಮವಿದೆ. ಇತ್ತಿತ್ತಲಾಗಿ ಗೊಂದಲಿಗರು ಆಧುನಿಕ ಸಮಾಜ ಬಳಸುತ್ತಿರುವ ಎಲ್ಲಾ ಉಡುಗೆ ತೊಡುಗೆಗಳನ್ನು ಬಳಸುತ್ತಿದ್ದಾರೆ.

ಊಟೋಪಚಾರ:

ಗೊಂದಲಿಗರು ಮೂಲತಃ ಮಾಂಸಹಾರಿಗಳು. ಒಂದು ಕಾಲದಲ್ಲಿ ಬೇಟೆಯಾಡುತ್ತಿದ್ದ ಇವರು, ಈಗ ಬೇಟೆಯಾಡುವುದನ್ನು ನಿಷೇಧಿಸಿದ ಮೇಲೆ ಅದನ್ನು ಕೈಬಿಟ್ಟಿದ್ದಾರೆ. ಮೀನು ಹಿಡಿಯಲು ಹೋಗುತ್ತಾರೆ. ಬುಡಬುಡಕಿಯರು ಶಕುನ ಹೇಳಿ ಕುರಿ, ಕೋಳಿ, ಆಡು ಕಾಣಿಕೆಯಾಗಿ ಕೇಳುವುದುಂಟು. ಗೊಂದಲಿಗರು ಭಿಕ್ಷೆಗೆ ಹೋದಾಗ ಸಿದ್ದಪಡಿಸಿದ ಯಾವ ಆಹಾರವನ್ನು ಸ್ವೀಕರಿಸುವುದಿಲ್ಲ. ಬದಲಾಗಿ ನಿತ್ಯ ಬಳಸುವ ಕಾಳುಗಳನ್ನು ಸ್ವೀಕರಿಸುತ್ತಾರೆ. ಮನೆಯಲ್ಲಿ ಅನ್ನ, ರೊಟ್ಟಿ, ಮುದ್ದೆ, ರಾಗಿ ಅಂಬಲಿ ಮುಂತಾದವುಗಳನ್ನು ತಯಾರಿಸುತ್ತಾರೆ. ಹಬ್ಬ, ಹುಣ್ಣಿಮೆಗಳಲ್ಲಿ ಸಿಹಿ ಮಾಡುವುದುಂಟು.

ಕೌಟುಂಬಿಕ ವ್ಯವಸ್ಥೆ:

ಗೊಂದಲಿಗರು ಮಾತೃ ಪ್ರಧಾನ ಕುಟುಂಬದವರು. ಇವರು ಶಕ್ತಿಯ ಆರಾಧಕರು. ಇವರಲ್ಲಿ ಮೊದಲು ತಾಯಿಗೆ ನಂತರ ತಂದೆಗೆ ಪ್ರಾಧಾನ್ಯತೆ ಇರುವುದು ಕಂಡುಬರುತ್ತಿದೆ. ಈಗ ಈ ಸಂಪ್ರದಾಯ ಕಡಿಮೆಯಾಗಿದೆ ಅಂದುಕೊಂಡರೂ, ಕುಟುಂಬದ ಎಲ್ಲ ಜವಾಬ್ಧಾರಿಯನ್ನು ಇವಳೇ ನಿರ್ವಹಿಸುತ್ತಿರುವುದು ಕಂಡುಬರುತ್ತದೆ. ಮಕ್ಕಳ ಪಾಲನೆ ಪೋಷಣೆ ಜೊತೆಗೆ ಕೌದಿ ಹೊಲೆಯುವ ಅಥವಾ ಪಾತ್ರೆ, ಬಾಂಡೆ ವ್ಯಾಪಾರ ಮಾಡುವುದನ್ನು ಕಾಣುತ್ತೇವೆ. ಇವರ ಸಂಸಾರಗಳು ಅವಿಭಕ್ತ ಕುಟುಂಬಗಳ ಸ್ವರೂಪದಲ್ಲಿರುತ್ತವೆ.

ಗೊಂದಲಿಗರಲ್ಲಿ ಸುಮಾರು ಅರ್ಧದಷ್ಟು ಜನ ಗಂಡಸರು ಕೆಲವು ದುಶ್ಚಟಗಳಿಗೆ ದಾಸರಾಗಿದ್ದಾರೆ.ಇದನ್ನು ನಿಯಂತ್ರಿಸಲು ಹೆಂಗಸರು ಪ್ರತಿ ದಿನವೂ ಜಗಳವಾಡುವುದುಂಟು. ಆದರೆ ವಿಚ್ಛೇದನದವರೆಗೆ ಅಥವಾ ಗಂಡ-ಹೆಂಡತಿ ಖಾಯಂ ಆಗಿ ಬೇರೆ ಬೇರೆಯಾಗುವ ಮಟ್ಟಿಗೆ ತಲುಪಿಲ್ಲ. ಕಾರಣ ಇವರಲ್ಲಿರುವ ನ್ಯಾಯ ಪದ್ಧತಿ. ಗೊಂದಲಿಗ ಸ್ತ್ರೀಯರು ಬಹಳ ಸಹನಶೀಲರು, ವಿಶಾಲ ಹೃದಯದವರು, ಗಂಡನ ಹತ್ತಿರ ಎಷ್ಟೇ ಜಗಳವಾಡಿದರೂ ಅದನ್ನು ತಕ್ಷಣ ಮರೆಯುವ ಸ್ವಾಭಾವದವರು.

ಮನೆಯ ಸ್ವರೂಪ:


ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಕಂಡು ಬರುವ ಗೊಂದಲಿಗರು ತಮ್ಮ ಇಡೀ ಜೀವನವನ್ನು ಅಲೆಮಾರಿತನದಲ್ಲಿಯೇ ಕಳೆಯುವುದರಿಂದ ಇವರಿಗೆ ಸ್ವಂತ ಮನೆಯ ಕಲ್ಪನೆ, ಅದರ ರಚನೆಯ ಬಗ್ಗೆ ತಿಳುವಳಿಕೆ ಇಲ್ಲ ಎನ್ನಬಹುದು. ಊರಿನ ಬಯಲು ಪ್ರದೇಶ, ಛತ್ರ,

ಗುಡಿ ಗುಂಡಾರಗಳಲ್ಲಿ, ಶಾಲೆಯ ಆವರಣಗಳಲ್ಲಿ ತಾಡುಪಾಲು ಅಥವಾ ದೊಡ್ಡ ಪ್ಲಾಸ್ಟಿಕ್ ಹೊದಿಕೆಗಳಿಂದ ಗುಡಿಸಲುಗಳನ್ನು ಕಟ್ಟಿಕೊಳ್ಳುತ್ತಾರೆ. ಟೆಂಟ್ ಮುಂಬಾಗದಲ್ಲಿಯೇ ಮೂರು ಗುಂಡುಕಲ್ಲುಗಳನ್ನಿಟ್ಟು ಅದರೊಳಗೆ ಬೆಂಕಿ ಹೊತ್ತಿಸಿ ಅಡುಗೆ ಮಾಡುವರು. ಚಿಕ್ಕ ಮಕ್ಕಳಿದ್ದರೆ, ಮನೆ ಒಳಗೆ ಜೋಳಿಗೆ ಕಟ್ಟುತ್ತಾರೆ. ಕೆಲವು ಗೊಂದಲಿಗರಿಗೆ ಸರ್ಕಾರ ಆಶ್ರಯ ಮನೆಗಳನ್ನು ನೀಡಿದೆ. ಇನ್ನೂ ಕೆಲವರು ಸ್ವಂತ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಆರ್.ಸಿಸಿ. ಮನೆಗಳು ಅಪರೂಪ. ತಗಡು ಹಾಗೂ ಹಂಚಿನ ಮನೆಗಳೇ ಹೆಚ್ಚಿವೆ. ಮನೆಯ ಹೊರಗೆ ಕಟ್ಟೆ ಕಟ್ಟುವುದು ಇವರ ವಾಡಿಕೆ. ಹೆಂಗಸರು ಕಟ್ಟೆಯ ಮೇಲೆ ಕುಳಿತುಕೊಂಡು ಕೌದಿ ಹೊಲೆಯುವುದನ್ನು ಕಾಣುತ್ತೇವೆ (ಕೆಳಗಿನ ಕೋಷ್ಟಕ 19 ನೋಡಿರಿ).

ಕೋಷ್ಟಕ–19

ಹಾವೇರಿ ಜಿಲ್ಲೆಯ ಗೊಂದಲಿಗ ಸಮುದಾಯದವರ ವಾಸದ ಮನೆಯ ಸ್ವರೂಪ:

ಕ್ರಸಂ.	ಮನೆಯ ಸ್ವರೂಪ.	ಸಂಖ್ಯೆ
01	ಟೆಂಟು/ಗುಡಾರ	17
02	ಗುಡಿಸಲು	08
03	ತಗಡು/ಹೆಂಚಿನಮನೆ	85
04	ಮಾಳಿಗೆ/ಆರ್.ಸಿ.ಸಿ	26
05	ಆಶ್ರಯ ಮನೆ	09
06	ಬಾಡಿಗೆ ಮನೆ	59
	ಒಟ್ಟು	204





ಒಳಾಡಳಿತ ಪದ್ಧತಿ:

ಗೊಂದಲಿಗರಲ್ಲಿರುವ ಉಪ ಪಂಗಡಗಳು ಬಾಹ್ಯ ನೋಟಕ್ಕೆ ಇವರು ಬೇರೆ ಬೇರೆಯಾಗಿ ಕಂಡರೂ ಇವರೆಲ್ಲರೂ ಸಾಂಸ್ಕೃತಿಕವಾಗಿ ಒಂದೇ. ಪ್ರಾದೇಶಿಕವಾಗಿ ಭಿನ್ನತೆ ಕಂಡುಬರುತ್ತದೆ. ಗೊಂದಲಿಗರು ಅಲೆಮಾರಿ, ಅರೆ ಅಲೆಮಾರಿ ಮತ್ತು ನೆಲೆ ಕಂಡುಕೊಂಡವರು ವಾಸಿಸುವ ಎಲ್ಲ ಸ್ಥಳಗಳಲ್ಲಿ ಸಮಾಜದ ಹಿರಿಯರಿರುತ್ತಾರೆ. ಗೌಡ, ಓಲೇಕಾರ, ಚೇರಮನ್ ಎಂಬ ಹುದ್ದೆಗಳು ಇವರ ಸಮುದಾಯಗಳಲ್ಲಿವೆ. ಗೊಂದಲಿಗರ ಓಣಿ ಅಥವಾ ಗಲ್ಲಿಗಳಿದ್ದರೆ ಒಂದೊಂದು ಓಣಿಯಿಂದ ಮೂರು ಜನ ನಾಯಕರಿರುತ್ತಾರೆ. ಸಮುದಾಯದಲ್ಲಿ ನಡೆಯವ ಪ್ರತಿಯೊಂದು ವಿಷಯವು ನಾಯಕರ ಗಮನಕ್ಕೆ ತರಬೇಕೆಂಬ ನಿಯಮವಿದೆ. ನ್ಯಾಯ ನಿರ್ಣಯಕ್ಕೆ ಇವರು ಇರಲೇಬೇಕು. ಗೊಂದಲ, ಮದುವೆ, ಜಾತ್ರೆ, ಹೆಣ್ಣು ಗಟ್ಟಿ ಮಾಡುವಾಗ, ಹಬ್ಬ, ಹುಣ್ಣಿಮೆ, ಹುಟ್ಟು, ಸಾವು ಪ್ರತಿಯೊಂದು ಕಾರ್ಯಕ್ಕೂ ಹಿರಿಯರು ಇರಲೇಬೇಕು. ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಕಾರ್ಯಗಳೆಲ್ಲ ಇವರ ಮುಂದಾಳತ್ವ ಮತ್ತು ಮಾರ್ಗದರ್ಶನದಲ್ಲೇ ನಡೆಯುತ್ತವೆ.

ನ್ಯಾಯ ಪದ್ಧತಿ:

ಗೊಂದಲಿಗರಲ್ಲಿ ಸಣ್ಣ ಪುಟ್ಟ ತಂಟೆ ತಕರಾರುಗಳು ನಡೆದರೆ ಕೋರ್ಟು, ಕಚೇರಿ, ಪೋಲಿಸ್ ಸ್ಟೇಶನ್‌ವರೆಗೆ ಹೋಗದೇ ಸಮುದಾಯದ ಪಂಚರ ಮೂಲಕ ಬಗೆಹರಿಸಿಕೊಳ್ಳುವ ಪದ್ಧತಿಯಿದೆ. ಇದಕ್ಕೆ ಕಾರಣ ಅವರಲ್ಲಿನ ಒಗ್ಗಟ್ಟು. ಗೊಂದಲಿಗರು ನ್ಯಾಯ ನಿರ್ಣಯವನ್ನು ನಿಷ್ಪಕ್ಷಪಾತವಾಗಿ ಮತ್ತು ಪಾರದರ್ಶಕವಾಗಿ ಮಾಡುವುದುಂಟು. ಪಂಚರು ನೀಡಿದ ನಿರ್ಣಯವನ್ನು ಅಪರಾಧಿ ಒಪ್ಪಲೇಬೇಕು. ಇದರಿಂದ ತಪ್ಪಿಸಿಕೊಳ್ಳಲು ಸಾದ್ಯವಾಗುವುದಿಲ್ಲ. ಆದರೆ ಇತ್ತೀಚೆಗೆ ಅವರೂ ಸಹ ನ್ಯಾಯಾಲಯ, ಪೊಲೀಸ್ ಕಚೇರಿಗಳನ್ನು ಅಲೆಯುತ್ತಿರುವುದನ್ನು ಕಾಣುತ್ತೇವೆ.

ಗೊಂದಲಿಗರ ಭಾಷೆ:

ಗೊಂದಲಿಗರ ಭಾಷೆಯನ್ನು ಇಲ್ಲಿಯವರೆಗೆ ಮರಾಠಿ ಭಾಷೆ ಎಂದೇ ಹೇಳುತ್ತಾ ಬಂದಿದ್ದಾರೆ. ಆರಂಭದ ಕಾಲದಲ್ಲಿ ಇವರು ಮಾತನಾಡುವ ಭಾಷೆಯನ್ನು 'ಖಿವಾರಿ' ಭಾಷೆ ಎನ್ನುತ್ತಿದ್ದರು. ಈ ಭಾಷೆಗೆ ಲಿಪಿ ಇಲ್ಲ. ಇದು ಆಡು ಭಾಷೆಯಲ್ಲಿಯೇ ಉಳಿದುಕೊಂಡಿದೆ. ಖಿವಾರಿ ಮತ್ತು ಮರಾಠಿ ಭಾಷೆಯ ಧ್ವನಿಗಳು ಒಂದೇ ರೀತಿಯಾಗಿರುವುದು ಕಂಡುಬರುತ್ತದೆ. ಆದರೆ ಖಿವಾರಿ ಭಾಷೆಯ ಬಳಕೆ ಇಂದು ಗೊಂದಲಿಗರಲ್ಲಿ ಮಾಯವಾಗುತ್ತಿದೆ. ಮರಾಠಿ ಪ್ರಭಾವ ಈ ಭಾಷೆಯ ಮೇಲೆ ಬೀರಿದ್ದರಿಂದ ಇದು ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಗೊಂದಲಿಗರಲ್ಲಿಯ ಉಪ ಪಂಗಡಗಳು:

1. ಗೊಂದಲ ವೃತ್ತಿ ಗಾಯಕರು (ಬೀದಿ ಹಾಡುಗಾರರು, ಕಥೆಗಾರರು)
2. ಭೂತೆಯರು (ಎಣ್ಣೆ ಜೋಗಿಗಳು)
3. ಸಿಂಗದವರು
4. ಬುಡಬುಡಕೆಯರು
5. ವಾಸುದೇವರು
6. ಜ್ಯೋತಿಷಿಗಳು (ಹಸ್ತ ಸಾಮುದ್ರಿಕ, ಗಿಳಿಶಾಸ್ತ್ರ)
7. ಭಾಟರು
8. ಚಿತ್ರ ಪಟದವರು.

ಗೊಂದಲಿಗರ ಆಚರಣೆ ಮತ್ತು ನಂಬಿಕೆಗಳು:

ಒಂದು ಸಮುದಾಯದ ಆಚಾರ-ವಿಚಾರ, ನಂಬಿಕೆ, ಪದ್ಧತಿ, ಅವರು ಬದುಕುವ ರೀತಿ-ನೀತಿ, ಉಡುಗೆ-ತೊಡುಗೆ, ಆಹಾರ ಪದ್ದತಿ, ಮುಂತಾದ ಅವರಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಂಡಾಗ ಅದನ್ನು ಆ ಸಮುದಾಯದ 'ಸಂಸ್ಕೃತಿ' ಅಧ್ಯಯನ ಎಂದೇ ಹೇಳುತ್ತೇವೆ. ಅರೆ-ಅಲೆಮಾರಿಗಳಾದ ಗೊಂದಲಿಗ ಸಮುದಾಯವು ತಮ್ಮದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಅನುಸರಿಸಿಕೊಂಡು ಬಂದಿದೆ. ಈ ಸಮುದಾಯದಲ್ಲಿ ಹುಟ್ಟಿನಿಂದ ಸಾಯುವವರೆಗಿನ ಸಂಸ್ಕಾರಗಳು ಇತರ ಬುಡಕಟ್ಟುಗಳಂತೆ ಬಿನ್ನವಾಗಿಲ್ಲವಾದರೂ, ನಗರೀಕರಣದ ಪ್ರಭಾವದಿಂದ ಹೊಸ ರೂಪ ಪಡೆದಿವೆ ಎಂಬುದನ್ನು ಇಲ್ಲಿ ಗಮನಿಸಬೇಕಾಗುತ್ತದೆ.

ಹುಟ್ಟು:

ಇತರೆ ಸಮುದಾಯಗಳಂತೆ, ಗೊಂದಲಿಗರಲ್ಲಿಯೂ ಚೊಚ್ಚಲ ಹೆರಿಗೆ ತವರು ಮನೆಯಲ್ಲಿಯೇ ಆಗಬೇಕೆಂಬ ನಿಯಮವಿದೆ. ಗೊಂದಲಿಗರ ಹೆಣ್ಣುಮಕ್ಕಳು ಬಹಳ ಗಟ್ಟಿಗರು. ಗರ್ಭಿಣಿಗೆ ಒಂಬತ್ತು ತಿಂಗಳು ತುಂಬುವುದಕ್ಕಿಂತ ಮೊದಲೇ ತವರು ಮನೆಗೆ ಕಳಿಸುವುದುಂಟು. ತವರು ಮನೆಯವರು ಅಲೆಮಾರಿಗಳೇ ಆಗಿದ್ದರೆ ಅವಳನ್ನು ಎಲ್ಲಿಯೂ ತಿರುಗಾಡಲು ಕಳಿಸುವುದಿಲ್ಲ. ಗೊಂದಲಿಗರಲ್ಲಿಯೂ ನುರಿತ ಸೂಲಗಿತ್ತಿಯರಿದ್ದಾರೆ. ಅವರಿಂದಲೇ ಸ್ತ್ರೀಯರಿಗೆ ಹೆರಿಗೆ ಮಾಡಿಸುತ್ತಾರೆ.

ಮಗು ಹುಟ್ಟಿದ ಐದನೇ ದಿನ 'ಐದೆಶಿ' ಎಂಬ ಆಚರಣೆ ಮಾಡುತ್ತಾರೆ. ಈ ಐದೆಶಿಯ ದಿನ ಶೆಟ್ಟೆವ್ವ ತಾಯಿ ಆ ಮಗುವಿನ ಹಣೆಬರಹ ಬರೆಯುತ್ತಾಳೆಂಬ ನಂಬಿಕೆ ಇದೆ. ಅದಕ್ಕೋಸ್ಕರ ಶೆಟ್ಟೆವ್ವನ ಮೂರ್ತಿಗೆ ಸಂಪ್ರದಾಯದಂತೆ, ವಿಶೇಷ ಪೂಜೆ ನೆರವೇರಿಸುತ್ತಾರೆ. ಮಗು ಹುಟ್ಟಿದ

ಹನ್ನೆರೆಡನೇ ದಿನ ನಾಮಕರಣ ಮಾಡುತ್ತಾರೆ. ಇದಕ್ಕೆ ತೊಟ್ಟಿಲುಶಾಸ್ತ್ರ ಎನ್ನುವರು. ಹೆಸರನ್ನು ಸೋದರತ್ತೆಯೇ ಇಡುವ ಪರಂಪರೆ ಇದೆ.

ಋತುಮತಿ:

ಗೊಂದಲಿಗರಲ್ಲಿ ಹೆಣ್ಣು ಋತುಮತಿಯಾದರೆ, ಅವರು ವಾಸಿಸುವ ಗುಡಿಸಲು ಪಕ್ಕಕ್ಕೆ ಮತ್ತೊಂದು ಗುಡಿಸಲು ಹಾಕಿ ಅದರ ಮೇಲೆ ವಿವಿಧ ಗಿಡದ ಹಸಿರು ಸೊಪ್ಪನ್ನು ಹಾಕುತ್ತಾರೆ. ಇದಕ್ಕೆ 'ಗುಡ್ಲು' ಎನ್ನುವರು. ಅವಳಿಗೆ ಸಿಹಿ ಊಟ, ಅನ್ನ ತುಪ್ಪ, ಬೆಳ್ಳುಳ್ಳಿ ಮಾತ್ರ ಸೇವಿಸಲು ಕೊಡುತ್ತಾರೆ. ಋತುಮಾತಿಯಾದವಳಿಗೆ ಮುತ್ತೈದೆಯರು ಎಣ್ಣೆ ಹಚ್ಚಿ ಎರೆದು ಹೊಸ ಸೀರೆ ಉಡಿಸುವರು. ಸಾಮಾನ್ಯವಾಗಿ ಅವಳನ್ನು ಗುಡಿಸಲಿನಲ್ಲಿ 5, 7, 9 ಮತ್ತು 11 ದಿನಗಳವರೆಗೆ ಕೂರಿಸುವುದುಂಟು. ಪ್ರತಿ ದಿನವೂ ಸ್ನಾನ ಮಾಡಿಸುತ್ತಾರೆ. ಆರತಿ ಮಾಡುವ ದಿನ ವಿಶೇಷ ಅಲಂಕಾರ ಮಾಡುವರು. ಊರಿನವರಿಗೆ ಊಟ ಹಾಕಿಸುತ್ತಾರೆ. ತೀರ ಬಡವರಾಗಿದ್ದರೆ ಚುರುಮುರಿ ಹಂಚುತ್ತಾರೆ.

ಮದುವೆ:

ಗೊಂದಲಿಗರ ಸಮುದಾಯದಲ್ಲಿ ಅನೇಕ ಉಪ ಪಂಗಡಗಳಿವೆ. ಈ ಉಪ ಪಂಗಡಗಳಲ್ಲಿ ವೈವಾಹಿಕ ಸಂಬಂಧಗಳು ಬೆಳೆದು ಬಂದಿವೆ. ಇವರು ಬೆಡಗು ಅಥವಾ ಬಳಿಗೆ 'ಗೋತಾ' ಎನ್ನುವರು. ಈ ಗೋತಾಗಳು ಭಿನ್ನವಾಗಿದ್ದರೆ ವಿವಾಹ ಸಂಬಂಧ ಏರ್ಪಡಿಸಬಹುದು. ಸಗೋತ್ರ ವಿವಾಹ ಇವರಲ್ಲಿ ನಿಷೇಧ. ಇವರಲ್ಲಿ ಹೆಣ್ಣಿಗೆ ತೆರ ಕೊಡುವ ಪದ್ಧತಿಯಿದೆ. ಸುಮಾರು ಐವತ್ತರಿಂದ ಐನ್ನೂರು ರುಪಾಯಿಗಳವರೆಗೆ ತೆರ ಕೊಡುವ ಸಂಪ್ರದಾಯವಿದೆ. ಮದುವೆ ಕಾರ್ಯ ಹೆಣ್ಣಿನ ಮನೆಯಲ್ಲಿಯೇ ನಡೆಯಬೇಕೆಂಬ ಪದ್ದತಿ ಇದೆ. ಒಂದು ಕಾಲದಲ್ಲಿ ಇವರಲ್ಲಿ ಬಾಲ್ಯ ವಿವಾಹಗಳು ನಡೆಯುತ್ತಿದ್ದವು. ಆದರೆ ಇಂದು ಅದರ ಪ್ರಮಾಣ ಕಡಿಮೆಯಾಗಿದೆ ಎಂದು ಹೇಳಬಹುದು. ಹಿರಿಯ ಮುಖಂಡರು, ಪಂಚರು ಸೇರಿ ವಿವಾಹಗಳನ್ನು ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಿ ನಿರ್ಧರಿಸುತ್ತಾರೆ. ಮದುವೆಗೆ ಪ್ರಶಸ್ತವಾದ ಕಾಲ ನವಂಬರ್ ನಿಂದ ಜೂನ್ ತಿಂಗಳು ಎಂದು ತಿಳಿದುಕೊಂಡಿದ್ದಾರೆ. ಮದುವೆ ಮುಹೂರ್ತ ಸಾಮಾನ್ಯವಾಗಿ ಸಂಜೆ ವೇಳೆ ಇರುತ್ತದೆ. ಗೊಂದಲಿಗರ ಮೇಲೆ ನಾಗರೀಕ ಸಮಾಜದ ಪ್ರಭಾವ ಬೀರಿದ್ದರ ಪರಿಣಾಮವಾಗಿ ಇವರಲ್ಲಿಯೂ ಕೆಲವು ಕಡೆ ವರದಕ್ಷಿಣೆ ವ್ಯವಹಾರಗಳು ನಡೆದವು. ಆದರೆ ಈ ವಿಷಯ ಸಮಾಜದ ಮುಖಂಡರ ಗಮನಕ್ಕೆ ಬಂದಾಗ ಈ ವರದಕ್ಷಿಣೆ ಪಿಡುಗು ಕಡಿಮೆಯಾಯಿತು. ಇದಕ್ಕೆ ಅವರಲ್ಲಿರುವ ನ್ಯಾಯ ನಿರ್ಣಯವೇ ಕಾರಣ. ಒಂದು ಕಾಲದಲ್ಲಿ ಗೊಂದಲಿಗರಲ್ಲಿ ಐದು ದಿನಗಳವರೆಗೆ ಮದುವೆ ಸಮಾರಂಭ ನಡೆಯುತ್ತಿತ್ತು. ನಂತರ ಮೂರು ದಿನಕ್ಕೆ, ಆನಂತರ ಎರಡು ದಿನಕ್ಕೆ, ಈಗ ಒಂದೇ ದಿನದಲ್ಲಿ ಮದುವೆ ಮಾಡುವ ಪರಂಪರೆ ಉಳಿದುಕೊಂಡಿದೆ. ಗೊಂದಲಿಗರಲ್ಲಿ ಬಹುಪತ್ನಿತ್ವ ಮತ್ತು ವಿಧವಾ ವಿವಾಹಕ್ಕೆ ಅವಕಾಶವಿರುವುದು ಕಂಡುಬರುತ್ತದೆ.

ಪೂಜಾ ಪದ್ದತಿ:

ಇವರು ಶಕ್ತಿ ದೇವತೆಗಳ ಜೊತೆಗೆ ಪಾಂಡುರಂಗನನ್ನು ತಮ್ಮ ಆರಾಧ್ಯ ದೈವವಾಗಿ ಪೂಜಿಸುತ್ತಿದ್ದಾರೆ. ಪ್ರತಿ ವರ್ಷ "ದಿಂಡಿಯ" ಉತ್ಸವ ಮಾಡುತ್ತಾರೆ. ಭಕ್ತರು ಪಂಡರಾಪುರಕ್ಕೆ ಹೋಗಿ ವಿಠ್ಠಲನ ದರ್ಶನ ಪಡೆಯುವುದುಂಟು. ತುಳಸಿ ಮಾಲೆಯನ್ನು ಧರಿಸಿದವರು ಮಾಂಸ ಮದ್ಯ ಸೇವಿಸುವಂತಿಲ್ಲ. ಮೋಸ–ವಂಚನೆ ಮಾಡುವಂತಿಲ್ಲ. ತಪ್ಪಿದರೆ ಸಮಾಜದ ಮುಖಂಡರು ದಂಡ ಮತ್ತು ಬಹಿಷ್ಕಾರ ಹಾಕುತ್ತಾರೆ. ಇತ್ತೀಚೆಗೆ ಕೆಲವರು ಅಯ್ಯಪ್ಪನ ಭಕ್ತರಾಗಿರುವುದು. ಕಂಡುಬರುತ್ತದೆ.

ಹಬ್ಬಗಳು:

ಗೊಂದಲಿಗರು ಹಿಂದೂ ಧರ್ಮದವರು ಆಚರಿಸುವ ಎಲ್ಲ ಹಬ್ಬಗಳನ್ನು ಆಚರಿಸುತ್ತಾರೆ. ಅರೆ ಅಲೆಮಾರಿಗಳಾಗಿರುವ ಇವರು ಯುಗಾದಿ, ದೀಪಾವಳಿ, ನವರಾತ್ರಿ ಹಬ್ಬಗಳಲ್ಲಿ ತಮ್ಮ ಮೂಲ ನೆಲೆಗೆ ಬಂದು ಹಬ್ಬಗಳನ್ನು ಆಚರಿಸುತ್ತಾರೆ. ಯುಗಾದಿಯ ದಿನ ತಮ್ಮ ತಮ್ಮ ವೃತ್ತಿಗಳ ಮತ್ತು ವೈಯಕ್ತಿಕ ಸಮಸ್ಯೆಗಳನ್ನು ಹೇಳಿ ಪರಿಹಾರ ಕಂಡುಕೊಳ್ಳುತ್ತಾರೆ. ಮದುವೆ ವಿಚಾರಗಳನ್ನು ಈ ದಿನ ಮಾತನಾಡುವುದುಂಟು.

ನವರಾತ್ರಿ ಹಬ್ಬವನ್ನು ಗೊಂದಲಿಗರು ತುಂಬಾ ಶ್ರದ್ಧೆಯಿಂದ ಆಚರಿಸುವುದುಂಟು. ಶಕ್ತಿ ದೇವತೆಗಳ ಆರಾಧನೆಗೆ ಅತ್ಯಂತ ಪ್ರಶಸ್ತವಾದ ಹಬ್ಬ ಎಂದು ಅಂದು ಕೊಂಡಿದ್ದಾರೆ. ಈ ಸಂದರ್ಭದಲ್ಲಿ ಗೊಂದಲ ಪೂಜೆಯನ್ನು ಮಾಡುವುದುಂಟು. ಸಾಮಾನ್ಯವಾಗಿ ಈ ಪೂಜೆಗಳೆಲ್ಲಾ 'ಹರಕೆ'ಯ ಪೂಜೆಗಳಾಗಿರುತ್ತವೆ. ದೀಪಾವಳಿಯನ್ನು ಗೊಂದಲಿಗರು ಸಂಭ್ರಮ–ಸಡಗರದಿಂದ ಆಚರಿಸುವುದುಂಟು. ಈ ಹಬ್ಬದಲ್ಲಿ ಲಕ್ಷ್ಮಿಯನ್ನು ಆರಾಧಿಸುವುದರಿಂದ, ಹೆಣ್ಣು ಮಕ್ಕಳನ್ನು ಈ ಹಬ್ಬಕ್ಕೆ ಕರೆಯುತ್ತಾರೆ. ದೀಪಾವಳಿಯ ಪಾಡ್ಯದ ರಾತ್ರಿ ಶಕ್ತಿ ದೇವತೆಗಳ ಮಹಿಮೆಯನ್ನು ಕೊಂಡಾಡುವ ಹಾಡುಗಳನ್ನು ಹಾಡುತ್ತಾರೆ.

ಆಷಾಡ ಮಾಸದ ಕೊನೆ ಅಥವಾ ಶ್ರಾವಣ ಮಾಸದ ಮೊದಲ ವಾರದ ಮಂಗಳವಾರ ಗೊಂದಲಿಗರು ವಿಶೇಷವಾಗಿ ದುರ್ಗವ್ವನ ಹಬ್ಬವನ್ನು ಆಚರಿಸುವರು. ಈ ಹಬ್ಬದಲ್ಲಿ ಪ್ರತೀ ವರ್ಷ ಊರ ಮದ್ಯೆ ತಾತ್ಕಾಲಿಕ ಗುಡಿ ಅಂದರೆ ಚಿಕ್ಕ ಬಂಡಿಯನ್ನು ಸ್ಥಾಪಿಸಿ ಅದರಲ್ಲಿ ದೇವಿಯ ಮೂರ್ತಿಯನ್ನು ಪ್ರತಿಸ್ಥಾಪಿಸುತ್ತಾರೆ. ಈ ದೇವತೆಗೆ ಹೋತ ಅಥವಾ ಉಣ್ಣೆಕುರಿಯನ್ನು ಮಾತ್ರ ಬಲಿಕೊಡುವುದುಂಟು. ಗೊಂದಲಿಗರು ಮೊಹರಂ ಹಬ್ಬವನ್ನು ಆಚರಿಸಿ, ಕೊನೆಯ ದಿನ ವಿಶೇಷವಾದ ಅಡುಗೆ ಮಾಡುವುದುಂಟು. ಹೋಳಿ ಹಬ್ಬದಲ್ಲಿ "ಸೋಗಿನ ವೇಷ" ಹಾಕಿಕೊಂಡು ಈ ಹಬ್ಬ ಆಚರಿಸುವರು.

ಸಾವು:

ಗೊಂದಲಿಗರಲ್ಲಿ ಎರಡು ರೀತಿಯ ಶವ ಸಂಸ್ಕಾರಗಳನ್ನು ಮಾಡುವುದುಂಟು. ಮದುವೆಯಾಗಿದ್ದರೆ ಹೆಣವನ್ನು ಸ್ಮಶಾನಕ್ಕೆ ಹೊತ್ತುಕೊಂಡು ಹೋಗಿ ಸಂಸ್ಕಾರ ಮಾಡುತ್ತಾರೆ. ಇವರಲ್ಲಿ ಸುಡುವ ಪದ್ದತಿಯೂ ಇದೆ. ಮದುವೆ ಆಗದೇ ಸತ್ತಿದ್ದರೆ, ಮೊದಲು ಆ ಹೆಣಕ್ಕೆ ಎಕ್ಕೆಯ ಗಿಡದೊಂದಿಗೆ ಮದುವೆ ಮಾಡಿಸಿ ನಂತರ ಹೂಳುತ್ತಾರೆ. ಶವ ಸಂಸ್ಕಾರದ ದಿನದಿಂದ ಮೂರು ದಿನಗಳವರೆಗೆ ಮನೆಯಲ್ಲಿ ಅಡುಗೆ ಮಾಡುವುದಿಲ್ಲ. ನಂತರ ಒಳಗೆ ಮಾಡುವರು ಇನ್ನುಳಿದ ಶವ ಸಂಸ್ಕಾರದ ವಿಧಿ ವಿಧಾನಗಳು ಪ್ರದೇಶದಿಂದ ಪ್ರದೇಶಕ್ಕೆ ಅಲ್ಪ ಸ್ವಲ್ಪ ಬದಲಾವಣೆಗಳೊಂದಿಗೆ ಹಿಂದೂ ಸಮಾಜದ ರೀತಿಯಲ್ಲಿಯೇ ಕಂಡುಬರುವುದನ್ನು ಕಾಣುತ್ತೇವೆ.

ಗೊಂದಲಿಗರ ಸಾಮಾಜಿಕ ಸ್ಥಿತಿಗತಿಗಳು:

ಗೊಂದಲಿಗರು ತಮ್ಮ ಸಾಮಾಜಿಕ ಸ್ಥಿತಿಗತಿಗಳನ್ನು ಉತ್ತಮ ಪಡಿಸಿಕೊಳ್ಳಲು ಮೂಲ ಉದ್ಯೋಗದಿಂದ ಸಾಧ್ಯವಿಲ್ಲ ಎಂಬುದನ್ನು ಕಂಡು ಕೊಂಡಿದ್ದಾರೆ. ಕೆಲವರು ಪೂರ್ಣಪ್ರಮಾಣದ ಅಲೆಮಾರಿತನದಿಂದ ಮುಕ್ತಿ ಪಡೆದಿದ್ದಾರೆ. ಜ್ಯೋತಿಷಿಗಳು, ಗಿಳಿಶಾಸ್ತ್ರದವರು, ಇನ್ನೂ ಮೊದಲಾದವರು ತಮ್ಮ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಬುಡಬುಡಕೆಯರ ಸ್ಥಿತಿಗತಿಗಳು ತೀರ ದುಸ್ಥಿತಿಯಲ್ಲಿವೆ. ಆದರೂ ತಮ್ಮ ವೃತ್ತಿ ಬಗ್ಗೆ ಹೆಮ್ಮೆ ಇದೆ. ಗೊಂದಲಿಗರು ತಮ್ಮ ಪಾರಂಪರಿಕ ವೃತ್ತಿಯಿಂದಾಗಿ ಸಾಮಾಜಿಕವಾಗಿ ಬಡತನ ಸ್ಥಿತಿಯಲ್ಲಿಯೇ ಉಳಿಯುವಂತಾಗಿದೆ. ಶಿಕ್ಷಣ ಪಡೆದು, ಸರಕಾರಿ ನೌಕರಿ ಪಡೆದ ಪ್ರಮಾಣ ತೀರ ಕಡಿಮೆ. ಕೆಲವೇ ಕೆಲವು ಜನ ಮಾತ್ರ ಪಾತ್ರೆ ವ್ಯಾಪಾರದಿಂದ ಆರ್ಥಿಕವಾಗಿ ಉತ್ತಮ ಸ್ಥಿತಿ ಹೊಂದಿ, ಸಾಮಾಜಿಕವಾಗಿ ಉತ್ತಮ ಸ್ಥಾನಮಾನಗಳನ್ನು ಪಡೆದಿದ್ದಾರೆ. ಕೆಲವು ಕಡೆ ಮಾತ್ರ ಜ್ಯೋತಿಷಿ ವೃತ್ತಿಯವರು ಉತ್ತಮ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಆದರೆ ಶೇಕಡ ಅರವತ್ತರಷ್ಟು ಜನ ಅಲೆಮಾರಿ, ಅರೆ ಅಲೆಮಾರಿತನದಲ್ಲಿ ಬದುಕುತ್ತಿದ್ದಾರೆ. ಕೌದಿ ಹೊಲಿಯುವ ವೃತ್ತಿ ಶೇಕಡ ತೊಂಬತ್ತರಷ್ಟು ಕ್ಷೀಣಿಸಿದೆ. ಹಳ್ಳಿಗಳಲ್ಲಿ ಕೌದಿಗಳ ಮೇಲಿನ ವ್ಯಾಮೋಹ ಕಡಿಮೆಯಾಗಿದೆ.ಇದರಿಂದ, ಕೌದಿ ಹೊಲಿಯುವ ವೃತ್ತಿಗಳು ಮಾಯವಾಗುತ್ತಿವೆ.

ಗೊಂದಲ ಪೂಜೆ ನೆರವೇರಿಸುವ ಕಥೆಗಾರರ ಸಂಖ್ಯೆಯು ಕ್ಷೀಣಿಸಿದೆ. ಗೊಂದಲ ಹಾಕುವುದು ಒಂದು ಪರಂಪರೆಯಾಗಿದ್ದರೂ, ಅದು ಇಂದು ಜನರಿಂದ ದೂರ ಹೋಗಿದೆ. ಗೊಂದಲಿಗರು ದಿಂಡಿ ಮೂಲಕ ಪಂಡರಾಪುರಕ್ಕೆ ಹೋಗಿ ತುಳಸಿ ಮಾಲೆ ಹಾಕಿಕೊಂಡು ಸಂತರಾಗುತ್ತಿರುವರ ಸಂಖ್ಯೆ ಹೆಚ್ಚಿದೆ. ಇದರಿಂದ ದುಶ್ಚಟಗಳು ಕಡಿಮೆಯಾಗಿದೆ. ಇಂದಿಗೂ ಇವರಲ್ಲಿ ಪಾರಂಪರಿಕ ನ್ಯಾಯ ಪದ್ಧತಿ ಗಟ್ಟಿಯಾಗಿ ಉಳಿದುಕೊಂಡಿದೆ. ಕೆಲವು ಆಚರಣೆಗಳನ್ನು ಇನ್ನೂ ಇವರು ತಮ್ಮ ನೆಲೆಗಳಿಗೆ ಹೋಗಿ ಆಚರಿಸುವುದನ್ನು ಕಾಣುತ್ತೇವೆ.

ಗೊಂದಲಿಗರ ವೇಷಭೂಷಣ ನೋಡಿ ಇನ್ನೂ ಹಳ್ಳಿಗಳಲ್ಲಿ ಅವರನ್ನು ಅಸ್ಪೃಶ್ಯರಂತೆ ಕಾಣುತ್ತಿರುವುದು ಕಂಡುಬರುತ್ತದೆ. ಇವರು ನೀರು ಕೇಳಿದರೆ ನೀರನ್ನು ಎತ್ತರಿಸಿ ಬೊಗಸೆಯಲ್ಲಿ ಹಾಕುತ್ತಾರೆ. ಭಿಕ್ಷೆಯನ್ನು ಎತ್ತರದಿಂದ ಹಾಕುವರು. ಇವರನ್ನು ಮನೆಯೊಳಗೆ ಬಿಟ್ಟುಕೊಳ್ಳುವುದು ಅಪರೂಪ. ಬುಡಬುಡಕಿಯರು ಮಾಟ-ಮಂತ್ರ ಮಾಡಬಹುದೆಂಬ ಅಂಜಿಕೆಯಿಂದ ಅವರನ್ನು ದೂರವಿಡುತ್ತಿದ್ದಾರೆ.ಆರ್ಥಿಕವಾಗಿ ಭದ್ರತೆಯನ್ನು ಹೊಂದಿ ಪಟ್ಟಣಗಳಲ್ಲಿ ವ್ಯಾಪಾರ ಮಾಡುತ್ತಿರುವ ಕುಟುಂಬಗಳ ಜೊತೆ ಇತರೆ ಸಮುದಾಯದವರು ಅವರನ್ನು ಗೌರವಾದರಗಳಿಂದ ಕಾಣುತ್ತಿರುವುದು ಕಂಡುಬರುತ್ತದೆ.


ಗೊಂದಲಿಗರ ಆರ್ಥಿಕ ಸ್ಥಿತಿಗತಿಗಳು:

ಗೊಂದಲಿಗ ಸಮುದಾಯದಲ್ಲಿ ಇಂದು ಕಂಡುಬರುತ್ತಿರುವ ವೃತ್ತಿಗಳೆಂದರೆ ಕಥೆಗಾರರು, ಬೀದಿ ಹಾಡುಗಾರರು, ಬುಡಬುಡಕಿಯರು, ಭಾಟರು, ಗಿಳಿಶಾಸ್ತ್ರದವರು, ಜ್ಯೋತಿಷಿಗಳು ಇತ್ಯಾದಿಗಳು ಮನೆಯಲ್ಲಿ ಹೆಂಗಸರ ವೃತ್ತಿಗಳೆಂದರೆ ಕೌದಿ ಹೊಲಿಯುವುದು ಮತ್ತು ಕರಿಮಣಿ ಸರ, ಇತರೆ ವ್ಯಾಪಾರಗಳು. ತಮ್ಮ ಪಾರಂಪರಿಕ ವೃತ್ತಿಗಳ ಜೊತೆಗೆ, ಬಾಂಡೆ ವ್ಯಾಪಾರ, ಕೊಡೆ, ಸ್ಟೋವ್ ರಿಪೇರಿ ಮಾಡುವ, ಸೈಕಲ್ ರಿಪೇರಿ, ಪಂಚರ್ ಹಾಕುವ, ಗೊಡೆ ಕಟ್ಟುವ, ಕೂಲಿ ಮಾಡುವ, ಹೀಗೆ ಹತ್ತಾರು ಕೆಲಸಗಳಲ್ಲಿ ಯುವ ಪೀಳಿಗೆ ಕಾರ್ಯನಿರ್ವಹಿಸುತ್ತಿರುವುದು ಕಂಡುಬರುತ್ತದೆ. (ಅಂಕಿ ಸಂಖ್ಯೆಗಳಿಗೆ ಕೋಷ್ಟಕ 20 ನೋಡಿರಿ) ಈ ಕೆಲಸಗಾರರು ಹೆಚ್ಚಿನ ಬಂಡವಾಳ ಹಾಕಿ ವೃತ್ತಿಯನ್ನು ಅಭಿವೃದ್ಧಿ ಪಡಿಸಿಕೊಳ್ಳಲಾಗದೆ ಬಂದ ಹಣದಲ್ಲಿಯೇ ತೃಪ್ತಿಪಟ್ಟುಕೊಳ್ಳುತ್ತಿರುವುದನ್ನು ಕಾಣುತ್ತೇವೆ.

ಕೋಷ್ಟಕ-20

ಕೆಲಸಗಳಲ್ಲಿ ತೊಡಗಿಕೊಂಡಿರುವ ಹಾವೇರಿ ಜಿಲ್ಲೆಯ ಗೊಂದಲಿಗರ ಪ್ರಮಾಣ:

ಕ್ರ.ಸಂ.	ಕೆಲಸದ ವಿವರಗಳು	ಪುರುಷ	ಸ್ತ್ರೀ	ಒಟ್ಟು
01	ಕೌದಿ ಹೊಲಿಯುವುದು	40	54	94
02	ಕೃಷಿ	04	04	08
03	ಕೂಲಿ	79	67	146
04	ಸಣ್ಣ ವ್ಯಾಪಾರ (ಪಾತ್ರೆ ಮಾರಾಟ)	34	47	81
05	ಸರ್ಕಾರಿ/ಖಾಸಗಿ ನೌಕರಿ	02	–	02
	ಇತರೆ ಕೆಲಸ (ಗಾರೆ ಕೆಲಸ, ಹಮಾಲಿ) ರಪೇರಿ, ವರ್ಕ್ಸ್, ರದ್ದಿ ಸಂಗ್ರಹ, ಗ್ಯಾರೇಜ್ ಇತ್ಯಾದಿ)	312	234	546
	ಒಟ್ಟು	**471**	**406**	**877**



ಗೊಂದಲಿಗರ ಪಾರಂಪರಿಕ ಕಸುಬುಗಳು ಬೆರಳೆಣಿಕೆಯಷ್ಟು ಮಾತ್ರ ಉಳಿದುಕೊಂಡಿವೆ. ಆಧುನಿಕ ಸಮಾಜದಲ್ಲಿ ಈ ವೃತ್ತಿಗಳಿಗೆ ಬೆಲೆಯೇ ಇಲ್ಲದಂತಾಗಿದೆ. ಆದ್ದರಿಂದ, ಇವರು ತಮ್ಮ ಮೂಲ ವೃತ್ತಿಯನ್ನು ಬಿಟ್ಟು ವರ್ತಮಾನದ ವೃತ್ತಿಗಳನ್ನು ಪ್ರಾರಂಭಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ಬಂಡವಾಳದ ಕೊರತೆಯಿಂದ ಪರದಾಡುತ್ತಿದ್ದಾರೆ. ಇಂದು ಇವರಲ್ಲಿ ಪಾತ್ರೆ ವ್ಯಾಪಾರ ಪ್ರಮುಖವಾಗಿ ಕಂಡುಬರುತ್ತದೆ. ಇದು ಸಹ ಅಲೆಮಾರಿತನದ ವೃತ್ತಿಯಾಗಿದೆ. ಬುಡಬುಡಕೆ, ಗಿಳಿಶಕುನ, ಅರೆ ಪಂಚಾಂಗ ಮುಂತಾದ ಬೇಡಿ ತಿನ್ನುವ ವೃತ್ತಿಗಳಿಗಿಂತ ಈ ವೃತ್ತಿ ಉತ್ತಮ ಎಂದು ಅಭಿಪ್ರಾಯ ಪಡುತ್ತಾರೆ. ಈ ವೃತ್ತಿಯಲ್ಲಿ ಮಕ್ಕಳನ್ನು ಬಳಸಿಕೊಂಡಿದ್ದರಿಂದ, ಅವರು ಮಕ್ಕಳ ಶಿಕ್ಷಣದ ಬಗ್ಗೆ ಗಮನ ಹರಿಸಿಲ್ಲದಿರುವುದು ಗೊತ್ತಾಗುತ್ತದೆ.

ಸರ್ಕಾರಿ ಕೆಲಸಗಳಲ್ಲಿ ಇವರು ಕಂಡುಬರುವುದು ಅತಿ ವಿರಳ. ಶೈಕ್ಷಣಿಕವಾಗಿ ಅತೀ ಹಿಂದುಳಿದ ಇವರಿಗೆ ಸರಕಾರಿ ಕೆಲಸಗಳು ಸಿಗುವುದು ಅತೀ ಕಷ್ಟ. ಅಲ್ಪ ಸ್ವಲ್ಪ ವಿದ್ಯಾಭ್ಯಾಸ ಪಡೆದವರು ಸಣ್ಣ-ಪುಟ್ಟ ಕಾರ್ಖಾನೆಗಳಲ್ಲಿ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಶೈಕ್ಷಣಿಕ ಸ್ಥಾನಮಾನ:


ಗೊಂದಲಿಗರ ಅನೇಕ ಸಮಸ್ಯೆಗಳಲ್ಲಿ ಶೈಕ್ಷಣಿಕ ಸಮಸ್ಯೆಯೂ ಅತೀ ಮುಖ್ಯವಾಗಿದೆ. ಅರೆ ಅಲೆಮಾರಿಗಳಾಗಿರುವ ಇವರಿಗೆ ಶಿಕ್ಷಣ ಪಡೆಯಲಿಕ್ಕೆ ಸಾದ್ಯವಾಗಿಲ್ಲ. ಈ ಕಾರಣಕ್ಕೆ ಇವರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ತೀರ ಹಿಂದುಳಿಯಲು ಕಾರಣವಾಗಿದ್ದಾರೆ.

ಗೊಂದಲಿಗರಲ್ಲಿ ನೆಲೆಯೂರಿದವರು, ಅಲೆಮಾರಿ ಮತ್ತು ಅರೆ ಅಲೆಮಾರಿ ಎಂದು ಮೂರು ಭಾಗಗಳಾಗಿ ವಿಂಗಡಿಸಿಕೊಂಡು ಅವರ ಶೈಕ್ಷಣಿಕ ಸ್ಥಿತಿಗತಿಗಳ ಸಮೀಕ್ಷೆ ಮಾಡಿದಾಗ ಅಲೆಮಾರಿ ಮತ್ತು ಅರೆ ಅಲೆಮಾರಿ ಕುಟುಂಬಗಳಲ್ಲಿ ಶಿಕ್ಷಣ ಇಲ್ಲವೇ ಇಲ್ಲ ಎಂದು ಹೇಳಬೇಕಾಗುತ್ತದೆ. ಜಿಲ್ಲಾ ಮತ್ತು ತಾಲೂಕು ಪ್ರದೇಶಗಳಲ್ಲಿ ನೆಲೆ ಕಂಡುಕೊಂಡಿರುವ ಗೊಂದಲಿಗರು ನಾಗರಿಕತೆಯ ಪ್ರಭಾವದಿಂದ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಿರುವುದು ಸಮೀಕ್ಷೆಯಿಂದ ಕಂಡುಬರುತ್ತದೆ. ಆದರೂ ಸಾಕ್ಷರತೆಗೆ ಅರ್ಹರಾದವರಲ್ಲಿ ಶೇಕಡ 80.85ರಷ್ಟು ಜನರು ಅನಕ್ಷರಸ್ಥರಾಗಿರುವುದು ಅವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳು ಹಿಂದುಳಿಯಲಿಕ್ಕೆ ಪ್ರಮುಖ ಕಾರಣವೆನ್ನಬಹುದು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಪಡೆದವರು ಶೇಕಡ 10.84ರಷ್ಟಿದ್ದರೆ, ಪ್ರೌಢಶಿಕ್ಷಣ ಪಡೆದವರ ಪ್ರಮಾಣ ಕೇವಲ ಶೇಕಡ 6.02 ಮಾತ್ರ, ಕಾಲೇಜು ಶಿಕ್ಷಣ ಪಡೆದವರ ಸಂಖ್ಯೆಯೂ ತುಂಬಾ ವಿರಳವಾಗಿದೆ. ಕೋಷ್ಟಕ 21ನ್ನು ಗಮನಿಸಬಹುದು.

ಕೋಷ್ಟಕ–21

ಹಾವೇರಿ ಜಿಲ್ಲೆಯ ಗೊಂದಲಿಗ ಸಮುದಾಯದ ಶೈಕ್ಷಣಿಕ ಸ್ಥಾನಮಾನ:

ಕ್ರಸಂ	ವಿವರಗಳು	ಪುರುಷ	ಸ್ತ್ರೀ	ಒಟ್ಟು	ಶೇಕಡ
01	ಒಟ್ಟು ಜನಸಂಖ್ಯೆ	**471**	**406**	**877**	**100**
02	ಸಾಕ್ಷರತೆಗೆ ಅನರ್ಹರು (4 ವರ್ಷದ ಒಳಗಿನವರು)	69	61	130	14.82
03	ಸಾಕ್ಷರತೆಗೆ ಅರ್ಹರು (4 ವರ್ಷದ ಮೇಲ್ಪಟ್ಟವರು)	378	369	747	85.18
04	ಪ್ರಾಥಮಿಕ /ಮಾಧ್ಯಮಿಕ ಶಿಕ್ಷಣ	47	34	81	10.84
05	ಪ್ರೌಢಶಿಕ್ಷಣ	31	14	45	6.02
06	ಪದವಿಪೂರ್ವ/ಡಿಪ್ಲಮೊ/ಐ.ಟಿ.ಐ)	12	03	15	2.00
07	ಪದವಿ	02	–	02	0.26
08	ಅನಕ್ಷರಸ್ಥರು	286	318	604	80.85



ಈ ಸಮುದಾಯದವರಿಗೆ ಒದಗಿಸಬೇಕಾದ ಸೌಲಭ್ಯಗಳು:

1. ಅವರು ವಾಸಿಸುವ ಸ್ಥಳದಲ್ಲಿ ಗ್ರಾಮಪಂಚಾಯತಿ, ನಗರಸಭೆಯವರು ಉಚಿತ ನಿವೇಶನ ಒದಗಿಸಿ ಮನೆ ಕಟ್ಟಿಕೊಡುವುದು.
2. ಈ ಸಮುದಾಯದ ಮಕ್ಕಳನ್ನು ಕಡ್ಡಾಯವಾಗಿ ಹಾಸ್ಟೆಲ್‌ಗೆ ಸೇರಿಸಿ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡುವುದು.
3. 65 ವರ್ಷ ಮೇಲ್ಪಟ್ಟು ವಯಸ್ಸಾದ ಕೌದಿ ಹೊಲಿಯುವ ಹೆಣ್ಣುಮಕ್ಕಳಿಗೆ ಮಾಸಾಷನ ನೀಡುವುದು.
4. ಒಂದು ಕಡೆ ನೆಲೆನಿಂತವರಿಗೆ, ಆಕಳು, ಎಮ್ಮೆಗಳನ್ನು ಸಬ್‌ಸಿಡಿ ಮುಖೇನ ಕೊಡಿಸಿ ಹೈನುಗಾರಿಕೆಗೆ ಪ್ರೋತ್ಸಾಹಿಸಿದರೆ, ಆರ್ಥಿಕವಾಗಿ ಬಲಗೊಳ್ಳುವರು.
5. ಕಥೆ, ಕೀರ್ತನೆ, ಗೊಂದಲಿಗರ ಹಾಡು ಹೇಳುವ ವಯಸ್ಸಾದವರಿಗೆ ಸರಕಾರದ ನೆರವು ನೀಡುವುದು (ಗೌರವಧನ).
6. ಈ ಸಮುದಾಯದಲ್ಲಿ ಜನಪದ ಕಲಾವಿದರಿಗೆ ಇಂದಿನ ಜಾನಪದ ವಿಶ್ವವಿದ್ಯಾಲಯದಲ್ಲಿ ತರಬೇತಿ ಕೊಡಿಸುವುದು.

3.9. ದುರುಗಮುರುಗಿ ಸಮುದಾಯದ ಸಾಮಾಜಿಕತೆ:

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್ ಹೀಗೆ ಅನೇಕ ಧರ್ಮಗಳು ವಿಭಿನ್ನ ಸಂಸ್ಕೃತಿಗಳನ್ನು ಅಳವಡಿಸಿಕೊಂಡು ತಮ್ಮ ನೆಲೆಯನ್ನು ಕಂಡುಕೊಂಡಿರುವುದು ವಾಸ್ತವ. ಬಹಳಷ್ಟು ವರ್ಷಗಳಿಂದಲೂ ಮೇಲ್‌ಸ್ತರದಲ್ಲಿರುವ ಕೆಲವೇ ಸಮಾಜಗಳು ಮುಂಚೂಣಿಯಲ್ಲಿದ್ದೂ, ಅಂತಹ ಸಮಾಜಗಳ ಸಂಸ್ಕೃತಿಯೇ ಶ್ರೇಷ್ಠ ಎಂಬ ಮನೋಭಾವ ಒಂದು ಕಾಲದಲ್ಲಿತ್ತು. ಆದರೆ ಈಗ ಮಾನವಶಾಸ್ತ್ರ, ಸಮಾಜಶಾಸ್ತ್ರ, ಜಾನಪದ ಹಾಗೂ ಇನ್ನಿತರ ಅಧ್ಯಯನಕಾರರ ಸೂಕ್ಷ್ಮ ದೃಷ್ಟಿಯ ತಳಸ್ಪರ್ಶಿ (subaltern) ಅಧ್ಯಯನದಿಂದಾಗಿ ಅನೇಕ ಅನಾಥ ಮತ್ತು ಕೆಳಸ್ತರದಲ್ಲಿರುವ ಸಮುದಾಯಗಳ ಮತ್ತು ಅಲೆಮಾರಿ ಬುಡಕಟ್ಟುಗಳ ಬದುಕು ಕೂಡ ವಿಶಿಷ್ಟ ಮತ್ತು ಅನನ್ಯ ಎಂಬುದನ್ನು ದರ್ಶನ ಮಾಡಿಸಿದ್ದಾರೆ.

ಕರ್ನಾಟಕದಲ್ಲಿ ಸುಮಾರು ಐವತ್ತಕ್ಕೂ ಹೆಚ್ಚು ಬುಡಕಟ್ಟು ಸಮುದಾಯಗಳು ವಾಸವಾಗಿರುವುದು ಕಂಡುಬರುತ್ತದೆ. ಬುಡಕಟ್ಟುಗಳು ಅಲೆಮಾರಿಗಳಾದರೂ, ಕರ್ನಾಟಕದ ನೆಲದಲ್ಲಿ ಅಲ್ಲಲ್ಲಿ ಕೆಲವು ಕಾಲ ವಸತಿ ಇದ್ದೂ, ನಂತರ ಮುಂದಿನ ಸ್ಥಳಕ್ಕಾಗಿ ಆ ಜಾಗ ಖಾಲಿ ಮಾಡುತ್ತಿರುತ್ತಾರೆ. ಅನ್ನ, ನೀರು ಹುಡುಕಿಕೊಂಡು ಅಲೆಯುವ ಮಂದಿಯಲ್ಲಿ 'ದುರುಗಮುರಗಿ'ಯವರದು ಒಂದು ಪಂಗಡ. ಸಾಮಾನ್ಯವಾಗಿ ಭಿಕ್ಷೆಯನ್ನೆ ಅವಲಂಬಿಸಿ ಬದುಕುತ್ತಿರುವ ಈ ಮಂದಿ ತಮ್ಮದೆ ಆದ ವಿಶಿಷ್ಟ ಸಂಸ್ಕೃತಿಯನ್ನು ರೂಢಿಸಿಕೊಂಡಿದ್ದಾರೆ.

ದುರುಗಮ್ಮ, ಮರುಗಮ್ಮ ಇವರಿಬ್ಬರೂ ಕರ್ನಾಟಕದಲ್ಲಿ ಕೆಳಜಾತಿ ಜನರ ಗ್ರಾಮದೇವತೆಗಳು, ದುರುಗಮ್ಮ ದುರ್ಗೆಯ ಗ್ರಾಮ್ಯ ರೂಪವಾಗಿದ್ದರೆ, ಮರುಗಮ್ಮ ಮಾರಿದೇವತೆಯ ಗ್ರಾಮ್ಯ ರೂಪವಾಗಿದ್ದಾಳೆ. ದುರುಗಮ್ಮ ಆಂಧ್ರ, ಕರ್ನಾಟಕ ಗಡಿಭಾಗದಲ್ಲಿ ತುಂಬಾ ಪ್ರಸಿದ್ಧ ದೇವತೆ. ಬಳ್ಳಾರಿಯ ದುರುಗಮ್ಮಳಂತೂ ಸುಪ್ರಸಿದ್ಧ ದೇವತೆಯಾಗಿದ್ದಾಳೆ. ಬೀದರ್, ಗುಲ್ಬರ್ಗಾ, ವಿಜಾಪುರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಮರುಗಮ್ಮ ದೇವತೆಯ ಪ್ರಭಾವವಿದೆ. ಹಳೆ ಮೈಸೂರು ಭಾಗದಲ್ಲಿ ನಡೆಯುವ ಮಾರಿ ಜಾತ್ರೆ, ಶಿರ್ಶಿಯ ಮಾರಿಕಾಂಬ ಜಾತ್ರೆ, ರಾಣೇಬೆನ್ನೂರಿನ ಚೌಡಮ್ಮ ಜಾತ್ರೆ ಇವುಗಳೆಲ್ಲ ಮಾರಿ ದೇವತೆಯ ರೂಪಗಳೆಂದು ಹೇಳಬಹುದು. ಈ ಇಬ್ಬರು ದೇವತೆಗಳ ಆರಾಧನೆಯನ್ನು ವೃತ್ತಿಯಾಗಿಸಿಕೊಂಡ ಸಮುದಾಯವನ್ನು ದುರುಗಮುರುಗಿಯರೆಂದು ಗುರುತಿಸಲಾಗಿದೆ.

ಸಮುದಾಯದ ಹೆಸರು ಮತ್ತು ಜನಸಂಖ್ಯೆ:

ಈ ಸಮುದಾಯದವರು ಕರ್ನಾಟಕದ ಉದ್ದಗಲಕ್ಕೂ ಧಾರ್ಮಿಕ ಭಿಕ್ಷೆ ಬೇಡಿಕೊಂಡು ಅಲೆಮಾರಿ ಜೀವನ ಸಾಗಿಸುವಂಥವರು. ಇತ್ತೀಚೆಗೆ ಕೆಲವು ಕಡೆ ನೆಲೆ ನಿಂತು ಜೀವನ ಸಾಗಿಸುತ್ತಿದ್ದಾರೆ. ಇವರು ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಕಂಡು ಬರುತ್ತಿದ್ದು ಅವರನ್ನು

ಆಯಾ ಪ್ರದೇಶಗಳಲ್ಲಿ ವಿಭಿನ್ನ ಹೆಸರುಗಳಿಂದ ಗುರುತಿಸಲಾಗುತ್ತದೆ. ಆದರೆ, ಈ ಎಲ್ಲಾ ಹೆಸರುಗಳು ದೇವರನ್ನು ಹೊತ್ತುಕೊಂಡು ಅವರು ನಡೆಸುವ ಭಿಕ್ಷಾಟನೆಯ ವೃತ್ತಿಯನ್ನು ಸೂಚಿಸುವಂಥವುಗಳಾಗಿವೆ. ಇವರನ್ನು ಸಿಂಧೋಳ್, ಬುರ್ರಬುರ್ರ ಸುಂಕಲಮ್ಮ, ಬುರ್ರ ಮಾರಿಯರ್, ಬುಟ್ಟಿ ಕೂಗಮ್ಮ, ಕೂಗಮ್ಮನ ಆಡಿಸುವವರು, ಪೋತ್ಯಾ, ಪೆಟ್ಟಿಗೆ ಪೂಜಾರಿ, ಭಿಕ್ಷುಕರು ಎಂಬ ಇತ್ಯಾದಿ ಹೆಸರುಗಳಿಂದ ಕರೆಯುವುದುಂಟು.

ಭಾರತದ ಆಂಧ್ರಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಸಿಂಧೋಳ್ಳು, ಚಿಂದೊಳ್ಳು, ಪೆದ್ದಮ್ಮವಾಂಡ್ಲು, ದೇವರ ವಾಂಡ್ಲು, ದುರ್ಗಮುರ್ಗಾ ಎಂಬ ಪದಗಳು ಪರಿಶಿಷ್ಟ ಜಾತಿಯಲ್ಲಿ ಪರಿಗಣಿಸಿರುವುದರಿಂದ, ಜನಗಣತಿಗಳಲ್ಲಿ ಇವರ ಜನಸಂಖ್ಯೆ ನಿಖರವಾಗಿ ದಾಖಲಿಸಲಾಗಿಲ್ಲ. ಕರ್ನಾಟಕದಲ್ಲಿ 2001ರ ಜನಗಣತಿಯಲ್ಲಿ ದಾಖಲಾಗಿರುವ ಪ್ರಕಾರ ಪ್ರಾಧಿಕಾರದ 2007ರ ಸಮೀಕ್ಷೆಯ ಅಂಕಿ ಅಂಶಗಳಲ್ಲಿ ದುರುಗಮುರುಗಿ(ಸಿಂಧೋಳ್ಳು) ಸಮುದಾಯದ ಎಲ್ಲಾ ಕಳ್ಳುಬಳ್ಳಿಯವರನ್ನು ಒಳಪಡಿಸಲಾಗಿದೆ. ಹೀಗಾಗಿ ರಾಜ್ಯದ 21 ಜಿಲ್ಲೆಗಳಲ್ಲಿ ಲಭ್ಯವಾದ ಜನಸಂಖ್ಯೆ 5726. ಇದರಲ್ಲಿ ಮಹಿಳೆಯರು 2587 ಪುರುಷರು 3139 ಇದ್ದಾರೆ. ಒಟ್ಟು 1421 ಕುಟುಂಬಗಳು ದಾಖಲಾಗಿವೆ. ಇವರು ಹಾವೇರಿ ಜಿಲ್ಲೆಯ ಒಟ್ಟು 6 ತಾಲೂಕುಗಳ 16 ನೆಲೆಗಳಲ್ಲಿ ಕಂಡುಬರುತ್ತಾರೆ. ಇಲ್ಲಿರುವ ಜನಸಂಖ್ಯೆ ಎಂದರೆ 836. ಇವರಲ್ಲಿ ಪುರುಷರು 439 ಮತ್ತು ಮಹಿಳೆಯರು 397 ಇದ್ದಾರೆ. ಒಟ್ಟು 182 ಕುಟುಂಬಗಳು ಇವೆ ಎಂಬುದು ಆ ಸಮುದಾಯದ ಹಿರಿಯ ಮುಖಂಡರುಗಳು ನೀಡಿದ ಮಾಹಿತಿಯ ಮೂಲಕ ತಿಳಿದು ಬರುತ್ತದೆ. ಆದರೆ ಇಲ್ಲಿ ತಿಳಿಸಿರುವ ಜನಸಂಖ್ಯೆ ಮತ್ತು ಕುಟುಂಬಗಳ ಸಂಖ್ಯೆಯೇ ಅಂತಿಮವೆಂದು ಭಾವಿಸಬಾರದು. ಕಾರಣ ದುರುಗಮುರಗಿಯರು ಭಿಕ್ಷಾಟನೆಗಾಗಿ ಊರಿಂದೂರಿಗೆ ಅಲೆದಾಡುವ ಸಮುದಾಯವಾದ್ದರಿಂದ ಈ ಅಂಕಿ ಸಂಖ್ಯೆಗಳಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬರಬಹುದು. ಆದಾಗ್ಯೂ, ಕ್ಷೇತ್ರಕಾರ್ಯಕ್ಕೆ ಹೋದಾಗ ನಿರ್ವಂಚನೆಯಿಂದ ಹಾಗೂ ಪ್ರಾಮಾಣಿಕವಾಗಿ ಸಮೀಕ್ಷೆ ನಡೆಸಲಾಗಿದೆ (ಅಂಕಿ ಸಂಖ್ಯೆಗಳಿಗೆ ಕೊಷ್ಟಕ 22 ನೋಡಿರಿ).

ಕೋಷ್ಟಕ–22

ಪ್ರಸ್ತುತ ಅಧ್ಯಯನಕ್ಕೆ ಸಮೀಕ್ಷೆಗೊಳಪಡಿಸಿದ ಹಾವೇರಿ ಜಿಲ್ಲೆಯ ದುರುಗಮುರುಗಿ ಸಮುದಾಯದ ತಾಲೂಕುವಾರು ಲಿಂಗಾವಾರು ಜನಸಂಖ್ಯೆ.

ಕ್ರ.ಸಂ.	ತಾಲೂಕು	ಗ್ರಾಮ/ನಗರ	ಒಟ್ಟು ಮನೆಗಳು	ಜನಸಂಖ್ಯೆ		
				ಗಂಡು	ಹೆಣ್ಣು	ಒಟ್ಟು
01	ಹಾನಗಲ್	ಆಡೂರು	11	25	20	45
02	ಹಾನಗಲ್	ಕಾಲ್ವೇ ಕಲ್ಲಾಪುರ	50	134	130	264
03	ಹಾನಗಲ್	ನರೇಗಲ್ಲ	08	20	18	38
04	ಹಾನಗಲ್	ಬೆಳಗಾಲ ಪೇಟೆ	02	05	04	09
05	ಹಾನಗಲ್	ಚಿಕ್ಕಾಂಶಿ ಹೊಸೂರು	01	02	03	05
06	ಹಾನಗಲ್	ಬೊಮ್ಮನಹಳ್ಳಿ	02	06	05	11
07	ಹಾನಗಲ್	ಹಾನಗಲ್ಲ	04	11	09	20
08	ಶಿಗ್ಗಾಂವ	ಶಿಗ್ಗಾಂವ	30	72	70	142
09	ಶಿಗ್ಗಂವ	ಲಕ್ಕಿಕೊಪ್ಪ	25	40	32	72
10	ಬ್ಯಾಡಗಿ	ಬ್ಯಾಡಗಿ	05	13	11	24
11	ಬ್ಯಾಡಗಿ	ಬಡಮಲ್ಲಿ	10	34	26	60
12	ಬ್ಯಾಡಗಿ	ಕಾಗಿನೆಲೆ	03	08	07	15
13	ಹಿರೇಕೆರೂರು	ಮಾಸೂರು	10	18	15	33
14	ಹಿರೇಕೆರೂರು	ರಟ್ಟೀಹಳ್ಳಿ	05	10	11	21
15	ರಾಣೇಬೆನ್ನೂರು	ಮೆಡ್ಲೇರಿ	08	21	18	39
16	ಸವಣೂರು	ಸವಣೂರು	06	15	15	30
17	ಸವಣೂರು	ಹುಲಗೂರು	02	05	03	08
		ಒಟ್ಟು	**182**	**439**	**397**	**836**

ನೆಲೆಗಳು:

ಕರ್ನಾಟಕದ ಒಟ್ಟು 21 ಜಿಲ್ಲೆಗಳ 64 ತಾಲೂಕುಗಳಲ್ಲಿ ಕಂಡು ಬರುವ ಎಲ್ಲಾ ದುರುಗಮುರುಗಿಯರನ್ನು ಈ ಸಂಶೋಧನೆಯಲ್ಲಿ ಗಣನೆಗೆ ತೆಗೆದುಕೊಂಡಿಲ್ಲ. ಕಾರಣ, ನನ್ನ ಅಧ್ಯಯನ ಕ್ಷೇತ್ರ ಹಾವೇರಿ ಜಿಲ್ಲೆಯನ್ನು ಅನುಲಕ್ಷಿಸಿರುವುದರಿಂದ, ಈ ಜಿಲ್ಲೆಯಲ್ಲಿರುವ ದುರುಗಮುರಗಿಯರನ್ನು ಮಾತ್ರ ಸ್ಯಾಂಪಲ್ ಸರ್ವೆ ಮೂಲಕ ಆಯ್ಕೆ ಮಾಡಿಕೊಳ್ಳಲಾಗಿದೆ. ಆ

ಪ್ರಕಾರ, ಜಿಲ್ಲೆಯಲ್ಲಿನ ವಿವಿಧ ತಾಲೂಕುಗಳ ಹಳ್ಳಿಗಳಲ್ಲಿ ನೆಲೆಸಿರುವ ದುರುಗಮುರುಗಿಯರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ. ಅದಕ್ಕೋಸ್ಕರ ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ಆಡೂರು, ಕಾಲ್ವೇಕಲ್ಲಾಪುರ, ನರೇಗಲ್, ಬೆಳಗಾಲ ಪೇಟೆ, ಚಿಕ್ಕಾಂಶಿ ಹೊಸೂರು, ಹಾನಗಲ್, ಶಿಗ್ಗಾಂವ ತಾಲೂಕಿನ ಶಿಗ್ಗಾಂವ ನಗರ ಮತ್ತು ಲಕ್ಕಿಕೊಪ್ಪ, ಬ್ಯಾಡಗಿ ತಾಲೂಕಿನ ಬಡಮಲ್ಲಿ, ಕಾಗಿನೆಲೆ, ಹಿರೇಕೆರೂರು ತಾಲೂಕಿನ ಮಾಸೂರು ಮತ್ತು ರಟ್ಟಿಹಳ್ಳಿ, ರಾಣೇಬೆನ್ನೂರು ತಾಲೂಕಿನ ಮೆಡ್ಲೇರಿ, ಸವಣೂರು ತಾಲೂಕಿನ ಹುಲಗೂರು ಮತ್ತು ಸವಣೂರು ಪಟ್ಟಣವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಹಾವೇರಿ ಜಿಲ್ಲೆಯ ದುರುಗಮುರುಗಿ ಸಮುದಾಯದ ನೆಲೆಗಳು



ದುರುಗಮುರುಗಿಯರ ಲಕ್ಷಣಗಳು:

ದುರುಗಮುರುಗಿಯರು ಜೀವನೋಪಾಯಕ್ಕಾಗಿ ಊರಿಂದ ಊರಿಗೆ ಅಲೆಯುವ ಅಲೆಮಾರಿಗಳಾಗಿದ್ದಾರೆ. ಭಿಕ್ಷೆ ಬೇಡುತ್ತಾ ಊರೂರು ಅಲೆಯುವ ಇವರು ಊರುಗಳ



ಹೊರಭಾಗದ ಪ್ರದೇಶಗಳಾದ ಶಾಲಾಮೈದಾನ, ಸಂತೆಮೈದಾನ, ಸ್ಮಶಾನದ ಪಕ್ಕದಲ್ಲಿ, ಇಲ್ಲವೇ ಸರ್ಕಾರದ ಬಯಲು ಮತ್ತು ಗುಡ್ಡ ಪ್ರದೇಶಗಳಲ್ಲಿ ವಾಸಿಸಲು ಗುಡಾರಗಳನ್ನು ಅಥವಾ ಟೆಂಟುಗಳನ್ನು ರಚಿಸಿಕೊಳ್ಳುತ್ತಾರೆ. ಪ್ರತಿ ಗುಡಾರದ ನೆಲೆಗಳಲ್ಲೊಂದು ಪ್ರತ್ಯೇಕವಾದ ದೇವರ ಗುಡಾರವನ್ನು ದೇವತೆಗಳಿಗಾಗಿ ಮೀಸಲಿರಿಸಲಾಗುತ್ತದೆ. ತಮ್ಮ ದೈನಂದಿನ ಚಟುವಟಿಕೆಗಳಾದ ಊಟ, ಸ್ನಾನ, ಮಲಗುವುದು ಮತ್ತು ವೃತ್ತಿಗಳು ಈ ಗುಡಾರಗಳಲ್ಲಿಯೇ ನಡೆಯುತ್ತವೆ. ದುರುಗಮುರಗಿಯರ ಮೂಲ ಭಾಷೆ ತೆಲುಗು. ಇಂದಿಗೂ ಅವರು ಎಲ್ಲಿಯೇ ಇರಲಿ, ಅವರ ಮನೆ ಮಾತು ಮಾತ್ರ ತೆಲುಗೇ. ಜನ ಮಾತು ನಮ್ಮಲ್ಲಿ ಕನ್ನಡ. ಆಯಾ ಪ್ರದೇಶಕ್ಕೆ ಹೋದಂತೆಲ್ಲ ಆಯಾ ಪ್ರದೇಶದ ಭಾಷೆಯನ್ನೇ ಕಲಿತು ಮಾತನಾಡುತ್ತಾರೆ.

ವಿವಾಹದಲ್ಲಿ ಗಂಡಿಗೆ ಹೆಣ್ಣನ್ನು ನೋಡುವ, ನಿಶ್ಚಯಿಸುವ ಕಾರ್ಯವನ್ನು ಮನೆಯ ಹಿರಿಯರೇ ಮಾಡುತ್ತಾರೆ. ಸಾಮಾನ್ಯವಾಗಿ ಹೆಣ್ಣನ್ನು ತಮ್ಮ ಹತ್ತಿರದ ರಕ್ತ ಸಂಬಂಧಿಗಳಲ್ಲಿ ನೋಡುವುದು ಹೆಚ್ಚು. ಇವರಲ್ಲಿ ಹೆಚ್ಚಾಗಿ ಬಾಲ್ಯವಿವಾಹ ಪದ್ಧತಿ ಇದೆ. ಹರೆಯದಲ್ಲಿಯೇ ಗಂಡ ತೀರಿ ಕೊಂಡರೆ ಹೆಣ್ಣಿಗೆ ಮತ್ತೊಂದು ಮದುವೆ ಮಾಡುವ ಪದ್ಧತಿ ಇವರಲ್ಲಿದೆ. ಇದನ್ನು 'ಸೀರುಡಿಕೆ' ಎಂದು ಕರೆಯುತ್ತಾರೆ. ಬೇರೆ ಸಮುದಾಯಗಳಲ್ಲಿ ಗರ್ಭಿಣಿ ಸ್ತ್ರೀ ತವರಿಗೆ ಕರೆದುಕೊಂಡು ಹೋಗುತ್ತಾರೆ ಆದರೆ ದುರುಗಮುರಗಿಯರಲ್ಲಿ ಗರ್ಭಿಣಿ ಸ್ತ್ರೀ ತವರಿಗೆ ಹೋಗುವುದಿಲ್ಲ. ದುರುಗಮುರಗಿಯರು ಮೂಲದಲ್ಲಿ ಬೇಟೆಯನ್ನಾಡುತ್ತಿದ್ದರು ಎಂಬುದನ್ನು ಗಮನಿಸಿದರೆ ಇವರು ಮಾಂಸಹಾರಿಗಳು ಎನ್ನುವುದು ಗೊತ್ತಾಗುತ್ತದೆ. 'ದೇವಿ ಆಟ'ವನ್ನು ವೃತ್ತಿಯಾಗಿಸಿಕೊಂಡ ಮೇಲೂ ಬೇಟೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಮೀನು ಬೇಟೆ ಇವರಿಗೆ ಪಾರಂಪರಿಕವಾದದು. ಮೀನು ಬೇಟೆಯ ಜೊತೆಗೆ ಮುಂಗಸಿ, ಪಾರಿವಾಳ, ಕಾಡುಬೆಕ್ಕು, ಮೊಲ, ಹಕ್ಕಿಪಿಕ್ಕಿ ಮುಂತಾದವುಗಳನ್ನು ಬೇಟೆ ಮಾಡುವುದುಂಟು. ದುರುಗಮುರಗಿಯರು ಮುಖ್ಯವಾಗಿ ದುರ್ಗಾದೇವಿ ಹೊತ್ತು ಭಿಕ್ಷಾಟನೆಯನ್ನೇ ಅವಲಂಬಿಸಿರುವ ಈ ಅಲೆಮಾರಿ ಸಮುದಾಯಕ್ಕೆ ಕೃಷಿ ಭೂಮಿಯೇ ಇಲ್ಲವೆಂದು ಹೇಳಬಹುದು. ಇತ್ತೀಚೆಗೆ ಈ ಸಮುದಾಯದ ಯುವಕ-ಯುವತಿಯರು ಪ್ಲಾಸ್ಟಿಕ್ ಕೊಡಗಳನ್ನು, ಅಲ್ಯೂಮಿನಿಯಂ ಪಾತ್ರೆಗಳನ್ನು ಮತ್ತು ಇನ್ನಿತರ ಸ್ಟೇಷನರಿಗಳನ್ನು ಅಂಗಡಿಗಳಿಂದ ಪಡೆದು ಹಳ್ಳಿಗಳಿಗೆ ಹೋಗಿ ಮಾರುವುದುಂಟು. ಅಲ್ಪ ಪ್ರಮಾಣದಲ್ಲಿ ಕೆಲವರು ಕುರಿ-ಮೇಕೆಗಳನ್ನು ಸಾಕಾಣಿಕೆ ಮಾಡುತ್ತಿದ್ದಾರೆ. ನಾಟಿ ಕೋಳಿಗಳನ್ನು ತಮ್ಮ ಆಹಾರಕ್ಕಾಗಿ ಸಾಕುವುದುಂಟು. ಸಾಕಿದ ಕೋಳಿಗಳು ಹೆಚ್ಚಾದಾಗ ಸಂತೆಗಳಿಗೆ ಒಯ್ದು ಮಾರುವುದುಂಟು.

ದುರುಗಮುರುಗಿಯರು ತಮ್ಮದೇ ಆದ ನ್ಯಾಯ ಪದ್ಧತಿಯನ್ನು ರೂಢಿಸಿಕೊಂಡು ಬಂದಿದ್ದಾರೆ. ಇಂದಿಗೂ ತಮ್ಮ ಸಮಸ್ಯೆಗಳನ್ನು ಪಂಚಾಯಿತಿ ಮೂಲಕವೇ ಬಗೆಹರಿಸಿಕೊಳ್ಳುತ್ತಾರೆ. ಕುಟುಂಬದ ಒಳಗೆ, ಹೊರಗೆ ಯಾವುದೇ ರೀತಿಯ ಜಗಳ,

ಭಿನ್ನಾಭಿಪ್ರಾಯ, ಸಮಸ್ಯೆಗಳಿಗೆ ಕುಲದ ಮುಖ್ಯಸ್ಥನಾದ ಪೂಜಾರಿ (ಪೋತರಾಜ) ಪರಿಹಾರ ಕಂಡುಕೊಳ್ಳುತ್ತಾನೆ. ನ್ಯಾಯಧೀಶನ ಸ್ಥಾನವನ್ನು ಇವರಲ್ಲಿ ಪೂಜಾರಿ ವಹಿಸಿರುತ್ತಾನೆ. ಅವನು ನೀಡುವ ನ್ಯಾಯ ತೀರ್ಮಾನವನ್ನು ಜನರು ದೈವ ಸಮಾನವೆಂದು ತಿಳಿಯುತ್ತಾರೆ. ಅವನ ಮಾತೇ ಕೊನೆಯ ಮಾತಾಗಿರುತ್ತದೆ. ಈತನನ್ನು "ನ್ಯಾಯಗಾಡು" ಎಂದು ಕರೆಯುವುದುಂಟು.

ಪೌರಾಣಿಕ ಹಿನ್ನೆಲೆ:

ಡಾ. ಚಂದ್ರಶೇಖರ ಕಂಬಾರರು ಹೇಳುವಂತೆ ಈ ಜನಾಂಗದ ಅಧಿದೇವತೆಯಾಗಿರುವ ದುರುಗಮ್ಮ ಮರಗಮ್ಮ ಪಾರ್ವತಿ ದೇವಿಯ ಅಂಶವೆಂಬುದನ್ನು ಈ ಜನಾಂಗದವರೇ ಒಪ್ಪಿಕೊಳ್ಳುತ್ತಾರೆ. ಅಲ್ಲದೆ ಆ ತಮ್ಮ ದೇವತೆ ಆದಿ ಶಕ್ತಿಯ ಅವತಾರ ಅಂಬೋದು ಅವರ ಗಟ್ಟಿ ನಂಬಿಕೆ.

ದುರ್ಗೆ ಆದಿಶಕ್ತಿಯ ರೂಪ ತಾಳಿ ದುರ್ಗಮನೆಂಬ ಅಸುರನನ್ನು ಕೊಂದದ್ದು ಪುರಾಣ ಪ್ರಸಿದ್ಧವಾಗಿದೆ. ಈ ದುರ್ಗ/ದುರ್ಗಮನೆಂಬ ರಾಕ್ಷಸ ಪುರುಷರಿಂದ ಸಾಯದಂತೆ ವರವನ್ನೂ ಪಡೆದು ಲೋಕ ಕಂಟಕನಾಗಿದ್ದಾಗ, ಬ್ರಹ್ಮನ ಕೋರಿಕೆಯ ಮೇರೆಗೆ ಕಾಳ ರಾತ್ರಿಯ ಮೂಲಕ ದುರ್ಗನನ್ನು ತನ್ನಲ್ಲಿಗೆ ಬರಮಾಡಿ ಅವನೊಂದಿಗೆ ಯುದ್ಧಮಾಡಿ ಕೊಂದಳು ಎಂಬುದು ಪುರಾಣ ಕಥೆ. ಇದನ್ನನುಸರಿಸಿಯೇ ಪೂಜಾರಿ ಗಂಡಸು ಚಾಟಿಯಿಂದ ತನ್ನ ದೇಹ ದಂಡಿಸಿಕೊಳ್ಳುತ್ತಾ ದೇವಿಯನ್ನು ಆರಾಧಿಸುವುದಕ್ಕೆ ಚಾಲನೆ ದೊರಕಿರಬೇಕು. ಲಡ್ಡಿನಿಂದ/ಚಾಟಿಯಿಂದ ಹೊಡೆದುಕೊಳ್ಳುವುದು ಮಾತ್ರವಲ್ಲ ಮುಂಗೈ ಮೇಲೆ ಚೂಪಾದ ಕತ್ತಿ ಆಡಿಸಿ ರಕ್ತ ಚಿಮ್ಮಿಸುವುದರಿಂದ ದೇವಿ ತೃಪ್ತಿ ಪಡುತ್ತಾಳೆ ಎಂದು ನಂಬಲಾಗಿದೆ. ದುರಗಮುರಗಿಯರ ಪೂಜಾರಿ ಹೀಗೆ ಚಾಟಿಯಿಂದ ಹೊಡೆದುಕೊಳ್ಳುವುದೂ, ಮತ್ತು ರಕ್ತ ಚಿಮ್ಮಿಸುವುದರಿಂದ ತಾಯಿ ಶಕ್ತಿ ಉಳ್ಳಾಕೆ ನಮಗೆ ಯಾವ ರೀತಿಯ ನೋವು ಉಂಟುಮಾಡುವುದಿಲ್ಲವೆಂಬುದು ಈ ಜನಾಂಗದ ನಂಬುಗೆಯಾಗಿದೆ. ದೇಹ ದಂಡನೆಯ ಮೂಲಕ ತಾವು ಆರಾಧಿಸುವ ದೇವರನ್ನು ಒಲಿಸಿಕೊಳ್ಳ ಬಹುದೆಂಬ ಭಾವನೆ ತುಂಬಾ ಪ್ರಾಚೀನವಾಗಿದೆ. ಸಿಡಿ ಆಡುವುದು, ಕೆಂಡ ಹಾಯುವಿಕೆ, ಮುಳ್ಳು ಪಾದುಕೆಗಳ ಮೇಲೆ ನಿಲ್ಲುವುದು, ಗಲ್ಲಕ್ಕೆ ಡಬ್ಬಳ ಚುಚ್ಚಿಕೊಳ್ಳುವುದು ಮುಂತಾದ ಕ್ರೂರ ಆಚರಣೆಗಳನ್ನು ದೇವೋಪಾಸನೆಯ ವಿವಿಧ ಪ್ರಕಾರಗಳೆಂದೇ ಪರಿಗಣಿಸಲಾಗುತ್ತದೆ.

ಐತಿಹಾಸಿಕ ಹಿನ್ನೆಲೆ:

ಹಿಂದೆ ರಾಜರು, ಪಾಳೆಯಗಾರರೆಲ್ಲ ದುರ್ಗ ಅಥವಾ ಕೋಟೆ ಕಟ್ಟಿಕೊಳ್ಳುತ್ತಿದ್ದರು. ಆ ದುರ್ಗಕ್ಕೆ ಒಬ್ಬ ದೇವತೆ ಹುಟ್ಟಿಕೊಂಡಳು. ಆ ದುರ್ಗಕ್ಕೆ ದೇವತೆಯಾದವಳೇ ದುರುಗಮ್ಮ. ಆ ದುರ್ಗಮ್ಮ ಮರ್ಗಮ್ಮನ ಆರಾಧಕರೇ ದುರಗಮುರಗಿಯರು. ಹಿಂದೆಲ್ಲ ಈ ದೇವತೆಯ ಪೂಜಾ ಕಾರ್ಯವೆಲ್ಲ ಇದೇ ಮಂದಿ ನೆರವೇರಿಸುತ್ತಿದ್ದಿರಬಹುದು. ಕ್ರಮೇಣ ಅವರಿಗೆ ಈ ಹೆಸರು ರೂಢಿಯಾಗಿರಬೇಕು.

ಇದುವರೆಗಿನ ಅಧ್ಯಯನಗಳು:

ವೃತ್ತಿಗಳು ಜಾತಿಗಳಾಗಿ ಪರಿವರ್ತನೆಗೊಂಡ ಸಂದರ್ಭದ ಕುರುಹುಗಳಾಗಿ ದುರುಗ ಮುರುಗಿ, ಬಹುರೂಪಿ, ಕಮ್ಮಾರ ಮತ್ತು ಮಡಿವಾಳದಂತಹ ಜನಾಂಗಗಳಿವೆ. ಇವೆಲ್ಲ ಮೂಲದಲ್ಲಿ ಯಾವ ಜಾತಿ ಅಥವಾ ಮತಕ್ಕೆ ಸೇರಿದ್ದವೆಂದು ಗುರುತಿಸುವುದು ತುಂಬಾ ಕಷ್ಟ. 'ಕನ್ನಡ ಜಾನಪದ ವಿಶ್ವಕೋಶ' ದಲ್ಲಿ ದುರುಗ ಮುರುಗಿಯರ ಮೂಲಕ್ಕೆ ಸಂಬಂಧಿಸಿ ಈ ವಿವರಣೆಯಿದೆ:

'ದುರುಗಮುರುಗಿಯರು ಉತ್ತರದಿಂದ ಬಂದವರೆಂದೂ, ದ್ರಾವಿಡರ ಗುಂಪಿಗೆ ಸೇರಿದವರೆಂದೂ ಅಭಿಪ್ರಾಯಗಳಿವೆ. ಇವರು ದ್ರಾವಿಡರ ಗುಂಪಿಗೆ ಸೇರಿದವರಾದ್ದರಿಂದ ದಕ್ಷಿಣದವರಿರಬೇಕೆಂಬ ವಾದವೂ ಇದೆ. ಇವರನ್ನು 'ಕುರುಬ' ಜನಾಂಗಕ್ಕೆ ಸೇರಿದವರೆಂತಲೂ ಹೇಳುತ್ತಾರೆ. ಕುರುಬರಲ್ಲಿ ಊರುಕುರುಬ, ಅಡವಿಕುರುಬ, ಎಂಬ ಎರಡು ಪಂಗಡಗಳಿವೆ. ಅಡವಿ ಕುರುಬರಲ್ಲಿ ಶಾಸ್ತ್ರ ಹೇಳುವವರು, ಕವಲೆತ್ತಿನವರು, ಬಾಳ ಸಂತೋಷರು, ಎಂಬ ಪಂಗಡಗಳಾಗಿ ವಿಂಗಡಿಸಿ ಬೇರೆ ಬೇರೆ ವೃತ್ತಿಗಳನ್ನು ಕೈಗೊಂಡರೆಂದೇ ಹೇಳುವುದುಂಟು. ಇನ್ನೊಂದು ವಾದದಂತೆ ದುರ್ಗಮ್ಮ ಮುರ್ಗಮ್ಮನನ್ನು ಕೆಳವರ್ಗದವರು ಬುಟ್ಟಿಯಲ್ಲಿಟ್ಟುಕೊಂಡು ಬೀದಿ ಬೀದಿಗೂ ಹೋಗಿ ಈ ದೇವತೆ ಶಾಪ ಹಾಕುತ್ತಾಳೆಂದು ಜನರಲ್ಲಿ ಭಯ ಹುಟ್ಟಿಸಿ ಅವರಿಂದ ದವಸ ಧಾನ್ಯಗಳನ್ನು ಪಡೆದು ಜೀವನ ಸಾಗಿಸುತ್ತಿದ್ದರೆಂದು ತಿಳಿದು ಬರುತ್ತದೆ.'[46]

ಇದೇ ಮಾತನ್ನು ಗೀತಾ ನಾಗಭೂಷಣ ಅವರೂ ಒಪ್ಪಿದಂತಿದೆ.'[47] ಅವರ ಕೃತಿ 'ದುರುಗ ಮುರುಗಿ ಸಂಸ್ಕೃತಿ' ಇದರಲ್ಲಿ ಇವರ ಮೂಲವನ್ನು ಕುರಿತು 'ದುರುಗಮುರಗಿಯವರೆಂದರೆ ದುರ್ಗಮ್ಮ ಮರಗಮ್ಮನ ಆರಾಧಕರು ಎಂದು ದಾಖಲಿಸಲಾಗಿದೆ. ಇಲ್ಲಿ ದುರುಗ ಅಂದರೆ ದುರ್ಗಾದೇವಿ ಮತ್ತು ಮರಗಮ್ಮ ಎಂದರೆ ಪಾರ್ವತಿ ಎಂದು ಅರ್ಥೈಸಲಾಗಿದೆ. ಆದರೆ ಅದು ಮೊದಲು ದುರುಗ ಎಂದಿರಬೇಕು. ಮುಂದೆ 'ದು' ಕಾರವು 'ಮು'ಕಾರಗಿ ಮುರಗಿ ಎಂದಾಗಿರಬಹುದೆಂದು ಇವರು ಅಭಿಪ್ರಾಯ ಪಡುತ್ತಾರೆ.'[48]

ಈ ಸಮುದಾಯ ಕುರಿತು ಹಲವು ಮಾಹಿತಿಗಳನ್ನು ಒಳಗೊಂಡ ಪುಸ್ತಕವೆಂದರೆ ಕೆ.ಎಸ್.ಸಿಂಗ್ ಅವರ 'The Scheduled Caste"ಎಂಬ ಕೃತಿ. ಇವರ ಪ್ರಕಾರ 'ಸಿಂಧೋಳ್ಳು (ದುರುಗಮುರಗಿ) ಸಮುದಾಯ ಮಾದಿಗ ಸಮುದಾಯಕ್ಕೆ ಸೇರಿದ್ದಾರೆ. ಇವರು ಮದ್ದಲೆ ಹಾಗೂ ತಮಟೆ ಬಾರಿಸುತ್ತ ರಾಮಯಣ, ಮಹಾಭಾರತ, ಅಂಕಲಮ್ಮನ ಕಥೆಗಳನ್ನು ಬೀದಿಗಳಲ್ಲಿ ಅಭಿನಯಿಸುವರಾಗಿದ್ದಾರೆ. ಆಂಧ್ರ ಪ್ರದೇಶದಲ್ಲಿ ಈ ಜನರನ್ನು ಸಿಂಧವಾಳ್ಳು, ಚಿಂಧೋಳು ಎಂದು ಕರೆಯಲಾಗುತ್ತದೆ.'[49]

ಕೆ.ಆರ್. ದುರ್ಗಾದಾಸ್ ಅವರು ದುರುಗಮುರಗಿಯರ ಕುರಿತು ಲೇಖನವನ್ನು ರಚಿಸಿದ್ದಾರೆ. ಇವರು ಜಿಲ್ಲೆಯಲ್ಲಿ ಈ ಸಮುದಾಯದ ಕ್ಷೇತ್ರಕಾರ್ಯ ಮಾಡಿ ತಮ್ಮ ಮಾಹಿತಿಯನ್ನು ನೀಡಿದ್ದಾರೆ. 'ದುರುಗಮುರುಗಿಯವರು ದೇವಿಯನ್ನು ಹೊತ್ತು ಆಟವಾಡುತ್ತ

ಅಲೆಯುವ ಅಲೆಮಾರಿ ಜನಾಂಗದವರಾಗಿದ್ದಾರೆ. ಮೂಲತ: ಆಂಧ್ರದವರೆಂದು ಹೇಳಿಕೊಳ್ಳುವ ಇವರು ಬಹಳ ಹಿಂದೆಯೇ ಕರ್ನಾಟಕದಲ್ಲಿ ವಲಸೆ ಬಂದಿದ್ದಾರೆ.'[50]

ಡಾ. ಮಂಜುನಾಥ ಬೇವಿನಕಟ್ಟಿ ಅವರು 'ದುರುಗಮುರಗಿಯವರು ತಮ್ಮ ವೃತ್ತಿಗಾಗಿ ಊರೂರು ಅಲೆಯುವ ಸಂದರ್ಭದಲ್ಲಿ 'ಕಾಲೂರಿದ್ದೇ ನೆಲ' ಎಂಬಂತೆ ನಿಗದಿತವಾದ ನೆಲೆ ಇಲ್ಲ. ಭಿಕ್ಷಾಟನೆಗಾಗಿ ಯಾವುದಾದರೊಂದು ಊರನ್ನು ಆಯ್ದುಕೊಂಡು ತಮ್ಮ ಸಹ ಪರಿವಾರದೊಂದಿಗೆ ಪ್ರಯಾಣ ಬೆಳೆಸುತ್ತಾರೆ. ಊರ ಹತ್ತಿರದ ಬಯಲಲ್ಲಿ ಬಿಢಾರವನ್ನು ಹೂಡುತ್ತಾರೆ. ಕತ್ತೆಗಳ ಮೇಲೆ ಹೇರಿರುವ 'ಸಂಚಾರಿ ಬಿಡಾರ' ವನ್ನು ಕೆಳಗಿಳಿಸಿ ಕ್ಷಣಾರ್ಧದಲ್ಲಿ ಬಿಡಾರ ಸಿದ್ಧಗೊಳಿಸುವ ಚತುರರು, ಬಿಡಾರದ ಪಕ್ಕದಲ್ಲಿ ಕತ್ತೆ, ಹಂದಿ, ನಾಯಿಗಳ ಹಟ್ಟಿಯೂ ರೂಪುಗೊಳ್ಳುತ್ತದೆ. ದುರುಗಮ್ಮನ ಸಂಚಾರಿ ಗುಡಿ, ಢಕ್ಕೆಯ ವಾದ್ಯ, ಪಾತ್ರೆ, ಪಡುಗ, ಬಟ್ಟೆ ಬರೆ, ಚಾಪೆ ಇವುಗಳಿಂದ ಬಿಡಾರ ತುಂಬುತ್ತಾರೆ. ಅಂಗಳದಲ್ಲಿ ಕಲ್ಲುಗುಂಡು ಹೂಡಿ ಒಲೆ ಸಿದ್ಧಪಡಿಸುತ್ತಾರೆ. ಅವಕಾಶ ಸಿಕ್ಕರೆ ಗುಡಿಗುಂಡಾರ, ಧರ್ಮಶಾಲೆ, ಚಾವಡಿಗಳಲ್ಲಿಯೂ ತಂಗುವುದುಂಟು.'[51]

ಅರ್ಜುನ ಗೋಳಸಂಗಿ ಅವರ ಪ್ರಕಾರ ಉತ್ತರ ಕರ್ನಾಟಕದ ಬಹುತೇಕ ಅಲೆಮಾರಿ ವೃಂದದ ಮನೆಮಾತು ತೆಲುಗು ಆಗಿರುವುದು ಕಂಡುಬರುತ್ತದೆ. ಉದಾಹರಣೆ ವಡ್ಡರು, ಹೆಳವರು, ದುರುಗಮುರಗಿ, ಕೊಂಡಮಾಮಗಳು ಇತ್ಯಾದಿ. ಮೂಲತಃ ಈ ಗುಂಪಿನವರು ಆಂಧ್ರ ಪ್ರದೇಶದಿಂದ ಕರ್ನಾಟಕದ ಅನೇಕ ಭಾಗಗಳಲ್ಲಿ ವೃತ್ತಿಗಾಗಿ ಆಗಾಗ ಬಂದು ಹೋಗುತ್ತಿದ್ದರು. ಕಾಲಾಂತರದಲ್ಲಿ ಇವರುಗಳು ತಮ್ಮ ಅನುಕೂಲಕ್ಕಾಗಿ ಕರ್ನಾಟಕದ ವಿವಿಧ ಕಡೆಗಳಲ್ಲಿ ನೆಲೆ ನಿಂತಂತೆ ತೋರುತ್ತದೆ ಎಂದು ಹೇಳುತ್ತಾರೆ.

ಅಧ್ಯಯನದ ಅಗತ್ಯತೆ:

1. ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ನೆಲೆಸಿರುವ ದುರುಗಮುರಗಿಯರನ್ನು ಒಳಗೊಂಡತೆ, ಹಾವೇರಿ ಜಿಲ್ಲೆಯಲ್ಲಿನ ಈ ಸಮುದಾಯದ ಜನರ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಪ್ರಯತ್ನಿಸುವುದು. ಕಾರಣ ಈ ಸಮುದಾಯದವರು ಇನ್ನೂ ಕೊಳಚೆ ಪ್ರದೇಶಗಳಲ್ಲಿ, ಯಾವುದೇ ಸೌಲಭ್ಯಗಳಿಲ್ಲದ ಸ್ಥಳಗಳಲ್ಲಿ, ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ.
2. ಜನಪದರು ಇವರನ್ನು ನಾನಾ ಹೆಸರುಗಳಿಂದ ಕರೆಯುತ್ತಿರುವುದರಿಂದ ಈ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕೋ ಅಥವಾ ಪಂಗಡಕ್ಕೆ ಸೇರಿಸಬೇಕೋ ಎನ್ನುವ ಗೊಂದಲದಲ್ಲಿದ್ದಾರೆ. ಇದಕ್ಕೆ ಪರಿಹಾರ ಕಂಡುಕೊಳ್ಳಬೇಕಿದೆ.
3. ಇವರ ಬದುಕು ಅಲೆಮಾರಿತನದಾದ್ದರಿಂದ, ಶಿಕ್ಷಣದಿಂದಲೂ ವಂಚಿತರಾಗಿದ್ದಾರೆ.
4. ಇವರನ್ನು ಒಕ್ಕಲೆಬ್ಬಿಸುವ ಸರ್ವ ಪ್ರಯತ್ನಗಳು ಭೂ ಮಾಲಿಕರಿಂದ ಮತ್ತು ಸರಕಾರದಿಂದ ಸತತವಾಗಿ ನಡೆಯುತ್ತವೆ. ಇದರಿಂದ ಮಾನಸಿಕ ಹಿಂಸೆಯಾಗುತ್ತಿದೆ.

5. ದುರುಗಮುರಗಿಯರ ವೃತ್ತಿ ಭಿಕ್ಷಾಟನೆಯಾದ್ದರಿಂದ, ಮತ್ತು ಕೃಷಿ ಜಮೀನು ಇಲ್ಲದ್ದರಿಂದ, ಸ್ವ-ಉದ್ಯೋಗಕ್ಕಾಗಿ ರಾಷ್ಟ್ರೀಕೃತ ಬ್ಯಾಂಕುಗಳು ಸಾಲ ಸೌಲಭ್ಯವನ್ನು ನೀಡುವುದಕ್ಕೆ ಹಿಂದೇಟು ಹಾಕುತ್ತಿವೆ.
6. ತಮ್ಮ ಮೂಲ ವೃತ್ತಿಯನ್ನು ಬಿಟ್ಟಿರುವವರಿಗೆ ಇತರ ವೃತ್ತಿಗಳನ್ನು ಕೈಗೊಳ್ಳಲು ಆರ್ಥಿಕ ನೆರವನ್ನು ಸರ್ಕಾರದಿಂದ ನೀಡಬೇಕಿದೆ.

ಪ್ರಜಾತಂತ್ರದ ಅರವತ್ಮೂರು ವರ್ಷಗಳಲ್ಲಿ ದುರುಗಮುರಗಿ ಸಮುದಾಯವು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಸಾಧಿಸಿರುವುದು ಶೂನ್ಯ ಸಮಾನ ಎಂದರೆ ಆಶ್ಚರ್ಯ ಪಡಬೇಕಿಲ್ಲ. ಇದು ವಾಸ್ತವ. ಇಂದಿಗೂ ಬದುಕಿಗಾಗಿ ಅಲೆಮಾರಿಯ ಜೀವನ ತಪ್ಪಿಲ್ಲ. ಬಹುತೇಕ ಜನರು ಗುಡಾರಗಳಲ್ಲಿ ವಾಸಿಸುತ್ತಿದ್ದಾರೆ. ಭಿಕ್ಷಾ ವೃತ್ತಿಯಿಂದ ಅವಮಾನ ಮತ್ತು ಅತಂತ್ರದ ಬದುಕು ನಡೆಸುತ್ತಿದ್ದಾರೆ. ಭಾರತದ ಮೂಲ ನಿವಾಸಿಗಳಾದರೂ ಭಾರತದ ಎರಡನೇ ದರ್ಜೆಯ ಪ್ರಜೆಗಳಂತೆ ಕಡೆಗಣಿಸಲ್ಪಟ್ಟಿದ್ದಾರೆ. ಇಡೀ ಬದುಕು ಧಾರ್ಮಿಕ ಭಿಕ್ಷಾವೃತ್ತಿಯಿಂದ ಕಾಲ ಕಳೆಯುತ್ತಿದ್ದಾರೆ. ಇಂದು ಇತರ ಸಮಾಜಗಳಿಗೆ ಮತ್ತು ಸರ್ಕಾರಕ್ಕೆ ದುರುಗಮುರುಗಿ ಸಮಾಜದ ಧಾರ್ಮಿಕ ಭಿಕ್ಷಾವೃತ್ತಿ ಬೇಡವಾಗಿದೆ. ಇದರಿಂದ ಈ ಸಂಪ್ರದಾಯ ಮಾಯವಾಗುವುದರಲ್ಲಿ ಸಂದೇಹವಿಲ್ಲ.

ದುರುಗಮುರುಗಿಯರ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ:

ಸಾಮಾಜಿಕವಾಗಿ ತುಂಬಾ ಕೆಳಸ್ತರದಲ್ಲಿರುವ ದುರುಗಮುರಗಿಯರು ಭಿಕ್ಷಾಟನೆಯಿಂದಾಗಿಯೇ ಜೀವನ ಸಾಗಿಸುವಂಥವರು. ಊರ ಹೊರಭಾಗಗಳಲ್ಲಿ ಇವರು ತಾತ್ಕಾಲಿಕವಾಗಿ ಗುಡಾರಗಳನ್ನು ರಚಿಸಿಕೊಳ್ಳುತ್ತಾರೆ. ಅಲೆಮಾರಿ ಸಮುದಾಯದ ಇವರು ಸಾಮಾನ್ಯವಾಗಿ ತಮ್ಮ ದೇವರ ಪುಟ್ಟಿಗಳೊಂದಿಗೆ ಊರಿಂದೂರಿಗೆ ಅಲೆಯುತ್ತಾರೆ. ಭಿಕ್ಷಾಟನೆಯಿಂದ ಬಂದ ಸಿದ್ಧ ಪದಾರ್ಥಗಳನ್ನೇ ಆಹಾರವಾಗಿ ಬಳಸುತ್ತಾರೆ. ಭಿಕ್ಷೆಯಲ್ಲಿ ದೊರೆಯುವ ಅಕ್ಕಿ ಇತ್ಯಾದಿ ಧಾನ್ಯಗಳಿಂದ ಅಡುಗೆ ಮಾಡಿಕೊಳ್ಳುವುದುಂಟು. ಗುಡಾರದ ಹೊರಭಾಗದ ಬಯಲಿನಲ್ಲಿ ಕಲ್ಲುಗುಂಡುಗಳನ್ನು ಬಳಸಿ ಒಲೆ ರಚಿಸಿಕೊಳ್ಳುತ್ತಾರೆ. ಗುಡಾರದ ಹೊರತಾಗಿ ಧರ್ಮ ಛತ್ರಗಳಲ್ಲಿಯೂ ಇವರು ನೆಲೆಸುವುದುಂಟು. ಒಂದು ಊರಿನಲ್ಲಿ ಭಿಕ್ಷಾಟನೆ ಮಾಡುವುದು ಮುಗಿದ ನಂತರ ಮುಂದಿನ ಊರಿಗೆ ತೆರಳುತ್ತಾರೆ. ಹಾಗೆ ಸಂತೆ, ಜಾತ್ರೆಗಳಲ್ಲಿಯೂ ಭಿಕ್ಷಾಟನೆ ಮಾಡುವುದು ಕಂಡುಬರುತ್ತದೆ. ದನ, ಕರು, ಕೋಳಿ, ಹುಂಜ, ಕುರಿ, ಮೇಕೆ ಸಾಕಾಣಿಕೆಯು ಇವರಲ್ಲಿದೆ.

ಆಹಾರ ಪದ್ಧತಿ:

ಬೇರೆ ಬುಡಕಟ್ಟಿನವರಂತೆ ದುರುಗಮುರಗಿಯರೂ ಹಿಂದೆಲ್ಲ ಬೇಟೆಯನ್ನೇ ಆಹಾರದ ಮೂಲವನ್ನಾಗಿ ಮಾಡಿಕೊಂಡಿದ್ದರು. ಹಂದಿ, ಚಿಗರೆ, ಮೊಲ, ನರಿ, ಮುಂಗುಸಿ, ಪಾರಿವಾಳ,

ಕಾಡು ಬೆಕ್ಕು, ಹಕ್ಕಿ ಪಿಕ್ಕಿಗಳು ಮೊದಲಾದುವನ್ನು ಬೇಟೆಯಾಡಿ ತರುತ್ತಿದ್ದರು. ಅವುಗಳ ಮಾಂಸವನ್ನು ಸುಟ್ಟು, ಕುದಿಸಿ ತಿನ್ನುತ್ತಿದ್ದರು. ತಾವು ತಿನ್ನುವುದನ್ನೇ ತಮ್ಮ ದೇವತೆಗೂ ಬಲಿಕೊಡುತ್ತಿದ್ದರು. ಈ ಮಂದಿ ಮರಗಮ್ಮದೇವಿಗೆ ಬಲಿ ಕೊಡುವುದು ಆಡು ಮತ್ತು ಹೋತ. ಹಂದಿಯನ್ನೂ ಬಹಳ ಹಿಂದೆ ಕೊಡುತ್ತಿದ್ದರಂತೆ. ಆದರೆ ಈಗ ಅದನ್ನು ನಿಲ್ಲಿಸಿದ್ದಾರೆ. ಆಹಾರ ಸಂಗ್ರಹಣೆಗಾಗಿ ಮೊದಲು ಕಾಡುಗಳಿಗೆ ತೆರಳುತ್ತಿದ್ದರು. ಆದರೆ ಈಗ ಅರಣ್ಯ ಕಾಯ್ದೆ ನೀತಿಯಾನುಸಾರ ನಿಷೇಧಿಸಿರುವುದರಿಂದ, ಅಲ್ಲಿಗೆ ಹೋಗಲು ಹಿಂದೇಟು ಹಾಕುತ್ತಾರಂತೆ.

ವಸತಿ ವ್ಯವಸ್ಥೆ:

ದುರುಗಮುರಗಿಯರು ಸಾಮಾನ್ಯವಾಗಿ ಗುಡಾರ/ಗುಡಿಸಲು ಮತ್ತು ಡೇರೆಗಳಲ್ಲಿ ವಾಸಿಸುವರು. ಅಲೆಮಾರಿಗಳಾಗಿರುವುದರಿಂದ ಇವರು ಬಹಳ ಕಾಲ ಒಂದೆಡೆ ನಿಲ್ಲುವುದಿಲ್ಲ. ಬೇರೆ ಬೇರೆ ಊರುಗಳಿಗೆ, ಹಳ್ಳಿಗಳಿಗೆ ಹೋದಾಗಲೆಲ್ಲ ಊರಿನ ಕೊನೆಯ ಭಾಗಕ್ಕೆ ಬಯಲಿನಲ್ಲಿ ತಮ್ಮ ಗುಡಿಸಲುಗಳನ್ನು ಅಥವಾ ಟೆಂಟುಗಳನ್ನು ಹಾಕಿಕೊಳ್ಳುತ್ತಾರೆ. ತಾತ್ಕಾಲಿಕವಾಗಿಯಾದರೂ ಅವರಿಗೆ ವಾಸಿಸಲು ಮನೆಗಳು ಬೇಕಲ್ಲ. ಮನೆಗಳು ಅಂದರೆ ಕಲ್ಲು, ಮಣ್ಣಿನವುಗಳಲ್ಲ. ತೊಪ್ಪಲು, ಪೊರಕೆ ಹುಲ್ಲುಗಳ ಗುಡಿಸಲುಗಳಾದರೂ ಸರಿ. ತಾಡುಪಾಲು, ಗೋಣಿಚೀಲಗಳ ಡೇರೆಗಳಾದರೂ ಸರಿ. ಗುಡಿಸಲು ಮತ್ತು ಡೇರೆಗಳನ್ನು ತಮ್ಮದೇ ಆದ ರೀತಿಯಲ್ಲಿ ಕಟ್ಟಿಕೊಂಡಿರುತ್ತಾರೆ. ಇವರಿಗೆ ಸರಿಯಾದ ನೆಲೆ ಇರದೇ ಇರುವುದರಿಂದ ಸರ್ಕಾರ ನೀಡುವ ಆಶ್ರಯ ಮನೆ ಇತ್ಯಾದಿ ಸವಲತ್ತುಗಳಿಂದಲೂ ಇವರು ಬಾಗಶಃ ವಂಚಿತರಾಗಿದ್ದಾರೆ. ಇತ್ತೀಚೆಗೆ ಪಟ್ಟಣ ಪ್ರದೇಶದ ಕೆಲವು ದುರುಗಮುರಗಿಯರು ಸರ್ಕಾರವು ಕಲ್ಪಿಸಿರುವ ಆಶ್ರಯ, ಅಂಬೇಡ್ಕರ್, ಹಾಗೂ ಜನತಾ ಮನೆಗಳನ್ನು ಪಡೆಯುವಲ್ಲಿ ಯಶಸ್ವಿಯಾಗುತ್ತಿದ್ದಾರೆ. (ಕೋಷ್ಟಕ 23 ಗಮನಿಸಿ). ಹಳ್ಳಿಗಳಲ್ಲಿ ವಾಸಿಸುವರು ಇಂತಹ ಸವಲುತ್ತುಗಳನ್ನು ಪಡೆಯಲಾಗುತ್ತಿಲ್ಲ. ಈ ನಿಟ್ಟಿನಲ್ಲಿ ಅವರೆಲ್ಲರೂ ಸಂಘಟಿತರಾಗಬೇಕಾದ ಅವಶ್ಯಕತೆ ಇದೆ.

ಕೋಷ್ಟಕ–23

ದುರುಗಮುರುಗಿ ಸಮುದಾಯದವರ ವಾಸದ ಮನೆಯ ಸ್ವರೂಪ:

ಕ್ರ.ಸಂ.	ಮನೆಯ ಸ್ವರೂಪ.	ಸಂಖ್ಯೆ
01	ಟೆಂಟು/ಗುಡಾರ	62
02	ಗುಡಿಸಲು	34
03	ತಗಡು/ಹೆಂಚಿನಮನೆ	28
04	ಮಾಳಿಗೆ/ಆರ್.ಸಿ.ಸಿ	13
05	ಆಶ್ರಯ ಮನೆ	17
06	ಬಾಡಿಗೆ ಮನೆ	28
	ಒಟ್ಟು	**182**

ಉಡುಗೆ ತೊಡುಗೆಗಳು:

ಈ ಸಮುದಾಯದ ಪುರುಷರು ಮೊದಲೆಲ್ಲಾ ಬರೀ ಲಂಗೋಟಿ ಧಾರಿಗಳೇ ಆಗಿದ್ದರು. ಮೇಲೆ ಬೆತ್ತಲೆ ಮೈ. ಕ್ರಮೇಣ ಬದಲಾವಣೆ ಆಗಿ, ಲಂಗೋಟಿಗೆ ಬದಲು ಪಂಚೆ ಅಥವಾ ಧೋತಿ ಉಡುತ್ತಿದ್ದಾರೆ. ಮೇಲೆ ಮಾತ್ರ ಬಹಳ ಕಾಲ ಬರೀ ಮೈಯೇ. ಆದರೆ ಈಗೀಗ ಬಟ್ಟೆಯಿಂದ ಹೊಲಿದ ಬನೀನು ಹಾಕಿಕೊಳ್ಳುತ್ತಿದ್ದಾರೆ. ಅಂಗಿಯನ್ನು ಹಾಕಿಕೊಳ್ಳುವ ರೂಢಿಯಿದೆ. ಯುವಕರು ಪ್ಯಾಂಟು ಮತ್ತು ಶರ್ಟಗಳನ್ನು ಹಾಕಿಕೊಳ್ಳುತ್ತಿದ್ದಾರೆ.

'ಹೆಂಗಸರು ಮಲಗಂಟು ಹಾಕಿ ಮೊಣಕಾಲ ಮೇಲೆ ಸೀರೆ ಉಡುತ್ತಾರೆ. ಎಂಥ ಪೈಲ್ವಾನನಂಥ ಗಂಡಸು ಅವರ ಸೆರಿಗೆಗೆ ಕೈ ಹಾಕಿ ಎಳೆದರೂ ಸಹ ಆ ಸೀರೆಯ ಗಂಟಾಗ್ಲಿ ನೆರಿಗೆಯಾಗಲಿ, ಬಿಚ್ಚುವುದು ಹೋಗಲಿ ಜರಿಯುವುದು ಇಲ್ಲವೆಂದು ಈ ಹೆಂಗಸರು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಮೇಲೆ ಕುಪ್ಪಸ.'[52] ಆದರೆ ಈಗ ಆಧುನಿಕತೆಯ ಪ್ರಭಾವದಿಂದಾಗಿ ಇವರೂ ಕೂಡ ನಾಗರೀಕರಂತೆ ಉಡುಪನ್ನು ಧರಿಸುತ್ತಿರುವುದು ಕಂಡುಬರುತ್ತದೆ.

ವೇಷ ಭೂಷಣಗಳು:

ಪುರುಷರು ವೇಷ ಕಟ್ಟಿ ಪೋತುರಾಜನಾಗಿ ಕುಣಿಯಲು ಬಂದಾಗ ಅವನ ಉಡುಗೆ ಬೇರೆಯದೇ ಆಗಿರುತ್ತದೆ. ಅವನು ಸೀರೆಯನ್ನು ಲಂಗದಂತೆ ನೆರಿಗೆ ನೆರಿಗೆಯಾಗಿ ಸೊಂಟದ ಸುತ್ತಲೂ ಕಟ್ಟಿಕೊಂಡಿರುತ್ತಾನೆ. ಅದು ಮೊಣಕಾಲವರೆಗೆ ಮಾತ್ರ ಬಂದಿರುತ್ತದೆ. ಮೇಲೆ ಬರಿ ಮೈ ಇರುತ್ತದೆ. ಕಾಲಲ್ಲಿ ಗೆಜ್ಜೆ, ಕಿವಿಯಲ್ಲಿ ಓಲೆ, ರಟ್ಟೆಯಲ್ಲಿ ಕಡಗ, ಉದ್ದನೆಯ ಕೂದಲು ಬೆನ್ನ ಮೇಲೆ ಇಳಿಬಿಟ್ಟುಕೊಂಡು ವಿಚಿತ್ರವಾಗಿ ಆರ್ಭಟಿಸುತ್ತಾ ಚಾಟಿಯಿಂದ ಹೊಡೆದುಕೊಳ್ಳುತ್ತಾ ಪೂಜಾರಿ ಲಯಬದ್ಧವಾಗಿ ಹೆಜ್ಜೆಗಳನ್ನು ಹಾಕುತ್ತಾನೆ. ಅದಕ್ಕನುಸಾರವಾಗಿ ದುರುಗಮುರಗಿ ತಾಯಿಯ ಮಹಿಮೆಯನ್ನು ರಾಗವಾಗಿ ಹಾಡುತ್ತಾನೆ. ಹೆಣ್ಣು ಮಗಳು ಉರುಮೆ ಬಾರಿಸುವುದರೊಂದಿಗೆ ದನಿಗೂಡಿಸುತ್ತಾ ಅದನ್ನು ಪುನರಾವರ್ತಿಸುತ್ತಾಳೆ. ಹೀಗೆ ಇದೊಂದು ಆಚರಣೆ ಆಗಿ ರಂಗಪ್ರದರ್ಶನವೇ ಆಗಿ ಪರಿಣಮಿಸುವುದು. ಹೆಣ್ಣಿನ ತಾಳಕ್ಕೆ ಗಂಡು ಕುಣಿಯುವ ಪ್ರವೃತ್ತಿ ಇವರಲ್ಲಿ ಗೋಚರವಾಗುತ್ತದೆ.

ಕಸುಬು:

ದುರುಗಮುರಗಿ ದೇವರನ್ನು ಹೊತ್ತುಕೊಂಡು ತಿರುಗಾಡುವುದೇ ಇವರ ಪ್ರಧಾನ ಕಸುಬಾಗಿದೆ. ಪುಟ್ಟಿಯಲ್ಲಿ ದೇವರನ್ನು ಇಟ್ಟುಕೊಂಡು ಊರಿಂದ ಊರಿಗೆ ಅಲೆಯುತ್ತಾ ಭಕ್ತರಿಂದ ದವಸ, ಧಾನ್ಯ, ಒಡವೆ, ವಸ್ತ್ರಗಳನ್ನು ಕಾಣಿಕೆಯಾಗಿ ಪಡೆಯುತ್ತಾ ಜೀವನ ನಡೆಸುವ ದುರುಗಮುರಗಿಯರು ದೇವಿ ಆರಾಧನೆಯನ್ನೇ ಮುಖ್ಯ ಕಸುಬಾಗಿ ಹೊಂದಿದ್ದಾರೆ. ಆದರೆ ಮೂಲದಲ್ಲಿ ಮೀನುಗಾರಿಕೆಯನ್ನು ಮಾಡುತ್ತಿದ್ದುದು ತಿಳಿದುಬರುತ್ತದೆ.

ದುರುಗಮುರುಗಿಯರು ಮುಖ್ಯವಾಗಿ ಭಿಕ್ಷಾಟನೆಯನ್ನೇ ಅವಲಂಬಿಸಿರುವ ಅಲೆಮಾರಿ ಸಮುದಾಯ. ಇವರಿಗೆ ಕೃಷಿ ಭೂಮಿ ಇಲ್ಲವೆಂದೇ ಹೇಳಬಹುದು. ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ಆಡೂರು ಮತ್ತು ಕಾಲ್ವೇ ಕಲ್ಲಾಪುರದಲ್ಲಿ ನೆಲೆಸಿದ್ದ ದುರುಗಪ್ಪ ಆನಂದಪ್ಪ ದುರುಗಮುರಗಿಯು ಕೆಲವು ಕುರಿ-ಮೇಕೆಗಳನ್ನು ಹೊಂದಿರುವುದು ಸಮೀಕ್ಷೆಯಿಂದ ತಿಳಿದು ಬರುತ್ತದೆ. ಇತ್ತೀಚೆಗಷ್ಟೆ ಕೆಲವರು ಅಲ್ಪ ಪ್ರಮಾಣದಲ್ಲಿ ನಾಟಿ ಕೋಳಿಗಳನ್ನು ತಮ್ಮ ಆಹಾರಕ್ಕಾಗಿ ಸಾಕಣಿಕೆ ಮಾಡುತ್ತಿದ್ದಾರೆ. ಹೀಗೆ ಸಾಕಿದ ಕೋಳಿಗಳು ಹೆಚ್ಚಾದಾಗ ಸಂತೆಗಳಿಗೆ ಕೋಳಿಗಳನ್ನು ಒಯ್ದು ಮಾರಾಟ ಮಾಡುವುದುಂಟು.

ಇತ್ತೀಚೆಗೆ ಈ ಸಮುದಾಯದ ಯುವಕ ಮತ್ತು ಯುವತಿಯರು ಪ್ಲಾಸ್ಟಿಕ್ ಕೊಡಗಳನ್ನು, ಅಲ್ಯೂಮಿನಿಯಂ ಪಾತ್ರೆಗಳನ್ನು ಅಂಗಡಿಗಳಿಂದ ಪಡೆದು ಹಳ್ಳಿಗಳಿಗೆ ಹೋಗಿ ಮಾರುವುದುಂಟು. ಇಂತಹ ವ್ಯಾಪಾರದಿಂದ ಅತ್ಯಲ್ಪ ಲಾಭ ಪಡೆಯುವುದುಂಟು. ಮೀನು ಹಿಡಿಯುವ ಕೂಲಿ ಕೆಲಸಕ್ಕೂ ದುರುಗಮುರುಗಿ ಗಂಡಸರು ಹೋಗುತ್ತಾರೆ. ಇದರಿಂದಾಗಿ ಅವರಿಗೆ ಕೂಲಿ ಜೊತೆಗೆ ಸ್ವಲ್ಪ ಪ್ರಮಾಣದಲ್ಲಿ ಮೀನು ಆಹಾರಕ್ಕಾಗಿ ದೊರೆಯುತ್ತದೆ. ಅರೆ ಮಲೆನಾಡು ಪ್ರದೇಶಗಳಲ್ಲಿ ಕೃಷಿ ಹಾಗೂ ಕೃಷಿಯೇತರ ಕೂಲಿಗಳಿಗಾಗಿ ಹೋಗುವುದು ಬಹಳ ಕಡಿಮೆ. ಈ ಎಲ್ಲಾ ಕೆಲಸಗಳನ್ನು ಅವಲಂಬಿಸಿದರೂ ಇವರು ಭಿಕ್ಷಾಟನಾ ವೃತ್ತಿಯನ್ನು ಮಾತ್ರ ಬಿಡಲಾರರು. ಅವರಿಗೆ ಅದು ಒಂದು ಧಾರ್ಮಿಕ ಆಚರಣೆಯಾಗಿದೆ.

ಒಳಾಡಳಿತ ವ್ಯವಸ್ಥೆ:

ಸ್ವತಂತ್ರ ಭಾರತದಲ್ಲಿ ಸಾಮಾಜಿಕ ಪರಿವರ್ತನೆಯ ಗಾಳಿ ಬಲವಾಗಿ ಬೀಸಿದರೂ ಇವರ ನ್ಯಾಯ ಪಂಚಾಯಿತಿ ಸಂಪೂರ್ಣವಾಗಿ ಕುಸಿದಿಲ್ಲ. ದುರುಗಮುರಗಿಯರು ತಮ್ಮದೇ ಆದ ನ್ಯಾಯ ಪದ್ಧತಿಯನ್ನು ರೂಢಿಸಿಕೊಂಡು ಬಂದಿದ್ದಾರೆ. ಸಮುದಾಯದ ಹಿರಿಯ ವ್ಯಕ್ತಿಯೇ ಮುಖಂಡನಾಗಿರುತ್ತಾನೆ. ಈತನನ್ನು ಮುಖ್ಯಸ್ಥ ಅಥವಾ ಪೂಜಾರಿ ಎಂದು ಕರೆಯುತ್ತಾರೆ. ಅವರ ಭಾಷೆಯಲ್ಲಿ ಆತನನ್ನು 'ನಾಯಗಾಡು' ಎಂದು ಕರೆಯುವರು. ಕುಟುಂಬದ ಒಳಗೆ ಹೊರಗೆ ಯಾವುದೇ ರೀತಿಯ ಜಗಳ ಉಂಟಾದರೂ ಮುಖಂಡನ ಸಮ್ಮುಖದಲ್ಲಿ ನ್ಯಾಯ ದೊರಕುತ್ತದೆ. ಇತರ ಕೇರಿಯ ಪ್ರಮುಖರನ್ನು ಕರೆಯಿಸಿ ಒಂದೆಡೆ ಕೂತು ಪಂಚಾಯಿತಿ ಮಾಡುತ್ತಾರೆ. ಹಿರಿಯರ ಒಪ್ಪಿಗೆಯಿಲ್ಲದೆ ಪ್ರೀತಿಸಿ ಓಡಿ ಹೋಗಿ, ಬಂದ ವಧು-ವರರಿಗೆ ಸುಮಾರು ಒಂದು ಲಕ್ಷದವರೆಗೂ ದಂಡ ವಿಧಿಸುವ ಪದ್ಧತಿಯಿದೆ. ಗಂಡ ಸತ್ತ ಹೆಣ್ಣನ್ನು ಓಡಿಸಿಕೊಂಡು ಹೋಗುವುದು ಒಂದು ಅಪರಾಧವೆ. ಆಗ ಅಂಥ ಗಂಡು ತಪ್ಪು ದಂಡ ಕೊಟ್ಟು ಶರಣಾಗುತ್ತಾನೆ. ಒಮ್ಮೊಮ್ಮೆ ಹೆಣ್ಣು ಕೂಡ ತಪ್ಪು ದಂಡ ಕೂಡಬೇಕಾದ ಪ್ರಸಂಗಗಳು ನಡೆಯುತ್ತವೆ. ಕಳ್ಳ-ಕಾಕರಿಗೆ ಐದುನೂರರವರೆಗೆ ದಂಡ ಹಾಕುತ್ತಾರೆ. ಗಂಡ ಹೆಂಡತಿ ಜಗಳದಲ್ಲಿ ಹತಾರ ಅಥವಾ ಚಾಕು ಹಿಡಿದರೆ ಗಂಡನಿಗೆ ಐದುನೂರು ಇಲ್ಲವೇ ಸಾವಿರ ರೂಪಾಯಿವರೆಗೆ ದಂಡ ಹಾಕುತ್ತಾರೆ. ದಂಡದ ಹಣವನ್ನು ಸಮುದಾಯದವರು ಮದ್ಯ ಮತ್ತು

ಮಾಂಸ ಸೇವನೆ ಮೂಲಕ ಪಾರ್ಟಿ ಮಾಡಿ ಖರ್ಚು ಮಾಡುತ್ತಾರೆ. ದಂಡದ ಹಣವನ್ನು ಏನಾದರೂ ಒಳ್ಳೆಯ ಕೆಲಸಕ್ಕೆ ಬಳಕೆ ಮಾಡಿಕೊಳ್ಳಿರಿ ಎಂದು ಸಲಹೆ ಮಾಡಿದೆವು. ಅದಕ್ಕೆ ಅವರು ನೀಡಿದ ಪ್ರತ್ಯುತ್ತರವೇನೆಂದರೆ, ಅದು ಪಾಪದ ಹಣ, ಅದನ್ನು ಯಾವ ಕಾರ್ಯಕ್ಕೂ ಬಳಸುವುದಿಲ್ಲ. ಎನ್ನುತ್ತಾರೆ. ಏನೇ ಆದರೂ ತಮ್ಮ ತಮ್ಮ ನಡುವೆ ಉಂಟಾಗುವ ಜಗಳಗಳನ್ನು ತಾವೇ ಪರಸ್ಪರ ಕಲೆತು, ಚರ್ಚಿಸಿ ಒಂದು ತೀರ್ಮಾನಕ್ಕೆ ಬರುವುದು ನಿಜಕ್ಕೂ ಉತ್ತಮ ಬೆಳವಣಿಗೆ.

ಭಾಷೆ:

ಒಂದು ಜನಾಂಗದವರು ಒಂದು ಪ್ರದೇಶದಲ್ಲಿದ್ದರೆ, ಆ ಪ್ರದೇಶದ ಭಾಷೆಯ ಪ್ರಭಾವಕ್ಕೆ ಒಳಗಾಗುತ್ತಾರೆ. ಈ ದೃಷ್ಟಿಯಿಂದ ದುರುಗಮುರಗಿಯರ ಭಾಷೆಯ ಬಗ್ಗೆ ಹೇಳುವುದಾದರೆ ಅವರ ಮೂಲ ಭಾಷೆ ತೆಲುಗು. ಇಂದಿಗೂ ಅವರು ರಾಜ್ಯದ ಯಾವ ಜಿಲ್ಲೆ, ತಾಲೂಕು, ಹಳ್ಳಿಯಲ್ಲಿಯೇ ಇರಲಿ, ಅವರ ಮನೆ ಮಾತು ಮಾತ್ರ ತೆಲಗು. ಜನಮಾತು ನಮ್ಮಲ್ಲಿ ಕನ್ನಡ. ಆಯಾ ಪ್ರದೇಶಕ್ಕೆ ಹೋದಂತೆಲ್ಲ, ಆಯಾ ಪ್ರದೇಶದ ಭಾಷೆಯನ್ನೇ ಕಲಿತು ಮಾತನಾಡುವರು. ಆಯಾ ಪ್ರದೇಶದಲ್ಲಿರುವ ದೇವತೆಗಳ ಹೆಸರುಗಳನ್ನೇ ಎತ್ತಿಕೊಂಡು ಭಿಕ್ಷೆ ಬೇಡುತ್ತಾ ಅಲ್ಲಿಯ ಜನರ ಪ್ರೀತಿಗಳಿಸುವ ಪ್ರಯತ್ನ ಮಾಡುತ್ತಾರೆ.

ದುರುಗಮುರಗಿಯರ ಆಚರಣೆ ಮತ್ತು ನಂಬಿಕೆಗಳು:

ಜನನ:

ದುರುಗಮುರಗಿ ಜನರಲ್ಲಿ ಮಗುವಿನ ಜನನ ಕಾಲದಲ್ಲಿ ಆಚರಿಸುವ ಆಚರಣೆಗಳು ಮತ್ತು ಸಂಪ್ರದಾಯಗಳು ತುಂಬಾ ಕಟ್ಟು ನಿಟ್ಟಾಗಿವೆ. ಗರ್ಭಿಣಿಯಾದ ಸುದ್ಧಿಯನ್ನು ತವರು ಮನೆಯವರಿಗೆ ತಿಳಿಸುತ್ತಾರೆ. ಆದರೆ ಹೆರಿಗೆ ಮಾತ್ರ ಗಂಡನ ಮನೆಯಲ್ಲಿ ಆಗುವುದು. ಗರ್ಭಿಣಿ ಮಹಿಳೆಗೆ ಪ್ರತ್ಯೇಕ ಗುಡಾರ ಇರುವುದು. ಗುಡಾರದ ಒಳಗೆ ಚಾಪೆ, ಹಳೆ ಬಟ್ಟೆಗಳು, ಕೌದಿ, ಕೊಬ್ಬರಿ ಎಣ್ಣೆ, ಮೊರ, ಬಿಸಿನೀರಿನ ಗಡಿಗೆ ಇತ್ಯಾದಿ ಸಾಮಾನುಗಳು ಇರುತ್ತವೆ. ಗರ್ಭಿಣಿ ಹೆಂಗಸಿಗೆ ನೋವು ಕಂಡಾಗ, ಸಮುದಾಯದ ಅನುಭವಸ್ಥ ಸೂಲಗಿತ್ತಿಯ ಮೂಲಕ ಹೆರಿಗೆ ಮಾಡಿಸುತ್ತಾರೆ. ನಂತರ ಸ್ನಾನ ಮಾಡಿಸಿ ಒಳಗೆ ಕರೆದುಕೊಳ್ಳುತ್ತಾರೆ. ಹದಿನಾರು ದಿನಗಳವರೆಗೆ ಮಗು ಹಾಗೂ ಬಾಣಂತಿಯ ಆರೈಕೆಯನ್ನು ಸೂಲಗಿತ್ತಿ ಮಾಡುತ್ತಾಳೆ.

ಮಗು ಹುಟ್ಟಿದ ತರುವಾಯ ಮುಖ್ಯಸ್ಥರುಗಳಿಗೆ ಕುಲದೈವದ ಪ್ರಕಾರ ಟೀ, ಸರಾಯಿ ಕುಡಿಸಲಾಗುತ್ತದೆ. ಮೂರು ದಿವಸಗಳಾದ ನಂತರ ಗುಡಾರದ ಒಳಗಡೆ ಸಗಣಿ ನೀರಿನಿಂದ ನೆಲ ಸಾರಿಸಲಾಗುತ್ತದೆ. ಚಾಪೆ ಮೇಲೆ ಹಾಕಿರುವ ಮಗುವನ್ನು ಮೂರನೇ ದಿನ ಮೊರದಲ್ಲಿ ಹಾಕಲಾಗುವುದು. ಬಾಣಂತಿಗೆ ವಿಶೇಷವಾಗಿ ಮೀನು, ಮಾಂಸದ ಅಡುಗೆ, ಮಾಡಿ ಆರೈಕೆ ಮಾಡುತ್ತಾರೆ. ಉತ್ತಮ ಸ್ಥಿತಿಯಲ್ಲಿರುವವರು ದಿನಾಲು ಬೆಳಗ್ಗೆ ಬಾಣಂತಿಗೆ 'ಖಾರ' (ಕೊಬ್ಬರಿ, ಉತ್ತತ್ತಿ, ಅಂಟು, ಮೆಣಸು, ಬೆಲ್ಲ, ಇತ್ಯಾದಿ ವಸ್ತುಗಳಿಂದ ತಯಾರಿಸಿರುತ್ತಾರೆ.) ವನ್ನು ತಿನ್ನಲು

ಕೊಡುತ್ತಾರೆ. ಹುಟ್ಟಿದ ಮೂರು ಅಥವಾ ಒಂಭತ್ತು ದಿವಸಕ್ಕೆ ಮಗುವಿಗೆ ಹೆಸರಿಡುತ್ತಾರೆ. ಇವರು ಹೆಚ್ಚಾಗಿ ಬೆಡಗಿಗೆ ಮತ್ತು ಕುಲ ದೇವತೆಗೆ ಸಂಬಂಧಿಸಿದ ಹೆಸರುಗಳನ್ನಿಡುತ್ತಾರೆ. ಇಲ್ಲವೆ ಕುಟುಂಬದ ಹಿರಿಯರ ಹೆಸರಿಡುವುದು ರೂಢಿಯಲ್ಲಿದೆ. ಉದಾಹರಣೆಗೆ, ದ್ಯಾಮಪ್ಪ, ಗಾಳೆಪ್ಪ, ದುರ್ಗಪ್ಪ, ರಾವುಲೋಪ್ಪ ಇತ್ಯಾದಿ.

ಋತುಮತಿ:

ಹೆಣ್ಣು ಋತುಮತಿಯಾದ ನಂತರ ಪ್ರತ್ಯೇಕ ಗುಡಿಸಲಿನಲ್ಲಿ ಬಿಡುತ್ತಾರೆ. ಈ ಹೆಣ್ಣು ಯಾರ ಕಣ್ಣಿಗೂ ಬೀಳದಂತೆ ನೋಡಿಕೊಳ್ಳಲಾಗುತ್ತದೆ. ಗುಡಿಸಲಿನ ಒಳಗೆ ಅವಳಿಗೆ ಅವಶ್ಯಕವಾದ ಹಳೇ ಚಾಪೆ, ಹೊದಿಕೆ, ಬಟ್ಟೆ, ಕನ್ನಡಿ, ಕಸಬರಿಗೆ, ಸೀಮೆಎಣ್ಣೆ ದೀಪ, ತಂಬಿಗೆ, ಲೋಟ, ತಟ್ಟೆ ಇತ್ಯಾದಿಗಳನ್ನು ಇಡಲಾಗುತ್ತದೆ. ಮೈ ನೆರೆದ ಹುಡುಗಿ ಮನೆಯಲ್ಲಿ ಓಡಾಡುವರನ್ನು ಮುಟ್ಟುವಂತಿಲ್ಲ. ಇವಳ ಮೇಲ್ವಿಚಾರಣೆಗಾಗಿ ಅಂದರೆ ನೀರೆರೆಯಲು, ಆಹಾರ ಪತ್ಯೆಗಳನ್ನು ನೋಡಲು ಅದೇ ಸಮುದಾಯದ ಹಿರಿಯ ಹೆಂಗಸರಲ್ಲಿ ಒಬ್ಬಳು ವಹಿಸಿರುತ್ತಾರೆ. ಋತುಮತಿಯಾದ ಹುಡುಗಿಯನ್ನು ಒಂಬತ್ತು ದಿನಗಳವರೆಗೆ ಗುಡಿಸಿಲಿನಲ್ಲಿಯೇ ಇರಿಸಲಾಗುತ್ತದೆ. ಒಂಬತ್ತನೇ ದಿನದಲ್ಲಿ ಹುಡುಗಿಗೆ ಸ್ನಾನ ಮಾಡಿಸಲಾಗುತ್ತದೆ. ಇದನ್ನು 'ಮುಟ್ಟು ನೀರು ಎರೆಯುವುದು' ಎಂದು ಕರೆಯುತ್ತಾರೆ. ನೀರೆರೆದ ನಂತರ ಹಸಿರು ಮರಕ್ಕೆ (ಬೇವಿನ ಮರ ಇಲ್ಲವೆ ಜಾಲಿಮರ) ಪೂಜೆ ಮಾಡಿ, ಕೈ ಮುಗಿಸಿ ವಾಸದ ಮನೆ ಒಳಗೆ ಕರೆತರಲಾಗುತ್ತದೆ. ಒಂಬತ್ತನೇ ದಿನವೇ ಹುಡುಗಿಯನ್ನು ಪ್ರತ್ಯೇಕವಾಗಿ ಇಡಲು ತಯಾರಿಸಿದ್ದ ಗುಡಿಸಿಲನ್ನು ಹುಡುಗಿಯ ತಂದೆ ತಾಯಿಯರು ನಾಶಗೊಳಿಸುತ್ತಾರೆ. ಕುಲ ಪಂಚಾಯಿತಿಯ ನಿಯಮದಂತೆ, ಹುಡುಗಿ ಋತುಮತಿಯಾದ ವಿಷಯವನ್ನು ತಮ್ಮ ಸಮುದಾಯದ ಜನರಿಗೆ ತಿಳಿಸಬೇಕು.

ಮದುವೆ:

ವಿವಾಹದಲ್ಲಿ ಗಂಡಿಗೆ ಹೆಣ್ಣನ್ನು ನೋಡುವ, ನಿಶ್ಚಯಿಸುವ ಕಾರ್ಯವನ್ನು ಮನೆಯ ಹಿರಿಯರೇ ಮಾಡುತ್ತಾರೆ. ಸಾಮಾನ್ಯವಾಗಿ ಹೆಣ್ಣನ್ನು ತಮ್ಮ ಹತ್ತಿರದ ರಕ್ತ ಸಂಬಂಧಿಗಳಲ್ಲಿ ನೋಡುವುದು ಹೆಚ್ಚು. ಹಿರಿಯರು ಮಾತು ಮುಗಿಸಿದರೆ ಹೆಣ್ಣು-ಗಂಡು ಒಪ್ಪಲೇ ಬೇಕು. ಒಪ್ಪುತ್ತಾರೆ. ಈ ಸಮುದಾಯದ ಮತ್ತೊಂದು ವಿಶೇಷವೆಂದರೆ, ವರನು ವಿವಾಹ ಮೊದಲು ಒಂದು ತಿಂಗಳು ಕನ್ಯೆದವರ ಮನೆಯಲ್ಲಿ ಇರಬೇಕು. ವಿವಾಹವಾದ ನಂತರವೂ ವರ ಕನ್ಯೆಯ ಮನೆಯಲ್ಲಿ ಸುಮಾರು ನಾಲ್ಕು ತಿಂಗಳು ಇರಬೇಕು. ಈ ಸಂದರ್ಭದಲ್ಲಿ ವರನಾದವನು, ವಧುವಿನ ತಂದೆ-ತಾಯಿಗಳ ವಿಶ್ವಾಸವನ್ನು ಗಳಿಸಬೇಕು. ಅಳಿಯನಾದವನು ಈ ವಿಶ್ವಾಸ ಸಂಬಂಧವನ್ನು ಗಳಿಸಲು ವಿಫಲನಾದರೆ, ಆತನಿಗೆ ತನ್ನ ಮಗಳನ್ನು ಕೊಡುವುದಿಲ್ಲ ಎನ್ನಬಹುದು ಅಥವಾ ಹುಡುಗಿಯೇ ಗಂಡನನ್ನು ಒಲ್ಲೆ ಎನ್ನಬಹುದು. ಆದರೆ ಮದುವೆಗೆ ಗಂಡಿನವರು ಖರ್ಚುಮಾಡಿದ ಹಣವನ್ನು ಸಂಪೂರ್ಣವಾಗಿ ಹೆಣ್ಣಿನ ಕಡೆಯವರು

ಕಡ್ಡಾಯವಾಗಿ ಸಂದಾಯ ಮಾಡಬೇಕು. ಬಿಡುಗಡೆ ಆದ ನಂತರ ಹುಡುಗಿಯನ್ನು ಬೇರೆ ಹುಡುಗನಿಗೆ 'ಉಡುಕಿ' ಎಂದು ಮಾಡಿಕೊಡುತ್ತಾರೆ. ಗಂಡು ಮದುವೆಯಾದ ನಂತರ ಹೆಂಡತಿ ಬೇಡವೆಂದರೆ, ಅವರ ಸೀರೆ ಸೆರಗಿಗೆ ಎರಡು ರೂಪಾಯಿ ಕಟ್ಟಿ ಬಂದರೆ ತಾಳಿ ಹರಿದು ಬಿದ್ದಂತೆ. ಹರೆಯದಲ್ಲಿಯೇ ಗಂಡನನ್ನು ಕಳೆದುಕೊಂಡರೆ, ಹೆಣ್ಣು ಮತ್ತೊಂದು ಮದುವೆ ಆಗುವ ಪದ್ಧತಿ ಇದೆ. ಆದರೆ ಮೊದಲಿನ ಮದುವೆಯಂತೆ ವಿಜೃಂಭಣೆಯಿಂದ ರಾಜಾರೋಷವಾಗಿ ನಡೆಯುವುದಿಲ್ಲ. ರಾತ್ರಿ ವೇಳೆಯೇ ಮದುವೆ (ಸೀರುಡಿಕೆ) ಮಾಡಿಸುವುದುಂಟು. ಉಳಿದಂತೆ ಮದುವೆಯ ಎಲ್ಲಾ ಸಂಪ್ರದಾಯಗಳು ಹಿಂದೂ ಧರ್ಮದಂತೆ ಜರುಗುತ್ತವೆ.

ಬಾಲ್ಯ ವಿವಾಹ ಕ್ರಮ:

ಮಗು ಹೊಟ್ಟೆಯಲ್ಲಿ ಇರುವಾಗಲೇ ಹೆಣ್ಣು ಹುಟ್ಟಿದರೆ ನನ್ನ ಮಗನಿಗೆ ಕೊಡಬೇಕು ಎಂಬ ಮಾತು ಪಡೆಯುವುದುಂಟು. ಹೆಣ್ಣು ಹುಟ್ಟಿದ ನಾಲ್ಕಾರು ವರ್ಷಗಳಲ್ಲಿ ವೀಳ್ಯವನ್ನು ಹಂಚಿ ಖಾಯಂ ಮಾಡುತ್ತಾರೆ. ಬಾಲ್ಯದಲ್ಲಿಯೇ ಖಾಯಂ ಮಾಡಿಕೊಂಡ ಹೆಣ್ಣನ್ನು 8–10 ವರ್ಷದ ವಯಸ್ಸಿನಲ್ಲಿಯೇ ಮದುವೆ ಮಾಡುತ್ತಾರೆ. ಇದನ್ನೇ ಬಾಲ್ಯ ವಿವಾಹ ಎಂದು ಕರೆಯುವರು. ಸಾಮಾನ್ಯವಾಗಿ ಹೆಣ್ಣು ಮೈ ನೆರೆಯುವ ಪೂರ್ವದಲ್ಲಿಯೇ ವಿವಾಹ ಕಾರ್ಯ ಪೂರೈಸಿಬಿಡುತ್ತಾರೆ. ಹೆಣ್ಣಿನ ಕಡೆಯವರಿಗೆ ಮದುವೆಯ ಯಾವ ಖರ್ಚುಗಳು ಇರುವುದಿಲ್ಲ.

ಬಹುಪತ್ನಿತ್ವ:

ಮದುವೆಯಾಗಿ ಮೂರ್ನಾಲ್ಕು ವರ್ಷಗಳಲ್ಲಿ ಮಕ್ಕಳಾಗದಿದ್ದರೆ ಅಥವಾ ಹೆಂಡತಿ ಬಂಜೆ ಎಂದು ಕಂಡುಬಂದಲ್ಲಿ ಮಕ್ಕಳನ್ನು ಪಡೆಯುವ ಉದ್ದೇಶದಿಂದ ಮತ್ತೊಂದು ಮದುವೆ ಆಗಬಹುದು. ಹೀಗೆ ಒಬ್ಬನು ಒಬ್ಬಳಿಗಿಂತ ಹೆಚ್ಚು ಜನ ಸ್ತ್ರೀಯರನ್ನು ಮದುವೆಯಾಗಲು ಅವರಲ್ಲಿ ಅವಕಾಶವಿದೆ. ಆದರೆ ಈ ಸ್ವಾತಂತ್ರ್ಯ ಸ್ತ್ರೀಯರಿಗಿಲ್ಲ. ಇವರು ಸಂತಾನೋತ್ಪತ್ತಿಯ ವಿಷಯದಲ್ಲಿ ತುಂಬಾ ನಿಷ್ಠರಾಗಿರುವುದು ಕಂಡುಬರುತ್ತದೆ. ಇವರಲ್ಲಿ ಗಂಡು, ಹೆಣ್ಣು ಎಂಬ ಭೇದವಿಲ್ಲ. ಹೆಚ್ಚಾಗಿ ಹೆಣ್ಣು ಮಗು ಹುಟ್ಟಿದರೆ ಸಂತೋಷದಿಂದ ಸ್ವೀಕರಿಸುತ್ತಾರೆ.

ತೆರ:

ವಧು ನೋಡುವ ಸಂದರ್ಭದಲ್ಲಿ ನಡೆಯುವ ಈ ಮಾತುಕತೆಗಳು ಗಂಡು ಹೆಣ್ಣಿನವರ ಪರಸ್ಪರ ಕೂಡು ಕೊಳ್ಳುವ ಬಗ್ಗೆಯೇ ಇರುತ್ತವೆ. ಇವರಲ್ಲಿ ಗಂಡಿನ ಕಡೆಯವರು ವಧುವಿನ ತಂದೆ ತಾಯಿಗಳಿಗೆ 150 ರೂಪಾಯಿಗಳ ತೆರವನ್ನು ನೀಡಬೇಕಾಗುತ್ತದೆ. ಗಂಡಿನವರು ವಧುವಿಗಾಗಿ ಸೀರೆ, ಬಿಳಿಸೀರೆ, ಬೆಂಡೋಲಿ, ಮಾಂಗಲ್ಯ, ಚೈನು, ಕಡಗ, ಕಾಲುಂಗರ, ಸೊಂಟದ ಪಟ್ಟಿ, ಕೈ ಕಡಗ ಇತ್ಯಾದಿಗಳನ್ನು ಹಿರಿಯರ ಸಮ್ಮುಖದಲ್ಲಿ ಕೊಡಬೇಕು. ಮದುವೆಯ ಖರ್ಚು ಪ್ರತಿಯೊಂದು ಗಂಡಿನವರೇ ಭರಿಸಬೇಕಾಗುತ್ತದೆ. ಇವರಲ್ಲಿ ವರದಕ್ಷಿಣೆ ಪದ್ಧತಿ ಇಲ್ಲದಿರುವುದು ಗಮನಾರ್ಹವಾಗಿದೆ.

ದುರುಗಮುರಗಿಯರ ಪ್ರಚಲಿತ ಸಾಮಾಜಿಕ ಸ್ಥಿತಿಗತಿಗಳು:

ದುರುಗಮುರಗಿಯರು ಇಂದಿಗೂ ಅಸಮಾನತೆ ಮತ್ತು ಅಸ್ಪೃಶ್ಯತೆಯ ನೋವುಗಳನ್ನು ಅನುಭವಿಸುತ್ತಿದ್ದಾರೆ. ಇತರೆ ಸಮುದಾಯದವರಂತೆ ಮುಕ್ತವಾಗಿ ಜೀವನ ನಡೆಸಲು ಆಗುತ್ತಿಲ್ಲ. ಒಳಗೊಳಗೆ ಸಾಮಾಜಿಕ ಹಿಂದುಳಿಯುವಿಕೆ ಅವರಿಗೆ ನೋವಾಗಿ ಕಾಡುತ್ತಿದೆ. ಅನ್ಯ ಸಮಾಜಗಳು ಇವರಿಂದ ಕೇವಲ ಮನೋರಂಜನೆ ಪಡೆಯುತ್ತಾರೆ ವಿನಃ ಅವರ್‍ಯಾರು ಕೂಡ ತಮ್ಮವರೆಂಬ ಮನೋಭಾವವನ್ನು ಹೊಂದಿರುವುದಿಲ್ಲ.

ಅಮಾಯಕರಾದ ದುರುಗಮುರುಗಿಯರು ಮುಗ್ಧರು, ಸೌಮ್ಯ ಸ್ವಭಾವದ ನಿರುಪದ್ರವಿಗಳು, ಮೋಸಗಾರರಲ್ಲ, ಕಪಟಿಗಳಲ್ಲ, ಊರ ಮಂದಿಯನ್ನು ರೋಗ-ರುಜುನಿಗಳಿಂದ ಕಾಯುವವರಾಗಿರುವುದರಿಂದ, ಊರ ಜನರಿಗೆ ಬಹಳ ಬೇಕಾದವರಾಗಿದ್ದು, ಪ್ರಿಯರಾಗುತ್ತಾರೆ. ದುರುಗಮುರುಗಿಯರ ಸತ್ಯ, ಸಾಹಸ, ಕಲೆ, ಮುಗ್ಧತೆ, ವಿಶ್ವಾಸ, ನಂಬಿಕೆ, ಪ್ರಾಮಾಣಿಕತೆ, ಸಹನೆ ಮೊದಲಾದವುಗಳು ಮಾನವ ಸಮುದಾಯ ಸುಖ ಮತ್ತು ನೆಮ್ಮದಿಯಿಂದ ಬದುಕಲು ಮಾರ್ಗದರ್ಶಿಯಾಗಿವೆ. ದುರುಗಮುರುಗಿಯರಲ್ಲಿರುವ ಕೆಲವು ಅನಿಷ್ಟ ಪದ್ಧತಿಗಳನ್ನು ತೊಡೆದು ಹಾಕಲು ಸಂಘ, ಸಂಸ್ಥೆ ಹಾಗೂ ಸರಕಾರಗಳು ಪ್ರಯತ್ನಿಸಬೇಕಾಗಿದೆ. ಆ ಮುಖಾಂತರ ಅವರನ್ನು ಆಧುನಿಕ ಜಗತ್ತಿಗೆ ಸಿದ್ಧಗೊಳಿಸುವ ಕ್ರಿಯೆಯಲ್ಲಿ ತೊಡಗಬೇಕಾಗಿದೆ. ಅಂದರೆ ಸಮಾಜದ ಮುಖ್ಯವಾಹಿನಿಗೆ ತರಬೇಕಿದೆ. ದುರುಗಮುರುಗಿಯರ ಆರ್ಥಿಕ ಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಮೊದಲೆಲ್ಲಾ ಅವರಿಗೆ ಬಿಕ್ಷಾಟನೆಗೆ ಹೋದಾಗ ಸಾಕಷ್ಟು ಕಾಳು ಕಡಿ, ಹಳೆಯ ಬಟ್ಟೆ, ದೇವತೆಗೆ ಬೆಳ್ಳಿಯ ವಸ್ತುಗಳನ್ನು ಕೊಡುತ್ತಿದ್ದರು. ಆ ಮುಖಾಂತರ ಅವರ ಆರ್ಥಿಕ ಸ್ಥಿತಿ ಸುಧಾರಿಸುತ್ತಿತ್ತು. ಇತ್ತೀಚೆಗೆ ಅವುಗಳೆಲ್ಲವು ಕಡಿಮೆಯಾಗುತ್ತಿವೆ. ಕೆಲವು ಕಡೆ ಏನನ್ನೂ ಕಾಣಿಕೆ ಹಾಕದೇ ಕಳುಹಿಸುವ ಸ್ಥಿತಿಗಳಿವೆ. ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗಿ ಕೂಲಿಕೆಲಸ, ಕಟ್ಟಡ ಕೆಲಸ, ಸಣ್ಣಪುಟ್ಟ ವ್ಯಾಪಾರ, ಹಮಾಲಿ ಕೆಲಸ, ಹೋಟೆಲಿನಲ್ಲಿ ಕಪ್ಪುಬಸಿ ತೊಳೆಯುವ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಕೆಳಗಿನ ಕೋಷ್ಟಕದ ಮೂಲಕ ದುರುಗಮುರುಗಿ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಅಂದಾಜು ಮಾಡಬಹುದು. ಇಂದಿಗೂ ಈ ಸಮುದಾಯದಲ್ಲಿ 300ಕ್ಕೂ ಅಧಿಕ ಸಂಖ್ಯೆಯ ಜನರು ಭಿಕ್ಷಾಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕೂಲಿ ಮಾಡುವವರ ಸಂಖ್ಯೆಯೂ ಹೆಚ್ಚಿರುವುದು ಕಂಡುಬರುತ್ತದೆ.ಸರ್ಕಾರಿ ನೌಕರಿಯಂತು ಇಲ್ಲವೇ ಇಲ್ಲ. ಕೇವಲ ಐದು ಮಂದಿ ಖಾಸಗಿ ನೌಕರಿಯಲ್ಲಿರುವುದು ವಕ್ತೃಗಳು ನೀಡಿದ ಮಾಹಿತಿ ಮೂಲಕ ಗೊತ್ತಾಯಿತು. ತಮ್ಮ ಜೀವನ ನಿರ್ವಹಣೆಗಾಗಿ ಬೇರೆ ವೃತ್ತಿಗಳನ್ನು ಅವಲಂಬಿಸಿರುವುದನ್ನು ಕೋಷ್ಟಕದಲ್ಲಿ ನೋಡಬಹುದು.

ಕೋಷ್ಟಕ-24

ಕೆಲಸಗಳಲ್ಲಿ ತೊಡಗಿಕೊಂಡಿರುವ ಹಾವೇರಿ ಜಿಲ್ಲೆಯ ದುರುಗಮುರುಗಿಯರ ಪ್ರಮಾಣ:

ಕ್ರಸಂ.	ಕೆಲಸದ ವಿವರಗಳು	ಪುರುಷ	ಸ್ತ್ರೀ	ಒಟ್ಟು
01	ಭಿಕ್ಷಾಟನೆ	154	147	301
02	ಕೃಷಿ	28	20	48
03	ಕೂಲಿ	149	140	289
04	ಸಣ್ಣ ವ್ಯಾಪಾರ	13	03	16
05	ಖಾಸಗಿ ನೌಕರಿ	05	–	05
06	ಇತರೆ ಕೆಲಸ (ಗಾರೆ ಕೆಲಸ, ಹಮಾಲಿ) ರಪೇರಿ, ವರ್ಕ್ಸ್, ರದ್ದಿ ಸಂಗ್ರಹ, ಗ್ಯಾರೇಜ್ ಇತ್ಯಾದಿ)	90	87	177
	ಒಟ್ಟು	**439**	**397**	**836**

ಅರೆ ಅಲೆಮಾರಿಗಳ ಚಾರಿತ್ರಿಕ ಬೆಳವಣಿಗೆ ಎಷ್ಟು ಸಂಕೀರ್ಣವೋ ಅವುಗಳ ಅಭಿವೃದ್ಧಿ ಸಾಧಿಸುವ ಮಾರ್ಗವೂ ಅಷ್ಟೇ ಸಂಕೀರ್ಣವಾಗಿರುತ್ತದೆ. ದುರುಗಮುರುಗಿ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳೆಂದರೆ ಬಡತನ, ವಸತಿ, ಮೀಸಲಾತಿ, ಆಹಾರ ಸಮಸ್ಯೆ, ಸರಕಾರದ ಯೋಜನೆಗಳ ಕುರಿತ ಅಜ್ಞಾನ, ಶೈಕ್ಷಣಿಕ ಸಮಸ್ಯೆ ಇತ್ಯಾದಿಗಳು. ಈ ಎಲ್ಲಾ ಸಮಸ್ಯೆಗಳನ್ನು ಹೊಂದಿರುವ ಇವರು ಸಮಾಜದ ಚಾರಿತ್ರಿಕ ವಿಕಾಸದ ಯಾವುದೋ ಹಂತದಲ್ಲಿ ನಿಶ್ಚಿತ ಆರ್ಥಿಕ ಸಂಪನ್ಮೂಲಗಳನ್ನು ಕಳೆದುಕೊಂಡು ಶಾಶ್ವತವಾಗಿ ಅಲೆಮಾರಿಗಳಾದ ದುರುಗಮುರುಗಿಯರ ಸಂಕೀರ್ಣ ಬದುಕು, ಮೇಲಿನ ಜಟಿಲ ಸಮಸ್ಯೆಗಳಿಗೆ ಕಾರಣವಾಗಿದೆ. ವರ್ತಮಾನದಲ್ಲಿ ಸರಕಾರ ರೂಪಿಸುವ ಯಾವ ಯೋಜನೆಗಳು ಸಾರ್ಥಕ ರೀತಿಯಲ್ಲಿ ಇವರಿಗೆ ತಲುಪುತ್ತಿಲ್ಲ. ಇದಕ್ಕೆ ಕಾರಣ ಶಿಕ್ಷಣದ ಕೊರತೆ, ಸರಕಾರ ಹಾಗೂ ಇನ್ನಿತರೆ ಸಾಮಾಜಿಕ ಸಂಘಟನೆಗಳು ಇವರ ವಿಕಾಸ ಯೋಜನೆಯಡಿ ಗಮನ ಹರಿಸದಿರುವುದು. ಜೊತೆಗೆ ಸರಕಾರದ ಯೋಜನೆಗಳು ಪ್ರತಿ ಹಂತದಲ್ಲೂ ರಾಜಕೀಯ ಮಧ್ಯ ಪ್ರವೇಶದಿಂದಾಗಿ, ಇಲ್ಲವೇ ಅನುಷ್ಠಾನದಲ್ಲಿರುವ ಲೋಪಗಳಿಂದಾಗಿ ಈ ಬಗೆಯ ಸಮುದಾಯಗಳನ್ನು ತಲುಪುತ್ತಿಲ್ಲ. ಇವರಿಗೆ ಊಟ, ವಸತಿ, ಸೌಲಭ್ಯವುಳ್ಳ ಶಾಲೆಗಳನ್ನು ನಿರ್ಮಿಸಿ, ಅವರ ಶೈಕ್ಷಣಿಕ, ಹಾಗೂ ವೃತ್ತಿಗಳ ಮೇಲೆ ಗ್ರಾಮೋದ್ಯೋಗ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವ ಅವಶ್ಯಕತೆಯಿದೆ. ಜೊತೆಗೆ ಸಂಕೀರ್ಣ ಜೀವನ ವಿಧಾನಗಳಿಗೆ ತಲುಪುವಂತಹ ತಜ್ಞಯೋಜನೆಗಳಾಗಿದ್ದು, ಅನುಷ್ಠಾನದ ವಿಧಾನದಲ್ಲಿ ಮಾತೃ ಹೃದಯದ ಮನಸ್ಸಿರಬೇಕಾಗಿರುತ್ತದೆ. ಏಕೆಂದರೆ ಆಧುನಿಕ ಜಗತ್ತಿಗೆ ಬೇಕಾದ ವೇಗ ಮತ್ತು ಪ್ರತಿಭಟಿಸುವ ಧ್ವನಿಗಳು ಇಂತಹ ಅನೇಕ ಸಮುದಾಯಗಳಿಗಿಲ್ಲ.

ಆರ್ಥಿಕ ಪರಿಸ್ಥಿತಿ:

ದುರುಗಮುರುಗಿಯರ ಮೂಲ ವೃತ್ತಿ ಭಿಕ್ಷಾಟನೆ. ಭಿಕ್ಷೆಯನ್ನು ನಂಬಿಕೊಂಡು ಜೀವನ ಮಾಡುತ್ತಿದ್ದಾರೆ ಹಾಗೂ ಕೌದಿ, ಪೊರಕೆ, ದಾರ, ಪಿನ್ನು ಮಾರಾಟ ಮಾಡುತ್ತಲೇ ಜೀವನ ಸಾಗಿಸುತ್ತಾರೆ. ದಿನದ ಒಪ್ಪತ್ತಿನ ಊಟಕ್ಕೂ ಪರದಾಡಬೇಕಾಗಿದೆ. ಇವರಿಗೆ ವ್ಯವಸಾಯ ಮಾಡಲು ಭೂಮಿ ಇಲ್ಲ. ಮೈತುಂಬಾ ಬಟ್ಟೆಗಳಿಲ್ಲ. ಭಿಕ್ಷೆಯಿಂದ ಬಂದಿರುವ ಹಳೇ ಬಟ್ಟೆಗಳನ್ನೇ ಉಪಯೋಗಿಸಿಕೊಳ್ಳುತ್ತಾರೆ. ಏನಾದರೂ ಸಣ್ಣ ಪ್ರಮಾಣದಲ್ಲಿ ವ್ಯಾಪಾರ ಮಾಡೋಣವೆಂದರೆ ಕೈಯಲ್ಲಿ ಹಣವಿಲ್ಲ. ಒಟ್ಟನಲ್ಲಿ ಇವರ ಆರ್ಥಿಕ ಸ್ಥಿತಿ ತೀರಾ ದುರ್ಬಲ ಮತ್ತು ಕೆಳಮಟ್ಟದಲ್ಲಿದೆ. ಹಾವೇರಿ ಜಿಲ್ಲೆಯ ದುರುಗಮುರುಗಿ ಸಮುದಾಯದವರ ಒಟ್ಟು 182 ಮನೆಗಳಲ್ಲಿ 178 ಮನೆಗಳು ಭೂರಹಿತ ಮನೆಗಳಾಗಿವೆ. ಹಾನಗಲ್ ತಾಲೂಕಿನ ಕಾಲ್ವೇಕಲ್ಲಾಪುರ ಮತ್ತು ಶಿಗ್ಗಾಂವ ನ ಕೆಲವು ಮನೆಯವರು ಮಾತ್ರ ಅಲ್ಪ ಪ್ರಮಾಣದ ಭೂಮಿಯನ್ನು ಹೊಂದಿರುವುದು ಕಂಡು ಬರುತ್ತದೆ. (ಕೋಷ್ಟಕ 25 ನೋಡಿರಿ).

ಕೋಷ್ಟಕ–25

ಹಾವೇರಿ ಜಿಲ್ಲೆಯ ದುರುಗಮುರುಗಿ ಸಮುದಾಯದ ತಾಲೂಕು ಮತ್ತು ಗ್ರಾಮವಾರು ಭೂಹಿಡುವಳಿ:

ಕ್ರಸಂ	ತಾಲೂಕು	ಗ್ರಾಮ/ನಗರ	ಒಟ್ಟು ಮನೆಗಳು	ಹೊಂದಿರುವ ಕೃಷಿ ಭೂಮಿ (ಎಕರೆಗಳಲ್ಲಿ)			ಭೂರಹಿತ ಮನೆಗಳು
				ಒಣ	ನೀರಾವರಿ	ಒಟ್ಟು	
01	ಹಾನಗಲ್	ಆಡೂರು	11	–	–	–	11
02	ಹಾನಗಲ್	ಕಾಲ್ವೇ ಕಲ್ಲಾಪುರ	50	04	–	04	47
03	ಹಾನಗಲ್	ನರೇಗಲ್ಲ	08	–	–	–	08
04	ಹಾನಗಲ್	ಬೆಳಗಾಲ ಪೇಟೆ	02	–	–	–	02
05	ಹಾನಗಲ್	ಚಿಕ್ಕಾಂಶಿ ಹೊಸೂರು	01	–	–	–	01
06	ಹಾನಗಲ್	ಬೊಮ್ಮನಹಳ್ಳಿ	02	–	–	–	02
07	ಹಾನಗಲ್	ಹಾನಗಲ್ಲ	04	–	–	–	04
08	ಶಿಗ್ಗಾಂವ	ಶಿಗ್ಗಾಂವ	30	02	–	02	29
09	ಶಿಗ್ಗಂವ	ಲಕ್ಕಿಕೊಪ್ಪ	25	–	–	–	25
10	ಬ್ಯಾಡಗಿ	ಬ್ಯಾಡಗಿ	05	–	–	–	05
11	ಬ್ಯಾಡಗಿ	ಬಡಮಲ್ಲಿ	10	–	–	–	10

12	ಬ್ಯಾಡಗಿ	ಕಾಗಿನೆಲೆ	03	–	–	–	03
13	ಹಿರೇಕೆರೂರು	ಮಾಸೂರು	10	–	–	–	10
14	ಹಿರೇಕೆರೂರು	ರಟ್ಟೀಹಳ್ಳಿ	05	–	–	–	05
15	ರಾಣೇಬೆನ್ನೂರು	ಮೆಡ್ಲೇರಿ	08	–	–	–	08
16	ಸವಣೂರು	ಸವಣೂರು	06	–	–	–	06
17	ಸವಣೂರು	ಹುಲಗೂರು	02	–	–	–	02
	ಒಟ್ಟು		**182**	**06**	–	**06**	**178**

ದೇಶಕ್ಕೆ ಸ್ವಾತಂತ್ರ್ಯ ಬಂದು 68 ವರ್ಷಗಳು ಕಳೆದರೂ ತಮ್ಮ ಮೈಯಿಗೆ ಚಾಟಿ ಹೊಡೆದುಕೊಂಡು, ರಕ್ತ ಸೋರಿಸಿಕೊಳ್ಳುವುದು ತಪ್ಪಲಿಲ್ಲ. ಜೀವನ ಪರ್ಯಂತ ಗುಡಿಸಿಲಿನಲ್ಲಿಯೇ ತಾತ್ಪೂರ್ತಿಕ ಸುಖವನ್ನು ಕಾಣುತ್ತಾ, ಮಕ್ಕಳ ಭವಿಷ್ಯದ ಬಗೆಗೆ ಚಿಂತನೆ ನಡೆಸದಿರುವುದು ಎದ್ದು ಕಾಣುತ್ತದೆ. ದಲಿತ ಸಮುದಾಯಗಳಲ್ಲಿಯೇ ಅತಿ ನಿಕೃಷ್ಟ ಬದುಕು ಸಾಗಿಸುತ್ತಿರುವ ಸಮುದಾಯವಿದು.

ಶೈಕ್ಷಣಿಕ ಪರಿಸ್ಥಿತಿ:

ಹಾವೇರಿ ಜಿಲ್ಲೆಯಲ್ಲಿರುವ ದುರುಗಮುರುಗಿಯರನ್ನು ಸಮೀಕ್ಷೆಗೆ ಒಳಪಡಿಸಿದಾಗ, ತಿಳಿದು ಬಂದ ಮಾಹಿತಿ ಪ್ರಕಾರ, ಈ ಸಮುದಾಯದಲ್ಲಿ ಬೆರಳೆಣಿಕೆಯಷ್ಟು ಮಾತ್ರ ಕೇವಲ ಇಬ್ಬರು ಪದವಿ ಶಿಕ್ಷಣ ಪಡೆದಿರುತ್ತಾರೆ. ಒಬ್ಬ ಮಾತ್ರ ಐ.ಟಿ.ಐ ಶಿಕ್ಷಣ ಪಡೆದಿರುತ್ತಾನೆ. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಪಡೆದವರ ಸಂಖ್ಯೆಯು ತೀರಾ ಕಡಿಮೆಯಿದೆ. ಅಂದರೆ ಶೇಕಡ 8.72ರಷ್ಟು ಪ್ರಮಾಣದಲ್ಲಿದ್ದಾರೆ. ಸಾಕ್ಷರತೆಗೆ ಅರ್ಹರಾದ 711 ಮಂದಿಯಲ್ಲಿ 608 ಮಂದಿ ಅನಕ್ಷರಸ್ಥರಾಗಿದ್ದಾರೆ. ಕಡುಬಡತನದಲ್ಲಿರುವ ಅರೆ–ಅಲೆಮಾರಿಗಳಿಗೆ ಶಿಕ್ಷಣ ಕಲಿಯಲು ಬೇಕಾದ ವಾತಾವರಣ ನಿರ್ಮಾಣವಾಗಿಲ್ಲ. ಆದ್ದರಿಂದ ದುರುಗಮುರಗಿಯರ ನೆಲೆಸುವಿಕೆ ಮತ್ತು ಶಿಕ್ಷಣ, ಜೊತೆ ಜೊತೆಗೆ ನಡೆಸುವುದು ಸೂಕ್ತ. ಇವರು ತಮ್ಮ ಮಕ್ಕಳನ್ನು ಚಿಕ್ಕ ವಯಸ್ಸಿನಲ್ಲಿಯೇ ಭಿಕ್ಷಾಟನೆಗೆ ಕಳುಹಿಸಿ ಬಿಡುತ್ತಾರೆ. ಇದು ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಅಡ್ಡಿಯನ್ನುಂಟುಮಾಡಿದೆ. (ಹೆಚ್ಚಿನ ಮಾಹಿತಿಗಾಗಿ ಕೋಷ್ಟಕ 26 ಗಮನಿಸಬಹುದು).

ಕೋಷ್ಟಕ–26

ಹಾವೇರಿ ಜಿಲ್ಲೆಯ ದುರುಗಮುರುಗಿಯರ ಶೈಕ್ಷಣಿಕ ಸ್ಥಾನಮಾನ:

ಕ್ರ.ಸಂ	ವಿವರಗಳು	ಪುರುಷ	ಸ್ತ್ರೀ	ಒಟ್ಟು	ಶೇಕಡ
01	ಒಟ್ಟು ಜನಸಂಖ್ಯೆ	**439**	**397**	**836**	**100**
02	ಸಾಕ್ಷರತೆಗೆ ಅನರ್ಹರು (4 ವರ್ಷದ ಒಳಗಿನವರು)	65	60	125	14.95
03	ಸಾಕ್ಷರತೆಗೆ ಅರ್ಹರು (4 ವರ್ಷದ ಮೇಲ್ಪಟ್ಟವರು)	374	337	711	85.05
04	ಪ್ರಾಥಮಿಕ /ಮಾಧ್ಯಮಿಕ ಶಿಕ್ಷಣ	33	29	62	8.72
05	ಪ್ರೌಢಶಿಕ್ಷಣ	19	08	27	3.79
06	ಪದವಿಪೂರ್ವ/ಡಿಪ್ಲಮೊ/ಐ.ಟಿ.ಐ)	09	03	12	1.68
07	ಪದವಿ	02	–	02	0.28
08	ಅನಕ್ಷರಸ್ಥರು	311	297	608	85.51

ಸಮುದಾಯ ಸುಧಾರಣೆಗೆ ಕೈಗೊಳ್ಳಬೇಕಾದ ಕ್ರಮಗಳು:

1. ದುರುಗಮುರುಗಿ ಸಮುದಾಯವು ಕಡುಬಡತನದಲ್ಲಿದೆ. ಇವರು ಗುಡಿಸಲು, ಗುಡಾರ, ಟೆಂಟುಗಳಲ್ಲಿ ವಾಸಿಸುತ್ತಿದ್ದಾರೆ. ಇವರ ಎಲ್ಲ ಕುಟುಂಬಗಳಿಗೆ ತಲೆಯ ಮೇಲೊಂದು ಸೂರು ನೀಡಬೇಕಾಗಿದೆ.
2. ದುರುಗಮುರುಗಿಯರನ್ನು ಜನಪದರು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಬುರ್ರ ಬುರ್ರ ಸುಂಕಲಮ್ಮ, ಬುರ್ರ ಮಾರಿಯರ್, ಪೋತರಾಜ, ಪೋತ್ಯಾ, ಉರುಮಿಯರು ಇತ್ಯಾದಿ. ಈಗಾಗಲೇ ಇವರು ಹಾವೇರಿ ಜಿಲ್ಲೆಯಲ್ಲಿ ವಾಲ್ಮೀಕಿ ಜನಾಂಗದ ಹೆಸರಿನಲ್ಲಿ ಪರಿಶಿಷ್ಟ ಪಂಗಡದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತಾರೆ. ಆದರೆ "ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿಯ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದಾರೆ. ಉಳಿದ ಎಲ್ಲಾ ಜಿಲ್ಲೆಗಳಲ್ಲಿ ನೀಡುವುದು ಅಗತ್ಯವಾಗಿದೆ." (ಸಿಂಧೂಳ್ಳು. ಕನ್ನಡ ಪುಸ್ತಕ ಪ್ರಾಧಿಕಾರ. 2008, ಪುಟ.127) ಎಂದು ತಿಳಿಸಿದ್ದಾರೆ. ಒಂದೇ ಸಮುದಾಯಕ್ಕೆ ಸೇರಿದ ಇವರು ಎರಡು ರೀತಿಯ ಜಾತಿ ಪ್ರಮಾಣ ಪತ್ರವನ್ನು ಪಡೆದಿರುವುದು ಕಂಡು ಬರುತ್ತಿದೆ. ಈ ಗೊಂದಲವನ್ನು ನಿವಾರಿಸಬೇಕಿದೆ.
3. ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೂ ಶಿಷ್ಯವೇತನ, ಹಾಸ್ಟೆಲ್, ಇನ್ನಿತರ ಧನಸಹಾಯ ಸೌಲಭ್ಯಗಳನ್ನು ನೀಡಬೇಕಾಗಿದೆ.

4. ಭಿಕ್ಷೆಯಿಂದ ಆಹಾರ ಸೇವನೆ ಮಾಡುತ್ತಿರುವ ಈ ಸಮುದಾಯಕ್ಕೆ ಪಡಿತರ ಚೀಟಿಯನ್ನು ಪ್ರತಿಯೊಂದು ಕುಟುಂಬಗಳಿಗೆ ನೀಡಬೇಕಿದೆ. ಕೆಲವರು ಈಗಾಗಲೇ ಪಡೆದುಕೊಂಡಿದ್ದಾರೆ. (ಹಾವೇರಿ ಜಿಲ್ಲೆಯಲ್ಲಿ).
5. ಇವರು ವಾಸಿಸುವ ಸ್ಥಳಗಳು ಕತ್ತಲಿನಿಂದ ಕೂಡಿರುತ್ತವೆ. ದೀಪ ವ್ಯವಸ್ಥೆ ಇರುವುದಿಲ್ಲ. ಭಾಗ್ಯ ಜ್ಯೋತಿ ದೀಪದ ವ್ಯವಸ್ಥೆ ಕಲ್ಪಿಸಬೇಕಾಗಿದೆ.
6. ವಸತಿ, ನೀರು, ಶೌಚಾಲಯ, ಸಮುದಾಯ ಭವನ, ಅಂಗನವಾಡಿ ಕೇಂದ್ರ, ಸಂಚಾರಿ ಶಾಲೆ, ಸಂಚಾರಿ ಗ್ರಂಥಾಲಯ ಇತ್ಯಾದಿ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕಾಗಿದೆ.
7. ಇವರನ್ನು ಒಕ್ಕಲೆಬ್ಬಿಸುವ ಪ್ರಯತ್ನಗಳು ಭೂ ಮಾಲಿಕರಿಂದ ಮತ್ತು ಸರಕಾರದಿಂದ ಸತತವಾಗಿ ನಡೆಯುತ್ತಿವೆ. ಇದರಿಂದ ತುಂಬಾ ಮಾನಸಿಕ ಹಿಂಸೆಗೊಳಗಾಗುತ್ತಿದ್ದಾರೆ. ಇದನ್ನು ತಕ್ಷಣ ನಿಲ್ಲಿಸಬೇಕಾಗಿದೆ. ಹಾಗೂ ಇವರಿಗೆ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಬೇಕಾಗಿದೆ.
8. ಸ್ವ ಉದ್ಯೋಗ ಕೈಗೊಳ್ಳಲು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾಲದ ಸೌಲಭ್ಯವನ್ನು ಕಲ್ಪಿಸುವುದು ಸೂಕ್ತ. ಇದರಿಂದ ಭಿಕ್ಷಾಟನೆ ಕಡಿಮೆಯಾಗಬಹುದು.
9. ಮಹಿಳೆಯರ ಸಬಲೀಕರಣಕ್ಕಾಗಿ ಇತ್ತೀಚೆಗೆ ಸ್ವ ಸಹಾಯ ಗುಂಪುಗಳು ತುಂಬಾ ನೆರವಾಗುತ್ತಿವೆ. ಈ ನಿಟ್ಟಿನಲ್ಲಿ ಇವರಿಗೆ ಎಲ್ಲಾ ರೀತಿಯ ಸೌಲಭ್ಯವನ್ನು ನೀಡಬೇಕಾಗಿದೆ.
10. ದುರುಗಮುರುಗಿಯರ ಕುಣಿತ, ಹಾಡು, ಪ್ರದರ್ಶನಗಳಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರೋತ್ಸಾಹ ದೊರೆಯುವಂತಾಗಬೇಕು.
11. ನಿರ್ಲಕ್ಷಿತ ವೃದ್ಧರು, ಅಂಗವಿಕಲರು ಹಾಗೂ ವಿಧವೆಯರಿಗೆ ಮಾಸಿಕ ವೇತನ ಕಲ್ಪಿಸಬೇಕಾಗಿದೆ.
12. ಒಟ್ಟಿನಲ್ಲಿ ಈ ಎಲ್ಲಾ ಪರಿಹಾರೋಪಾಯ ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಗಂಭೀರವಾಗಿ ಚಿಂತಿಸಿ, ದುರುಗಮುರುಗಿ ಸಮುದಾಯದ ಸುಧಾರಣೆಗೆ ಸಹಾಯ ಹಸ್ತ ನೀಡಬೇಕಾಗಿದೆ.
13. ಇತ್ತೀಚೆಗೆ ಕರ್ನಾಟಕ ಸರಕಾರ ಜಾರಿಗೆ ತಂದಿರುವ ವಿವಿದ ರೀತಿಯ ಸಾಮಾಜಿಕ ಕಲ್ಯಾಣ ಯೋಜನೆಗಳ ಕುರಿತು ಈ ಸಮುದಾಯದವರಿಗೆ ತಿಳುವಳಿಕೆ ನೀಡುವುದು ಅಗತ್ಯವಾಗಿದೆ.

ಪ್ರಜಾತಂತ್ರದ ಅರವತ್ಮೂರು ವರ್ಷಗಳಲ್ಲಿ ದುರುಗಮುರಗಿ ಸಮುದಾಯವು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಸಾಧಿಸಿರುವುದು ಶೂನ್ಯ ಸಮಾನ ಎಂದರೆ ಆಶ್ಚರ್ಯ ಪಡಬೇಕಿಲ್ಲ. ಇದು ವಾಸ್ತವ. ಇಂದಿಗೂ ಬದುಕಿಗಾಗಿ ಅಲೆಮಾರಿಯ ಜೀವನ ತಪ್ಪಿಲ್ಲ. ಬಹುತೇಕ ಜನರು ಗುಡಾರಗಳಲ್ಲಿ ವಾಸಿಸುತ್ತಿದ್ದಾರೆ. ಭಿಕ್ಷಾ ವೃತ್ತಿಯಿಂದ ಅವಮಾನ

ಮತ್ತು ಅತಂತ್ರದ ಬದುಕು ನಡೆಸುತ್ತಿದ್ದಾರೆ. ಭಾರತದ ಮೂಲ ನಿವಾಸಿಗಳಾದರೂ ಭಾರತದ ಎರಡನೇ ದರ್ಜೆಯ ಪ್ರಜೆಗಳಂತೆ ಕಡೆಗಣಿಸಲ್ಪಟ್ಟಿದ್ದಾರೆ. ಇಡೀ ಬದುಕು ಧಾರ್ಮಿಕ ಭಿಕ್ಷಾವೃತ್ತಿಯಿಂದ ಕಾಲ ಕಳೆಯುತ್ತಿದ್ದಾರೆ. ಇಂದು ಇತರ ಸಮಾಜಗಳಿಗೆ ಮತ್ತು ಸರ್ಕಾರಕ್ಕೆ ದುರುಗಮುರುಗಿ ಸಮಾಜದ ಧಾರ್ಮಿಕ ಭಿಕ್ಷಾವೃತ್ತಿ ಬೇಡವಾಗಿದೆ. ಇದರಿಂದ ಈ ಸಂಪ್ರದಾಯ ಮಾಯವಾಗುವುದರಲ್ಲಿ ಸಂದೇಹವಿಲ್ಲ.

3.10. ಬುಡ್ಗ ಜಂಗಮ ಸಮುದಾಯದ ಸಾಮಾಜಿಕತೆ:

ಬಹುರೂಪಿಗಳನ್ನು ಜನಪದರು ಮತ್ತು ಇತಿಹಾಸಕಾರರು ತಮ್ಮ ಬರವಣಿಗೆಯಲ್ಲಿ ಅವರು ಹಾಕುವ ವೃತ್ತಿ ವೇಷಗಳಿಗೆ ಅನುಗುಣವಾಗಿ ಹಗಲು ವೇಷಗಾರ, ಬೈರಾಗಿ, ಬುಡ್ಗಜಂಗಮ, ಬೀದಿ ಭಾಗವತ ಕಥೆ ಹೇಳುವವರು, ಕೊಂಡಮಾಮ, ಶಾಸ್ತ್ರ ಹೇಳುವವರು, ಜಂಗಾಲರು ಇತ್ಯಾದಿ ಹೆಸರುಗಳಿಂದ ಕರೆದಿದ್ದಾರೆ. ಆಯಾ ಪ್ರಾಂತ್ಯಕ್ಕನುಗುಣವಾಗಿ ಕಲಾ ಪ್ರದರ್ಶನ ಮಾಡುವ ಮೇಲ್ಕಂಡ ಕಾಯಕದವರನ್ನು ವಿಭಿನ್ನ ಹೆಸರುಗಳಿಂದ ದಾಖಲಿಸಿರುವುದರಿಂದ ಸಮುದಾಯದ ನಿಜ ಸ್ವರೂಪ ಹೊರಹೊಮ್ಮಲಿಲ್ಲ. ಬುಡ್ಗ ಜಂಗಮರು ಗಟ್ಟಿಮುಟ್ಟಾದ ದೇಹವುಳ್ಳವರು. ಕಪ್ಪು ಮಿಶ್ರಿತ ಎಣ್ಣೆಗಂಪು ಬಣ್ಣ ಅವರದು. ಪುರುಷರಿಗಿಂತ ಸ್ತ್ರೀಯರು ಸಾಮಾನ್ಯವಾಗಿ ಬಿಳುಪಾಗಿರುತ್ತಾರೆ.

ಸಮುದಾಯದ ಹಿನ್ನೆಲೆ ಮತ್ತು ಜನಸಂಖ್ಯೆ:

'ಉದರ ನಿಮಿತ್ಯಂ ಬಹುಕೃತ ವೇಷಂ' ಎಂಬಂತೆ ಹೊಟ್ಟೆ ಪಾಡಿಗಾಗಿ ಒಂದಿಲ್ಲ ಒಂದು ಹೆಸರಿನಲ್ಲಿ ಬದುಕು ಸಾಗಿಸುವುದು ಈ ಸಮುದಾಯಕ್ಕೆ ಸಾಮಾನ್ಯವಾಗಿದ್ದು ಹಲವಾರು ಹೆಸರಿನಿಂದ ಕರೆಸಿಕೊಳ್ಳುತ್ತಾರೆ. ಜೀವನೋಪಾಯಕ್ಕಾಗಿ ಅನಾದಿ ಕಾಲದಿಂದಲೂ ಹಲವಾರು ಮಾರ್ಗಗಳನ್ನು ಅವಲಂಬಿಸುತ್ತಲೇ ಬಂದಿದ್ದಾರೆ. ಹೀಗೆ ಆಹಾರ ಹುಡುಕುವಲ್ಲಿಯೇ ಹಲವು ಕಸಬುಗಳನ್ನು ರೂಢಿಸಿ ಅಳವಡಿಸಿಕೊಂಡಿದ್ದಾರೆ.

ಒಂದೇ ದಿನದಲ್ಲಿ ಹೊಟ್ಟೆ ಪಾಡಿಗಾಗಿ ಹಲವಾರು ವೇಷಗಳನ್ನು ಧರಿಸುವುದರಿಂದ ಹಗಲುವೇಷಗಾರರು ಅಥವಾ ಬಹುರೂಪಿಗಳು ಎಂದು ಕರೆಯುತ್ತಾರೆ. ಬಿಡುವಿನ ವೇಳೆಯಲ್ಲಿ ಜನರ ಮನರಂಜನೆಗಾಗಿ ತಂಬೂರಿ ಮತ್ತು ಢಕ್ಕಿ ಹಿಡಿದು ಕಥೆ ಹೇಳುತ್ತಾರೆ. ಆದ್ದರಿಂದ ಈ ಸಮುದಾಯವನ್ನು 'ಬುರ್ರ ಕಥೆಯವರು' ಎಂದು ಹೇಳುತ್ತಾರೆ.

ಬುಡ್ಗ ಜಂಗಮ ಪದ ನಿಷ್ಪತ್ತಿ ಕುರಿತು ಹಲವಾರು ತಜ್ಞರ ಭಿನ್ನಾಭಿಪ್ರಾಯಗಳು ಬೆಳಕಿಗೆ ಬಂದಿವೆ. ಪ್ರೊ. ಬಿ.ರಾಮರಾಜು ಅವರು ತಮ್ಮ 'ತೆಲಗು ಜಾನಪದ ಗೇಯ ಸಾಹಿತ್ಯಂ' ಎಂಬ ಕೃತಿಯಲ್ಲಿ ಬುಡುಗೆ ಎಂಬ ವಾದ್ಯವನ್ನು ನುಡಿಸುತ್ತಾ ಕಥೆ ಹೇಳುವ ಜನರನ್ನು ಬುಡ್ಗ ಜಂಗಾಲು ಎಂದು ಕರೆದಿದ್ದಾರೆ. ಮರವೂರು ಕೋದಂಡರಾಮರೆಡ್ಡಿಯವರ 'ಮಾಂಡಲಿಕ ಪದಕೋಶಂ' ಗ್ರಂಥದಲ್ಲಿ 'ತಂದಾನ' ಕಥೆಗಳನ್ನು ಹೇಳಿ ಜೀವಿಸುವ ಬುರ್ರ ಕಥೆಯವರು

'ಬುಡಗೋಲು' ವಾದ್ಯ ನುಡಿಸಿ ಭಿಕ್ಷೆ ಎತ್ತುವವರೇ 'ಬುಡ್ಗ ಜಂಗಾಲ' ಜಾತಿಯವರು ಎಂದು ತಿಳಿಸಿರುತ್ತಾರೆ.

ಹಗಲುವೇಷ ಹಾಕುವ ಜನರನ್ನು ಬುಡ್ಗ ಜಂಗಾಲು ಎಂದು ಕರೆದಿರುವುದಾಗಿ 'ಹಗಲು ವೇಷದವರ ಸಂಸ್ಕೃತಿ' ಎಂಬ ಪುಸ್ತಕದಲ್ಲಿ ಯಳನಾಡು ಆಂಜನಪ್ಪನವರು ದಾಖಲಿಸಿದ್ದಾರೆ. ಬುಡ್ಗ ಜಂಗಾಲು ಜನ ನಾನಾ ವೇಷಗಳನ್ನು ಹಾಕುವುದರಿಂದ ಇವರನ್ನು ಬಹುರೂಪಿಗಳು ಎಂದು ಗುರುತಿಸಿರುವುದು ಕಂಡು ಬರುತ್ತದೆ. ಬೆಸ್ತರು ಬೇಟೆಯಾಡುವುದರಿಂದ ಒಂದು ಅರ್ಥದಲ್ಲಿ ಇವರನ್ನು ಬೇಡ ಜಂಗಾಲು ಎಂದು ಕರೆದಿರಲೂ ಬಹುದು ಎಂದು ಯಳನಾಡು ಆಂಜನಪ್ಪನವರ ತರ್ಕ.

ಎಡ್ಗರ್ ಥರ್ಸ್ಟನ್ ಅವರು ಹಗಲು ವೇಷದವರನ್ನು ಕುರಿತು 'A class of Telugu beggars who put in disguises (vesham) while begging at the annual festival at Tirupati in honour of the goddess Gangamma, custom requires the people to appear in a different disguise every morning and evening. These disguises include these of a Bairagi, Serpent etc. Mannal of the North Arcot District 1987. Vol v, p 454. ಎಂದು ಬರೆಯುತ್ತಾರೆ. ಥರ್ಸ್ಟನ್ ಪ್ರಕಾರ ತಿರುಪತಿ ಗಂಗಮ್ಮ ಎನ್ನುವ ಹೆಣ್ಣು ದೇವತೆಯ ಗೌರವಾರ್ಥ ನಡೆಯುವ ವಾರ್ಷಿಕ ಜಾತ್ರೆಯಲ್ಲಿ ಪ್ರತಿದಿನ ಬೆಳಿಗ್ಗೆ ಸಂಜೆ ಬೈರಾಗಿ, ಸರ್ಪ ಮುಂತಾದ ವಿಭಿನ್ನ ವೇಷಧರಿಸಿ ಭಿಕ್ಷೆ ಎತ್ತುವ ತೆಲುಗು ಭಿಕ್ಷುಕ ವರ್ಗದವರನ್ನು ಹಗಲು ವೇಷದವರೆಂದು ಗುರುತಿಸುತ್ತಾರೆ.

ಎಲ್.ಜಿ. ಹಾವನೂರ ಮುಖಂಡತ್ವದ 1975ರ ವರಧಿಯ 4ನೆಯ ಭಾಗದಲ್ಲಿ ಹಗಲುವೇಷದವರನ್ನು 'ಬೇಡ (ಬುಡ್ಗ) ಜಂಗಂ' ಎಂದು ಗುರುತಿಸಲಾಗಿದೆ. ಈ ವರದಿಯ ಪ್ರಕಾರ ಸದರಿ ಜನಾಂಗ ಹಿಂದುಳಿದ ಜಾತಿಗೆ ಸೇರಿದ್ದು ಈ ಜನಾಂಗದ ಆರ್ಥಿಕ ಸುಧಾರಣೆ ಮತ್ತು ಮೀಸಲಾತಿಯ ಅವಶ್ಯಕತೆಗಳ ಬಗ್ಗೆ ಒತ್ತಿ ಹೇಳಲಾಗಿದೆ. ಈ ಎಲ್ಲಾ ಹಿನ್ನೆಲೆ ಮತ್ತು ಇದುವರೆಗಿನ ಅಧ್ಯಯನಗಳು ಹಗಲು ವೇಷದ ಈ ಬುಡ್ಗ ಜಂಗಾಲು ಜನಾಂಗವನ್ನು ಬುಡಕಟ್ಟಿಗೆ ಸೇರಿಸಿವೆ (ಯಳನಾಡು ಆಂಜನಪ್ಪ 1993:12). ಇವರು ಅಲೆಮಾರಿಗಳಾಗಿರುವುದರಿಂದ ಇವರನ್ನು ಅಲೆಮಾರಿ ಬುಡಕಟ್ಟು ಎಂದು ಗುರುತಿಸಿರುವುದು ಸೂಕ್ತ ಎನಿಸಿದೆ.

ಈ ಮೇಲಿನ ಎಲ್ಲಾ ತಜ್ಞರ ಅಭಿಪ್ರಾಯಗಳನ್ನು ಅಲ್ಲಗೆಳೆಯುವಂತಿಲ್ಲ. ಅವರು ಬೇಡ ಬುಡ್ಗ ಜಂಗಮ್ ಪದ ನಿಷ್ಪತ್ತಿ ಹಾಗೂ ಅದಕ್ಕೆ ತಮ್ಮದೇ ಆದ ಅರ್ಥ ನೀಡಿರುತ್ತಾರೆ. ಆದಾಗ್ಯೂ ಈ ಪದಗಳು ಸರ್ಕಾರಕ್ಕೆ ಕಗ್ಗಂಟಾಗಿರುವುದನ್ನು ಮರೆಯುವಂತಿಲ್ಲ.

ಭಾರತದಲ್ಲಿ 1881ರ ಜನಗಣತಿಯ ಪ್ರಕಾರ ಬುಡ್ಗ ಜಂಗಮರ ಜನಸಂಖ್ಯೆ 326, ಬಹುರೂಪಿಗಳು 4816, ಭೈರಾಗಿ 1,04,133, ಸನ್ಯಾಸಿ 11,850 ಹೀಗೆ ಬೇರೆ ಬೇರೆ ಹೆಸರುಗಳಲ್ಲೆ ವಿವಿಧ ಪ್ರಾಂತಗಳಲ್ಲಿ ದಾಖಲಾಗಿರುವುದು ಕಂಡುಬುರುತ್ತದೆ. ಬೈರಾಗಿಗಳನ್ನು ಧಾರ್ಮಿಕ ಭಿಕ್ಷುಕರೆಂದು ವಿಂಗಡಿಸಲಾಗಿದೆ. 2001ರ ಜನಗಣತಿಯಲ್ಲಿ ಭಾರತದಲ್ಲಿ ಬೇಡ ಜಂಗಮ ಮತ್ತು ಬುಡ್ಗ ಜಂಗಮರ ಜನಸಂಖ್ಯೆ 1,59468 ದಾಖಲಾಗಿರುವುದು ಗಮನಾರ್ಹ. ಇದರಲ್ಲಿ ಆಂದ್ರ ಪ್ರದೇಶದಲ್ಲಿ ಅತ್ಯಧಿಕ ಅಂದರೆ 73,386, ಕರ್ನಾಟಕದಲ್ಲಿ 54,873 ಮತ್ತು ಮಹಾರಾಷ್ಟ್ರದಲ್ಲಿ 31,206 ಜನ ದಾಖಲಾಗಿರುವರು. ಕರ್ನಾಟಕ ರಾಜ್ಯದ ಬೇಡ ಜಂಗಮ್, ಬುಡ್ಗ ಜಂಗಮ್ ಸಮುದಾಯದ 1991ರ ಜನಗಣತಿಯ ಜನಸಂಖ್ಯೆ 1,31,056, ಆದರೆ 2001ರಲ್ಲಿ ಇವರ ಜನಸಂಖ್ಯೆಯಲ್ಲಿ ಅರ್ಧದಷ್ಟು ಇಳಿಮುಖವಾಗಿರುವುದನ್ನು ಕಾಣಬಹುದು. 1991ರಲ್ಲಿ ವಾಸ್ತವವಾಗಿ ಕರ್ನಾಟಕ ವೀರಶೈವ ಜಂಗಮರು ಇದರಲ್ಲಿ ದಾಖಲಾಗಿದ್ದರು.

ಕರ್ನಾಟಕ ರಾಜ್ಯದಲ್ಲಿ ಬುಡ್ಗ ಜಂಗಮರು ಅಲೆಮಾರಿಗಳಲ್ಲಿಯೇ ಗಣನೀಯ ಪ್ರಮಾಣದಲ್ಲಿ ಇರುವುದನ್ನು ಕಾಣಬಹುದು. 1991 ಮತ್ತು 2001ರ ಜನಗಣತಿಯ ಅಂಕಿ ಅಂಶಗಳಲ್ಲಿ ಏರಿಳಿತಗಳಿರುವುದಕ್ಕೆ ಮುಖ್ಯ ಕಾರಣ ಕರ್ನಾಟಕ ರಾಜ್ಯದಲ್ಲಿಯ ವೀರಶೈವ ಜಂಗಮರು ಬೇಡ ಜಂಗಮರ ಹೆಸರಿನಲ್ಲಿ ದಾಖಲಾಗಿರುವುದಾಗಿದೆ. ಇತ್ತೀಚೆಗೆ ವೀರಶೈವರು ಬೇಡ ಜಂಗಮ ಎಂಬ ಹೆಸರಿನಿಂದ ಹೊರಬರುತ್ತಲಿರುವುದರಿಂದ ಈ ಜನಸಂಖ್ಯೆಯಲ್ಲಿ ಒಂದು ದಶಕದಲ್ಲಿ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿದೆ. ಕನ್ನಡ ಪುಸ್ತಕ ಪ್ರಾಧಿಕಾರದ 2007ರ ಸಮೀಕ್ಷೆಯು ನೀಡಿರುವ ವರದಿಯನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಅಲೆಮಾರಿಗಳಾಗಿರುವುದರಿಂದ ಸಮೀಕ್ಷೆಯಲ್ಲಿ ಹಲವು ಕುಟುಂಬಗಳು ದಾಖಲಾಗದೆ ಇರುವುದು ಸಾಧ್ಯವಿದೆ. ಸಮೀಕ್ಷೆಯಂತೆ ರಾಜ್ಯದಲ್ಲಿ ಬಹುರೂಪಿಗಳ ಒಟ್ಟು ಜನಸಂಖ್ಯೆ 24,132. ಇವರಲ್ಲಿ ಪುರುಷರು 12,207 ಹಾಗೂ ಮಹಿಳೆಯರು 11,925 ಇದ್ದಾರೆ. ಒಟ್ಟು ಕುಟುಂಬಗಳ ಸಂಖ್ಯೆ 4,935 ಎಂದು ವರದಿಯ ಮೂಲಕ ತಿಳಿದು ಬಂದಿದೆ.

ಬುಡ್ಗ ಜಂಗಮರು ಮೊದಲಿಂದಲೂ ಅಲೆಮಾರಿಗಳಾಗಿದ್ದು, ಇಂದು ಅರೆ ಅಲೆಮಾರಿಗಳಾಗಿ ಕರ್ನಾಟಕದ ಸುಮಾರು 20 ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಅತಿ ಹೆಚ್ಚು ಕುಟುಂಬಗಳನ್ನು ಹೊಂದಿರುವ ಜಿಲ್ಲೆಯೆಂದರೆ ಕೋಲಾರ. ನಂತರ ಕ್ರಮವಾಗಿ ಕೊಪ್ಪಳ, ಬಳ್ಳಾರಿ ಮತ್ತು ಬೆಂಗಳೂರು ನಗರ ಜಿಲ್ಲೆಗಳಲ್ಲಿಯೂ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹಾವೇರಿ ಜಿಲ್ಲೆಯಲ್ಲಿಯೂ ಸುಮಾರು 915 ಜನಸಂಖ್ಯೆಯನ್ನು ಹೊಂದಿರುವ 221 ಕುಟುಂಬಗಳಿರುವುದು ಸಮೀಕ್ಷೆಯ ಮೂಲಕ ತಿಳಿದುಬರುತ್ತದೆ (ಕೋಷ್ಟಕ 27 ಗಮನಿಸಿರಿ).

ಕೋಷ್ಟಕ-27

ಹಾವೇರಿ ಜಿಲ್ಲೆಯ ಬುಡ್ಗ ಜಂಗಮ ಸಮುದಾಯದ ತಾಲೂಕುವಾರು, ಲಿಂಗಾವಾರು ಜನಸಂಖ್ಯೆ:

ಕ್ರಸಂ	ತಾಲುಕು	ಗ್ರಾಮ/ನಗರ	ಒಟ್ಟು ಮನೆಗಳು	ಜನಸಂಖ್ಯೆ		
				ಗಂಡು	ಹೆಣ್ಣು	ಒಟ್ಟು
01	ರಾಣೇಬೆನ್ನೂರು	ತುಮ್ಮಿನಕಟ್ಟೆ	82	168	160	328
02	ರಾಣೇಬೆನ್ನೂರು	ಹಲಗೇರಿ	10	27	23	50
03	ರಾಣೇಬೆನ್ನೂರು	ದೇವರಗುಡ್ಡ	14	39	31	70
04	ಹಾವೇರಿ	ಕನಕಪುರ	28	60	52	112
05	ಹಾವೇರಿ	ಹಾವೇರಿ	18	40	35	75
06	ಹಾನಗಲ್	ಮುದ್ದಿನಕೊಪ್ಪ	15	32	28	60
07	ಹಾನಗಲ್	ನರೇಗಲ್	04	11	09	20
08	ಹಾನಗಲ್	ಹಾನಗಲ್	50	104	96	200
		ಒಟ್ಟು	**221**	**481**	**434**	**915**

ನೆಲೆಗಳು:

ಕರ್ನಾಟಕದ ಸುಮಾರು 20 ಜಿಲ್ಲೆಗಳಲ್ಲಿ ಕಂಡುಬರುವ ಬಹುರೂಪಿಗಳನ್ನು ಈ ಸಂಶೋಧನೆಯಲ್ಲಿ ಅಳವಡಿಸಿಕೊಂಡಿಲ್ಲ. ಕಾರಣ ನನ್ನ ಅಧ್ಯಯನ ಕ್ಷೇತ್ರ ಹಾವೇರಿ ಜಿಲ್ಲೆಗೆ ಸೀಮಿತವಾದ್ದರಿಂದ, ಈ ಜಿಲ್ಲೆಯಲ್ಲಿರುವ ಬಹುರೂಪಿಗಳನ್ನು ಯಾದೃಚ್ಛಿಕ ನಮೂನೆ ಮೂಲಕ ಆಯ್ಕೆ ಮಾಡಿಕೊಳ್ಳಲಾಗಿದೆ. ಅದರಂತೆ ಈ ಅಧ್ಯಯನಕ್ಕೆ, ಜಿಲ್ಲೆಯಲ್ಲಿನ ವಿವಿಧ ತಾಲುಕುಗಳ ಹಳ್ಳಿಗಳಲ್ಲಿರುವ ಹಗಲು ವೇಷದವರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ. ಅದಕ್ಕೊಸ್ಕರ ಹಾವೇರಿ ಜಿಲ್ಲೆಯ ರಾಣೇಬೆನ್ನೂರು ತಾಲೂಕಿನ ತುಮ್ಮಿನಕಟ್ಟೆ, ಹಲಗೇರಿ, ದೇವರಗುಡ್ಡ, ಹಾವೇರಿಯ ಕನಕಾಪುರ, ಹಾನಗಲ್ ತಾಲೂಕಿನ ಮುದ್ದಿನಕೊಪ್ಪ, ನರೇಗಲ್ ಮತ್ತು ಹಾನಗಲ್ ನಗರವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಹಾವೇರಿ ಜಿಲ್ಲೆಯ ಬುಡ್ಗ ಜಂಗಮ ಸಮುದಾಯದ ನೆಲೆಗಳು



ಪ್ರಾಚೀನತೆ:

ಕರ್ನಾಟಕದಲ್ಲಿ ಕಂಡುಬರುವ ಈ ಸಮುದಾಯದ ಪ್ರಾಚೀನತೆಯನ್ನು ಕಂಡುಕೊಳ್ಳುವ ಅವಶ್ಯಕತೆ ಇದೆ. ಬಹುರೂಪಿಗಳಿಗೆ ಸಂಬಂಧಿಸಿದ ಅನೇಕ ವಿಷಯಗಳನ್ನು ಪ್ರಾಚೀನ ಗ್ರಂಥಗಳಲ್ಲಿ ಕಾಣುತ್ತೇವೆ. ವಡ್ಡಾರಾಧನೆ, ಧರ್ಮಾಮೃತ ಭರತೇಶ ವೈಭವ, ಕುಮಾರವ್ಯಾಸ ಭಾರತ, ಕವಿರಾಜಮಾರ್ಗ ಮುಂತಾದ ಅನೇಕ ಕೃತಿಗಳಲ್ಲಿ ಉಲ್ಲೇಖಿಸಿರುವುದನ್ನು ನೋಡಿದರೆ, ವೇಷಗಾರರ ಜನಾಂಗ 9ನೇಯ ಶತಮಾನದಲ್ಲಿ ಅಸ್ತಿತ್ವದಲ್ಲಿರಬಹುದು ಎಂದು ಊಹಿಸಬಹುದಾಗಿದೆ. ವಡ್ಡಾರಾಧನೆ, ಧರ್ಮಾಮೃತ, ವಚನ ಸಾಹಿತ್ಯದಲ್ಲಿ ಉಲ್ಲೇಖಿಸಿದಂತೆ ವೇಷಗಾರಿಕೆ ಇದು ಜನಸಾಮಾನ್ಯರಿಗೆ ಸಂಬಂಧಪಟ್ಟಿದ್ದು ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಜಾತಿಗಾರರು ಮನರಂಜನೆಗಾಗಿ ವೇಷ ಧರಿಸುತ್ತಿದ್ದರು. ಕಾರಹುಣ್ಣಿಮೆಯಲ್ಲಿ ವೇಷಗಾರರು ಪರಗಣದ ವೇಷ ಧರಿಸುತ್ತಿದ್ದರೆಂದು ಚನ್ನಬಸವಣ್ಣ ವಚನಗಳಲ್ಲಿ ಹೇಳಿದ್ದಾನೆ. ಅಂಬಿಗರ ಚೌಡಯ್ಯ ತನ್ನ ವಚನದಲ್ಲಿ 'ಡೊಂಬ ಹಗರಣವ ಹೊತ್ತು ಬಂದಂತೆ' ಎಂದು ಚಿತ್ರಿಸಿದ್ದಾನೆ. ಅಂಬಿಗರ ಚೌಡಯ್ಯ ಬಹುರೂಪಿ ಜನಾಂಗಕ್ಕೆ ಸೇರಿದವನೆಂದು ಮತ್ತು ಆತನೇ ಈ ಜನಾಂಗದ ಮೂಲ ಪುರುಷನೆಂಬ ನಂಬಿಕೆ ಇಂದಿಗೂ ಆ ಸಮುದಾಯದವರಲ್ಲಿ ಬಲವಾಗಿದೆ.



ಸಮುದಾಯದ ಕುರಿತು ವಿದ್ವಾಸರ ಅಭಿಪ್ರಾಯಗಳು:

Nomades in the Mysore City ಎಂಬ ಕೃತಿಯಲ್ಲಿ ಮಾನವ ಶಾಸ್ತ್ರಜ್ಞ ಪಿ.ಕೆ. ಮಿಶ್ರ ಅವರು ಅಲೆಮಾರಿ ಬುಡ್ಗ ಜಂಗಮರ ವಿವರಗಳನ್ನು ಮಲಕು ಜಂಗಮರ ಶೀರ್ಷಿಕೆಯಲ್ಲಿ 1971ರಲ್ಲಿ ಹೀಗೆ ದಾಖಲಿಸಿದ್ದಾರೆ.

'ಕ್ಷೇತ್ರ ಅಧ್ಯಯನದಲ್ಲಿ ಏಳು ಮಲಕು ಜಂಗಮಕ್ಕೆ ಸೇರಿದ ಗುಂಪುಗಳನ್ನು ಬೇಟಿ ಮಾಡಲಾಯಿತು. ಅವರನ್ನು ಬೇಟಿಯಾದಾಗ "ನಾವು ಬಾವಾಜಿ" ಈ ಅಲೆಮಾರಿ ಮೂಲಕ ಜಂಗಮ ಅಥವಾ ಬಾವಾಜಿಗಳು ಎಂದು ತಿಳಿಯಿತು. ತೆಲುಗು, ಮರಾಠಿ ಮಾತನಾಡುವ ಇವರು ಮಾಂಸಹಾರಿಗಳು. 1967ರ ಜೂನ್‌ನಲ್ಲಿ ಮತ್ತೊಂದು ಅಲೆಮಾರಿ ಗುಂಪನ್ನು ಭೇಟಿಯಾದಾಗ ಅವರು ಸಿರಿಜಂಗಾಲ, ಬುಡ್ಗ ಜಂಗಮ, ಶಿವ ಜಂಗಮರು ಎಂದು ಹೇಳಿಕೊಂಡಿರುತ್ತಾರೆ. ಭಿಕ್ಷೆ ಬೇಡುವುದರ ಜೊತೆಗೆ ಭಗವತಿ ಭಜನೆ ಮಾಡುತ್ತಿದ್ದರು.'[53]

'ತೆಲುಗು ದೇಶದಲ್ಲಿ 'ಬೇಡ' ಎಂದೂ ಕರೆಯಲಾಗುತ್ತಿದೆ. ಎಡ್ಗರ್ ಥರ್‌ಸ್ಟನ್, ಅವರು (1909) ತಮ್ಮ 'Castes and Tribes of Southern India' ಎನ್ನುವ ಪ್ರಥಮ ಸಂಪುಟದಲ್ಲಿ ಬೇಡರನ್ನು 'ಬೇಡ ಜಂಗಾಲು' ಎಂದು ಕರೆಯಲಾಗಿದೆ.'[54] ಎಡ್ಗರ್ ಥರ್‌ಸ್ಟನ್ ಅವರು ದಕ್ಷಿಣ ಭಾರತದ ಜಾತಿಗಳು ಮತ್ತು ಬುಡಕಟ್ಟುಗಳನ್ನು ಕುರಿತು ನಡೆಸಿರುವ ಅಧ್ಯಯನಗಳು ಹಾಗೂ ಬರೆದಿರುವ ಗ್ರಂಥಗಳು ಸಂಶೋಧನಾ ಕಾರ್ಯಗಳಿಗೆ ಅತ್ಯಮೂಲ್ಯವಾದ ಕೊಡುಗೆಗಳಾಗಿವೆ.

'ಬುಡಕಟ್ಟು ಜನಾಂಗವೆಂದು ಗುರುತಿಸಲ್ಪಟ್ಟ ಈ ಕಲಾವಿದರನ್ನು 1951ರ ಜನಗಣತಿಯಲ್ಲಿರುವ ಈ ಬುಡ್ಗ ಜಂಗಾಲು ಜನಾಂಗವನ್ನು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಸೇರಿಸಲಾಗಿದೆ. 1956ರ ಆಂಧ್ರ ಸರ್ಕಾರದ ಒಂದು ಆದೇಶದಲ್ಲಿ ಈ ಬೇಡ ಜಂಗಮರನ್ನು ತೆಲಂಗಾಣದಲ್ಲಿ ಮಾತ್ರ ಇದ್ದಾರೆಂದು ದಾಖಲಿಸಲಾಗಿದೆ. 1976ರ ವರದಿಯಲ್ಲಿ ಇದೇ ಜನಾಂಗವನ್ನು ಆಂಧ್ರದಾದ್ಯಂತ ವಿರಳವಾಗಿದ್ದಾರೆಂದು ತಿಳಿಸಿದ್ದಾರೆ.'[55]

'ಕೆ.ಎಸ್. ಸಿಂಗ್ ಅವರ ಪುಸ್ತಕ 'People of India' ದ ರಾಷ್ಟ್ರೀಯ ಸರಣಿ ಪುಸ್ತಕ ಎರಡರಲ್ಲಿ ಮಾನವ ಕುಲ ವಿವರಣಾ ವಿಜ್ಞಾನದ ಹಿನ್ನೆಲೆಯಲ್ಲಿ ಪರಿಶಿಷ್ಟ ಬೇಡ ಜಂಗಮ್, ಬುಡ್ಗ ಜಂಗಮ್ ಸಮುದಾಯದ ಬಗ್ಗೆ ಮಹತ್ವಪೂರ್ಣ ಮಾಹಿತಿಯನ್ನು ಅದರ ಪುಟ ಸಂಖ್ಯೆ 202–207ರಲ್ಲಿ ನೀಡಲಾಗಿದೆ. ಅದರಲ್ಲಿ ಬೇಡ ಜಂಗಮ್, ಬುಡ್ಗ ಜಂಗಮ್ ಸಮುದಾಯದವರು ಆಂಧ್ರದ ಕರಾವಳಿ, ರಾಯಲ್ ಸೀಮಾ ಮತ್ತು ತೆಲಂಗಾಣ ಪ್ರದೇಶದಲ್ಲಿ ಹರಡಿದ್ದೂ, 1981ರ ಜನಗಣತಿಯ ಪ್ರಕಾರ ಅವರ ಜನಸಂಖ್ಯೆ 12,024 ಎಂದು ದಾಖಲಿಸಿದ್ದಾರೆ. ಅವರು ಕರ್ನಾಟಕದ ಬೀದರ, ಗುಲಬರ್ಗಾ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿಯೂ ಪಸರಿಸಿರುವುದಾಗಿ ಹಾಗೂ ಅವರು ಬಲಿಷ್ಟ ವೀರಶೈವ ಲಿಂಗಾಯತ

ಧರ್ಮದ ಜಂಗಮರಿಗಿಂತ ಭಿನ್ನವಾಗಿರುವರೆಂದು ತಿಳಿಸುತ್ತಾ ಅವರ ಜನಸಂಖ್ಯೆಯನ್ನು 1981ರ ಜನಗಣತಿಯ ಪ್ರಕಾರ 3,035 ಎಂದು ಸ್ಪಷ್ಟಪಡಿಸಿದ್ದಾರೆ.'[56]

ಬುಡ್ಗ ಜಂಗಮ ಸಮುದಾಯ ಅಧ್ಯಯನದ ಅಗತ್ಯತೆ:

1. ಕರ್ನಾಟಕದಲ್ಲಿರುವ ಬಹುರೂಪಿ, ಭೈರಾಗಿ, ಹಗಲುವೇಷ, ಬುರ್ರಕಥೆ ಮುಂತಾದ ಹೆಸರುಗಳಿಂದ ಜಾತಿ ಪ್ರಮಾಣ ಪತ್ರಗಳನ್ನು ಪಡೆದು ಕಷ್ಟ ಅನುಭವಿಸುತ್ತಿದ್ದಾರೆ. ಆದ್ದರಿಂದ ಇವರೆಲ್ಲರಿಗೂ ಯಾವುದೇ ರೀತಿಯ ತೊಂದರೆಯಾಗದಂತೆ ಬುಡ್ಗ ಜಂಗಮ್ ಜಾತಿ ಪತ್ರಗಳನ್ನು ನೀಡಬೇಕಾಗಿದೆ.
2. ಬುಡ್ಗ ಜಂಗಮರ ಕಲೆಗಳ ಪುನರುಜ್ಜೀವನಕ್ಕೆ ವಿಶೇಷ ಕಾರ್ಯ ಯೋಜನೆಗಳನ್ನು ರೂಪಿಸುವುದು ಮತ್ತು ವಯಸ್ಸಾದ ಕಲಾವಿದರಿಗೆ ಮಾಶಾಸನ ನೀಡಬೇಕು.
3. ತಮ್ಮ ಮೂಲ ವೃತ್ತಿಗಳನ್ನು ಬಿಟ್ಟಿರುವವರಿಗೆ ಇತರೆ ವೃತ್ತಿಗಳನ್ನು ಕೈಗಳ್ಳಲು ಸರ್ಕಾರದಿಂದ ಆರ್ಥಿಕ ಸಹಾಯ ನೀಡುವುದು.
4. ಕಲಾವಿದರಿಗೆ, ವ್ಯಾಪಾರಿಗಳಿಗೆ ಮತ್ತು ಅಲೆಮಾರಿ ಅಭ್ಯರ್ಥಿಗಳಿಗೆ ಎಲ್ಲಾ ಕಡೆ ನಿರ್ಭೀತಿಯಿಂದ ಸಂಚರಿಸಿ ಉತ್ತಮ ಜೀವನ ರೂಪಿಸಿಕೊಳ್ಳಲು ಸರ್ಕಾರದಿಂದ ಗುರುತಿನ ಪತ್ರ ಹಾಗೂ ಇನ್ನಿತರ ಸೌಲಭ್ಯಗಳನ್ನೂ ನೀಡಬೇಕಿದೆ.
5. ಸಮುದಾಯದಲ್ಲಿ ಕನಿಷ್ಟ ಶಿಕ್ಷಣ ಪಡೆದ ಅಭ್ಯರ್ಥಿಗಳಿಗೆ ವಿಶೇಷ ಯೋಜನೆಯಡಿಯಲ್ಲಿ ಆರ್ಥಿಕ ಸೌಲಭ್ಯಗಳನ್ನು ನೀಡಬೇಕಾಗಿದೆ.

ದೇಶಕ್ಕೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಲ್ಲಿ ಅಲೆಮಾರಿ ಬುಡ್ಗಜಂಗಮರು ತಮ್ಮ ಸಂವಿಧಾನ ಬದ್ಧ ಹಕ್ಕುಗಳ ಬಗ್ಗೆ ಎಂದೂ ಯೋಚಿಸದೇ ಇರುವುದು ಒಂದು ದೊಡ್ಡ ವಿಪರ್ಯಾಸ. ಇಂದು ಬಹುರೂಪಿಗಳು ತಮ್ಮ ಅಸ್ತಿತ್ವ ಉಳಿಸಿಕೊಳ್ಳಬೇಕೆಂದರೆ, ಸಂಘಟಿತರಾಗಬೇಕು, ರಕ್ಷಣೆಗಾಗಿ ಸ್ವ-ಉದ್ಯೋಗ ಸೃಷ್ಟಿಮಾಡಿಕೊಳ್ಳಬೇಕು. ಭಿಕ್ಷಾಟನೆಯೇ ನಮ್ಮ ಉದ್ಯೋಗವೆಂದು ತಿಳಿಯಬಾರದು. ಅಲೆಮಾರಿತನಕ್ಕೆ ಅಂತ್ಯ ಹಾಡಿ ಕಡ್ಡಾಯವಾಗಿ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು. ಈ ನಿಟ್ಟಿನಲ್ಲಿ ಅವರಿಗೆ ಸರ್ಕಾರ ಮತ್ತು ಸ್ಥಳೀಯ ಸಂಘಟನೆಗಳ ನೆರವು ಅವರಿಗೆ ಅವಶ್ಯವಾಗಿ ನೀಡಬೇಕಿದೆ. ಬುಡ್ಗ ಜಂಗಮರು ಪ್ರಸ್ತುತ ಸಮಾಜದಲ್ಲಿ ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಯಾವ ಸ್ಥಿತಿಯಲ್ಲಿದ್ದಾರೆ ಎಂಬುದನ್ನು ತಿಳಿದುಕೊಳ್ಳವುದಕ್ಕಾಗಿ ಈ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

ಬುಡ್ಗ ಜಂಗಮರ ಸಾಮಾಜಿಕ ವ್ಯವಸ್ಥೆ ಮತ್ತು ಜೀವನ ವಿಧಾನ:

ಈ ಸಮುದಾಯವು ಪುರುಷ ಪ್ರಧಾನ ಸಮಾಜವನ್ನು ಅನುಸರಿಸುತ್ತಿದ್ದು ಕುಟುಂಬದ ಹಿರಿಯ ಮನೆಯ ವ್ಯಕ್ತಿಯೇ ಯಜಮಾನ. ಆದರೆ ಇಲ್ಲಿ ಹೆಚ್ಚಾಗಿ ವಿಭಕ್ತ ಕುಟುಂಬಗಳನ್ನು ಕಾಣುತ್ತೇವೆ. ಸರ್ಕಾರ ಕಲ್ಯಾಣ ರಾಜ್ಯದ ಗುರಿಯನ್ನು ಹೊಂದಿದ್ದರೂ ಈ ಸಮುದಾಯ ಮಾತ್ರ

ಇನ್ನೂ ಗುಡಾರಗಳಲ್ಲಿ ವಾಸಿಸುತ್ತಿದೆ. ಆದರೆ ಇತ್ತೀಚಗೆ ಸರಕಾರಿ ಜಮೀನಿನಲ್ಲಿ ಆಶ್ರಯ ಯೋಜನೆಯಡಿ ಕೆಲವರಿಗೆ ನಿವೇಶನ ಮತ್ತು ಇನ್ನೂ ಕೆಲವರಿಗೆ ಆಶ್ರಯ ಮನೆಗಳನ್ನು ಸರಕಾರ ನೀಡಿದೆ. ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುವ ಈ ಸಮುದಾಯವು ಒಂದೇ ರೀತಿಯ ಬೆಡಗು ಮತ್ತು ಸಂಪ್ರದಾಯಗಳನ್ನು ಅನುಸರಿಸುತ್ತಿದ್ದು, ವೈವಾಹಿಕ ಸಂಬಂಧಗಳನ್ನು ಹೊಂದಿವೆ. ಆದರೆ ಈಗ ಅವರ ಮೂಲ ಸಂಸ್ಕೃತಿಯನ್ನು ಮರೆತು ಸ್ತ್ರೀ–ಪುರುಷರು ಕೂಲಿ–ನಾಲಿಯಿಂದ ಜೀವನ ಸಾಗಿಸಿದರೆ, ಚಿಕ್ಕ ಮಕ್ಕಳು ಮತ್ತು ಮುದುಕರು ಇನ್ನೂ ಭಿಕ್ಷಾಟನೆಯಲ್ಲೇ ತೊಡಗಿದ್ದಾರೆ.

ಆರ್ಥಿಕ ವ್ಯವಸ್ಥೆಯು ಸಾಮಾಜಿಕ ವ್ಯವಸ್ಥೆಯನ್ನು ರೂಪಿಸುತ್ತದೆ. ಯಾವ ಸಮುದಾಯದ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿರುತ್ತದೆಯೋ ಆ ಸಮುದಾಯ ಆಧುನಿಕರಣಗೊಂಡು ಬೆಳೆಯುತ್ತಿರುತ್ತದೆ. ಯಾವ ಸಮುದಾಯ ಆರ್ಥಿಕವಾಗಿ ಬಹಳ ಹಿಂದುಳಿದಿರುತ್ತದೆಯೋ ಆ ಸಮುದಾಯ ತನ್ನ ಹಳೆಯ ಪದ್ಧತಿಯನ್ನು ಉಳಿಸಿಕೊಂಡೆ ಸಾಗುತ್ತಿರುತ್ತದೆ. ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಒಂದು ಸಮುದಾಯ ನೀಡುವಷ್ಟು ಮೂಲ ಸಂಸ್ಕೃತಿಯ ಲಕ್ಷಣಗಳನ್ನು ಆರ್ಥಿಕವಾಗಿ ಮುಂದುವರೆದ ಸಮುದಾಯ ನೀಡಲು ಸಾಧ್ಯವಿಲ್ಲ. ಏಕೆಂದರೆ ಆರ್ಥಿಕ ಅಭಿವೃದ್ಧಿಯ ಪದರುಗಳ ಕೆಳಗೆ ಅದರ ಮೂಲ ಸಂಸ್ಕೃತಿಯ ಹಲವಾರು ಲಕ್ಷಣಗಳು ಮರೆಯಾಗಿರುತ್ತವೆ. ಆದರೆ ಈ ಬುಡ್ಗಜಂಗಮ ಸಮುದಾಯವು ಆರ್ಥಿಕವಾಗಿ ತೀರ ಹಿಂದುಳಿದಿದ್ದು ತನ್ನ ಸಂಸ್ಕೃತಿಯನ್ನು ಹಂತಹಂತವಾಗಿ ಕಳೆದುಕೊಳ್ಳುತ್ತಿದೆ. ಏಕೆಂದರೆ ಈ ಸಮುದಾಯ ಮೂಲತಃ ಗ್ರಾಮೀಣ ಜನತೆಗೆ ಮನೋರಂಜನೆ ನೀಡುವುದಕ್ಕಾಗಿ ಹಲವಾರು ರೀತಿಯ ವೇಷಗಳನ್ನು ಹಾಕಿ ಜನತೆಯಿಂದ ಹಣ ಪಡೆದು ಜೀವನ ಸಾಗಿಸುತ್ತಿದ್ದವು. ಸ್ತ್ರೀ–ಪುರುಷ ಇಬ್ಬರು ರಾತ್ರಿಯ ವೇಳೆಯಲ್ಲಿ ವಿವಿಧ ರೀತಿಯ ಕಥೆಗಳನ್ನು ಹೇಳುತ್ತಾ–ಹಾಡುತ್ತಾ ಮನೋರಂಜನೆ ನೀಡಿ ಹಣ ಪಡೆದುಕೊಳ್ಳುತ್ತಿದ್ದರು. ಆದರೆ ಈಗ ಸಮೂಹ ಮಾಧ್ಯಮದ ಜಗತ್ತಿನಲ್ಲಿ ಈ ಸಮುದಾಯದ ಕಥೆಗಳನ್ನು ವೇಷಗಳನ್ನು ಹಾಗೂ ಹಾಡುಗಳನ್ನು ಕೇಳುವವರ ಸಂಖ್ಯೆ ತೀರ ಕಡಿಮೆಯಾಗಿದ್ದು ದಿನದಿಂದ ದಿನಕ್ಕೆ ಈ ಸಮುದಾಯ ತನ್ನ ಮೂಲ ಸಂಸ್ಕೃತಿಯನ್ನು ಮರೆತುಬಿಡುತ್ತಿದೆ.

ಬೆಡಗುಗಳು:

ಬುಡ್ಗ ಜಂಗಮರಲ್ಲಿ ಏಕ ಜಾತಿಯ ಬೇರೆ ಬೇರೆ ಪಂಗಡ, ಗುಂಪು, ಬೆಡಗು, ಗೋತ್ರಗಳಿವೆ. ಇವರೆಲ್ಲರ ಅರೆ–ಅಲೆಮಾರಿ ವೃತ್ತಿ, ಪ್ರವೃತ್ತಿ, ರೂಢಿ, ಸಂಪ್ರದಾಯಗಳು ಏಕ ಪ್ರಕಾರವಾಗಿರುವುದರಿಂದ ಇವರೆಲ್ಲ ಒಂದೇ ಮೂಲ ನೆಲೆಗಟ್ಟಿನಿಂದ ಬಂದಿರುವರೆಂಬ ಸ್ಪಷ್ಟ ಕಲ್ಪನೆ ಬರುವುದು. ಇವರಿಗೆ ಊರು ಕೇರಿಗಳೇ ಆಶ್ರಯವಾಗಿರುವುದರಿಂದ ಅವರಂತೆ ಕುಲಗೋತ್ರ, ಪದ್ಧತಿ, ಆಚಾರ ವಿಚಾರಗಳು, ಸಾದೃಶ್ಯ ಸಾಮೀಪ್ಯಗಳನ್ನು ನಾವು ಗುರುತಿಸಿಕೊಳ್ಳಬಹುದಾಗಿದೆಯಾದರೂ ಇವರ ವಿಭಿನ್ನ ಸಂಸ್ಕೃತಿ, ನಾಗರೀಕತೆ, ಸಂಪ್ರದಾಯ

ಹಾಗೂ ರೂಢಿ ಮೂಲಗಳು ವಿಭಿನ್ನ ಮಾದರಿಯಾಗಿರುವುದರಿಂದ, ಬೇರೆ ಸಮುದಾಯದ ಅಧ್ಯಯನಕ್ಕಿಂತ ತೀರಾ ಭಿನ್ನರಾಗಿ ಕಾಣಸಿಗುತ್ತಾರೆ.

'ನಮ್ಮಲ್ಲಿ ಹಡಗುಗಳಿಲ್ಲದಿದ್ದರೂ ಬೆಡಗುಗಳಿವೆ' ಎಂಬ ಅಭಿಮಾನವುಳ್ಳವರಾಗಿರುವರು. ಜಾತಿಗಿಂತ-ಬೆಡಗಿಗೆ ಬೆಲೆ ಕೊಡುತ್ತಾರೆ. ಜಾತಿಯಾದರೂ ಬಿಟ್ಟಾರು; ಗೋತ್ರ ಬಿಡಲಾರರು. ಬೆಡಗಿನ ಮುಖಾಂತರ ತಮ್ಮ ವಿವಾಹ ಸಂಬಂಧವನ್ನು ಗುರುತಿಸಿಕೊಳ್ಳುವರು.

ಹಗಲು ವೇಳೆಯಲ್ಲಿ ಮಾತ್ರ ವಿವಿಧ ವೇಷಗಳನ್ನು ಹಾಕಿಕೊಂಡು ಮನೆ ಮನೆಯ ಮುಂದೆ ಪ್ರದರ್ಶಿಸಿ ಭಿಕ್ಷೆ ಬೇಡುವುದು ಹಾಗೂ ಬಿಡುವಿನ ವೇಳೆಯಲ್ಲಿ ಬೇಟೆಯಾಡುವುದನ್ನೇ ಮುಖ್ಯ ಕಸುಬಗಳನ್ನಾಗಿ ಮಾಡಿಕೊಂಡು ವರ್ಷವಿಡೀ ಊರೂರು ಅಲೆಯುವ ಹಗಲುವೇಷದವರನ್ನು ತಮ್ಮನ್ನು ಬುಡ್ಗಜಂಗಾಲು, ಬುಡ್ಗಜಂಗಂ, ಜಂಗಾಲು, ಬಹುರೂಪಿ, ಬೇಟೆಗಾರರು ಮುಂತಾದ ಹೆಸರುಗಳಿಂದ ಕರೆದುಕೊಳ್ಳುತ್ತಾರೆ. ಇವರಲ್ಲಿ ಬಹುಪಾಲು ಅಂದರೆ ಸ್ವಲ್ಪ ಹೆಚ್ಚು ಕಡಿಮೆ ಎಲ್ಲರೂ ತಮ್ಮನ್ನು ಬುಡ್ಗ ಜಂಗಾಲು ಸಮಾಜದವರು ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ಊರ ಹೊರಗೆ ಗುಂಪಾಗಿ ಗುಡಾರಗಳಲ್ಲಿ ತಾತ್ಕಾಲಿಕವಾಗಿ ವಾಸಿಸುವ ಈ ಬುಡ್ಗಜಂಗಾಲು ಸಮುದಾಯದಲ್ಲಿ ಸುಮಾರು 155 ಮನೆತನಗಳು ಇದುವರೆಗೆ ಪತ್ತೆಯಾಗಿವೆ. ಇವುಗಳನ್ನು ವಂಶಗಳೆಂದು ಅಥವಾ ಬೆಡಗು/ಗೋತ್ರಗಳೆಂದು ಕರೆದುಕೊಳ್ಳುತ್ತಾರೆ. ಹಾವೇರಿ ಜಿಲ್ಲೆಯಲ್ಲಿ ಕಂಡುಬರುವ ಬೆಡಗುಗಳೆಂದರೆ ಕೊಂಡ್ರು, ಮೋತಿ, ಮಿರಾಲಿ, ವಿಭೂತಿ, ಮಹಂತು, ಈರ್ನಾಲ್, ರುದ್ರಾಕ್ಷಿ, ಇಪ್ಪೋಳ್, ತ್ರುಸಾಟಿ, ಭಂಡಾರಿ, ಶ್ರೀಶೈಲಗಣಾಚಾರಿ, ಕೊಂಡಪಲ್ಲಿ, ಶರನಾಟೋಳ್, ಅಶ್ವಾಗೋಳ್, ಸಂಕ್ರೋಳ್, ಮಾದಿಗೋಳ್ ಮುಂತಾದವರು. ಈ ಬೆಡಗುಗಳಲ್ಲಿನ ವ್ಯತ್ಯಾಸಗಳನ್ನು ವಿವಾಹದ ಸಂದರ್ಭಗಳಲ್ಲಿ ಹೆಚ್ಚಾಗಿ ಪರಿಗಣಿಸುತ್ತಾರೆ.

ವೇಷ ಭೂಷಣಗಳು:

ಬುಡ್ಗಜಂಗಮರು ಗಟ್ಟಿಮುಟ್ಟಾದ ದೇಹವುಳ್ಳವರು. ಕಪ್ಪು ಮಿಶ್ರಿತ ಎಣ್ಣೆಗೆಂಪು ಬಣ್ಣ ಅವರದು. ಪುರಷರಿಗಿಂತ ಸ್ತ್ರೀಯರು ಬಿಳುಪಾಗಿರುತ್ತಾರೆ.

ಬುಡ್ಗ ಸಮುದಾಯದ ಪುರುಷರು ತೊಡುವ ಉಡುಪು ವಿಶಿಷ್ಟವಾದದ್ದು ಅವರು ಧರಿಸುವ ಉಡುಗೆ ತೊಡುಗೆ ಹಾಗೂ ರುಮಾಲುಗಳನ್ನು ನೋಡಿದರೆ ಇವರು ಬುಡ್ಗರು ಎಂದು ಮನವರಿಕೆಯಾಗುತ್ತದೆ. ಗಂಡಸರು ಮೊಣಕಾಲು ಮೇಲೆ ಪಂಚೆ ತೊಟ್ಟು ಅದರ ಮೇಲ್ಭಾಗದಲ್ಲಿ ನಿಲುವಂಗಿ ತೊಟ್ಟಿರುತ್ತಾರೆ. ತಲೆಗೆ ಕೆಂಪು-ಹಳದಿ ಬಣ್ಣದ ಕಂಬಿ ಕಂಬಿಯಂತೆ ಗೆರೆಗಳಿರುವ ಸವಸ್ತ್ರವನ್ನು ಸುತ್ತುತ್ತಾರೆ. ವಯಸ್ಸಾದವರು ಖಾಕಿ ಬಣ್ಣದ ಕೋಟು ಧರಿಸುತ್ತಾರೆ. ಕೈಯಲ್ಲಿ ಕಡಗ, ರುದ್ರಾಕ್ಷಿ ಮತ್ತು ಕಿವಿಯಲ್ಲಿ ಮುರುವು ಧರಿಸುತ್ತಾರೆ. ಕೆಲವು ಪುರುಷರು ಉದ್ದವಾದ ಕೂದಲನ್ನು ಬಿಡುತ್ತಾರೆ.

ಸ್ತ್ರೀಯರು ಕೆಂಪು ಬಣ್ಣದ ಕಂಬಿ ಇರುವ ಸೀರೆಯನ್ನು ತೊಡುತ್ತಾರೆ. ಸೀರೆಯ ಮೇಲ್ಭಾಗದಲ್ಲಿ 'ಕುಪ್ಪಸ' ತೊಡುತ್ತಾರೆ. ಕೈಗೆ ಬಳೆ, ಹಣೆಗೆ ಕುಂಕುಮ, ಮೂಗುತಿ, ತಾಳಿ ಹಾಗೂ ಕಾಲುಂಗರ ಧರಿಸುವ ಸ್ತ್ರೀಯರನ್ನು ಮುತ್ತೈದೆಯರು ಎಂದು ಕರೆಯುತ್ತಾರೆ.

ಪ್ರದರ್ಶನಾತ್ಮಕ ಕಲೆಗಳು:

ಬುಡ್ಗಜಂಗಾಲು ಸಮುದಾಯದವರ ಮುಖ್ಯ ಕಸುಬುಗಳಲ್ಲಿ ವೇಷ ಹಾಕುವುದು ಪ್ರಮುಖವಾದುದು. ಇವರು ಹಗಲು ಸಮಯದಲ್ಲಿ ಹೆಚ್ಚಾಗಿ ವೇಷ ಹಾಕುವುದರಿಂದ 'ಹಗಲು ವೇಷಗಾರರು' ಎಂದು ಹೆಸರಾಗಿದ್ದಾರೆ. ಇವರ ಪ್ರಮುಖ ಪ್ರದರ್ಶನಾತ್ಮಕ ಕಲೆಗಳೆಂದರೆ ಭಸ್ಮಾಸುರ, ಭೀಮ, ಆಂಜನೇಯ, ರಾಮ, ಲಕ್ಷ್ಮಣ, ಸುಗ್ರೀವ, ಅರ್ಧನಾರೀಶ್ವರ, ಲಂಬಾಣಿ, ಪೋಲಿಸ್, ಕಾಡುಪಾಪನ ವೇಷ, ಹೀಗೆ ಸುಮಾರು ನಲವತ್ತು ವಿವಿಧ ವೇಷಗಳನ್ನು ಹಾಕುತ್ತಾರೆ. ಜಾತಿಗೊಂದು ವೇಷ ಹಾಕಿ ಪ್ರದರ್ಶನ ಮಾಡಿರುವ ನಿದರ್ಶನಗಳಿವೆ.

ನ್ಯಾಯ ಪಂಚಾಯಿತಿ:

ಸಮುದಾಯದ ಒಳಜಗಳಗಳನ್ನು ನಿರ್ಣಯಗೊಳಿಸಲು ರಚಿಸಿದ ಒಂದು ವ್ಯವಸ್ಥೆ. ಈ ವ್ಯವಸ್ಥೆಗೆ ಬುಡ್ಗಜಂಗಮರಲ್ಲಿ "ಕುಲಮನ್ಯಾಯ" ಎಂದು ಕರೆಯುತ್ತಾರೆ. ಈ ಕುಲಮನ್ಯಾಯ (ನ್ಯಾಯ ಪಂಚಾಯಿತಿ) ಮಾಡಲು ಅವರದೆ ಆದ ಸಂವಿಧಾನ ನ್ಯಾಯಾಂಗ ರಚನಾ ವ್ಯವಸ್ಥೆ ಇರುತ್ತದೆ. ಈ ಸಮುದಾಯದ ಆಗುಹೋಗುಗಳನ್ನು ಮತ್ತು ನ್ಯಾಯನಿರ್ಣಯಗಳ ಬಗ್ಗೆ ಬಲ್ಲ ವ್ಯಕ್ತಿಯನ್ನು ಎಲ್ಲರೂ ನ್ಯಾಯಧೀಶರೆಂದೇ ಅಂದರೆ (ನ್ಯಾಯಗಾಡು) ಕುಲ ಪೆದ್ದ ಎಂದು ಕರೆಯುತ್ತಾರೆ.

ಚಿಕ್ಕ-ಪುಟ್ಟ ಸಮಸ್ಯೆಗಳು ಇದ್ದರೆ ತಮ್ಮ ಹಂತದಲ್ಲಿಯೇ ಬಗೆಹರಿಸಿಕೊಳ್ಳುತ್ತಾರೆ. ಹೆಚ್ಚು ಗಂಭೀರವಾದ ವಿಷಯಗಳು ಎಂದರೆ ವಿವಾಹ ವಿಚ್ಛೇದನ ಅಥವಾ ತಮ್ಮ ಸಂಪ್ರದಾಯಗಳಿಗೆ ವಿರುದ್ಧವಾಗಿ ನಡೆದುಕೊಂಡರೆ ಆಂಧ್ರದ ಗಡಿಯಲ್ಲಿ ಬರುವ ಗುಡೆಬಲ್ಲರು ತಿಮ್ಮಪ್ಪನ ಜಾತ್ರೆಯಲ್ಲಿ ಸಭೆ ಸೇರಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳುತ್ತಾರೆ.

ಯಾರಾದರೂ ಅಪಚಾರ, ಮಾನಹೀನ ಮಾತಾಡಿದರೆ ದಂಡ ವಿಧಿಸುತ್ತಾರೆ. ಮೆಟ್ಟಿನಿಂದ ಹೊಡೆದರೆ ದಂಡ, ಮೆಟ್ಟಿನಿಂದ ಹೊಡೆಸಿಕೊಂಡವ ಅರ್ಧ ದಂಡ, ಹೊಡೆದವ ದಂಡದ ಅರ್ಧ ಹಣ ಕೊಡುತ್ತಾರೆ. ಬೇರೆ ಜಾತಿ ಮಹಿಳೆಯನ್ನು ವಿವಾಹವಾದರೆ ಕುಲದಿಂದ ಹೊರಹಾಕುತ್ತಾರೆ. ತಮ್ಮ ಗ್ರಾಮದ ಪಂಚರಲ್ಲದೆ ಪರ ಊರಿನ ಪಂಚರನ್ನು ಕರೆಯಿಸಿ ತಪ್ಪಾದವರ ವಿಚಾರ ಮಾಡಿ ತೀರ್ಮಾನ ಕೈಗೊಳ್ಳುವ ಪದ್ಧತಿಯೂ ರೂಢಿಯಲ್ಲಿದೆ.

ಪಂಚಾಯಿತಿಯ ತೀರ್ಮಾನ ಅಂತಿಮವಾದದ್ದು. ಅದನ್ನು ಉಲ್ಲಂಘಿಸಿ ಕೋರ್ಟು, ಕಛೇರಿಗೆ ಹೋದರೂ ಸಮಸ್ಯೆ ಬಗೆಹರಿಯುವುದಿಲ್ಲ. ತಮ್ಮ ಸಮುದಾಯದ ಪಂಚಾಯತಿಯಲ್ಲಿ ಮೂವತ್ತು ಸಾವಿರ ದಂಡ ವಿಧಿಸುವಷ್ಟು ಶಕ್ತಿಯುತವಾಗಿರುತ್ತದೆ. ಅಪರಾಧಿ ಇದನ್ನು

ಒಪ್ಪಿಕೊಳ್ಳದಿದ್ದರೆ ಜಾತಿಯಿಂದ ಬಹಿಷ್ಕಾರ ಹಾಕುತ್ತಾರೆ. ಆದ್ದರಿಂದ ಇವರು ತಮ್ಮ ಜಾತಿಯಿಂದ ಪಂಚಾಯತಿಗೆ ಹೆಚ್ಚಿನ ಗೌರವ ನೀಡುತ್ತಿರುವುದು ಒಂದು ವಿಶಿಷ್ಟ ಲಕ್ಷಣವಾಗಿದೆ.

ಬುಡ್ಗ ಜಂಗಮರ ಆಚರಣೆ ಮತ್ತು ನಂಬಿಕೆಗಳು

ಜನನ:

ಇವರಲ್ಲಿ ಹಲವಾರು ರೀತಿಯ ರೂಢಿಗಳು ಬಳಕೆಯಲ್ಲಿವೆ. ಚೊಚ್ಚಲ ಹೆರಿಗೆಯನ್ನು ಅನುಕೂಲಸ್ಥ ಕುಟುಂಬಗಳು ತವರು ಮನೆಯಲ್ಲಿ ಮಾಡಿಸುತ್ತಾರೆ. ಎಲ್ಲಾ ಸಮುದಾಯದಲ್ಲಿ ಇರುವಂತೆ ಗಂಡು ಮಗು ಜನಿಸಿದರೆ ಸಿಹಿ ಹಂಚುತ್ತಾರೆ. ಮಗು ಜನಿಸಿದ ತಿಂಗಳಲ್ಲಿ ನಾಮಕರಣ ಮಾಡುತ್ತಾರೆ. 3 ತಿಂಗಳಲ್ಲಿ ಜವಳ ಕಾರ್ಯ ನೆರವೇರಿಸುತ್ತಾರೆ. ಇದು ಅವರ ಮೂಲ ಸಂಸ್ಕೃತಿ, ಆದರೆ ಇತ್ತೀಚೆಗೆ ಅವರ ಸಂಸ್ಕೃತಿಯಲ್ಲಿ ಹಲವಾರು ಬದಲಾವಣೆಯನ್ನು ಕಾಣುತ್ತೇವೆ.

ಋತುಮತಿ:

ಈ ಸಮುದಾಯದಲ್ಲಿ ಹೆಣ್ಣು ರಜಸ್ವಲೆಯಾದರೆ ಅವಳಿಗೆ ಪ್ರತ್ಯೇಕ ಬಿಡಾರ ಮಾಡಿಸುತ್ತಾರೆ. ಒಂಬತ್ತು ದಿನಗಳವರೆಗೆ ಅಲ್ಲಿಯೇ ವಾಸಿಸಬೇಕು. ಋತುಮತಿಯಾದ ಕ್ಷಣದಿಂದ ಹುಡುಗಿಯ ಮನೆಯವರಿಗೆ ಹಾಗೂ ರಕ್ತ ಸಂಬಂಧಗಳಿಗೆ ಸೂತಕ ತಲೆದೋರುತ್ತದೆ. ಶುಭಕಾರ್ಯ ನಡೆಯುವ ಹಾಗಿಲ್ಲ ಮತ್ತು ಪೂಜೆ ಕೂಡ ಮಾಡುವ ಹಾಗಿಲ್ಲ. ಋತುಮತಿಯಾದವಳಿಗೆ ಉತ್ತಮ ಆಹಾರವನ್ನು ನೀಡುವರು. ಸುತ್ತಮುತ್ತಲಿನ ತಮ್ಮ ಸಮುದಾಯದವರು ಸಹ ಅವಳಿಗೆ ಸಿಹಿ ಅಡುಗೆ ಮಾಡಿ ತಂದು ಉಣಬಡಿಸುವರು. ಸಾಮಾನ್ಯವಾಗಿ ಇವರಲ್ಲಿ ಐದು ಅಥವಾ ಏಳು ದಿನದಲ್ಲಿ ಸೂತಕ ಕಳೆಯುತ್ತದೆ. ಅಂದು ಗುಡಾರವನ್ನು ಸಾರಿಸಿ, ಗೋಮೂತ್ರ ಸಿಂಪಡಿಸುವರು. ಹುಡುಗಿಗೆ ಸ್ನಾನ ಮಾಡಿಸಿ ಹನುಮಪ್ಪನ ಗುಡಿಗೆ ಹೋಗಿ ಎಣ್ಣೆ ಹಾಕಿ ದೀಪ ಹೊತ್ತಿಸಿ ಬರುತ್ತಾಳೆ. ನಂತರ ಸಾಯಂಕಾಲ ಮಾಂಸದ ಆಹಾರ ಸಿದ್ಧಪಡಿಸಿ ಸುತ್ತ ಮುತ್ತಲಿನ ಕುಲಸ್ತರಿಗೆ ಊಟ ಮಾಡಿಸಿ, ಸರಾಯಿ ಕುಡಿಸಿ ಕಳುಹಿಸಬೇಕು. ಋತುಮತಿಯಾಗುವುದಕ್ಕೆ ಮೊದಲೇ ಮದುವೆ ಆಗಿದ್ದರೆ ಗಂಡಿನ ಕಡೆಯವರು ಎರಡು ಭಾಗ, ಹುಡುಗಿಯ ತಂದೆಯದು ಒಂದು ಭಾಗ ಅಂದಿನ ಖರ್ಚನ್ನು ಭರಿಸಬೇಕು. ಮದುವೆಯಾದ ಮತ್ತು ಮದುವೆಯಾಗದ ಹೆಣ್ಣು ಮಕ್ಕಳು ಸಹ ಮೂರು ದಿನ ಗುಡಾರದ ಹೊರಗಡೆ ಇರಬೇಕು. ಊಟದ ತಾಟು, ತಂಬಿಗೆ ಸಹ ಪ್ರತ್ಯೇಕವಾಗಿರುವವು. ಈ ಅವಧಿಯಲ್ಲಿ ಭಿಕ್ಷೆಗೆ ಹೋಗುವಂತಿಲ್ಲ.

ಮದುವೆ:

ಬುಡ್ಗ ಜಂಗಮರ ಮದುವೆಗಳು ಅತ್ಯಂತ ಸರಳ ರೀತಿಯಲ್ಲಿ ಮೂರು ದಿನ ನಡೆಯುತ್ತವೆ. ಇವರಲ್ಲಿ ಬಾಲ್ಯ ವಿವಾಹ ಪದ್ಧತಿ ಇದೆ. ಹಿಂದಿನ ಕಾಲದಲ್ಲಿ ತೊಟ್ಟಿಲು ಕಟ್ಟಿದಾಗಲೇ ಮದುವೆ ಮಾಡುವ ಸಂಪ್ರದಾಯವಿತ್ತು. ಈಗ ನಾಲ್ಕೈದು ವರ್ಷದ ಮಕ್ಕಳಿಗೆ

ಮದುವೆಮಾಡುತ್ತಾರೆ. ಇವರಲ್ಲಿ ಸಗೋತ್ರ ಸಮುದಾಯದಲ್ಲಿ ವಿವಾಹ ಮಾಡದೆ ವಿಗೋತ್ರ ಸಮುದಾಯದವರೊಂದಿಗೆ ಮಾತ್ರ ವೈವಾಹಿಕ ಸಂಬಂಧ ಬೆಳೆಸುವ ಪದ್ಧತಿ ಇದೆ. ಹಿಂದಿನ ಕಾಲದಿಂದಲೂ ಈ ಸಮುದಾಯದಲ್ಲಿ ಅಕ್ಕನ ಮಗಳು ಅಥವಾ ಮಾವನ ಮಗಳನ್ನು ವಿವಾಹವಾಗುವಂಥಹ ಪದ್ಧತಿ ಇತ್ತು. ಆದರೆ ಈಗ ಸಾಕಷ್ಟು ಬದಲಾವಣೆಯನ್ನು ಕಾಣುತ್ತೇವೆ. ಹುಡುಗನ ತಂದೆ ತಾಯಿಯವರು ಹುಡುಗಿಯನ್ನು ನೋಡಿ ಒಪ್ಪಿಗೆಯಾದ ನಂತರ ಸಮುದಾಯದ ಹಿರಿಯರು ಹಾಗೂ ಮುತ್ತೈದೆಯರು ವಿವಾಹ ನಿಶ್ಚಯ ಸಮಾರಂಭವನ್ನು ಸರಳವಾಗಿ ಮುಗಿಸುತ್ತಾರೆ. ವರದಕ್ಷಿಣೆ ಪದ್ಧತಿ ಇವರಲ್ಲಿ ಇಲ್ಲ.

ಬಹುಪತ್ನಿತ್ವ ಪದ್ಧತಿ ಜಾರಿಯಲ್ಲಿ ಇದ್ದು ವರನ ಮನೆಯಲ್ಲಿ ವಿವಾಹ ಕಾರ್ಯಗಳು ಜರುಗುತ್ತವೆ. ಇಲ್ಲಿ ಇಬ್ಬರ ಮಧ್ಯ ಭಿನ್ನತೆಯು ಕಂಡುಬಂದರೆ, ಅದನ್ನು ಸಮುದಾಯದ ಹಿರಿಯರ ಮುಂದೆ ತಿಳಿಸಬೇಕು. ಒಂದು ವೇಳೆ ಹುಡುಗಿ ತಪ್ಪು ಮಾಡಿದರೆ ಹುಡುಗನಿಗೆ ಮದುವೆಯ ಖರ್ಚು ಕೊಡಬೇಕು. ಹುಡುಗ ತಪ್ಪು ಮಾಡಿದರೆ ಹತ್ತು ಸಾವಿರ ರೂಪಾಯಿಗಳವರೆಗೆ ದಂಡ ಕೊಡಬೇಕು.

ಹೆಂಡತಿ ತೀರಿಕೊಂಡರೆ ಪುರುಷ ಮರುಮದುವೆ ಮಾಡಿಕೊಳ್ಳಬಹುದು. ಅದೇ ರೀತಿ ಗಂಡನನ್ನು ಕಳೆದು ಕೊಂಡ ಸ್ತ್ರೀಗೂ ಮರುಮದುವೆ ಮಾಡಿಕೊಳ್ಳಲು ಅವಕಾಶವಿದೆ.

ದೇವತಾರಾಧನೆ:

ಈ ಸಮುದಾಯದಲ್ಲಿ ಧಾರ್ಮಿಕ ಭಾವನೆ ಕುಲದೈವದ ಪಾತ್ರ ಬಹುಮುಖ್ಯವಾಗಿದೆ. ಇವರ ಕುಲದೈವ ಜಂಬಲಮ್ಮ ಸುಂಕ್ಲಮ್ಮ, ಜಂಬ್ಲಮ್ಮ ಭಂಡಾರದ ಭರಣಿಯಲ್ಲಿರುವಳೆಂದು, ಸುಂಕ್ಲಮ್ಮ ಕುಂಕುಮ ಭರಣಿಯಲ್ಲಿರುವಳೆಂದು ನಂಬಿದ್ದಾರೆ. ಈ ದೇವತೆಗಳನ್ನು ಮನೆಯಲ್ಲಿ ವರ್ಷಕ್ಕೆ ಒಂದು ಸಾರಿ ಮತ್ತು ಮನೆಯಲ್ಲಿ ಮದುವೆ ನಡೆಯುವ ಪ್ರತಿಸಾರಿಯೂ ಆಚರಿಸುತ್ತಾರೆ. ಬುಡ್ಗ ಜಂಗಮರ ಆರಾಧನಾ ಪದ್ದತಿಯಲ್ಲಿ ಎರಡು ವಿಧಗಳಿವೆ. 1. ದೇವತಾರಾಧನೆ 2. ಭೂತಾರಾಧನೆ. ಅವರ ಶಿಷ್ಟ ದೇವತೆಗಳು ಶಿವ ಆಂಜನೇಯ ಸ್ವಾಮಿ, ತಿರುಪತಿ, ವೆಂಕಟರಮಣ, ಗುರುಮೂರ್ತಿ ಸ್ವಾಮಿ.

ಮರಣೋತ್ತರ ಕಾರ್ಯಗಳು:

ಬುಡ್ಗ ಜಂಗಾಲರಲ್ಲಿ ಸತ್ತರೆ, ಸತ್ತ ಊರಿನಲ್ಲಿಯೇ ಅವರನ್ನು ಹೂಳುತ್ತಾರೆ. ಸತ್ತವರ ಆತ್ಮ ಸ್ವರ್ಗಕ್ಕೆ ಹೋಗುತ್ತದೆಂಬ ನಂಬಿಕೆ ಇವರಲ್ಲಿದೆ. ಮೂರನೆಯ ದಿನ ಅವನ ಸಮಾಧಿಯ ಮೇಲೆ ಅವರ ಇಷ್ಟವಾದ ತಿಂಡಿಗಳನ್ನು ಇಟ್ಟಿರುತ್ತಾರೆ. ಅದನ್ನು ಪಿಂಡ ಎಂದು ಕರೆಯುತ್ತಾರೆ. ಅದನ್ನು ಕಾಗೆ ಬಂದು ಬೇಗ ತಿನ್ನದಿದ್ದರೆ ಅವರಿಗೆ ಬದುಕುವ ಆಸೆ ಇನ್ನೂ ಇತ್ತು ಎಂದು ಭಾವಿಸುತ್ತಾರೆ.

ಐದನೇ ದಿನ ದೇವರ ಕಾರ್ಯ ಮಾಡುತ್ತಾರೆ. ಗುಡ್ಡೆಯ ಹತ್ತಿರ ಹೋಗುವುದಿಲ್ಲ. ಅಂದು ರಾತ್ರಿ ಒಂಬತ್ತು ಅಥವಾ ಹತ್ತು ಗಂಟೆಗೆ ಸ್ಮಶಾನಕ್ಕೆ ಹೋಗಿ ಸಮಾಧಿಯ ಹತ್ತಿರ ಒಂದು ಗೂಡು ಮಾಡಿ, ಎಣ್ಣೆ ದೀಪ ಹಚ್ಚಿ, ಹೊಸ ಮೊರದಲ್ಲಿ ಅಕ್ಕಿ, ಬೇಳೆ, ಕೆಂಪು ವಸ್ತ್ರ ಇಟ್ಟು ಎಡೆ ಮಾಡುತ್ತಾರೆ. ಎಡೆಯನ್ನು ಗಣಾಚಾರಿಗೆ ಕೊಡುತ್ತಾರೆ. ಎಲ್ಲರೂ ಗಣಾಚಾರಿಯ ಪಾದ ಮುಟ್ಟಿ ನಮಸ್ಕಾರ ಮಾಡಿ ಸತ್ತವನನ್ನು ಸ್ವರ್ಗಕ್ಕೆ ಕಳಿಸು ಎಂದು ಬೇಡಿಕೊಳ್ಳುತ್ತಾರೆ. ಗಣಾಚಾರಿ ಗಂಟೆಯನ್ನು ಕೈಯಲ್ಲಿ ಹಿಡಿದು, ಅದರ ನಾಲಿಗೆಯನ್ನು ಸಂಬಂಧಿಕರು ಹಿಡಿದು ಕೊಂಡಾಗ ಗಣಾಚಾರಿ ನಿಮ್ಮಾತ ದೇವಲೋಕಕ್ಕೆ ಹೋಗುತ್ತಿದ್ದಾನೆ ನೋಡಿ, ನೋಡಿ ಎಂದು ಆಕಾಶಕ್ಕೆ ಕೈ ಮಾಡಿ ತೋರಿಸುತ್ತಾನೆ. ನಂತರ ಎಲ್ಲರೂ ಬಿಡಾರಗಳಿಗೆ ಬರುತ್ತಾರೆ.


ಬುಡ್ಗ ಜಂಗಮರ ಪ್ರಸ್ತುತ ಸಾಮಾಜಿಕ ಸ್ಥಿತಿಗತಿಗಳು:

ಹಗಲು ವೇಷ ಹಾಕುವ ಬುಡ್ಗ ಜಂಗಾಲು ಜನಾಂಗದ ಇಂದಿನ ಸಾಮಾಜಿಕ ಪರಿಸ್ಥಿತಿ ಬಹುಪಾಲು ಹಿಂದಿನಂತೆಯೇ ಇದೆ. ಹಿಂದಿನಂತೆ ಈಗಲೂ ಈ ಜನ ಬೇರೆ ಬೇರೆ ವೇಷಗಳನ್ನು ಹಾಕಿಕೊಂಡು ವಾಸಿಸುತ್ತಾರೆ ಊರೂರು ಅಲೆಯುತ್ತಾರೆ. ಊರಿನ ಹೊರ ವಲಯದಲ್ಲಿ ಈಗಲೂ ಸುಮಾರು 51 ಮನೆಯವರು ಕೌದಿಯ ಟೆಂಟುಗಳನ್ನು ಹಾಕಿಕೊಂಡು ವಾಸಿಸುತ್ತಿದ್ದಾರೆ. ಗುಡಿಸಿಲಿನ ಮನೆಗಳು 155 ಇದ್ದರೆ, ಹೆಂಚಿನ ಮನೆಗಳು ಕೇವಲ ಎಂಟು ಮಾತ್ರ ಇವೆ. ಮಾಳಿಗೆ ಮನೆ ಒಂದಿದ್ದರೆ ಉಳಿದವರು ಆಶ್ರಯ ಮನೆ ಮತ್ತು ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿದ್ದಾರೆ. (ಕೋಷ್ಟಕ 28ನ್ನು ನೋಡಿರಿ).

ಕೋಷ್ಟಕ–28

ಹಾವೇರಿ ಜಿಲ್ಲೆಯ ಬುಡ್ಗ ಜಂಗಮ ಸಮುದಾಯದವರ ವಾಸದ ಮನೆಯ ಸ್ವರೂಪ:

ಕ್ರ.ಸಂ.	ಮನೆಯ ಸ್ವರೂಪ.	ಸಂಖ್ಯೆ
01	ಟೆಂಟು/ಗುಡಾರ	51
02	ಗುಡಿಸಲು	155
03	ತಗಡು/ಹೆಂಚಿನಮನೆ	08
04	ಮಾಳಿಗೆ/ಆರ್.ಸಿ.ಸಿ	01
05	ಆಶ್ರಯ ಮನೆ	03
06	ಬಾಡಿಗೆ ಮನೆ	03



ಇವರು ಅರೆ ಅಲೆಮಾರಿಗಳಾಗಿರುವುದರಿಂದ ಎಲ್ಲೂ ಶಾಶ್ವತ ನೆಲೆ ನಿಲ್ಲಲು ಸಾಧ್ಯವಾಗಿಲ್ಲ. ಆದುದರಿಂದ ಮನೆ ಕಟ್ಟಿ ಕೊಳ್ಳುವ ಅವಶ್ಯಕತೆಯೇ ಇವರಿಗೆ ಉಂಟಾಗಿಲ್ಲ. ಬೀಡಿ, ಚುಟ್ಟಾ ಸೇದುವುದು, ಹೆಂಡ ಸರಾಯಿ ಕುಡಿಯುವುದು ಹಿಂದಿದ್ದಂತೆ ಈಗಲೂ ಮುಂದುವರೆದಿದೆ. ಹಿಂದೆ ವೇಷಗಳನ್ನು ಹಾಕಿಕೊಂಡು ಹೊಲೆಯ, ಮಾದಿಗರ ಹಟ್ಟಿಗಳಿಗೆ ಹೋಗುತ್ತಿರಲಿಲ್ಲವೆಂದು ತಿಳಿದು ಬಂದಿದೆ. ಕುಡಿಯಲಿಕ್ಕೆ ನೀರನ್ನು ಸೇದೋ ಬಾವಿಯ ಹತ್ತಿರ ಯಾರಿಂದಲಾದರೂ ಗಡಿಗೆಗೆ ಹೊಯ್ಯಿಸಿಕೊಂಡು ಬರುತ್ತಿದ್ದರು. ಆದರೆ ಈಗ ಸಮಾಜದಲ್ಲಿ ಉಂಟಾದ ವಿಜ್ಞಾನ ತಂತ್ರಜ್ಞಾನದ ಬೆಳವಣಿಗೆಯಿಂದ ಕೊಳಾಯಿಗಳಲ್ಲಿ ನೀರು ಪಡೆಯುವುದರಿಂದ ಅಸ್ಪ್ರಶ್ಯತೆಯ ಆಚರಣೆಗೆ ಇಲ್ಲಿ ಅವಕಾಶವೇ ಇಲ್ಲದಂತಾಗಿದೆ.

ಈ ಜನಾಂಗದ ಅಧ್ಯಯನಕ್ಕಾಗಿ ಕ್ಷೇತ್ರ ಕಾರ್ಯ ನಡೆಸಿದಾಗ ಹಾವೇರಿ ಜಿಲ್ಲೆಯ ಯಾವ ಭಾಗದಲ್ಲೂ ಪದವಿ ಪಡೆದವರು ಇಲ್ಲವೆಂದು ತಿಳಿದು ಸೋಜಿಗವಾಯಿತು. ಈ ಸಮುದಾಯದ, ಜಿಲ್ಲೆಯ ಪಂಚಮರನ್ನು ಸಮಕ್ಷಮ ಭೆಟ್ಟಿಯಾಗಿ ವಿವರವಾದ ಮಾಹಿತಿ ಪಡೆಯಲಾಯಿತು. ಅವರು ನೀಡಿದ ಮಾಹಿತಿಯಂತೆ ಸಮುದಾಯದ ಯಾರೊಬ್ಬರೂ ಸರ್ಕಾರಿ ನೌಕರಿಯಲ್ಲಿ ಇಲ್ಲವೆಂದರು. ಪಂಚಮರಲ್ಲಿ ಒಬ್ಬರಾದ ಹಾಗೂ ಹಿರಿಯ ಕಲಾವಿದರಾದ ಭಿಕ್ಷಾಪತಿ ಮೋತಿಯವರಿಗೆ ಮಾತ್ರ ಕಲಾ ಮಾಸಾಶನ ದೊರೆಯುತ್ತಲಿದೆ. ಈಗಲೂ ಇವರ ಚಿಕ್ಕ ಮಕ್ಕಳಲ್ಲಿ ಕೆಲವರು ಮಾತ್ರ ಶಾಲೆಗೆ ಹೋಗುತ್ತಿದ್ದಾರೆ. ಆದರೆ ಇವರ ಪ್ರತಿ ಮಗುವೂ ಹಾಡುಗಾರಿಕೆಯಲ್ಲಿ ಸಂಗೀತ ವಾದ್ಯಗಳನ್ನು ನುಡಿಸುವುದರಲ್ಲಿ, ವೇಷ ಹಾಕಿ ಅಭಿನಯಿಸುವುದರಲ್ಲಿ ಬಹಳ ಮುಂದು. ಇವರು ಆರ್ಥಿಕವಾಗಿಯೂ ದುರ್ಬಲರಾಗಿರುವುದರಿಂದ ವೇಷ ಹಾಕಿ ಭಿಕ್ಷೆ ಬೇಡುವ ತಮ್ಮ ವೃತ್ತಿಯನ್ನು ಅನಿವಾರ್ಯವಾಗಿ ಮುಂದುವರೆಸಬೇಕಾಗಿದ್ದರಿಂದ ಅಲೆಮಾರಿಗಳಾಗಿ, ಎಲ್ಲೂ ನೆಲೆನಿಲ್ಲದೆ ಮಕ್ಕಳಿಗೆ ಶಿಕ್ಷಣ ಸಿಗದಂತಾಗಿದೆ. ಇವರು ಈಗಲೂ ಯಾವ ವಿಧವಾದ ವಾಣಿಜ್ಯ ವ್ಯವಹಾರಗಳನ್ನಾಗಲಿ ಅಥವಾ ಕೈಕಸುಬುಗಳನ್ನಾಗಿ ಮಾಡುತ್ತಿಲ್ಲ. ಒಬ್ಬಿಬ್ಬರನ್ನು ಬಿಟ್ಟರೆ ಉಳಿದವರಾರಿಗೂ ಸ್ವಂತದ್ದೆನ್ನುವ ತುಂಡು ಭೂಮಿಯಿಲ್ಲ. ಆದುದರಿಂದ ವ್ಯವಸಾಯ ಮತ್ತು ಪಶುಪಾಲನೆ ಇವರಿಂದ

ದೂರವಾಗೇ ಉಳಿದಿದೆ. ಬಹುರೂಪಿಗಳ ಶೈಕ್ಷಣಿಕ ಸ್ಥಾನಮಾನ, ವೃತ್ತಿಗಳು(ಕೆಲಸಗಳು) ಹಾಗೂ ಭೂಹಿಡುವಳಿ ಪ್ರಮಾಣಗಳ ಕುರಿತು ಕೋಷ್ಟಕ 29, 30 ಮತ್ತು 31 ನ್ನು ನೋಡಬಹುದು.

ಕೋಷ್ಟಕ–29

ಹಾವೇರಿ ಜಿಲ್ಲೆಯ ಬುಡ್ಗಜಂಗಮ ಸಮುದಾಯದವರ ಶೈಕ್ಷಣಿಕ ಸ್ಥಾನಮಾನ:

ಕ್ರ.ಸಂ	ವಿವರಗಳು	ಪುರುಷ	ಸ್ತ್ರೀ	ಒಟ್ಟು	ಶೇಕಡ
01	ಒಟ್ಟು ಜನಸಂಖ್ಯೆ	**481**	**434**	**915**	**100**
02	ಸಾಕ್ಷರತೆಗೆ ಅನರ್ಹರು (4 ವರ್ಷದ ಒಳಗಿನವರು)	69	48	117	12.78
03	ಸಾಕ್ಷರತೆಗೆ ಅರ್ಹರು (4 ವರ್ಷದ ಮೇಲ್ಪಟ್ಟವರು)	412	386	798	87.22
04	ಪ್ರಾಥಮಿಕ /ಮಾಧ್ಯಮಿಕ ಶಿಕ್ಷಣ	32	12	44	5.51
05	ಸಪ್ರೌಢಶಿಕ್ಷಣ	12	02	14	1.75
06	ಪದವಿಪೂರ್ವ/ಡಿಪ್ಲಮೊ/ಐ.ಟಿ.ಐ)	01	–	01	0.12
07	ಉನ್ನತ ಶಿಕ್ಷಣ	–	–	–	00
08	ಅನಕ್ಷರಸ್ಥರು	367	372	739	92.60

ಕೋಷ್ಟಕ–30

ಕೆಲಸಗಳಲ್ಲಿ ತೊಡಗಿಕೊಂಡಿರುವ ಹಾವೇರಿ ಜಿಲ್ಲೆಯ ಬುಡ್ಗಜಂಗಮರ ಪ್ರಮಾಣ:

ಕ್ರ.ಸಂ.	ಕೆಲಸದ ವಿವರಗಳು	ಪುರುಷ	ಸ್ತ್ರೀ	ಒಟ್ಟು
01	ಹಗಲು ವೇಷಗಾರಿಕೆ	165	113	278
02	ಕೃಷಿ	04	02	06
03	ಕೂಲಿ	197	193	390
04	ಸಣ್ಣ ವ್ಯಾಪಾರ	07	–	07
05	ಖಾಸಗಿ ನೌಕರಿ	02	–	02
06	ಇತರೆ ಕೆಲಸ (ಗಾರೆ ಕೆಲಸ, ಹಮಾಲಿ) ರಪೇರಿ, ವರ್ಕ್ಸ್, ರದ್ದಿ ಸಂಗ್ರಹ, ಗ್ಯಾರೇಜ್ ಇತ್ಯಾದಿ)	106	126	232
	ಒಟ್ಟು	**481**	**434**	**915**

ಕೋಷ್ಟಕ–31

ಹಾವೇರಿ ಜಿಲ್ಲೆಯ ಬುಡ್ಗಜಂಗಮ ಸಮುದಾಯದ ತಾಲೂಕು ಮತ್ತು ಗ್ರಾಮವಾರು ಭೂಹಿಡುವಳಿ

ಕ್ರಸಂ	ತಾಲೂಕು	ಗ್ರಾಮ/ನಗರ	ಒಟ್ಟು ಮನೆಗಳು	ಹೊಂದಿರುವ ಕೃಷಿ ಭೂಮಿ (ಎಕರೆಗಳಲ್ಲಿ)			ಭೂರಹಿತ ಮನೆಗಳು
				ಒಣ	ನೀರಾವರಿ	ಒಟ್ಟು	
01	ರಾಣೇಬೆನ್ನೂರ	ತುಮ್ಮಿನಕಟ್ಟೆ	82	–	–	–	82
02	ರಾಣೇಬೆನ್ನೂರು	ಹಲಗೇರಿ	10	–	–	–	10
03	ರಾಣೇಬೆನ್ನೂರು	ದೇವರಗುಡ್ಡ	14	–	–	–	14
04	ಹಾವೇರಿ	ಕನಕಪುರ	28	–	–	–	28
05	ಹಾವೇರಿ	ಹಾವೇರಿ	18	–	–	–	18
06	ಹಾನಗಲ್	ಮುದ್ದಿನಕೊಪ್ಪ	15	12 (ಗೋಮಾಳ)	–	12	03
07	ಹಾನಗಲ್	ನರೇಗಲ್	04	–	–	–	04
08	ಹಾನಗಲ್	ಹಾನಗಲ್	50	–	–	–	50
		ಒಟ್ಟು	**221**		**12**	**12**	**209**

ಹಿಂದೆ ಇವರು ತಮ್ಮ ಸಾಮಾನುಗಳ ಜೊತೆಯಲ್ಲಿ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದರು. ಆದರೆ ಈಗ ಬಸ್ಸುಗಳಲ್ಲಿ ಪ್ರಯಾಣಿಸುತ್ತಾರೆ. ಇವರು ಹಿಂದೆ ಕಾಫಿ, ಟೀ ಮುಂತಾದವನ್ನು ತಾವೇ ತಯಾರಿಸಿಕೊಂಡು ಕುಡಿಯುತ್ತಿದ್ದ ಇವರು ಈಗೀನ ಹೋಟೆಲುಗಳಲ್ಲಿ ಎಲ್ಲರಿಗೂ ಸರಿಸಮನಾಗಿ ಕುಳಿತು ಕುಡಿದು ಬರುತ್ತಾರೆ. ಇವರ ಹಿಂದಿನವರು ಅನಾರೋಗ್ಯ ಉಂಟಾದಾಗ ಬರೀ ಗಿಡಮೂಲಿಕೆಗಳು ಹಾಗೂ ನಾಟಿ ವೈದ್ಯಕ್ಕೆ ಮೊರೆ ಹೋಗುತ್ತಿದ್ದರು. ಆದರೆ ಈಗಿನವರು ಆಸ್ಪತ್ರೆಗಳಿಗೆ ಹೋಗಿ ಚಿಕಿತ್ಸೆ ಪಡೆದು ಬರುತ್ತಾರೆ.

ಸಮುದಾಯದ ಶ್ರೇಯಸ್ಸಿಗೆ ಕೈಗೊಳ್ಳಬೇಕಾದ ಕ್ರಮಗಳು:

1. ವಿವಿಧ ಹೆಸರುಗಳಿಂದ ಕರೆಯಿಸಿಕೊಳ್ಳುತ್ತಿರುವ ಇಡೀ ಸಮುದಾಯ ತನ್ನ ಸ್ಪಷ್ಟವಾದ ಮತ್ತು ಸಂವಿಧಾನಬದ್ಧವಾದ ಹೆಸರಿನಲ್ಲಿ ಗುರುತಿಸಿಕೊಳ್ಳಬೇಕಾಗಿದೆ.
2. ಜನಪದರು ಕರೆದ ಹೆಸರುಗಳನ್ನು ಬಿಟ್ಟು, ಬುಡ್ಗ ಜಂಗಮ್ ಎಂದು ದಾಖಲಿಸಿ, ಮೀಸಲಾತಿ ದುರುಪಯೋಗವಾಗದಂತೆ, ಈ ಸಮುದಾಯವನ್ನು ಅಭಿವೃದ್ಧಿ ಪಡಿಸಬೇಕಾಗಿದೆ.

3. ಸಮುದಾಯಗಳನ್ನು ಗುರುತಿಸಲಿಕ್ಕೆ ಸರ್ಕಾರ ಕೈಗೆತ್ತಿಕೊಂಡಿರುವ ಜಾತಿಗಣತಿಯು ಉತ್ತಮ ಬೆಳವಣಿಗೆಯಾಗಿದೆ. ಈ ಸಮುದಾಯದ ವ್ಯಕ್ತಿಗಳನ್ನು ಸಂಪರ್ಕಿಸುವುದು.
4. ಕಾನೂನಿನ ತಿಳುವಳಿಕೆ ಇಲ್ಲದ ಅಲೆಮಾರಿ ಬುಡ್ಗಜಂಗಮರಿಗೆ ಕಾನೂನಿನ ತಿಳುವಳಿಕೆ ನೀಡಲು ಉಚಿತ ಕಾನೂನು ನೆರವು ನೀಡುವುದು.
5. ಇತ್ತೀಚೆಗೆ ನೆಲೆಯೂರುತ್ತಿರುವ ಇವರಿಗೆ ಅಲೆಮಾರಿತನವನ್ನು ಬಿಡಲು ವಿವಿಧ ಯೋಜನೆಗಳಡಿಯಲ್ಲಿ ಜನತಾ ಮನೆಗಳನ್ನು ನಿರ್ಮಿಸುವುದು.
6. ನೆಲೆ ಇಲ್ಲದ ಇವರಿಗೆ ಪಡಿತರ ಚೀಟಿ, ಚುನಾವಣೆ ಗುರುತಿನ ಚೀಟಿಗಳು ಬಹಳಷ್ಟು ಜನರಿಗೆ ದಕ್ಕಿಲ್ಲ. ಇದಲ್ಲದೆ ಸರ್ಕಾರದ ಸವಲತ್ತುಗಳನ್ನು ಪಡೆಯಲು ಇವರು ವಿಫಲರಾಗಿದ್ದಾರೆ.
7. ಮೆರಿಟ್ ಆಧಾರಿತ ಶಿಕ್ಷಣ ವ್ಯವಸ್ಥೆಯಲ್ಲಿ ಶಾಲೆಗೆ ಮತ್ತು ಹಾಸ್ಟೆಲ್‌ಗೆ ಪ್ರವೇಶ ದೊರೆಯುವುದು ದುಸ್ತರವಾಗಿದೆ. ಆದ್ದರಿಂದ ಈ ಅಲೆಮಾರಿಗಳಿಗೆ ಮೆರಿಟ್ ಆಧಾರವಿಲ್ಲದೆ ಪ್ರವೇಶ ನೀಡುವುದು.
8. ಟಿ.ವಿ. ಸಿನಿಮಾ ಮಾಧ್ಯಮಗಳ ಪ್ರಭಾವದಿಂದ ಇವರ ಕಲೆ/ಹಗಲುವೇಷ ಕಳೆಗುಂದಿವೆ. ಆದ್ದರಿಂದ ಬುಡಕಟ್ಟಿನ ಸಾಂಸ್ಕೃತಿಕ ಬದುಕನ್ನು ಸಂರಕ್ಷಿಸುವುದು ಅತ್ಯಗತ್ಯವಾಗಿದೆ.
9. ಭಿಕ್ಷಾಟನೆಯ ನಿಷೇಧದಿಂದಲೂ ಈ ವಲಸೆ ಹೋಗುವ ಅಲೆಮಾರಿ ಬುಡ್ಗ ಜಂಗಮರನ್ನು ಭಿಕ್ಷುಕ ಕೇಂದ್ರಗಳಲ್ಲಿ ಇಡಲಾಗುತ್ತಿದೆ. ಇದನ್ನು ಘೋರ ಅವಮಾನವೆಂದು ಭಾವಿಸಲಾಗಿದೆ.
10. ಬಹಳ ಸುಲಭವಾಗಿ ಇವರ ಜಾತಿ ಪತ್ರಗಳನ್ನು ನೀಡಬೇಕಿದೆ. ಕೆಲವೆಡೆ ಬೇರೆ ಸಮುದಾಯದ ಬಲಿಷ್ಟರು ಇವರ ಹೆಸರಿನಲ್ಲಿ ಬೇಡ ಜಂಗಮ್ ಎಂದು ಜಾತಿ ಪತ್ರ ಪಡೆದು ಸರ್ಕಾರಿ ನೌಕರಿ ಸೇರಿರುವುದು ಖಂಡನೀಯ ಮತ್ತು ನಾಚಿಕೆಗೇಡು. ಇದನ್ನು ತಡೆಯಬೇಕು.
11. ಕಲೆಯನ್ನು ನಂಬಿರುವ ಸಮುದಾಯದ ಹಿರಿಯ ಕಲಾವಿದರಿಗೆ ಮಾಸಾಶನವನ್ನು ತುಂಬಾ ಸರಳವಾಗಿ ನೀಡುವಂತಾಗಬೇಕು.
12. ಭೂ ವಸತಿ ರಹಿತ ಬುಡ್ಗ ಜಂಗಮರಿಗೆ ಸರ್ಕಾರ ಭೂಮಿಯ ಹಂಚಿಕೆ ಆಗಬೇಕು. ಒಂದೆಡೆ ನೆಲೆಸಿ ಮುಖ್ಯ ವಾಹಿನಿಗೆ ಬರಬೇಕಿದೆ.
13. ಬುಡ್ಗ ಜಂಗಾಲು ಸಮುದಾಯದವರಿಂದ ಅಪಾರವಾದ ಹಾಗೂ ಅಮೂಲ್ಯವಾದ ಸಾಹಿತ್ಯ ಲಭ್ಯವಾಗುತ್ತದೆ. ಅದನ್ನು (ಕಥನ ಗೀತೆಗಳು, ರಂಜಕ ಕಥೆಗಳು, ಒಗಟುಗಳು, ಗಾದೆಗಳು) ಯಾಥಾವತ್ತಾಗಿ ಸಂಗ್ರಹಿಸುವ ಕಾರ್ಯ ನಡೆಯಬೇಕಿದೆ.

14. ಈ ಸಮುದಾಯದಲ್ಲಿ ಅಮೂಲ್ಯವಾದ ಜಾನಪದ ಸಂಗೀತವಿದೆ. ಇವರು ಹಾಡುವ ಹಾಡುಗಳ ಧ್ವನಿಯನ್ನು ಮುದ್ರಿಸಿ ಸಂಗ್ರಹಿಸುವ ಕಾರ್ಯ ನಡೆಯಬೇಕಿದೆ.
15. ಬುಡ್ಗ ಜಂಗಾಲು ಸಮುದಾಯದ ಸಮಗ್ರ ಜೀವನವನ್ನು ಹಾಗೂ ಇವರ ಸಾಹಿತ್ಯ, ಸಂಗೀತ, ಹಾಗೂ ಕಲೆಗಳ ಬಗ್ಗೆ ಸಾಕ್ಷ್ಯಚಿತ್ರಗಳನ್ನು ಚಿತ್ರಿಸಿ ಇಟ್ಟರೆ ಈ ಸಮುದಾಯದ ಮೂಲ ಸಂಸ್ಕೃತಿ ಮುಂದಿನ ಪೀಳಿಗೆಗೆ ಪರಿಚಯವಾಗಲು ಸಹಾಯವಾಗುತ್ತದೆ.
16. ಈ ಸಮುದಾಯದವರು ಬಡವರಾದುದರಿಂದ 'ಶಾದಿಭಾಗ್ಯ' ಯೋಜನೆಯೂ ಇವರಿಗೂ ಲಭಿಸುವಂತಾಗಬೇಕು.

ಅಡಿಟಿಪ್ಪಣಿಗಳು:

1. ಲಕ್ಕಪ್ಪಗೌಡ ಎಚ್.ಜೆ. "ಜಾನಪದ ಕೈಪಿಡಿ", 1997 ಪುಟ: 350.
2. ಶಂಕರ ನಾರಾಯಣ ತೀ.ನಂ. "ಕಾಡುಗೊಲ್ಲರ ನಂಬಿಕೆ ಮತ್ತು ಸಂಪ್ರದಾಯಗಳು," 1982 ಪುಟ:02.
3. ವಿರುಪಾಕ್ಷಿ ಪೂಜಾರಹಳ್ಳಿ "ಬೇಡಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ," 2008 ಪುಟ: 117.
4. ಮೇತ್ರಿ ಕೆ.ಎಂ. ಮತ್ತು ಚಲುವರಾಜು, "ಬುಡಕಟ್ಟು ಅಧ್ಯಯನ" ಸಂ 4. 2007 ಪುಟ: 132.
5. ಮೇತ್ರಿ ಕೆ.ಎಂ. ಮತ್ತು ಚಲುವರಾಜು, "ಬುಡಕಟ್ಟು ಅಧ್ಯಯನ" ಸಂಚಿಕೆ 4. 2007, ಪುಟ: 132,133.
6. ಮೇತ್ರಿ ಕೆ.ಎಂ. ಮತ್ತು ಚಲುವರಾಜು, "ಬುಡಕಟ್ಟು ಅಧ್ಯಯನ" ಸಂ 4. 2007 ಪುಟ: 61.
7. ಶಂಕರ್‌ರಾವ್ ಚ.ನ. ಸಮಾಜಶಾಸ್ತ್ರ ದರ್ಶನ ಭಾಗ–1, 2011–12, ಪುಟ; 445.
8. ಅದೇ– ಪುಟ; 447.
9. ಲಕ್ಕಪ್ಪಗೌಡ ಎಚ್.ಜೆ. "ಕರ್ನಾಟಕ ಬುಡಕಟ್ಟುಗಳು,"ಸಂಪುಟ 2, 2000, ಪುಟ: 1.
10. ಲಕ್ಕಪ್ಪಗೌಡ ಎಚ್.ಜೆ. "ಕರ್ನಾಟಕ ಬುಡಕಟ್ಟುಗಳು,"ಸಂಪುಟ 2, 2000, ಪುಟ: 2,3.
11. ಭೀಮಣ್ಣ ಬೊನ್ಹಾಳ್, (ಸಂ) "ಗೌರವ ಶಿವಶರಣ ಮೇದರ ಕೇತಯ್ಯ ಸ್ಮಾರಕ ಸಂಪುಟ,"ಪುಟ 9.
12. ಅದೇ, ಪುಟ: 19.
13. ಅದೇ, ಪುಟ: 27.

14. ಉಮೇಶ್ ಕೆ. "ಕರ್ನಾಟಕದ ಮೇದ ಬುಡಕಟ್ಟಿನ ಸಮಾಜಶಾಸ್ತ್ರೀಯ ಅಧ್ಯಯನ" (ಚಿಕ್ಕಮಗಳೂರು ಜಿಲ್ಲೆ ಅನುಲಕ್ಷಿಸಿ) ಮಾರ್ಗದರ್ಶಕರು–ಡಾ.ಚಲುವರಾಜು. ಕನ್ನಡ ವಿಶ್ವವಿದ್ಯಾಲಯ. ಹಂಪಿ–2011.
15. ಹರ್ತಿಕೋಟೆ ವೀರೇಂದ್ರಸಿಂಹ, 'ನಾಯಕ ಜನಾಂಗದ ಪರಂಪರೆ' ವಾಲ್ಮೀಕಿ ಕಿರಣ, ಪುಟ: 27–32.
16. ಕೃಷ್ಣಮೂರ್ತಿ ಹನೂರು, 'ಮ್ಯಾಸಬೇಡರ ಸಂಸ್ಕೃತಿ' 1993, ಪುಟ: 705–815.
17. ಸೂರ್ಯನಾಥ ಯು.ಕಾಮತ್, 'ಕರ್ನಾಟಕದ ನಾಯಕರು' 1984, ಪುಟ: 457–458.
18. ರಂಗರಾಜ ವನದುರ್ಗ, 'ವಾಲ್ಮೀಕಿ ಕಿರಣ' 1998.. ಪುಟ: 58–61.
19. ಹರ್ತಿಕೋಟೆ ವಿರೇಂದ್ರಸಿಂಹ, 'ನಾಯಕ ಜನಾಂಗದ ಪರಂಪರೆ' ವಾಲ್ಮೀಕಿ ಕಿರಣ 1998.
20. ಅಭಿಶೇಕರ್ ಕೆ. 'ಬಳ್ಳಾರಿ ಜಿಲ್ಲೆ ಗೆಜಟಿಯರ್' 1970 ಪುಟ: 16–17.
21. ಕೃಷ್ಣಮೂರ್ತಿ ಹನೂರು, 'ಮ್ಯಾಸಬೇಡರು'ಪುಟ: 787–788.
22. Shivashankara Narayana B. 'Tribes of South India'(1970:120) page-120.
23. Krishna Rao M.V. and Halappa G.S: Valmiki Swarna Sanchike (1970) pp 1-3.
24. Edgar Thurston (1975:001 II:180).
25. Suryanath, U.Kamath, 'Nayaka's of Karnataka' (1982:466).
26. ಕೃಷ್ಣವೇಣಿ ಕು.ಆರ್. ವ್ಯಾಧ ಚರಿತೆ. 2007, ಪುಟ–100.
27. ಅದೇ– ಪುಟ–101.
28. ಅದೇ– ಪುಟ–101.
29. Havanur L.G. 1975. 'Report of the Second Backward Classes Commission'(1986) Vol.2 Bangalore, Govt.of Karnataka.
30. 'Report of the Second Backward Classes Commission' (1986) Vol.2. Bangalore.Govt.of Karnataka.
31. ಕರಿಶೆಟ್ಟಿ ರುದ್ರಪ್ಪ, 'ಮ್ಯಾಸ ನಾಯಕರು ಒಂದು ಜನಾಂಗಿಕ ಅಧ್ಯಯನ' 1995, ಪುಟ: 17.
32. ಅನಂತಕೃಷ್ಣ. ಎಲ್.ಕೆ. 1988, ಪುಟ; 205.
33. Edgar Thurston, K Rangachari, "Castes & Tribes of the Southern India" Vol. 2, 1909, 328.

34. Nanjundaiah H.V. Ananth Krishna Iyer, "The Mysore Tribes and Castes" Vol. 3, 1909, P 309.
35. ನಿಂಗಣ್ಣ ಸಣ್ಣಕ್ಕಿ, "ಹೆಳವರು" 1980, ಪುಟ 19.
36. ರಾಜಶೇಖರ್ ಪಿ.ಕೆ. "ಹೆಳವರು" 1980 ಪುಟ 272.
37. Singh K. S. "Indias Communities" 1998 P. 1277.
38. ಹರಿಲಾಲ್ ಪವಾರ್, "ಹೆಳವರ ಸಂಸ್ಕೃತಿ" 1993, ಪುಟ 6.
39. ಪ್ರಭಾಕರ ಎ.ಎಸ್. ಹೆಳವರು, 2010, ಪುಟ; 39, 40.
40. ವಿಜಯಕುಮಾರ ಬಳಿಗಾರ, "ಕನ್ನಡ ಪ್ರಭ"– ಕರ್ನಾಟಕ ಕನ್ನಡಿ, ದಿನಾಂಕ: 27.8.2008.
41. ಲಕ್ಕಪ್ಪಗೌಡ ಹೆಚ್.ಜೆ. (ಸಂ) "ಕರ್ನಾಟಕ ಬುಡಕಟ್ಟುಗಳು," ಸಂಪುಟ ಎರಡು, 2000, ಪುಟ: 538.
42. ಅದೇ, ಪುಟ: 539.
43. ಅದೇ, ಪುಟ: 540.
44. ನಿಂಗಣ್ಣ ಸಣ್ಣಕ್ಕಿ, 'ಗೊಂದಲಿಗರ ಸಂಸ್ಕೃತಿ', ಉಪಸಂಸ್ಕೃತಿ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
45. ಕ್ಯಾತನಹಳ್ಳಿ ರಾಮಣ್ಣ, 'ಗೊಂದಲಿಗರ ಕಥೆಗಳು' 1982 ಪು: 14 ಮತ್ತು 15.
46. ಕನ್ನಡ ಜಾನಪದ ಕೋಶ, ಸಂಪುಟ–2, ಪುಟ: 034.
47. ಗೀತಾ ನಾಗಭೂಷಣ, "ದುರುಗಮುರಗಿಯರ ಸಂಸ್ಕೃತಿ" 1993. ಪುಟ: 6.
48. ಅದೇ, ಪುಟ: 5
49. ಸಿಂಗ್. ಕೆ.ಎಸ್, "The Scheduled Caste" 1993, ಪುಟ: 398.
50. ಲಕ್ಕಪ್ಪಗೌಡ ಹೆಚ್.ಜೆ.(ಸಂ)"ಕರ್ನಾಟಕ ಬುಡಕಟ್ಟುಗಳು" ಸಂಪುಟ–2, 2000, ಪುಟ:448.
51. ಮಂಜುನಾಥ ಬೇವಿನಕಟ್ಟಿ "ವ್ಯಾಧ ಚರಿತೆ," 2007, ಪುಟ: 164.
52. ಗೀತಾ ನಾಗಭೂಣ, ದುರುಗ–ಮುರಗಿಯರ ಸಂಸ್ಕೃತಿ, 1993. ಪುಟ; 23, 24.
53. ಬಾಲಗುರುಮೂರ್ತಿ ಪ್ರತಾಪ ರಾ ಬಹುರೂಪಿ. ಕರ್ನಾಟಕ ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ 1.2008. ಪುಟ,2.
54. ಕರ್ನಾಟಕ ಬುಡಕಟ್ಟುಗಳು. ಸಂಪುಟ–2. 2000. ಪುಟ, 464.
55. ಕರ್ನಾಟಕ ಬುಡಕಟ್ಟುಗಳು. ಸಂಪುಟ–2. 2000. ಪುಟ, 628.
56. ಕನ್ನಡ ಪುಸ್ತಕ ಪ್ರಾಧಿಕಾರ, ಬುಡ್ಗ ಜಂಗಮ.. 2008. ಪುಟ, 6, 7.

ಅಧ್ಯಾಯ–4

ಬುಡಕಟ್ಟು ಸಮಸ್ಯೆಗಳು, ಸವಾಲುಗಳು ಮತ್ತು ಅಭಿವೃದ್ಧಿ

1. ಬುಡಕಟ್ಟು ಸಮಸ್ಯೆಗಳು
2. ಅಭಿವೃದ್ಧಿಯ ವಿಧಾನಗಳು ಮತ್ತು ಸವಾಲುಗಳು:
3. ಸಂವಿಧಾನದ ಸವಲತ್ತುಗಳು ಮತ್ತು ಬುಡಕಟ್ಟುಗಳ ಅಭಿವೃದ್ಧಿ:
4. ಸಮಿತಿ, ಆಯೋಗಗಳು ಮತ್ತು ಬುಡಕಟ್ಟು ಅಭಿವೃದ್ಧಿ:
5. ಪಂಚವಾರ್ಷಿಕ ಯೋಜನೆಗಳಲ್ಲಿ ಬುಡಕಟ್ಟು ಅಭಿವೃದ್ಧಿ:
6. ಬುಡಕಟ್ಟು ಅಭಿವೃದ್ಧಿಯ ಇತ್ತೀಚಿನ ಬೆಳವಣಿಗೆಗಳು:

ಬುಡಕಟ್ಟು ಸಮಸ್ಯೆಗಳು, ಸವಾಲುಗಳು ಮತ್ತು ಅಭಿವೃದ್ಧಿ

ಭಾರತೀಯ ಸಮಾಜವು ವಿವಿಧ ಧರ್ಮ, ಭಾಷೆ, ಸಮುದಾಯ, ಜನಾಂಗ ಮತ್ತು ಬುಡಕಟ್ಟುಗಳಿಂದ ಕೂಡಿದ ಸಮಾಜವಾಗಿದ್ದು, ಸಂಕೀರ್ಣ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿದೆ. ಈ ಸಂಕೀರ್ಣ ಸಾಮಾಜಿಕ ವ್ಯವಸ್ಥೆಯಲ್ಲಿ ಏಕತೆಗಿಂತಲೂ ಹೆಚ್ಚಿಗೆ ಭಿನ್ನತೆಯ ವಿವಿಧ ಅಂಶಗಳನ್ನು ಕಾಣಬಹುದು. ಹೋಲಿಕೆಯ ಮತ್ತು ವಿವಿಧತೆಯ ಅಂಶಗಳು ಒಂದೇ ವಿಸ್ತೃತ ಸಮಾಜವಾದ ಭಾರತದಲ್ಲಿ ಬೇರೆ ಬೇರೆ ಸಾಮಾಜಿಕ ಗುಂಪುಗಳಲ್ಲಿ ಕಂಡು ಬರುತ್ತದೆ. ಈ ಸಾಮಾಜಿಕ ಗುಂಪುಗಳು ಒಂದೇ ಸಮಾಜದಲ್ಲಿ ವಿವಿಧ ಸಂಸ್ಕೃತಿಗಳನ್ನು ಪ್ರತಿನಿಧಿಸುತ್ತವೆ. ಉಪಸಂಸ್ಕೃತಿಗಳು ಮುಖ್ಯ ಸಮಾಜದ ಭಾಗವಾಗಿದ್ದಾಗ್ಯೂ ತಮ್ಮ ಪ್ರತ್ಯೇಕತೆ ಮತ್ತು ಅಸ್ಮಿತತೆಯನ್ನು ಉಳಿಸಿಕೊಂಡಿವೆ. ಭಾರತೀಯ ಸಮಾಜವನ್ನು ಒಂದು ಸಮಷ್ಠಿ ದೃಷ್ಟಿಯಿಂದ ನೋಡಿದಾಗ್ಯೂ, ಇದರೊಳಗಡೆ ಇರುವ ಇತರ ಉಪಸಂಸ್ಕೃತಿಗಳ ಅನನ್ಯತೆಯನ್ನು ಮರೆಯುವಂತಿಲ್ಲ. ಈ ಸಮಾಜದಲ್ಲಿ ನಾವು ನಗರ ಸಮಾಜ, ಗ್ರಾಮಿಣ ಸಮಾಜ ಎಂಬ ಭೇದಗಳನ್ನು ಮಾಡುವುದರೊಂದಿಗೆ ಬುಡಕಟ್ಟು ಸಮಾಜ ಅಥವಾ ಸಂಸ್ಕೃತಿ ಎಂಬ ಮತ್ತೊಂದು ಸಮಾಜವನ್ನು ಗುರುತಿಸುತ್ತೇವೆ. ಬುಡಕಟ್ಟು ಸಮಾಜ ಬೇರೆ ಸಮಾಜಕ್ಕಿಂತ ಸರ್ವ ವಿಧದಲ್ಲಿಯೂ ಭಿನ್ನವಾಗಿರುತ್ತದೆ.

ಬುಡಕಟ್ಟುಗಳ ಇತಿಹಾಸವನ್ನು ನಾವು ಹುಡುಕಲು ಹೊರಟರೆ ಪ್ರಪಂಚದ ವಿವಿಧ ಪ್ರದೇಶಗಳಲ್ಲಿ ವಿವಿಧ ಮಾನವ ಜನಾಂಗಗಳಿಗೆ ಸೇರಿದ ಬುಡಕಟ್ಟುಗಳು ಕಂಡುಬರುತ್ತವೆ. ಬುಡಕಟ್ಟುಗಳೆಂದು ಕರೆಯಲ್ಪಡುವ ಆದಿವಾಸಿಗಳು ಪ್ರಪಂಚದಾದ್ಯಂತ ಹಂಚಿಹೋಗಿದ್ದಾರೆ. ಭಾರತದಲ್ಲಿ ಬುಡಕಟ್ಟು ಜನರು ಸಾಮಾನ್ಯವಾಗಿ ಎಲ್ಲಾ ವಲಯಗಳಲ್ಲಿ ಕಂಡುಬರುತ್ತಾರೆ. ಮುಖ್ಯವಾಗಿ ಬೆಟ್ಟ, ಗುಡ್ಡ, ಕಾಡು ಮೇಡು, ಗಿರಿಶಿಖರ, ಕಣಿವೆ, ಕಾನನ ಹಾಗೂ ಕರಾವಳಿ ತಪ್ಪಲಿನ ಪಶ್ಚಿಮ ಘಟ್ಟಗಳಲ್ಲಿ ವಾಸಿಸುವ ಬುಡಕಟ್ಟು ಜನರನ್ನು ಕಾಣಬಹುದು. ದೇಶದ ಉದ್ದಗಲಕ್ಕೂ ಬುಡಕಟ್ಟು, ಜನರು ಹಂಚಿಹೋಗಿದ್ದು, ಹಲವು ಬುಡಕಟ್ಟುಗಳು ಗುರುತಿಸಲ್ಪಡದೇ ಅಭಿವೃದ್ಧಿಯ ವಾಹಿನಿಯಿಂದ ದೂರ ಉಳಿದಿವೆ ಮತ್ತು ಸಮಸ್ಯೆಗಳನ್ನು ಎದುರಿಸುತ್ತಿವೆ. ಕೆಲವು ಬಡಕಟ್ಟುಗಳು ಭಾರತದ ಜಾತಿ ವ್ಯವಸ್ಥೆಯ ಪ್ರಭಾವಕ್ಕೊಳಗಾಗಿ ಬದಲಾವಣೆಯ ಗಾಳಿಯಲ್ಲಿ ಸಿಲುಕಿವೆ.

4.1. ಬುಡಕಟ್ಟು ಸಮಸ್ಯೆಗಳು:

ಬುಡಕಟ್ಟು ಜನರು ಮುಖ್ಯ ಸಮಾಜದೊಂದಿಗೆ ದೂರವಿದ್ದುದರಿಂದ ಮತ್ತು ಸಾಂಸ್ಕೃತಿಕವಾಗಿ ಮತ್ತು ಭೌಗೋಳಿಕವಾಗಿ ಪ್ರತ್ಯೇಕವಾಗಿದ್ದುದರಿಂದ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವರು ಪ್ರಾಚೀನ ಸಮುದಾಯದವರಾಗಿದ್ದುದೇ ಇವರ ಹಿಂದುಳಿದಿರುವಿಕೆಗಳ ಕಾರಣಗಳಲ್ಲಿ ಒಂದು ಎನ್ನಬಹುದು. ಬುಡಕಟ್ಟಿನ ಸಂಸ್ಕೃತಿ ಬಹಳ ಶ್ರೀಮಂತವಾಗಿದ್ದರೂ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳಲ್ಲಿ ಬುಡಕಟ್ಟುಗಳು ಅತ್ಯಂತ

ಹಿಂದುಳಿದಿವೆ. ಭಾರತದಲ್ಲಿ ಬುಡಕಟ್ಟು ಜನರು ಎದುರಿಸುವ ಪ್ರಮುಖ ಸಮಸ್ಯೆಗಳೆಂದರೆ, ಭೂಮಿ, ಬಡತನ, ಋಣಭಾರ, ಅನಕ್ಷರತೆ, ಆರೋಗ್ಯ, ನಿರುದ್ಯೋಗ, ವಸತಿ, ಸಂಪರ್ಕ, ಶೋಷಣೆ, ಅಮಾನವೀಯ ಪದ್ಧತಿಗಳು, ಬುಡಕಟ್ಟಾಗದ ಸಮಸ್ಯೆ, ಮಿಳಿತವಾಗದ ಸಮಸ್ಯೆ, ಮೀಸಲಾತಿಯ ಗೊಂದಲ ಮುಂತಾದವು.

ಭಾರತದ ಬಹುತೇಕ ಬುಡಕಟ್ಟು ಜನರು ಬಡತನದ ರೇಖೆಗಿಂತ ಕೆಳಗಿದ್ದಾರೆ. ಅಂದರೆ ಇವರು ತಮ್ಮ ಜೀವಮಾನವನ್ನೆಲ್ಲಾ ಬಡತನದಲ್ಲಿಯೇ ಕಳೆಯಬೇಕಾಗುತ್ತದೆ. ಯಾವುದೇ ಆರ್ಥಿಕ ಸಂಪನ್ಮೂಲಗಳು ಇವರಿಗೆ ಲಭ್ಯವಾಗುವುದಿಲ್ಲ. ಇವರ ಬಡತನಕ್ಕೆ ಇವರ ಅನಕ್ಷರತೆಯೇ ಮುಖ್ಯ ಕಾರಣ ಎನ್ನಬಹುದು. ಬುಡಕಟ್ಟಿನ ಜನರು ಅನೇಕ ಸಮಸ್ಯೆಗಳಿಗೆ ತುತ್ತಾಗುತ್ತಾರೆ. ಭಾರತದಲ್ಲಿ ಶೇಕಡ 85 ಕ್ಕಿಂತಲೂ ಹೆಚ್ಚು ಬುಡಕಟ್ಟು ಜನರು ಬಡತನದ ರೇಖೆಗಿಂತ ಕೆಳಗಿದ್ದಾರೆ. ಇದು ಇವರ ಬಡತನದ ಮಟ್ಟವನ್ನು ತೋರಿಸುತ್ತದೆ. ಉದಾಹರಣೆಗೆ ಕರ್ನಾಟಕದ ಸಂದರ್ಭದಲ್ಲಿ ಹೇಳುವುದಾದರೆ ಸಮಾಜ ಕಲ್ಯಾಣ ಇಲಾಖೆಗೆ ಸಲ್ಲಿಸಿದ ಸಾಮಾಜಿಕ ಆರ್ಥಿಕ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿ ಶೇಕಡ 80ಕ್ಕೂ ಅಧಿಕ ಗ್ರಾಮೀಣ ಬುಡಕಟ್ಟುಗಳ ಕುಟುಂಬಗಳು ಬಡತನ ರೇಖೆಗಿಂತ ಕೆಳಗಿವೆ. ಭಾರತದ ಬುಡಕಟ್ಟುಗಳಲ್ಲಿ ಅನಕ್ಷರತೆಯ ಪ್ರಮಾಣ ಅಧಿಕ ಇದೆ. ಇವರಲ್ಲಿ ಅಕ್ಷರ ಸಂಸ್ಕೃತಿಯಿರುವವರು ವಿರಳ. 2011ರ ಜನಗಣತಿಯ ಪ್ರಕಾರ ಬುಡಕಟ್ಟು ಸಾಕ್ಷರತೆ 58.96%ರಷ್ಟಿದ್ದು, ಒಟ್ಟಾರೆ ದೇಶದ ಸಾಕ್ಷರತೆ 74.04%ರಷ್ಟಿದೆ. ಅಂದರೆ ದೇಶದ ಸರಾಸರಿ ಸಾಕ್ಷರತೆ ಶೇಕಡ 10ಕ್ಕಿಂತಲೂ ಕಡಿಮೆ ಇದೆ. ಅಂದರೆ ಇವರಲ್ಲಿ ಓದು ಬರಹ ಬರುವವರ ಸಂಖ್ಯೆ ಇಷ್ಟಾದರೆ, ಔಪಚಾರಿಕವಾಗಿ ಶಾಲಾ ಕಾಲೇಜುಗಳಿಗೆ ಹೋಗುವವರ ಸಂಖ್ಯೆ ಇಲ್ಲವೇ ಇಲ್ಲ ಎನ್ನಬಹುದು. ಇತ್ತೀಚೆಗೆ ಬುಡಕಟ್ಟು ಜನರಲ್ಲಿ ಅಲ್ಲೊಬ್ಬ ಇಲ್ಲೊಬ್ಬ, ಶಾಲೆಗೆ ಹೋಗುತ್ತಿದ್ದಾರೆ. ಒಂದು ವೇಳೆ ಶಾಲೆಗೆ ಹೋದರೂ ಮಧ್ಯದಲ್ಲಿಯೇ ಶಾಲೆ ಬಿಡುವವರ ಸಂಖ್ಯೆ ಹೆಚ್ಚು. ಉನ್ನತ ಶಿಕ್ಷಣವಂತೂ ಇವರಿಗೆ ಕನಸಿನ ಮಾತು. ಅನಕ್ಷರತೆಯೇ ಬುಡಕಟ್ಟು ಜನರ ಎಲ್ಲಾ ಸಮಸ್ಯೆಗಳಿಗೆ ಮೂಲ. ಇದರಿಂದಾಗಿ ಅಜ್ಞಾನ, ಮೂಢನಂಬಿಕೆ, ದೌರ್ಜನ್ಯಕ್ಕೆ ಒಳಗಾಗುವುದು ಹೆಚ್ಚಾಗುತ್ತದೆ. ಉದಾಹರಣೆಗೆ ಮಿಜೋರಾಂನ ಬುಡಕಟ್ಟುಗಳಲ್ಲಿ ಸಾಕ್ಷರತೆ ಪ್ರಮಾಣ ಶೇಕಡ 89ರಷ್ಟಿದ್ದರೆ, ದಕ್ಷಿಣ ಭಾರತದ ಬುಡಕಟ್ಟುಗಳಲ್ಲಿ ಇದು ಶೇಕಡ 67ಕ್ಕಿಂತಲೂ ಕಡಿಮೆ ಇದೆ. ಇತ್ತೀಚೆಗೆ ಸಾಕ್ಷರಸ್ಥರ ಸಂಖ್ಯೆಯನ್ನು ಹೆಚ್ಚಿಸಲು ಸರ್ಕಾರಗಳು ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿವೆ. ಅದರಿಂದಾಗಿ ಸಾಕ್ಷರತೆಯ ಪ್ರಮಾಣ ಬುಡಕಟ್ಟುಗಳಲ್ಲಿ ನಿಧಾನಗತಿಯಲ್ಲಿ ಹೆಚ್ಚುತ್ತಿದ್ದು, ಇದೊಂದರಿಂದಲೇ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗುತ್ತಿಲ್ಲ.

ಬುಡಕಟ್ಟು ಜನರನ್ನು ಬೆಂಬಿಡದೆ ಕಾಡುತ್ತಿರುವ ಸಮಸ್ಯೆಗಳಲ್ಲಿ ನಿರುದ್ಯೋಗ ಮತ್ತು ಅರೆನಿರುದ್ಯೋಗ ಮುಖ್ಯವಾದ ಸಮಸ್ಯೆಗಳಾಗಿವೆ. ಇವರು ಪ್ರತ್ಯೇಕವಾಗಿ ತಮ್ಮದೇ ಆದ

ನೆಲೆಗಳಲ್ಲಿ ವಾಸಿಸುವುದರಿಂದ ನಗರ ಸಮಾಜದಲ್ಲಿ ದೊರೆಯುವಂತಹ ಉದ್ಯೋಗದ ಅವಕಾಶಗಳು ಬುಡಕಟ್ಟು ಜನರಿಗೆ ದೊರೆಯುವುದಿಲ್ಲ. ಸಾಂಪ್ರದಾಯಿಕ ಕಸುಬುಗಳನ್ನು ಬಿಟ್ಟರೆ ಅಸಂಪ್ರದಾಯಿಕ ಜಾತಿ ಮುಕ್ತ ಉದ್ಯೋಗದ ಅವಕಾಶಗಳು ಇವರಿಗೆ ದೊರೆಯುವುದಿಲ್ಲ. ಇವರಲ್ಲಿ ಸರ್ಕಾರಿ ಹುದ್ದೆಗಳಲ್ಲಿರುವವರು ತುಂಬಾ ಕಡಿಮೆ. ಶೇಕಡ ಒಂದಕ್ಕಿಂತಲೂ ಕಡಿಮೆ ಎಂದರೆ ತಪ್ಪಾಗಲಾರದು. ಇನ್ನು ಇವರು ಕೈಗೊಳ್ಳುವ ದಿನನಿತ್ಯದ ಸಣ್ಣಪುಟ್ಟ ಬುಡಕಟ್ಟು ಕುಲಕಸುಬುಗಳಿಂದ ಇವರಿಗೆ ವರ್ಷದ ಎಲ್ಲಾ ದಿನಗಳಲ್ಲಿ ಉದ್ಯೋಗ ಸಿಗುವುದಿಲ್ಲ. ಒಂದು ವೇಳೆ ಸಿಕ್ಕರೂ ಇವರ ಆರ್ಥಿಕ ಜೀವನಕ್ಕೆ ಸಾಕಾಗುವಷ್ಟು ಆದಾಯ ಬರುವುದಿಲ್ಲ. ಬುಟ್ಟಿ ಹೆಣೆಯುವುದರಿಂದಾಗಲೀ, ಕೌದಿ ಹೊಲೆಯುವುದರಿಂದಾಗಲಿ, ವೇಷ ಹಾಕುವುದರಿಂದಾಗಲಿ, ಕುಲ ಕೊಂಡಾಡುವುದರಿಂದಾಗಲಿ, ಇಲ್ಲವೇ ಪಾತ್ರೆ ಪ್ಲಾಸ್ಟಿಕ್ ಸಾಮಾನುಗಳನ್ನು ಮಾರಾಟ ಮಾಡುವುದರಿಂದಲೂ ಇವರ ಆರ್ಥಿಕ ಪರಿಸ್ಥಿತಿ ಸುಧಾರಿಸುವುದಿಲ್ಲ. ಇವರ ನಿರುದ್ಯೋಗಕ್ಕೆ ಕಾರಣ, ಇವರು ವಿದ್ಯಾವಂತರಾಗದೇ ಇರುವುದು ಮತ್ತು ಶಿಕ್ಷಣದ ಅವಕಾಶಗಳ ಕೊರತೆಯಿಂದಾಗಿ.

ಬುಡಕಟ್ಟಿನ ಜನರು ಸರ್ವಚೇತನವಾದಿಗಳಾದುದರಿಂದ ಅನಾರೋಗ್ಯದ ನಿವಾರಣೆಗೆ ಇವರು ದೇವರಿಗೆ ಮೊರೆಹೊಗುತ್ತಾರೆ. ಆದುದರಿಂದ ಬುಟಕಟ್ಟು ಜನರು ಅನೇಕ ರೋಗ ರುಜಿನಗಳಿಂದ ಬಳಲುತ್ತಾರೆ. ಆರೋಗ್ಯಕ್ಕೆ ಸಂಬಂಧಪಟ್ಟ ಅರಿವಿನ ಕೊರತೆಯಿಂದಾಗಿ ಅನಾರೋಗ್ಯ ಸಮಸ್ಯೆ ಇವರಲ್ಲಿ ಗಂಭೀರ ಸಮಸ್ಯೆಯಾಗಿದೆ. ನೈರ್ಮಲ್ಯದ ಕೊರತೆ ಮತ್ತು ಆಸ್ಪತ್ರೆಗಳ ಸೌಲಭ್ಯಗಳ ಕೊರತೆಯಿಂದಾಗಿ ಅನೇಕ ಗಂಭೀರ ಮತ್ತು ವಾಸಿಯಾಗದಂತಹ ಕಾಯಿಲೆಗಳಿಗೆ ತುತ್ತಾಗಿ ಸಾಯುವವರ ಪ್ರಮಾಣ ಜಾಸ್ತಿ. ಕೆಲವು ಬುಡಕಟ್ಟುಗಳ ಮಹಿಳೆಯರಲ್ಲಿ ಹೆರಿಗೆಯ ಸಮಯದಲ್ಲಿ ತಾಯಿ ಮತ್ತು ಮಗು ಸಾವನ್ನಪ್ಪುವ ಪ್ರಸಂಗಗಳು ಹೆಚ್ಚಾಗಿವೆ. ಇದಕ್ಕೆ ಇವರಲ್ಲಿನ ಮೂಢನಂಬಿಕೆಗಳೇ ಕಾರಣ. ಬಹುತೇಕ ಬುಡಕಟ್ಟು ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳೇ ಇಲ್ಲ. ಇದ್ದರೂ ವೈದ್ಯರ ಕೊರತೆ ಮತ್ತು ಅವರ ಕಾಳಜಿ, ಬದ್ಧತೆಯ ಕೊರತೆ. ಶುಚಿತ್ವದ ಬಗ್ಗೆ ಕೆಲವು ಬುಡಕಟ್ಟುಗಳಲ್ಲಿ ಅರಿವು ಇರದ ಕಾರಣ ನಾನಾ ತರಹದ ಚರ್ಮದ ವ್ಯಾದಿಗಳಿಗೆ ಬಲಿಯಾಗಬೇಕಾಗುತ್ತದೆ. ಕೆಲವು ಬುಡಕಟ್ಟು ಜನರು ಅಂಟುರೋಗಗಳಿಂದಾಗಿ ಬಳಲುತ್ತಿದ್ದಾರೆ. ಗುಣಪಡಿಸಲಾಗದ ರೋಗಗಳಿಂದಾಗಿ ಇವರ ಜೀವನದ ಅವಧಿ ಕಡಿಮೆಯಾಗುತ್ತದೆ. ಇತ್ತೀಚೆಗೆ ಸರ್ಕಾರದ ಕೆಲವು ಆರೋಗ್ಯ ಕಾರ್ಯಕ್ರಮಗಳಿಂದಾಗಿ ಅಲ್ಲಲ್ಲಿ ಅರೋಗ್ಯದ ಅರಿವಿನ ಬಗ್ಗೆ ಕಾರ್ಯಗಳು ನಡೆಯುತ್ತಿವೆ. ಸ್ವಲ್ಪ ಮಟ್ಟಿನ ಆರೋಗ್ಯದ ಬಗೆಗಿನ ಅರಿವು ಬುಡಕಟ್ಟು ಜನರಲ್ಲಿ ಕಂಡುಬರುತ್ತಿದೆ. ಅನಾರೋಗ್ಯಕರ ವಾತಾವರಣದಿಂದಾಗಿ ಬುಡಕಟ್ಟು ಜನರು ಕ್ಷಯ, ಮಲೇರಿಯಾ, ನೇತ್ರರೋಗ, ಮಧುಮೇಹ, ಚಿಕನ್‌ಗುನ್ಯ. ಡೆಂಗೂ, ಹೆಚ್ 1 ಎನ್ 1 ಮತ್ತು ಇತರೆ ಗುಹ್ಯ ರೋಗಗಳಿಂದ ಬಳಲುತ್ತಿದ್ದಾರೆ.

ಮುಗ್ಧ ಜೀವಿಗಳಾದ ಬುಡಕಟ್ಟು ಜನರು ಇತರೆ ಸಮಾಜದ ಜನಗಳಿಂದಾಗಿ ಹಲವು ರೀತಿಯ ಶೋಷಣೆಗೆ ಒಳಗಾಗುತ್ತಿದ್ದಾರೆ. ಇವರ ಅನಕ್ಷರತೆ, ಅಜ್ಞಾನ, ಮುಗ್ಧತೆಯನ್ನು ಬೇರೆ ಸಮುದಾಯದ ಜನರು ದುರುಪಯೋಗಪಡಿಸಿಕೊಳ್ಳುತ್ತಾರೆ. ಕಡಿಮೆ ಕೂಲಿಗೆ ತಮ್ಮ ಜಮೀನಿನಲ್ಲಿ ದುಡಿಸಿಕೊಳ್ಳುವುದು, ಅವಾಚ್ಯ ಶಬ್ಧಗಳಿಂದ ನಿಂದಿಸುವುದು, ಮಹಿಳೆಯರಿಗೆ ಲೈಂಗಿಕ ಕಿರುಕುಳ ಕೊಡುವುದು, ಜೀತದಾಳಾಗಿ ದುಡಿಸಿಕೊಳ್ಳುವುದು, ಅಮಾನವೀಯ ಪದ್ಧತಿಗಳನ್ನು ಬಲವಂತವಾಗಿ ಹೇರುವುದು, ಭೂಕಬಳಿಕೆ ಮುಂತಾದವು ಶೋಷಣೆಯ ವಿವಿಧ ಮುಖಗಳು. ಉದಾ: ದಕ್ಷಿಣ ಕನ್ನಡ ಕೊರಗ ಬುಡಕಟ್ಟು, ಜನರಲ್ಲಿ ಅಜಲು ಪದ್ಧತಿಯನ್ನು ಆಚರಿಸುವುದಕ್ಕೆ ಹೈಕೋರ್ಟು ನಿಷೇಧ ಹೇರಿತ್ತು. ಆದರೆ ಇತ್ತೀಚೆಗೆ ಸುಪ್ರೀಂಕೋರ್ಟು ತಡೆಯಾಜ್ಞೆ ನೀಡಿದ್ದರಿಂದ ಮತ್ತೇ ಅದಕ್ಕೆ ಪ್ರೇರೆಣೆ ಸಿಕ್ಕಂತಾಯಿತು. ಹಾವೇರಿ ಜಿಲ್ಲೆಯ ಕೆಲವು ಅರೆ ಅಲೆಮಾರಿ ಬುಡಕಟ್ಟುಗಳ ಜನರಿಂದ ಭೂಮಾಲಿಕರು ಬಲವಂತವಾಗಿ ಭೂಮಿಯನ್ನು ಕಬಳಿಸಿಕೊಂಡಿದ್ದಾರೆ. ಅದೇ ರೀತಿ ದುರಗಮುರುಗಿ, ಬಹುರೂಪಿ, ಗೊಂದಲಿಗ, ಇನ್ನು ಮುಂತಾದ ಅರೆ ಅಲೆಮಾರಿ ಬುಡಕಟ್ಟು ಸಮುದಾಯದವರು ತಮ್ಮ ಪಾರಂಪರಿಕ ಕಸಬನ್ನು ಮುಂದುವರೆಸಿಕೊಂಡು ಹೋಗುವುದರ ಜೊತೆಗೆ ತಮ್ಮ ಮಕ್ಕಳನ್ನು ಶಾಲೆಗೆ ಹೋಗದಂತೆ ನೋಡಿಕೊಳ್ಳುವುದನ್ನು ಕ್ಷೇತ್ರ ಕಾರ್ಯದ ಮೂಲಕ ಗೊತ್ತಾಗಿದೆ.

ಸಂಪ್ರದಾಯದ ಹೆಸರಿನಲ್ಲಿ ಭಾರತದ ಕೆಲವು ಬುಡಕಟ್ಟುಗಳಲ್ಲಿ ಅಮಾನವೀಯ ಅಚರಣೆಗಳು ಬುಡಕಟ್ಟು ಜನರು ತಲತಲಾಂತರದಿಂದ ನಡೆಸಿಕೊಂಡು ಬಂದ ಇಲ್ಲವೇ ಸಮಾಜದಿಂದ ಬಲವಂತವಾಗಿ ಹೇರಲ್ಪಟ್ಟ ಆಚರಣೆಗಳಾಗಿವೆ. ಅತ್ಯಂತ ಹಿಂದುಳಿದ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಬುಡಕಟ್ಟುಗಳಲ್ಲಿ ಮನುಷ್ಯ ಕುಲವೇ ನಾಚಿಕೆ ಪಡುವಂತಹ ಜನವಿರೋಧಿ, ಅಮಾನವೀಯ ಆಚರಣೆಗಳು ರೂಢಿಯಲ್ಲಿವೆ. ಇದಕ್ಕೆ ಜ್ವಲಂತ ನಿದರ್ಶನವೆಂದರೆ ದಕ್ಷಿಣ ಕನ್ನಡದ ಕೊರಗ ಜನಾಂಗದಲ್ಲಿರುವ ಅಜಲು ಪದ್ಧತಿ. ಈ ಆಚರಣೆಯನ್ನು ಸಾಂಸ್ಕೃತಿಕ ಪರಂಪರೆಯ ದ್ಯೋತಕವೆಂದು ವಾದಿಸಿದರೂ ಮಾನವೀಯ ದೃಷ್ಟಿಕೋನದಲ್ಲಿ ಇವುಗಳು ಅಮಾನವೀಯ ಆಚರಣೆಗಳಾಗುತ್ತವೆ. ಕೊರಗರಲ್ಲಿಯ ಅಜಲು ಪದ್ಧತಿ ಸರ್ಕಾರದ ಗಮನ ಸೆಳೆದು ರಾಜ್ಯ ಸರ್ಕಾರ ಇತ್ತೀಚೆಗೆ ಅಜಲು ಪದ್ಧತಿಯನ್ನು ಕಾನೂನಿನ ಮೂಲಕ ನಿಷೇಧಿಸಿದೆ. ಆದರೂ ಇತ್ತೀಚೆಗೆ ಸುಪ್ರೀಂಕೋರ್ಟು ತಡೆಯಾಜ್ಞೆ ನೀಡಿರುವುದು ಶೋಚನೀಯ. ಮತ್ತು ಇತ್ತೀಚೆಗೆ ಈ ಪದ್ಧತಿಯು ಕಡಿಮೆಯಾಗುತ್ತಿದೆ ಎಂದು ನಂಬಲಾಗಿದೆ.

ರಾಜ್ಯದ ಅರೆ ಅಲೆಮಾರಿ ಬುಡಕಟ್ಟುಗಳಲ್ಲಿ ಹಲವು ರೀತಿಯ ಅಮಾನವೀಯ ಆಚರಣೆಗಳು ಜಾರಿಯಲ್ಲಿವೆ. ಹಾವೇರಿ ಜಿಲ್ಲೆಯ ಬಹುತೇಕ ಹಳ್ಳಿಗಳಲ್ಲಿ ಕಂಡುಬರುವ ಸುಡುಗಾಡುಸಿದ್ದರು, ಗೊಂದಲಿಗರು, ದುರುಗಮುರುಗಿಯರು, ಹೆಳವರು, ಬೇಡ, ಮೇದ ಇತ್ಯಾದಿ ಅರೆ ಅಲೆಮಾರಿ ಮತ್ತು ನೆಲೆನಿಂತ ಸಮುದಾಯಗಾಳಿಗಿದ್ದು, ಅತ್ಯಂತ ಹಿಂದುಳಿದ

ಬುಡಕಟ್ಟಾಗಿವೆ. ಇವರಲ್ಲಿ ಹೆರಿಗೆ ಪ್ರಕ್ರಿಯೆ ಪ್ರಕೃತಿದತ್ತವಾಗಿದ್ದರೂ ಅತ್ಯಂತ ಸೂತಕದ ವಿಚಾರ. ಬಸುರಿ ಹೆಂಗಸಿಗೆ ಹೆರಿಗೆ ನೋವು ಕಾಣಿಸಿಕೊಂಡ ತಕ್ಷಣ ಅವಳಿಗೆ ಪ್ರತ್ಯೇಕ ಗುಡಿಸಲನ್ನು ನಿರ್ಮಿಸಲಾಗುತ್ತದೆ. ಅಲ್ಲಿ ಅಪ್ಪ, ಅಮ್ಮ ಅಥವಾ ಸಂಬಂಧಿಕರೆನಿಸಿಕೊಂಡವರು ಯಾರು ಆ ಮಹಿಳೆಯನ್ನು ಮುಟ್ಟುವಂತಿಲ್ಲ. ಅವಳ ನೆರವಿಗೆ ಹೋಗುವಂತಿಲ್ಲ. ಇಂತಹ ಸಂಧರ್ಭದಲ್ಲಿ ವೈದ್ಯರ ಬಳಿ ಇಲ್ಲವೇ ಆಸ್ಪತ್ರೆಗೆ ಕರೆದೊಯ್ಯುವ ವಿಚಾರವನ್ನು ಮಾಡುವುದಿಲ್ಲ. ಕೆಲವು ಸಮುದಾಯದವರು ಸೂಲಗಿತ್ತಿಯ ನೆರವು ಪಡೆಯುತ್ತಾರೆ. ದೇವರ ಕೃಪೆಯಿಂದ ಹೆರಿಗೆ ಸಲೀಸಾಗಿ ಆದರೆ ಮಗು ಮತ್ತು ತಾಯಿ ಬದುಕುಳಿಯುತ್ತಾರೆ. ಇಲ್ಲದಿದ್ದರೆ ಸಾವನ್ನಪ್ಪುತ್ತಾರೆ. ಅನೇಕ ಸಂದರ್ಭಗಳಲ್ಲಿ ಶಿಶು ಮತ್ತು ತಾಯಿ ಸಾವನ್ನಪ್ಪಿದ ಘಟನೆಗಳಿವೆ. ಇದರಿಂದ ಅರೆ ಅಲೆಮಾರಿ ಬುಡಕಟ್ಟು ಸಮುದಾಯದ ಮಹಿಳೆಯರಲ್ಲಿ ಹೆರಿಗೆಯ ಸಂದರ್ಭದಲ್ಲಿ ಶಿಶುಗಳ ಮರಣ ಅತ್ಯಂತ ಹೆಚ್ಚು ಮತ್ತು ಮಹಿಳೆಯರು ಸಾವನ್ನಪ್ಪುವ ಸಂಭವ ಜಾಸ್ತಿ ಎಂದು ಸಂಶೋಧನೆಗಳಿಂದ ದೃಢಪಟ್ಟಿದೆ. ಹೆರಿಗೆಯ ನಂತರ ಎರಡು ತಿಂಗಳಿಗೂ ಹೆಚ್ಚನ ಕಾಲ ಮಗು ಮತ್ತು ತಾಯಿಯನ್ನು ಮುಟ್ಟುವಂತಿಲ್ಲ. ಒಂದು ವೇಳೆ ಮುಟ್ಟಿದರೆ ಅವರೂ ಮೈಲಿಗೆಯಾಗುತ್ತಾರೆ. ಅವರು ಮತ್ತೆ ಬುಡಕಟ್ಟು ದೇವರಿಗೆ ದಂಡ ತೆತ್ತು ಶುಚಿತ್ವ ಪಡೆಯಬೇಕಾಗುತ್ತದೆ. ಸುಮಾರು ಮೂರು ತಿಂಗಳುಗಳ ಕಾಲ ಮಗು ಮತ್ತು ಬಾಣಂತಿಯು ಯಾರ ನೆರವಿಲ್ಲದೆ, ಮಳೆಯೆನ್ನದೆ, ಗಾಳಿ, ಗುಡುಗು, ಮಿಂಚನ್ನದೆ ಅವಳಿಗಾಗಿಯೇ ನಿರ್ಮಿಸಿದ ಗುಡಿಸಲಿನಲ್ಲಿ ಕಾಲ ಕಳೆಯಬೇಕಾಗುತ್ತದೆ.

ಬುಡಕಟ್ಟುಗಳ ಮುಖ್ಯ ಸಮಸ್ಯೆ ಭೂಮಿಯ ಮತ್ತು ನೆಲೆಯ ಸಮಸ್ಯೆ. ಭಾರತದ ಬಹುತೇಕ ಬುಡಕಟ್ಟು ಜನರಿಗೆ ತಮ್ಮದೇ ಆದಂತಹ ಭೂಮಿ ಇಲ್ಲದಿರುವುದು ಕಂಡುಬರುತ್ತದೆ. ಇವರು ಸಾಮಾನ್ಯವಾಗಿ ಅರಣ್ಯಗಳನ್ನೇ ನಂಬಿಕೊಂಡು ವಾಸಿಸುತ್ತಾರೆ. ಇತ್ತೀಚೆಗೆ ಅರಣ್ಯ ನಾಶದಂತಹ ಪ್ರಕ್ರಿಯೆಯಲ್ಲಿ ಬುಡಕಟ್ಟು ಜನರಿಗೆ ಅವರ ಹಿಂದುಳಿದಿರುವಿಕೆಯಿಂದಾಗಿ ಭೂ ಒಡೆತನದ ಕಲ್ಪನೆ, ಭೂಮಿಯ ದಾಖಲೆಗಳು ಗೊತ್ತಿಲ್ಲ. ಬ್ರಿಟಿಷರ ಕಾಲದಲ್ಲಿ ಬ್ರಿಟಿಷ್ ಸರ್ಕಾರ ಭೂಮಿಯನ್ನು ಮತ್ತು ಅರಣ್ಯ ಭೂಮಿಯನ್ನು ಜಮೀನ್ದಾರರಿಗೆ ವರ್ಗಾಯಿಸಿತು ಮತ್ತು ಉಳಿದ ಭೂಮಿಯನ್ನೆಲ್ಲಾ ಅರಣ್ಯ ಭೂಮಿ ಎಂದು ಘೋಷಿಸಿತು. ಇದರಿಂದ ಬುಡಕಟ್ಟು ಜನರು ಭೂಮಿಯ ಜೊತೆಗಿನ ಸಂಬಂಧ ಕಳೆದುಕೊಂಡರು. ಹತ್ತು ಹಲವಾರು ತಲೆಮಾರುಗಳಿಂದ ಜೀವಿಸುತ್ತಿರುವ ಬುಡಕಟ್ಟು ಜನರಿಗೆ ತಮ್ಮದೇ ಆದ ಭೂದಾಖಲೆ ಮತ್ತು ಭೂಮಿಯ ಒಡೆತನ ಇಲ್ಲದಂತಾಯಿತು. ಮೊದಲಿದ್ದ ಬಹುತೇಕ ಅರಣ್ಯ ನೀತಿಗಳು ಅಥವಾ ಕಾನೂನುಗಳು ನಗರ ಮಾರುಕಟ್ಟೆಗಳಿಗೆ ಅರಣ್ಯ ಉತ್ಪನ್ನವನ್ನು ಒದಗಿಸುವುದಕ್ಕೆ ಸಂಬಂಧಿಸಿದವುಗಳಾಗಿದ್ದವು. ಬುಡಕಟ್ಟುಗಳೂ ಸಹ ಅರಣ್ಯ ಉತ್ಪನ್ನವನ್ನು ಒದಗಿಸುವುದಕ್ಕೆ ತಮಗೆ ಸಮೀಪವಿರುವ ಸ್ಥಳೀಯ ಮಾರುಕಟ್ಟೆಗಳಲ್ಲಿ ಮಾರಾಟ ಮಾಡುತ್ತಿದ್ದರು. ಇವರಿಗೆ ಯಾವುದೇ ಅಧಿಕೃತವಾದ ಇವರಿಗೆಂದೇ

ಮೀಸಲಿಟ್ಟ ಅರಣ್ಯ ಪ್ರದೇಶಗಳಿರಲಿಲ್ಲ. 1865ರ ಭಾರತದ ಅರಣ್ಯ ಕಾಯಿದೆಗೆ 1878ರಲ್ಲಿ ತಿದ್ದುಪಡಿ ತಂದು ಅರಣ್ಯಗಳನ್ನು ಕಂದಾಯ ಅರಣ್ಯಗಳು, ಸಂರಕ್ಷಿತ ಅರಣ್ಯಗಳು ಮತ್ತು ಗ್ರಾಮ ಅರಣ್ಯಗಳು ಎಂದು ವಿಭಾಗ ಮಾಡಿ ಪ್ರತಿಯೊಂದಕ್ಕೂ ತನ್ನದೇ ಆದ ನಿಯಮಗಳನ್ನು ರೂಪಿಸಲಾಯಿತು.

ಸರ್ಕಾರದ ಈ ನೀತಿಯಿಂದಾಗಿ ಅರಣ್ಯದ ಉತ್ಪನ್ನಗಳನ್ನೇ ತಮ್ಮ ಜೀವಾಳವಾಗಿರಿಸಿಕೊಂಡಿದ್ದ ಬುಡಕಟ್ಟುಗಳಿಗೆ ಬರ ಸಿಡಿಲು ಬಡಿದಂತಾಗಿ ಭೂಮಿ ನದಿ ಮತ್ತು ಅರಣ್ಯಗಳ ಭಾಗವಾಗಿದ್ದ ಇವರು ಇವೆಲ್ಲದರಿಂದ ದೂರವಾದರು. ಪರಿಣಾಮವಾಗಿ ಝೂರ್ಖಂಡ್, ಒರಿಸ್ಸಾ, ಮಹಾರಾಷ್ಟ್ರ, ಮಧ್ಯಪ್ರದೇಶ, ತಮಿಳುನಾಡು ಮತ್ತು ಕೇರಳ ರಾಜ್ಯಗಳ ಬುಡಕಟ್ಟು ಜನರು ಭೂರಹಿತ ಬುಡಕಟ್ಟುಗಳಾಗಿ ಉಳಿದರು. ಒಂದು ಗೇಣಸನ್ನಾದರೂ ಬೆಳೆಯಲು ನಮ್ಮದೆನ್ನುವ ಭೂಮಿ ನಮಗಿಲ್ಲ. ಪ್ರತಿಯೊಂದಕ್ಕೂ ನಾವು ಹೊರಗಿನವರ ಮೇಲೆ ಅವಲಂಬಿತರಾಗಿದ್ದೇವೆ ಎಂದು ಕೇರಳದ ವೈನಾಡು ಪ್ರದೇಶದ ಬುಡಕಟ್ಟು ಸಿ.ಕೆ.ಜಾನು ಹೇಳುತ್ತಾರೆ (ಸಂವಾದ ಆಗಸ್ಟ 2003). ಇದು ಬುಡಕಟ್ಟು ಜನರ ಭೂಮಿಯ ಸಮಸ್ಯೆಯನ್ನು ಎತ್ತಿ ತೋರಿಸುತ್ತದೆ.

ಬುಡಕಟ್ಟು ಜನರ ರಾಜಕೀಯ ನಾಯಕತ್ವದ ಕೊರತೆಯಿಂದಲೋ ಅಥವಾ ಸರ್ಕಾರ ವೈಜ್ಞಾನಿಕವಾಗಿ ಬುಡಕಟ್ಟು ಜನರು ಯಾರು ಎಂದು ಗುರುತಿಸಲು ಸಾಧ್ಯವಾಗದೇ ಇರುವುದರಿಂದಲೋ ಅಥವಾ ಬುಡಕಟ್ಟು ಜನರು ತಮ್ಮ ಸಮಸ್ಯೆಗಳನ್ನು ಸರಿಯಾಗಿ ಬಿಂಬಿಸಲು ಸಾಧ್ಯವಾಗದೆ ಇರುವುದರಿಂದಲೋ ಎಷ್ಟೋ ಬುಡಕಟ್ಟುಗಳು ಬುಡಕಟ್ಟಿನ ಅಧಿಕೃತ ಸ್ಥಾನಮಾನ ಪಡೆಯುವುದೇ ಇಲ್ಲ. ಇಂತಹ ಸಂದರ್ಭವನ್ನು ಭಾರತದಾದ್ಯಂತ ನೋಡಬಹುದು. ಎಷ್ಟೋ ಸಂಧರ್ಭಗಳಲ್ಲಿ ಮೀಸಲಾತಿ ನೀತಿ ನಿರೂಪಿಸುವಾಗ ಜಾತಿ ಯಾವುದು ಜಾತಿಯಿಂದ ಎಲ್ಲಾ ವಿಧದಲ್ಲಿ ಬೇರೆಯಾಗಿರುವ ಬುಡಕಟ್ಟು ಯಾವುದು ಎಂಬ ವ್ಯತ್ಯಾಸದ ಅರಿವಿನ ಕೊರತೆಯಿರುವುದು, ಮೀಸಲಾತಿಯ ನೀತಿಯನ್ನು ಮತ್ತು ಆಯೋಗಗಳ ಶಿಫಾರಸ್ಸುಗಳನ್ನು ಅನುಷ್ಠಾನ ಮಾಡುವಲ್ಲಿ ಕಂಡುಬರುತ್ತದೆ. ಇಂತಹ ಸಂದರ್ಭದಲ್ಲಿ ಆರ್ಥಿಕವಾಗಿ ಸಭಲವಾಗಿರುವ ಮತ್ತು ರಾಜಕೀಯ ನಾಯಕತ್ವವನ್ನು ಪಡೆದಿರುವ ಜಾತಿಗಳು ಅಥವಾ ಬುಡಕಟ್ಟುಗಳು ಬುಡಕಟ್ಟು ಸ್ಥಾನಮಾನವನ್ನು ಪಡೆಯುತ್ತವೆ. ನಿಜವಾಗಿ ಬುಡಕಟ್ಟು ಲಕ್ಷಣಗಳನ್ನೂ ಹೊಂದಿದ್ದು, ಜಾತಿ ವ್ಯವಸ್ಥೆಯಿಂದ ದೂರವಿರುವ ಎಷ್ಟೋ ಬುಡಕಟ್ಟುಗಳು ಇಂದಿಗೂ ಬುಡಕಟ್ಟು ಸ್ಥಾನಮಾನ ಪಡೆಯದೆ ಸರ್ಕಾರದ ಎಲ್ಲಾ ಅವಕಾಶಗಳಿಂದ ವಂಚಿತವಾಗಿವೆ ಎನ್ನುವುದರಲ್ಲಿ ತಪ್ಪಿಲ್ಲ. ಉದಾ. ಉತ್ತರ ಕರ್ನಾಟಕದ ಹೆಬ್ಬಾಗಿಲಾಗಿರುವ ಹಾವೇರಿ ಜಿಲ್ಲೆಯ ಕೆಲವು ಸಮುದಾಯಗಳು ನಿಜವಾದ ಬುಡಕಟ್ಟುಗಳು. ಆದರೆ ಸರ್ಕಾರದ ಮೀಸಲಾತಿಯ ನೀತಿಯಡಿಯಲ್ಲಿ ಇವುಗಳನ್ನು ಪರಿಶಿಷ್ಟ ಜಾತಿ ಮತ್ತು ಹಿಂದುಳಿದ

ವರ್ಗಗಳೆಂದು ಪರಿಗಣಿಸಲಾಗಿದೆ. ಈ ನೀತಿಯಿಂದಾಗಿ ಈ ಸಮುದಾಯಗಳು ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿದ್ದು, ಬುಡಕಟ್ಟಾಗಿದ್ದು ಬುಡಕಟ್ಟಾಗದ ಸಮಸ್ಯೆಯನ್ನು ಎದುರಿಸುತ್ತಿವೆ. (ಬೇಡ ಹಾಗೂ ಮೇದ ಸಮುದಾಯ ಹೊರತುಪಡಿಸಿ).

ಬುಡಕಟ್ಟು ಸಮುದಾಯಗಳು ಎದುರಿಸುತ್ತಿರುವ ಬಡತನ, ನಿರುದ್ಯೋಗ, ಅನಾರೋಗ್ಯ, ಅಮಾನವೀಯ ಪದ್ಧತಿ, ಆಚರಣೆಗಳು, ಅನಕ್ಷರತೆ, ಭೂರಹಿತತೆ ಮುಂತಾದ ಸಮಸ್ಯೆಗಳ ಕುರಿತು ಈ ಮೇಲೆ ವಿವರಿಸಲಾಗಿದೆ. ಇದರೊಂದಿಗೆ ಪ್ರಸ್ತುತ ಅಧ್ಯಯನದಲ್ಲಿ ಬುಡಕಟ್ಟು ಸಮುದಾಯಗಳು (ಹಾವೇರಿ ಜಿಲ್ಲೆಯನ್ನೂ ಒಳಗೊಂಡಂತೆ) ಎದುರಿಸುತ್ತಿರುವ ಇನ್ನಿತರ ಸಮಸ್ಯೆಗಳನ್ನು ಕೂಡ ಚರ್ಚಿಸುವ ಪ್ರಯತ್ನ ಮಾಡಲಾಗಿದೆ. ಮೊದಲನೆಯದಾಗಿ ಎಷ್ಟೋ ಬುಡಕಟ್ಟು ಸಮುದಾಯಗಳು ಬುಡಕಟ್ಟು ಸಮುದಾಯವೆಂದು ಪರಿಗಣಿತವಾಗದೆ ಇರುವುದು. ಯಾವುದೇ ಒಂದು ಗುಂಪು ಅಥವಾ ಸಮುದಾಯವನ್ನು ಬುಡಕಟ್ಟು ಎಂದು ಗುರುತಿಸಲು ನಿರ್ದಿಷ್ಟವಾದ ಕೆಲವು ಲಕ್ಷಣಗಳಿವೆ. ಅವರು ಗುಂಪಾಗಿ ವಾಸಿಸುತ್ತಾರೆ. ತಮ್ಮದೇ ಆದ ಭಾಷೆ ಹಾಗೂ ಕಸುಬನ್ನು ಹೊಂದಿರುತ್ತಾರೆ. ಬೇರೆಯವರಿಗಿಂತ ವಿಶಿಷ್ಟವಾದ ಆಚರಣಾ ವಿಧಿ ವಿಧಾನಗಳನ್ನು ಅನುಸರಿಸುತ್ತಾರೆ. ಆದರೆ ಅಧುನಿಕ ಒತ್ತಡಗಳಲ್ಲಿ ಎಷ್ಟೋ ಬುಡಕಟ್ಟುಗಳು ತಮ್ಮ ಚಹರೆಯನ್ನು ಉಳಿಸಿಕೊಳ್ಳಲು ಹೋರಾಡಬೇಕಾದ ಸ್ಥಿತಿ ಇದೆ. ಇಂದು ಹಲವು ಅರೆ ಅಲೆಮಾರಿ ಮತ್ತು ನೆಲೆನಿಂತ ಬುಡಕಟ್ಟು ಸಮುದಾಯಗಳು ತಮ್ಮ ಕಸುಬನ್ನು ಹಾಗೂ ಆಚರಣಾ ಪದ್ಧತಿಗಳನ್ನು ಕೈಬಿಟ್ಟಿದ್ದಾರೆ ಮತ್ತು ಬದಲಾಯಿಸಿಕೊಂಡಿದ್ದಾರೆ. ಉದಾಹರಣೆ ಹೆಳವರು, ಮೇದರು, ದುರುಗಮುರುಗಿ, ಗೊಂದಲಿಗರು, ಬಹುರೂಪಿ ಇತ್ಯಾದಿಗಳು. ಕಾರಣ ಆಧುನಿಕತೆಯೆನ್ನುವುದು ಬುಡಕಟ್ಟುಗಳನ್ನು ಇಬ್ಬಂದಿತನಕ್ಕೆ ದೂಡುತ್ತವೆ. ಇಂತಹ ಸಂದರ್ಭದಲ್ಲಿ ಬುಡಕಟ್ಟುಗಳು ಯಾವುವು ಎಂದು ಗುರುತಿಸುವುದೇ ತುಂಬಾ ಕಷ್ಟಕರವಾದ ವಿಚಾರವಾಗಿದೆ. ಅರೆ ಮಲೆನಾಡು ಮತ್ತು ಬಯಲು ಸೀಮೆಯಲ್ಲಿ ಇತರೆ ಜಾತಿ ಸಮುದಾಯಗಳೊಂದಿಗೆ ಸಹಬಾಳ್ವೆ ಮಾಡುತ್ತಿರುವ ಬುಡಕಟ್ಟು ಸಮುದಾಯಗಳು ಇಂತಹ ಸಮಸ್ಯೆಗಳನ್ನು ಹೆಚ್ಚು ಎದುರಿಸುತ್ತಿವೆ. ಇಂತಹ ಬುಡಕಟ್ಟುಗಳನ್ನು ಗುರುತಿಸಲು ಸೂಕ್ಷ್ಮ ಮನೋಭಾವ ಹಾಗೂ ಆಳವಾದ ಅಧ್ಯಯನ ಮಾಡಬೇಕಾಗುತ್ತದೆ. ಕ್ಷೇತ್ರಕಾರ್ಯ ಮಾಡುವವರಲ್ಲಿ ತಾಳ್ಮೆ ಮತ್ತು ಆಳವಾದ ಅಧ್ಯಯನ ಗುಣದ ಕೊರತೆಯಿಂದಾಗಿಯೇ ಇಂದು ಎಷ್ಟೋ ಸಮುದಾಯಗಳು ಬುಡಕಟ್ಟು ಪಟ್ಟಿಯಲ್ಲಿ ಸೇರದೇ ಹೋಗಿವೆಯೆಂದು ಹೇಳಬಹುದು. ಆದ್ದರಿಂದ ಇಂದು ಅನುಸೂಚಿತ ಪಟ್ಟಿಯಿಂದ ಹೊರಗುಳಿದ ಬುಡಕಟ್ಟು ಸಮುದಾಯಗಳನ್ನು ಮರಳಿ ಅಧ್ಯಯನ ನಡೆಸಿ ಅವುಗಳನ್ನು ಅನುಸೂಚಿತ ಬುಡಕಟ್ಟು ಪಂಗಡಗಳಲ್ಲಿ ಸೇರಿಸಬೇಕಾದ ಅಗತ್ಯತೆ ಇದೆ. ಹೀಗೆ ಮಾಡದೇ ಹೋದಲ್ಲಿ ಆ ಎಲ್ಲಾ ಬುಡಕಟ್ಟು ಸಮುದಾಯಗಳಿಗೂ ಅನ್ಯಾಯ

ಮಾಡಿದಂತಾಗುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರ, ಎಪ್ರಿಲ್ 2015 ರಿಂದ ಕೈಗೊಂಡಿರುವ ಜಾತಿಗಣತಿ ಕಾರ್ಯ ಆಶಾದಾಯಕ ಬೆಳವಣಿಗೆಯಾಗಿದೆ.

ಎರಡನೆಯದಾಗಿ ಬುಡಕಟ್ಟು ಸಮುದಾಯಗಳು ಅನುಸೂಚಿತ ಪಟ್ಟಿಗೆ ಸೇರಿಯೂ ಸೌಲಭ್ಯ ವಂಚಿತವಾಗಿರುವುದು. ಬುಡಕಟ್ಟು ಪಂಗಡಗಳಿಗೆ ದೊರೆಯಬೇಕಾದ ಸೌಲಭ್ಯಗಳನ್ನು ಕೆಲವೇ ಕೆಲವು ಸಮುದಾಯಗಳು ಪಡೆಯುತ್ತಿವೆ. ಅನುಸೂಚಿತ ಪಟ್ಟಿಗೆ ಸೇರಿದ್ದರೂ, ಎಷ್ಟೋ ಬುಡಕಟ್ಟು ಸಮುದಾಯಗಳು ಸೌಲಭ್ಯ ವಂಚಿತವಾಗಿಯೇ ಉಳಿದಿವೆ. ಇಂತಹ ಸಮುದಾಯಗಳಿಗೂ ಸೌಲಭ್ಯ ದೊರೆಯುವಂತೆ ಮಾಡಿದರೆ ಒಳಿತಾಗುತ್ತದೆ.

ಮೂರನೆಯದಾಗಿ ಬುಡಕಟ್ಟು ಸಮುದಾಯಕ್ಕೆ ಸೇರಿದ ಸಮುದಾಯಗಳು ರಾಜಕೀಯ ಪ್ರಾಬಲ್ಯದಿಂದ ಪರಿಶಿಷ್ಟ ಪಂಗಡದ ಪಟ್ಟಿಗೆ ನುಸುಳುವ ಪ್ರಯತ್ನ ನಡೆಸುವುದು, ಈ ರೀತಿಯಲ್ಲಿ ಹೊಸದಾಗಿ ಸಮೀಕ್ಷೆ ನಡೆಸಿ ಪರಿಶಿಷ್ಟ ಪಂಗಡದಲ್ಲಿ ಹೊಸ ಸಮುದಾಯಗಳನ್ನು ಸೇರಿಸುವಾಗ ಕೆಲವು ತೊಂದರೆಗಳು ಏರ್ಪಡುತ್ತವೆ. ಮುಖ್ಯವಾಗಿ ಈಗಾಗಲೇ ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿ ಗುರುತಿಸಿಕೊಂಡಿರುವ ಸಮುದಾಯಗಳು ಹೊಸದಾಗಿ ಬೇರೆ ಸಮುದಾಯಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸುವುದನ್ನು ಆಕ್ಷೇಪಿಸುತ್ತವೆ. ತನ್ನ ಸವಲತ್ತುಗಳನ್ನು ಹಂಚಿಕೊಳ್ಳಲು ಇನ್ನೊಂದು ಬಾಯಿ ಇಲ್ಲಿ ಸೃಷ್ಟಿಯಾಗಿದೆಯಲ್ಲ ಎನ್ನುವ ಸಂಕಟವೇ ಇಂಥ ಆಕ್ಷೇಪಣೆ, ಪ್ರತಿಭಟನೆಗಳಿಗೆ ಕಾರಣವಾಗಿರುತ್ತದೆ. ಈ ರೀತಿಯ ಆಕ್ಷೇಪಣೆಯಂತೆ ಹೊರಗುಳಿಯಬೇಕಾದಲ್ಲಿ ಹೊಸದಾಗಿ ಪರಿಶಿಷ್ಟ ಪಂಗಡಕ್ಕೆ ಸೇರಬಹುದಾದ ಸಮುದಾಯ/ಬುಡಕಟ್ಟುಗಳನ್ನು ಗುರುತಿಸಿ ಪರಿಶಿಷ್ಟ ಪಂಗಡಕ್ಕೆ ಸಿಗುವ ಸೌಲಭ್ಯಗಳೆಲ್ಲವೂ ಈ ಸಮುದಾಯಗಳಿಗೆ ದೊರೆಯುವಂತೆ ಪ್ರತ್ಯೇಕ ಮಿಸಲಾತಿ ಕಲ್ಪಿಸುವುದು ಇಲ್ಲವೇ ಈಗಿರುವ ಶೇ.3ರ ಮೀಸಲಾತಿ ಸೌಲಭ್ಯವನ್ನು ಶೇ.7.5ಕ್ಕೆ ವಿಸ್ತರಿಸುವುದು. ಇದರಿಂದಾಗಿ ಈಗಾಗಲೇ ಸೌಲಭ್ಯ ಪಡೆಯುತ್ತಿರುವ ಅನುಸೂಚಿತ ಬುಡಕಟ್ಟು ಪಂಗಡಗಳ ಪ್ರತಿಭಟನೆ ತಪ್ಪಿಸಬಹುದಾಗಿದೆ.

ಹಾವೇರಿ ಜಿಲ್ಲೆಯ ಕ್ಷೇತ್ರಕಾರ್ಯ ಕೈಗೊಂಡಾಗ ಕಂಡು ಬಂದ ಮತ್ತೊಂದು ಬೆಳವಣಿಗೆಯೆಂದರೆ ಬುಡಕಟ್ಟು ಸಮುದಾಯಕ್ಕೆ ಸೇರದ ವ್ಯಕ್ತಿ, ತಾನು ಬುಡಕಟ್ಟು ಸಮುದಾಯಕ್ಕೆ ಸೇರಿದವನೆಂದು ಹೇಳಿಕೊಂಡು ಮೀಸಲಾತಿ ಸೌಲಭ್ಯ ಪಡೆದಿರುವುದು. ಉದಾಹರಣೆ ದುರುಗ ಮುರುಗಿ ಸಮುದಾಯದವರು ತಾವು ವಾಲ್ಮಿಕಿ ಪಂಗಡಕ್ಕೆ ಸೇರಿದವರೆಂದು ಹೇಳಿ ತಹಸಿಲ್ದಾರರ ಕಡೆಯಿಂದ ಜಾತಿ ಪ್ರಮಾಣ ಪತ್ರ ಪಡೆದಿರುವುದು ಕಂಡುಬಂತು. ಇದನ್ನು ನಿರ್ದಾಕ್ಷಿಣ್ಯವಾಗಿ ತಡೆಗಟ್ಟಬೇಕು. ಹಾಗೇ ಈ ರೀತಿ ಸೌಲಭ್ಯ ಪಡೆಯುತ್ತಿರುವ ವ್ಯಕ್ತಿಗಳ ಕುರಿತು ಸೂಕ್ತ ಕ್ರಮ ಕೈಗೊಳ್ಳುವಂತಾಗಬೇಕು. ಪ್ರಸ್ತುತ ಸುಮಾರು ಐವತ್ತು ಬುಡಕಟ್ಟು ಸಮುದಾಯಗಳನ್ನು ಕರ್ನಾಟಕದಲ್ಲಿ ಗುರುತಿಸಿ ಅನುಸೂಚಿತ ಪಟ್ಟಿಯಲ್ಲಿ ಸೇರಿಸಲಾಗಿದೆಯಾದರೂ, ಮುಖ್ಯವಾಗಿ ನೌಕರಿ ಇತ್ಯಾದಿ ಸೌಲಭ್ಯಗಳನ್ನು ಪಡೆಯುತ್ತಿರುವ

ಬುಡಕಟ್ಟು ಸಮುದಾಯಗಳು ಬೆರಳೆಣಿಕೆಯಷ್ಟೆಂದರೆ ತಪ್ಪಾಗದು. ಆದ್ದರಿಂದ ಎಲ್ಲಾ ಬುಡಕಟ್ಟು ಸಮುದಾಯಗಳಿಗೂ ಸೌಲಭ್ಯ ಪಡೆಯುವಲ್ಲಿ ಸಮಾನ ಹಂಚಿಕೆಯಾಗುವಂತೆ ಗಮನ ಹರಿಸಬೇಕಾಗಿದೆ.

ರಾಜ್ಯದಲ್ಲಿಯೂ ಸೇರಿದಂತೆ ಈ ದೇಶದಲ್ಲಿ ಬುಡಕಟ್ಟುಗಳ ಸಮಸ್ಯೆ ಒಂದೇ ತೆರನಾಗಿಲ್ಲ. ಬಹುತೇಕ ಉತ್ತರ ಭಾರತದ ಬುಡಕಟ್ಟುಗಳು ಅವುಗಳ ಜನಸಂಖ್ಯಾ ಪ್ರಾಬಲ್ಯ ಮತ್ತು ಸ್ವಲ್ಪ ಮಟ್ಟಿನ ಶಿಕ್ಷಣದಿಂದಾಗಿ ತಮ್ಮ ಸಂವಿಧಾನಾತ್ಮಕ ಹಕ್ಕುಗಳ ರಕ್ಷಣೆಯ ಜೊತೆಗೆ ಸರ್ಕಾರದಿಂದ ವಿಶೇಷ ಸವಲತ್ತುಗಳನ್ನು ಪಡೆಯುವಲ್ಲಿ ಸಫಲವಾಗಿದೆ. ಆದರೆ ದಕ್ಷಿಣ ಭಾರತದ ಬೆಟ್ಟಗುಡ್ಡ, ಗಿರಿಕಾನನಗಳಲ್ಲಿ ವಾಸಿಸುವ ಬುಡಕಟ್ಟುಗಳು ಮೂಲ ಸವಲತ್ತುಗಳಿಲ್ಲದೆ ತುಂಬಾ ನಿಕೃಷ್ಟ ಸ್ಥಿತಿಯಲ್ಲಿವೆ ಎಂಬುದು ಅವರ ನೆಲೆಗಳನ್ನು ನೋಡಿದರೆ ಗೊತ್ತಾಗುತ್ತದೆ. ಇನ್ನು ಬಯಲು ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟುಗಳು ಸಂವಿಧಾನಾತ್ಮಕ ಸವಲತ್ತುಗಳನ್ನು ಪಡೆಯುವುದರ ಜೊತೆಗೆ ಜೀವನ ವಿಧಾನಗಳಲ್ಲಿ ಜಾತಿ ವ್ಯವಸ್ಥೆಗೆ ಹತ್ತಿರವಾಗುತ್ತಿವೆ. ಕನಿಷ್ಟ ಪಕ್ಷ ಸರ್ಕಾರದ ಕಾರ್ಯಕ್ರಮಗಳು ಅವರಿಗೆ ತಲುಪುತ್ತವೆ ಎಂಬುದರಲ್ಲಿ ಸಂದೇಹವಿಲ್ಲ. ಇಂತಹ ಬುಡಕಟ್ಟುಗಳು ತಮ್ಮಷ್ಟಕ್ಕೆ ತಾವು ಪ್ರತ್ಯೇಕವಾಗಿದ್ದರೂ ಸಹ ಸರ್ಕಾರದ ಕಾರ್ಯಕ್ರಮಗಳಲ್ಲಿ ಇವರ ಪಾಲ್ಗೊಳ್ಳುವಿಕೆ ಇದೆ. ಆದರೆ ಕೆಲವು ಬುಡಕಟ್ಟುಗಳು ಅಂದರೆ ಕಂದಾಯ ನೆಲೆಗಳಿಲ್ಲದಿರುವಂತಹ ಬುಡಕಟ್ಟು ನೆಲೆಗಳು ಹಲವು ಮೂಲ ಸೌಕರ್ಯಗಳಿಲ್ಲದೆ ಬುಡಕಟ್ಟು ಜನರ ದಿನನಿತ್ಯದ ಜೀವನ ನಿರ್ವಹಣೆಗೆ ಮತ್ತು ಶಿಕ್ಷಣಕ್ಕೆ ತುಂಬಾ ಅಡ್ಡಿಯಾಗಿರುವುದು ಕಂಡುಬರುತ್ತದೆ.

ಇತಿಹಾಸಕಾರ ಮತ್ತು ಅಂಕಣಕಾರ ರಾಮಚಂದ್ರ ಗುಹಾ 2011 ರಲ್ಲಿ ಆಗಸ್ಟ್ ಹದಿನೈದರಂದು ದೆಹಲಿಯ ಹಿಂದೂಸ್ತಾನ್ ಟೈಮ್ಸ್ ದಿನ ಪತ್ರಿಕೆಗೆ "ಟ್ರೈಬಲ್ ಟ್ರ್ಯಾಜಿಡಿಸ್" (ಬುಡಕಟ್ಟು ಜನಾಂಗಗಳ ದುರಂತ) ಎಂಬ ವಿಶೇಷ ಲೇಖನವನ್ನು ಬರೆದಿದ್ದರು. ಭಾರತದ ಮೂಲನಿವಾಸಿಗಳ ಸಮಸ್ಯೆಯನ್ನು ನಿಖರವಾಗಿ ಗುರುತಿಸಿರುವ ಗುಹಾ ಅವರು, ನಮ್ಮ ಜನಪ್ರತಿನಿಧಿಗಳ ಸಹ ಲೇಖನದಲ್ಲಿ ನಿಷ್ಠುರವಾಗಿ ಅನಾವರಣಗೊಳಿಸಿದ್ದಾರೆ. ಮೂಲನಿವಾಸಿಗಳ ಸಮಸ್ಯೆಯನ್ನು ಏಳು ಬಗೆಯಲ್ಲಿ ರಾಮಚಂದ್ರ ಗುಹಾ ಗುರುತಿಸಿದ್ದಾರೆ. ಅವುಗಳು ಈ ಮುಂದಿನಂತಿವೆ.

1. ದಟ್ಟವಾದ ಅರಣ್ಯದಲ್ಲಿ ತಮ್ಮದೇ ಆದ ಸಂಸ್ಕೃತಿಯ ನೆರಳಿನಲ್ಲಿ ಮತ್ತು ಸಮೃದ್ಧ ಖನಿಜ ಸಂಪತ್ತಿರುವ ಗುಡ್ಡಗಾಡು ಪ್ರದೇಶದಲ್ಲಿ ಬದುಕಿರುವ ಮೂಲನಿವಾಸಿಗಳು ಇಂದು ಅಭಿವೃದ್ಧಿಯ ನೆಪದಲ್ಲಿ ನೆಲೆ ಕಳೆದುಕೊಳ್ಳುತ್ತಿದ್ದಾರೆ. ಗಣಿಗಾರಿಕೆ, ಅಣೆಕಟ್ಟುಗಳ ನಿರ್ಮಾಣ, ಅರಣ್ಯದಲ್ಲಿ ನಿರಂತರವಾಗಿ ನಡೆದಿರುವ ಮರಗಳ ಮಾರಣಹೋಮ ಇವೆಲ್ಲವೂ ಅವರನ್ನು ಅಧುನಿಕ ಅಭಿವೃದ್ಧಿ ಯೋಜನೆಗಳ ಹೆಸರಿನಲ್ಲಿ ಅತಂತ್ರರನ್ನಾಗಿ ಮಾಡಿದೆ. 2. ಭಾರತದಲ್ಲಿ

ದಲಿತರಿಗೆ ದಿಕ್ಕುದೆಸೆಯಾಗಿ ಡಾ. ಬಿ.ಆರ್.ಅಂಬೇಡ್ಕರ್ ಜನ್ಮತಾಳಿದ ಹಾಗೆ ಬುಡಕಟ್ಟು ಜನಾಂಗದ ಸಮುದಾಯಕ್ಕೆ ಒಬ್ಬ ಅಂಬೇಡ್ಕರ್ ದೊರೆಯದಿರುವುದು ಅವರ ಶೋಚನೀಯ ಬದುಕಿಗೆ ಕಾರಣವಾಗಿದೆ. 3. ಭಾರತಾದ್ಯಂತ ಗುಡ್ಡಗಾಡು ಪ್ರದೇಶದಲ್ಲಿ ಹರಿದು ಹಂಚಿಹೋಗಿರುವ ಬುಡಕಟ್ಟು ಜನಾಂಗ ಇಲ್ಲಿಯವರೆಗೆ ಯಾವುದೇ ರಾಜಕೀಯ ಪಕ್ಷಗಳಿಗೆ ಪರಿಶಿಷ್ಟ ಅಥವಾ ಅಲ್ಪಸಂಖ್ಯಾತರ ಹಾಗೆ ಮತಬ್ಯಾಂಕ್‌ಗಳಾಗಿ ಗೋಚರಿಸಲಿಲ್ಲ. 4. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬುಡಕಟ್ಟು ಜನಾಂಗಕ್ಕಾಗಿ ಮೀಸಲಿಟ್ಟ ಉದ್ಯೋಗಗಳು ಈಶಾನ್ಯ ರಾಜ್ಯಗಳ ಬುಡಕಟ್ಟು ಜನಾಂಗದ ವಿದ್ಯಾವಂತರ ಪಾಲಾದವು. 5. ಇವರುಗಳ ಆಶೋತ್ತರಗಳನ್ನು ಈಡೇರಿಸಲು ಉನ್ನತ ಹುದ್ದೆಯಲ್ಲಿ ಬುಡಕಟ್ಟು ಜನಾಂಗದಿಂದ ಬಂದ ಮೇಲ್ಮಟ್ಟದ ಅಧಿಕಾರಿಯಾಗಲಿ, ಅಥವಾ ಒಬ್ಬ ಜನಪ್ರತಿನಿಧಿಯಾಗಲಿ ಇಲ್ಲದಿರುವುದರಿಂದ ಮೂಲನಿವಾಸಿಗಳ ಸಮಸ್ಯೆಗಳು ಈವರೆಗೆ ಸರ್ಕಾರಗಳ ಕಣ್ಣಿಗೆ ಗೋಚರವಾಗಿಲ್ಲ. 6. ಅರಣ್ಯದಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನಾಂಗಗಳ ಬದುಕು ಪರಿಸರಕ್ಕೆ ಮಾರಕವಾಗದಂತೆ, ದೇಶಿ ಜ್ಞಾನಪರಂಪರೆಯಿಂದ ಕೂಡಿದ್ದು ಅವರುಗಳು ಕಾಪಾಡಿಕೊಂಡು ಬಂದಿರುವ ಜ್ಞಾನ ಶಿಸ್ತುಗಳನ್ನು ಸುಲಭವಾಗಿ ಅಧುನಿಕ ಬದುಕಿಗಾಗಲಿ ಅಥವಾ ತಂತ್ರಜ್ಞಾನಕ್ಕಾಗಲಿ ಅಳವಡಿಸಲು ಸಾಧ್ಯವಿಲ್ಲ. 7. ಪಶ್ಚಿಮ ಬಂಗಾಳದ ಸಂತಾಲ್ ಭಾಷೆಯೊಂದನ್ನು ಹೊರತುಪಡಿಸಿದರೆ ಈ ಸಮುದಾಯಗಳ ಉಳಿದ ಮಾತೃಭಾಷೆಗಳಿಗೆ ಅದಿಕೃತ ಮಾನ್ಯತೆ ದೊರೆತಿಲ್ಲ. ಈ ಕಾರಣದಿಂದಾಗಿ ಬುಡಕಟ್ಟು ಜನಾಂಗದ ಮಕ್ಕಳು ಮಾತೃ ಭಾಷೆಯ ಶಿಕ್ಷಣದಿಂದ ವಂಚಿತರಾಗಿದ್ದಾರೆ.

4.2. ಅಭಿವೃದ್ಧಿಯ ವಿಧಾನಗಳು ಮತ್ತು ಸವಾಲುಗಳು:

ಸ್ವಾತಂತ್ರ್ಯಾ ನಂತರ ಭಾರತ ಸರ್ಕಾರ ಹಲವು ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡಿತು. ಅವುಗಳಲ್ಲಿ ಬುಡಕಟ್ಟು ಅಭಿವೃದ್ಧಿಯೂ ಒಂದು ಮಹತ್ವವಾದ ಕಾರ್ಯಯೋಜನೆಯಾಗಿತ್ತು. ಮಹಾತ್ಮ ಗಾಂಧೀಜಿ, ಜವಾಹರಲಾಲ್ ನೆಹರು, ಠಕ್ಕರಬಾಬಾ, ಮಹಾಶ್ವೇತಾದೇವಿ ಮುಂತಾದ ಮಹನೀಯರುಗಳು ಬುಡಕಟ್ಟು ಜನರ ಅಭಿವೃದ್ಧಿಗಾಗಿ ಹಲವು ಅಭಿವೃದ್ಧಿ ನೀತಿಗಳನ್ನು ಪ್ರಸ್ತಾಪಿಸಿ ಅಂದೇ ರೂಪಿಸಿದ್ದರು. ಹಾಗಾದರೆ ಬುಡಕಟ್ಟು ಜನರ ಅಭಿವೃದ್ಧಿ ಹೇಗಾಗಬೇಕು? ಯಾವ ತೆರನಾದ ನೀತಿಗಳು ಅಥವಾ ಯೋಜನೆಗಳು ಬುಡಕಟ್ಟು ಜನರ ಅಭಿವೃದ್ಧಿಗೆ ಪ್ರತ್ಯೇಕವಾಗಿ ಸಹಾಯಕವಾಗುತ್ತವೆ? ಯೋಜನೆಗಳ ಸ್ವರೂಪ ಹೇಗಿರಬೇಕು? ಬುಡಕಟ್ಟುಗಳು ಪ್ರತ್ಯೇಕತೆಯನ್ನು ಉಳಿಸಿಕೊಳ್ಳಬೇಕೆ ಅಥವಾ ರಾಷ್ಟ್ರೀಯ ಧಾರೆಯಲ್ಲಿ ವಿಲೀನವಾಗಬೇಕೆ? ಈ ತೆರನಾದ ಪ್ರಶ್ನೆಗಳ ಬಗ್ಗೆ ಮತ್ತು ಬುಡಕಟ್ಟುಗಳ ಸಮಸ್ಯೆ ಮತ್ತು ಅಭಿವೃದ್ಧಿಯ ಬಗ್ಗೆ ವಾದ ವಿವಾದಗಳು ನಡೆದು ಮಹತ್ವಪೂರ್ಣ ಚರ್ಚೆಗಳು ನಡೆಯಲು ಅವಕಾಶವಾಯಿತು. ಆ ಸಮಯದಲ್ಲಿ ವೆರಿಯರ್ ಎಲ್ವಿನ್ ರವರು 1939 ಮತ್ತು 1988 ರಲ್ಲಿ ಬುಡಕಟ್ಟುಗಳ ಅಧ್ಯಯನ ಬಗ್ಗೆ ಎರಡು ಪುಸ್ತಕಗಳನ್ನು ಪ್ರಕಟಿಸಿದರು. ಈ

ಪುಸ್ತಕಗಳಲ್ಲಿ ಎಲ್ವಿನ್ ರವರು ಬುಡಕಟ್ಟುಗಳನ್ನು ಹೊರಗಿನವರಿಂದ ರಕ್ಷಿಸಲು ಪ್ರತ್ಯೇಕವಾಗಿಡಬೇಕು ಎಂದು ಪ್ರತಿಪಾದಿಸಿದ್ದರು. ವೆರಿಯರ್ ಎಲ್ವಿನ್ ರವರು ಬುಡಕಟ್ಟುಗಳ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದು ಮಾತ್ರವಲ್ಲದೇ ಅವರನ್ನು ಪ್ರತ್ಯೇಕವಾಗಿಯೇ ಬೆಳೆಸಬೇಕು ಎಂದು ಅಭಿಪ್ರಾಯಪಟ್ಟಿದ್ದರು. ಆದರೆ ಪ್ರಸಿದ್ಧ ಸಮಾಜಶಾಸ್ತ್ರಜ್ಞ ಪ್ರೊ ಜಿ ಎಸ್ ಘುರ್ರೆರವರು ಬುಡಕಟ್ಟುಗಳು ಹಿಂದುಳಿದ ಹಿಂದೂಗಳಾಗಿದ್ದು, ಮುಖ್ಯವಾಹಿನಿಯಲ್ಲಿ ವಿಲೀನವಾಗುವುದೇ ಒಳಿತು ಎಂಬ ಅಭಿಪ್ರಾಯ ಹೊಂದಿದ್ದರು. ಮುಂದುವರಿದು ಘುರ್ರೆಯವರು ಭಾರತದ ಬುಡಕಟ್ಟುಗಳು ಬಹುದೊಡ್ಡ ಜನಸಂಖ್ಯೆಯಿಂದ ಬೇರ್ಪಟ್ಟಿರುವುದೇ ಅವರ ಹಿಂದುಳಿದಿರುವಿಕೆಗೆ ಕಾರಣ ಎಂದು ನಂಬಿದ್ದರು. ಆದ್ದರಿಂದ ಬಡಕಟ್ಟುಗಳ ಕಡುಬಡತನವನ್ನು ಹೋಗಲಾಡಿಸಲು ಮತ್ತು ಜೀವನ ಮಟ್ಟವನ್ನು ವೃದ್ಧಿಸಲು ಮುಖ್ಯವಾಹಿನಿಯಲ್ಲಿ ವಿಲೀನ ಮಾಡಬೇಕು ಎಂಬುದಾಗಿ ಅಭಿಪ್ರಾಯಪಟ್ಟರು.

ವಿದ್ವಾಂಸರುಗಳ ವಾದ, ಚರ್ಚೆ, ಪ್ರತಿಪಾದನೆ ಮತ್ತು ಸಂವೇದನೆಗಳ ದೃಷ್ಟಿಕೋನ ಏನೇ ಇದ್ದರೂ, ಇಂದು ಬುಡಕಟ್ಟುಗಳ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಪರಿಸರೀಯ ಸ್ಥಿತಿಗತಿಗಳನ್ನು ಅವಲೋಕಿಸಿದರೆ, ಕೈಗಾರಿಕೀಕರಣ, ನಗರೀಕರಣ, ಅಧುನೀಕರಣ ಮತ್ತು ಪಾಶ್ಚಾತ್ತೀಕರಣದ ಪ್ರಕ್ರಿಯೆಗಳು ಬುಡಕಟ್ಟು ಜನಜೀವನದ ಮೇಲೆ ಪ್ರಭಾವ ಬೀರುತ್ತಿರುವುದು ಕಂಡುಬರುತ್ತಿದೆ. ಒಂದು ವೇಳೆ ನಾವು ಬುಡಕಟ್ಟುಗಳನ್ನು ಪ್ರತ್ಯೇಕವಾಗಿಟ್ಟು ಅವರನ್ನು ಸಂರಕ್ಷಿಸುತ್ತೇವೆ ಮತ್ತು ಅವರ ಅಭಿವೃದ್ಧಿಯನ್ನು ಸಾಧಿಸುತ್ತೇವೆ ಎಂದು ಹೇಳಿದರೆ ಅದು ಅಪ್ಪಟ ಸುಳ್ಳಾಗುತ್ತದೆ. ಕಾರಣ ಬುಡಕಟ್ಟು ಜನರ ಮತ್ತು ಅವರ ಸಂಸ್ಕೃತಿಯ ಮೇಲೆ ಈ ಮೇಲೆ ಹೇಳಿದ ಪ್ರಕ್ರಿಯೆಗಳು ಬಿರುಗಾಳಿಯಾಗಿ ಬೀಸಿ ತಲ್ಲಣವನ್ನು ಎಬ್ಬಿಸುತ್ತಿವೆ. ನಾವು ಎಷ್ಟೇ ಪ್ರಯತ್ನ ಪಟ್ಟರೂ ನಗರೀಕರಣ, ಅಧುನೀಕರಣ ಪ್ರಕ್ರಿಯೆಗಳ ಪ್ರಭಾವವನ್ನು ತಪ್ಪಿಸಲಿಕ್ಕೆ ಸಾಧ್ಯವಿಲ್ಲ ಮತ್ತು ಇವು ಈಗಿನ ಸಮಾಜಗಳ ಬದಲಾವಣೆಯ ಅವಿಭಾಜ್ಯ ಅಂಗಗಳಾಗಿವೆ. ಒಂದು ವಾದದ ಪ್ರಕಾರ ಬುಡಕಟ್ಟಿನ ಸಂಸ್ಕೃತಿಯು ನಾಶವಾಗುತ್ತಿದೆ. ಅದನ್ನು ರಕ್ಷಿಸಿ ಬುಡಕಟ್ಟಿನ ಸಂಸ್ಕೃತಿಯ ಅನನ್ಯತೆಯನ್ನು ಉಳಿಸಿಕೊಳ್ಳಬೇಕು ಎಂಬುದು. ಆದರೆ ಬುಡಕಟ್ಟುಗಳಿಗೆ ಕೇವಲ ಸಾಂಸ್ಕೃತಿಕ ಅನನ್ಯತೆಗಳಿರದೆ ಇತರೆ ಸಾಮಾಜಿಕ, ಆರ್ಥಿಕ ಅಥವಾ ಇನ್ನಿತರೆ ಅನನ್ಯತೆಗಳು ಇರುತ್ತವೆ. ಉದಾಹರಣೆಗಾಗಿ ಬುಡಕಟ್ಟುಗಳ ದೇಶಿಯ ತಂತ್ರಜ್ಞಾನ ಮತ್ತು ಬುಡಕಟ್ಟುಗಳ ದೇಶೀಯ ಔಷಧ ಪದ್ಧತಿ ಇಂಥವುಗಳ ಸಂರಕ್ಷಣೆ ಅಗತ್ಯವಾಗಿದೆ. ಇವುಗಳನ್ನು ಕಾಪಾಡಿ ಇವುಗಳಿಗೆ ಜಾಗತಿಕ ಮಾರುಕಟ್ಟೆಯನ್ನು ಒದಗಿಸಬೇಕಾಗುತ್ತದೆ. ಕಾಲ ಕಳೆದಂತೆಲ್ಲಾ ಹಲವು ತೆರನಾದ ಪ್ರಭಾವಗಳಿಗೆ ತುತ್ತಾಗಿ ಬುಡಕಟ್ಟುಗಳಲ್ಲಿ ಸಾಮಾಜಿಕ ಚಲನೆ ಮತ್ತು ಬದಲಾವಣೆ ಉಂಟಾಗುವುದರಿಂದ ಬುಡಕಟ್ಟು ಸಂಸ್ಕೃತಿ ಮತ್ತು ಅವರ ಸಾಂಪ್ರದಾಯಿಕ ತಂತ್ರಜ್ಞಾನವನ್ನು ರಕ್ಷಿಸುವುದು ಅನಿವಾರ್ಯವಾಗಿದೆ. ಏಕೆಂದರೆ ಬುಡಕಟ್ಟುಗಳು ಅರಣ್ಯಗಳಲ್ಲಿ ತಲೆತಲಾಂತರದಿಂದ ವಾಸಿಸುತ್ತಾ ಅರಣ್ಯ ಜೀವಿಗಳಿಗೆ ತೊಂದರೆ ಮಾಡದಂತೆ ಮತ್ತು

ಗಿಡಮೂಲಿಕೆಯ ಔಷಧಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದು ಅರಣ್ಯಗಳ ಅವಿಭಾಜ್ಯ ಅಂಗವಾಗಿದ್ದಾರೆ. ಇಲ್ಲಿ ನಮ್ಮ ಮುಂದಿರುವ ಪ್ರಶ್ನೆಗಳೆಂದರೆ ಬುಡಕಟ್ಟುಗಳು ತಮ್ಮ ಪಾಡಿಗೆ ತಾವು ತಮ್ಮ ಮೂಲ ಸಂಸ್ಕೃತಿಯಲ್ಲಿ ಇರಬೇಕೆ ಅಥವಾ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕೆ ಅಥವಾ ಸಮಾಜದ ಭಾಗವಾಗಬೇಕೆ ಎಂಬುದು. ಹೇಗೂ ಸಾಮಾಜಿಕ ಪರಿವರ್ತನೆಗಳ ಪ್ರಭಾವ ಬುಡಕಟ್ಟು ಜನರ ಮೇಲೆ ಆಗುವುದರಿಂದ, ಬುಡಕಟ್ಟು ಜನರ ಸಂಸ್ಕೃತಿ, ನೆಲ, ಜಲ, ಅದರ ಸಾಂಪ್ರದಾಯಿಕ ಕಸುಬು ತಂತ್ರಜ್ಞಾನವನ್ನು ಸಂರಕ್ಷಿಸಿಕೊಂಡೇ ಅವರನ್ನು ನಿಜವಾದ ವಿದ್ಯುತ್, ರಸ್ತೆ, ಶಾಲೆ ಮುಂತಾದ ಸೌಲಭ್ಯಗಳನ್ನು ಕಲ್ಪಿಸಿ ಜೀವನ ಮಟ್ಟವನ್ನು ಉತ್ತಮ ಪಡಿಸುವುದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಬುಡಕಟ್ಟು ಆಯೋಗದ ರಾಷ್ಟೀಯ ಅಧ್ಯಕ್ಷರು ಹೇಳುವಂತೆ ಎಷ್ಟೋ ಬುಡಕಟ್ಟು ಪುನರ್‌ವಸತಿ ಯೋಜನೆಗಳು ವಿಫಲವಾಗಿವೆ ಎಂದಿದ್ದಾರೆ. ಪುನರ್‌ವಸತಿ ಕಾಲೋನಿಗಳಲ್ಲಿ ವಿದ್ಯುತ್, ರಸ್ತೆ, ಶಾಲಾ ಸೌಲಭ್ಯಗಳ ಕೊರತೆ ಎದ್ದು ಕಾಣುತ್ತದೆ. ಈ ನಿಟ್ಟಿನಲ್ಲಿ ಬುಡಕಟ್ಟುಗಳ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಬುಡಕಟ್ಟುಗಳಂತೆ ಇರುವ ಬುಡಕಟ್ಟು ಸಮುದಾಯಗಳು ವಾಸಿಸುವ ಪ್ರದೇಶಗಳನ್ನು ಪರಿಶಿಷ್ಟ ಬುಡಕಟ್ಟುಗಳ ಪ್ರದೇಶಗಳೆಂದು ಘೋಷಿಸಿ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕಾಗುತ್ತದೆ. ಅಲ್ಲದೆ ಕರ್ನಾಟಕ ರಾಜ್ಯದ ಕೆಲವು ಪ್ರದೇಶಗಳನ್ನೊಳಗೊಂಡಂತೆ ಹಲವು ಬುಡಕಟ್ಟು ನೆಲೆಗಳನ್ನು ಗುರುತಿಸಿ ಕಂದಾಯ ಗ್ರಾಮಗಳೆಂದು ಘೋಷಿಸಬೇಕು. ಆಗ ಮಾತ್ರ ಸರ್ಕಾರದ ಯೋಜನೆಯ ಕಾರ್ಯಕ್ರಮಗಳು ನೇರವಾಗಿ ಬುಡಕಟ್ಟು ಜನರಿಗೆ ತಲುಪಲು ಸಾಧ್ಯವಾಗುತ್ತದೆ. ಮುಖ್ಯವಾಗಿ ಶಾಲೆಗಳನ್ನು ಸ್ಥಾಪಿಸಿ ಪ್ರಾಥಮಿಕ ಶಿಕ್ಷಣವನ್ನು ಕೊಡುವುದು ಮುಖ್ಯವಾಗುತ್ತದೆ. ಜೊತೆಗೆ ಉನ್ನತ ಶಿಕ್ಷಣಕ್ಕೆ ಪ್ರೇರೇಪಿಸುವುದು, ಇಂದಿನ ಅಗತ್ಯಗಳಲ್ಲಿ ಒಂದಾಗಿದೆ.

ಆಡಳಿತಶಾಹಿ ವ್ಯವಸ್ಥೆಯು/ಸರ್ಕಾರವು ಬುಡಕಟ್ಟು ಸಮುದಾಯಗಳ ಮನೋಭಾವನೆಗೆ ಸ್ಪಂದಿಸುವಂತಿರಬೇಕು. ಇಲ್ಲದೆ ಹೋದರೆ ಈಗ ನಡೆಯುತ್ತಿರುವಂತೆ ಕಾಡಿನಲ್ಲಿಯೇ ನೆಲೆಸಿರುವ ಬುಡಕಟ್ಟುಗಳನ್ನು ನಾಡಿಗೆ ಎಳೆದು ತರುವುದು. ಅವುಗಳಿಗೆ ಅನುಕೂಲವಾಗುವುದಕ್ಕಿಂತ ಅನಾನುಕೂಲವೇ ಹೆಚ್ಚಾಗುವಂತೆ ಮನೆಗಳನ್ನು ನಿರ್ಮಿಸಿಕೊಡುವುದು, ಬುಡಕಟ್ಟು ಮಹಿಳೆಯರನ್ನು ಲೈಂಗಿಕವಾಗಿ ಶೋಷಿಸುವುದು ನಿಲ್ಲುವಂತಾಗಬೇಕು. ಕಾಡಿನಲ್ಲಿ ವಾಸಿಸುವ ತಮಗೆ ಅನುಕೂಲವಾಗುವಂತೆ ತುಂಬಾ ಸರಳವಾದ ಮನೆಗಳನ್ನು ಅತೀ ಕಡಿಮೆ ಖರ್ಚಿನಲ್ಲಿ ಬುಡಕಟ್ಟು ಸಮುದಾಯಗಳು ನಿರ್ಮಿಸಿಕೊಳ್ಳುತ್ತವೆ. ಅಂತಹದೇ ಮನೆಗಳನ್ನು ನಿರ್ಮಿಸಿಕೊಡುವುದರಿಂದ ಸರ್ಕಾರಕ್ಕೆ ಇನ್ನೂ ಹೆಚ್ಚಿನ ಉಳಿತಾಯವೇ ಆಗುತ್ತದೆ. ಆದರೆ ಸರ್ಕಾರ ಮತ್ತು ಯೋಜನೆಗಳನ್ನು ರೂಪಿಸುವವರು ಇಂತಹ ಸೂಕ್ಷ್ಮತೆಗಳನ್ನು ಅರಿಯದೇ ಹೋಗುತ್ತಾರೆ. ಇದರಿಂದ ಕಾಂಟ್ರಾಕ್ಟುದಾರರಿಗೆ, ಯೋಜನೆ ರೂಢಿಸಿದವರಿಗೆ, ಸರ್ಕಾರಿ ಅಧಿಕಾರಿಗಳಿಗೆ ಹೆಚ್ಚಿನ ಲಾಭವೇ ಹೊರತು ಅದನ್ನು ಉಪಯೋಗಿಸಬೇಕಿದ್ದ ಸಮುದಾಯಗಳಿಗೆ

ಅದರಿಂದ ಯಾವುದೇ ಉಪಯೋಗವಾಗುವುದಿಲ್ಲ. ಬಹುತೇಕವಾಗಿ ಸರ್ಕಾರ ಕಟ್ಟಿಸಿಕೊಟ್ಟ ಮನೆಗಳು ಖಾಲಿಯಾಗಿಯೇ ಉಳಿಯುವ ಸಾಧ್ಯತೆಗಳೇ ಹೆಚ್ಚು. ಆದ್ದರಿಂದ ಅವೈಜ್ಞಾನಿಕ ರೀತಿಯಲ್ಲಿ ಮನೆ ಕಟ್ಟಿಸದೆ ಬುಡಕಟ್ಟು ಜನರ ಮನೋಭಾವನೆಗೆ ಒಗ್ಗುವಂತಹ ಮನೆಗಳನ್ನು ನಿರ್ಮಿಸಿದರೆ ಒಳಿತು. ಇದು ಕೇವಲ ಮನೆಯೊಂದರ ವಿಚಾರವಲ್ಲ. ಪ್ರತಿಯೊಂದು ಹಂತದಲ್ಲಿಯೂ ಬುಡಕಟ್ಟುಗಳ ಮನೋಭಾವನೆಗೆ ಸರ್ಕಾರ ಮತ್ತು ಅಧಿಕಾರಿಗಳು ಸ್ಪಂದಿಸಬೇಕು. ಆಧುನಿಕ ಒತ್ತಡಗಳಲ್ಲಿ ನಲುಗಿ ಹೋಗಿರುವ ಬುಡಕಟ್ಟುಗಳಿಗೆ ಇಂದು ಜಾಗತೀಕರಣದ ಭೀತಿ ಇನ್ನೂ ಗಾಢವಾಗಿ ಹೆದರಿಸುತ್ತಿದೆ. ಇಂತಹ ಹಲವು ಸಮಸ್ಯೆಗಳಿಂದ ಬುಡಕಟ್ಟು ಸಮುದಾಯಗಳನ್ನು ಕಾಪಾಡುವ ಕೆಲಸ ಸರ್ಕಾರ ಮತ್ತು ಪ್ರಜ್ಞಾವಂತರು ಹಾಗೂ ಸಾರ್ವಜನಿಕರಿಂದ ಆಗಬೇಕಾಗಿದೆ.

ಅರೆ ಅಲೆಮಾರಿ ಬುಡಕಟ್ಟು ಸಮುದಾಯಗಳಲ್ಲಿ ಜೀತ ಪದ್ಧತಿ ಹಾಗೂ ಪಾರಂಪರಿಕ ಕಸಬುಗಳಿಂದಾಗಿ ಶಾಲೆಗೆ ಹೋಗುವವರ ಸಂಖ್ಯೆ ಕಡಿಮೆ ಇದೆ. ಇಂದಿಗೂ ಜಮೀನ್ದಾರರು ಬುಡಕಟ್ಟು ಮಕ್ಕಳನ್ನು ಜೀತಕ್ಕೆ ಇಟ್ಟುಕೊಂಡು ಶಾಲೆಗೆ ಹೋಗುವುದನ್ನು ತಡೆಯುವ ವ್ಯವಸ್ಥಿತ ಸಂಚನ್ನು ಕೆಲವು ಕಡೆಗಳಲ್ಲಿ ನೋಡಬಹುದಾಗಿದೆ. ಶಾಲೆಗೆ ಕಲಿಯಲು ಹೋದರೆ ವಿದ್ಯಾವಂತರಾಗಿ ತಮ್ಮ ಹಕ್ಕುಗಳ ಪ್ರತಿಪಾದನೆಯ ಬಗ್ಗೆ ಅರಿವು ಬರುತ್ತದೆ. ಆಗಾಗ ನಮ್ಮ ಜಮೀನಿನಲ್ಲಿ ಮತ್ತು ಮನೆಯಲ್ಲಿ ಜೀತದಾಳುಗಳಾಗಿ ದುಡಿಯಲು ಬರುವುದಿಲ್ಲವೆಂದು ಬೇಕಂತಲೇ ಅವರನ್ನು ಶಾಲೆಗೆ ಹೋಗದಂತೆ ನೋಡಿಕೊಳ್ಳುತ್ತಾರೆ. ಸರ್ಕಾರ ಇತ್ತೀಚೆಗೆ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ಮತ್ತು ಉತ್ತೇಜನ ಕೊಡುತ್ತಿದ್ದು, ಹಲವಾರು ಸುಧಾರಣಾ ಕ್ರಮಗಳನ್ನು ಕೈಗೊಂಡಿರುವುದರಿಂದ ಇಂದು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಮಕ್ಕಳು ಶಾಲೆಗೆ ಕಲಿಯಲು ಹೋಗುತ್ತಿರುವುದನ್ನು ನೋಡಬಹುದು ಇಂತಹದೇ ಶಿಕ್ಷಣದ ಕಾರ್ಯಕ್ರಮಗಳನ್ನು ವಿಶೇಷವಾಗಿ ಬುಡಕಟ್ಟು ಜನರ ಮಕ್ಕಳಿಗಾಗಿ ಅವರಿರುವ ಪ್ರದೇಶಗಳಿಗೆ ವಿಸ್ತರಿಸಿದರೆ ಅದರಿಂದ ಈ ಜನರ ಮೊದಲ ಪೀಳಿಗೆಯ ಜನರ ಶಿಕ್ಷಣದ ದಾಹದ ಸಮಸ್ಯೆ ನಿವಾರಣೆಯಾಗುವುದರಲ್ಲಿ ಸಂಶಯವಿಲ್ಲ. ಬುಡಕಟ್ಟು ಜನರು ಎಲ್ಲರಂತೆ ವಿದ್ಯಾವಂತರಾಗಿ ಅವರೂ ಅಭಿವೃದ್ಧಿಯ ಯೋಜನೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಲು ಸಹಾಯಕವಾಗುತ್ತದೆ. ಆದ್ದರಿಂದ ಶಿಕ್ಷಣ ಬುಡಕಟ್ಟು ಜನರಿಗೆ ಒಂದು ಮುಖ್ಯವಾದ ವಾಹಕವಾಗಿದೆ ಮತ್ತು ಅವರ ಸಾಮಾಜಿಕ ಚಲನೆಗೆ ಅನುವು ಮಾಡಿಕೊಡುತ್ತದೆ. ಈ ಪ್ರಕ್ರಿಯೆಯಿಂದ ಬುಡಕಟ್ಟುಗಳ ಅನನ್ಯತೆಯನ್ನು ಉಳಿಸಿ ಮತ್ತು ಸಂರಕ್ಷಿಸಿಕೊಂಡೇ ಅವರ ಅಭಿವೃದ್ಧಿ ಮಾಡಬಹುದು. ಉದಾ: ಈಶಾನ್ಯ ವಲಯದ ನಾಗಾಗಳು ತಮ್ಮ ಸಂಸ್ಕೃತಿಯ ಅನನ್ಯತೆಯನ್ನು ಉಳಿಸಿಕೊಂಡೇ ಹೋರಾಟದ ಮೂಲಕ ತಮ್ಮ ಹಕ್ಕುಗಳನ್ನು ರಕ್ಷಿಸಿ ಮತ್ತು ಪ್ರತಿಪಾದಿಸಿಕೊಂಡು ಅಭಿವೃದ್ಧಿ ಹೊಂದುತ್ತಿದ್ದಾರೆ. ಪರಿಣಾಮವಾಗಿ ಅಲ್ಲಿನ ಸರ್ಕಾರ ನಾಗಾ ಬುಡಕಟ್ಟುಗಳ ಪ್ರದೇಶವನ್ನು ಅನುಸೂಚಿತ ಪ್ರದೇಶ ಎಂದು ಘೋಷಿಸಿದೆ. ಕರ್ನಾಟಕದ ಸಂದರ್ಭದಲ್ಲಿ ಹೇಳುವುದಾದರೆ ಬಯಲು ಪ್ರದೇಶಗಳಲ್ಲಿ

ಕಂಡುಬರುವ ಕೆಲವು ಬುಡಕಟ್ಟು ಜನಾಂಗಗಳು ಜಾತಿ ವ್ಯವಸ್ಥೆಯ ಪ್ರಭಾವದಿಂದಾಗಿ ತಮ್ಮ ಸಾಂಸ್ಕೃತಿಕ ಐಡೆಂಟಿಟಿಯನ್ನು ಕಳೆದುಕೊಳ್ಳುತ್ತಿದ್ದಾರೆ ಎಂಬುದು ಸತ್ಯವಾದ ಮಾತು. ಅದಾಗುವುದಕ್ಕೆ ಮೊದಲು ಅವರ ಸಾಂಸ್ಕೃತಿಕ ವೈವಿಧ್ಯತೆಯನ್ನು ರಕ್ಷಿಸಿ ದಾಖಲಿಸುವುದು ಅಗತ್ಯವಾಗಿದೆ. ಜೊತೆಗೆ ಹೆಚ್ಚಿನದಾಗಿ ಬುಡಕಟ್ಟುಗಳ ಸಾಂಸ್ಕೃತಿಕ ರಚನೆ ಮತ್ತು ಸ್ವರೂಪಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಅಭಿವೃದ್ಧಿ ಯೋಜನೆಗಳು ವಿಫಲಗೊಳ್ಳುವ ಸಾಧ್ಯತೆ ಹೆಚ್ಚಾಗಿರುತ್ತದೆ. ಬುಡಕಟ್ಟುಗಳ ಆಚಾರ ವಿಚಾರಗಳು ನಾಶವಾಗದಂತೆ ನೋಡಿಕೊಳ್ಳಬೇಕು ಎಂಬುದು ಗಾಂಧೀಜಿಯವರ ಒಂದು ಮುಖ್ಯವಾದ ಆದರ್ಶವಾಗಿತ್ತು. ಯಾವ ರೀತಿಯಿಂದಲೂ ಅವರ ಸಂಸ್ಕೃತಿಯು ನಾಶವಾಗದಂತೆ ಅವರನ್ನು ಉದ್ಧರಿಸಬೇಕೆಂಬುದೇ ಅವರ ಇಚ್ಛೆಯಾಗಿತ್ತು. ನೆಹರೂರವರೂ ಸೆಹ ತಮ್ಮ ಪಂಚಶೀಲ ತತ್ವಗಳಲ್ಲಿ ಬುಡಕಟ್ಟುಗಳ ಜೀವನದ ಸ್ಥಿತಿಗತಿಗಳನ್ನು ಅವರ ಸಂಸ್ಕೃತಿಗೆ ಧಕ್ಕೆಯಾಗದಂತೆ ಸುಧಾರಿಸಬೇಕು, ಅಲ್ಲದೆ ರಸ್ತೆ, ಸಾರಿಗೆ ಸಂಪರ್ಕ, ಶಾಲೆಗಳ ಸ್ಥಾಪನೆ, ವೈದ್ಯ ಶಾಲೆ ಮತ್ತು ಗೃಹ ಕೈಗಾರಿಕೆಗಳ ನಿರ್ಮಾಣ ಅವಶ್ಯಕ ಎಂದು ಅಭಿಪ್ರಾಯ ಪಟ್ಟಿದ್ದರು. ಜೊತೆಗೆ ಬುಡಕಟ್ಟು ಜನರಿಗೆ ಸೇರಿದ ಅರಣ್ಯ ಮತ್ತು ಭೂಮಿಗೆ ಸಂಬಂಧಿಸಿದ ಹಕ್ಕುಗಳನ್ನು ಸಂರಕ್ಷಿಸಬೇಕು ಎಂಬುದಾಗಿ ಹೇಳಿದ್ದಾರೆ.

4.3. ಸಂವಿಧಾನದ ಸವಲತ್ತುಗಳು ಮತ್ತು ಬುಡಕಟ್ಟುಗಳ ಅಭಿವೃದ್ಧಿ:

ಭಾರತದ ಸ್ವಾತಂತ್ರ್ಯ ನಂತರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಜಾತಿ ಮತ್ತು ಸಮುದಾಯಗಳನ್ನು ಗುರುತಿಸಿ ಅವುಗಳನ್ನು ಅಧ್ಯಯನ ಮಾಡಿ ಅವರಲ್ಲಿರುವ ಅಸಮಾನತೆ ಮತ್ತು ಹಿಂದುಳಿದಿರುವಿಕೆಯನ್ನು ತೊಡೆದು ಹಾಕುವ ಸಲುವಾಗ ಹಾಗೂ ಸಾಮಾಜಿಕ ನ್ಯಾಯವನ್ನು ಒದಗಿಸಿ ಸಂವಿಧಾನ ಬದ್ಧವಾದ ಹಕ್ಕನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಯಿತು. ಭಾರತದ ಸಂವಿಧಾನದ ಕಲಂ 342(1)ರ ಪ್ರಕಾರ ರಾಷ್ಟ್ರಪತಿಯವರು ಮತ್ತು ಸಂಸತ್ತು ಎಲ್ಲಾ ರೀತಿಯಿಂದಲೂ ಹಿಂದುಳಿದ ಅರ್ಹ ಸಮುದಾಯಗಳನ್ನು ಅನುಸೂಚಿತ ಬುಡಕಟ್ಟುಗಳೆಂದು ಪರಿಗಣಿಸಿ ವಿವಿಧ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ಕಲ್ಪಿಸಬಹುದಾಗಿದೆ. ಪ್ರಾರಂಭಿಕ ಹಂತದಲ್ಲಿ ಭಾರತ ಸರ್ಕಾರವು ಬುಡಕಟ್ಟುಗಳ ಅಭಿವೃದ್ಧಿಗೆ ಮೂರು ನೀತಿಗಳನ್ನು ರೂಪಿಸಲಾಯಿತು. ಅವುಗಳೆಂದರೆ ರಕ್ಷಣಾತ್ಮಕ ನೀತಿಯೂ ಸಂವಿಧಾನಾತ್ಮಕ ಮತ್ತು ಕಾನೂನಾತ್ಮಕ ಹಕ್ಕುಗಳನ್ನು ಒಳಗೊಂಡಿದ್ದು, ಬುಡಕಟ್ಟು ಜನರ ಹಿತಾಸಕ್ತಿಗಳನ್ನು ಕಾಪಾಡುವಂತಾಗಿದ್ದವು. ಮೀಸಲಾತಿ ನೀತಿಯೂ ವಿವಿಧ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ವಿಸ್ತರಿಸುವ ಯೋಜನೆಯನ್ನೊಳಗೊಂಡಿತ್ತು. ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಮತ್ತು ಚಟುವಟಿಕೆಗಳನ್ನು ಬುಡಕಟ್ಟು ಜನರ ಕಲ್ಯಾಣ ಸಾಧಿಸಲು ಪ್ರಾರಂಭಿಸಲಾಯಿತು. ರಾಷ್ಟ್ರಪತಿಯವರ ಅನುಮೋದನೆಯಿಂದ ಅನುಸೂಚಿತ ಬುಡಕಟ್ಟುಗಳ ಪಟ್ಟಿಗೆ ಸೇರಿದ ಸಮುದಾಯಗಳು ಬುಡಕಟ್ಟುಗಳು ಸಂವಿಧಾನ ಬದ್ದವಾಗಿ ವಿಶೇಷ

ಸವಲತ್ತುಗಳನ್ನು ಪಡೆಯಬಹುದಾಗಿತ್ತು. ಆಯಾ ರಾಜ್ಯಗಳು ಸಹ ಸಂವಿಧಾನಬದ್ಧ ಮೀಸಲಾತಿಯ ಸೌಲಭ್ಯವನ್ನು ತಮ್ಮ ತಮ್ಮ ರಾಜ್ಯದಲ್ಲಿ ಪರಿಶಿಷ್ಟ ಬುಡಕಟ್ಟುಗಳೆಂದು ರಾಷ್ಟ್ರಪತಿಯವರು ಅನುಮೊದಿಸಿದ ಪಟ್ಟಿಯಲ್ಲಿರುವ ಅನುಸೂಚಿತ ಬುಡಕಟ್ಟುಗಳಿಗೆ ಸಂವಿಧಾನಬದ್ಧವಾದ ಸೌಲಭ್ಯಗಳನ್ನು ಮತ್ತು ಮೀಸಲಾತಿಯ ಹಕ್ಕುಗಳನ್ನು ರಕ್ಷಿಸುವುದು ಆದ್ಯ ಕರ್ತವ್ಯವಾಗಿರುತ್ತದೆ. ಅದರಂತೆ ಸಂವಿಧಾನಬದ್ಧ ಕಾರ್ಯಕ್ರಮಗಳ ಜಾರಿಯ ಹೊಣೆ ಮತ್ತು ಜವಬ್ದಾರಿ ಸರ್ಕಾರದ್ದಾಗಿರುತ್ತದೆ. ಸಂವಿಧಾನದ ಕೆಲವು ಕಲಂಗಳು ಬುಡಕಟ್ಟುಗಳಿಗೆ ಸರ್ಕಾರದಿಂದ ವಿಶೇಷ ಉಪಚಾರ ಅಥವಾ ಮೀಸಲು ಸೌಲಭ್ಯ ಪಡೆಯಲು ಅವಕಾಶ ಮಾಡಿಕೊಟ್ಟಿವೆ.

ಸಂವಿಧಾನದ 46ನೇಯ ಅನುಚ್ಛೇದವು ರಾಜ್ಯದ ದುರ್ಬಲ ವರ್ಗಗಳ ಅದರಲ್ಲಿಯೂ ಬುಡಕಟ್ಟುಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ರಕ್ಷಿಸಬೇಕು ಎಂದು ಹೇಳುತ್ತದೆ. ಕಲಂ 244ರ ಪ್ರಕಾರ ರಾಷ್ಟ್ರಪತಿಯವರು ಹೆಚ್ಚಿನ ಸಂಖ್ಯೆಯಲ್ಲಿ ಬುಡಕಟ್ಟು ಜನರಿರುವ ಪ್ರದೇಶವನ್ನು ಅನುಸೂಚಿತ ಪ್ರದೇಶಗಳೆಂದು ಘೋಷಿಸಬಹುದಾಗಿದೆ. ಆಯಾ ರಾಜ್ಯಗಳ ರಾಜ್ಯಪಾಲರುಗಳು ತಮ್ಮ ಪರಮಾಧಿಕಾರವನ್ನು ಉಪಯೋಗಿಸಿ ರಾಜ್ಯದ ಯಾವುದೇ ಭಾಗವನ್ನು ಅನುಸೂಚಿತ ಪ್ರದೇಶ ಎಂದು ಘೋಷಿಸುವ ಅಧಿಕಾರ ಹೊಂದಿದ್ದರೆ. ಅನುಚ್ಛೇದ 339 ಕೇಂದ್ರ ಸರ್ಕಾರದ ನಿರ್ದೇಶನದಂತೆ ರಾಜ್ಯ ಸರ್ಕಾರಗಳು ರಾಜ್ಯದ ಅನುಸೂಚಿತ ಬುಡಕಟ್ಟುಗಳ ಕಲ್ಯಾಣಕ್ಕೆ ಅಗತ್ಯವಾದ ನಿರ್ದಿಷ್ಟ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ತಿಳಿಸುತ್ತದೆ. ಸಂವಿಧಾನದ 275ನೇ ಅನುಚ್ಛೇದವು ಸಂವಿಧಾನದ ಸವಲತ್ತುಗಳನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರಗಳಿಗೆ ಸಹಾಯವನ್ನು ನೀಡುವ ಅವಕಾಶವನ್ನು ಮಾಡಿಕೊಟ್ಟಿದೆ. ಸಂವಿಧಾನದ 330, 332 ಮತ್ತು 334ರ ಕಲಂಗಳು ಅನುಸೂಚಿತ ಬುಡಕಟ್ಟುಗಳಿಗೆ ಸಂಸತ್ತು ಮತ್ತು ರಾಜ್ಯ ವಿಧಾನ ಸಭೆಗಳಲ್ಲಿ ಮೀಸಲಾತಿಯ ಸವಲತ್ತುಗಳನ್ನು ಒದಗಿಸುವ ಅವಕಾಶವನ್ನು ಒದಗಿಸಿವೆ. ಸಂವಿಧಾನದ 335ನೇ ವಿಧಿಯು ಅನುಸೂಚಿತ ಬುಡಕಟ್ಟುಗಳಿಗೆ ನಾಗರಿಕ ಸೇವೆಗಳಲ್ಲಿ ಮೀಸಲಾತಿಯನ್ನು ಒದಗಿಸಿಕೊಡುವ, ಅವಕಾಶವನ್ನು ಒದಗಿಸಿದೆ. ಸಂವಿಧಾನದ 15, 16 ಮತ್ತು 19ನೇ ಅನುಚ್ಛೇದಗಳು ಬುಡಕಟ್ಟುಗಳ ಹಿತಾಸಕ್ತಿಯನ್ನು ಮತ್ತು ಜೀವನವನ್ನು ಕಾಪಾಡುವ ಉದ್ದೇಶವನ್ನು ಹೊಂದಿವೆ.

ಸಂವಿಧಾನದ 5ನೇ ಪಟ್ಟಿ ಭಾಗ ಬಿ ಪ್ಯಾರಾ 4ರ ಭಾಗವು ಪ್ರತಿಯೊಂದು ರಾಜ್ಯವು ಕಡ್ಡಾಯವಾಗಿ ಬುಡಕಟ್ಟು ಪ್ರದೇಶ ಇರಲಿ ಅಥವಾ ಇಲ್ಲದಿರಲಿ ಅದರೆ ಅನುಸೂಚಿತ ಬುಡಕಟ್ಟುಗಳನ್ನೊಳಗೊಂಡ ಒಂದು ಬುಡಕಟ್ಟು ಸಲಹಾ ಸಮಿತಿಯನ್ನು ರಚಿಸುವ ಅವಕಾಶವನ್ನು ಒದಗಿಸಿದೆ. ಈ ಬುಡಕಟ್ಟು ಸಲಹಾ ಸಮಿತಿಯ ಕಾರ್ಯವೇನೆಂದರೆ ರಾಜ್ಯದಲ್ಲಿ ಬುಡಕಟ್ಟುಗಳ ಕಲ್ಯಾಣ ಮತ್ತು ಉನ್ನತಿಗೆ ಸಂಬಂಧಿಸಿದಂತೆ ಸಲಹೆ ಕೊಡುವುದಾಗಿರುತ್ತದೆ. ಬುಡಕಟ್ಟು ಸಲಹಾ ಸಮಿತಿಯು ಬುಡಕಟ್ಟು ಪ್ರದೇಶಗಳಿಗೆ ಸಂಬಂಧಿಸಿದಂತೆ ನಿಯಮ ಮತ್ತು

ಕಾನೂನುಗಳನ್ನು ರೂಪಿಸುವ ಬಗ್ಗೆ ಚರ್ಚಿಸಿ ಆ ಕಾನೂನುಗಳು ಬುಡಕಟ್ಟು ಪ್ರದೇಶಕ್ಕೆ ಅನ್ವಯಿಸುತ್ತವೆಯೋ ಅಥವಾ ಇಲ್ಲವೋ ಎಂಬ ಉದ್ದೇಶವನ್ನಿಟ್ಟುಕೊಂಡು ಮುಖ್ಯವಾಹಕಗಳಾಗಿ ಕೆಲಸ ನಿರ್ವಹಿಸಬೇಕಾಗುತ್ತದೆ. ನೀತಿ ನಿರೂಪಕರು, ಆಡಳಿತಗಾರರು ಮತ್ತು ಬುಡಕಟ್ಟು ಜನರು ಹಾಗೂ ಬುಡಕಟ್ಟೇತರ ಜನರಿಗೆ ಒಟ್ಟಿಗೆ ಕೆಲಸ ಮಾಡಲು ಈ ಬುಡಕಟ್ಟು ಸಲಹಾ ಸಮಿತಿಗಳು ಮುಖ್ಯವಾದ ವೇದಿಕೆಗಳಾಗಬೇಕಾಗುತ್ತದೆ. ಸಂವಿಧಾನದ ಅನುಚ್ಛೇದನ 338ರ ಪ್ರಕಾರ ಸಂವಿಧಾನದ ಮುಖ್ಯವಾದ ಸವಲತ್ತುಗಳಲ್ಲಿ ಒಂದಾದ ಬುಡಕಟ್ಟುಗಳ ಅಭಿವೃದ್ಧಿಗೆ ಮತ್ತು ಹಿತಾಸಕ್ತಿಗಳಿಗೆ ಆಯುಕ್ತರನ್ನು ನೇಮಿಸುವುದು ಮುಖ್ಯವಾದುದಾಗಿದೆ. ಕೇಂದ್ರ ಸರ್ಕಾರ ಈ ಅನುಚ್ಛೇದದ ಪ್ರಕಾರ ವಿಶೇಷ ಅಧಿಕಾರಿಯನ್ನು ನೇಮಿಸುತ್ತದೆ. ಈ ಅಧಿಕಾರಿಯು ಬುಡಕಟ್ಟುಗಳ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದರಲ್ಲಿ ಮುಖ್ಯ ಪಾತ್ರವಹಿಸಬೇಕಾಗುತ್ತದೆ. ಅಲ್ಲದೆ ಆಗಾಗ್ಗೆ ಬುಡಕಟ್ಟುಗಳ ಅಭಿವೃದ್ಧಿಗೆ ಅನುಷ್ಠಾನಗೊಂಡ ಕಾರ್ಯಕ್ರಮಗಳ ಪರಿಶೀಲನೆ ಮಾಡುವುದು. ಉಸ್ತುವಾರಿ ನೋಡಿಕೊಳ್ಳುವುದು ಈ ಅಧಿಕಾರಿಯ ಕರ್ತವ್ಯವಾಗಿರುತ್ತದೆ. ಜೊತೆಗೆ ಒಟ್ಟಾರೆ ಬುಡಕಟ್ಟು ಜನರ ಸಂವಿಧಾನಾತ್ಮಕ ಹಿತಾಸಕ್ತಿಗಳನ್ನು ಕಾಪಾಡುವುದು ಈ ಅಧಿಕಾರಿಯ ಕರ್ತವ್ಯವಾಗಿರುತ್ತದೆ.

4.4. ಸಮಿತಿ, ಆಯೋಗಗಳು ಮತ್ತು ಬುಡಕಟ್ಟು ಅಭಿವೃದ್ಧಿ:

ಸಂವಿಧಾನಾತ್ಮಕ ರಕ್ಷಣೆ ಮತ್ತು ಸವಲತ್ತುಗಳಲ್ಲದೆ ಭಾರತದ ಬುಡಕಟ್ಟುಗಳ ಬದುಕನ್ನು ಉತ್ತಮಪಡಿಸಲು ಹಲವು ಯೋಜನೆಗಳನ್ನು ಸರ್ಕಾರ ಕೈಗೊಂಡಿರುವುದು ಗಮನಾರ್ಹ ಸಂಗತಿ. ಅವುಗಳಲ್ಲಿ ಸಮಿತಿ ಮತ್ತು ಆಯೋಗಗಳನ್ನು ಸ್ಥಾಪಿಸುವುದು ಮುಖ್ಯವಾದಂತಹದ್ದಾಗಿದ್ದು, ಆ ಮೂಲಕ ಕಾರ್ಯಕ್ರಮಗಳನ್ನು ರೂಪಿಸುವುದನ್ನು ಕಾಣಬಹುದಾಗಿದೆ. ಬುಡಕಟ್ಟು ಜನರಿಗೆ ಕನಿಷ್ಟ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕಾರ್ಯತಂತ್ರ ರೂಪಿಸಲು 1961ರಲ್ಲಿ ಕೇಂದ್ರ ಸರ್ಕಾರ ದೆಬರ್‌ರವರ ಅಧ್ಯಕ್ಷತೆಯಲ್ಲಿ ಮೊಟ್ಟ ಮೊದಲ ಬುಡಕಟ್ಟು ಆಯೋಗವನ್ನು ರಚಿಸಲಾಯಿತು. ಈ ಆಯೋಗದ ಶಿಫಾರಸ್ಸಿನಂತೆ ಬುಡಕಟ್ಟುಗಳ ಸಮಗ್ರ ಯೋಜನೆಗಳನ್ನು ರೂಪಿಸಿ ಕನಿಷ್ಠ ಅವಶ್ಯಕತೆಗಳಾದ ಆಹಾರ, ನೀರು, ಉದ್ಯೋಗ, ಶಿಕ್ಷಣ, ಆರೋಗ್ಯ, ರಸ್ತೆ ಸೌಕರ್ಯವನ್ನು ಒದಗಿಸಲಾಯಿತು. 1972ರಲ್ಲಿ ರಚಿತವಾದ ಬುಡಕಟ್ಟು ಪ್ರದೇಶಗಳ ಅಭಿವೃದ್ಧಿಯ ಕಾರ್ಯಪಡೆಯು ಬುಡಕಟ್ಟುಗಳ ಅಭಿವೃದ್ಧಿಗೆ ನೀತಿಯನ್ನು ರೂಪಿಸುವಾಗ ಪರಿಸರೀಯ ಉದ್ಯೋಗ ಮತ್ತು ಸಾಮಾಜಿಕ ಸೂಚಕಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ಮಾಡಿತು. ಇದರಿಂದ ಬುಡಕಟ್ಟು ಜನರಿಗೆ ಅತೀ ಶೀಘ್ರದಲ್ಲಿ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗುತ್ತದೆ ಎಂಬುದು ಕಾರ್ಯಪಡೆಯ ಉದ್ದೇಶವಾಗಿತ್ತು. ನಂತರ 1980ರಲ್ಲಿ ಬುಡಕಟ್ಟುಗಳ ಅಭಿವೃದ್ಧಿಗೆ ಬುಡಕಟ್ಟು

ಉಪಯೋಜನೆಯನ್ನು ರೂಪಿಸಲಾಯಿತು. ಈ ಯೋಜನೆಯು ಮುಖ್ಯವಾಗಿ ಎರಡು ಅಂಶಗಳನ್ನು ಒಳಗೊಂಡಿತ್ತು.

ಬುಡಕಟ್ಟುಗಳ ಸಾಮಾಜಿಕ ಆರ್ಥಿಕ ಅಭಿವೃದ್ಧಿ ಮತ್ತು ಶೋಷಣೆಯಿಂದ ಬುಡಕಟ್ಟು ಜನರನ್ನು ತಪ್ಪಿಸುವುದು. ಬುಡಕಟ್ಟು ಉಪಯೋಜನೆಗೆ ಹಣಕಾಸಿನ ನೆರವನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಒದಗಿಸಿದವು. ಈ ಯೋಜನೆಯ ಅಡಿಯಲ್ಲಿ ಶಿಕ್ಷಣ, ಆರೋಗ್ಯ ಮತ್ತು ವಸತಿ ಒದಗಿಸುವುದರ ಜೊತೆಗೆ ಕುಟುಂಬ ಆಧಾರಿತ ವರಮಾನದ ಯೋಜನೆಗಳಾದ ಕೃಷಿ, ಹೈನುಗಾರಿಕೆಗೆ ಸಹಕಾರ, ಬುಡಕಟ್ಟುಗಳ ಕರಕುಶಲ ಕಲೆಗೆ ಮತ್ತು ಇತರೆ ಪರಿಣತಿಗೆ ಹೆಚ್ಚು ಒತ್ತು ಕೊಡಲಾಯಿತು. ಬುಡಕಟ್ಟು ಉಪಯೋಜನೆಯಲ್ಲಿ ಒಟ್ಟಾರೆ ಮೂಲ ಸೌಕರ್ಯಗಳಿಗೆ ಹೆಚ್ಚಿನ ಗಮನಹರಿಸಿದ್ದರಿಂದ ಬುಡಕಟ್ಟು ಜನರ ಅಭಿವೃದ್ಧಿಯನ್ನು ಅಷ್ಟೇನು ಸಾಧಿಸಿದಂತಾಗಲಿಲ್ಲ. ಅದರೂ, ಶಿಕ್ಷಣದ ಮಟ್ಟಿಗೆ ಹೇಳುವುದಾದರೆ ಬುಡಕಟ್ಟು ಅಭಿವೃದ್ಧಿಯನ್ನು ಸಾಧಿಸಿದಂತಾಯಿತು. ಇದರಿಂದ ಶೇಕಡ 95ರಷ್ಟು ಬುಡಕಟ್ಟು ನೆಲೆಗಳು ಶಾಲೆಗಳನ್ನು ಹೊಂದಲು ಸಾಧ್ಯವಾಯಿತು.

1996ರಲ್ಲಿ ಕೇಂದ್ರ ಸರ್ಕಾರ ಎರಡನೇ ಅನುಸೂಚಿತ ಪ್ರದೇಶ ಮತ್ತು ಬುಡಕಟ್ಟುಗಳ ಆಯೋಗವನ್ನು ರಚಿಸಿದ್ದು, ದಿಲೀಪ್‌ಸಿಂಗ್ ಭುರಿಯಾರನ್ನು ಅದರ ಅಧ್ಯಕ್ಷರನ್ನಾಗಿ ನೇಮಕ ಮಾಡಿತು. ಆ ಆಯೋಗವು ಬುಡಕಟ್ಟುಗಳ ಅಭಿವೃದ್ಧಿಗೆ ಮತ್ತು ಕಲ್ಯಾಣಕ್ಕೆ 40 ವರ್ಷಗಳ ಒಂದು ಯೋಜನೆಯನ್ನು ರೂಪಿಸಿದೆ. ಈ ಯೋಜನೆಯ ಮುಖ್ಯ ಉದ್ದೇಶ ಭೂಮಿ, ನೀರು ಮತ್ತು ಅರಣ್ಯಕ್ಕೆ ಸಂಬಂಧಿಸಿದಂತೆ ಬುಡಕಟ್ಟು ಜನರ ಹಕ್ಕುಗಳ ರಕ್ಷಣೆ, ಶಿಕ್ಷಣ, ಆರೋಗ್ಯ, ಉದ್ಯೋಗ ಮತ್ತು ಇತರೆ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸುವುದಾಗಿದೆ. ಜುಲೈ 2003ರಲ್ಲಿ ಆಯೋಗದ ಅಧ್ಯಕ್ಷರಾದ ಭುರಿಯಾ ಮತ್ತು ಇತರೆ ಸದಸ್ಯರು ನಮ್ಮ ರಾಜ್ಯಕ್ಕೆ ಭೇಟಿ ನೀಡಿದಾಗ ಅವರು ಕರ್ನಾಟಕದಲ್ಲಿ ಪ್ರಸ್ತುತ ಯಾವುದೇ ಬುಡಕಟ್ಟುಗಳು ಇರುವ ಪ್ರದೇಶವನ್ನು ಅನುಸೂಚಿತ ಪ್ರದೇಶಗಳೆಂದು ಘೋಷಿಸಲಾಗಿಲ್ಲ. ಆದರೆ ರಾಜ್ಯದಿಂದ ಬುಡಕಟ್ಟು ಪ್ರದೇಶಗಳನ್ನು ಅನುಸೂಚಿತ ಪ್ರದೇಶಗಳೆಂದು ಘೋಷಿಸಲು ಕೆಲವು ಬೇಡಿಕೆಗಳು ಬಂದಿವೆ ಎಂದರು.

4.5. ಪಂಚವಾರ್ಷಿಕ ಯೋಜನೆಗಳಲ್ಲಿ ಬುಡಕಟ್ಟು ಅಭಿವೃದ್ಧಿ:

ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟುಗಳ ಅಭಿವೃದ್ಧಿಗೆ ಪ್ರಾಮುಖ್ಯತೆ ಕೊಟ್ಟಿತ್ತಾದರೂ ಸ್ಪಷ್ಟ ಮತ್ತು ವಿಶೇಷ ಗಮನ ಹರಿಸಲು ಸಾಧ್ಯವಾಗಲಿಲ್ಲ. ಕೇವಲ ಅಲ್ಪಸ್ವಲ್ಪ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಯಿತು. ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟುಗಳ ಅಭಿವೃದ್ಧಿಗೆ ಒದಗಿಸಲಾದ ಹಣಕಾಸು ಶೇಕಡ ಒಂದರಷ್ಟು, ಎರಡನೇ ಯೋಜನೆಯಲ್ಲಿ ಕೆಲವು ಆಯ್ದ ಬುಡಕಟ್ಟು ಪ್ರದೇಶಗಳಿಗೆ ವಿಶೇಷ ವಿವಿಧೋದ್ದೇಶ ಬುಡಕಟ್ಟು ಯೋಜನೆಗಳನ್ನು ಜಾರಿಗೆ ತರಲಾಯಿತು. ಈ ಯೋಜನೆಗೆ ಮೀಸಲಿಟ್ಟ ಹಣ ಶೇಕಡ

0.90ರಷ್ಟು, ಮೂರನೇ ಯೋಜನೆಯ ಅಡಿಯಲ್ಲಿ ಬುಡಕಟ್ಟು ಪ್ರದೇಶಗಳ ಸ್ಥಿತಿಗತಿಯನ್ನು ಸುಧಾರಿಸುವುದರ ಜೊತೆಗೆ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಬುಡಕಟ್ಟುಗಳು ಪಾಲ್ಗೊಳ್ಳುವಂತೆ ಅನುವು ಮಾಡಿಕೊಡುವ ಬುಡಕಟ್ಟು ಅಭಿವೃದ್ಧಿಯ ಬ್ಲಾಕ್ ಪದ್ಧತಿಯನ್ನು ಅನುಷ್ಠಾನಕ್ಕೆ ತರಲಾಯಿತು. ಈ ಯೋಜನೆಗೆ ಖರ್ಚು ಮಾಡಿದ ಹಣ ಶೇಕಡ 0.60. ನಾಲ್ಕನೆಯ ಯೋಜನೆಯಲ್ಲಿ ಬುಡಕಟ್ಟು ಯೋಜನೆಯ ಮುಖ್ಯವಾದ ಅಯಾಮವೆಂದರೆ ಶಾಸನಾತ್ಮಕ ಮತ್ತು ಕಾರ್ಯಾತ್ಮಕ ಅಂಶಗಳ ಮೂಲಕ ಬುಡಕಟ್ಟು ಜನರನ್ನು ಹೊರಗಿನವರ ಶೋಷಣೆಯಿಂದ ಮುಕ್ತಿಪಡಿಸುವುದಾಗಿತ್ತು. ಶೇಕಡ 0.50ರಷ್ಟು ಹಣವನ್ನು ಈ ಯೋಜನೆಗೆ ವ್ಯಯಿಸಲಾಯಿತು. ನಾಲ್ಕನೇ ಯೋಜನೆಯು ಬುಡಕಟ್ಟು ಆರ್ಥಿಕತೆಯನ್ನು ಮುಖ್ಯ ವಾಹಿನಿಯ ಆರ್ಥಿಕತೆಯೊಡನೆ ವಿಲೀನ ಮಾಡಬೇಕೆನ್ನುವ ಕಡೆ ಒತ್ತು ಕೊಟ್ಟಿತು. ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಇಡೀ ಬುಡಕಟ್ಟು ಅಭಿವೃದ್ಧಿಯ ಸಮಸ್ಯೆಯನ್ನು ವಿಮರ್ಶಾತ್ಮಕವಾಗಿ ಪರಾಮರ್ಶಿಸಲಾಯಿತು ಮತ್ತು ಬುಡಕಟ್ಟು ಅಭಿವೃದ್ಧಿಯನ್ನು ಎರಡು ಭಾಗಗಳನ್ನಾಗಿ ವಿಂಗಡಿಸಲಾಯಿತು. ಬುಡಕಟ್ಟುಗಳು ಹೆಚ್ಚಿಗೆ ಇರುವ ಪ್ರದೇಶ ಮತ್ತು ಬುಡಕಟ್ಟುಗಳು ಅಲ್ಲಲ್ಲಿ ಚದುರಿರುವ ಪ್ರದೇಶ. ಶೇಕಡ 50ಕ್ಕಿಂತ ಹೆಚ್ಚು ಬುಡಕಟ್ಟುಗಳ ಪ್ರದೇಶದಲ್ಲಿ ಶೇಕಡ 65ರಷ್ಟು ಬುಡಕಟ್ಟು ಜನರು ಇರುವವರಿಗೆ 5ನೇ ಯೋಜನೆಯಲ್ಲಿ ಬುಡಕಟ್ಟು ಉಪಯೋಜನೆಯನ್ನು ತಯಾರಿಸಲಾಯಿತು. ಸಾಮಾನ್ಯವಾಗಿ ಬುಡಕಟ್ಟು ಉಪಯೋಜನೆಯು ರಾಜ್ಯ ಮತ್ತು ಕೇಂದ್ರದ ಯೋಜನೆಗಳಿಗಿಂತ ಹೆಚ್ಚು ವ್ಯಾಪ್ತಿಯುಳ್ಳದ್ದಾಗಿತ್ತು. ಈ ಯೋಜನೆಯು ಬುಡಕಟ್ಟು ಜನರನ್ನು ಭೂಮಿಗೆ ಸಂಬಂಧಿಸಿದ ಸಂಬಂಧಗಳಲ್ಲಿ ಶೋಷಣೆಯನ್ನು ತಪ್ಪಿಸುವುದು, ಲೇವಾದೇವಿದಾರರಿಂದ ಮುಕ್ತಿ ಒಂದು ಕಡೆಯಾದರೆ ಇನ್ನೊಂದೆಡೆ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದರ ಕಡೆಗೆ ಪ್ರಾಮುಖ್ಯತೆ ಕೊಟ್ಟಿತು. ಈ ಯೋಜನೆಯ ಮೂಲ ಉದೇಶ ಬುಡಕಟ್ಟು ಜನರ ಸಂಘಟನಾತ್ಮಕ ಸಾಮರ್ಥ್ಯ ಮತ್ತು ಸ್ವಸಾಮರ್ಥ್ಯವನ್ನು ಬೆಳೆಸುವ ಸಲುವಾಗಿ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಯನ್ನು ತ್ವರಿತಗೊಳಿಸುವುದಾಗಿತ್ತು.

ಬುಡಕಟ್ಟು ಉಪಯೋಜನೆಯನ್ನು ಪರಿಣಾತ್ಮಕವಾಗಿ ಜಾರಿಗೆ ತರಲು 184 ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆಗಳು 277 ಬುಡಕಟ್ಟು ಪ್ಯಾಕೆಟ್ಸ್ ಅಂದರೆ ಮಾರ್ಪಡಿಸಿದ ಪ್ರದೇಶ ಅಭಿವೃದ್ಧಿ ವಿಧಾನ ಮತ್ತು 75 ಆದಿಮ ಬುಡಕಟ್ಟು ಗುಂಪುಗಳ ಸೂಕ್ಷ್ಮ ಯೋಜನೆಗಳನ್ನು ಸ್ಥಾಪಿಸಲಾಯಿತು. ಈ ವಿಶೇಷ ಯೋಜನೆಯಲ್ಲಿ ತೊಡಗಿಸಿದ ಹಣ ಶೇಕಡ 3.1ರಷ್ಟು. ಇದು ಕಳೆದ ಒಂದರಿಂದ ನಾಲ್ಕನೇ ಯೋಜನೆಗಳಲ್ಲಿ ವ್ಯಯಿಸಿದ ಹಣಕ್ಕಿಂತ ಹೆಚ್ಚಾಗಿರುವುದು ಗಮನಾರ್ಹ ಸಂಗತಿ. ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇಕಡ 5.67ರಷ್ಟು ಹಣವನ್ನು ಬುಡಕಟ್ಟು ಅಭಿವೃದ್ಧಿಗೆ ಮೀಸಲಿಡಲಾಯಿತು. ಬುಡಕಟ್ಟು ಉಪಯೋಜನೆಯ ವಿಧಾನವು ಬುಡಕಟ್ಟು ಯೋಜನೆಯ ಮುಖ್ಯ ಸಾಧನವಾಗಿ ಉಳಿದಾಗ್ಯೂ, ವಾಸ್ತವವಾಗಿ ಏಳನೇ ಯೋಜನೆಯಲ್ಲಿ ಗುಂಪು ಅಭಿವೃದ್ಧಿ ವಿಧಾನ ಅಥವಾ ಸಮುದಾಯ

ಅಭಿವೃದ್ಧಿ ವಿಧಾನವನ್ನು ಬಳಸಿ 75 ಆದಿಮ ಬುಡಕಟ್ಟುಗಳನ್ನು ಗುರುತಿಸಲಾಯಿತು. ಶೇಕಡ 6.67ರಷ್ಟು ಹಣವನ್ನು ಈ ಯೋಜನೆಗೆ ಖರ್ಚು ಮಾಡಲಾಯಿತು. ಎಂಟನೇ ಯೋಜನೆಯಲ್ಲಿ ವಿಶೇಷ ಕಾರ್ಯತಂತ್ರ ರೂಪಿಸುವುದರ ಜೊತೆಗೆ ಬುಡಕಟ್ಟು ಜನರ ಪ್ರಗತಿಗೋಸ್ಕರ ಕೇಂದ್ರ ಸರ್ಕಾರವು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ನೆರವನ್ನು ವಿಸ್ತರಿಸಿತು. ಈ ಯೋಜನೆಯ ಅಡಿಯಲ್ಲಿ ಬುಡಕಟ್ಟು ಯೋಜನೆಗೆ ರಾಷ್ಟ್ರೀಯ ಆದಾಯದ ಶೇಕಡ 80ರಷ್ಟನ್ನು ಖರ್ಚು ಮಾಡಲಾಯಿತು. ಒಂಬತ್ತನೇ ಯೋಜನೆಯಲ್ಲಿ ಬುಡಕಟ್ಟು ಜನರನ್ನು ಸಶಕ್ತರನ್ನಾಗಿಸುವುದರ ಜೊತೆಗೆ ಸಮಾಜದ ಇನ್ನುಳಿದ ದುರ್ಬಲ ವರ್ಗಗಳನ್ನು ಗಣನೆಗೆ ತೆಗೆದುಕೊಂಡು ಸರ್ಕಾರೇತರ ಸಂಸ್ಥೆಗಳ ಸಹಕಾರದಿಂದ ಅಭಿವೃದ್ಧಿಯ ಕಾರ್ಯಗಳನ್ನು ಕೈಗೊಳ್ಳಲಾಯಿತು. ಈ ಯೋಜನೆಗೆ ವ್ಯಯಿಸಿದ ಹಣ ಶೇಕಡ 9.97ರಷ್ಟು, ಹತ್ತನೇ ಯೋಜನೆಯಲ್ಲಿ ಬುಡಕಟ್ಟು ಅಭಿವೃದ್ಧಿಯ ವಿಧಾನವೆಂದರೆ ಬುಡಕಟ್ಟು ಆರ್ಥಿಕತೆಯನ್ನು ಹೊರಗಿನ ಮಾರುಕಟ್ಟೆಗಳಿಂದ ರಕ್ಷಿಸುವುದು ಮತ್ತು ಪ್ರೋತ್ಸಾಹಿಸುವುದು. ಅಲ್ಲದೆ ಕಿರು ಪ್ರಮಾಣದ ಅರಣ್ಯ ಉತ್ಪನ್ನಗಳಾದ ಬಿದಿರು, ಔಷಧ ಸಸ್ಯಗಳನ್ನು ಬುಡಕಟ್ಟು ಜನರು ಉಪಯೋಗಿಸಿಕೊಳ್ಳಲು ಬೌದ್ಧಿಕ ಆಸ್ತಿಯ ಹಕ್ಕುಗಳಲ್ಲಿರುವ ಸೌಲಭ್ಯಗಳನ್ನು ಒದಗಿಸುವುದು.

4.6. ಬುಡಕಟ್ಟು ಅಭಿವೃದ್ಧಿಯ ಇತ್ತೀಚಿನ ಬೆಳವಣಿಗೆಗಳು:

ಬುಡಕಟ್ಟು ಅಭಿವೃದ್ಧಿಯಲ್ಲಿ ಸರ್ಕಾರದ ಜೊತೆಗೆ ಕೆಲವು ಸರ್ಕಾರೇತರ ಸಂಸ್ಥೆಗಳು ಕೈ ಜೋಡಿಸಿರುವುದು ಇತ್ತೀಚಿನ ವಿದ್ಯಮಾನಗಳಲ್ಲಿ ಒಂದು. ಸರ್ಕಾರ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದರೆ ಆ ಯೋಜನೆಗಳು ಬುಡಕಟ್ಟುಗಳಿಗೆ ತಲುಪುವಲ್ಲಿ ಮತ್ತು ಅವುಗಳ ಬಗ್ಗೆ ಅರಿವು ಮೂಡಿಸುವಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರ ಮಹತ್ವವಾಗಿದ್ದು, ಆ ನಿಟ್ಟಿನಲ್ಲಿ ಹಲವು ಸರ್ಕಾರೇತರ ಸಂಸ್ಥೆಗಳು ಬುಡಕಟ್ಟು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಪರಿಮಾಣಾತ್ಮಕವಾಗಿ ಭಾಗವಹಿಸಿರುವುದು ಶ್ಲಾಘನೀಯವಾದುದು. ಆದಾಗ್ಯೂ ಕೆಲವು ಸರ್ಕಾರೇತರ ಸಂಸ್ಥೆಗಳು ಹೆಸರಿಗೆ ಮಾತ್ರ ಅಭಿವೃದ್ಧಿಯ ನೆಪದಲ್ಲಿ ಹಣ ಮಾಡುವ ಸಂಸ್ಥೆಗಳಾಗಿ ರೂಪುಗೊಳ್ಳುತ್ತಿವೆ. ಬುಡಕಟ್ಟುಗಳ ಅಭಿವೃದ್ಧಿ ಎಂದರೆ ಕೇವಲ ಆರ್ಥಿಕ ಅಭಿವೃದ್ಧಿಯಾಗಿರದೆ ಇತರೆ ಸಾಮಾಜಿಕ ಸಾಂಸ್ಕೃತಿಕ ಆಯಾಮಗಳನ್ನು ಒಳಗೊಂಡಿರುತ್ತದೆ. ಸ್ವಾತಂತ್ರ್ಯ ನಂತರದ ದಿನಗಳಿಂದಲೂ ಬುಡಕಟ್ಟು ಅಭಿವೃದ್ಧಿಯ ಬಗ್ಗೆ ನೆಹರೂರವರನ್ನು ಒಳಗೊಂಡಂತೆ ಹತ್ತು ಹಲವಾರು ವ್ಯಕ್ತಿಗಳು, ಸಂಘಸಂಸ್ಥೆಗಳು, ಚಿಂತನೆ ನಡೆಸಿರುವುದನ್ನು ಗಮನಿಸಬಹುದು. ಸರ್ಕಾರಗಳ ಜೊತೆಗೆ ಸರ್ಕಾರೇತರ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಬುಡಕಟ್ಟು ಅಭಿವೃದ್ಧಿಯಲ್ಲಿ ತೊಡಗಿಕೊಂಡಿರುವುದು ಗಮನಾರ್ಹ ಸಂಗತಿ. ಬುಡಕಟ್ಟು ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಮೊದಲು ಬುಡಕಟ್ಟು ಸಮಸ್ಯೆಗಳು ಗುರುತಿಸಲ್ಪಡಬೇಕು.

ಬುಡಕಟ್ಟು ಸಮಸ್ಯೆಗಳನ್ನು ಗುರುತಿಸಬೇಕಾದರೆ ಅವುಗಳ ಶಾಸ್ತ್ರೀಯ ಮತ್ತು ವೈಜ್ಞಾನಿಕ ಅಧ್ಯಯನ ಅವಶ್ಯಕ. ಈ ದಿಸೆಯಲ್ಲಿ ಬುಡಕಟ್ಟು ಅಭಿವೃದ್ಧಿಗೆ ಕೆಲವು ಸಂಸ್ಥೆಗಳು ಬುಡಕಟ್ಟು

ಜನರ ಜೀವನ ಅಥವಾ ಸಮಸ್ಯೆಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡುವುದರ ಮೂಲಕ ಅವುಗಳ ಅಭಿವೃದ್ಧಿಗೆ ಕಾರಣವಾಗಿವೆ. ಈ ಸಂಬಂಧವಾಗಿ ಭಾರತದಲ್ಲಿ ಅನೇಕ ಸಂಸ್ಥೆಗಳು ಬುಡಕಟ್ಟು ಅಧ್ಯಯನವನ್ನು ಕೈಗೊಂಡಿವೆ. ಅವುಗಳಲ್ಲಿ ಎಥನೊಲಾಜಿಕಲ್ ಸರ್ವೆ ಆಫ್ ಇಂಡಿಯಾ ಮುಖ್ಯವಾದಂತಹುದು. ಇದು ಬುಡಕಟ್ಟು ಜನರ ಏಳಿಗೆಗಾಗಿಯೇ ಸ್ಥಾಪಿಸಲ್ಪಟ್ಟಿರುವ ಸಂಸ್ಥೆ. ಬುಡಕಟ್ಟು ಜನರ ಬಗ್ಗೆ ಸಮಗ್ರ ಮಾಹಿತಿಯನ್ನು ಸಂಗ್ರಹಿಸುವುದು. ಅವರ ಜೀವನ ವಿಧಾನಗಳ ಬಗ್ಗೆ ಅಧ್ಯಯನ ಮಾಡುವುದು ಇದರ ಕಾರ್ಯವಾಗಿದೆ.

ಬುಡಕಟ್ಟುಗಳ ಬಗ್ಗೆ ಅಧ್ಯಯನ ವಿಶ್ವವಿದ್ಯಾಲಯಗಳ ಮಟ್ಟದಲ್ಲಿಯೂ ನಡೆಯುತ್ತದೆ. ವಿಶ್ವವಿದ್ಯಾಲಯಗಳು ಸರ್ಕಾರದಿಂದ ಮತ್ತು ಯು.ಜಿ.ಸಿ.ಯ ನೆರವಿನಿಂದ ಬುಡಕಟ್ಟು ಅಧ್ಯಯನಕ್ಕೆ ಪ್ರೋತ್ಸಾಹ ನೀಡುತ್ತಾ ಬಂದಿದೆ. ಮದರಾಸು ವಿಶ್ವವಿದ್ಯಾನಿಲಯ ಈ ರೀತಿಯ ಧನಸಹಾಯ ಪಡೆದು ಗಮನಾರ್ಹ ರೀತಿಯ ಕೆಲಸ ಮಾಡಿದೆ ಎಂದು ಹೇಳಲಾಗುತ್ತಿದೆ. ಇದೇ ರೀತಿ ವಿಶ್ವವಿದ್ಯಾಲಯಗಳ ಸಮಾಜಶಾಸ್ತ್ರ ವಿಭಾಗಗಳು, ಮಾನವಶಾಸ್ತ್ರ ವಿಭಾಗಗಳು, ಕನ್ನಡ ವಿಭಾಗಗಳು, ಬುಡಕಟ್ಟು ಅಧ್ಯಯನ ವಿಭಾಗಗಳು ಹಲವು ರೀತಿಯ ಬುಡಕಟ್ಟು ಯೋಜನೆಗಳನ್ನು ಕೈಗೆತ್ತಿಕೊಂಡು ಬುಡಕಟ್ಟು ಜನರ ಜೀವನ, ಸಮಸ್ಯೆಗಳು ಜಾನಪದ, ಅಭಿವೃದ್ಧಿ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸಂಶೋಧನೆಗಳನ್ನು ಮಾಡುತ್ತಿವೆ. ಕೆಲವು ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಜೊತೆಗೆ ರಾಜ್ಯ ಸರ್ಕಾರಗಳು ಅದರಲ್ಲೂ ಕರ್ನಾಟಕ ರಾಜ್ಯದ ಮಟ್ಟಿಗೆ ಹೇಳುವುದಾದರೆ ಬುಡಕಟ್ಟುಗಳ ಅಧ್ಯಯನಕ್ಕೆ ವಿಶೇಷ ಆಸಕ್ತಿ ವಹಿಸಿ, ತನ್ನ ಅಧೀನದಲ್ಲಿ ಬರುವ ಅಂಗ ಸಂಸ್ಥೆಗಳಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಸಾಹಿತ್ಯ ಪರಿಷತ್, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಪುಸ್ತಕ ಪ್ರಾಧಿಕಾರ ಇತ್ಯಾದಿ ಇಲಾಖೆಗಳ ಮೂಲಕ ಬುಡಕಟ್ಟು ಜನರ ಅಧ್ಯಯನಕ್ಕೆ ಪ್ರೋತ್ಸಾಹಿಸಿ, ಪುಸ್ತಕ ಪ್ರಕಟಣೆಗೆ ಅನುವು ಮಾಡಿಕೊಟ್ಟಿದೆ. ಈ ಮೇಲೆ ಹೇಳಿದ ಇಲಾಖೆಗಳ ವತಿಯಿಂದ ಹಲವಾರು ಬುಡಕಟ್ಟುಗಳ ಕುರಿತ ಪುಸ್ತಕಗಳು ಪ್ರಕಟವಾಗಿವೆ. ಅಲ್ಲದೆ ವಿಶ್ವವಿದ್ಯಾನಿಲಯಗಳ ಪ್ರಸಾರಾಂಗಗಳು ಬುಡಕಟ್ಟು ಅಧ್ಯಯನದ ಕುರಿತು ಉಪನ್ಯಾಸಗಳನ್ನು ಏರ್ಪಡಿಸುವುದರೊಂದಿಗೆ, ಬುಡಕಟ್ಟುಗಳ ಕುರಿತು ಸಾಮಾಜಿಕ, ಸಾಂಸ್ಕೃತಿಕ ಮತ್ತು ಜಾನಪದ ಅಧ್ಯಯನಗಳನ್ನು ಕೈಗೊಂಡು ಕೃತಿ ಪ್ರಕಟಣೆಯಲ್ಲಿ ತೊಡಗಿವೆ. ಇಲ್ಲಿ ಮುಖ್ಯವಾದ ವಿಷಯವೇನೆಂದರೆ ಈ ಎಲ್ಲಾ ಸಂಸ್ಥೆಗಳು, ಇಲಾಖೆಗಳು, ಪ್ರಸಾರಾಂಗಗಳು ಬುಡಕಟ್ಟು ಅಧ್ಯಯನಕ್ಕೆ ಸಂಬಂಧಿಸಿದಂತೆ ಕೃತಿಗಳನ್ನು ಕನ್ನಡದಲ್ಲಿ ಪ್ರಕಟಿಸಿರುವುದು. ಈ ಒಂದು ಪ್ರಯತ್ನದಿಂದ ನಾಡಿನ ಜನತೆ ತಮ್ಮ ಮಾತೃ ಭಾಷೆಯಲ್ಲಿ ಬುಡಕಟ್ಟಿನ ಸಂಪೂರ್ಣ ಚಿತ್ರಣ ದೊರೆಯುವುದರಿಂದ ಅಲ್ಲಿರುವ ಸಮಸ್ಯೆಗಳನ್ನಾಗಲೀ, ಅಥವಾ ಅಭಿವೃದ್ಧಿಯನ್ನಾಗಲೀ ಸುಲಭವಾಗಿ ಅರ್ಥಮಾಡಿಕೊಳ್ಳುತ್ತಾರೆ. ಜೊತೆಗೆ ಇದು ನೀತಿ ನಿರೂಪಕರಿಗೂ

ಸಹಾಯಕವಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಬುಡಕಟ್ಟು ಅಧ್ಯಯನಕ್ಕೆ ಸಂಬಂಧಿಸಿದಂತೆ ಮತ್ತೊಂದು ಮೈಲಿಗಲ್ಲೆಂದರೆ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಬುಡಕಟ್ಟು ಅಧ್ಯಯನ ವಿಭಾಗವನ್ನು ಸ್ಥಾಪಿಸಿರುವುದು. ಈ ಬುಡಕಟ್ಟು ಅಧ್ಯಯನ ವಿಭಾಗದಲ್ಲಿ ಬುಡಕಟ್ಟುಗಳ ಅಧ್ಯಯನ ಕೈಗೊಂಡಿದ್ದು, ಹಲವಾರು ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಪಿಎಚ್.ಡಿ ಅಧ್ಯಯನಗಳೂ ಒಳಗೊಂಡಂತೆ, ಬುಡಕಟ್ಟು ಜನರ ಸಮಸ್ಯೆಗಳ ಅಧ್ಯಯನ, ಅವರ ಸಾಮಾಜಿಕ ಚಳುವಳಿಗಳ ಅಧ್ಯಯನ, ಅವರ ಅಭಿವೃದ್ಧಿಯ ಅಧ್ಯಯನ ಇತ್ಯಾದಿ ಕ್ಷೇತ್ರಗಳಲ್ಲಿ ಸಂಶೋಧನೆ ಮಾಡುತ್ತಿದ್ದಾರೆ. ಜೊತೆಗೆ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಬುಡಕಟ್ಟು ಜನರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಬಹಳಷ್ಟು ವಿಚಾರ ಸಂಕಿರಣ, ಗೋಷ್ಠಿ ಮತ್ತು ಸಮ್ಮೇಳನಗಳನ್ನು ಏರ್ಪಡಿಸುವುದನ್ನು ನಾವು ಕಾಣಬಹುದಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ವಿಭಾಗವು ಬುಡಕಟ್ಟು ಅಧ್ಯಯನಗಳ ವಿವಿಧ ಸಂಶೋಧನೆಗಳನ್ನು ಕೃತಿಗಳ ರೂಪದಲ್ಲಿ ಪ್ರಕಟಿಸುತ್ತಿರುವುದು ಜ್ಞಾನ ಪ್ರಸರಣ ಮತ್ತು ಬುಡಕಟ್ಟುಗಳ ಅಭಿವೃದ್ಧಿಯ ದೃಷ್ಟಿಕೋನದಲ್ಲಿ ಒಂದು ಮಹತ್ತರ ಹೆಜ್ಜೆಯಾಗಿದೆ. ಇತ್ತೀಚೆಗೆ ಇದೇ ವಿಭಾಗದ ವತಿಯಿಂದ "ಬುಡಕಟ್ಟು ಅಧ್ಯಯನ" ಮಂಗಳೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಬುಡಕಟ್ಟು ಅಧ್ಯಯನ ಕೃತಿಗಳನ್ನು ಪ್ರಕಟಿಸಿದೆ. 2003ರ ಆಗಸ್ಟ್ ತಿಂಗಳಿನಲ್ಲಿ ಲೋಕಸಭೆಯು ರಾಷ್ಟ್ರೀಯ ಬುಡಕಟ್ಟುಗಳ ಆಯೋಗವನ್ನು ರಚಿಸಲು ಅವಕಾಶ ಮಾಡಿಕೊಡುವ ಸಂವಿಧಾನಕ್ಕೆ 94ನೇ ತಿದ್ದುಪಡಿ ತರುವ ಮಸೂದೆಗೆ ಅಂಗೀಕಾರ ನೀಡಿರುವುದು ಬುಡಕಟ್ಟು ಅಭಿವೃದ್ಧಿಯ ಇನ್ನೊಂದು ಹೆಜ್ಜೆಯಾಗಿದೆ. ಇದುವರೆಗೂ ರಾಷ್ಟ್ರಮಟ್ಟದಲ್ಲಿ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಒಂದೇ ಆಯೋಗವಿದ್ದುದು ಗಮನಾರ್ಹ ಸಂಗತಿ. ಈಗ ಕೇಂದ್ರ ಸರ್ಕಾರದಲ್ಲಿ ಪ್ರತ್ಯೇಕ ಬುಡಕಟ್ಟು ಅಭಿವೃದ್ಧಿ ಖಾತೆಯನ್ನು ಸೃಷ್ಟಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬುಡಕಟ್ಟುಗಳ ಅಭಿವೃದ್ಧಿಗೆ ವಿಶೇಷ ಯೋಜನೆಗಳನ್ನು ರೂಪಿಸಿ ಅವುಗಳ ಮೂಲಕ ಬುಡಕಟ್ಟು ಜನರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಪ್ರಯತ್ನಿಸುತ್ತಿವೆ. ಬುಡಕಟ್ಟುಗಳ ಕುರಿತಾದ ಇತ್ತೀಚಿನ ಅಧ್ಯಯನಗಳ ಮಾಹಿತಿಯ ವಿವರವನ್ನು ಈ ಮಹಾಪ್ರಬಂಧದ ಮೊದಲ ಅಧ್ಯಾಯದಲ್ಲಿ ನೀಡಲಾಗಿದೆ.

ಕೊನೆಯ ಮಾತು

ಬುಡಕಟ್ಟುಗಳ ಸ್ಥಿತಿಗತಿಗಳು ಸುಧಾರಿಸಬೇಕಾದರೆ ಮೊದಲನೆಯದಾಗಿ ಬುಡಕಟ್ಟು ಜನರಿಗೆ ಶಿಕ್ಷಣದ ಅವಕಾಶ ಒದಗಿಸುವದು ಅವಶ್ಯಕವಾಗಿದೆ. ಬುಡಕಟ್ಟುಗಳ ನೆಲೆಗಳಲ್ಲಿ ಶಾಲೆಗಳನ್ನು ಸ್ಥಾಪಿಸುವುದರ ಮೂಲಕ ಪ್ರಾಥಮಿಕ ಶಿಕ್ಷಣದ ಜೊತೆಗೆ ಉನ್ನತ ಶಿಕ್ಷಣದ ಅವಕಾಶಗಳನ್ನು ಕಲ್ಪಿಸುವುದು ಮಹತ್ವದ್ದಾಗಿದೆ. ಭೂರಹಿತ ಬುಡಕಟ್ಟು ಜನರಿಗೆ ಅವಕಾಶಗಳನ್ನು ಕಲ್ಪಿಸುವುದು ಮಹತ್ವದ್ದಾಗಿದೆ. ಭೂರಹಿತ ಬುಡಕಟ್ಟು ಜನರಿಗೆ ಭೂಮಿಯನ್ನು ಹಂಚುವುದು ಸೇರಿದಂತೆ ಕೃಷಿಗೆ ಸಂಬಂಧಿಸಿದಂತೆ ಉತ್ತೇಜನ ನೀಡಬೇಕಾಗುತ್ತದೆ. ಈಗಾಗಲೇ

ಬುಡಕಟ್ಟುಗಳಿಗೆ ಪುನರ್‌ವಸತಿ ಒದಗಿಸಿರುವ ಪ್ರದೇಶಗಳಲ್ಲಿ ಪುನರ್‌ವಸತಿ ಯೋಜನೆಗಳು ಕೆಲವು ಮೂಲ ಸೌಲಭ್ಯಗಳಿಲ್ಲದೆ ವಿಫಲವಾಗಿವೆ ಎಂಬ ಕೂಗು ಕೇಳಿ ಬರುತ್ತಿರುವ ಹಿನ್ನೆಲೆಯಲ್ಲಿ ಸೂಕ್ತ ಕ್ರಮಗಳ ಅವಶ್ಯಕತೆ ಇದೆ. ಬುಡಕಟ್ಟು ಜನರಿಗೆ ಕಿರು ಅರಣ್ಯ ಉತ್ಪನ್ನಗಳನ್ನು ಪಡೆಯಲು ಅನುಮತಿಸುವುದರ ಮೂಲಕ ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿದಂತಾಗುತ್ತದೆ. ಜೊತೆಗೆ ಬುಡಕಟ್ಟುಗಳ ಜನರಲ್ಲಿರುವ ಗಿಡಮೂಲಿಕೆಯ ಔಷಧ ಜ್ಞಾನವನ್ನು ಜಾಗತೀಕರಿಸಿ ಪೇಟೆಂಟ್ ಒದಗಿಸುವುದರಿಂದ ಉತ್ತಮ ಮಾರುಕಟ್ಟೆ ಸಿಗುವಂತೆ ಮಾಡಬೇಕಾಗುತ್ತದೆ. ಕರ್ನಾಟಕ ರಾಜ್ಯದ ಕೆಲವು ಬುಡಕಟ್ಟುಗಳೂ ಸೇರಿದಂತೆ ಭಾರತದ ಕೆಲವು ಬುಡಕಟ್ಟುಗಳನ್ನು ಸರ್ಕಾರಗಳು ಅನುಸೂಚಿತ ಪಟ್ಟಿಯಲ್ಲಿ ಸೇರಿಸುವ ಮೂಲಕ ಅವರಿಗೆ ಸಾಮಾಜಿಕ ನ್ಯಾಯ ಒದಗಿಸಿದಂತಾಗಿ ಅವರ ಅಭಿವೃದ್ಧಿ ಸಾಧ್ಯವಾಗುತ್ತದೆ. ಬುಡಕಟ್ಟುಗಳಲ್ಲಿರುವ ಕೆಲವು ಅಮಾನವೀಯ ಆಚರಣೆಗಳನ್ನು ಸರ್ಕಾರೇತರ ಸಂಸ್ಥೆಗಳ ಮತ್ತು ಜನರ ಸಹಯೋಗದೊಂದಿಗೆ ನಿರ್ಮೂಲನೆಗೊಳಿಸಿದರೆ ಬುಡಕಟ್ಟುಗಳು ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಂಡು ಕುರುಡು ನಂಬಿಕೆಗಳನ್ನು ಬಿಡುವುದರೊಂದಿಗೆ ಸಾಮಾಜಿಕ ಸಬಲೀಕರಣ ಸಾಧಿಸಲು ಸಾಧ್ಯವಾಗುತ್ತದೆ. ಬುಡಕಟ್ಟು ಜನರ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಬುಡಕಟ್ಟು ಜನರ ಸಮಸ್ಯೆಗಳನ್ನು ಅವರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿ ಗುಣಾತ್ಮಕ ಅಭಿವೃದ್ಧಿಯ ಮಾರ್ಗೋಪಾಯಗಳನ್ನು ಕಂಡುಹಿಡಿದು ಅಭಿವೃದ್ಧಿ ಯೋಜನೆಗಳನ್ನು ರೂಪಿಸುವುದು ಇಂದಿನ ಅಗತ್ಯವಾಗಿದೆ.

ಅಧ್ಯಾಯ– 5

1. ಉಪಸಂಹಾರ
2. ಫಲಿತಗಳು
3. ಸಲಹೆಗಳು

5.1 ಉಪಸಂಹಾರ:

ಉತ್ತರ ಕರ್ನಾಟಕದ ಪ್ರವೇಶ ದ್ವಾರವಾಗಿರುವ ಹಾವೇರಿ ಜಿಲ್ಲೆಯಲ್ಲಿನ ಬುಡಕಟ್ಟುಗಳನ್ನು ಅರೆ ಅಲೆಮಾರಿ ಮತ್ತು ನೆಲೆ ನಿಂತ ಬುಡಕಟ್ಟುಗಳು ಎಂದು ವರ್ಗೀಕರಿಸಿ ಅವುಗಳನ್ನು ಸಮಗ್ರವಾಗಿ, ಕುಲಂಕುಶವಾಗಿ ಪರಾಮರ್ಷೆ ಮಾಡಲಾಗಿದೆ. ಈ ಜಿಲ್ಲೆಯು ಅರೆ ಮಲೆನಾಡು ಮತ್ತು ಬಯಲುಸೀಮೆ ಪ್ರದೇಶಗಳೆರಡನ್ನು ಆವರಿಸಿಕೊಂಡಿದೆ. ಈ ಪ್ರದೇಶಗಳಲ್ಲಿ ಬಹು ಮುಖ್ಯವಾಗಿ ಕಂಡುಬರುವ ಮೇದ, ಬೇಡ, ಗೊಂದಲಿಗ, ಹೆಳವ, ಸುಡುಗಾಡುಸಿದ್ದ, ಬಹುರೂಪಿ ಹಾಗೂ ದುರುಗಮುರುಗಿ ಸಮುದಾಯಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇಂತಹ ಬುಡಕಟ್ಟು ಸಮುದಾಯಗಳ ಕುರಿತು ಈಗಾಗಲೇ ಪ್ರತ್ಯೇಕವಾಗಿ ಅಧ್ಯಯನಗಳು ಆಗಿವೆ. ಆದರೆ ಹಾವೇರಿ ಜಿಲ್ಲೆಗೆ ಸೀಮಿತಗೊಂಡಂತೆ ಅವುಗಳ ಸಮಗ್ರ ಅಧ್ಯಯನ ಆಗಿಲ್ಲವೆಂದರೆ ತಪ್ಪಾಗಲಾರದು. ಈ ಮೇಲೆ ಹೆಸರಿಸಿದ ಬುಡಕಟ್ಟುಗಳ ಹಲವು ಮುಖಗಳನ್ನು ಸೂಕ್ಷ್ಮವಾಗಿ ಅವಲೋಕಿಸುವ ದೃಷ್ಟಿಕೋನದಿಂದ 'ಹಾವೇರಿ ಜಿಲ್ಲೆಯ ಬುಡಕಟ್ಟುಗಳ ಸಾಮಾಜಿಕ ಅಧ್ಯಯನ' ಎಂಬ ಶೀರ್ಷಿಕೆಯ ನೆಲೆಗಟ್ಟಿನಲ್ಲಿ ಅಧ್ಯಯನ ಮಾಡಲಾಗಿದೆ. ಸರ್ಕಾರದ ವಿವಿಧ ರೀತಿಯ ನೀತಿ ನಿಯಮಗಳಿಂದ ಒಕ್ಕಲೆದ್ದು ನಿರಾಶ್ರಿತಗೊಂಡ ಈ ಎಲ್ಲಾ ಸಮುದಾಯಗಳ ಆರ್ಥಿಕ ಸ್ಥಿತಿ ದುರ್ಬಲವಾಗಿದೆ ಮತ್ತು ಇವರ ಸಾಮಾಜಿಕ ಜೀವನ ವಿಧಾನಗಳೂ ಕೂಡ ತುಂಬಾ ಶೋಚನೀಯ ಸ್ಥಿತಿಯಲ್ಲಿದೆ. ಇಂತಹ ಪರಿಸ್ಥಿತಿಗಳಲ್ಲಿಯೂ ತಮ್ಮ ಪರಂಪರೆಯನ್ನು ಉಳಿಸಿಕೊಂಡು ಬಂದಿರುವುದು ಅಧ್ಯಯನದಿಂದ ದೃಡಪಟ್ಟಿದೆ. ಹಾವೇರಿ ಜಿಲ್ಲೆಯ ಏಳೂ ತಾಲೂಕುಗಳ ವ್ಯಾಪ್ತಿಯಲ್ಲಿ ನೆಲೆಸಿರುವ ಬುಡಕಟ್ಟುಗಳ ಸಾಮಾಜಿಕ ಜೀವನ ಮತ್ತು ಪಾರಂಪರಿಕತೆಯ ಮೇಲೆ ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣ (ಎಲ್.ಪಿ.ಜಿ.) ಗಳ ಪ್ರಭಾವವು ಯಾವ ಯಾವ ಪರಿಣಾಮಗಳನ್ನು ಉಂಟುಮಾಡಿದೆ ಎಂಬುದನ್ನು ಕ್ಷೇತ್ರಕಾರ್ಯ ಮತ್ತು ಅನುಷಂಗಿಕ ಆಕರಗಳ ಆಧಾರದ ಮೇಲಿಂದ ಮಹಾ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಹಾವೇರಿ ಜಿಲ್ಲೆಯ ವ್ಯಾಪ್ತಿಯಲ್ಲಿ ನೆಲೆಸಿರುವ ವಿವಿಧ ಬುಡಕಟ್ಟು ಸಮುದಾಯಗಳ ಒಟ್ಟು ಜನಸಂಖ್ಯೆ (ಲಿಂಗಾವಾರು), ಭೌಗೋಳಿಕ ನೆಲೆಗಳು, ಚಾರಿತ್ರಿಕ ಬೆಳವಣಿಗೆ ಹಾಗೂ ಪ್ರಸ್ತುತ ಸಾಮಾಜಿಕ ಸ್ಥಿತಿಗಳನ್ನು ಅಧ್ಯಯನ ಮಾಡಲಾಗಿದೆ. ಮೌಖಿಕ ಪರಂಪರೆಯಿಂದ ಹುಟ್ಟಿಕೊಳ್ಳುವ ಸೃಷ್ಟಿ ಪುರಾಣಗಳು ಸಮುದಾಯಗಳ ಪರ್ಯಾವರಣವನ್ನು ನೀಡುತ್ತವೆ. ಅದರಂತೆ ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಲ್ಪಟ್ಟ ಅರೆ ಅಲೆಮಾರಿ ಮತ್ತು ನೆಲೆ ನಿಂತ ಬುಡಕಟ್ಟುಗಳ ಸೃಷ್ಟಿಗೆ ಸಂಬಂಧಿಸಿದ ಪುರಾಣಗಳನ್ನು ದಾಖಲಿಸಲಾಗಿದೆ. ಸಮಾಜಶಾಸ್ತ್ರೀಯ ಅಧ್ಯಯನದ ನೆಲೆಗಟ್ಟಿನಲ್ಲಿ ಈ ಬುಡಕಟ್ಟು ಜನರ ಸಾಮಾಜಿಕ, ಸಾಂಸ್ಕೃತಿಕ, ಹಾಗೂ ಧಾರ್ಮಿಕ ಅಂಶಗಳನ್ನು ವಿವರವಾಗಿ ಪಡೆಯಲು ಎಚ್ಚರಿಕೆಯಿಂದ ತಯಾರಿಸಿದ ಸಂದರ್ಶನ

ಅನುಸೂಚಿಯನ್ನು ಬಳಸಿ ವಿವರವಾದ ಮಾಹಿತಿಗಳನ್ನು ಪಡೆದು ಅವುಗಳನ್ನು ಕೋಷ್ಟಕದ ಮೂಲಕ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಸಂಶೋಧನಾ ವಿಧಾನವನ್ನು ಬಳಸಿಕೊಂಡು ಅಧ್ಯಯನ ವಿಷಯವನ್ನು ಅರ್ಥೈಸುತ್ತಾ ಅಧ್ಯಯನದ ವಿಧಾನಗಳನ್ನು ಬಳಸಿಕೊಂಡು ಸಂಶೋಧನಾ ತಂತ್ರಗಳನ್ನು ಅಳವಡಿಸಿಕೊಂಡು ಮಾಹಿತಿಯನ್ನು ವಿಶ್ಲೇಷಣೆ ಮಾಡಲಾಗಿದೆ. ಭಾರತದಲ್ಲಿ ಬುಡಕಟ್ಟುಗಳ ಅಧ್ಯಯನ, ಆದಿವಾಸಿಗಳ ಅರ್ಥ ವಿವರಣೆ, ಗುಣಲಕ್ಷಣಗಳೊಂದಿಗೆ ಬುಡಕಟ್ಟು ಸಮುದಾಯಗಳ ವಿಂಗಡಣೆಯನ್ನು ನೀಡಲಾಗಿದೆ. ಇದರೊಂದಿಗೆ ಕರ್ನಾಟಕದಲ್ಲಿ ನಡೆದ ಬುಡಕಟ್ಟು ಅಧ್ಯಯನಗಳ ಬಗ್ಗೆಯೂ ಮಾಹಿತಿ ಕೊಡಲಾಗಿದೆ. ಬುಡಕಟ್ಟು ಸಮುದಾಯಗಳ ಕುರಿತಾಗಿ ನಡೆದಿರುವ ಅಧ್ಯಯನಗಳ ಸಮಗ್ರ ಸಮೀಕ್ಷಾ ವರದಿಗಳನ್ನು ಪ್ರಾರಂಭಿಕ ಅಧ್ಯಾಯದಲ್ಲಿ ಉಲ್ಲೇಖಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ಹಾವೇರಿ ಜಿಲ್ಲೆಯ ಕ್ಷೇತ್ರ ಪರಿಚಯ ಮಾಡಿಕೊಡಲಾಗಿದೆ. ಇದರಲ್ಲಿ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ, ಸಾಂಸ್ಕೃತಿಕ ಅನನ್ಯತೆ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪಲ್ಲಟಗಳು, ದೇಸಿಯತೆ ಅಥವಾ ಪಾರಂಪರಿಕತೆ ಮತ್ತು ಅರೆಮಲೆನಾಡು ಮತ್ತು ಬಯಲುಸೀಮೆಗಳಲ್ಲಿನ ಹಬ್ಬ-ಹರಿದಿನಗಳ ತೌಲನಿಕ ಅಧ್ಯಯನವನ್ನು ಮಾಡಿ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಆದಿವಾಸಿ ಸಮುದಾಯಗಳಲ್ಲಿ ಕಂಡುಬರುವ ವಿಶೇಷ ಗುಣಲಕ್ಷಣಗಳ ಆಧಾರದ ಮೇಲೆ ಬುಡಕಟ್ಟುಗಳ ವಿಂಗಡಣೆ ಮಾಡಲಾಗಿದೆ. ಅವುಗಳೆಂದರೆ ವಿಮುಕ್ತ, ಅಲೆಮಾರಿ, ಅರೆ ಅಲೆಮಾರಿ ಮತ್ತು ನೆಲೆ ನಿಂತ ಬುಡಕಟ್ಟುಗಳು. ಪ್ರಸ್ತುತ ಅಧ್ಯಯನದಲ್ಲಿ ಅರೆ ಅಲೆಮಾರಿ ಮತ್ತು ನೆಲೆ ನಿಂತ ಬುಡಕಟ್ಟುಗಳನ್ನು ಮಾತ್ರ ಅಧ್ಯಯನಕ್ಕೊಳಪಡಿಸಲಾಗಿದೆ. ಆಯ್ದ ಬುಡಕಟ್ಟು ಸಮುದಾಯಗಳಾದ ಮೇದ, ಬೇಡ, ಹೆಳವ, ಗೊಂದಲಿಗ, ದುರುಗಮುರುಗಿ, ಬುಡ್ಗ ಜಂಗಮ ಹಾಗೂ ಸುಡಗಾಡು ಸಿದ್ದ ಸಮುದಾಯಗಳ ಹಿನ್ನೆಲೆ, ಪದನಿಷ್ಪತ್ತಿ, ಮೂಲ, ಪರಂಪರೆ, ಪುರಾಣಗಳು, ಐತಿಹ್ಯಗಳು, ಇದುವರೆಗಿನ ಅಧ್ಯಯನಗಳು, ನೆಲೆಗಳು ಮುಂತಾದ ವಿವರಗಳನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ಜೊತೆಗೆ ಈ ಎಲ್ಲಾ ಸಮುದಾಯಗಳ ಸಾಮಾಜಿಕ ಬದುಕು ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಆಹಾರ ಪದ್ದತಿ, ವಸತಿ ವ್ಯವಸ್ಥೆ, ಉಡಿಗೆ-ತೊಡಿಗೆ, ವೇಷ-ಭೂಷಣಗಳು, ವೃತ್ತಿಯ ಪ್ರಕಾರಗಳು, ಒಳಾಡಳಿತ ವ್ಯವಸ್ಥೆ, ಕುಟುಂಬ, ರಕ್ತ -ಸಂಬಂಧ, ಬೆಡಗುಗಳು, ಭಾಷೆ ಮತ್ತು ಸ್ತ್ರೀಯರ ಸ್ಥಾನಮಾನಗಳ ಕುರಿತು ವಿವರವಾಗಿ ಚರ್ಚಿಸಲಾಗಿದೆ.

ಮುಂದುವರೆದ ಭಾಗವಾಗಿ ಜಿಲ್ಲೆಯ ಆಯ್ದ ಬುಡಕಟ್ಟುಗಳ ಆಚರಣೆ, ನಂಬಿಕೆ ಮತ್ತು ಸಂಪ್ರದಾಯಗಳು ಅವರ ಬದುಕಿನಲ್ಲಿ ಯಾವ ರೀತಿ ಬೇರೂರಿವೆ ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ಸಂಸ್ಕಾರಗಳು ಮತ್ತು ಸಂಪ್ರದಾಯಗಳಿಗೆ ಸಂಬಂಧಿಸಿದ ಜನನ, ನಾಮಕರಣ, ಜವಳ ತೆಗೆಸುವುದು, ಋತುಮತಿ ಶಾಸ್ತ್ರ, ಸಂಗಾತಿ ಆಯ್ಕೆ, ಮದುವೆ, ವಿಚ್ಛೇಧನ, ಮರುವಿವಾಹ, ಶವಸಂಸ್ಕಾರ ಮತ್ತು ದಿನನಿತ್ಯ ಕಂಡುಬರುವ ಇನ್ನಿತರ ಕಟ್ಟು ಪಾಡುಗಳನ್ನು ವಿವರವಾಗಿ ಕೊಡಲಾಗಿದೆ. ಇದರೊಂದಿಗೆ ನಂಬಿಕೆಗಳು ಮತ್ತು ಆಚರಣೆಗಳಿಗೆ ಪೂರಕವಾಗಿ ಪ್ರಕೃತಿ ಆರಾಧನೆ, ಧಾರ್ಮಿಕ ಕೇಂದ್ರಗಳು, ಪುರಾತನ ಕಾಲದ ವಸತಿ ದಿಬ್ಬಗಳು, ದೇವರು, ಪೂಜಾ ಪದ್ಧತಿಗಳು, ಹರಕೆ, ಬಲಿ, ಎಡೆ, ಗಂಗೆ ಪೂಜೆ ಮಾಡುವ ವಿಧಾನಗಳು ಇವರು ಆಚರಿಸುವ ಹಬ್ಬ, ಜಾತ್ರೆ, ಉತ್ಸವಗಳು ಮತ್ತು ಇತರ ನಿಯಮಾವಳಿಗಳನ್ನು ಕೂಲಂಕುಷವಾಗಿ ವಿವರಿಸಲಾಗಿದೆ.

ನಾಲ್ಕನೇ ಅಧ್ಯಾಯವು ಸಮಸ್ಯೆ ಹಾಗೂ ಸವಾಲುಗಳನ್ನು ಒಳಗೊಂಡಿದ್ದು, ಸಂಶೋಧನೆಯಲ್ಲಿ ವ್ಯಕ್ತವಾದ ಅಂಶಗಳಿಂದ ವಿವಿಧ ಬುಡಕಟ್ಟುಗಳ ಪ್ರಚಲಿತ ಸಾಮಾಜಿಕ ಸ್ಥಿತಿಗತಿಗಳು, ಆರ್ಥಿಕ ಸಂಕಷ್ಟಗಳು, ಸಾಂಸ್ಕೃತಿಕ ವ್ಯವಸ್ಥೆ ಹಾಗೂ ಶೈಕ್ಷಣಿಕ ಸ್ಥಿತಿಗತಿಗಳನ್ನು ಚರ್ಚಿಸಿ ಅನೇಕ ಸಮಸ್ಯೆಗಳಿಗೆ ಕೈಗೊಳ್ಳಬಹುದಾದ ಸುಧಾರಣಾ ಕ್ರಮಗಳನ್ನು ಸೂಚಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಸಮಾರೋಪ, ಫಲಿತಗಳು ಮತ್ತು ಸಲಹೆಗಳನ್ನು ನೀಡಲಾಗಿದ್ದು, ಇದರಲ್ಲಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಅತ್ಯಂತ ಉಪಯುಕ್ತ ಮಾಹಿತಿಗಳನ್ನು ಕೊಡಲಾಗಿದೆ. ಈ ಸಂಶೋಧನೆಯಲ್ಲಿ ವ್ಯಕ್ತವಾದ ಅಧ್ಯಯನದ ಫಲಿತಗಳನ್ನು ತಿಳಿಯುವುದರ ಜೊತೆಗೆ ಕೆಲವು ಸಲಹೆಗಳನ್ನು ನೀಡಲಾಗಿದೆ. ನಂತರ ಪ್ರಾಕ್ ಕಲ್ಪನೆಯ ಸತ್ಯಾಸತ್ಯತೆಯನ್ನು ಪರೀಕ್ಷೆಗೆ ಒಳಪಡಿಸಿ ಅವುಗಳು ಎಷ್ಟರ ಮಟ್ಟಿಗೆ ಈ ಸಂಶೋಧನೆಯಲ್ಲಿ ಯಶಸ್ಸು ಕಂಡಿವೆ ಎಂಬ ಅಂಶಗಳನ್ನು ತಿಳಿಸಲಾಗಿದೆ.

ಕೊನೆಯ ಭಾಗವು ಅನುಬಂಧಗಳನ್ನು ಒಳಗೊಂಡಿದ್ದು, ಇದರಲ್ಲಿ ಪರಾಮರ್ಶನ ಗ್ರಂಥಗಳು, ಕೋಷ್ಟಕಗಳು, ಛಾಯ ಚಿತ್ರಗಳು, ಸಂದರ್ಶನ ಅನುಸೂಚಿ, ಮಾಹಿತಿಗಾಗಿ ಸಂದರ್ಶಿಸಿದ ಪ್ರಮುಖ ವಕ್ತೃಗಳು ಮತ್ತು ನಕ್ಷೆಗಳನ್ನು ನೀಡಲಾಗಿದೆ.

5.2. ಅಧ್ಯಯನದ ಫಲಿತಗಳು:

ನನ್ನ ಸಂಶೋಧನಾ ವಿಷಯ "ಹಾವೇರಿ ಜಿಲ್ಲೆಯ ಬುಡಕಟ್ಟುಗಳ ಸಾಮಾಜಿಕ ಅಧ್ಯಯನ" ಕುರಿತ ಮಹಾ ಪ್ರಬಂಧದಿಂದ ವ್ಯಕ್ತವಾದ ಕೆಲವು ಅಂಶಗಳನ್ನು ಈ ಕೆಳಗಿನಂತೆ ತಿಳಿಸಲಾಗಿದೆ.

1. ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಬುಡಕಟ್ಟುಗಳು ರಾಜ್ಯದ ಹಲವು ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿರುವುದು ಕಂಡುಬರುತ್ತದೆ. ಅಂತೆಯೇ,

ಹಾವೇರಿಯ ಬೇರೆ ಬೇರೆ ತಾಲೂಕುಗಳಲ್ಲಿ ಇವರು ನೆಲೆಸಿದ್ದರೂ; ಸಂಸ್ಥೆ ಮತ್ತು ಸಂಘಟನೆಗಳ ಕೊರತೆಗಳಿವೆ. ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ ಅಲ್ಪ ಸ್ವಲ್ಪ ಸುಧಾರಣೆಯಾಗಿದ್ದರೂ ಆರ್ಥಿಕವಾಗಿ ಬಹಳ ದುರ್ಬಲರಾಗಿದ್ದಾರೆ.

2. ಬುಡಕಟ್ಟು ಸಮುದಾಯದವರ ಸಾಂಪ್ರದಾಯಿಕ ಕುಲಕಸುಬಿನಲ್ಲಿ ಸಾಕಷ್ಟು ಬದಲಾವಣೆಗಳಾಗುತ್ತಿದ್ದರೂ, ಇಂದಿಗೂ ಶೇ70ಕ್ಕಿಂತ ಹೆಚ್ಚಿನ ಜನರು ತಮ್ಮ ಸಾಂಪ್ರದಾಯಿಕ ವೃತ್ತಿಯನ್ನು ಮುಂದುವರಿಸಿಕೊಂಡು ಬರುತ್ತಿರುವುದು ಅವರ ಆರ್ಥಿಕ ಹಿನ್ನೆಡೆಗೆ ಕಾರಣವಾಗಿದೆ. ಇದರಿಂದ ಬುಡಕಟ್ಟುಗಳಲ್ಲಿನ ಸಾಮಾಜಿಕ ಚಲನೆ ನಿಧಾನಗತಿಯಲ್ಲಿರುವುದು ಕಂಡುಬರುತ್ತದೆ.
3. ಅರೆ ಅಲೆಮಾರಿ ಮತ್ತು ನೆಲೆನಿಂತ ಬುಡಕಟ್ಟು ಸಮುದಾಯಗಳಲ್ಲಿ ಸಗೋತ್ರ ವಿವಾಹಗಳು ಸಂಪೂರ್ಣವಾಗಿ ನಿಷೇಧಿಸಲ್ಪಟ್ಟಿರುವುದನ್ನು ಕಾಣುತ್ತೇವೆ. ಇದರೊಂದಿಗೆ ಇನ್ನುಳಿದ ಸಂಪ್ರದಾಯ, ಆಚರಣೆಗಳು ಮತ್ತು ನಂಬಿಕೆಗಳಲ್ಲಿ ಹೆಚ್ಚೇನು ಅಂತರ ಕಂಡುಬರುವುದಿಲ್ಲ.
4. ಜಿಲ್ಲೆಯ ಬುಡಕಟ್ಟು ಸಮುದಾಯದ ಜನರು ಹಿಂದಿನಿಂದಲೂ ಅವಿಭಕ್ತ ಕುಟುಂಬಗಳಲ್ಲಿ ವಾಸಿಸುತ್ತಾ ಬಂದಿರುವ ಇವರು ಇಂದು ವಿಭಕ್ತ ಕುಟುಂಬಗಳ ಕಡೆ ಆಕರ್ಷಿತರಾಗಿರುವುದು ತಿಳಿದು ಬರುತ್ತದೆ.
5. ನಗರೀಕರಣ ಮತ್ತು ಆಧುನಿಕತೆಯ ಪ್ರಭಾವದಿಂದ ಪ್ರಸ್ತುತ ಆಯ್ಕೆ ಮಾಡಿದ ಬುಡಕಟ್ಟುಗಳಲ್ಲಿ ಸಾಕಷ್ಟು ಬದಲಾವಣೆಗಳನ್ನು ಗುರುತಿಸಬಹುದು. ಸರ್ಕಾರ ನೀಡಿದ ಕೆಲವು ಸೌಲಭ್ಯಗಳಿಂದ ಈ ಬುಡಕಟ್ಟು ಜನರು ಅಲೆಮಾರಿ ಜೀವನ ಕೈಬಿಟ್ಟು ಸ್ಥಿರವಾದ ನೆಲೆಗಳಲ್ಲಿ ನೆಲೆಸಿ ಊರು ಕೇರಿಗಳನ್ನು ಕಟ್ಟಿಕೊಂಡಿದ್ದಾರೆ.
6. ಸಂಸ್ಕøತಾನುಕರಣ ಹಾಗೂ ಪಾಶ್ಚಾತ್ತೀಕರಣಗಳ ಪ್ರಭಾವದಿಂದಾಗಿಯೂ ಈ ಬುಡಕಟ್ಟು ಸಮುದಾಯಗಳ ಜೀವನ ಕ್ರಮದಲ್ಲಿ ಸಾಕಷ್ಟು ಪರಿವರ್ತನೆಗಳಾಗಿರುವುದು ಕಂಡುಬರುತ್ತದೆ. ಮಹಿಳೆಯರ ಸ್ಥಾನಮಾನಗಳಲ್ಲಿ ಅಲ್ಪ ಸ್ವಲ್ಪ ಸುಧಾರಣೆಯಾಗಿದ್ದು, ಕೃಷಿ ಹಾಗೂ ಕುಟುಂಬದ ಜವಬ್ದಾರಿಗಳಲ್ಲಿ ಮಹಿಳೆ, ಪುರುಷರಿಗೆ ಸಮಾನವಾಗಿ ಕಾರ್ಯನಿರ್ವಹಿಸುವುದು ಕಂಡುಬರುತ್ತದೆ.
7. ಕೆಲವು ಬುಡಕಟ್ಟು ಸಮುದಾಯಗಳಲ್ಲಿ 'ತೆರ'ಕೊಡುವ ಪದ್ದತಿ ಜಾರಿಯಲ್ಲಿದ್ದು, ಇನ್ನೂ ಕೆಲವು ಸಮುದಾಯಗಳಲ್ಲಿ ವರದಕ್ಷಿಣೆಯನ್ನು ನಿಷೇಧಿಸಿರುವುದು ಅನುಷಂಗಿಕ ಆಕರಗಳ ಮೂಲಕ ವ್ಯಕ್ತವಾಗುತ್ತದೆ. ಆದರೆ ಇಂದು 'ವರದಕ್ಷಿಣೆ' ಪದ್ಧತಿ ಕ್ರಮೇಣವಾಗಿ ಚಾಲ್ತಿಗೆ ಬರುತ್ತಿರುವುದು ಸಂಶೋಧನೆಯಿಂದ ತಿಳಿದುಬರುತ್ತದೆ.
8. ಮೇದ, ಬೇಡ, ಬಹುರೂಪಿ, ಇನ್ನಿತರ ಸಾಂಪ್ರದಾಯಿಕ ನ್ಯಾಯ ತೀರ್ಮಾನಕ್ಕೆ ಮೀಸಲಿದ್ದ 'ಕಟ್ಟೆ ಮನೆ' ಮತ್ತು ಪಂಚಾಯಿತಿ ಕಟ್ಟೆಗಳು ನಿಧಾನವಾಗಿ ತಮ್ಮ

ಮಹತ್ವವನ್ನು ಕಳೆದುಕೊಳ್ಳುತ್ತಿದ್ದು, ಕಾನೂನು ತೀರ್ಮಾನಗಳಿಗಾಗಿ, ಕೋರ್ಟು-ಕಛೇರಿಗೆ ಹೋಗುತ್ತಿರುವುದು ಕಂಡುಬರುತ್ತದೆ.

9. ಜಿಲ್ಲೆಯ ಬುಡಕಟ್ಟು ಜನರಿಗೆ ಸಾರಿಗೆ ಸಂಪರ್ಕ ವ್ಯವಸ್ಥೆಯ ಕೊರತೆ ಎದ್ದು ಕಂಡುಬರುತ್ತದೆ. ಜೊತೆಗೆ ನಾಗರೀಕ ಸೌಲಭ್ಯಗಳ ಕೊರತೆಯಿಂದ ಅವರು ಹಿಂದುಳಿದಿರುವುದು ಕಂಡುಬರುತ್ತದೆ.

10. ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಬುಡಕಟ್ಟು ಸಮುದಾಯಗಳಾದ ಹೆಳವ, ಬುಡ್ಗ ಜಂಗಮ, ಸುಡುಗಾಡು ಸಿದ್ಧರು, ಗೋಂದಳಿ, ದುರುಗಮುರುಗಿ, ಮತ್ತು ಮೇದ ಸಮುದಾಯಗಳು ಬುಡಕಟ್ಟಿನ ಎಲ್ಲಾ ಗುಣಲಕ್ಷಣಗಳನ್ನು ಹೊಂದಿದ್ದರೂ, ಇವುಗಳಲ್ಲಿ ಕೆಲವನ್ನು (ಮೇದ ಸಮುದಾಯವನ್ನು ಬಿಟ್ಟು) ಹಿಂದುಳಿದ ವರ್ಗಗಳಲ್ಲಿ, ಕೆಲವನ್ನು ಪರಿಶಿಷ್ಟ ಜಾತಿಯಲ್ಲಿ, ಇನ್ನೂ ಕೆಲವನ್ನು ಅರೆ ಅಲೆಮಾರಿ ಬುಡಕಟ್ಟುಗಳ ವರ್ಗಕ್ಕೆ ಸೇರಿಸಿದ್ದಾರೆ. ಅಂದರೆ ಇಲ್ಲಿ ಸರ್ಕಾರವು ದ್ವಂದ್ವ ನೀತಿಯನ್ನು ಅನುಸರಿಸುತ್ತಿರುವುದು ಕಂಡುಬರುತ್ತದೆ.

11. ಜಿಲ್ಲೆಯಲ್ಲಿನ ಕೆಲವು ಬುಡಕಟ್ಟು ಸಮೂಹಗಳು ತಮ್ಮದೇ ಆದ ವಿಶಿಷ್ಟ ಪರಂಪರೆಯನ್ನು ಬಿಟ್ಟುಕೊಡದೇ, ಮುಖ್ಯ ವಾಹಿನಿಯೊಂದಿಗೆ ಬೆರೆತು ತಮ್ಮ ಅನುಪಮ ಸೇವೆಯನ್ನು ಸಾಂಸ್ಕೃತಿಕ ಮಹಾನದಿಗೆ ಜುಳು ಜುಳು ಝರಿಯಾಗಿ ಹರಿಯುತ್ತಿರುವ ಯಥಾಸ್ಥಿತಿ ಮುಂದುವರೆದಿದೆ.

12. ಅರೆ ಅಲೆಮಾರಿ ಬುಡಕಟ್ಟು ಸಮುದಾಯಗಳಾದ ದುರುಗಮುರುಗಿ, ಗೊಂದಲಿ, ಬಹುರೂಪಿ, ಸುಡುಗಾಡು ಸಿದ್ಧರ ಜನರಲ್ಲಿ ಬಾಲ್ಯ ವಿವಾಹಗಳನ್ನು ಆಚರಿಸುತ್ತಿರುವ ಬಗ್ಗೆ ಸಮೀಕ್ಷೆಯ ಮೂಲಕ ತಿಳಿದು ಬರುತ್ತದೆ. ಆದರೆ ಇದು ಕಾನೂನು ಬಾಹಿರ ಎಂಬ ತಿಳುವಳಿಕೆ ಇಲ್ಲದಿರುವುದು ಕಂಡುಬರುತ್ತದೆ. ಬೇಡ ಸಮುದಾಯದ ಹಿಂದುಳಿದ ಮತ್ತು ಅನಕ್ಷರಸ್ಥ ಜನರಲ್ಲಿ ಬಾಲ್ಯ ವಿವಾಹಗಳು ರೂಢಿಯಲ್ಲಿರುವುದು ತಿಳಿದುಬರುತ್ತದೆ.

13. ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಬುಡಕಟ್ಟು ಸಮುದಾಯಗಳಲ್ಲಿ ಬೇಡ ಸಮುದಾಯ ಮಾತ್ರ ಸರ್ಕಾರದ ಅನೇಕ ಸವಲತ್ತುಗಳನ್ನು ಉತ್ತಮವಾಗಿ ಬಳಸಿಕೊಂಡಿರುವುದು ಕಂಡುಬರುತ್ತದೆ. ಇದರಿಂದ ಈ ಸಮುದಾಯದ ಜನರು ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಉಳಿದವರಿಗಿಂತ ಉತ್ತಮ ಸ್ಥಿತಿಯಲ್ಲಿರುತ್ತಾರೆ.

14. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೀತಿಯಲ್ಲಿ, ಅಲೆಮಾರಿ, ಅರೆ ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟುಗಳಿಗೆ ಪ್ರತ್ಯೇಕ ಮೀಸಲಾತಿ ನೀಡಬೇಕಾದ ಅವಶ್ಯಕತೆ ಇರುವುದು ಕಂಡುಬರುತ್ತದೆ.

15. ಹಾವೇರಿ ಜಿಲ್ಲೆಯಲ್ಲಿ ಆಚರಿಸಲ್ಪಡುವ ಬಹಳಷ್ಟು ಜಾತ್ರೆ–ಉತ್ಸವಗಳು ಕೆಳ–ಜಾತಿಯವರದಾಗಿರುತ್ತವೆ. ಇದರಲ್ಲಿ ಬಹಳಷ್ಟು ಬುಡಕಟ್ಟು ಸಮುದಾಯದವರೂ ಪಾಲ್ಗೊಂಡಿರುವುದು ಕಂಡು ಬರುತ್ತದೆ. ಜೊತೆಗೆ ಮೇಲ್‌ಸ್ತರದಲ್ಲಿರುವ ಜನರೂ ಸಹ ಜಾತ್ರೆ–ಉತ್ಸವಗಳಲ್ಲಿ ಭಾಗವಹಿಸುತ್ತಿರುವುದರಿಂದ ಜಿಲ್ಲೆಯ ಜನತೆಯಲ್ಲಿ ಸಮನ್ವಯತೆ ಕಂಡುಬರುತ್ತದೆ.
16. ಈ ಬುಡಕಟ್ಟು ಸಮುದಾಯಗಳಲ್ಲಿ ಸಂಘಟನೆಯ ಕೊರತೆ ಎದ್ದು ಕಾಣುತ್ತದೆ. ಇದರಿಂದ ತಮಗೆ ದೊರಕಬೇಕಾದ ಸೌಲಭ್ಯಗಳನ್ನು ಹಕ್ಕಿನಿಂದ ಪಡೆಯುವ ಧ್ವನಿ ಅವರಲ್ಲಿ ಇಲ್ಲದಿರುವುದು ಕಂಡುಬರುತ್ತದೆ.
17. ದೇಶಕ್ಕೆ ಸ್ವಾತಂತ್ರ್ಯ ಬಂದು ಅರವತ್ತೇಳು ವರ್ಷಗಳು ಕಳೆದರೂ ಶೇಕಡ ಅರವತ್ತಕ್ಕಿಂತಲೂ ಹೆಚ್ಚು ಬುಡಕಟ್ಟು ಸಮುದಾಯದ ಜನರು ಇಂದಿಗೂ ಗುಡಿಸಲು ಹಾಗೂ ಟೆಂಟು ಗಳಲ್ಲಿ ನೆಲೆಸಿ, ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಚಿಂತನೆ ನಡೆಸದಿರುವುದು ಎದ್ದುಕಾಣುತ್ತದೆ.
18. ಸರ್ಕಾರದಿಂದ ದೊರೆಯುವ ಸವಲತ್ತುಗಳನ್ನು ಪಡೆಯಲು ಜಾತಿ ಪ್ರಮಾಣ ಪತ್ರ ಅಗತ್ಯವಾಗಿದೆ. ಆದರೆ ಈ ಸಮುದಾಯಗಳ ಜನರು ಜಾತಿ ಪ್ರಮಾಣ ಪತ್ರ ಪಡೆಯುವುದು ದುಸ್ತರವಾಗಿದೆ. ನಮ್ಮ ರಾಜ್ಯದಲ್ಲಿಯೇ ಬೇರೆ ಬೇರೆ ಜಿಲ್ಲೆಗಳಲ್ಲಿ ಬೇರೆ ಬೇರೆ ರೀತಿಯ ಜಾತಿ ಪ್ರಮಾಣ ಪತ್ರಗಳನ್ನು ಇವರಿಗೆ ನೀಡಿರುವುದು ಕಂಡುಬರುತ್ತದೆ.
19. ಸರ್ಕಾರಿ ಆದೇಶ ಸಂಖ್ಯೆ: ಜಾತಿ: ವ.ಹಿ: 139: 2006–2007. ದಿನಾಂಕ.11–1–2007ರ ಪತ್ರದಲ್ಲಿ ರಾಜ್ಯದಲ್ಲಿರುವ ಅಲೆಮಾರಿ ಜನಾಂಗದವರನ್ನು ಗುರುತಿಸಿ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮವನ್ನು ರೂಪಿಸಿ ಜಾರಿಗೊಳಿಸಿ ಮೀಸಲಾತಿ ಸೌಲಭ್ಯ ಕಲ್ಪಿಸಿಕೊಡಲು ಸಂಬಂಧಿಸಿದ ಇಲಾಖೆಗಳಿಗೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿರುತ್ತಾರೆ. ಆದರೆ ಈ ಆದೇಶವನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸದಿರುವುದನ್ನು ಸಮುದಾಯದ ಮುಖಂಡರುಗಳು ತಮ್ಮ ನೋವನ್ನು ವ್ಯಕ್ತಪಡಿಸಿರುವುದು (ಕ್ಷೇತ್ರ ಕಾರ್ಯದಲ್ಲಿ) ಕಂಡು ಬರುತ್ತದೆ.
20. ರಾಜಕೀಯ ಮೀಸಲಾತಿ ಸೌಲಭ್ಯ ಬಳಸಿಕೊಂಡು ಬೇಡ ಹಾಗೂ ಮೇದ ಮಹಿಳೆಯರು ರಾಜಕೀಯ ಅನುಕೂಲತೆಗಳನ್ನು ಪಡೆದುಕೊಂಡಿದ್ದಾರೆ. ಆದರೆ ಜಿಲ್ಲೆಯ ಉಳಿದ ಬಡಕಟ್ಟು ಸಮುದಾಯಗಳ ಸ್ತ್ರೀ–ಪುರುಷರಿಗೆ ರಾಜಕೀಯ ಕ್ಷೇತ್ರ ಮರೀಚಿಕೆಯಾಗಿರುವುದು ಸಂಶೋಧನೆಯ ಮೂಲಕ ತಿಳಿದು ಬಂದಿದೆ.
21. ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಿಕ್ಷಣ, ಹೆಚ್ಚೆಂದರೆ ಪದವಿ ಪೂರ್ವ ಶಿಕ್ಷಣದವರೆಗೆ ಪಡೆದ ಬುಡಕಟ್ಟು ಜನರು ಜಿಲ್ಲೆಯಲ್ಲಿ ಸಿಗುತ್ತಾರೆ. ನಂತರದ ಶಿಕ್ಷಣ ತುಂಬಾ ಕಡಿಮೆ ಇದೆ. ಇಲ್ಲವೇ ಇಲ್ಲ ಎಂದರೂ ತಪ್ಪಾಗಲಾರದು. ಬಿ.ಇ,

ಸ್ನಾತಕೋತ್ತರ, ವೈದ್ಯಕೀಯ, ಎಂ.ಬಿ.ಎ ಶಿಕ್ಷಣವಂತೂ ಮರೀಚಿಕೆಯಾಗಿದೆ. ಆರ್ಥಿಕ ಮತ್ತು ಸಾಮಾಜಿಕ ದುಸ್ಥಿತಿಯೇ ಮೇಲಿನ ಹಂತದ ಶಿಕ್ಷಣ ಪಡೆಯಲಿಕ್ಕೆ ಆಗದಿರುವುದು ಅಧ್ಯಯನದಿಂದ ತಿಳಿದು ಬಂದಿದೆ.

22. ಜಿಲ್ಲೆಯ ಬುಡಕಟ್ಟು ಸಮುದಾಯದವರು ತಮ್ಮ ಮೂಲ ವೃತ್ತಿಯೊಂದಿಗೆ ಕೃಷಿ ಹಾಗೂ ಕೃಷಿ ಪೂರಕವಾದ ಕಸಬುಗಳನ್ನು ಅವಲಂಬಿಸಿರುತ್ತಾರೆ. ಕೃಷಿಯನ್ನು ಕೂಲಿ–ನಾಲಿಗೋಸ್ಕರ ಅವಲಂಬಿಸಿರುವುದು ಹೆಚ್ಚಾಗಿ ಕಂಡು ಬರುತ್ತದೆ. ಕೆಲವರು ಕೃಷಿ ಭೂಮಿಯಿದ್ದರೂ, ಖುಷ್ಕಿ ಮತ್ತು ಗೋಮಾಳ ರೂಪದಲ್ಲಿದೆಯೇ ಹೊರತು ನೀರಾವರಿ ಇಲ್ಲದಿರುವ ಬಗ್ಗೆ ಸಂಶೋಧನೆಯಿಂದ ತಿಳಿಯಲಾಯಿತು.

5.3. ಸಲಹೆಗಳು:

ಸಂಶೋಧನಾ ಅಧ್ಯಯನದ ಸಂದರ್ಭದಲ್ಲಿ ಸಂಗ್ರಹಹಿಸಿದ ನಂಬಲರ್ಹವಾದ ಮಾಹಿತಿಯನ್ನು ಆಧಾರವಾಗಿಟ್ಟುಕೊಂಡು ಹಾಗೂ ಸಂಶೋಧನೆಯಿಂದ ಕಂಡುಬಂದ ಫಲಿತಗಳ ಆಧಾರದ ಮೇಲೆ ಹಾವೇರಿ ಜಿಲ್ಲೆಯ ಬುಡಕಟ್ಟುಗಳ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ಸೂಕ್ಷ್ಮವಾಗಿ ಗಮನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಆಯ್ದ ಬುಡಕಟ್ಟುಗಳ ಸಬಲೀಕರಣ ಮತ್ತು ಪರಿಸ್ಥಿತಿಗಳ ಸುಧಾರಣೆಗೋಸ್ಕರ ಕೆಲವು ಸಲಹೆಗಳನ್ನು ಈ ಮುಂದಿನಂತೆ ನೀಡಲಾಗಿದೆ.

1. ಅಲೆಮಾರಿತನ ಮತ್ತು ಅರೆ ಅಲೆಮಾರಿತನವು ಜಿಲ್ಲೆಯ ಬುಡಕಟ್ಟು ಜನರು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿಯಲು ಕಾರಣವಾಗಿದೆ. ಇವರೆಲ್ಲರಿಗೂ ಶಾಶ್ವತವಾದ ಸೂರನ್ನು ಕಲ್ಪಿಸಿಕೊಡುವ ಅಗತ್ಯವಿದೆ.
2. ಬಹುತೇಕ ಬುಡಕಟ್ಟು ಸಮುದಾಯದವರಲ್ಲಿ ತಮ್ಮ ಪಾರಂಪರಿಕ ವೃತ್ತಿಯ ಮೇಲೆ ವಿಶೇಷವಾದ ವ್ಯಾಮೋಹವಿದೆ. ಈ ರೀತಿಯ ಮೋಹ ಅವರನ್ನು ಸಶಕ್ತರನ್ನಾಗಿಸಲು ಸಾಧ್ಯವಿಲ್ಲ. ಸರಕಾರ, ಈ ಬುಡಕಟ್ಟು ಜನರು ತಮ್ಮ ಸಾಂಪ್ರದಾಯಿಕ ವೃತ್ತಿಯನ್ನು ಕೈಬಿಟ್ಟು ಬೇರೆ ವೃತ್ತಿಯನ್ನು ಕೈಗೊಳ್ಳಲು ವಿಶೇಷ ಪ್ರಯತ್ನಗಳನ್ನು ಕೈಗೊಳ್ಳಬೇಕಿದೆ.
3. ಈಗಾಗಲೇ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಬಲೀಕರಣಗೊಂಡ ಈ ಬುಡಕಟ್ಟು ಸಮುದಾಯಗಳ ಜನರನ್ನು ಬಳಸಿಕೊಂಡು ಸಂಘಟನೆಗಳನ್ನು ಸ್ಥಾಪಿಸುವುದು ಉತ್ತಮ. ಆ ಮೂಲಕ ಇನ್ನುಳಿದ ಜನರ ಮನವೊಲಿಸಲು ತರಬೇತಿ ಶಿಬಿರಗಳನ್ನು ಏರ್ಪಡಿಸುವುದು ಒಳ್ಳೆಯದು. ಜೊತೆಗೆ ಸಮೂಹ ಮಾಧ್ಯಮಗಳ ಮೂಲಕ ಅವರಲ್ಲಿ ಜಾಗೃತಿ ಮೂಡಿಸುವ ನಿರಂತರ ಶಿಬಿರಗಳು ನಡೆಯುವಂತಾಗಬೇಕು.

4. ಬುಡಕಟ್ಟು ಸಮುದಾಯಗಳಲ್ಲಿ ಹುಟ್ಟು, ಋತುಮತಿ, ಮುಟ್ಟು, ಸಾವು ಇನ್ನಿತರ ಆಚರಣೆಗಳಿಗೆ ಸಂಬಂಧಿಸಿದಂತೆ ಅನೇಕ ಮೂಢನಂಬಿಕೆಗಳು ಹಾಗೂ ಮೌಢ್ಯಗಳಿರುವುದು ಕಂಡುಬಂದಿದೆ. ಇದರಿಂದ ಅವರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುವುದರಲ್ಲಿ ಸಂದೇಹವಿಲ್ಲ. ಈ ನಿಟ್ಟಿನಲ್ಲಿ ಸರ್ಕಾರ ಸಾಧ್ಯವಾದಾಗಲೆಲ್ಲ, ಸಮಯ ಸಿಕ್ಕಾಗಲೆಲ್ಲ ಆರೋಗ್ಯ ಸುಧಾರಿಸುವ ನಿಟ್ಟಿನಲ್ಲಿ ಮೂಢನಂಬಿಕೆಗಳನ್ನು ಹೋಗಲಾಡಿಸುವ ದಿಸೆಯಲ್ಲಿ ಹೆಚ್ಚು ಹೆಚ್ಚು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಟಿ.ವಿ., ರೇಡಿಯೋ, ಮತ್ತಿತರ ಮಾಧ್ಯಮಗಳಲ್ಲಿ ಬಿತ್ತರಿಸಬೇಕು. ಇತ್ತೀಚೆಗೆ ಗೊಲ್ಲರ ಹಟ್ಟಿಗಳಲ್ಲಿ ಆಚರಣೆಯಲ್ಲಿರುವ ಹುಟ್ಟು, ಮುಟ್ಟು ಸೇರಿದಂತೆ ಅನೇಕ ಮೌಢ್ಯತೆಗಳ ಬಗ್ಗೆ ಟಿ.ವಿ. ಮಾದ್ಯಮದವರು ನಡೆಸಿದ ಜಾಗೃತಿ ಅಭಿಯಾನ ನಿಜಕ್ಕೂ ಶ್ಲಾಘನೀಯ.
5. ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಬುಡಕಟ್ಟುಗಳು, ಆದಿವಾಸಿಗಳ ಬಹಳಷ್ಟು ಗುಣಲಕ್ಷಣಗಳನ್ನು ಹೊಂದಿರುವುದು ಅಧ್ಯಯನದ ಮೂಲಕ ತಿಳಿದು ಬಂದಿದೆ. ಆದ್ದರಿಂದ ಈ ಎಲ್ಲಾ ಬುಡಕಟ್ಟು ಸಮುದಾಯಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರಕ್ಕೆ ಒತ್ತಾಯಪೂರ್ವಕ ಶಿಫಾರಸ್ಸುಗಳನ್ನು ಮಾಡಬೇಕಾದ ಅಗತ್ಯವಿದೆ.
6. ಅಲೆಮಾರಿ, ಅರೆ ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟುಗಳಿಗೆ ಸರಕಾರದ ಯಾವ ಇಲಾಖೆಯಲ್ಲೂ ವಿಶೇಷ ಪ್ಯಾಕೇಜ್‌ಗಳಿರುವುದು ಕಂಡುಬರುವುದಿಲ್ಲ. ಆದ್ದರಿಂದ ಸರಕಾರವು ಇವರಿಗಾಗಿ ಅಭಿವೃದ್ಧಿ ಪ್ಯಾಕೇಜ್‌ನ್ನು ರೂಪಿಸಬೇಕು.
7. ಈ ಸಮುದಾಯಗಳು ಇಂದಿಗೂ ಸರಕಾರದ ಹಾಗೂ ಸಂವಿಧಾನಾತ್ಮಕ ಸೌಲಭ್ಯಗಳನ್ನು ಪಡೆಯುವ ಎಲ್ಲಾ ಅರ್ಹತೆಗಳನ್ನು ಹೊಂದಿವೆ. ಈ ಕಾರಣದಿಂದಾಗಿ ಇವುಗಳನ್ನು ಒಂದು ವಿಶೇಷ ಕೆಟಗರಿ ಎಂದು ಪರಿಗಣಿಸಿ ಅವರಿಗೆ ಸಂವಿಧಾನಾತ್ಮಕ ಸೌಲಭ್ಯಗಳು ಲಭ್ಯವಾಗುವಂತೆ ಮಾಡಬೇಕು.
8. ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕಾಗಿ ಸರ್ಕಾರ ನೆರವು ನೀಡಿ ಪ್ರೋತ್ಸಾಹಿಸಬೇಕು. ವೃತ್ತಿಪರ ಶಿಕ್ಷಣ ಹಾಗೂ ತರಬೇತಿಗಳನ್ನು ನೀಡುವುದು ಅವಶ್ಯಕವಾಗಿದೆ.
9. ಅರೆ ಅಲೆಮಾರಿ ಮತ್ತು ನೆಲೆ ನಿಂತ ಬುಡಕಟ್ಟು ಸಮುದಾಯಗಳ ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟ ಸುಧಾರಿಸಲು ರಾಜ್ಯದ ಜಿಲ್ಲಾ ಅಥವಾ ತಾಲೂಕು ಕೇಂದ್ರಗಳಲ್ಲಿ ಪ್ರತ್ಯೇಕ ವಿದ್ಯಾರ್ಥಿ ನಿಲಯಗಳನ್ನು ಮಂಜೂರು ಮಾಡಿ ಅದರ ಎಲ್ಲಾ ಖರ್ಚು ವೆಚ್ಚಗಳನ್ನು ಸರ್ಕಾರವೇ ನೋಡಿಕೊಳ್ಳುವ ಅಗತ್ಯವಿದೆ.
10. ಸಮುದಾಯಗಳಲ್ಲಿರುವ ಅತೀ ಧಾರ್ಮಿಕತೆ, ಮೂಢನಂಬಿಕೆ, ಬಲಿ, ಬಾಲ್ಯವಿವಾಹ, ದೇವದಾಸಿ, ಇನ್ನಿತರ ಅನಿಷ್ಟ ಆಚರಣೆಗಳನ್ನು ಹೋಗಲಾಡಿಸಲು ಜಾಗೃತಿ

ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಿದೆ. ಅದಕ್ಕೋಸ್ಕರ ಸಮೂಹ ಮಾಧ್ಯಮಗಳನ್ನು ಬಳಸಿಕೊಂಡು ಅವರಲ್ಲಿ ಪ್ರಗತಿಪರ ಆಲೋಚನೆಗಳು ಮೂಡುವಂತೆ ಮಾಡಬೇಕಿದೆ.

11. ಬುಡಕಟ್ಟು ಸಮುದಾಯಗಳ ಜನರು ಸ್ವ-ಉದ್ಯೋಗಗಳನ್ನು ಕೈಗೊಳ್ಳಲು ಮತ್ತು ತಮಗೆ ಬೇಕಾದ ಮೂಲ ಸೌಕರ್ಯಗಳನ್ನು (ಮನೆ, ಶೌಚಾಲಯ, ನೀರು, ವಿದ್ಯುತ್ ದೀಪ ಇತ್ಯಾದಿ) ಪಡೆದುಕೊಳ್ಳಲು ಸರಕಾರ ಅವರಿಗೆ ರೈತರಿಗೆ ನೀಡುವ ರೀತಿಯಲ್ಲಿ ಕಡಿಮೆ ಬಡ್ಡಿ ದರದಲ್ಲಿ ಇಲ್ಲವೇ ಬಡ್ಡಿ ರಹಿತವಾಗಿ ಸಾಲ ನೀಡಲು ಸೂಕ್ತ ಕ್ರಮ ಕೈಗೊಳ್ಳಬೇಕು.

12. ಈ ಸಮುದಾಯಗಳ ಯುವಕರಿಗೆ ತಮ್ಮ ಪಾರಂಪರಿಕ ಉದ್ಯೋಗಗಳ ಬದಲಾಗಿ ಪರ್ಯಾಯ ಉದ್ಯೋಗ-ಕೌಶಲ್ಯ ತರಬೇತಿ ನೀಡಿ, ಅದೇ ಉದ್ಯೋಗಗಳನ್ನು ಅವಲಂಬಿಸಲು ಬದುಕಿಗೆ ಆಸರೆಯಾಗಬಹುದಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಅಗತ್ಯವಿದೆ.

13. ಜಿಲ್ಲೆಯ ಬುಡಕಟ್ಟು ಸಮುದಾಯಗಳ ಸ್ತ್ರೀಯರ ಸಾಕ್ಷರತೆಯ ಪ್ರಮಾಣವು ಅತ್ಯಂತ ಕಳವಳಕಾರಿಯಾಗಿದೆ. ಯಾವುದೇ ಸಮಾಜ/ಸಮುದಾಯದ ಆರೋಗ್ಯಕರ ಬೆಳವಣಿಗೆಯು ಅಕ್ಷರಸ್ಥ ಮಹಿಳೆಯರನ್ನು ಅವಲಂಬಿಸಿರುತ್ತದೆ. ಆಕೆಯ ಪಾತ್ರ ಕೇವಲ ಕುಟುಂಬಕ್ಕೆ ಮಾತ್ರವಲ್ಲ, ಸಮಾಜಕ್ಕೂ ಹಿರಿದು. ಇದರಿಂದಾಗಿ ಈ ಎಲ್ಲಾ ಸಮುದಾಯಗಳ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸದ ಕಡೆ ಗಮನ ಹರಿಸುವ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಿದೆ.

14. ಪ್ರಸ್ತುತ ಅಧ್ಯಯನದಲ್ಲಿ ಸಮೀಕ್ಷೆಗೆ ಒಳಪಡಿಸಿದ (ಬೇಡ ಸಮುದಾಯ ಬಿಟ್ಟು) 1368 ಕುಟುಂಬಗಳಲ್ಲಿ 1060 ಕುಟುಂಬಗಳಿಗೆ ಕೃಷಿ ಮಾಡಲು ಭೂಮಿ ಇಲ್ಲ. ಆದ್ದರಿಂದ ಸರ್ಕಾರವು ಅವಕಾಶವಿರುವಲ್ಲಿ ಇವರಿಗೆ ಕೃಷಿ ಜಮೀನು ನೀಡುವುದಲ್ಲದೆ, ಕೃಷಿಗೆ ಬೇಕಾಗುವ ಅಗತ್ಯ ಸಾಲ ಸೌಲಭ್ಯ ಹಾಗೂ ಸಾಧ್ಯವಾದಲ್ಲಿ ಬಡ್ಡಿರಹಿತ ಸಾಲ ಕೊಡುವ ವ್ಯವಸ್ಥೆಯಾಗಬೇಕಿದೆ.

15. ಒಟ್ಟಿನಲ್ಲಿ ಈ ಎಲ್ಲಾ ಸಮುದಾಯದ ಜನರನ್ನು ಸರ್ಕಾರವು ಮಾತೃ ಹೃದಯದಿಂದ ನೋಡುವ ಅಗತ್ಯವಿದೆ. ಕೇವಲ ಮಾಮೂಲು ಯೋಜನೆಗಳಿಂದ ಇವರು ಸಶಕ್ತರಾಗಲು ಸಾಧ್ಯವಿಲ್ಲ. ಸರ್ಕಾರದ ವಿಶೇಷ ಕಾಳಜಿ ಮತ್ತು ಪ್ಯಾಕೇಜ್‌ಗಳಿಂದ ಮಾತ್ರ ಈ ಬುಡಕಟ್ಟುಗಳನ್ನು ಸಬಲೀಕರಿಸಲು ಸಾಧ್ಯವಿದೆ. ಅವರ ಮನಃಪರಿವರ್ತನೆ ಮಾಡುವುದರ ಜೊತೆಗೆ ಅವರಿಗೆ ಬೇಕಾದ ಅಗತ್ಯಗಳನ್ನು ಸರ್ಕಾರ ಗುರುತಿಸಿ ಸೂಕ್ತ ಯೋಜನೆಗಳನ್ನು ರೂಪಿಸುವಂತಾಗಬೇಕು.

ಅನುಬಂಧಗಳು:

- ❖ ಪರಾಮರ್ಶನ ಗ್ರಂಥಗಳು
- ❖ ಮಾಹಿತಿಗಾಗಿ ಸಂದರ್ಶಿಸಿದ ಪ್ರಮುಖ ವಕ್ತೃಗಳು
- ❖ ಛಾಯಾಚಿತ್ರಗಳು
- ❖ ಕೋಷ್ಟಕಗಳು
- ❖ ಸಂದರ್ಶನ ಅನುಸೂಚಿ
- ❖ ನಕ್ಷೆಗಳು

ಪರಾಮರ್ಶನ ಗ್ರಂಥಗಳು:

ಕನ್ನಡ ಗ್ರಂಥಗಳು

ಆರಾಧ್ಯ ಬಿ.ಎಂ.ಎಂ., ಪರಿಶಿಷ್ಟ ಜನಾಂಗದವರಿಗೆ ಸಂವಿಧಾನದ ಕೊಡುಗೆ: ಅಪ್ಪು ಪ್ರಕಾಶನ, ಬೆಂಗಳೂರು-10, 1985.

ಉಮೇಶ್‌ಕೆ.,ಮಾರ್ಗದರ್ಶಕರು-ಡಾ.ಚಲುವರಾಜು, ಕರ್ನಾಟಕದ ಮೇದ ಬುಡಕಟ್ಟಿನ ಸಮಾಜಶಾಸ್ತ್ರೀಯ ಅಧ್ಯಯನ (ಚಿಕ್ಕಮಗಳೂರು ಜಿಲ್ಲೆ ಅನುಲಕ್ಷಿಸಿ) ಕನ್ನಡ ವಿಶ್ವವಿದ್ಯಾಲಯ. ಹಂಪಿ, 2011.

ಕಿಕ್ಕೇರಿ ನಾರಾಯಣ, ಬುಡಕಟ್ಟು ಸಂಸ್ಕೃತಿ, ಅರುಹು ಕುರುಹು ಪ್ರಕಾಶನ ಮೈಸೂರು, 2011.

ಕೃಷ್ಣರಾಯ ಶ.ಮಂ., ಹಾವನೂರು ಸಂಸ್ಥಾನ, ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು, 1981.

ಕೇಶವನ್ ಪ್ರಸಾದ್ ಕೆ.ಮರಟ್ಟಿ ಮತ್ತು ಡಾ.ಗಂಗಾಧರ ದೈವಜ್ಞ, (ಸಂ) ಬುಡಕಟ್ಟು ಅಧ್ಯಯನ: ಸಂಪುಟ-5. ಕನ್ನಡ ವಿಶ್ವವಿದ್ಯಾಲಯ, ಹಂಪಿ, ಜುಲೈ-ಡಿಸೆಂಬರ್-2008.

ಕೇಶವನ್ ಪ್ರಸಾದ್ ಕೆ.ಮರಟ್ಟಿ ಮತ್ತು ಗಂಗಾಧರ ದೈವಜ್ಞ (ಸಂ) ಬುಡಕಟ್ಟು ಅಧ್ಯಯನ: ಸಂಪುಟ-6. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಜನವರಿ-ಜೂನ್-2009.

ಕೇಶವನ್ ಪ್ರಸಾದ ಕೆ., ಮಲೆ ಮಾದೇಶ್ವರ, ಬುಡಕಟ್ಟು ಕಾವ್ಯಮಾಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಖಂಡೋಬ ಪಿ.ಕೆ., ಸುಡುಗಾಡು ಸಿದ್ಧರ ಸಂಸ್ಕೃತಿ: ಉಪಸಂಸ್ಕೃತಿ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993.

ಗಂಗಾಧರ ದೈವಜ್ಞ, ಗೊಂದಲಿಗರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.

ಗಂಗಾಧರ ದೈವಜ್ಞ, ಗೊಂದಲಿಗರು: ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, 2010.

ಗೀತ ನಾಗಭೂಷಣ, ದುರುಗ ಮುರುಗಿಯರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. 1993.

ಚಂದ್ರ ಪೂಜಾರಿ ಎಂ., ಸಂಶೋಧನಾ ಜವಾಬ್ದಾರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2011.

ಚಂದ್ರ ಪೂಜಾರಿ ಎಂ., ಸಂಶೋಧನ ಪ್ರಸ್ತಾವ, ಮಂಟಪ ಮಾಲೆ 154, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 2008.

ಚಂದ್ರಶೇಖರ ಟಿ.ಆರ್., ಕರ್ನಾಟಕ ಜನಗಣತಿ 2011, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2012.

ಚಲುವರಾಜು, ದಕ್ಕಲರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. 1993.

ಚಿದಾನಂದ ಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ.450–1150), ಸಪ್ನ ಬುಕ್ ಹೌಸ್, ಬೆಂಗಳೂರು, 2002

ಜೋಶಿ ಶಂ.ಬಾ.,ಕರ್ನಾಟಕ–ಸಂಸ್ಕೃತಿಯ ಪೂರ್ವ ಪೀಠಿಕೆ (ದ್ವಿತೀಯ ಭಾಗ), ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ–1. 1996.

ತಾರಿಹಳ್ಳಿ ಹನುಮಂತಪ್ಪ (ಸಂ), ಕರ್ನಾಟಕದ ಬುಟಕಟ್ಟು ಸಮುದಾಯಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.

ದೊಡ್ಡಮನೆ ಲೋಕರಾಜ ಮತ್ತು ಶ್ರೀನಿವಾಸ್ ಎಸ್ ರಾವುಲೋಳ್, ಸಿಂಧೋಳ್ಳು: ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು, 2008.

ನಾಗೇಶ್ ಹೆಚ್.ವಿ., ಸಾಮಾಜಿಕ ಚಳುವಳಿಗಳು: ಪ್ರಸಾರಾಂಗ,ಕರ್ನಾಟಕ ವಿಶ್ವವಿದ್ಯಾಲಯ, ಧಾರಾವಾಡ,1999.

ನಿಂಗಣ್ಣ ಸಣ್ಣಕ್ಕಿ, ಗೊಂದಲಿಗರ ಸಂಸ್ಕೃತಿ: ಉಪಸಂಸ್ಕೃತಿ ಅಧ್ಯಯನ, ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು. 1993.

ನೆಲ್ಲಿಸರ ಬಸವರಾಜು. ಸುಡುಗಾಡು ಸಿದ್ಧರು, ಐ,ಬಿ,ಎಚ್, ಪ್ರಕಾಶನ, ಬೆಂಗಳೂರು.1999.

ಪಾರ್ವತಮ್ಮ ಸಿ., ಆದಿವಾಸಿ ಸಮುದಾಯಗಳ ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007.

ಪುಟ್ಟಯ್ಯ ಬಿ.ಎಂ., 'ಜಾತಿ ವಿಶ್ಲೇಷಣೆಯ ಸಮಸ್ಯೆ': ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,2010.

ಪುಟ್ಟಯ್ಯ ಬಿ.ಎಂ., ಸಂಶೋಧನೆ ತಾತ್ವಿಕ ಅಯಾಮಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.

ಪ್ರಶಾಂತ ಎಚ್.ಡಿ. ಜನಸಮುದಾಯ ಸಂಪುಟ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000.

ಪ್ರಭಾಕರ ಎ.ಎಸ್., ಹೆಳವರು; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, 2010.

ಪ್ರಭಾಕರ. ಎ.ಎಸ್, ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2002.

ಪ್ರಭಾಕರ ಎ.ಎಸ್, ಆದಿವಾಸಿ ಆಖ್ಯಾನ: ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, 2006.

ಬಾಲಗುರುಮೂರ್ತಿ, ಪ್ರತಾಪ,ರಾ.ಬಹುರೂಪಿ: ಬುಡ್ಗ ಜಂಗಮ: ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು. 2008.

ಭೈರಪ್ಪ ಕೆ. ಗ್ರಾಮೀಣ ಸಮಾಜಶಾಸ್ತ್ರ ಮತ್ತು ಗ್ರಾಮೀಣಾಭಿವೃದ್ಧಿ, ಚೇತನ ಬುಕ್‌ಹೌಸ್, ಅಂಜನಾದ್ರಿ, ಮೈಸೂರು. 2007.

ಬೋರಲಿಂಗಯ್ಯ ಹಿ.ಚಿ., ಕರ್ನಾಟಕ ಜನಪದ ಕಲೆಗಳ ಕೋಶ: ಕನ್ನಡ ವಿಶ್ವವಿದ್ಯಾಲಯ ಹಂಪಿ. 1996.

ಬೋರಲಿಂಗಯ್ಯ ಹಿ.ಚಿ., ಮಂಟೇಸ್ವಾಮಿ, ಬುಡಕಟ್ಟು ಕಾವ್ಯಮಾಲೆ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 1997.

ಬೋರಲಿಂಗಯ್ಯ ಹಿ.ಚಿ., ಗೊಂಡರ ರಾಮಾಯಣ, ಬುಡಕಟ್ಟು ಕಾವ್ಯಮಾಲೆ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 1999.

ಬೋರಲಿಂಗಯ್ಯ ಹಿ.ಚಿ., ಬುಡಕಟ್ಟು ದೈವಾರಾಧನೆ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000.

ಭೋಜರಾಜ ಪಾಟೀಲ, ಹಿರೇಕೆರೂರು ತಾಲೂಕು ಗ್ರಾಮ ನಾಮ ಅಧ್ಯಯನ: ಶಿವಯೋಗಿ ಸಿದ್ದಲಿಂಗ ಪ್ರಕಾಶನ, ಹಂಸಬಾವಿ. 2012.

ಮಂಜುನಾಥ ಬೇವಿನಕಟ್ಟಿ. ವ್ಯಾದ ಚರಿತೆ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 2007.

ಮಂಜುನಾಥ ಬೇವಿನಕಟ್ಟಿ ಮತ್ತು ಡಾ.ತಾರಿಹಳ್ಳಿ ಹನುಮಂತಪ್ಪ (ಸಂ). ವಾಲ್ಮೀಕಿ ಸಂಪದ: ಶ್ರೀ ವಾಲ್ಮೀಕಿ ಮಹಾಸಂಸ್ಥಾನ ರಾಜನಹಳ್ಳಿ, 2006.

ಮಂಜುನಾಥ ಬೇವಿನಕಟ್ಟಿ, ಆದಿವಾಸಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007.

ಮಂಜುನಾಥ ಬೇವಿನಕಟ್ಟಿ, ಆದಿವಾಸಿ ಸಂಸ್ಕೃತಿಯ ಸ್ಥಿತಿಗತಿ: ಸಾಹಿತ್ಯ ನಂದನ, ಬೆಂಗಳೂರು, 2007.

ಮಂಜುನಾಥ ಸಿ.ಯು., ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ. (ಕ್ರಿ.ಶ.1150–1340). ಚಿತ್ಕಲಾ ಪ್ರಕಾಶನ, ಕುಪ್ಪಂ, 2012.

ಮುನಿಸ್ವಾಮಯ್ಯ ಕೆ.ಟಿ., ಮಹರ್ಷಿ ವಾಲ್ಮೀಕಿ ಮತ್ತು ನಾಯಕ ಜನಾಂಗದ ಇತಿಹಾಸ–ಪರಂಪರೆ: ಪ್ರಕಾಶಕರು: ನಾಯಕರ ಕ್ಷೇಮಾಭಿವೃದ್ಧಿ ಸಂಘ, ನಜರ್‌ಬಾದ್, ಮೈಸೂರು, 1990.

ಮೊಗಳ್ಳಿ ಗಣೇಶ್, ದಲಿತರು ಮತ್ತು ಜಾಗತೀಕರಣ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999.

ಮೊಗಳ್ಳಿ ಗಣೇಶ್, ದಲಿತರು ಮತ್ತು ಜಾಗತೀಕರಣ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999.

ಮೇತ್ರಿ ಕೆ.ಎಂ., ಬುಡಕಟ್ಟು ಕುಲಕಸುಬುಗಳು: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, 2002.

ಮೇತ್ರಿ ಕೆ.ಎಂ., (ಪ್ರ.ಸಂ), ಬುಡ್ಗಜಂಗಮ ದರ್ಶಿನಿ: ಕರ್ನಾಟಕ ಬುಡ್ಗ ಜಂಗಮ್ ಸಂಘ (ರಿ), ಹೊಸಪೇಟೆ. 2005.

ಮೈತ್ರಿ ಕೆ.ಎಂ., ಮತ್ತು ಚಲುವರಾಜು, ಬುಡಕಟ್ಟು ಅಧ್ಯಯನ: ಸಂಪುಟ.2. ಸಂಚಿಕೆ.2 ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಜುಲೈ/ಡಿಸೆಂಬರ, 2006.

ಯಳನಾಡು ಅಂಜನಪ್ಪ, ಹಗಲುವೇಷಗಾರರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993.

ರಮೇಶ್ ಸ.ಚಿ., ಶಿಕಾರಿ ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2003.

ರಹಮತ್ ತರೀಕೆರೆ, ಪ್ರತಿಸಂಸ್ಕೃತಿ: ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, 1993.

ರಾಜಪ್ಪ ದಳವಾಯಿ, ಹಕ್ಕಿಪಿಕ್ಕಿಯರ ಸಂಸ್ಕೃತಿ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993.

ಲಕ್ಕಪ್ಪಗೌಡ. ಎಚ್.ಜೆ. (ಸಂ) ಕರ್ನಾಟಕದ ಬುಡಕಟ್ಟು ಸಂಪುಟ-2 ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, 1994.

ಲಕ್ಕಪ್ಪಗೌಡ, ಎಚ್.ಜೆ, (ಪ್ರ.ಸಂ) ಕರ್ನಾಟಕ ಬುಡಕಟ್ಟುಗಳು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, 2000. ಲೇಖನಗಳು: ಹಗಲು ವೇಷದವರು/457 ಯಳನಾಡು ಅಂಜನಪ್ಪ, ಬುಡಗ ಜಂಗಾಲರು/625. ಗಂಗಾಧರ ದೈವಜ್ಞ

ಲಕ್ಷ್ಮಣ ತೆಲಗಾವಿ, ಹಿಂದುಳಿದ ವರ್ಗಗಳ ಮತ್ತು ದಲಿತ ಚಳುವಳಿಗಳು: ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000.

ಲಕ್ಷ್ಮೀದೇವಿ ಎಲ್, ಬೇಡ ಪರಂಪರೆ-ಬೇಡರ ಸಂಸ್ಕೃತಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.

ಲಿಂಗರಾಜ ಕಮ್ಮಾರ ರವರ ಲೇಖನ- ಬಹುತ್ವಧಾರೆ-ಸಾಂಸ್ಕೃತಿಕ ಪಲ್ಲಟಗಳು. ವಿರಕ್ತ: ಸ್ಮರಣ ಸಂಚಿಕೆ, ಹಾನಗಲ್,2000.

ವಿರೂಪಾಕ್ಷಿ ಪೂಜಾರಹಳ್ಳಿ, ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2002.

ವಿರುಪಾಕ್ಷಿ ಪೂಜಾರಹಳ್ಳಿ, ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ, 2008.

ವಿರುಪಾಕ್ಷಿ ಪೂಜಾರಹಳ್ಳಿ, ವಾಲ್ಮೀಕಿ ಮತ್ತು ತಿರುವಳ್ಳುವರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.

ವಿರುಪಾಕ್ಷಿ ಪೂಜಾರಹಳ್ಳಿ. ಬೇಟೆ ಮತ್ತು ಬೇಡರು: ಚಿನ್ನಹಗರಿ ಪ್ರಕಾಶನ. ಕೆ.ಬಿ.ಹಟ್ಟಿ, ಬಳ್ಳಾರಿ, 2007.

ವೀರೇಶ್ ಬಡಿಗೇರ, ಸಂಸ್ಕೃತಿ ಸಂಕಥನ: ಮಯ ಪ್ರಕಾಶನ. ಕಮಲಾಪುರ.

ವೆರಿಯರ್ ಎಲ್ವಿನ್ (ಅನು) ಎಚ್.ಎಲ್. ನಾಗೇಗೌಡ, ವೆರಿಯರ್ ಎಲ್ವಿನ್‌ರ ಗಿರಿಜನ ಪ್ರಪಂಚ, ಸಾಹಿತ್ಯ ಸದನ ಪ್ರಕಾಶನ, ಬೆಂಗಳೂರು, 2004.

ಶಂಕರನಾರಾಯಣ ತೀ.ನಂ., ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, 1982.

ಶಂಕರ್‌ರಾವ್. ಚ.ನ, ಭಾರತೀಯ ಸಮಾಜ ಚಿಂತನೆ: ಜೈಭಾರತ್ ಪ್ರಕಾಶನ, ಮಂಗಳೂರು, 2003.

ಶಂಕರರಾವ್ ಚ.ನ., ಭಾರತೀಯ ಸಮಾಜ: ಜೈ ಭಾರತ ಪ್ರಕಾಶನ, ಮಂಗಳೂರು, 2012.

ಶಿವಾನಂದ ಲ. ಪಾಂಚಗಿ, ಗೋಂದಳಿ: ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2008.

ಶ್ರೀನಿವಾಸ್ ಎಂ.ಎನ್., ರಿಮೆಂಬರ್‌ಡ್ ವಿಲೇಜ್, ನವದೆಹಲಿ : ಆಕ್ಸ್‌ಫರ್ಡ ಯುನಿವರ್ಸಿಟಿ ಪ್ರೆಸ್, 1991.

ಶ್ರೀಧರ ಎ ಮತ್ತು ಎಚ್.ಡಿ. ಪ್ರಶಾಂತ, ಅಭಿವೃದ್ಧಿ ಅಧ್ಯಯನ: ಸಂಪುಟ-5, ಸಂಚಿಕೆ-2 ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006.

ಶ್ರೀ ಸದ್ಗುರು ನಿತ್ಯಾನಂದ ಪ್ರಸಾದಿತ ರಂಗದಾಸ್, ಶ್ರೀ ವಾಲ್ಮೀಕಿ ದರ್ಶನ ಮತ್ತು ಧರ್ಮ ಸಂದೇಶ: ಪ್ರಕಾಶಕರು: ಶ್ರೀ ವಾಲ್ಮೀಕಿ ಪ್ರಿಂಟರ್ಸ್, ಬೆಂಗಳೂರು-3, 1973.

ಶೇಷಗಿರಿ ರಾವ್ ಎಲ್.ಎಸ್., ಅರಣ್ಯ, ಸಪ್ನ ಬುಕ್ ಹೌಸ್, ಬೆಂಗಳೂರು 2009.

ಸುಚಿತಾನಂದ ಕೆ ಮಲ್ಕಾಪೂರೆ. ಮಾರ್ಗದರ್ಶಕರು-ಡಾ.ಕೆ.ಎಂ.ಮೈತ್ರಿ, ಬೀದರ್ ಜಿಲ್ಲೆಯ ಬೇಡ ಬುಡಕಟ್ಟು: ಒಂದು ಅರ್ಥಶಾಸ್ತ್ರೀಯ ಅಧ್ಯಯನ: ಕನ್ನಡ ವಿಶ್ವವಿದ್ಯಾಲಯ. ಹಂಪಿ.

ಇಂಗ್ಲೀಷ್ ಗ್ರಂಥಗಳು

Anantha Krishna Iyer L.The Mysore Tribes and Castes: Mysore Govt Press, 1978.

Edgar Thurston and K. Rangachari, Caste and Tribes of Southern India, Vol-I, II, III, IV, V, Asian Educational Services, New Delhi, 1987.

Enthover R.E., The Tribes and Castes of Bombay: Vol-ii, Asian Education on Service, New Delhi, 1992.

Ghurye. G.S., Caste and Race in India: Popular Prakashana, Bombay, 1969.

Gupta, Girija, Family and Social change in Modern India: Vikas Publishing house Pvt.Ltd, Delhi, 1976.

Herkovits.M.J. Cultural Anthropology, India Book House, New Delhi. 1974.

Kapadia K.M. Marriage and Family in India: Oxford University Press, Culcutta, 1968.

Kapadia. K.M, Caste in Transition: Sociological Bulletin, Vol-II, No. 1&2, March, sept, 1962.

Karve, Iravathi, Kinship Organisation in India: Asia Publishing House, Bombay, 1968.

Kuppu Swamy, Social change in India: Vikas Publishing House, Pvt.Ltd, New Delhi, 1986.

Nanjundayya. H.V, Iyer, The Mysore Tribes and Caste: Vol.V-II, Mysore Govt. Press, 1928.

Nirmal Kumar Bose: Tribal life in India. National Book Trust, New Delhi, 1971.

Ogburn and Nimkoff, A Hand book of Sociology: Eurasia Publishing House, New Delhi, 1979.

Parvathamma. C, Scheduled Caste and Tribes: A Socio-Economic Survey, Ashish Publishing House, New Delhi.

Singh. K.S, People of India, Nation Series, V-XXVI Part-2, The Scheduled Tribes, Neilobrin Oxford University Press, 2003.

Srinivas. M.N, Religion and Society among the Coorgs of South India : Asia Publishing House, Bombay, 1965.

Srinivas. M.N, Social Change in Modern India: Allied Publication, Bombay, 1966.

Tripathi. S.N, Tribals in India: Discovery Publishing House, New Delhi, 1998.

Yogender Singh, Modernization of India Tradition: Thomson Press (India) Ltd, 1977.

Yogendra Singh, Social Stratification and Change in India: Manohar Publishers, New Delhi, 1997.

ವಿಶ್ವಕೋಶ

ಶಂಕರರಾವ್. ಚ.ನ, ಸಮಾಜಶಾಸ್ತ್ರದ ಕಿರು ವಿಶ್ವಕೋಶ: ಜೈಭಾರತ್ ಪ್ರಕಾಶನ, ಮಂಗಳೂರು, 2001.

ನಾಗೇಗೌಡ. ಹೆಚ್.ಎಲ್, (ಪ್ರ.ಸಂ) ಕನ್ನಡ ಜಾನಪದ ಕೋಶ: ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು, 1998.

ಕಿಟೆಲ್ ರೆವೆರೆಂಡ್. ಎಫ್, 'ಕನ್ನಡ – ಇಂಗ್ಲೀಷ್ ನಿಘಂಟು' – ಬಾಸೆಲ್ ಮಿಶನ್, ಮಂಗಳೂರು.

ಕರ್ನಾಟಕ ಕನ್ನಡ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿದ್ಯಾಲಯ–1979.

ಎನ್ಸೈಕ್ಲೋಪೆಡಿಯ ಬ್ರಿಟಾನಿಕಾ,

ವರದಿಗಳು:

Dr. K.M. Metry, An Extensive Study and Evaluation of Tribal Setup in Karnataka-Final Report in which, Meda Tribe's details are Furnished, Page 289 to 303 (University Grant Commission (SAP) – 2009.

ಸಾಂಖ್ಯಿಕ ಅಧಿಕಾರಿಗಳು–ಹಾವೇರಿ ಜಿಲ್ಲೆಯ ಅಂಕಿ–ಅಂಶಗಳ ನೋಟ, 2010–11.

ಹಾವೇರಿ ಜಿಲ್ಲಾ ಜನಪದ ಸರ್ವೇಕ್ಷಣೆ ಮತ್ತು ಬಹುಮುಖಿ ದಾಖಲೀಕರಣ. ಯೋಜನಾ ವರದಿ, ಮಂಡನೆ. ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ ಶಿಗ್ಗಾವಿ. ಕರ್ನಾಟಕ ಜ್ಞಾನ ಆಯೋಗ, ಕರ್ನಾಟಕ ಸರ್ಕಾರ ಜನವರಿ, 2013.

ಯೋಜನಾ- ಅಭಿವೃದ್ಧಿ ಮಾಸ ಪತ್ರಿಕೆ, ಸಂಚಿಕೆ-6, ಸಂಪುಟ-30, ಜನವರಿ 2015, ಪುಟ: 49, 50.

L.G. Havanur, Karnataka Backward Class Commission Report Govt of Karnataka, Bangalore, 1975.

Studies of Scheduled Tribes in Karnataka, Karnataka Human Development Report – 2005.

Karnataka Data Highlights: The Scheduled Tribes Census of India 2001.

District wise STs Population in Karnataka (2001)

Data Dissemination Unit, Office of the Director of Census Operations, Karnataka, Koramangala, Bangalore.

Census of India, 2011. Office of the Registrar General & Census Commissioner, India. Ministry of Home Affairs, Government of India, New Dehli.

ಮಾಹಿತಿಗಾಗಿ ಸಂದರ್ಶಿಸಿದ ಪ್ರಮುಖ ವಕ್ತೃಗಳು:

ಕ್ರ.ಸಂ.	ವಕ್ತೃಗಳ ಹೆಸರು	ಸಮುದಾಯ	ಸ್ಥಳ	ತಾಲೂಕು
1	ನಾಗರಾಜ ಎನ್.ಗುಡದಲ್ಲಿ	ಮೇದ	ರಾಣೇಬೆನ್ನೂರು	ರಾಣೇಬೆನ್ನೂರ
2	ಐ.ಎಸ್.ಗುಂಡಪಲ್ಲಿ	ಸುಡುಗಾಡಸಿದ್ದರು	ಜಾವಳ್ಳಿ	ಹಿರೇಕೆರೂರು
3	ಭಿಕ್ಷಾಪತಿ.ಮೋತಿ	ವೇಷಗಾರರು	ತುಮ್ಮನಕಟ್ಟ	ರಾಣೇಬೆನ್ನೂರು
4	ರಾಮನಾಥ ಕೊಂಡ್ರು	ವೇಷಗಾರರು	ತುಮ್ಮನಕಟ್ಟಿ	ರಾಣೇಬೆನ್ನೂರು
5	ರಾಮಣ್ಣ ಮಿರಾಲಿ	ಬಹುರೂಪಿ	ಹಲಗೇರಿ	ರಾಣೇಬೆನ್ನೂರು
6	ಮಂಜಪ್ಪ ಈರ್ನಾಲ್	ಬಹುರೂಪಿ	ಹಾನಗಲ್	ಹಾನಗಲ್
7	ರಾಮಣ್ಣ ಸಂಕ್ರೋಳ್	ಬಹುರೂಪಿ	ಹಾವೇರಿ	ಹಾವೇರಿ
8	ದುರಗಪ್ಪ ಆನಂದಪ್ಪ	ದುರುಗಮುರುಗಿ	ಕಾಲ್ವೆ ಕಲ್ಲಾಪುರ	ಹಾನಗಲ್
9	ಅಣ್ಣಪ್ಪ ಮಿರಾಲಿ	ಬಹುರೂಪಿ	ದೇವರಗುಡ್ಡ	ರಾಣೇಬೆನ್ನೂರು
10	ಮಲ್ಲಪ್ಪ ವೆಂಕಪ್ಪ ದುರುಗಮುರುಗಿ	ದುರುಗಮುಗುಗಿ	ಲಕ್ಕಿಕೊಪ್ಪ	ಶಿಗ್ಗಾಂವ
11	ಹನುಮಂತಪ್ಪ ಗಿಡ್ಡಪ್ಪ ಪರಸನವರ	ದುರುಗ ಮುಗುಗಿ	ಮಾಸೂರು	ಹಿರೇಕೆರೂರು
12	ಹನುಮಂತಪ್ಪ ಸಾಬಣ್ಣ ಮಂಡಕ್ಕಿ	ದುರುಗ ಮುಗುಗಿ	ಬಡಮಲ್ಲಿ	ಬ್ಯಾಡಗಿ
13	ಸಂಜೀವಪ್ಪ ಸುಂಕಪ್ಪ ದೊಡ್ಡಮನಿ	ದುರುಗ ಮುರುಗಿ	ಮೆಡ್ಲೇರಿ	ರಾಣೇಬೆನ್ನೂರು
14	ಚಾಲಿಸ್ ದುರುಗಪ್ಪ	ದುರುಗ ಮುರುಗಿ	ಹುಲಗೂರು	ಸವಣೂರು
15	ಕರಬಸಪ್ಪ. ಎಂ.ಕೊಪ್ಪಳ	ಮೇದಾರ	ಕಿರಗೇರಿ	ಹಿರೇಕೆರೂರು
16	ಸೋಮಣ್ಣ ಬಿ.ಮೇದಾರ	ಮೇದಾರ	ಅಕ್ಕಿ ಅಲೂರು	ಹಾನಗಲ್
7	ಮಂಜುನಾಥ ಅಯ್ಯಪ್ಪನವರ	ಮೇದಾರ	ಚಂದಾಪುರ	ಶಿಗ್ಗಾಂವ
18	ಸಾಯಪ್ಪ ಪ್ರಸ್ತಮದವರ	ಸುಡುಗಾಡುಸಿದ್ದರು	ರಾಣೇಬೆನ್ನೂರು	ರಾಣೇಬೆನ್ನೂರು
19	ಸಹದೇವಪ್ಪ ಕಡಮಂಚರ	ಸುಡುಗಾಡುಸಿದ್ದರು	ರಾಣೇಬೆನ್ನೂರು	ರಾಣೇಬೆನ್ನೂರು
20	ಮಲ್ಲೇಶಪ್ಪ ಕಡಮಂಚಕ	ಸುಡುಗಾಡುಸಿದ್ದರು	ರಾಣೇಬೆನ್ನೂರು	ರಾಣೇಬೆನ್ನೂರು
21	ಸೋಮಪ್ಪ ಮುಗ್ಗದವರ	ಸುಡುಗಾಡುಸಿದ್ದರು	ರಾಣೇಬೆನ್ನೂರು	ರಾಣೇಬೆನ್ನೂರು
22	ಶರಣಪ್ಪ ಕಟ್ಟೀಮನಿ	ಸುಡುಗಾಡುಸಿದ್ದರು	ರಾಣೇಬೆನ್ನೂರು	ರಾಣೇಬೆನ್ನೂರು
23	ಹೊನ್ನೂರಪ್ಪ ಪ್ರಸ್ತಮದವರ	ಸುಡುಗಾಡುಸಿದ್ದರು	ರಾಣೇಬೆನ್ನೂರು	ರಾಣೇಬೆನ್ನೂರು
24	ವೀರಮ್ಮ ಸಿದ್ಧರ	ಸುಡುಗಾಡುಸಿದ್ದರು	ದ್ಯಾವನ ಕೊಪ್ಪ	ಹಾನಗಲ್
25	ಶಂಕರಪ್ಪ. ಸಿಂಧೆ	ಗೋಂದಳಿ	ರಾಣೇಬೆನ್ನೂರು	ರಾಣೇಬೆನ್ನೂರು
26	ಚಂದ್ರಪ್ಪ ಲಾಗವೆ	ಗೋಂದಳಿ	ರಾಣೇಬೆನ್ನೂರು	ರಾಣೇಬೆನ್ನೂರು
27	ರಮೇಶ ಪಾಚಂಗೆ	ಗೊಂದಲಿಗರು	ಮಾಸುರು	ಹಿರೆಕೇರೂರು


28	ವಿಠ್ಠಲರಾವ್ ವಾಗ್ಮೋಡೆ	ಗೊಂದಲಿಗರು	ಹಾನಗಲ್	ಹಾನಗಲ್
29	ಕೃಷ್ಣಪ್ಪ ಪಾಚಂಗೆ	ಗೊಂದಲಿಗರು	ಕಾಗಿನೆಲೆ	ಬ್ಯಾಡಗಿ
30	ರತ್ನಾಬಾಯಿ ಲಾಗವೆ	ಗೊಂದಲಿಗರು	ರಾಣೇಬೆನ್ನೂರು	ರಾಣೇಬೆನ್ನೂರು
31	ಎಂ.ಬಿ.ಹುಲಗಣ್ಣನವರ	ಹೆಳವ	ರಾಣೇಬೆನ್ನೂರು	ರಾಣೇಬೆನ್ನೂರು
32	ಶಂಕ್ರಪ್ಪ ಮುದೇನೂರು	ಹೆಳವ	ರಾಣೇಬೆನ್ನೂರು	ರಾಣೇಬೆನ್ನೂರು
33	ಮಡಿವಾಳಪ್ಪ ಸಿಂಧಗೇರಿ	ಹೆಳವ	ರಾಣೇಬೆನ್ನೂರು	ರಾಣೇಬೆನ್ನೂರು
35	ಬಸಪ್ಪ.ನೀ.ರೋಡ್ನವರ	ಹೆಳವ	ಸೋಮಸಾಗರ	ಹಾನಗಲ್
36	ಸಂತೋಷ ಹೆಳವರ	ಹೆಳವ	ತೊರೂರು	ಶಿಗ್ಗಾಂವ
36	ಹನುಮಂತ ಭೀಮಪ್ಪ ಹೆಳವರ	ಹೆಳವ	ರಾಣೇಬೆನ್ನೂರು ಕ್ಯಾಂಪ	ಅರೆ ಅಲೆಮಾರಿ
37	ನಾಗಪ್ಪ ಫಕೀರಪ್ಪ	ಹೆಳವ	ರಾಣೇಬೆನ್ನೂರು ಕ್ಯಾಂಪ್	ಅರೆ ಅಲೆಮಾರಿ
38	ದುಂಡಪ್ಪ ಫಕೀರಪ್ಪ ಆಲಗೋರು	ಹೆಳವ	ರಾಣೇಬೆನ್ನೂರು ಕ್ಯಾಂಪ್	ಅರೆ ಅಲೆಮಾರಿ
39	ಮಂಜಪ್ಪ ಮಲ್ಲಪ್ಪ ಹೆಳವರ	ಹೆಳವ	ರಾಣೇಬೆನ್ನೂರು ಕ್ಯಾಂಪ್	ಅರೆ ಅಲೆಮಾರಿ
40	ಶ್ರೀಮತಿ. ಆರ್.ಆರ್.ಹಾವನೂರು	ಬೇಡ	ರಾಣೇಬೆನ್ನೂರು	ರಾಣೇಬೆನ್ನೂರು
41	ಮಂಜುನಥ ಓಲೇಕಾರ	ಬೇಡ	ರಾಣೇಬೆನ್ನೂರು	ರಾಣೇಬೆನ್ನೂರು
42	ಬಡಕರಿಯಪ್ಪನವರ	ಬೇಡ	ರಾಣೇಬೆನ್ನೂರು	ರಾಣೇಬೆನ್ನೂರು
43	ರತ್ನಮ್ಮ ಹಾನುಮಂತಪ್ಪ	ಬೇಡ	ಹಾನಗಲ್	ಹಾನಗಲ್
44	ಡಿ.ಎಂ. ಸಾಲಿ (ಮಾಜಿ ಎಂ.ಎಲ್.ಸಿ)	ಬೇಡ	ಹಿರೆಕೇರೂರು	ಹಿರೆಕೇರೂರು
45	ಫಕೀರಪ್ಪ ತಳವಾರ	ಬೇಡ	ಬ್ಯಾಡಗಿ	ಬ್ಯಾಡಗಿ
46	ಪ್ರೊ. ಮುಕ್ಕಣ್ಣನವರ.(ನಿವೃತ್ತ)	ಬೇಡ	ರಾಣೇಬೆನ್ನೂರು	ರಾಣೇಬೆನ್ನೂರು
47	ಡಾ. ಬಿ. ವೀರಣ್ಣ	ಬೇಡ	ಶಿಗ್ಗಾಂವ	ಶಿಗ್ಗಾಂವ
48	ಹೆಚ್.ಬಿ.ಓಲೇಕಾರ	ಬೇಡ	ರಾಣೇಬೆನ್ನೂರು	ರಾಣೇಬೆನ್ನೂರು
49	ಡಾ.ಸಣ್ಣೋಬಯ್ಯ.ಎಸ್.ಕೆ.	ಗೊಲ್ಲ	ರಾಣೇಬೆನ್ನೂರು.	ರಾಣೇಬೆನ್ನೂರು.
ಬೇಟಿ ಮಾಡಿದ ಇತರೆ ಸಮುದಾಯದ ವಕ್ತೃಗಳು				
1	ಎಂ.ಎಂ.ಕರೂರು	ಕುರುಬ	ರಾಣೇಬೆನ್ನೂರು	ರಾಣೇಬೆನ್ನೂರು

2	ಪ್ರೊ.ಲಿಂಗರಾಜ ಕಮ್ಮಾರ	ವಿಶ್ವಕರ್ಮ	ಬೋಗಾವಿ	ಹಿರೇಕೆರೂರು
3	ಡಾ. ಬೋಜರಾಜ ಪಾಟೀಲ	ಗೊತ್ತಿಲ್ಲ	ಹಾವೇರಿ	ಹಾವೇರಿ
4	ಪ್ರೊ.(ಶ್ರೀಮತಿ) ಆರ್.ಎಸ್.ಅಪ್ಪಾಜಿ	ಲಿಂಗಾಯ್ತ	ರಾಣೇಬೆನ್ನೂರು	ರಾಣೇಬೆನ್ನೂರು
5	ಶಿವಬಸಪ್ಪ ಪೂಜಾರ	ಲಿಂಗಾಯ್ತ	ಹಾನಗಲ್	ಹಾನಗಲ್
6	ಡಾ.ಸ.ಚಿ.ರಮೇಶ್	ಗೌಡ	ಗೊಟಗೋಡಿ	ಶಿಗ್ಗಾಂವ
7	ಪ್ರೊ.ಶ್ರೀಶೈಲ ಹುದ್ದಾರ	ಗೊತ್ತಿಲ್ಲ	ಶಿಗ್ಗಾಂವ	ಶಿಗ್ಗಾಂವ
8	ಪ್ರೊ.ಶಿವಾನಂದ	ಲಿಂಗಾಯ್ತ	ಬ್ಯಾಡಗಿ	ಬ್ಯಾಡಗಿ
9	ಪ್ರೊ.ಸಿ.ಎಸ್.ಜಗದೇವನವರ	ಲಿಂಗಾಯ್ತ	ರಾಣೇಬೆನ್ನೂರು	ರಾಣೇಬೆನ್ನೂರು
10	ಪ್ರೊ.ಎಸ್.ಎಂ.ಜಿಡ್ಡಿಯವರ	ಲಿಂಗಾಯ್ತ	ರಾಣೇಬೆನ್ನೂರು	ರಾಣೇಬೆನ್ನೂರು
11	ಪ್ರೊ.ಶಾಂತಕುಮಾರ್ ಹಾದಿಮನಿ.	ಲಿಂಗಾಯ್ತ	ಹಂಸಭಾವಿ	ಹಿರೇಕೆರೂರು
12	ಶ್ರೀಮತಿ ಜಿ.ಎಂ.ಅರಗೋಳ	ಲಿಂಗಾಯ್ತ	ಮಂತ್ರವಾಡಿಸ	ಶಿಗ್ಗಾಂವ

ಛಾಯಾ ಚಿತ್ರಗಳು



1. ಕಾಯಕದಲ್ಲಿ ನಿರತರಾದ ಮೇದಾರ ಕುಟುಂಬ



2. ಮಾರಾಟಕ್ಕಿಟ್ಟಿರುವ ಬಿದಿರುಗಳ ಹಾಗೂ ಸಾರ್ವೆಗಳಗಳನ್ನು ತೋರಿಸುತ್ತಿರುವ ಮಹಿಳೆ.



3. ಮೇದಾರ ಜನರು ವಾಸಿಸುವ ಹೆಂಚಿನ ಮನೆಗಳ ನೋಟ.



4. ಮನೆಯ ಹತ್ತಿರವೇ ಮಾರಟಕ್ಕಿಟ್ಟಿರುವ ಬಿದಿರಿನ ಬುಟ್ಟಿ ಹಾಗೂ ತಟ್ಟಿಗಳು.



5. ರಾಣೇಬೆನ್ನೂರಿನ ಮೇದಾರರ ಶ್ರೀ ಮರಿಯಮ್ಮದೇವಿ ದೇವಸ್ಥಾನ.



6. ಮೇದ ಸಮುದಾಯದ ನಾಗರಾಜ.ಎನ್ ಗುಡದಲ್ಲಿ ಹಾಗೂ ಇನ್ನಿತರರು ಸಂಶೋಧಕರಿಗೆ ಮಾಹಿತಿ ನೀಡುತ್ತಿರುವುದು.




7. ಮಾಜಿ ಜಿಲ್ಲಾ ಪಂಚಾಯತ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರಾದ ಮಂಜುನಾಥ ಓಲೇಕಾರರಿಂದ ಬೇಡ ಸಮುದಾಯದ ಮಾಹಿತಿ ಸಂಗ್ರಹಿಸುತ್ತಿರುವ ಸಂಶೋಧಕರು.



8. ಬೇಡರಲ್ಲಿ ಕಡ್ಡಾಯವಾಗಿ ಪೂಜಿಸಲ್ಪಡುವ ಹಿತ್ತಾಳೆ/ತಾಮ್ರದ ಗೋಪಾಳ, ಬೆತ್ತ ಶಂಖ, ಮತ್ತು ಜಾಗಟೆ.



9. ರಾಣೇಬೆನ್ನೂರಿನ ಹೊರ ಭಾಗದಲ್ಲಿ ಟೆಂಟ ಹಾಕಿಕೊಂಡಿರುವ ಅಲೆಮಾರಿ ಹೆಳವರು.



10. ಪ್ರಮುಖ ಪಾಳೇಗಾರರ, ಭೂಮಾಲಿಕರ, ಸಾಹುಕಾರರ ಮತ್ತು ಇನ್ನಿತರ ಗಣ್ಯರ ವಂಶಾವಳಿ ವಿವರ.



11. ಹನುಮಂತ ಭೀಮಪ್ಪ ಹೆಳವರ ತಮ್ಮಲ್ಲಿನ ಚಿಪ್ಪೋಡುಗಳನ್ನು ತೋರಿಸುತ್ತಿರುವ ದೃಶ್ಯ




12. ಹೆಳವ ಸಮುದಾಯದ ಶ್ರೀ ಎಂ.ಬಿ.ಹುಲಗಣ್ಣನವರು ಮಾಜಿ ರಾಷ್ಟ್ರಪತಿ ದಿ.ಎಸ್.ಡಿ.ಶರ್ಮಾರವರಿಂದ ರಾಷ್ಟ್ರಪ್ರಶಸ್ತಿ ಪಡೆಯುತ್ತಿರುವುದು.



13. ಕೌದಿ ಹೊಲೆಯುತ್ತಿರುವ ಗೊಂದಲಿಗ ಮಹಿಳೆಯರು.



14. ದಿಂಡಿ ಉತ್ಸವಗಳಲ್ಲಿ ಬಳಸುವ ಗೊಂದಲಿಗ ಸಮುದಾಯದ ದೈವ ಪರಿಕರಗಳು.



15. ಅಲುಮಿನಿಯಂ ಪಾತ್ರೆಗಳನ್ನು ಮಾರಾಟ ಮಾಡಲು ಹೊತ್ತುಕೊಳ್ಳುತ್ತಿರುವ ಗೊಂಡಲಿಗ ಮಹಿಳೆ.



16. ಗೊಂದಲಿಗ ಸಮುದಾಯದವರು ವಾಸಿಸುವ ವಠಾರದಲ್ಲಿನ ಪಾಂಡುರಂಗ ದೇವಸ್ಥಾನ.



17. ಆಡೂರ ಗ್ರಾಮದ ಸರ್ಕಾರಿ ಜಾಗದಲ್ಲಿ ಗುಡಿಸಲಿನಲ್ಲಿ ವಾಸಿಸುವ ದುರುಗಮುರುಗಿ ಸಮುದಾಯ.



18. ಗುಡಿಸಿಲಿನಲ್ಲಿಯೇ ಇಟ್ಟುಕೊಂಡಿರುವ ಪೋತರಾಜ ಮತ್ತು ಈರ ನಾಗಮ್ಮ ದೈವಗಳು.



19.ಗುಡಿಸಲು ಹಾಗೂ ಹೆಂಚಿನಮನೆ ಪಕ್ಕದಲ್ಲಿಯೇ ಕಟ್ಟಿಕೊಂಡಿರುವ ಕುರಿ–ಮೇಕೆಗಳು



20. ಕಾಲ್ವೆ ಕಲ್ಲಾಪುರ ಗ್ರಾಮದಲ್ಲಿ ದುರುಗಮುರುಗಿ ಸಮುದಾಯದವರ ಮಾಹಿತಿಯನ್ನು ಗುಂಪು ಚರ್ಚೆಯ ಮೂಲಕ ಸಂಗ್ರಹಿಸುತ್ತಿರುವುದು.



21. ವೆಂಕಪ್ಪ ಮಲ್ಲಪ್ಪ ದುರುಗಮುರುಗಿ ಯವರಿಂದ ವೃತ್ತಿ ಪ್ರದರ್ಶನ.




22. ರಾಣೇಬೆನ್ನೂರು ನಗರದಲ್ಲಿ ಭಿಕ್ಷೆ ಬೇಡುತ್ತಿರುವ ದುರುಗಮುರುಗಿಯರು.




23. ದುರ್ಗಮ್ಮ ದೇವರ ಮೆರವಣಿಗೆಯಲ್ಲಿ ಚಾಟಿ ಬೀಸಿಕೊಳ್ಳುತ್ತಿರುವ ಯುವಕ.




24. ಶಾಂತಿಯ ದ್ಯೋತಕವಾಗಿ ಯುಗಾದಿ ಹಾಗೂ ಮಹಾನವಮಿಯಂದು ದುರ್ಗಮ್ಮ ದೇವಿಯನ್ನು ಬೇವಿನ ಮರದ ಕಟ್ಟೆಯಲ್ಲಿ ಪೂಜಿಸುತ್ತಿರುವುದು.



25. ಭಸ್ಮಾಸುರ ಪಾತ್ರದಲ್ಲಿ ಭಿಕ್ಷಾಪತಿಯವರು, ಶಂಕರ ಪಾತ್ರದಲ್ಲಿ ಅಂಜನಪ್ಪ ಮಹಂತು, ತುಮ್ಮಿನಕಟ್ಟಿಯಲ್ಲಿ ಹಿಂದಿನ ಲೋಕಸಭಾ ಸದಸ್ಯ ಶ್ರೀ.ರಾಘವೇಂದ್ರರ ಸಮ್ಮುಖದಲ್ಲಿ.



26. ಹಾವೇರಿ ಜಿಲ್ಲಾ ಉತ್ಸವದಲ್ಲಿ ಭಾಗವಹಿಸಿರುವ ವಿವಿಧ ಬಹುರೂಪಿ ಧಾರಿಗಳು.



27. ರಾವಣಾಸುರ ಯಲ್ಲಪ್ಪ ಕೊಂಡ್ರು, ತಬಲ ಸಾಥಿ ದುನೆಕಾಶಿ ಮೋತಿ ತುಮ್ಮನಕಟ್ಟಿ.



28. ಋಷಿಮುನಿ ಪಾತ್ರದಲ್ಲಿ ಭಿಕ್ಷಾಪತಿ ಮೋತಿ, ಆಂಜನೇಯ ಪಾತ್ರದಲ್ಲಿ ಬಸುವರಾಜ ಮೋತಿ ಹಲಗೇರಿ.




29. ಸರ್ಕಾರಿ ನಿವೇಶನಗಳಲ್ಲಿ ತಾತ್ಕಾಲಿಕವಾಗಿ ನಿರ್ಮಿಸಿಕೊಂಡಿರುವ ಗುಡಿಸಿಲುಗಳು.



30. ಮದುವೆ ನಿಶ್ಚಯಕಾರ್ಯ ಸಂದರ್ಭದಲ್ಲಿ ಕೂಡಿರುವ ಬಹುರೂಪಿ ಸಮುದಾಯದ ಮುಖಂಡರುಗಳು.



31. ಸುಡಗಾಡು ಸಿದ್ಧರು ವಾಸಿಸುವ ಟೆಂಟಗಳ ಒಂದು ನೋಟ.



32. ಡೇರೆ ಒಳಗಡೆ ಅಡುಗೆ ಒಲೆ ಮುಂದೆ ಕುಳಿತಿರುವವ.



33. ಸಾಮೂಹಿಕವಾಗಿ ಬಳಸಲ್ಪಡುವ ರುಬ್ಬುವ ಕಲ್ಲಿನಲ್ಲಿ ಖಾರ ರುಬ್ಬುತ್ತಿರುವ ಮಹಿಳೆ.



34. ಋತುಮತಿಯಾದ ಹುಡುಗಿಯನ್ನು ಪ್ರತ್ಯೇಕ ಡೇರಿಯಲ್ಲಿ ಕುಳ್ಳರಿಸಿರುವುದು.



35. ಸುಡುಗಾಡು ಸಿದ್ಧ ಸಮುದಾಯದ ದೈವಾರಾಧನೆಯ ಸ್ಥಳ.



36. ಸುಡುಗಾಡು ಸಿದ್ಧರು ವಾಸಿಸುವ ಜಾಗದಲ್ಲಿಯೇ ಮೇಕೆಗಳನ್ನು ಸಾಕಿಕೊಂಡಿರುವುದು.

ಸಂದರ್ಶನ ಅನುಸೂಚಿ

ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ.
ವಿದ್ಯಾರಣ್ಯ – ೫೮೩೨೭೬
ಜಿಲ್ಲೆ:ಬಳ್ಳಾರಿ

೧. ಸಾಮಾನ್ಯ ಮಾಹಿತಿ

ಅ) ಸಮೀಕ್ಷೆಯ ದಿನಾಂಕ:
ಆ) ವಾಸ ಸ್ಥಾನ/ಗ್ರಾಮ:
ಇ) ಹೋಬಳಿ:
ಈ) ತಾಲೂಕು:
ಉ) ಬುಡಕಟ್ಟು:
ಊ) ಮಾತೃಭಾಷೆ:
ಋ) ಮನೆ ದೇವರು
ಋ) ಗೋತ್ರ/ಬೆಡಗು/ಬಳಿ
ಎ) ಮನೆತನದ ಹೆಸರು
ಏ) ಕುಲ ಚಿನ್ಹೆ
ಐ) ಭೂ ಹಿಡುವಳಿ(ಎಕರೆಗಳಲ್ಲಿ)
೧) ಒಣ
೨) ನೀರಾವರಿ

೨) ಪಶು ಸಂಪತ್ತು (ಸಂಖ್ಯೆಗಳಲ್ಲಿ)

೧) ಎತ್ತು
೨) ಆಕಳು
೩) ಎಮ್ಮೆ
೪) ಕೋಣ
೫) ಕುರಿ
೬) ಮೇಕೆ
೭) ಕೋಳಿ
೮)

ಮನೆ ಮಾದರಿ

೧) ಗುಡಿಸಲು
೨) ಮಾಳಿಗೆ ಮನೆ
೩) ಹೆಂಚಿನ ಮನೆ
೪) ಆರ.ಸಿ.ಸಿ. ಮನೆ
೫) ಕೊಟ್ಟಿಗೆ ಮನೆ
೬) ಬಾಡಿಗೆ ಮನೆ

೨.ವೈಯಕ್ತಿಕ ಮಾಹಿತಿ

ಕ್ರ.ಸಂ	ಕುಟುಂಬದ ಸದಸ್ಯರ ಹೆಸರುಗಳು	ಸಂಬಂಧ	ಲಿಂಗ	ವಯಸ್ಸು	ವೈವಾಹಿಕ ಸ್ಥಾನಮಾನ	ವಿವಾಹಿತನ/ಳ ಬೆಡಗು/ಜಾತಿ	ಶೈಕ್ಷಣಿಕ ಮಟ್ಟ	ಕಸುಬು/ ವೃತ್ತಿ	ಕುಟುಂಬ ಯೋಜನೆಗಳು	ಸರ್ಕಾರಿ ಸೌಲಭ್ಯಗಳು				
										ಗು.ಚೀಟಿ	ವಿಧವಾ	ಅಂಗವಿಕಲ	ವೃದ್ಯಾಪ್ಯ	ಶಿಷ್ಯವೇತನ
i	Ii	iii	iv	v	vi	Vii	viii	ix	x	xi	Xii	xiii	xiv	xv
೧														
೨														
೩														
೪														
೫														
೬														
೭														
೮														

ಸೌಲಭ್ಯಗಳು

೧) ನಿವೇಶನ
೨) ಮನೆ
೩) ವಿದ್ಯುತ್ ದೀಪ
೪) ಪಡಿತರ ಚೀಟಿ
೫) ಗ್ಯಾಸ್
೬) ನಲ್ಲಿ
೭) ಶೌಚಾಲಯ
೮) ಸ್ನಾನದ ಕೋಣೆ
೯) ಸೈಕಲ್
೧೦) ಸ್ಕೂಟರ್
೧೧) ಆಟೋರಿಕ್ಷಾ
೧೨) ರೇಡಿಯೋ
೧೩) ಟಿ.ವಿ
೧೪) ದೂರವಾಣಿ
೧೫) ಫ್ರಿಜ್
೧೬) ಮೊಬೈಲ್ ಸಂಖ್ಯೆ

ಮಾರ್ಗದರ್ಶಕರು
ಡಾ. ಚಲುವರಾಜು
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ-೫೮೩೨೭೬

ಸಂಶೋಧಕರು
ಎಲ್.ಈಶ್ವರಪ್ಪ
ಸಹ ಪ್ರಾಧ್ಯಾಪಕರು
ಎಸ್.ಜೆ.ಎಮ್.ವಿ.ಮಹಿಳಾ ಮಹಾವಿದ್ಯಾಲಯ,
ರಾಣೇಬೆನ್ನೂರು

ಮಾಹಿತಿದಾರರ ಹೆಸರು ಮತ್ತು ಸಹಿ

AKSHARA GRANTHALAYA
ACC.NO.132012

ಬುಡಕಟ್ಟು ಅಧ್ಯಯನ ವಿಭಾಗ